TIGHT BINDING BOOK

BROWEN BOOK ONLY

UNIVERSAL
LIBRARY
OU_200316
UNIVERSAL
LIBRARY

**OSMANIA UNIVERSITY LIBRARY**

Call No Accession No.

Author

Title

This book should be returned on or before the date last marked below.

# ಹೊಲ-ಮನೆ

ಶ್ರೀಕೃಷ್ಣ ಪಾಟೀಲ

ವಾಹಿನಿ ಪ್ರಕಾಶನ
ಜಯಚಾಮರಾಜ ರಸ್ತೆ, ಬೆಂಗಳೂರು-೨

ಮೊದಲನೆಯ ಮುದ್ರಣ : ೧೯೫೪

ಎಲ್ಲ ಹಕ್ಕುಗಳೂ ಲೇಖಕರದು

ಮುಖಚಿತ್ರ :

**ಎಸ್. ಎಸ್. ಕುಕ್ಕೆ**

ಮುದ್ರಕರು :

**ಎಂ. ಎಸ್. ಚಿಂತಾಮಣಿ, ಬಿ. ಎಸ್‌ಸಿ.,**

**"ಈಸ್ಟರ್ನ್ ಪ್ರೆಸ್", ಜಯಚಾಮರಾಜ ರಸ್ತೆ,**

**ಬೆಂಗಳೂರು-೨.**

# ಮೊದಲ ಮಾತು

**'ಹೊಲ-ಮನೆ'** ಬ್ರಾಹ್ಮಣ ಸಮಾಜಕ್ಕೆ ಸಂಬಂಧಿಸಿದ ಕಾದಂಬರಿ.

ಇಂದಿನ ಬ್ರಾಹ್ಮಣ ಸಮಾಜವು ತೀರ ಅವನತಿಯ ಸ್ಥಿತಿಗೆ ಬಂದಿದೆ. ಅದಕ್ಕೆ ಅನೇಕ ಕಾರಣಗಳಿವೆ. ಬ್ರಾಹ್ಮಣ್ಯದಿಂದಲೇ ಬ್ರಾಹ್ಮಣರು ಹಾಳಾದುದು ವಿಷಾದದ ಸಂಗತಿ. ಅಲ್ಲದೆ ಸಮಾಜ ಮತ್ತು ಸರಕಾರವು ಸಹ ಅವರನ್ನು ಹತ್ತಿಕ್ಕುತ್ತ ಬಂದಿರುವವು. ಹಳ್ಳಿಯಲ್ಲಿಯ ಬ್ರಾಹ್ಮಣರ ಸ್ಥಿತಿಯು ಇನ್ನೂ ಕೀಳು. ಹೊಟ್ಟೆಯ ಪಾಡಿಗೆ ಗುಳೇ ಕಿತ್ತುಕೊಂಡು ತಾಲೂಕಿಗೋ ಜಿಲ್ಲೆಗೋ ಬಂದು ನವಕರಿ-ಚಾಕರಿ ಮಾಡಿ ಹೇಗೋ ಉಪಜೀವಿಸುತ್ತಿರುವ ಬ್ರಾಹ್ಮಣ ಕುಟುಂಬಗಳು ಬಹಳ. ಇದರಿಂದ ಹಳ್ಳಿಯೊಳಗಿನ ಬ್ರಾಹ್ಮಣರೆಲ್ಲ ಪಟ್ಟಣವನ್ನು ಸೇರಿರುವರು. ಈಗ ಅಲ್ಲಿ ಉಳಿದವು ಒಂದೋ, ಎರಡೋ ! ಅವು ಸಹ ಇಂದಿನ ಮುಗ್ಗಟ್ಟಿನಲ್ಲಿ ಖಿಲವಾಗಿವೆ. ಒಕ್ಕಟ್ಟಿಗಿಂತ ಪರಸ್ಪರರಲ್ಲಿ ವೈಮನಸ್ಸೇ ಹೆಚ್ಚು. ಅವರ ಮಕ್ಕಳು ಅಶಿಕ್ಷಿತರ ಸಹವಾಸದಿಂದ ಕುಟುಂಬ ಘಾತುಕರಾಗುವುದು ಆಶ್ಚರ್ಯವೇನು? ಹೀಗಾಗಿ ಅನೇಕ ಮನೆಗಳು ಹೀನಸ್ಥಿತಿಗೆ ಬಂದಿವೆ.

ಉತ್ತರ ಕರ್ಣಾಟಕದಲ್ಲಿ ಈ ರೀತಿ ಹಾಳಾದ ಮನೆತನಗಳು ಹಲವಾರು ಸಿಕ್ಕುವವು. ಪ್ರತಿ ಹಳ್ಳಿಯಲ್ಲಿಯೂ ಕಾಣಬಹುದು. ಇಂಥವುಗಳನ್ನು ನಾನು ನೋಡಿರುವೆ. ವಿಷಾದ ಪಟ್ಟಿರುವೆ. ನಾನು ಕಂಡ ಸಂಗತಿಗಳ ಸಂಕೀರ್ಣ ವಸ್ತುವೇ ಈ ಕಾದಂಬರಿ. ಇಲ್ಲಿ ಕಲ್ಪನೆಗಿಂತ ಸತ್ಯ ಸಂಗತಿಗಳಿಗೆ ಹೆಚ್ಚು ಆಸ್ಪದ ಕೊಟ್ಟಿರುವೆ.

ಈ ನನ್ನ ಕೃತಿ ಓದುಗರಲ್ಲಿ ವಿಚಾರ ಜಾಗೃತಿಗೆ ಪ್ರಚೋದನೆಯಾದೀತೆಂದು ನಂಬಿರುವೆ.

**ಕೋನವಾಳಗಲ್ಲಿ**
**ಬೆಳಗಾವಿ**

**ಶ್ರೀಕೃಷ್ಣ ಪಾಟೀಲ**

## ೧

ಅಪ್ಪಾರಾಯರ ದರ್ಪ, ಅಭಿಮಾನ, ಗೌರವ, ಕೀರ್ತಿ, ಐಶ್ವರ್ಯ, ದೇವಭಕ್ತಿ ಮುಂತಾದ ಸಾತ್ವಿಕ-ರಾಜಸ ಗುಣಗಳಿಗೆ ಅವರ ನಂಬಿಗೆಯ ನಾಯಿಯಾದ ಮೋತ್ಯಾ ಪ್ರತೀಕವಾಗಿದ್ದಿತು. ರಾಯರು ರಾಮದುರ್ಗ ದರಬಾರಕ್ಕೆ ಹೋದಾಗ ಅಲ್ಲಿಯ ಯಜಮಾನರಿಂದ ನಜರಾಣಿಯಾಗಿ ಸಿಕ್ಕಿದ್ದಿತು. ರಾಯರು ಅದನ್ನು ಬಹಳ ಪ್ರೀತಿಸುತ್ತಿದ್ದರು. ತಮ್ಮ ನಂಬಿಗೆಯ ಗೆಳೆಯನನ್ನಾಗಿ ಮಾಡಿಕೊಂಡಿದ್ದರು. ತಮ್ಮ ಜೀವದ ನೆಳಲೆಂದೇ ಬಗೆದಿದ್ದರು. ಮೋತ್ಯಾನಾದರು ರಾಯರ ಅಂಗರಕ್ಷಕನಾಗಿ, ಪ್ರಾಣರಕ್ಷಕನಾಗಿ ಅವರ ಸೇವೆಯನ್ನು ಸಲ್ಲಿಸುತ್ತಿದ್ದಿತು.

ಮೋತ್ಯಾನ ಮೈಬಣ್ಣ ಒಂದೇ ಬಗೆಯದಾಗಿರಲಿಲ್ಲ. ದ್ವೈತ ತತ್ವದಂತೆ ಕರಿ-ಬಿಳಿಯ ಸಂಗಮವಾಗಿದ್ದಿತು. ಬಿಳಿಯ ಬಣ್ಣದ ಮುಖದ ಮೇಲೆ ಎದ್ದು ಕಾಣುವ ಕರಿಯ ಗೆರೆಯು ರಾಯರ ವೈಷ್ಣವ ತೇಜದ ತ್ರಿಪುಂಡ್ರನಾಮಗಳಲ್ಲೊಂದರ ಗುರುತಾಗಿದ್ದಿತು. ಸೂಲದ ಹಲ್ಲುಗಳು ರಾಯರ ದರ್ಪದ ಸಾಕ್ಷಿಯಾಗಿದ್ದವು. ಅದರ ತೆರೆದ ಬಾಯಿಯು ರಾಯರ ವಾಚಾಳಿತನವನ್ನು ಉದಾಹರಿಸುತ್ತಿದ್ದಿತು. ಜೋಲುಬಿದ್ದು ಹನಿಯಿಕ್ಕುವ ನಾಲಗೆಯು ರಾಯರ ಸುರುಚಿಯ ಮಹಾತ್ಮೆಯನ್ನು ಪ್ರದರ್ಶಿಸುತ್ತಿದ್ದಿತು. ಅದರ ಏರು

ಎದೆಯು ರಾಯರ ಗಂಡುತನದ ಸಂಗ್ರಹವಾಗಿದ್ದಿತು. ಅದರ ಹಸಿಯ ಮೂಗು ರಾಯರ ಜಠರಾಗ್ನಿಯ ದ್ಯೋತಕವಾಗಿದ್ದಿತು. ಅದರ ವೇಗ ರಾಯರ ಕಲ್ಪನಾ ವೇಗವನ್ನು ಅನುಮೋದಿಸುತ್ತಿದ್ದಿತು. ಆದರ ಸಣ್ಣ ನಡು ರಾಯರ ಜಿಗುಟುತನವನ್ನು ಪ್ರಶಂಸಿಸುತ್ತಿದ್ದಿತು. ಅದರ ಮಡಿಚಿದ ಕಿವಿಗಳು ರಾಯರ ಬಗ್ಗೆ ಅಪರೋಕ್ಷದಲ್ಲಿ ನಡೆವ ಸಂಗತಿಗಳಿಗೆ ಮುಚ್ಚಳವಾಗಿದ್ದಿತು. ಅದರ ಗಂಭೀರ ನಡಿಯು ರಾಯರ ಗೌರವವನ್ನು ಅಳೆಯುವ ಸಾಧನವಾಗಿದ್ದಿತು. ಅದರ ಡೊಂಕು ಬಾಲ ರಾಯರ ಹಟವನ್ನು ತಿಳಿಸುತ್ತಿದ್ದಿತು. ಚಿಕ್ಕ ಇಲಿಯ ಸಪ್ಪಳಕ್ಕೆ ಹೆದರುವ ಅದರ ಸ್ವಭಾವವು ರಾಯರ ಧರ್ಮಭೀರು ತನದ ನಿದರ್ಶನವಾಗಿದ್ದಿತು. ಗಾಳಿಯ ಓಟಕ್ಕೆ ಅದರ ಬೊಗಳು ವಿಕೆಯು ರಾಯರ ಪಾಂಡಿತ್ಯಕ್ಕೆ ಸಮನಾಗಿದ್ದಿತು. ಈ ಸಮನ್ವಯ ಗುಣಗಳಿಂದಲೇ ಮೋತ್ಯಾ ರಾಯರ ಪ್ರೀತ್ಯಾದರಕ್ಕೆ ಪಾತ್ರವಾಗಿ ತ್ತೆಂದರೂ ಸರಿ.

ಊರಿಗೆ ತಂದ ದಿನ ಅದು ಚಿಕ್ಕದಿದ್ದಿತು. ಅದರ ಪಾಲನ ಪೋಷಣೆಯ ಹೊರೆಯನ್ನು ರಾಯರು ತಾವೇ ಹೊತ್ತಂತೆ ಮಾಡಿದರು.

ಆ ವರುಷ ತಮ್ಮ ಕೋಡಿಯ ಹೊಲದ ಹತ್ತಿಯನ್ನು ಬೆಳಗಿ ನಲ್ಲಿಯೆ ಬಿಡಿಸಿ ತರಿಸಿದರು. ಬಿಸಿಲಲ್ಲಿ ಒಣಗ ಹಾಕಿದರು. ತಮ್ಮ ಮನೆಯ ತೋಟದ ಆಳಾದ ಅಣ್ಣಪ್ಪನ ಹೆಂಡತಿ ಸಣ್ಣವ್ವನಿಂದ ಆರಿಸಿದರು. ಪಿಂಜಾರ ಫಕೀರನಿಂದ ಹೊಡೆಸಿದರು. ಮೊದಲೇ ತಂದು ಸಿದ್ಧಪಡಿಸಿದ ಕುತನಿಯ ಅರಿವೆಯಲ್ಲಿ ತುಂಬಿಸಿ ಚಿಕ್ಕದೊಂದು ಗಾದಿಯನ್ನು ಮಾಡಿಸಿದರು. ಅದನ್ನು ಹಾಸಿ ಮೋತ್ಯಾನನ್ನು ಅದರ ಮೇಲೆ ಕುಳ್ಳಿರಿಸಿ ಕಣ್ಣದಣಿ, ಮನದಣಿ ನೋಡಿ ಸಂತಸ ಪಟ್ಟರು.

ಇಷ್ಟೇ ಅಲ್ಲ. ಅದರ ಆರಯಿಕೆಗೆ ಮತ್ತೆ ಕೆಲವು ವ್ಯವಸ್ಥೆಯನ್ನು ಮಾಡಿದರು. ಹಾಲು ಕುಡಿಯಲು ಒಂದು ಹರಿವಾಣ, ಅನ್ನ ತಿನ್ನಲು ಒಂದು ತಬಕ, ನೀರು ಕುಡಿಯಲು ಕಲಾಯ ಮಾಡಿದ ಒಂದು

ಬಟ್ಟೆಲು, ಕೊರಳಿಗೆ ಒಂದು ಚರ್ಮದ ಪಟ್ಟಿ, ಒಂದು ಕಬ್ಬಿಣದ ಸರಪಳಿ, ಚಳಿಗಾಲದಲ್ಲಿ ಚಳಿಹತ್ತಬಾರದೆಂದು ಒಂದು ಜೂಲು ತಮಗೆ ತಿಳಿದಷ್ಟು ಅನುಕೂಲತೆಯನ್ನು ಮಾಡಿದರು.

ತಮ್ಮ ಗೆಳೆಯ ಇಟ್ಟೆಪ್ಪ ನಾಯಿಯ ಮೈಯಲ್ಲಿ ಚಿಕ್ಕಾಡುಗಳಾಗುವವು ! ಎಂದು ಹೇಳಿದ್ದಕ್ಕೆ ಸಬಕಾರ ಹಚ್ಚಿ ಮೈ ತೊಳೆಯುವ ವ್ಯವಸ್ಥೆಯನ್ನು ಮಾಡಿದರು. ಅಲ್ಲದೆ ಮುಂಜಾನೆಯ ಊಟ ಇಂಥದು, ಮಧ್ಯಾಹ್ನದ ಊಟ ಇದು, ಸಂಜೆಗೆ ಇದನ್ನು ಹಾಕಬೇಕು. ಎಂದು ಮನೆಯವರನ್ನು ಎಚ್ಚರಿಸಿದರು. ದ್ವಾದಸಿಗೆ ಒಮ್ಮೆ ಮಾಂಸವನ್ನು ಹಾಕಲು ಮನೆಯ ಆಳಿಗೆ ಒಪ್ಪಿಸಿದರು, ಸಾಲೆ ಬಿಟ್ಟ ಮೇಲೆ ಒಂದಿಷ್ಟು ತಿರುಗಾಡಿಸಿಕೊಂಡು ಬರಲು ಹಿರಿಯ ಮಗ ರಾಜಣ್ಣನಿಗೆ ಆಜ್ಞೆಯಾಯಿತು. ಈ ಸೇವೆ – ಪೋಷಣೆಯಿಂದ ಕೆಲದಿನಗಳಲ್ಲಿಯೇ ಅದು ಹುಷ್ಟ–ಪುಷ್ಟವಾಗಿ ಬೆಳೆಯಿತು. ಇನ್ನಷ್ಟು ದೊಡ್ಡದಾದರೆ ಒಂದು ಕತ್ತೆ ಕಿರುಬನಂತಾಗುವದೆಂದು ಜನರಾಡುವ ಮಾತಿಗೆ ಪ್ರತ್ಯಕ್ಷ ಉದಾಹರಣೆಯಾಗಿ ನಿಂತಿತು.

ಆದರೆ ಈ ಅತಿದಕ್ಷತೆ, ಅತಿ ಪ್ರೇಮ, ಅತಿ ಮಮತೆ ಮನೆಯವರಿಗೆ ಅನೇಕ ಸಲ ಬೇಜಾರಕ್ಕಿಟ್ಟುಕೊಂಡಿತು. ರಾಯರ ಮುಂದೆ ಅದರ ಗುಣಗಾನ ಮಾಡಿದ ಬಾಯಿಗಳೇ ಅವರ ಅಪರೋಕ್ಷದಲ್ಲಿ ಈ ಪೀಡಾ ಎಲ್ಲಿಯದೋ ಸುಟ್ಟುಬರಲಿ. ಅಡಿಗೆಯ ಮನೆಯ ವರೆಗೆ ನುಗ್ಗಿಬರುವುದು. ಥಾಬಳಿಯ ಮೇಲೆ ಮಲಗುವದು. ಊಟಕ್ಕೆ ಕುಳಿತಾಗ ಚಿತ್ರಾವತಿಗಳನ್ನು ಎತ್ತಿಕೊಂಡು ಹೋಗುವದು. ಎಲ್ಲರ ತಾಟಿಗೆ ಬಾಯಿ ಹಾಕುವದು. ಏನು ಗಂಟುಬಿದ್ದಿತೇ ! ಎಂದು ಹಾಳಾಗುವದೋ ! ಎಂದು ಶಪಿಸುತ್ತಿದ್ದರು.

ಆದರೆ ರಾಯರ ಮಾತುಗಳು ಇದಕ್ಕೆ ವಿಪರೀತವಾಗಿದ್ದವು. ಮೋತ್ಯಾ ನಮ್ಮ ಮನೆಗೆ ಬಂದ ಮೇಲೆ ನನ್ನ ಭಾಗ್ಯದ ಕಣ್ಣು ತೆರೆಯಿತು. ಅದು ಮನೆಗೆ ಬಂದ ವರುಷವೇ ಮೂಲಿಯ ಹೊಲದ ಜೋಳದ ರಾಸಿಯನ್ನು ನೋಡಿ ಜನರು ಬೆರಳು ಕಚ್ಚಲಿಲ್ಲವೇ ?

ಐದು ಚೀಲ ಜೋಳಕ್ಕೂ ಗತಿಗಾಣದ ಹೊಲದಲ್ಲಿ ಐವತ್ತು ಚೀಲ ಜೋಳವಾಗುವದೆಂದರೇನು ಸಾಮಾನ್ಯವೇ! ಅದೇ ವರುಷ ಎಕ್ಕೀ ತೋಟದ ಮೆಣಸಿನಕಾಯಿಯ ಮಾರಾಟದಿಂದ ಸಾವಿರ ರೂಪಾಯಿಗಳನ್ನು ಎಣಿಸಿಕೊಳ್ಳಲಿಲ್ಲವೇ! ನಮ್ಮ ರಾಜಣ್ಣನಂತಹ ಅಕ್ಷರ ಶತ್ರುವಿಗೆ ಆ ಗ್ರಾಮದ ಸಾವುಕಾರ ತಮ್ಮಾಜಿಯವರು ತಮ್ಮ ನಕ್ಷತ್ರದಂತಹ ಮಗಳನ್ನು ಸೊಸೆಯಾಗಿ ಕೊಡಲಿಲ್ಲವೆ! ಇದೆಲ್ಲ ನೋತ್ಯಾನ ಕಾಲಗುಣವಲ್ಲದೆ ಮತ್ತೇನು? ಹೀಗೆ ಒಂದೋ ಎರಡೋ ಎಣಿಸುತ್ತ ಕುಳಿತರೆ ನಮ್ಮ ಹಳ್ಳದೊಳಗಿನ ಉಸುಕಿನ ಕಣಗಳು ಸಾಲಲಾರವು ಎಂದು ಜೊಲ್ಲು ಜಿಗುಟಾಗುವವರೆಗೆ ವರ್ಣಿಸುತ್ತಿದ್ದರು. ಮನೆಯವರು ರಾಯರ ಮುಂದೆ ಇವೆಲ್ಲವುಗಳಿಗೆ ಒಪ್ಪಿ ಹೌದೆಂದು ಕೌಲೆತ್ತಿನಂತೆ ತಲೆಹಾಕಿದರೂ ನಾಯಿಯಿಂದ ಇಷ್ಟೆಲ್ಲ ಭಾಗ್ಯ ಬೆಳೆಯಿತೆಂಬ ಸಿದ್ಧಾಂತಕ್ಕೆ ಮನದಲ್ಲಿಯೇ ನಗುತ್ತಿದ್ದರು. ಹೊರಗೆ ಪ್ರಶಂಸೆ, ಒಳಗೆ ಅವಹೇಳನ ಬೆಳೆದುಬರಲು ನಾಯಿಯ ಕಾಲ–ಗುಣ ಸುಸ್ಪಷ್ಟವೆಂದು ಎಲ್ಲರೂ ಅರಿತಿದ್ದರು. ಇದರ ಪ್ರದರ್ಶನವೂ ಆಗಾಗ ನಡೆಯುತ್ತಿದ್ದಿತು.

ಅಪ್ಪಾರಾಯರು ಆಕಸ್ಮಿಕ ಕೆಲಸಕ್ಕಾಗಿ ಒಮ್ಮೊಮ್ಮೆ ತಾಲೂಕಿಗೆ ಹೋಗಬೇಕಾಗುತ್ತಿದ್ದಿತು. ಕೆಲಸದ ಮಹತ್ವವನ್ನು ಅವಲಂಬಿಸಿ ತಾಲೂಕಿನಲ್ಲಿ ಒಂದೆರಡು ದಿನಗಳವರೆಗೂ ನಿಲ್ಲಬೇಕಾಗುತ್ತಿದ್ದಿತು. ಆಗ ನಾಯಿಯ ವ್ಯವಸ್ಥೆಯಲ್ಲ ಅಸ್ತವ್ಯಸ್ತ. ಅದು ಮುಂಜಾನೆ ತನ್ನ ಜಲಬಾಧೆಗಳಿಗಾಗಿ ಕಿರುಗುಡುತ್ತಿದ್ದಿತು. ಬೊಗಳುತ್ತಿದ್ದಿತು. ಕಟ್ಟಿದ್ದ ಕಬ್ಬಿಣದ ಸರಪಳಿಯನ್ನು ಕಡಿಯುತ್ತಿದ್ದಿತು. ನೆಲ–ಗೋಡೆಯನ್ನು ಕೆದರುತ್ತಿದ್ದಿತು. ಗೂಟದ ಸುತ್ತು ನೂರಾರು ಪ್ರದಕ್ಷಿಣೆಗಳನ್ನು ಹಾಕುತ್ತಿದ್ದಿತು. ಕುತ್ತಿಗೆಗೆ ಉರುಲು ಬೀಳಲು ಸಾಯುವವರಂತೆ ಬೊಬ್ಬೆ ಹೊಡೆಯುತ್ತಿದ್ದಿತು. ಅಕಸ್ಮಾತ್ ಯಾರಾದರೂ ಕೇಳಿದರೆ ಅದನ್ನು ಬಿಡಿಸಿ ಹೊರಗೆ ಹಾಕುತ್ತಿದ್ದರು. ಅದು ತನ್ನ ಪ್ರಾತರ್ವಿಧಿಯನ್ನು ಅವಸರದಿಂದ ಮನೆಯ ಒಳಗೇ ಬಹಳ ಸಾರೆ – ಹೊರಗೆ ತೀರಿಸಿ ಹಸಿದ ಹೊಟ್ಟೆಗೆ ಇಲ್ಲಿ ಅಲ್ಲಿ ಹುಡುಕುತ್ತಿದ್ದಿತು. ಮನೆಯವರು

ಸಿಟ್ಟಿಗೆದ್ದು ಕಲ್ಲಿನಿಂದ ಒಗೆಯುತ್ತಿದ್ದರು. ಆಗ ಮನೆಯ ಹೊರಗೆ ಓಡಿಹೋಗಿ ಅಲೆದಾಡುತ್ತಿದ್ದಿತು. ಮನೆಯವರು ತಮ್ಮ ಮಕ್ಕಳು ಮರಿ, ಆಳುಹೋಳುಗಳ ಆರಯಿಕೆಯಲ್ಲಿ ಇದರ ಹಸಿವು, ನೀರಡಿಕೆಯ ಕಡೆಗೆ ಲಕ್ಷ್ಯ ಕೊಡಲು ವೇಳೆಯೇ ಉಳಿಯುತ್ತಿರಲಿಲ್ಲ. ಆಗ ಮೋತ್ಯಾ ತನ್ನ ಹಸಿದ ಹೊಟ್ಟೆಗೆ ಒಂದೆರಡು ಅಗುಳನ್ನಾದರು ತುಂಬಿ ಕೊಳ್ಳಬೇಕೆಂದು ತಿಪ್ಪಿಯ ಮೇಲಿನ ಎಂಜಲ ಪತ್ರಾವಳಿಯನ್ನು ಎಳೆದು ತಂದು ತನ್ನ ಗಾದಿಯ ಪಕ್ಕದಲ್ಲಿ ಇಟ್ಟುಕೊಂಡು ನೆಕ್ಕು ತ್ತಿದ್ದಿತು. ಹಳೆಯ ಎಲುಬಿನ ತುಂಡುಗಳನ್ನು ಉಪ್ಪಿನಕಾಯಿಯಂತೆ ನಡುನಡುವೆ ಬಾಡಿಸಿಕೊಳ್ಳುತ್ತಿದ್ದಿತು. ಇದನ್ನು ಕಂಡ ಮನೆಯ ಹೆಂಗಸರು ರೇಗಿಬಿಡುತ್ತಿದ್ದರು. ನೂರು ಶಾಪಗಳನ್ನು ತೂರಿ, ಸಾವಿರ ಕಡೆಗೆ ನೀರು ಬಿಟ್ಟು ಪತ್ರಾವಳಿಯನ್ನು ಮತ್ತು ಎಲುವನ್ನು ಹೊರಗೆ ಹಾಕಿಸಿ, ಗೋಮಯಮಾಡಿ ಪರಿಶುದ್ಧಗೊಳಿಸುವವರೆಗೆ ಮೋತ್ಯಾನ ಸಪಿಂಡ ಪಿತೃರೆಲ್ಲ ಸ್ವರ್ಗ ನರಕಗಳನ್ನು ಸುತ್ತುವರೆಯಬೇಕಾಗು ತ್ತಿದ್ದಿತು.

ಈ ಸುಖ–ದುಃಖಗಳನ್ನು, ನಿಂದೆ–ಪ್ರಶಂಸೆಗಳನ್ನು, ಪ್ರೀತಿ–ಅಪ್ರೀತಿಗಳನ್ನು, ಊಟ - ಉಪವಾಸಗಳನ್ನು ಸಮದೃಷ್ಟಿಯಿಂದ ಕಾಣುವ ಮೋತ್ಯಾನು ಮನೆಯವರು ಯಾರೇ ಬರಲಿ ಬಾಲವನ್ನು ಅಲುಗಾಡಿಸಿ, ತನ್ನ ಕರ್ತವ್ಯ ಕರ್ಮವನ್ನು ಒಪ್ಪಿಸುತ್ತಿದ್ದಿತು. ನಿನ್ನೆ ಹೊಡೆದವರು, ನಾಳೆ ಹೊಡೆಯುವವರು, ನಿನ್ನೆ ಬಯ್ದವರು, ನಾಳೆ ಬಯ್ಯುವವರು ಅದರ ಕಣ್ಣಲ್ಲಿ ಸಮಾನರು. ಆದರೆ ಅಪ್ಪಾರಾಯರನ್ನು ಕಂಡರೆ ಈ ಗುಣಗಳಿಗೆ ಮಹಾಪೂರ. ಅವರ ಮೇಲಿನ ತನ್ನ ಅತಿ ಶಯ ಭಕ್ತಿ, ಪ್ರೇಮ, ವಿಶ್ವಾಸ, ಸೇವಾಧರ್ಮದ ಪರಾಕಾಷ್ಠೆಯನ್ನು ತೋರಿಸುವಂತೆ ಅವರ ಸುತ್ತು ನೃತ್ಯವಾಡುವದು. ಎರಡು ಕಾಲಿನ ಮೇಲೆ ಎದ್ದು ನಿಲ್ಲುವದು, ದೂರಹೋಗಿ ನೆಲದ ಸಂಗಡ ನೆಲವಾಗಿ, ಧೂಳಿಯ ಮೋಡವನ್ನು ಹಿಂದೆ ಹಾಕುತ್ತ ಓಡಿ ಬರುವದು. ಕೊನೆಗೆ ಅವರ ಕಾಲಮೇಲೆ ಉರುಳಾಡುವದು. ಅವರ ಹಳೆಯ ಚಪ್ಪಲಿ

ಗಾಲನ್ನು ಮೂಸಿನೋಡುವದು. ಇದು ಎಲ್ಲರ ಕುತೂಹಲಕ್ಕೆ ಕಾರಣವಾಗಿದ್ದಿತು. ಮಾತಿಲ್ಲದಿದ್ದರೂ ಮನುಷ್ಯರಂತೆ ಎಲ್ಲವನ್ನು ಮಾಡುವದಲ್ಲ ಎಂದು ಉದ್ಗಾರ ತೆಗೆಯುತ್ತಿದ್ದರು.

ಅದು ಏನೇಇರಲಿ. ಮೋತ್ಯಾನ ವೈಮಾಟ, ಕೂದಲು, ಬಣ್ಣ, ಈ ಭಕ್ತಿ ಎಲ್ಲರ ಮೆಚ್ಚಿಗೆಯ ವಿಷಯವಾಗಿದ್ದಿತು. ಅದು ತಮ್ಮ ಕುಟುಂಬದಲ್ಲಿಯ ಒಂದು ಪ್ರಾಣಿಯೆಂದೇ ತಿಳಿದಿದ್ದರು.

೨

ಗುಳ್ಳವ್ವನ ತೋಟದ ಅಣ್ಣಪ್ಪನ ಮೇಲೆ ಅಪ್ಪಾರಾಯರಿಗೆ ಮೊದಲಿನಿಂದಲೂ ಸಂಶಯ. ಅವನು ತೋಟದೊಳಗಿನ ಗೆಣಸು-ಗಜ್ಜರೆಗಳನ್ನು, ಕಾಯಿ-ಪಲ್ಲೆಯನ್ನು, ಮೇವು-ಮಿಡಿಚೆಯನ್ನು ಕದ್ದು ಕೊಂಡು ಹೋಗಿ ಮಾರುವನೆಂದೂ, ತಾನು ಉಪಯೋಗಿಸಿಕೊಳ್ಳುವ ನೆಂದೂ ಅನೇಕ ಜನದಿಂದ ಚಾಡಿಯ ಮಾತುಗಳು ರಾಯರ ಕಿವಿಯ ವರೆಗೆ ಬಂದಿದ್ದವು. ಮೊದ ಮೊದಲು-ಹಳೆಯ ಒಕ್ಕಲಿಗ, ಅಜ್ಜ ಆರು ತಲೆಯಿಂದ ಆ ತೋಟದಲ್ಲಿ ದುಡಿದವರು, ನಂಬಿಕಸ್ತರು ಎಂದೇ ತಿಳಿದಿದ್ದರು. ಈ ತಿಳಿವಳಿಕೆಯೇ ಪ್ರಬಲವಾಗಿ ಈವರೆಗೆ ಲಕ್ಷ್ಯವನ್ನು ಕೊಟ್ಟಿರಲಿಲ್ಲ. ಅಣ್ಣಪ್ಪನವರೆಗೂ ಆ ನಂಬಿಗೆಯ ಬಳ್ಳಿ ಹಬ್ಬಿ ಬಂದಿದ್ದಿತು. ಹಾಗೆ ನಂಬಲು ಸಾಕಷ್ಟು ಪುರಾವೆಗಳಿದ್ದವು.-ತೋಟದ ಮೂಲೆಗೆ ಹಚ್ಚಿದ ಮಾವಿನ ಗಿಡಗಳು ಕಾಯಾಗಲು ಮಂಗಗಳು ಕಡಿದು ಬಗೆದವುಗಳನ್ನು, ಗಾಳಿಗೆ ತಾವಾಗಿ ಬಿದ್ದವುಗಳನ್ನು ರಾಯರ ಮನೆಗೆ ಸಕಾರಣವನ್ನು ಒಪ್ಪಿಸಿ ಮುಟ್ಟಿಸುತ್ತಿದ್ದನು. ಬಲಿಯಲು ಗಿಳಿಗಳು ಕಡಿದು ಬಗೆದ ಪಾಡುಗಾಯಿಗಳನ್ನು ಮುಟ್ಟಿಸುತ್ತಿದ್ದನು. ಯಾತದ ದಂಡೆಗೆ, ಕಾವಲಿಯ ಮಗ್ಗುಲಿಗೆ ಹಚ್ಚಿದ ಗುಲಾಬಿಯ ಕಂಟಿಗೆ ಹೂ ಬಿಡಲು ಹರಿದು ತಂದು ಕೊಡುತ್ತಿದ್ದನು. ಇತ್ಯಾದಿಗಳು ಆತನು ಒಳ್ಳೆಯವನೆಂದು ತಿಳಿಯಲು ಪ್ರಮಾಣಗಳಾಗಿದ್ದವು. ಕಷ್ಟ

ಷಟ್ಟು ತಾನೂ ತನ್ನ ಹೆಂಡತಿಯೂ ಮಕ್ಕಳೂ ದುಡಿದು ಹೊಟ್ಟೆ ತುಂಬಿಕೊಳ್ಳುವದು ಊರ ಕೆಲವು ಕಿಡಿಗೇಡಿಗಳಿಗೆ ಸರಿಬಾರದೆ ರಾಯರಿಗೆ ಮತ್ತೆ ಕೆಲವು ನಂಬಿಗೆಯು ಹುಟ್ಟುವಂತಹ ಸಂಗತಿಗಳನ್ನು ಹೇಳಿ ಅವರ ವಿಶ್ವಾಸದ ಕ್ಷೇತ್ರದಲ್ಲಿ ಕೆಲವು ಕರಿಕೆಯ ಬೇರುಗಳನ್ನು ಚೆಲ್ಲಿದರು. ಅವೇ ಬೆಳೆದು ಈಗ ಹಬ್ಬಿಕೊಂಡು ನಿಂತು ಪರೀಕ್ಷಿಸಬೇಕೆನ್ನುತ್ತಿದ್ದವು. ಅದಕ್ಕಾಗಿ ಒಂದು ದಿನವನ್ನು ಹುಡುಕುತ್ತಿದ್ದರು.

ಅಂದು ಶನಿವಾರ. ರಾಯರು ಯಾರಿಗೂ ಹೇಳದೆ ಬೆಳಗಿನಲ್ಲಿ ಎದ್ದರು. ಮೋತ್ಯಾನನ್ನು ಸಂಗಡ ಕರೆದುಕೊಂಡರು. ಗುಳ್ಳವ್ವನ ತೋಟದ ಹಾದಿಯನ್ನು ಹಿಡಿದರು. ತೋಟಕ್ಕೆ ಬಂದು ಮುಟ್ಟಿದಾಗ ಶುಕ್ರನು ಇನ್ನೂ ಕಾಣುತ್ತಿದ್ದನು. ಬಾವಿಯ ಕಟ್ಟೆಯ ಮೇಲೆ ನಿಂತು-ಅಣ್ಣಪ್ಪ ಎಂದು ಕೂಗಿದರು. ಗುಡಿಸಲಲ್ಲಿ ಮಲಗಿದ ಅಣ್ಣಪ್ಪನು ಸಾವರಿಸಿಕೊಂಡು ಹೊರಗೆ ಬಂದು-ಯಾರು? ಎಂದು ಕೇಳಿದನು.

"ನಾನೋ !" ಎಂದು ರಾಯರು ನುಡಿದರು.

"ಬರ್ರಿ ದೇವರು. ಇಷ್ಟು ಬೇಗ ಬಂದಿರಿ !"

"ಏನೋ ತೋಟದ ಮೂಡಲ ದಿಕ್ಕಿನ ಗೊಂಜಾಳದ ಬೆಳೆಯು ಹಾಳಾಗಿದೆ. ದಂಟು ಹಾಗೇ ನಿಂತಿವೆ. ಒಂದು ತೆನೆ ಇಲ್ಲ." ಒಂದಿಷ್ಟು ಬಿರುಸಾಗಿ ನುಡಿದರು.

"ಹೌದರಿ. ಮೊನ್ನೆ ಸಂತೆಗೆ ಹೋದಾಗ ರಾತ್ರಿ ತೋಟ ಹೊಕ್ಕು ಯಾರೋ ಮುರಿದುಕೊಂಡು ಹೋಗಿರುವರು. ನಿನ್ನೆ ಚಿಕ್ಕ ಯಜಮಾನರು ತೆನೆ ತಿನ್ನಲಿಕ್ಕೆ ಬಂದಾಗ ಅವರಿಗೆ ಹೇಳಿರುವೆ."

"ಯಾರು ಯಾರು ಬಂದಿದ್ದರು ?"

"ಕುದರಿ ಭೀಮ, ಉಂಗುರ ನಿಂಗ, ತುಬಾಕಿ ತಮ್ಯಾ, ಹಳೇ ಮನಿ ಹಿಟಲರ ಇಷ್ಟು ಜನರು ಬಂದಿದ್ದರು."

ಕೇಳಿ ಅಪ್ಪಾರಾಯರು ವಿಷಾದದಿಂದ ಮುಖವನ್ನು ಮುದುಡಿಸಿದರು. ಆದರೂ ತೋರಗೊಡದೆ ಮೊದಲಿನ ಮಾತಿನ ಎಳೆಯನ್ನು ಹಿಡಿದು "ಬೇಲಿ ಇಷ್ಟು ಬಂದೋಬಸ್ತು ಇದ್ದ ಮೇಲೆ ಕಳ್ಳರು ಹೇಗೆ

ತೋಟವನ್ನು ಹೊಕ್ಕರು ?" ಎಂದರು.

"ಕಳವು ಮಾಡಲಿಕ್ಕೆ ನಿಂತರೆ ಬೇಲಿಯು ಎಷ್ಟು ಕಾವಲು ಮಾಡಬಹುದು ರಾಯರೇ !"

"ಆ ಕಳ್ಳ ತೋಟದೊಳಗೇ ಇದ್ದರೆ ಕಾಯುವವರಾರೋ ?" ಎಂದು ಬಾಣಬಿಟ್ಟಂತೆ ನುಡಿದೇ ಬಿಟ್ಟರು.

ಅಣ್ಣಪ್ಪನ ಮನಸಿಗೆ ಮಾತು ತಾಕಿತು. ಇಂಥ ಸಾವಿರ ನಿಂದೆ, ಅಷ್ಟೇ ಅಪವಾದಗಳನ್ನು ಕೇಳಿ ಜೀರ್ಣಿಸಿಕೊಂಡ ಒಕ್ಕಲ ಮಗನು ಕ್ಷಣ ಹೊತ್ತು ನಿಂತು–"ಬೇಲಿಯೇ ಎದ್ದು ಹೊಲ ಮೆಯಿದರೆ ಕಾಯುವವರಾರು ! ಖರೇ ಬಿಡರಿ. ಗುಡಿಸಲದೊಳಗಾದರು ಬರ್‍ರಿ. ಯಾತದ ಕಟ್ಟೆಯ ಮೇಲೆಯೇ ನಿಂತು ಮಾತಾಡ ಹತ್ತಿರುವಿರಿ" ಎಂದು ವಿನಯದಿಂದ ಕರೆದನು.

ಅಪ್ಪಾರಾಯರು ಬೆದರ ಎತ್ತಿನಂತೆ ಮುಸುಗುಡುತ್ತಲೇ ಗುಡಿಸಲವನ್ನು ಹೊಕ್ಕರು. ಅಣ್ಣಪ್ಪನು ಕಂಬಳಿಯನ್ನು ಹಾಸಿ ಕುಳ್ಳಿರಿಸಿದನು, ರಾಯರು ಠೀವಿಯಿಂದ ಕುಳಿತರು. ಮೀಸೆಯನ್ನು ತಿಕ್ಕಿದರು. ಮೋತ್ಯಾನ ಮೇಲೆ ಕೈಯಾಡಿಸಿದರು. ಅಣ್ಣಪ್ಪನು ಒಂದು ಕಡೆಗೆ ಒಟ್ಟಿದ ಹುಲ್ಲ ಮೇಲೆ ಕುಳಿತು – "ಊರೊಳಗಿನ ನಾಲ್ಕು ಜನ ಘಟಿಂಗರು ತಿನೆ ಒಯಿದರೆ ನನ್ನ ಮೇಲೆ ಸಂಶಯ ಪಟ್ಟಿರಿ. ಇದೆಲ್ಲ ಕಲಿಕಾಲ ನೋಡಿರಿ. ಅಜ್ಜ ಆರು ತಲೆಯಿಂದ ನಿಮ್ಮ ಸೇವೆಯನ್ನು ಮಾಡ ಹತ್ತಿರುವೆವು. ನನ್ನ ಮೈ ಮಾಂಸ ಎಲುವು ನಿಮ್ಮ ತೋಟದ ಮಣ್ಣು–ನೀರಿನಿಂದ ತಯ್ಯಾರ ಆಗಿರುವವು. ಹುಟ್ಟಿದ ಕೂಡಲೆ ನನ್ನ ಹೆಸರಿನ ಮುಂದೆ ನಿಮ್ಮ ಹೆಸರನ್ನು ನಮ್ಮ ಅವ್ವ ಹಚ್ಚಿದ್ದರೆ ನಿಮ್ಮ ಉತ್ಪನ್ನದೊಳಗೆ ಪಾಲುಬೇಡಬಹುದಿತ್ತು. ಆಗ ನಾನು ಈ ತೋಟಾ ಎಂದೂ ಬಿಡುತ್ತಿರಲಿಲ್ಲ. ನೀವು ನನ್ನ ಸತ್ತ ತಂದೇ ಹಾಗೆ ಇದ್ದು ನನ್ನ ಮೇಲೆ ಸಂಶಯ ತಕ್ಕೊಳ್ಳುವಿರಿ. ನಾನು ಇದಕ್ಕೆ ಏನು ಹೇಳಲಿ ರಾಯರೇ !" ಎಂದು ಉಸಿರುಗರೆದು ಸುಮ್ಮನಾದನು.

ಅಪ್ಪಾರಾಯರ ಚಿತ್ತಫಲಕದ ಮೇಲೆ ಒಮ್ಮೆಲೆ ಪ್ರಕಾಶ

ಬಿದ್ದಿತು. ಅಣ್ಣಪ್ಪನ ಮಾತು ಆ ಹಳೆಯ ಸಂಗತಿಯನ್ನು ಎತ್ತಿ ಹಿಡಿದು ಚಕ್ರನಾಡಿಸ ಹತ್ತಿದಂತಾಯಿತು.

ತಮ್ಮ ದೂರದ ರೈತನೊಬ್ಬನ ಹೆಂಡತಿ ಬಾಳವ್ವ ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದಳು. ಸತ್ತು ಸ್ವರ್ಗವನ್ನು ಕಂಡ ರೈತನ ಹೆಂಡತಿಯನ್ನು ರಕ್ಷಿಸಬೇಕೆಂಬ ಒಳಗಿನ ಸೆಳೆತ ಮಿಡಿಯುತ್ತಿದ್ದಿತು. ಬಾಳವ್ವ ಇನ್ನೂ ಚಿಕ್ಕವಳು. ಜೀವನದ ಸೀ–ಕಹಿಗಳನ್ನು ಕಂಡಿರಲಿಲ್ಲ. ಬಾಳಬೇಕು, ಬದುಕಬೇಕು ಎಂಬ ಹಂಬಲವು ಅವಳ ಮುಖದಲ್ಲಿ ಮಡುವುಗಟ್ಟಿ ನಿಂತಿದ್ದಿತು. ಹಳ್ಳಿಯ ಒಕ್ಕಲಿ ಮಕ್ಕಳ ಹೆಣ್ಣಾದರು ದುಂಡನೆಯ ಕರಿಯ ಮುಖ, ತಿದ್ದಿ ತೀಡಿದ ಹುಬ್ಬು, ಸುಣ್ಣದಂತಹ ಬಣ್ಣದ ಹಲ್ಲು, ಹೊಳೆಯುವ ಕೆನ್ನೆ ಜೀವನದ ಮಾರ್ಗ ದರ್ಶನದ ಮೈಲಿಗಲ್ಲುಗಳಾಗಿದ್ದವು. ಅವಳ ಮಿಂಚುವ ನೇರಿಲ ಬಣ್ಣದ ಕಣ್ಣು, ಬೇಲಿಯ ಬಳ್ಳಿಗೆ ತೂಗುಬಿದ್ದು ಕಳಿತ ತೊಂಡಿಯ ಹಣ್ಣಿನಂತಹ ತುಟಿ ಶೃಂಗಾರ ಚೇಷ್ಟೆಗೆ ಆಹ್ವಾನಿಸುತ್ತಿದ್ದವು. ಮುಗ್ಧ ಸೌಂದರ್ಯವನ್ನು ಬಳಸಿನಿಂತ ಮೈಮಾಟ, ಅದನ್ನು ಅಂಗ ಪ್ರತ್ಯಂಗ ಗಳಲ್ಲಿ ಪ್ರದರ್ಶಿಸುವ ಒಯ್ಯಾರ ಪುರುಷ ಧರ್ಮವನ್ನು ಕೆಣಕುತ್ತಿದ್ದವು. ಅಪ್ಪಾರಾಯರ ಮನಸು ಎಂದೋ ಆಕಡೆಗೆ ಓಡಿದ್ದಿತು. ಸೆರೆಯಾಳಾಗಿದ್ದಿತು. ಬೇಕುಬೇಕೆಂದು ಹಂಬಲಿಸುತ್ತಿದ್ದಿತು. ಅದರ ಫಲಸಿದ್ಧಿಗೆ ಕೃತಕ ವೇಷವನ್ನು ತೊಡಬೇಕಾಗಿದ್ದಿತು. ಅದಕ್ಕೆ ಅವಳನ್ನು ನೋಡಿ ಮರಮರನೆ ಮರುಗಿದರು. ಅವಳ ಗಂಡನ ಗುಣಗಾನವನ್ನು ಮಾಡಿದರು. ಕೆಲ ಕಾಳುಕಡ್ಡಿಗಳನ್ನು ಕೊಟ್ಟರು. ಹಿಂದಿನ ವರುಷದ ಹಣವನ್ನು ಬಿಟ್ಟರು. ನಡೆಯುವ ವರುಷದ ಖಂಡವನ್ನು ವಜಾ ಮಾಡಿದರು. ಉಪಕಾರದ ಹೊರೆಯಲ್ಲಿ, ದಯೆಯ ಭಾರದಲ್ಲಿ, ಸಾಂತ್ವನದ ಸೆರೆಯಲ್ಲಿ ಬಿಗಿದುಹಾಕಿದರು. ಬಾಳವ್ವ ಅಪ್ಪಾರಾಯರ ಆಶ್ರಯದ ನೆರಳಲ್ಲಿ ಬದುಕುವ ಪ್ರಾಣಿಯಾದಳು. ಇದೇ ಸಂದಿಗೆ ಅಣ್ಣಪ್ಪನ ತಂದೆ ವಿಧುರನಾಗಿದ್ದನು. ಆ ಕತ್ತೆಯಂತೆ ದುಡಿಯುವ ಕುಂಭಕರ್ಣನಂತೆ ಮಲಗುವ, ಅಸ್ತವ್ಯಸ್ತ ಪ್ರಾಣಿಯ ಲಗ್ನವಾಗು

ವುದೂ ಕಷ್ಟದ ಸಂಗತಿಯಾಗಿದ್ದಿತು. ಬಾಳವ್ವನನ್ನು ಅವನಿಗೆ ಲಗ್ನದ ಶಾಸ್ತ್ರದಿಂದ ತಾಳಿಯನ್ನು ಕಟ್ಟಿಸಿದರು. ತಾಳಿಯನ್ನು ತಾವೇ ತಂದಿದ್ದರೆಂದು ಬಾಳವ್ವನೂ ಬಲ್ಲಳು.

ಈ ಎಲ್ಲ ಉಪಕಾರದ ಹೊರೆಯಿಂದ ಬಾಳವ್ವನು ತನ್ನ ಕೃತಜ್ಞತೆಯನ್ನು ಅಪ್ಪಾರಾಯರಿಗೆ ಸಲ್ಲಿಸಿದಳು. ರಾಯರನ್ನು ಸೇವಿಸಿದಳು. ಸುಖಸಂತೋಷಪಡಿಸಿದಳು. ತನ್ನಂತಹ ಒಂದು ಹಳ್ಳಿಯ ಹೆಣ್ಣನ್ನು ಅಶಿಕ್ಷಿತಳನ್ನು, ಅನಾಥಳನ್ನು, ಕರಿಯ ಕಾಗೆಯಂತಹ ಮುಖದವಳನ್ನು, ಬೀಸುವುದು, ಕುಟ್ಟುವುದು, ಕಲ್ಲು ಮಣ್ಣು ಹೊರುವುದು ಇತ್ಯಾದಿ ಬೆವರಿನ ಸ್ನಾನದಲ್ಲಿ ಮುಳುಗೇಳುವ ಒಬ್ಬ ನಿರ್ಗತಿಕಳನ್ನು ಅಪ್ಪಾರಾಯರಂತಹ ದರ್ಪದವರು, ಅಧಿಕಾರದವರು, ಶ್ರೀಮಂತರು, ಕುಲೀನರು, ಊರಹಿರಿಯರು ಕೃಪಾದೃಷ್ಟಿಯಿಂದ ಕಂಡುದು, ಕೈಹಿಡಿದು ಕರೆದುದು ಮಹಾಭಾಗ್ಯವೆಂದು ತಿಳಿದಳು. ಆ ಭಾಗ್ಯಕ್ಕೆ ಅನುಗುಣವಾಗಿ ರಾಯರ ಹತ್ತೂ ಇಂದ್ರಿಯಗಳು ಸಂತಸದ ಶಿಖರಕ್ಕೆ ಮುಟ್ಟುವಂತೆ ಸೇವೆಗೈದಳು.

ಆ ಹೆಣ್ಣಿನ ಕೃತಜ್ಞತೆಯ ನೂರಾರು ಸವಿಸವಿಯಾದ ಚಿತ್ರಗಳು ರಾಯರ ಕಣ್ಣುಮುಂದೆ ಕುಣಿದು ಕಳೆದುಹೋದ ತಾರುಣ್ಯದ ಕೋಲ್ಮಿಂಚು ಮೈತುಂಬ ಮತ್ತೊಮ್ಮೆ ಮೂಡಿ ಮೂಡಿ ಹರಿದಾಡಿತು. ಮುಖವು ಅರಳಿತು. ಮೂಗು ಹಿಗ್ಗಿತು. ಕಣ್ಣು ಕಿಸಿಯಿತು. ತಲೆಯು ಶಾಂತವಾಯಿತು. ದನಿಯು ಭಾರವಾಗಿ — “ಹಾಗೇನಿಲ್ಲ ಅಣ್ಣಪ್ಪ. ನನ್ನ ಮಗನಿಗೂ, ನಿನಗೂ ಒಂದೇ ವಾರ ಹೆಚ್ಚು ಕಡಿಮೆ. ನಾನು ಬಲ್ಲೆ. ಜನರು ಏನೇನೋ ಹೇಳಿದರು. ಬಂದೆ. ಇಷ್ಟೇ. ನೀನು ತಿಂದರೂ ಕೇಡಿಲ್ಲ. ರಾಜಣ್ಣ ತಿಂದರೂ ಕೇಡಿಲ್ಲ. ಅಜೀರ್ಣ ಆಗಬಾರದು. ಇಷ್ಟೇ!” ಎಂದು ಕಲಬೆರಕಿಯ ಮಾತು ಮುಗಿಸಿ ಕಿಲಕಿಲನೆ ನಕ್ಕರು.

ಅಣ್ಣಪ್ಪ ಚಿಕ್ಕವನಾದರೂ ರಾಯರ ಸ್ವಭಾವ, ನಡತೆ ಎಲ್ಲವನ್ನು ಬಲ್ಲವನಾಗಿದ್ದನು. ಅವರ ದೇಹದಲ್ಲಿಯ ಮೆತ್ತನೆಯ ಸ್ಥಳವು ಯಾವು

ದೆಂದೂ ಬಲ್ಲವನಾಗಿದ್ದನು. ಅದಕ್ಕೆ ಗುರಿಯಿಟ್ಟು ಒಂದು ಮಾತು ಎಸೆದರೂ ತಗಲುವುದೆಂದು ಬಲ್ಲವನಾಗಿದ್ದನು. ಈಗ ರಾಯರ ಸಿಟ್ಟೊ ಇಳಿಯಿತು. ಹೆಂಡತಿಯು ಹಾಲತಂದು ಇಟ್ಟಳು. ಅಣ್ಣಪ್ಪ ರಾಯರ ಮುಂದೆ ಸರಿಸುತ್ತ-ಇದಿಷ್ಟು ಕುಡಿಯಿರಿ ಎಂದು ವಿನಂತಿಸಿದನು. ಮೋತ್ಯಾನಿಗೂ ಒಂದು ಗಂಗಾಳದಲ್ಲಿ ಹಾಲು ಸುರುವಿ ಇಟ್ಟನು. ನಾಯಿಯು ಲೊಚಗುಡುತ್ತ ಪರಿಷೇಚನೆಮಾಡುತ್ತ ಕುಡಿಯ ಹತ್ತಿತು. ರಾಯರೂ ಗುಟುಕರಿಸಹತ್ತಿದರು.

ಕೈ-ಬಾಯಿ ತೊಳೆದು ರಾಯರು ಮೇಲೆದ್ದರು. ಅಣ್ಣಪ್ಪನು ತುಳಸಿಯನ್ನು ಹರಿದುಬಂದು ಔಡಲ ಎಲೆಯಲ್ಲಿ ಸುತ್ತಿ ರಾಯರ ಕೈಗೆ ಕೊಟ್ಟನು. ರಾಯರು ಗುಡಿಸಲ ಹೊರಗೆ ಬಿದ್ದರು. ದೂರದಿಂದ ಯಾರೋ ಕರೆದಂತಾಯಿತು.

ಏತದ ಕಟ್ಟೆಯನ್ನು ಏರಿ ಕುತ್ತಿಗೆಯನ್ನು ಎತ್ತರಿಸಿ ರಾಯರು ದಾರಿಯ ಕಡೆಗೆ ನೋಡಿದರು. ಎದುರು ದೊಡ್ಡ ಮನೆಯ ಪುಟ್ಟಪ್ಪನವರು ಕಂಡರು.

"ಇಷ್ಟು ಬೇಗ, ಇಷ್ಟು ಅವಸರದಿಂದ ಇಲ್ಲೇಕೆ ಪುಟ್ಟಪ್ಪನವರೇ?" ರಾಯರು ಆಶ್ಚರ್ಯದಿಂದ ಕೇಳಿದರು.

"ಅವಸರದ ಕೆಲಸವಿದೆ. ತಾಲೂಕಿಗೆ ಹೋಗಬೇಕು. ನೀವಿಲ್ಲದೆ ನಡೆಯುದು. ನಿಮ್ಮನ್ನು ಕರೆದುಕೊಂಡು ಹೋಗಲು ಬಂದಿರುವೆ. ನೀವು ಬರಲೇಬೇಕು." ಆಗ್ರಹ ಮಾಡ ಹತ್ತಿದರು.

"ಅದೇನು ?"

"ದಾರಿಗುಂಟ ಎಲ್ಲವನ್ನು ಹೇಳುವೆ."

"ಅಲ್ಲ. ಮನೆಯಲ್ಲಿ ಹೇಳಬೇಡವೇ ?"

"ನಾನು ಎಲ್ಲ ಹೇಳಿರುವೆ. ನಿಮ್ಮ ಮನೆಯ ಮುಂದಿನಿಂದಲೇ ಹಾಯ್ದು ಬಂದೆ. ತೋಟಕ್ಕೆ ಹೋಗಿರಬೇಕೆಂದು ತಿಳಿಯಿತು. ಈ ಕಡೆಗೆ ಧಾವಿಸಿಬಂದೆ."

"ಊಟವನ್ನಾದರು ಮಾಡಿ ಹೋಗುವ."

"ನಾನು ಎಲ್ಲ ಸಿದ್ಧತೆಯನ್ನು ಮಾಡಿರುವೆ. ಚಕ್ಕಡಿಗೆ ಸವಾರಿ ಬಿಗಿಸಿರುವೆ. ಕಣಿಕೆ ಹಾಕಿಸಿ ಮೇಲೆ ಗಾದಿಯನ್ನು ಹರವಿರುವೆ. ದಿಂಬು ಗಳನ್ನೂ ಇಡಿಸಿರುವೆ. ಒಂದು ವಿಚ್ಚಿ ತಿನ್ನುವ ಎಲೆ ತಂದಿರುವೆ. ಅಡಿಕೆ ಕಾಚು, ಸುಣ್ಣ, ತಂಬಾಕು ಎಲ್ಲ ಇದೆ. ಊಟ-ಜಳಕಕ್ಕೆ ನಮ್ಮ ಮನೆಯಿದೆ. ಮತ್ತೇನುಬೇಕು. ನೀವು ಬರಲೇಬೇಕು."

ಅಪ್ಪಾರಾಯರು ಸುಮ್ಮನೆ ನಿಂತರು.

"ಏಕೆ, ಏನು ವಿಚಾರಿಸುತ್ತಿರುವಿರಿ ? ಗಾಡಿಯನ್ನು ಇಲ್ಲಿಗೆ ತರ ಹೇಳಲಾ ?" ಎಂದರು ಪುಟ್ಟಪ್ಪನವರು.

"ನಡೆಯಿರಿ." ಎಂದು ನಾಯಿಯ ಕಡೆ ನೋಡಿದರು.

"ಅಣ್ಣಪ್ಪ ನೀನು ಮನೆಯಲ್ಲಿ ಹೇಳು. ರಾಯರು ತಾಲೂಕಿಗೆ ಹೋದರು. ಅವರ ಊಟದ ದಾರಿಯನ್ನು ನೋಡಬೇಡಿರಿ" ಎಂದು ತಿಳಿಸು.

"ನಡೆಯಿರಿ ಕೋರ್ಟು ಆರಂಭವಾಗುವುದರೊಳಗೆ ನಾವು ವಕೀಲ ರನ್ನು ಕಂಡು ಎಲ್ಲ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು."

"ನಡೆಯಿರಿ. ಅಣ್ಣಪ್ಪ, ಈ ನಾಯಿಯನ್ನು ಊರವರೆಗೆ ಮುಟ್ಟಿಸು. ಮೋತ್ಯಾ ಮನೆಗೆ ಹೋಗು !" ಎಂದು ಮೈ ಮೇಲೆ ಕೈ ಯಾಡಿಸಿ ಚಕ್ಕಡಿಯ ಕಡೆಗೆ ನಡೆದರು. ಅಣ್ಣಪ್ಪನು ನಾಯಿಯನ್ನು ಹಿಡಿದುಕೊಂಡು ಬಾಲವನ್ನು ತೀಡ ಹತ್ತಿದನು. ರಾಯರು ಚಕ್ಕಡಿ ಯನ್ನು ಏರಿ ಕುಳಿತರು. ಎತ್ತುಗಳು ತಾಲೂಕಿನ ಕಡೆಗೆ ಓಡುತ್ತ ಎಳೆದುಕೊಂಡು ನಡೆದವು.

೩

ಅಪ್ಪಾರಾಯರ ಗಾಡಿಯು ಕಣ್ಣು ಮರೆಯಾಗುವವರೆಗೆ ಅಣ್ಣಪ್ಪನು ಗುಡಿಸಲಿನ ಮುಂದುಗಡೆಯಲ್ಲಿ ನಿಂತು ನೋಡಿದನು. ಎತ್ತುಗಳ ಮೈ ಮೇಲೆ ಹಾಕಿದ ಜೂಲಿನ ಹಾರಾಟ, ಕೊರಳಿಗೆ ಕಟ್ಟಿದ ಹುರಿಗೆಜ್ಜೆಯ ನಾದ, ಚಕ್ಕಡಿಯು ಧಡಕ್-ಫಡಕ್ ಸಪ್ಪಳ ಇನ್ನೂ ಕೇಳಿಸುತ್ತಿದ್ದವು. ನಡುನಡುವೆ ತಾಳಿ, ತಾಳಿ ಎಂದು ಒದರಿ ಎತ್ತಿ ಕಟಿಯುವ ಬಾರಕೋಲಿನ ಚಟಕು ತಾಳದಂತೆ ಬರುತ್ತಿದ್ದವು. ಕೊನೆಗೆ ಗಿಡದ ಗುಂಪಿನಲ್ಲಿ, ದಿನ್ನೆಗಳ ಏರುಗಳಲ್ಲಿ ಚಕ್ಕಡಿಯು ಮರೆಯಾಯಿತು. ಅಣ್ಣಪ್ಪನು ನಿರೀಕ್ಷಣಾ ಲೋಕದಿಂದ ತನ್ನ ತೋಟಕ್ಕೆ ಮರಳಿದನು. ಬಳಿಯಲ್ಲಿ ಮೋತ್ಯಾ ನಿಂತುಕೊಂಡಿದ್ದಿತು. ಗುಡಿಸಲಿನ ಬಾಗಿಲಲ್ಲಿ ಹೆಂಡತಿ ಸಣ್ಣವ್ವ ತಲೆತುರಿಸುತ್ತ ನಿಂತಿದ್ದಳು. ಅಣ್ಣಪ್ಪನು ಹೆಂಡತಿಯನ್ನು ನೋಡಿದನು. ಸಣ್ಣವ್ವನೂ ಗಂಡನನ್ನು ನೋಡಿದಳು. ಕಣ್ಣುಗಳು ಕೂಡಿದವು. ಮುಗುಳು ನಗೆಯಿಂದ–

"ಯಜಮಾನರು ಹೋದರು. ಇನ್ನು ನಡಿ" ಎಂದಳು.

"ಯಜಮಾನರು ಹೋದರು. ಆದರೆ ಈ ಡೊಂಕು ಬಾಲದ ನಾಯಕರು ಇರುವರಲ್ಲ !"

"ಅವರನ್ನೇನು–ಮಾಡುವುದು. ಜೇಲಿಯ ಹೊರಗೆ ಒಯಿದು ಹಚ್ಯಾ ಅನ್ನು. ಮನೆಗೆ ಹೋಗುವದು."

"ಊರವರೆಗೆ ಮುಟ್ಟಿಸಿ ಬಾ ಅಂದಿರುವರು. ಮತ್ತೆ ಅವರ ಮನೆಯಲ್ಲಿಯೂ ಒಂದು ಮಾತು ಹೇಳುವದಿದೆ."

"ಬಿಸಿಲೇರಿದ ಮೇಲೆ ಸುದ್ದಿಯನ್ನು ಮುಟ್ಟಿಸಿದರಾಯಿತು."

"ಈ ನಾಯಿ ?"

ಆದರೆ ಸಣ್ಣವ್ವನಿಗೆ ಇದು ಮನಸಿಗೆ ಬರಲಿಲ್ಲ. ಅವಳ ಅಭಿಪ್ರಾಯವೇ ಬೇರೆ ಇದ್ದಿತು. ಅದನ್ನು ತೋರ್ಪಡಿಸಲಿಕ್ಕೆ–"ನಾಯಿಗೆ ಮನೆಯನ್ನು ತೋರಿಸುವದು, ಮೀನಿಗೆ ನೀರಲ್ಲಿ ಈಸು ಕಲಿಸುವುದು ಯಾರೂ ಮಾಡುವದಿಲ್ಲ. ಒಂದು ತಾನೇ ಹುಡುಕಿಕೊಳ್ಳುವುದು, ಇನ್ನೊಂದು ತಾನೇ ಕಲಿಯುವುದು. ನಿನಗೆ ಅಷ್ಟು ನಂಬಿಕೆ ಇರದಿದ್ದರೆ ಮುಂದಕ್ಕೆ ಕರೆದುಕೊಂಡು ಹೋಗಿ ಊರ ಕಡೆಗೆ ಬೆರಳುಮಾಡಿ ಹಚ್ಯಾ ಅನ್ನು. ಹೋಗುವದು. ಹೋಗಲಿಲ್ಲವೆಂದರೆ ಒಂದು ಕಲ್ಲು ತೆಗೆದುಕೊಂಡು ಒಗೆ. ತಾನೇ ರಪಾಟಿ ಓಡುವುದು." ಎಂದು ಉಪದೇಶಿಸಿದಳು.

ಅಣ್ಣಪ್ಪನು ಸುಮ್ಮನೆ ನಿಂತನು.

"ಇಂದು ಮೆಣಸಿನ ಗಿಡಗಳಿಗೆ ನೀರು ಹಾಯಿಸಬೇಕು. ಮೇಲಿನ ಮಡಿಗೆ ಗೊಬ್ಬರ ಹರವಬೇಕು. ಪೇಟೆಗೆ ಹೋಗಿ ಉಪ್ಪು, ಬೆಲ್ಲ ತರಬೇಕು. ನಾಯಿಯ ಸಂಗಡ ತೊಡಗಿದರೆ ಕೆಲಸವೆಲ್ಲ ನಿಲ್ಲುವವು."

ಅಣ್ಣಪ್ಪನಿಗೆ ಈ ಮಾತುಗಳು ಸರಿ ಎನಿಸಿದವು. ನೋತ್ಯಾನನ್ನು ಸಂಗಡ ಕರೆದುಕೊಂಡು ತೋಟದಿಂದ ಹೊರಬಿದ್ದನು. ಅಡ್ಡದಾರಿಯಿಂದ ದೊಡ್ಡದಾರಿಗೆ ಬಂದನು. ಮುಂದೆ ಹತ್ತಿಪ್ಪತ್ತು ಹೆಜ್ಜೆ ಹೋಗುವಷ್ಟರಲ್ಲಿ ಅಯ್ಯಪ್ಪನ ಮಗ ಚಿನ್ನನು ಕೂಗಿಕೊಂಡು ಹತ್ತಿರ ಬಂದನು.

"ಎಲ್ಲಿಗೆ ಹೋಗಿದ್ದೆ ಚಿನ್ನ ?" ಅಣ್ಣಪ್ಪನು ಕುತೂಹಲದಿಂದ ಕೇಳಿದನು.

"ನಿನ್ನೆ ರಾತ್ರಿ ಅಪ್ಪನ ಸಂಗಡ ಹೊಲಕ್ಕೆ ಹೋಗಿದ್ದೆ. ರಾತ್ರಿಯು

ಬಹಳವಾಯಿತು. ಅಲ್ಲಿಯೇ ಮಲಗಿದ್ದೆ. ಈಗ ಮನೆಗೆ ನಡೆದಿರುವೆ"

"ನಿಮ್ಮಪ್ಪ ಹೊಲದಲ್ಲಿಯೇ ಇರುವನೇನು ? "

"ಅಹುದು."

"ಈಗ ನೀನು ಮನೆಗೆ ನಡೆದೆ ಏನು ?"

"ಹೂ, ಸಾಲೆ ಇರುವದು."

"ಹಾಗಾದರೆ ಈ ನಾಯಿಯನ್ನು ಊರವರೆಗೆ ಕರೆದುಕೊಂಡು ಹೋಗು."

"ಅದೇಕೆ ! ಅದಕ್ಕೆ ಮನೆ ಸಿಗುವದಿಲ್ಲವೇನು ?"

"ಮನೆ ಸಿಗುವದು. ನಿನ್ನ ಜತೆಗೆ ಕರೆದುಕೊಂಡು ಹೋಗು."

"ಕಡಿದೀತು. ಬಿಡು ಮಾರಾಯಾ ! "

"ಗೌಡರ ನಾಯಿ ಎಂದಾದರು ಕುಡಿಯುವದೇನೋ ?"

"ಕಡಿಯುವದಿಲ್ಲ !" ಎಂದು ಅದರ ಮೈ ಮೇಲೆ ಕೈಯಾಡಿಸಿದನು. ಅದು ಬಾಲವನ್ನು ಅಲ್ಲಾಡಿಸಹತ್ತಿತು.

"ಒಯ್ಯುವೆನು ಬಿಡು." ಎಂದು ಆಶ್ವಾಸನವನ್ನಿತ್ತನು.

ಅಣ್ಣಪ್ಪನು ನಾಯಿಯನ್ನು ಒಪ್ಪಿಸಿದನು. ಚಿನ್ನನು "ನಡೆ ಮೋತ್ಯಾ !" ಎಂದು ನುಡಿದು ಮುಂದೆ ಸಾಗಿದನು. ನಾಯಿಯು ಮುಂದೆ ಮುಂದೆ ಎಡಬಲದ ಬೇಲಿಗಳನ್ನು ಮೂಸುತ್ತ ಸಾಗಿತು. ಚಿನ್ನನು ಹಿಂದಿನಿಂದ ದಾರಿಯನ್ನು ಹಿಡಿದು ಸಾಗಿದನು. ಅಣ್ಣಪ್ಪನು ತೋಟದ ದಾರಿಯನ್ನು ಹಿಡಿದನು.

ಊರ ಅಗಸೆಗೆ ಬಂದಾಗ ನಾಯಿಯು ಅಗಸೆಯ ಮುಂದಿನ ಬೋರಗಲ್ಲಮೇಲೆ ಜಲಾಭಿಷೇಚನ ಮಾಡಿ ಒಳಗೆ ಕಾಲಿಟ್ಟಿತು. ಚಿನ್ನನು ಹಿಂದಿನಿಂದ ಬರುತ್ತಲೇ ಇದ್ದನು. ಎದುರು ಒಂದು ಹಾಳು ನಾಯಿಯು ಬಂದಿತು. ಹುಡುಗ ಬುದ್ಧಿ, ಎದುರಿನ ನಾಯಿಯನ್ನು ಕಡಿಯಲೆಂದು ಚಿನ್ನನು ಮೋತ್ಯಾನಿಗೆ ಛೂ ಎಂದನು. ಅದು ಒಮ್ಮೆಲೆ ವವ್ವ ಎಂದು ಬೊಗಳಿ ಮೇಲೆ ಹೋಯಿತು. ಹಾಳು ನಾಯಿ ಅಪಜಯದ ಪತ್ರವನ್ನು ಒಪ್ಪಿಸುವಂತೆ ಬಾಲವನ್ನು ಮುದುಡಿಸಿ

ಕಿಸ್-ಪಿಸ್ ಎಂಬ ನಾದದ ಶಿವಧೋ....ಹರಿಧೋ ಮಂತ್ರವನ್ನು ಪಠಿಸ ಹತ್ತಿತು. ಈ ಬೊಗಳಾಟಕ್ಕೆ ಚಿನ್ನಯ್ಯ ಸಾವುಕಾರನ ಕರಿಯ ನಾಯಿಯು ಎಚ್ಚತ್ತು ಗುಡುಗುತ್ತ ಬಂದಿತು. ಆ ನಾಯಿಯ ಮಿಂಚಿನ ಕರಿಯ ಬಣ್ಣ, ಬೆಂಕಿಯಂತಹ ಕಣ್ಣು, ನಿಮಿರಿಸಿಂತ ಬಾಲ, ಕುಣಿದಾಟಕ್ಕೆ ತೂಗಾಡುವ ಕಿವಿಯ ಹಾಲೆ, ಬಿಸಿಲಲ್ಲಿಟ್ಟ ನಗಾರಿಯನ್ನು ಬಾರಿಸಿದಂತಹ ಬೊಗಳುವಿಕೆಗಳನ್ನು ಕಂಡು, ಕೇಳಿ ಹುಡುಗನು ಅಂಜಿ ನೆರೆಮನೆಯನ್ನು ಸೇರಿದನು.

ಚಿನ್ನಯ್ಯನ ನಾಯಿ ಹುಲಿಯಂತೆ ಹಾರಿತು. ಬೊಗಳಲಿಲ್ಲ. ಹಿಂಜರಿಯಲಿಲ್ಲ. ಮುಂದೆ ಓಡಿದ್ದೇ ಗೊತ್ತು. ಮೋತ್ಯಾನನ್ನು ತಡೆದದ್ದೇ ಕಂಡುದು. ಅದನ್ನು ಉರುಳಾಡಿಸಿ ಕಡಿದದ್ದೇ ಅರಿತುದು.

ಮೋತ್ಯಾ ಹಾಳು ನಾಯಿಯ ವೇಷವನ್ನು ತಾನು ತೊಟ್ಟಿತು. ಬಾಲವನ್ನು ಮುದುಡಿಸಿತು. ಹಲ್ಲು ಕಿರಿಯಿತು. ಕಿಸ್-ಪಿಸ್ ಮಂತ್ರವನ್ನು ನುಡಿಯಿತು. ಕಂಞಾಕುಂಞಾ ರಾಗವನ್ನು ಮಾಡಿತು. ತನ್ನ ನಾಲ್ಕು ಶೂಲದ ಹಲ್ಲುಗಳನ್ನು ತೋರಿಸಿತು. ರಾಯರನ್ನು ನೆನೆಯಿತು. ಮನೆಯನ್ನು ಸ್ಮರಿಸಿತು. ಮೆತ್ತನ್ನ ಗಾದಿಯನ್ನು ಚಿಂತಿಸಿತು. ಜಯಪತ್ರವನ್ನು ಬರೆದು ಒಪ್ಪಿಸಿತು. ಆದರೆ ಚಿನ್ನಯ್ಯ ಸಾವುಕಾರನ ನಾಯಿ ಇವಾವುದನ್ನು ಲೆಕ್ಕಿಸದೆ ತನ್ನ ಶೂಲದ ಹಲ್ಲಿಗ ರುಚಿಯೇರುವಂತೆ ಕಡಿಯಿತು. ಕಡಿಯಿತು. ಮತ್ತೂ ಕಡಿಯಿತು. ಉರುಳಾಡಿಸಿತು. ಹೊರಳಾಡಿಸಿತು. ದಸರೆಯ ಬೇಟೆಗಾಗಿ ಮೋತ್ಯಾನ ಗಡುತರವಾದ ಎಲುವುಗಳ ಮೇಲೆ ರಕ್ತದ ನೀರನ್ನು ಹನಿಸಿ ತನ್ನ ಹಲ್ಲುಗಳನ್ನು ಮಸೆದುಕೊಂಡಿತು.

ನಾಯಿಯ ಆಕ್ರಂದನ ಹೆಚ್ಚಾಗಲು ಕೂಡಿದವರು ಓಡಿ ಬಂದು ಹುಯಿಲೆಬ್ಬಿಸಿದರು. ಚಿನ್ನಯ್ಯನವರ ನಾಯಿ ಥೂ ಥೂ ಎನ್ನುತ್ತ ನಾಲಗೆಗೆ ಅಂಟಿಕೊಂಡ ಮೋತ್ಯಾನ ಕೂದಲುಗಳನ್ನು ಉಗುಳುತ್ತ ಮನೆಯನ್ನು ಸೇರಿ ಹೊಸ್ತಿಲಿನ ಮೇಲೆ ತನ್ನ ಮುಂದಿನ ಕಾಲುಗಳನ್ನು ಊರಿ ಜನರ ಉತ್ತರ ಪೂಜೆಯ ನಾಟಕವನ್ನು ನೋಡ ಹತ್ತಿತು.

ಮೋತ್ಯಾ ಹೆಂಗಸಿನಂತೆ ಇನ್ನೂ ಅಳುತ್ತಿದ್ದಿತು. ನೆರೆದವರು ಅದನ್ನು ಹಿಡಿದು ಪ್ರೈ ಸವರಿದರು. ರಕ್ತ ಒರಸಿದರು. ಮನೆಯ ವರೆಗೆ ಮುಟ್ಟಿಸಿದರು.

ಮೋತ್ಯಾ ಮನೆಯಲ್ಲಿ ತನ್ನ ಗಾದಿಯ ಮೇಲೆ ನರಳುತ್ತ ಆಡ್ಡಾಯಿತು. ಅದರ ಅವಸ್ಥೆಯನ್ನು ನೋಡಲು ಅನೇಕರು ಸರದಿಯ ಸಾಲಿನಂತೆ ಬಂದರು.

೪

ಸಂಜೆಗೆ ಮನೆಗೆ ಬಂದ ಮೇಲೆ ರಾಜಣ್ಣನಿಗೆ ಇಷ್ಟು ಸಂಗತಿ ತಿಳಿಯಿತು—

ಮೋತ್ಯಾ ತೋಟದಿಂದ ಬರುತ್ತಿದ್ದಿತು. ಚಿನ್ನಯ್ಯನು ತನ್ನ ನಾಯಿಯನ್ನು ಛೂ ಬಿಟ್ಟನು. ಅದು ಮೋತ್ಯಾನನ್ನು ಉರುಳಿಸಿ ಹೊರಳಿಸಿ ಕಡಿಯಿತು. ಆಗ ಅವನು ಕಟ್ಟೆಯ ಮೇಲೆ ನಿಂತು ಎಲ್ಲವನ್ನೂ ನೋಡುತ್ತಿದ್ದನು. ಮೋತ್ಯಾನ ಮೇಲೆ ಬಹಳ ದಿನಗಳಿಂದ ಇದ್ದ ವೈರವನ್ನು ಸಾಧಿಸಿದನು. ಅದನ್ನು ಕಡಿಸಿ ಗೌಡರ ಮನೆಯ ಅವಮಾನವನ್ನು ಮಾಡಿದನು. ಆಗಿನ ಅವನ ಮುಖದ ಮೇಲಿನ ಮುಗುಳು ನಗೆಯಿಂದ ಇದನ್ನು ಯಾರಾದರೂ ಅರಿಯಬಹುದು. ಹಾರುವನ ನಾಯಿ ಅರಳಹಿಟ್ಟು ತಿನ್ನಬಹುದೇ ಹೊರತು ಬೇಟೆಯನ್ನು ಎಂದೂ ಆಡಲಾರದು.

ರಾಜಣ್ಣನು ಕಿಡಿಕಿಡಿಯಾದನು. ಅವನ ತಲೆಯಲ್ಲಿ ಸಾರಾಸಾರ ವಿಚಾರಗಳು ಹೊಳೆಯಲಿಲ್ಲ. ಈ ಸೇಡನ್ನು ಹೇಗೆ ತೀರಿಸಬೇಕು? ಈ ಅವಮಾನದ ಪರಿಮಾರ್ಜನೆಯನ್ನು ಹೇಗೆ ಮಾಡಬೇಕು? ಇವೇ ತಾಳಬಾರಿಸಿ ತಂಬೂರಿಯನ್ನು ಮೀಟಿ ರುದ್ರ ಸಂಗೀತವನ್ನು ನುಡಿಸಿದವು. ನಾಯಿಯ ಬಳಿಗೆ ಹೋದನು. ಮೋತ್ಯಾ ತನ್ನ ತೊಡೆಯ ಮೇಲಿನ ತೊಂಡಲುಕೂದಲಿನಲ್ಲಿ ಸಿಕ್ಕು ಒಣಗಿದ ನೆತ್ತರವನ್ನು

ನೆಕ್ಕುತ್ತಿದ್ದಿತು. ಕುತ್ತಿಗೆಯ ಹತ್ತಿರ ಸಹ ರಕ್ತ ಕಾಣುತ್ತಿದ್ದಿತು. ಅಲ್ಲಿಯ ಕೂದಲು ಜಡೆ ಗಟ್ಟಿದಂತಾಗಿದ್ದಿತು. ಮೈಯೆಲ್ಲ ಮಣ್ಣು ಮಣ್ಣಾಗಿದ್ದಿತು. ಬಿಳಿಯ ಬಟ್ಟೆಯನ್ನು ಬೂದಿಯಲ್ಲಿ ಮುಳುಗಿಸಿದಂತೆ ಕಾಣುತ್ತಿದ್ದಿತು. ನಾಯಿಯು ರಾಜಣ್ಣನನ್ನು ನೋಡಿ ಓ! ಎಂದು ಒದರಿತು. ಬಾಲವನ್ನು ನೆಲಕ್ಕೆ ಬಡಿಯ ಹತ್ತಿತು. ಅದರ ಅವಸ್ಥೆ ಮತ್ತು ಇಂಥ ಅವಸ್ಥೆಯಲ್ಲಿಯೂ ತೋರಿಸುವ ಭಕ್ತಿಯನ್ನು ಕಂಡು ರಾಜಣ್ಣನ ರೋಷ ಇಮ್ಮಡಿಯಾಯಿತು. ಸಂಜೆಯ ಅದರ ಊಟವನ್ನು ಇಡಿಸಿ, ತಾನೂ ಒಂದೆರಡು ತುತ್ತು ನುಂಗಿ ನೇರವಾಗಿ ಹಳೇಮನಿ ಹಿಟಲರನ ಮನೆಗೆ ಬಂದನು.

"ಯಾರು? ಏಕೆ ರಾಜಣ್ಣ ಇಷ್ಟು ಬೇಗ ಬಂದಿರಿ?" ಎಂದು ಹಿಟಲರನು ಬಾಗಿಲಿಗೆ ಬಂದು ಕೇಳಿದನು.

"ಒಂದು ಅವಸರದ ಕೆಲಸವಿದೆ. ನಿನ್ನ ಊಟವಾಯಿತೇನು?" ಎಂದು ಒಂದೇ ಉಸಿರಿನಲ್ಲಿ ಕೇಳಿದನು.

"ಈಗ ಮುಗಿಸುವೆನು? ವಿಶೇಷವೇನು?"

"ಊಟ ಮಾಡು."

"ಅವಸರವೇನು?"

"ಮೊದಲು ಊಟಮಾಡು. ಮತ್ತು ಕೂಡಲೆ ಕುದುರೀ ಭೀಮನನ್ನು, ಉಂಗುರ ನಿಂಗನನ್ನು, ತುಬಾಕಿ ತಮ್ಯಾನನ್ನು ಕರೆದು ಕೊಂಡು ಬಾ. ಇಂದು ರಾತ್ರಿಯೇ ಒಂದು ಮಹತ್ವದ ಕೆಲಸವನ್ನು ಮಾಡಬೇಕಾಗಿದೆ."

"ಈಗ! ರಾತ್ರಿ ಏನರಿ?"

"ಅಹುದು."

"ಮಧ್ಯಾಹ್ನ ಹೇಳಿದ್ದೇ?"

"ಏನು?"

"ಹೂವಿನ ತೋಟದ ನಿಂಗಿಯ ಮನೆಗೆ ಹೋಗುವುದು!"

"ಅದು ಇನ್ನೊಮ್ಮೆಗಿರಲಿ. ಬೇರೆ ಇದೆ."

"ಆದರೆ ನಿಂಗವ್ವ ಎಷ್ಟು ಹೇಳಿದರೂ ಒಪ್ಪಲೊಲ್ಲಳು. ಇಷ್ಟಾಗಿ ನಾವು ಜಬರ ಮಾಡಿದರೆ ಎಣ್ಣೀ ಬಸವ್ವನಂತೆ ತಟ್ಟಲಿಯ ಬಡಿತ ತಿನ್ನಬೇಕಾಗುವದು."

"ಇಷ್ಟು ಜಬರ ಇದ್ದರೆ ಆಕೆಯ ಮಾತ್ರೇಬೇಡ. ಪ್ರಸಂಗ ಬಿದ್ದರೆ ತಾನೇ ಕೈಕಾಲು ಬಿದ್ದು ಬಂದಾಳು. ಆದರೆ ಇಂದಿನ ಕೆಲಸ ಬೇರೆ ಇದೆ. ನೀನು ಊಟ ಮಾಡು. ಅವರನ್ನು ಕರೆದುಕೊಂಡು ಬಾ. ನಾನು ಎಲ್ಲವನ್ನೂ ಹೇಳುವೆನು."

"ಆಗಲಿ."

ಹಿಟಲರನು ಊಟಕ್ಕೆ ಹೋದನು. ರಾಜಣ್ಣನು ಪಡಸಾಲೆ ಯಲ್ಲಿಯ ಔಡಲ ಎಣ್ಣೆಯ ಹಣತೆಯ ಮುಂದೆ ಕುಳಿತು ಬೀಡಿಯನ್ನು ಹೊತ್ತಿಸಿದನು. ತಲೆಯಲ್ಲಿ ನೂರಾರು ವಿಚಾರಗಳು ಸುಳಿದಾಡ ಹತ್ತಿದವು. ಮೋತ್ಯಾನ ಅಳುವ ಮುಖ, ಅದರ ತೊಡೆಯ ಕೂದಲಿಗೆ ಹತ್ತಿದ ರಕ್ತ, ತಂದೆಯುವರ ಉರಿಮುಖ, ತಾನು ಚಿನ್ನಯ್ಯನ ನಾಯಿಯ ಮೇಲೆ ತೀರಿಸುವ ವೈರ, ಅದರ ಲಟಪಟ ಒದ್ದಾಟ, ತನ್ನ ಗೆಳೆಯರು ಸಹಾಯ ಮಾಡುವ ಕ್ರಮ ಒಂದೊಂದಾಗಿ ಬಂದು ಬಂದು ಬೈಲಾದವು. ಕೈಯಲ್ಲಿಯ ಆರಿದ ಕರಿಯ ಮುಖದ ಬೀಡಿಯ ನೆತ್ತಿಗೆ ಕಡ್ಡಿಯನ್ನು ಕೊರೆದು ಬೆಂಕಿಯನ್ನು ಹಚ್ಚಿದನು. ಒಂದು ಜುರುಕು ಎಳೆದನು. ಹೊಗೆಯು ಎದೆಯ ಗೂಡು, ಬಾಯಿ ಯನ್ನು ತುಂಬಿತು. ಅದರ ಸಂಗಡ ತಂಬಾಕಿನ ಸಣ್ಣ ಸಣ್ಣ ಸುಟ್ಟ ಕಣಗಳು ಬಾಯಲ್ಲಿ ಇಳಿದು ನಾಲಗೆಗೆ ಅಂಟಿಕೊಂಡವು. ವೇಗದಿಂದ ಮತ್ತೊಮ್ಮೆ ಹೊಗೆಯನ್ನು ಎಳೆಯಲು ಬೀಡಿಯು ಚಿಟಪುಟಗುಡ ಹತ್ತಿತು. ಬೀಡಿಯ ಉಡುದಾರದವರೆಗೆ ಬೆಂಕಿಯು ಬಂದುದು ತಿಳಿಯಿತು. ಒಗೆದು ಬೇರೊಂದು ಬೀಡಿಯನ್ನು ತೆಗೆದುಕೊಂಡು ಹೊತ್ತಿಸಿದನು. ಹಿಟಲರನು ಆ ಮೂವರು ಗೆಳೆಯರನ್ನು ಕರೆದು ತಂದನು.

"ಏಕೆ ರಾಜಣ್ಣನವರೇ ಅವಸರದಿಂದ ಕರೆದಿರಂತೆ ?" ಉಂಗುರ

ನಿಂಗನು ಕೇಳಿದನು.

"ಇಲ್ಲಿ ಬನ್ನಿರಿ. ಒಂದು ಅವಸರದ ಕೆಲಸವಿದೆ. ಇಂದು ನಾವು ಅದನ್ನು ಮಾಡಲೇಬೇಕು." ರಾಜಣ್ಣ ಬೀಡಿಯ ಕಟ್ಟನ್ನು ಎಲ್ಲರ ಮುಂದಿಟ್ಟು ನುಡಿದನು.

"ಏನು ?" ಕುದುರೀ ಭೀಮನು ಒಂದು ಬೀಡಿಯನ್ನು ಎಳೆದು ಕೊಂಡು ನುಡಿದನು.

"ಮೊದಲು ಎಲ್ಲರೂ ಎಲೆ ತಿನ್ನಿರಿ. ಒಂದೊಂದು ಬೀಡಿಯನ್ನು ಸೇದಿರಿ. ತಲೆಯು ಹಗುರಾಗುವದು. ಮುಂದೆ ನಾನು ಹೇಳುವೆ." ಚಂಚಿಯನ್ನು ಬಿಚ್ಚಿ ಇಟ್ಟನು. ಕಿಸೆಯೊಳಗಿನ ಕಡ್ಡಿಯ ಪೆಟ್ಟಿಗೆ ಯನ್ನು ಅಲುಗಾಡಿಸುತ್ತ ದೇವಪೂಜಾಪೂರ್ವದ ಘಂಟಾನಾದವನ್ನು ಮಾಡುವಂತೆ ಕೊಟ್ಟನು.

ಎಲ್ಲರೂ ಎಲೆ ತಿಂದು ಕೆಂಪಾದರು. ಬೀಡಿಯನ್ನು ಹೊತ್ತಿಸಿ ಗಲ್ಲವನ್ನು ಉಬ್ಬಿಸಿದರು.

"ಏನು?" ತುಬಾಕಿ ತಮ್ಮ್ಯಾನು ಪ್ರಶ್ನಿಸಿದನು. ಗುಂಡು ಹಾರಿದ ತುಬಾಕಿಯ ಬಾಯಿಂದ ಹೊರಡುವಂತೆ ಹೊಗೆಯು ಹೊರಡು ತ್ತಿದ್ದಿತು.

ರಾಜಣ್ಣನು ತುಟಿಗಳನ್ನು ಕೂಡಿಸಿ, ಬೆರಳುಗಳನ್ನು ಲಂಬವಾಗಿ ಒಂದಿಷ್ಟು ಅಗಲಿಸಿ ಹಿಡಿದು ತಂಬಾಕಿನ ರಸವನ್ನು ಪಿಚಕ್ಕೆಂದು ಉಗುಳಿ "ಇಂದು ನಮ್ಮ ನಾಯಿಯು ತೋಟದಿಂದ ಬರುತ್ತಿದ್ದಿತು. ಯಾರ ಗೊಡವೆಗೆ ಹೋಗದೆ ಸುಮ್ಮನೆ ಬರುತ್ತಿದ್ದಿತು. ಆ ಚಿನ್ನಯ್ಯನ ಕರಿಯ ನಾಯಿ ಮೈತುಂಬ ಕಡಿದಿದೆ. ತೊಡೆಯ ಮೇಲಿನ ಕೂದಲೆಲ್ಲ ಬಣ್ಣದಲ್ಲಿ ಅದ್ದಿದ ಹಂಜಿಗಳಂತೆ ರಕ್ತಮಯ. ಕುತ್ತಿಗೆಯ ಮೇಲೆಯೂ ದೊಡ್ಡ ಗಾಯ. ತಂದೆಯವರಿಗೆ ಇದು ತಿಳಿದರೆ ಊರಲ್ಲಿ ದೊಡ್ಡ ಜಗಳವೇ ಆಗುವದು. ಅದಕ್ಕೆ ಇಂದು ರಾತ್ರಿ ಆ ನಾಯಿಯನ್ನು ಮುಗಿಸುವದು. ನೀವು ಇದನ್ನು ಮಾಡಲೇಬೇಕು. ಏನು ಬೇಡಿ ದರೂ ಕೊಡುವೆ. ನಾನು ಸಿದ್ದನಿರುವೆ" ಎಂದು ಮಾತು ಮುಗಿಸಿ

ಸುಮ್ಮನಾದನು.

ಎಲ್ಲರೂ ಒಬ್ಬರ ಮುಖವನ್ನು ಒಬ್ಬರು ನೋಡಹತ್ತಿದರು- ಕೆಲಹೊತ್ತು ಮೌನದಲ್ಲಿ ಕಳೆಯಿತು. ಕೊನೆಗೆ ರಾಜಣ್ಣನು "ಭೀಮ್ಯಾ ನಿನ್ನಿಂದ ಆಗುವದಿಲ್ಲವೇ ?" ಎಂದನು.

ಭೀಮನು ಬೀಡಿಯ ಹೊಗೆಯನ್ನು ಬಿಡುತ್ತ ಸುಮ್ಮನೆ ಕುಳಿತನು.

"ನಿಂಗು ನೀನು ?"

ಅವನು ಸಹ ಅದನ್ನೇ ಜಪಿಸಿದನು.

"ತಮ್ಯಾ ನಿನಗೆ ?"

"ಆ ನಾಯಿ ಬಹಳ ಕೆಟ್ಟದೆ."

"ಹಿಟಲರ?"

"ಮಾಡಬೇಕೆಂದರೆ ಇದೇನು ಅಸಾಧ್ಯವಲ್ಲ. ಆದರೆ........"

"ಅದೇನು ಆದರೆ ?" ರಾಜಣ್ಣನ ಮಾತಿನ ದನಿ ಏರಿದ್ದಿತು.

"ಚಿನ್ನಯ್ಯ ಕಾಯದೆಯುವ."

"ಕಾಯದೆ ಏನು ಮಾಡುವದು. ಕಾಯದೆಗೆ ಜೀವ ಬರ ಬೇಕಾದರೆ ಸಾಕ್ಷಿಯು ಬೇಕು. ಸಾಕ್ಷಿಯು ಇಲ್ಲದಿದ್ದರೆ ಕಾಯದೆಯು ಪುಸ್ತಕದಲ್ಲಿ ಮಲಗಿರುವದು. ಏನೆಂದಿರಿ ?"

ಯಾರೂ ಮಾತಾಡಲಿಲ್ಲ.

"ಬೇಡಿದ ಹೆಣ್ಣು ತರುವೆವೆಂದು ಪಣತೊಟ್ಟ ನಿಮಗೆ ಒಂದು ನಾಯಿಯು ಜಡವಾಯಿತೇ ?" ರಾಜಣ್ಣನೆಂದ.

"ಹೆಣ್ಣಿಗೆ ಆಶೆಯು ಇರುವದು. ಬಾಯಿ ಇರುವದು. ಅಂಜಿಕೆಯೂ ಇರುವದು."

"ನಾಯಿಗೆ ಸನ್ನಪರೆಂಬ ನಂಬಿಗೆ ಇರುವದು."

"ತಮ್ಯಾ, ಆ ನಾಯಿ ನಿನಗೆ ಈಲು ಅದೆ. ನೀನು ಈ ಕೆಲಸವನ್ನು ಏಕೆ ಮಾಡಬಾರದು ?" ನಿಂಗನೆಂದನು.

"ಆ ನಾಯಿಯನ್ನು ಏನು ಮಾಡುವದು ?"

"ಕೊಂದು ಹಾಕುವದು" ರಾಜಣ್ಣ ನುಡಿದನು.

"ಕೊಲ್ಲುವದೇ?"

"ಹೌದು. ಅದನ್ನು ಹೇಗಾದರೂ ಮಾಡಿ ಇಂದು ರಾತ್ರಿ ಕೊಲ್ಲುವದು. ಕೊಲ್ಲಲೇಬೇಕು. ಎರಡು ಮಾರ್ಗಗಳಿವೆ. ಅದರ ಕೊರಳಿಗೆ ಹಗ್ಗ ಕಟ್ಟಿ ಒಂದು ಗಿಡಕ್ಕೆ ತೂಗುಹಾಕಿ ಬಡಿಗೆಯಿಂದ ಕೊಲ್ಲುವದು. ಇಲ್ಲವೆ ಚೀಲದಲ್ಲಿ ಹಾಕಿ ಒಂದು ಕಲ್ಲುಕಟ್ಟಿ ಕೆರೆಯಲ್ಲಿ ಮುಳುಗಿಸುವದು. ಗಿಡಕ್ಕೆ ತೂಗುಹಾಕಿ ಕೊಲ್ಲಬೇಕೆಂದು ನನ್ನ ಮನಸಿನಲ್ಲಿದೆ. ಅಂದರೆ ನನ್ನ ಸಿಟ್ಟು ಶಾಂತವಾಗುವದು. ಮೋತ್ಯಾನ ಸೇಡು ತೀರಿಸಿದಂತಾಗುವದು. ಏನೆಂದಿರಿ ?" ರಾಜಣ್ಣನು ಹೇಳಿದನು.

"ಗಿಡಕ್ಕೆ ತೂಗು ಹಾಕಿ ಕೊಂದರೆ ನಾಯಿಯು ಒದರಾಟದಿಂದ ಊರವರಿಗೆ ತಿಳಿಯುವದು. ನಮ್ಮ ಹೆಸರು ಬೈಲಿಗೆ ಬರುವದು. ಕೆರೆಯಲ್ಲಿ ಮುಳುಗಿಸಿ ಕೊಲ್ಲುವದು ಸರಿಯಾದುದು. ತಮ್ಯಾ ನಿನ್ನ ಮತವೇನು ?" ಹಿಟಲರನು ನುಡಿದನು.

" ಕೊಲ್ಲುವದಾದರೆ ಕೆರೆಯಲ್ಲಿ ಕೊಲ್ಲುವದೇ ಒಳ್ಳೆಯದು. ಯಾರು ಕೊಂದರೋ ? ಎನಿಸುವದು" ನಿಂಗ ಅನುಮೋದಿಸಿದನು.

" ಅಲ್ಲದೆ ಇಂದು ಮುಳುಗಿಸಿದರೆ ನಾಳೆಯೇ ಗೊತ್ತಾಗುವಂತಿಲ್ಲ" ಭೀಮನು ಪ್ರಸಂಗಾವಧಾನವನ್ನು ಹೇಳಿದನು.

ಚರ್ಚೆಯಾಗಿ ಕೆರೆಯಲ್ಲಿ ಮುಳುಗಿಸುವದೇ ಒಪ್ಪಿಗೆಯಾಯಿತು.

"ತಮ್ಯಾ, ನೀನು ನಾಯಿಯನ್ನು ತಂದರೆ ಮುಂದಿನ ಕೆಲಸ ನನ್ನದು." ಹಿಟಲರನು ಕೆಲಸವನ್ನು ಒಪ್ಪಿಸಿಕೊಂಡನು.

"ನಾಯಿಯನ್ನು ತಮ್ಯಾ ತರಲು ಯೋಗ್ಯನು. ಅವನಿಗೆ ಸಾಕಷ್ಟು ಪರಿಚಯವಿದೆ."

"ಆದರೆ ಅದನ್ನು ಹಿಡಿದುಕೊಂಡು ಬರುವದು ಹೇಗೆ ?" ತಮ್ಯಾ ಪ್ರಶ್ನಿಸಿದನು.

"ದೂರ ಕರೆದುಕೊಂಡು ಬಾ. ಅನ್ನದ ಸಂಗಡ ನಾಯಿಯ ಪುಡಿಯನ್ನು ತಿನ್ನಿಸು. ಮುಂದಿನ ಕೆಲಸ ಸುಲಭವಾಗುವದು."

ರಾಜಣ್ಣನು ಹೇಳಿದನು.

"ಅದು ತಿನ್ನಬಹುದೇ?" ಶಂಕಿಸಿದನು.

"ಇದೋ ನೀವು ಈ ಐದು ರೂಪಾಯಿ ತಿನ್ನಿರಿ. ಅಂದರೆ ಅದು ತಿಂದೇಬಿಡುವದು" ಎಂದು ರಾಜಣ್ಣನು ಕಿಸೆಯಿಂದ ಐದು ರೂಪಾಯಿ ನೋಟು ತೆಗೆದು ಅವರ ಮುಂದಿಟ್ಟನು.

ಎಲ್ಲರ ಕಣ್ಣು ಆ ಔಡಲ ಎಣ್ಣೆಯ ಹಣತೆಯ ಬೆಳಕಿನಲ್ಲಿ ಮಿಂಚಿದವು.

ಹಿಟಲರನು ನೋಟು ಕೈಯಲ್ಲಿ ತೆಗೆದುಕೊಂಡು "ಕೆಲಸವು ನಮಗೆ ಒಪ್ಪಿತು. ಏನೆಂದೆ ತಮ್ಯಾ?" ಎಂದು ಪ್ರಶ್ನಿಸಿದನು.

ತಮ್ಯಾನು ತಲೆಕೊಡಹಿದನು.

ರಾಜಣ್ಣನ ಮುಖದ ಮೇಲೆ ಹುಸಿನಗೆ ಮೂಡಿತು.

"ತಮ್ಯಾ, ನೀನು ಹೀಗೆ ಸಪ್ಪೆಯಾಗಿ ಮಾತಾಡಬೇಡ. ನಿನ್ನ ಕೈಯಿಂದ ಆಗದಿದ್ದರೆ ನಾನೇ ಮಾಡುವೆ. ಆ ನಾಯಿಯನ್ನು ನಾನೂ ಒಲ್ಲೆ" ಹಿಟಲರ ನುಡಿದನು.

"ನಿನ್ನಿಂದಲೇ ಸಾಧ್ಯ!" ತಮ್ಯಾ ನುಡಿದನು.

"ರಾಜಣ್ಣಾ ನಾಯಿಯನ್ನು ತರುವೆ. ಒಪ್ಪಿತು."

"ಹಿಟಲರ ನೀನೇ ನನ್ನ ನಿಜವಾದ ಗೆಳೆಯ!" ಎಂದು ರಾಜಣ್ಣ ಹಿಟಲರನ ಬೆನ್ನು ಚಪ್ಪರಿಸಿದನು.

೩೩

ಕುದರೀ ಭೀಮನಾಗಲಿ, ಉಂಗುರ ಸಿಂಗನಾಗಲಿ, ತುಬಾಕಿ ತಮ್ಮ್ಯಾನಾಗಲಿ, ಹಳೇಮನಿ ಹಿಟಲರನಾಗಲಿ ರಾಜಣ್ಣನ ಮಾತನ್ನು ಮೀರುವಂತಿರಲಿಲ್ಲ. ಅವರೆಲ್ಲ ಬಾಲ್ಯದ ಗೆಳೆಯರು. ಕೂಡಿ ಆಡಿದವರು. ಕೂಡಿ ಕಲಿತವರು. ಕೂಡಿ ಇನ್ಸ್ಪೆಕ್ಟರ ತೋಟವನ್ನು ನುಗ್ಗಿ ಹಣ್ಣು ತಿಂದವರು. ಕೂಡಿ ಸಾಲೆಯನ್ನು ತಪ್ಪಿಸಿ ಹತ್ತಿಯ ಹೊಲದ ಹತ್ತಿಯನ್ನು ಬಿಡಿಸಿ ತಂದು, ಅಂಗಡಿಗೆ ಮಾರಿ ಕರಿದಂಟು ತಿಂದವರು. ಮೊದಲಿನ ನಾಲ್ವರು ಬೇಗನೆ ಸಾಲೆಯನ್ನು ಬಿಟ್ಟರು. ಮನೆತನದ ಉದ್ಯೋಗಕ್ಕೆ ಹತ್ತಿಕೊಂಡರು. ರಾಜಣ್ಣನು ತಂದೆಯ ಆಗ್ರಹಕ್ಕೆ ಒಳಗಾಗಿ ವರ್ಷಂಪ್ರತಿ ಸಾಲೆಯ ಕಟ್ಟೆಯನ್ನು ಏರುತ್ತಿದ್ದನು. ಗುರುಗಳ ಇಚ್ಛೆಯಂತೆ ಮುಂದಿನ ವರ್ಗಕ್ಕೆ ಸಾಗುತ್ತಿದ್ದನು. ಏಳನೆಯ ವರ್ಗಕ್ಕೆ ಬಂದಿದ್ದರೂ ಶ-ಷಗಳಾಗಲಿ, ನ-ಣಗಳಾಗಲಿ ಗುರುತಿಸುವದು ಕಷ್ಟದ ಸಂಗತಿಯಾಗಿದ್ದಿತು. ತಂದೆಯವರು ಮಗನು ಜಾಣನಾಗಲೆಂದು ಓದಿಸುತ್ತಿದ್ದರು. ಲೆಕ್ಕಗಳನ್ನು ಸ್ವತಃ ತಿಳಿಸುತ್ತಿದ್ದರು. ಆದರೆ ಸರಸ್ವತಿಯು ಅವನಿಗೆ ಒಲಿಯಲಿಲ್ಲ. ಕನ್ನಡ ಅಕ್ಷರಗಳನ್ನು ಕಲಿಯುವ ಮುಂದೆ ಉಂಡೆಯಂತೆ ರ, ಬಳೆಚೂರಿನಂತೆ ಲ, ಬಣಬೆಯಂತೆ ಗ ಎಂದು ಗುರುಗಳು ಹೇಳಿದ ಮಾತುಗಳನ್ನು ನೆನಪಿನಲ್ಲಿಟ್ಟಿದ್ದನು. ಉಂಡೆ, ಬಳೆಚೂರು, ಬಣಬೆಗಳು ಜ್ಞಾಪಕದಲ್ಲಿದ್ದವೇ ವಿನಹ ಅಕ್ಷರಗಳು ಉಳಿದಿರ

ಲಿಲ್ಲ. ಮುಲ್ಕಿಯಲ್ಲಿ ೩-೪ ವರುಷ ಗೋತ ಹಾಕಿದ ಮೇಲೆ ತಂದೆ ಯವರು ಮಗನ ಶಿಕ್ಷಣದ ಬಗ್ಗೆ ತಾತ್ಸಾರ ಮಾಡಿದರು. ರಾಜಣ್ಣನೂ ಸಾಲೆಗೆ ಶರಣು ಹೊಡೆದನು.

ಮನೆಯಲ್ಲಿ ಊಟ-ಉಡಿಗೆಗೆ ಕೊರತೆಯಿರಲಿಲ್ಲ. ಉದ್ಯೋಗ ವಂತೂ ಮೊದಲೇ ಇರಲಿಲ್ಲ. ತುಂಡು ಗೆಳೆಯರ ಸ್ನೇಹ ಹೆಚ್ಚಾಯಿತು. ಈ ಐವರ ಕೂಟ ಊರಿಗೆ ಭಾರಿಯಾಯಿತು. ಆ ನಾಲ್ವರು ಅಸಂಸ್ಕೃತ ಅಕ್ಷರ ಶತ್ರುಗಳು ರಾಜಣ್ಣನು ತಮಗಿಂತ ೪-೫ ವರುಷ ಹೆಚ್ಚು ಸಾಲೆಯಲ್ಲಿ ಓದಿರುವನೆಂದು ಮುಖಂಡನನ್ನಾಗಿ ಮಾಡಿಕೊಂಡಿದ್ದರು. ರಾಜಣ್ಣನಲ್ಲಿ ಮುಖಂಡತ್ವಕ್ಕೆ ಬೇಕಾಗುವ ದುಡ್ಡು, ಹಂಚಿಕೆ, ಮನೆ ತನ, ಅಪ್ಪಾರಾಯಗೌಡರ ಮಗ ಇಷ್ಟು ಪ್ರಶಸ್ತಿ ಪತ್ರಗಳು ಸಾಕಾಗಿ ದ್ದವು. ಅಲ್ಲದೆ ಮುಖಂಡನಲ್ಲಿ ಸ್ವಭಾವತಃ ಇರುವ ದುರಾಗ್ರಹ, ದೈಹಿಕ-ಮಾನಸಿಕ ದುರ್ಬಲತೆ, ಉದ್ದೇಶ ಪಲ್ಲಟದ ಪ್ರಭುತ್ವ, ವಾಚಾಳಿತನ, ಗಂಡುದನಿ, ಅಂಜಿಕೆ, ಪಲಾಯನ ಪ್ರವೃತ್ತಿ ಮುಂತಾದ ದೌರ್ಬಲ್ಯ ಜನ್ಯಗುಣಗಳೂ ತುಂಬಿದ್ದವು. ಈ ದುರ್ಬಲತೆ ಕಾರ್ಯಸಿದ್ಧಿಗಾಗಿ ಇನ್ನೊಬ್ಬರನ್ನು ಪ್ರೇರೇಪಿಸುತ್ತಿದ್ದಿತು. ಛೀ ಹಾಕುತ್ತಿದ್ದಿತು. ಆಮಿಷ ಗಳನ್ನು ತೋರಿಸುತ್ತಿದ್ದಿತು. ಮುಖಂಡತ್ವದ ಪೀಠವನ್ನು ಇನ್ನೂ ಗಟ್ಟಿಯಾಗಿ ಹಿಡಿದುಕೊಳ್ಳಲು ಯತ್ನಿಸುತ್ತಿದ್ದಿತು. ಹೀಗಾಗಿ ರಾಜಣ್ಣನು ನಾಲ್ವರ ಮುಖಂಡನು, ಮುಂದಾಳು. ನಾಯಿಯು ಸಾಯ ಬೇಕೆಂಬುದು ರಾಜಣ್ಣನ ಹಟ. ಉಳಿದವರು ಕೂಡಿ ಕೊಲ್ಲುವದು ಪ್ರತ್ಯಕ್ಷ ಕಾರ್ಯ.

ಹಿಟಲರನು ರಾಜಣ್ಣನ ಮಾತನ್ನು ಕೃತಿಯಲ್ಲಿ ತರಲು ಅವನ ಒಂದು ಮಾತು ಸಾಕಾಯಿತು. ಒಪ್ಪಿದನು. ಆದನ್ನು ಹಿಡಿದು ತರಲು ಹಂಚಿಕೆಯನ್ನು ಹಾಕಹತ್ತಿದನು. ಇತ್ತ ರಾಜಣ್ಣನು ಉಳಿದವರನ್ನು ಕೂಡಿಕೊಂಡು ಕೆರೆಯ ಕಡೆಗೆ ಸಾಗಿದನು.

ಹಿಟಲರನಿಗೆ ಆ ನಾಯಿಯನ್ನು ಹಿಡಿಯುವದು ಕಷ್ಟದ ಕೆಲಸ ವೆನಿಸಹತ್ತಿತು. ಈ ಮೊದಲು ರಾಜಣ್ಣನ ಹೇಳಿಕೆಯಂತೆ ನೂರಾರು

ಕೆಲಸಗಳನ್ನು ಮಾಡಿದ್ದನು. ಒಂದು ಇನ್ನೊಂದಕ್ಕಿಂತಲೂ ಭಯಂಕರವಾಗಿದ್ದಿತು. ಹೋದವರುಷ ಮೇಲಿನ ಮನೆಯ ಅಜ್ಜಪ್ಪನ ಜೋಳದ ಗೂಡಿಗೆ ಬೆಂಕಿ ಹಚ್ಚಿದುದು, ಬಾಳಿಯ ತೋಟದ ಸಕ್ಕರೆವ್ವನನ್ನು ಬೆದರಿಸಿ ರಾಜಣ್ಣನಿಗೆ ಅನುಕೂಲಮಾಡಿಕೊಟ್ಟುದು, ಸಾವುಕಾರ ರಂಗಯ್ಯನ ಎಮ್ಮೆಯನ್ನು ಕದ್ದು ಮಾರಿದುದು ಇತ್ಯಾದಿಗಳು ಕಣ್ಣ ಮುಂದೆ ಸುಳಿದಾಡಿದವು. ಅಂದಿನ ಧೈರ್ಯವೇ ಇಂದು ಕಾರ್ಯ ಪ್ರವೃತ್ತನನ್ನಾಗಿ ಮಾಡಿತು. ಆದರೂ ಹೆದರಿಕೆ. ನಾಯಿಯನ್ನು ಹೇಗೆ ಹಿಡಿಯುವದು ? ಅದು ಹಿಂಸ್ರ ಪಶು ; ಮೇಲಾಗಿ ಒದರಬಡಕ. ಜನರಿಗೆ ತಿಳಿಯದೆ ಅದನ್ನು ಹಿಡಿದುಕೊಂಡು ಹೋಗಬೇಕು ! ತಲೆಯಲ್ಲಿ ನೂರು ನೂರು ವಿಚಾರಗಳು ಹರಿದಾಡಿದವು. ಆದರೆ ಅವೆಲ್ಲ ವಿಫಲತೆಯ ಫಲಿತಾಂಶವನ್ನೇ ಬರೆದವು. ಕೊನೆಗೆ ಏನೋ ನಿರ್ಧರಿಸಿ ಎದ್ದನು. ಬಟ್ಟೆ ಬರೆಗಳನ್ನು ತೊಟ್ಟುಕೊಂಡು ಒಡ್ಡರ ರುಕ್ಕನ ಮನೆಗೆ ಬಂದನು. ದೂರದಿಂದಲೇ ರುಕ್ಕನನ್ನು ಕೂಗಿ ಎಬ್ಬಿಸಿದನು. ರುಕ್ಕನು ಹೊರಗೆ ಬಂದು—

"ಯಾಕೆ ಒಟಲರ ಇಲ್ಲಿಗೆ ?" ಎಂದು ಕೇಳಿದನು.

"ಒಂದು ಕೆಲಸ ಈಚೆಗೆ ಬಾ." ಎಂದು ಕರೆದನು.

ರುಕ್ಕ ಹೊರಗೆ ಬಂದನು. "ಏನು ?" ಎಂದು ಕೇಳಿದನು. ಹಿಟ್ಲರನು ತಾನು ಮಾಡಬಯಸಿದ ಕೆಲಸವನ್ನು ಹೇಳಿದನು.

"ಇದಕ್ಕೆ ಬಂದಿದ್ದಯಾ ?"

"ಹ ! ನಾಯಿಯು ಬಹಳ ಚಲಾಕ ಇರುವದು."

"ಇರಲಿ."

"ಒಂದಿಷ್ಟು ಕೆಟ್ಟೊ ಇರುವದು."

"ಇರಲಿ ಬಿಡು. ನನ್ನಲ್ಲಿ ನಾಯಿಯ ಮಕಾಡು ಇರುವದು. ಒಂದು ಗಟ್ಟಿಯಾದ ಮಕಾಡು ಕೊಡುವೆ. ಬಿಗಿದುಕೊಂಡು ಹೋಗು."

"ಆಗಲಿ, ಕೊಡು." ಎಂದನು.

ರುಕ್ಕನು ಒಂದು ಮಕಾಡು ತಂದು ಕೊಟ್ಟನು ಹಿಟಲರನು ಅವನ ಕೈಯಲ್ಲಿ ಒಂದು ರೂಪಾಯಿ ಇಟ್ಟು ಸಾಗಿದನು. ನಾಲ್ಕು ಹೆಜ್ಜೆ ಹೋಗುವಷ್ಟರಲ್ಲಿ ಏನೋ ಹೊಳೆದು ರುಕ್ಕನನ್ನು ಪುನಃ ಕರೆದನು. ರುಕ್ಕನು ಗುಡಿಸಲನ್ನು ಸೇರಿರಲಿಲ್ಲ. ತಿರುಗಿ ಬಂದನು.

"ನೋಡು ರುಕ್ಕು, ಮರೆತೆ. ಈ ಕೆಲಸದಲ್ಲಿ ನೀನೂ ಒಂದಿಷ್ಟು ಸಹಾಯಮಾಡು."

"ಮಾಡಿರುವೆನಲ್ಲ."

"ಇದಾಗದು. ಅದು ನನಗೆ ಮಕಾಡ ಹಾಕಗೊಡಲಿಕ್ಕಿಲ್ಲ. ನೀನೂ ನನ್ನ ಸಂಗಡ ಬಾ. ಇದನ್ನಷ್ಟು ಬಿಗಿದುಕೊಂಡು ಮುಂದೆ ನೀನು ಮನೆಗೆ ಬಾ. ನಾನು ಹೊತ್ತುಕೊಂಡು ಹೋಗುವೆನು. ಇಷ್ಟು ಸಹಾಯಮಾಡು" ಎಂದು ಅಂಗಲಾಚಿದನು.

"ನನ್ನನ್ನು ನೋಡಿ ಬೊಗಳಿದರೆ!"

"ನೀನು ಆ ಡಬ್ಬಗಳ್ಳಿಯ ಹಿಂದಿನ ದುರಗವ್ವನ ಗುಡಿಯಲ್ಲಿ ಕುಳಿತಿರು. ನಾನು ನಾಯಿಯನ್ನು ಕರೆದು ತರುವೆ. ಅಲ್ಲಿ ಕೂಡಿಸಿ ಕೊಳ್ಳುವೆ. ಆಡಿಸುತ್ತ ಮಕಾಡು ಹಾಕುವೆ. ನೀನು ಬಂದುಬಿಡು. ಒಂದು ಸಿಳ್ಳುಹಾಕುವೆ. ಏನೆಂದೆ?"

"ನಿನ್ನ ಸಂಗಡ ಬರುವದೇ?"

"ಓ! ಒಂದು ಕೋಳಿಯನ್ನು ಕೊಂದು ಮಾಂಸದ ತುಂಡು ಮಾಡಿಸಿ ಚೀಲದಲ್ಲಿ ತುಂಬಿಕೊಂಡು ಬಂದಿರುವೆ. ಒಂದೊಂದು ತುಣುಕು ಅದನ್ನು ನಡಿಸಹಚ್ಚುವದು; ಮತ್ತು ಕುಣಿಸ ಹತ್ತುವದು."

"ಹ, ಸರಿಯಾದ ಹಂಚಿಕೆ."

"ಮತ್ತು ಅದು ನಮ್ಮ ಕಟ್ಟೆಯ ಮೇಲೆಯೇ ಮಲಗುವದು. ಓಣಿಯ ಕಾವಲು ಮಾಡುವದು. ನಾನೂ ಅಲ್ಲಿಯೇ ಮಲಗುವೆ. ತರುವದು ತಡವಾಗದು. ನಡೆ." ಎಂದನು.

ರುಕ್ಕನು ಗುಡಿಯ ಕಡೆಗೆ ನಡೆದನು. ಹಿಟಲರನು ಮನೆಯ ಕಡೆಗೆ ಬಂದನು.

ಆದರೆ ನಾಯಿಯು ಅಂದು ಬಹಳ ಹೊತ್ತಿನವರೆಗೆ ಹೊರಗೆ ಬರಲಿಲ್ಲ. ತಾಸೆರಡು ತಾಸು ಕಳೆದ ಮೇಲೆ ಹೊರಗೆ ಬಂದಿತು. ಹಿಟಲರನು ಅದರ ದಾರಿಯನ್ನೇ ನೋಡುತ್ತಿದ್ದನು. ಕಟ್ಟೆಯ ಮೇಲೆ ಮಲಗಿದಂತೆ ಮಾಡಿದನು. ನಾಯಿಯು ಅತ್ತಿತ್ತ ತಿರುಗಾಡಿ ಮೇಲೆ ಬಂದಿತು. ಹಿಟಲರನ ಕಾಲದೆಸೆಯಲ್ಲಿ ಅಡ್ಡಾಯಿತು. ಒಂದರ್ಧ ತಾಸು ಮತ್ತೆ ಕಳೆಯಿತು. ಜನರ ಸುಳಿದಾಟ ಕಡಿಮೆಯಾಯಿತು. ಹಿಟಲರನು ಹಾಸಿಗೆಯ ಮೇಲೆ ಎದ್ದು ಕುಳಿತನು. ಕಂಬಳಿಯನ್ನು ಹೆಗಲಿಗೆ ಹಾಕಿದನು. ಇವನ ಸಪ್ಪಳಕ್ಕೆ ನಾಯಿಯು ಎದ್ದು ನಿಂತಿತು. ಚುಚು ಎಂದು ಕರೆದನು. ಆ ನಂಬಿಗೆಯ ಪ್ರಾಣಿ ಬಾಲ ಅಲ್ಲಾಡಿಸುತ್ತ ಬಳಿಗೆ ಬಂದಿತು. ಮೈ ಮೇಲೆ ಕೈಯಾಡಿಸಿದನು. ಬಾಲವನ್ನು ಸರಳಮಾಡಿ ಬಿಟ್ಟನು. ನಾಯಿಯು ಅವನ ಮೈ ಮೇಲೆ ಕಾಲಿಟ್ಟು ನಿಂತಿತು. ಮತ್ತೆ ಕೈಯಾಡಿಸಿದನು. ನಾಯಿಯೂ ತನ್ನ ಪ್ರೇಮವನ್ನು ವ್ಯಕ್ತಪಡಿಸಿತು. ಒಂದು ಮಾಂಸದ ಚೂರನ್ನು ಚೆಲ್ಲಿದನು. ಅದು ಗಬಕ್ಕನೆ ಹಿಡಿದು ನುಂಗಿತು. ಇನ್ನೊಂದು ಒಗೆದನು. ಅದನ್ನು ಸಹ ಅದೇ ಅವಸರದಿಂದ ನುಂಗಿತು. ಮೂರನೆಯ ತುಂಡನ್ನು ಕೈಯಲ್ಲಿ ಹಿಡಿದು ತೋರಿಸಿದನು. ನಾಯಿಯು ಕಣ್ಣಿಟ್ಟು ನೋಡ ಹತ್ತಿತು. ಹಿಟಲರನು ಎದ್ದನು. ಮುಂದೆ ಸಾಗಿದನು. ಮಾಂಸ ಇನ್ನೂ ಕೈಯಲ್ಲಿದ್ದಿತು. ನಾಯಿಯು ಬೆನ್ನುಹತ್ತಿತು. ದಾರಿಯಲ್ಲಿ ಒಗೆದನು. ನಾಯಿಯು ಹಾರಿ ಹಿಡಿದು ಕಬಳಿಸಿ ಮತ್ತೆ ಬೆನ್ನು ಹತ್ತಿತು. ದಾರಿಗುಂಟ ಮತ್ತೆ ನಾಲ್ಕಾರು ತುಂಡುಗಳನ್ನು ತಿನ್ನಿಸುತ್ತ ಗುಡಿಯವರೆಗೆ ಬಂದನು. ಗುಡಿಯಲ್ಲಿ ರುಕ್ಕನು ಮಲಗಿದ್ದನು. ನಾಯಿಯನ್ನು ಹಿಡಿದುಕೊಂಡು ಎಬ್ಬಿಸಿದನು. ರುಕ್ಕನು ಏಳಲು ನಾಯಿಯು ಒಮ್ಮೆಲೆ ಅವನ ಮೇಲೆ ಹಾರಬಯಸಿತು. ಆದರೆ ಹಿಟಲರನು ಹಿಡಿದುಕೊಂಡು ಮತ್ತೊಂದು ಮಾಂಸದ ತುಂಡನ್ನು ಒಗೆದನು. ಮೈ ಮೇಲೆ ಕೈ ಎಳೆದನು. ಪ್ರೀತಿಯ ಮಾತುಗಳನ್ನು ಆಡಿದನು. ಸಮದಾಯಿಸಿದನು. ರುಕ್ಕನನ್ನೂ ಮಾತಾಡಿಸಿದನು

ಅವನೂ ಒಂದೆರಡು ಉತ್ತರಗಳನ್ನು ಕೊಟ್ಟನು. ರುಕ್ಕನು, ಅವನ ದನಿಯು ಪರಿಚಿತದ್ದಾಯಿತು. ನಾಯಿಯ ಮುಂದೆ ಮಾಂಸದ ತುಂಡು ಗಳು ಒಂದಾದಮೇಲೆ ಒಂದರಂತೆ ಕ್ರಮದಿಂದ ಬೀಳಹತ್ತಿದವು. ಹಿಟಲರನ ಪ್ರೀತಿಯು ಅಧಿಕವಾಗುತ್ತ ನಡೆಯಿತು. ಎತ್ತಿಕೊಂಡನು. ತೊಡೆಯಮೇಲೆ ಕುಳ್ಳಿರಿಸಿಕೊಂಡನು. ಹೆಗಲ ಮೇಲೆ ಹೊತ್ತು ನಾಲ್ಕಾರು ಹೆಜ್ಜೆ ನಡೆದನು. ಇಳಿಸಿಧನು. ನಾಲ್ಕೂ ಕಾಲು ಕೂಡಿಸಿ ಹಿಡಿದು ತೂಗಾಡಿದನು. ಬಾಯಿಯನ್ನು ಕೈಯಿಂದ ತಟ್ಟಿದನು. ಮುದ್ದು ಕೊಟ್ಟನು. ಒಂದು ದೊಡ್ಡ ಮಾಂಸದ ಕರಣಿಯನ್ನು ಕೈಮೇಲೆ ಇಟ್ಟುಕೊಂಡು ತಿನಿಸಿದನು. ಮತ್ತೆ ಪ್ರೀತಿಯು ಅಧಿಕವಾಯಿತು. ರುಕ್ಕನು ಮಕಾಡವನ್ನು ಸಿದ್ಧಮಾಡಿ ಕೊಟ್ಟನು. ಹಿಟಲರನು ಪ್ರೀತಿ, ಮಮತೆ, ನಂಬುಗೆಯು ಅತ್ಯಧಿಕದಲ್ಲಿ ಮಕಾಡವನ್ನು ನಾಯಿಯ ಮುಖಕ್ಕೆ ಏರಿಸಿದನು. ಹಿಂದೆ ಕೊರಳಿಗೆ ಸುತ್ತಿ ಗಂಟು ಹಾಕಿದನು. ರುಕ್ಕನು ಮುಂದೆ ಬಂದು ತಾನು ಸಹ ಮತ್ತೆರಡು ಗಂಟು ಹಾಕಿದನು. ಮೊದಲಿನ ಗಂಟುಗಳನ್ನು ಪರೀಕ್ಷಿಸಿದನು. ಸರಿಯಾಗಿದ್ದವು. ನಾಯಿಯ ಕುಂಇ ಸಪ್ಪಳ ಸಹ ಹೊರಬೀಳದಂತೆ ಬಿಗಿಯಾಯಿತು. ನಾಲ್ಕೂ ಕಾಲುಗಳನ್ನು ಬಿಗಿದರು. ಈಗ ಪ್ರಾಣಿಯು ಒದ್ದಾಡಹತ್ತಿತು. ಮುಖವನ್ನು ನೆಲಕ್ಕೆ ಅಪ್ಪಳಿಸ ಹತ್ತಿತು. ಬಾಲವನ್ನು ವೇಗದಿಂದ ಅಲುಗಾಡಿಸಹತ್ತಿತು. ಕುಂಇ ಕುಂಇ ಗಂಟಲಲ್ಲಿ ನುಡಿಯಹತ್ತಿತು. ಕುತ್ತಿಗೆಗೆ ಮತ್ತೆರಡು ಗಂಟು ಬಿದ್ದವು. ಬಾಯಿಯ ಮೇಲೂ ಹಗ್ಗದ ಸುತ್ತುಗಳು ಬಿದ್ದವು. ದನಿಯು ಮುಳುಗಿತು ಒದ್ದಾಟ ಹೆಚ್ಚಾಯಿತು.

"ಕೆಲಸವಾಯಿತೇ ಹಿಟಲರ?" ರುಕ್ಕು ಕೇಳಿದನು.

"ನೀನಿದ್ದೆಯೆಂದು ಆಯಿತು. ನನಗೆ ಹೆದರಿಕೆ. ಮಕಾಡ ಸರಿ ಯಾಗಿ ಕೂಡಲಿಲ್ಲವೆಂದರೆ ಕೆಲಸವೆಲ್ಲ ಕೆಡುವ ಆಟ. ನಿನ್ನ ಉಪಕಾರ ರುಕ್ಕು ಎಂದು ಮೂಲೆಗಂಬಳಿಯನ್ನು ಹಿಡಿದನು. ರುಕ್ಕು ಅದರಲ್ಲಿ ನಾಯಿಯನ್ನು ಚಲ್ಲಿದನು. ಒದ್ದಾಡಬಾರದೆಂದು ನಾಲ್ಕು ಕಡೆಯಿಂದ

ಹಗ್ಗವನ್ನು ಬಿಗಿದರು. ದನಿಯೂ ಇಲ್ಲ, ಒದ್ದಾಟವೂ ಇಲ್ಲ. ಹಾಳು ಅರಿವೆಯ ಗಂಟಿನಂತೆ ಶಾಂತ !

"ಇನ್ನು ನಾನು ಹೋಗುವೆ !" ರುಕ್ಕ ನುಡಿದನು.

"ಒಳ್ಳೇದು. ಹಿಡಿ." ಎಂದು ಒಂದು ರೂಪಾಯಿ ಕೊಡ ಹೋದನು.

"ಏತಕ್ಕೆ ಬಿಡು ಹಿಟಲರ !"

"ಹಿಡಿ. ಹಿಡಿ. ಇದೆಲ್ಲ ರಾಜಣ್ಣನ ರೊಕ್ಕ." ಎಂದು ಕೊಟ್ಟನು. ರುಕ್ಕ ಮನೆಯ ಕಡೆಗೆ ನಡೆದನು. ಹಿಟಲರ ಕೆರೆಯ ಕಡೆಗೆ ನಡೆದನು.

೬

ಮರುದಿನ ಯಾರಿಗೂ ಈ ಸಂಗತಿಯು ತಿಳಿಯಲಿಲ್ಲ. ನಾಯಿ ಇಲ್ಲೆಂದು ಊರಿಗೇ ಊರೇ ಅರಿಯಿತು. ರಾಜಣ್ಣನ ಕಾರಸ್ಥಾನ, ಅವರ ವಿಧಾಯಕ ಕಾರ್ಯ ಅಷ್ಟು ಗೌಪ್ಯವಾದುದು. ಅದು ಹೀಗಾದುದು—

ಹಿಟಲರನು ಅದನ್ನು ಹೊತ್ತುಕೊಂಡು ಕೆರೆಯ ದಂಡೆಗೆ ಹೋಗುವಷ್ಟರಲ್ಲಿ ಮಧ್ಯರಾತ್ರಿಯು ಸರಿದುಹೋಗಿದ್ದಿತು. ಭೂಮಿಯ ಮೇಲೆ ಕತ್ತಲೆಯ ಪರದೆ ಹಬ್ಬಿ ನಿಂತಿದ್ದಿತು. ಮುಗಿಲ ತುಂಬ ಚಲ್ಲವರಿದು ನಕ್ಷತ್ರಗಳು ಮಿನುಗುತ್ತಿದ್ದವು. ದೇವತೆಗಳು ಕಣ್ಣಿಟ್ಟು ನೋಡಿದರೂ ಕಾಣದಂತೆ ಹಿಟಲರನು ಮೆಲ್ಲಗೆ ಹೆಜ್ಜೆಯನ್ನು ಇಡುತ್ತ ಸಾಗಿದನು. ಒಂದು ಆಲದ ಗಿಡದ ಕೆಳಗೆ ರಾಜಣ್ಣನು, ಆ ಮೂವರು ಗೆಳೆಯರು ಕುಳಿತುಕೊಂಡು ನೂರು ಬೀಡಿಗಳನ್ನು ಸುಟ್ಟುಹಾಕಿದ್ದರು. ಕವಳಿಕೆಯಷ್ಟು ಎಲೆಗಳನ್ನು, ಸೇರು ಅಡಿಕೆಯನ್ನು, ಅರ್ಧ ಸೇರು ತಂಬಾಕು ತಿಂದು ಉಗುಳಿದ್ದರು. ಹಿಟಲರನು ಇನ್ನೂ ಬರಲಿಲ್ಲ ಏಕೆಂದು ಅವರ ಚಡಪಡಿಕೆ. ಅವನಿಂದ ಈ ಕೆಲಸ ಆಗದೆಂದು ಹಿಂಜರಿದನೋ! ಬಡ್ಡೀಮಗನು ಒಂದು ನಾಯಿಯನ್ನು ಹಿಡಿಯದವನಾದನೇ! ಕೊಟ್ಟದ್ದನ್ನು ಗಳಂ ಎಂದು ನುಂಗಬಲ್ಲ. ಮಾಡೆಂದು ಹೇಳಿದರೆ ಇಷ್ಟು ನೆನೆಗುದಿ. ಬರಲಿ. ನೋಡುವ, ಎಂದು ರಾಜಣ್ಣನು

ಸಿಡಿಮಿಡಿಗೊಂಡಿದ್ದನು.

"ರಾಜಣ್ಣಾ, ನೀವು ನಾಯಿಯ ಪುಡಿಯನ್ನು ಕೊಟ್ಟಿದ್ದರೆ ಕೆಲಸವು ಸುಲಭವಾಗಬಹುದಿದ್ದಿತು." ಭೀಮ ದನಿಯೆಳೆದನು.

"ನಿಂತ ಕಾಲ ಮೇಲೆ ಹೇಗೆ ಸಿಗಬೇಕು ಭೀಮಾ!" ರಾಜಣ್ಣಾ ನುಡಿದನು.

"ಆ ಪುಡಿಯು ಹುಣಸೆಯ ಗಿಡದ ನಿಂಗಿಗಿರಲಿ. ಹಿಟಲರನು ಈಗ ಬಂದಾನು. ಒಂದಿಷ್ಟು ತಡೆಯಿರಿ" ನಿಂಗನೆಂದನು.

ಕೊನೆಗೆ ಹಿಟಲರನು ಬಂದನು. ಕಂಬಳಿಯ ಗಂಟನ್ನು ಕೆಳಗೆ ಒಗೆದನು. ನಾಯಿಯು ಗಂಟಿನೊಳಗೇ ಒದ್ದಾಡಿತು. ಉಸ್ಸಪ್ಪ ಎಂದು ಹತ್ತರ ಕುಳಿತು ಗಂಟುಬಿಚ್ಚಿ ನಾಯಿಯನ್ನು ಹಿರಿದೆಳೆದನು. ಅದು ಇನ್ನೂ ಒದ್ದಾಡುತ್ತಿದ್ದಿತು. ರಾಜಣ್ಣನು ತುಂಬಿಬಂದ ಸಿಟ್ಟಿನಿಂದ ತನ್ನ ಚಪ್ಪಲಿಯ ಕಾಲಿನಿಂದ ಒಂದೆರಡು ಒದೆತಗಳನ್ನು ಹೊಟ್ಟೆಗೆ ಗುರಿಯಿಟ್ಟು ಕೊಟ್ಟನು. ನಾಯಿಯು ಪುಟಪುಟಿದು ಬಿದ್ದಿತು. ಅದರ ಒದ್ದಾಟ, ಉರುಳಾಟಗಳನ್ನು ನೋಡಿ ರಾಜಣ್ಣನ ಸಿಟ್ಟು ಒಂದಿಷ್ಟು ಕಡಮೆಯಾಯಿತು.

"ಇನ್ನು ತಡಮಾಡಬೇಡಿರಿ. ಜನರು ಬರಬಹುದು. ಮುಂದಿನ ಕೆಲಸ ನಡೆಯಲಿ." ರಾಜಣ್ಣಾ ಕೊನೆಗೆ ಆಜ್ಞಾಪಿಸಿದನು.

ಭೀಮನು ಚೀಲ ತಂದನು. ನಿಂಗನು ಒಂದು ಕಲ್ಲು ತಂದನು. ತಮ್ಮ್ಯಾ ನಾಯಿಯನ್ನು ಚೀಲದಲ್ಲಿ ತುರುಕಿದನು. ಹಿಟಲರನು ಚೀಲದ ಬಾಯಿಯನ್ನು ಕಟ್ಟಿ ಬೀಡಿಯನ್ನು ಹೊತ್ತಿಸಿದನು.

"ಕೆರೆಯ ನಡುವೆ ಬೀಳುವಂತೆ ಮಾಡಿರಿ. ದಂಡೆಯಲ್ಲಿ ಬೇಡ." ರಾಜಣ್ಣಾ ನುಡಿದನು.

"ಅಹುದು. ಇಬ್ಬರೂ ಕೂಡಿ ಜೀಕ ಆಡಿಸಿ ತೂಂಬಿಡುವ." ಭೀಮನು ವಿಚಾರ ಹೇಳಿದನು.

ಮಾತು ಎಲ್ಲರಿಗೂ ಸರಿಯೆನಿಸಿತು. ನಿಂಗ, ತಮ್ಮ್ಯಾ ಗಟ್ಟಿಗರು ಇದ್ದರು. ಮುಂದಾದರು. ಚೀಲದ ಕೆಳಗಿನ ಮತ್ತು ಮೇಲಿನ ತುದಿ

ಗಳನ್ನು ಹಿಡಿದು ಜೋಕಾಲಿಯನ್ನು ಆಡಿಸುತ್ತ ಒಂದು, ಎರಡು, ಮೂರು ಎಂದು ತೂರಿದರು. ದಂಡೆಯಿಂದ ೭-೮ ಗಜ ಅಂತರದ ಮೇಲೆ ಬಿದ್ದಿತು. ಧುಡುಂ ಸಪ್ಪಳದಿಂದ ಮುಳುಗಿ ಬುಳುಬುಳು ಗುಳ್ಳೆಗಳು ಏಳಹತ್ತಿದವು. ೫-೬ ನಿಮಿಷದ ಮೇಲೆ ಗುಳ್ಳೆಗಳು ಎದ್ದುದು ಕೇಳಬರಲಿಲ್ಲ. ಮುಗಿಯಿತೆಂದು ತಿಳಿದರು. ರಾಜಣ್ಣನು ಎದ್ದು ಕೈ ಬಾಯಿ ತೊಳೆದುಕೊಂಡನು. ಗುಳುಗುಳು ಮಾಡುತ್ತ ಬಾಯಿಯನ್ನು ಮುಕ್ಕಳಿಸಿದನು. ಹಸಿಯ ಕೈಯನ್ನು ಹಿಟಲರನ ಕಂಬಳಿಗೆ ಒರಸಿ ಒಣಗಿಸಿಕೊಂಡನು.

ರಾಜಣ್ಣನ ಮುಖದ ಮೇಲೆ ಗೆಲವಿನ ಸಂತಸವು ಚಿಮ್ಮುತ್ತಿದ್ದಿತು. ಅವರೆಲ್ಲರನ್ನು ಪ್ರಶಂಸಿಸುವಂತೆ, ನನ್ನ ಗೆಳೆಯರೆಂದರೆ ಸಾಮಾನ್ಯರಲ್ಲ. ಮಾಡೆಂದು ಹೇಳುವದೊಂದೇ ತಡ; ಕಾರ್ಯವನ್ನು ಪೂರ್ತಿಗೊಳಿಸುವರು. ಒಂದು ಸಾಮಾನ್ಯವಾದ ನನ್ನ ಇಚ್ಛೆಯನ್ನು ಕೊನೆಗಾಣಿಸಲು ನೀವು ಬಹಳ ಶ್ರಮವಹಿಸಿದಿರಿ. ಇದನ್ನು ನಾನು ಮರೆಯಲಾರೆನು. ಗೆಳೆಯರಿದ್ದರೆ ನಿಮ್ಮಂತಹವರಿರಬೇಕು. ನಿಮಗಾಗಿ ನಾನು ಪ್ರಾಣವನ್ನು ಸಹ ಕೊಡಬಲ್ಲೆ. ಹೇಳಿರಿ. ಇದರ ಪ್ರತಿಫಲವನ್ನು ಸಂತೋಷದಿಂದ ಮುಟ್ಟಿಸಬೇಕೆಂದಿರುವೆನು. ನಿಮ್ಮ ಇಚ್ಛೆ ಏನಿದೆ ಹೇಳಿರಿ." ಎಂದು ಪ್ರಶ್ನಿಸಿದನು.

ಎಲ್ಲರೂ ಒಬ್ಬರ ಮುಖವನ್ನು ಒಬ್ಬರು ನೋಡಹತ್ತಿದರು. ಯಾರೂ ಮಾತಾಡಲಿಲ್ಲ. ಎಲ್ಲರ ವತಿಯಿಂದ ಹಿಟಲರನು ಮಾತಾಡುವಂತೆ ಕೊನೆಗೆ — "ಹೊಟ್ಟೆ ತುಂಬ ಮಸಾಲೆಯ ಅನ್ನ, ಮೇಲೆ ಒಂದೊಂದು ಬಾಟಲಿ; ಇಷ್ಟಾದರೆ ನಮ್ಮ ದಣಿವು ಮುಗಿಯಿತು. ನೀವು ಒಪ್ಪುವಿರಾ ?" ಆ ಮೂವರ ಮುಖ ನೋಡಿದನು.

"ಒಪ್ಪಿತು !" ಮೂವರೂ ನುಡಿದರು.

"ಮಸಾಲೆಯ ಅನ್ನ !" ರಾಜಣ್ಣ ಪ್ರಶ್ನಿಸಿದನು.

ನಗ ಹತ್ತಿದರು.

"ಮಸಾಲೆಯ ಅನ್ನವೆಂದರೆ ಮಾಂಸದ ಊಟ. ಹಾರುವರು

ಹೋಳಿಗೆಯನ್ನು ತಿಂದಂತೆ ನಮಗೆ ಸಂತೋಷ!" ನಿಂಗ ನುಡಿದನು.

"ಆಗಲಿ. ಅದರ ವ್ಯವಸ್ಥೆಯನ್ನು ನಾಳೆಯೇ ಮಾಡಿರಿ. ಅದಕ್ಕೆ ಬೇಕಾದಷ್ಟು ಖರ್ಚು ಬರಲಿ. ನಾನು ಕೊಡುವೆನು. ಆದರೆ ಅವು ನಮ್ಮ ಹಾಳು ಊರಲ್ಲಿ ಸಿಗುವದೇ ?"

"ನಾನು ಸಾಯಕಲ್ಲು ಹತ್ತಿ ನಾಳೆಯೇ ತಾಲೂಕಿನಿಂದ ತರುವೆ. ನಬೀಸಾಬನಿಗೆ ಹೇಳಿದರೆ ಸಾಕು. ಅರ್ಧ ತಾಸಿನಲ್ಲಿ ತಾಜಾ ಕೊಡುವನು. ಆದರೆ ಬಾಟಲಿಯ ವ್ಯವಸ್ಥೆ?" ಭೀಮ ಪ್ರಶ್ನಿಸಿದನು.

"ಹೊಲೆಯರ ದುರಗನಿಗೆ ಹೇಳಿದರೆ ಸಿಗಬಹುದು."

"ಅವನಲ್ಲಿ ಸಿಗುವದಿಲ್ಲ. ಮೊನ್ನೆ ಶಿಕ್ಷೆಯಾದಂದಿನಿಂದ ಆ ದಂಧೆಯನ್ನು ಬಿಟ್ಟಿರುವನಂತೆ!" ತಮ್ಯಾ ಹೇಳಿದನು.

"ದಂಧೆಯನ್ನು ಬಿಟ್ಟಿರಬಹುದು. ಆದರೆ ಕಲೆಯನ್ನು ಮರೆಯಬಹುದೇ !" ರಾಜಣ್ಣನೆಂದನು.

"ಅದೂ ನನಗೆ ಒಪ್ಪಿತು." ಹಿಟಲರನು ನುಡಿದನು.

"ಆದರೆ ರಾಜಣ್ಣಾ, ನೀವೂ ಬರಬೇಕು ಪಾಲುಗಾರರಾಗಿ."

"ನಾನು !"

"ಹೌದು. ಒಂದರ ರುಚಿಯು ನಿಮಗೆ ಗೊತ್ತಿದೆ. ಇನ್ನೊಂದರ ರುಚಿಯನ್ನು ನೋಡುವದು ಉಳಿದಿದೆ." ಭೀಮನೆಂದನು.

"ಹೌದು ರಾಜಣ್ಣಾ. ಈಗಿನ ಹಾರವು ಎಷ್ಟು ಜನರು ತಿನ್ನುವರೆಂದು ಹೇಳಲಿ. ಲೆಕ್ಕ ಮಾಡಿದರೆ ಹತ್ತು ಅಂಕಿಗಳು ಸಾಲುವದಿಲ್ಲ" ಹಿಟಲರನು ಅನುಮೋದಿಸಿದನು.

"ಅದು ಮನುಷ್ಯರ ಖಾದ್ಯವಾದಮೇಲೆ ತಿನ್ನುತ್ತಿರಬಹುದು. ಯಾಕೆಂದರೆ ಹಾರುವರೂ ಮನುಷ್ಯರು."

"ಅದಕ್ಕೇ ನಿಮ್ಮದೂ ಆಗಲಿ."

"ನೀವು ತಿಂದರೆ ನಮ್ಮ-ನಿಮ್ಮ ಒಳಗಿನ ಭೇದ ಕಡಿಮೆಯಾಗುವದು. ಗೆಳೆತನಕ್ಕೆ ಕಳೆಯು ಬರುವದು. ನಿಮ್ಮ ಪ್ರಾಣಕ್ಕೆ ನಮ್ಮ

ಜೀವ ಅಡವು ಆಗುವದು. ಏನೆಂದಿರಿ ರಾಜಣ್ಣ ?"

"ನಿಮ್ಮ ಗೆಳೆತನವು ನನಗೆ ಬೇಕು. ನಿಮ್ಮ ಸಹವಾಸವು ನನಗೆ ಬೇಕು. ನಿಮ್ಮ ವಿಚಾರ, ನೆರವು, ಹಂಚಿಕೆ, ಮಾತು ನನಗೆ ಬೇಕಾದ ಮೇಲೆ ನಾನು ನಿಮ್ಮ ಮಾತು ಕೇಳಬೇಕು."

"ಹಾಗಾದರೆ ನಾಳೆ ಆಗಲಿ." ಹಿಟಲರನು ಅಂದನು.

"ಹೊ........"

ಎಲ್ಲರ ಮುಖವೂ ಕಲ್ಲುಪರಟಿಯಷ್ಟು ಅಗಲವಾದವು.

ದೂರದ ತೋಟದಲ್ಲಿಯ ಒಂದು ಕೋಳಿ ಕೂಗಿತು. ಕಾಗೆಗಳು ಕಾಕಾ ಎನ್ನಹತ್ತಿದವು. ಚಳಿಗಾಳಿ ಬೀಸಹತ್ತಿತು. ಸಂತೋಷಗೊಂಡ ಐವರು ಬೇರೆ ಬೇರೆ ದಿಕ್ಕನ್ನು ಹಿಡಿದು ಹೊರಟರು.

ಯಾರಿಗೂ ಈ ಸಂಗತಿಯು ತಿಳಿಯಲಿಲ್ಲ. ನಾಯಿಯು ಇಲ್ಲವೆಂದು ಊರಿಗೆ ಊರೇ ಅರಿಯಿತು. ರಾಜಣ್ಣನ ಕಾರಸ್ಥಾನ, ಅವರ ವಿಧಾಯಕ ಕಾರ್ಯ ಅಷ್ಟು ಗೌಪ್ಯವಾದುದು.

೭

ಅಪ್ಪಾರಾಯರು ತಾಲೂಕಿನಿಂದ ಕಟ್ಟಿಗೆಯ ಹೊರೆಯುವನನ್ನು ಇದಿರುಗೊಂಡು ಊರಿಗೆ ಬಂದರು. ಮನೆಯಲ್ಲಿ ಕಾಲಿಡುವದೊಂದೇ ತಡ ಮೋತ್ಯಾನ ಕತೆಯು ಬಣ್ಣಬಣ್ಣಗೊಂಡು ಕಿವಿಗೆ ಬಿದ್ದಿತು. ರಾಜಣ್ಣನು ಊರಲ್ಲಿಯ ಕೆಲವು ಔಷಧ ಬಲ್ಲವರಿಂದ ಔಷಧ ತೊಡೆಸಿದ್ದನು. ಬೇರು-ಎಲೆಗಳನ್ನು ಕುಟ್ಟಿ ಅರಿವೆಯಲ್ಲಿ ಕಟ್ಟಿಸಿದ್ದನು. ಮಂತ್ರವಾದಿಗಳಿಂದ ಮಂತ್ರಹಾಕಿಸಿ ಪಂಚಲೋಹದ ತಾಯತವನ್ನು ಕಟ್ಟಿಸಿದ್ದನು. ಆದರೆ ಗಾಯಗಳು ಮಾಯುವ ಲಕ್ಷಣದಲ್ಲಿರಲಿಲ್ಲ. ನಾಯಿಯು ದಿನಂಪ್ರತಿ ಅವುಗಳನ್ನು ನೆಕ್ಕಿ ನೆಕ್ಕಿ ಮೊದಲಿನ ಗಾಯದ ವಿಸ್ತಾರವನ್ನು ಆಳವನ್ನು ಮಾಡುತ್ತಿದ್ದಿತು. ಹೆಚ್ಚು ಆರಯಿಕೆ, ಉಪಚಾರ ಮಾಡ ಹೋದರೆ ಕಡಿಯುವ ಪ್ರಯತ್ನ ಮಾಡ ಹತ್ತಿತು. ಒಬ್ಬಿಬ್ಬರು ಅದರ ಹಲ್ಲಿನ ತೀಕ್ಷ್ಣ ರುಚಿಯನ್ನು ಉಂಡಿದ್ದರು. ಕೆಂಪಗಿನ ಗಾಯವು ಒಂದಿಷ್ಟು ಬಿಳಿಯ ಬಣ್ಣಕ್ಕೆ ತಿರುಗುತ್ತ ನಡೆಯಿತು. ಬಾಯಿಂದ ಆಗಾಗ ಜೊಲ್ಲಿನ ಹನಿಗಳು ಬೀಳ ಹತ್ತಿದವು. ಮೊದಲಿನ ವಿಕೃತಸ್ವರದ ಕೂಗು ಸಂಪೂರ್ಣ ನಿಂತಿತು. ಹೀಗಾಗಿ ಅದನ್ನು ಕಟ್ಟಿದ ಸರಪಳಿಯಿಂದ ಬಿಚ್ಚುತ್ತಿರಲಿಲ್ಲ. ಹೆಚ್ಚು ಪ್ರೀತಿಯಿಂದ ಮೈಮೇಲೆ ಕೈಯಾಡಿಸಿದರೆ ಕೂದಲುಗಳು ಉದುರಿ ಹಾರ ಹತ್ತಿದ್ದು ಕಾಣ ಹತ್ತಿತು. ಬರ್ಫದ ಮುದ್ದೆಯಂತೆ ಮಿರುಗಿಡುವ

ನಾಯಿ ಸಂಡಿಗೆಯನ್ನು ಹಾಕಿದ ದೋತರದಂತೆ ಅಸಹ್ಯವಾಗಿ ಕಾಣ ಹತ್ತಿತು. ಇದೆಲ್ಲವನ್ನು ಕಂಡು ಅಪ್ಪಾರಾಯರು ಮುಮ್ಮಲ ಮರುಗಿದರು. ಚಿಂತೆ ಪಟ್ಟರು. ನಾಯಿಯ ಮೇಲೆ ತಮ್ಮ ಮನೆತನದ ಭಾಗ್ಯ ಮಂದಿರವನ್ನು ನಿಲ್ಲಿಸಿದ ರಾಯರಿಗೆ ಏನೇನೋ ಎನಿಸಿತು. ಆ ಭಾಗ್ಯದ ಗಂಟು ಎಲ್ಲಿ ನೆಲಕ್ಕೆ ಉರುಳುವದೋ ಎಂದು ಶಂಕಿಸಿದರು. ಮನೆಯಲ್ಲಿಯೂ ವ್ಯವಸ್ಥೆಯಿರಲಿಲ್ಲ. ಇದ್ದುದು ಇದ್ದಲ್ಲಿಯೇ! ಬಿದ್ದುದು ಬಿದ್ದಲ್ಲಿಯೇ! ಹೋದುದು ತಿರುಗಿ ಬರುತ್ತಿರಲಿಲ್ಲ. ಬಂದುದು ಲಕ್ಷ್ಯದಲ್ಲಿರುತ್ತಿರಲಿಲ್ಲ. ತಾವು ಮನೆಯಲ್ಲಿದ್ದ ಸಮಯದಲ್ಲಿ, ಪರೀಕ್ಷೆಯ ಕಣ್ಣನ್ನು ತುಂಬ ಆಡಿಸಿದಾಗ ಊಟ-ಉಡಿಗೆಯಾಗಲಿ, ಕೊಡು ಕೊಂಬುವದಾಗಲಿ, ಧರ್ಮಕರ್ಮ-ಗಳಾಗಲಿ, ತೆಗೆದಿಡು-ಮುಚ್ಚಿಡುವದಾಗಲಿ ಸರಳವಾಗಿ ನಡೆಯುತ್ತಿದ್ದ. ಇಲ್ಲದ ಸಮಯದಲ್ಲಿ ಯಾರಿಗೆ ಯಾರೋ, ಯಾವುದು ಏನೋ! ತಿಳಿಯುತ್ತಿರಲಿಲ್ಲ. ಮತ್ತು ಮನೆಯಲ್ಲಿ ಒಂದು ಅಕಸ್ಮಾತ್ ಪ್ರಸಂಗವು ಎದ್ದು, ಕೋಪ-ವಿಕೋಪ-ಪ್ರಕೋಪಗಳವರೆಗೆ ಹೋಗಿ ಮನೆಯನ್ನು ಸ್ಮಶಾನ ಸದೃಶವನ್ನಾಗಿ ಮಾಡಿಬಿಡುತ್ತಿದ್ದಿತು. ಬಂದ ಮೇಲೆ ಅದರ ವಿಕೃತ ನಿರ್ಣಯವು ಒಂದಿಷ್ಟು ಕಿವಿಗೆ ಬೀಳುತ್ತಿದ್ದಿತು. ಆಗ ಉಭಯ ಪಕ್ಷದವರನ್ನು ಗದರಿಸಿ, ಛೀ ಹಾಕಿ ಶಾಂತ ಮಾಡುತ್ತಿದ್ದರು. ಆದರೆ ಇದು ಒಳಗೊಳಗೇ ಗೊಬ್ಬರದ ಬೆಂಕಿಯಂತೆ ಹೊತ್ತುತ್ತಿದ್ದಿತೆಂದು ತಿಳಿದು ಬರುತ್ತಿದ್ದಿಲ್ಲ. ಈಗ ಒಂದೇ ವಿಚಾರ, ನಾಯಿಯ ಅವಸ್ಥೆಯು ಹೀಗೇಕಾಯಿತು? ಅದು ಮುಪ್ಪಾಗಿ ಮನೆಯಲ್ಲಿ ಬಿದ್ದು ಸಾಯಲೆಂದು ಅವರ ವಿಚಾರವಿದ್ದಿತು. ಆದರೆ ಇಂದು ಮೈಯಲ್ಲಿ ಹುಳುಬಿದ್ದು, ಹುಚ್ಚು ಹಿಡಿದು ಸಾಯಬೇಕಾಯಿತೇ! ದೇವಾ ಎಂಥ ಸ್ಥಿತಿ ತಂದೆ! ಎಂದು ಚಡಪಡಿಸಿದರು. ತಾಲೂಕಿನವರೆಗೆ ಕಳಿಸಿ ಪಶುವೈದ್ಯರಿಂದ ಪರೀಕ್ಷಿಸಿದರು. ಆದರೆ ಅವರು ಇದನ್ನು ಕೊಲ್ಲುವದೇ ಸರಿ ಎಂದರು. ಅದು ಅಪ್ಪಾರಾಯರ ಮನಸಿಗೆ ಬರಲಿಲ್ಲ. ಏನಾದರೂ ಮಾಡಿ ಗುಣಪಡಿಸಿರಿ ಎಂದು ಅಂಗಲಾಚಿ

ದರು. ವೈದ್ಯರು ಮುಗುಳು ನಗೆ ನಕ್ಕರು. ಅದರಿಂದ ತಾಲೂಕಿನ ಹಾದಿಯನ್ನು ಬಿಟ್ಟರು.

ಕಳೆದ ಎರಡು ದಿನಗಳಿಂದ ನಾಯಿಯ ಅವಸ್ಥೆ ಚಿಂತಾಜನಕ ವಾಯಿತು. ಯಾರನ್ನೂ ಹತ್ತಿರ ಬರಗೊಡದಾಯಿತು. ಗಾಯ ದೊಳಗೆ ದಂಡೆಗುಂಟ ಹರಿದಾಡುವ ಹುಳುಗಳ ಸಾಲು ಸ್ಪಷ್ಟವಾಗಿ ಕಾಣಹತ್ತಿತು. ಅವುಗಳ ಕಡಿತ ಹೆಚ್ಚಾಗಲು ಗಾಯವನ್ನು ಗಪ ಗಪನೆ ನೆಕ್ಕುವದು. ಬಾಯಿಗೆ ಬಿದ್ದ ಹುಳುಗಳನ್ನು ಕಟಕಟನೆ ಕಡಿಯುವದು. ಹುಚ್ಚಿದ್ದ ಸರಪಳಿಯನ್ನು ಕೀಳುವದು. ಕಟ್ಟಿದ ಗೂಟದ ಸುತ್ತು ತಿರುಗುವದು. ಚಂಗನೇಳುವದು. ಧೊಪ್ಪನೆ ಬೀಳುವದು. ಗುಡುಗುಡು ಉರುಳುವದು. ಓ! ಎಂದು ಒದರು ವದು. ಹತ್ತರ ನಿಂತವರನ್ನು ನೋಡಿ ಧಾವಿಸುವದು. ಹಿಂಗಾಲ ಮೇಲೆ ಎದ್ದು ನಿಲ್ಲುವದು, ಹಾಗೆಯೇ ಉರುಳುವದು. ಅಪ್ಪಾ ರಾಯರು ನೋಡದಾದರು. ಕಣ್ಣಿಂದ ನೀರು ಹರಿದವು. ದೂರ ನಿಂತು—"ಮೋತ್ಯಾ!" ಎಂದು ಒಂದು ದಿನ ಒದರಿದರು.

ಆ ನಂಬಿಗೆಯ ಪ್ರಾಣಿ ಅನ್ನದಾತನ ದನಿಯನ್ನು ಗುರುತಿಸಿ ಪಿಳಪಿಳನೆ ಕಣ್ಣು ಬಿಟ್ಟು ಬಾಲವನ್ನು ಅಲ್ಲಾಡಿಸಿತು. ಓ! ಎಂದು ಒದರಿ ಎರಡು ಕಾಲುಗಳ ಮೇಲೆ ನಿಂತಿತು. ಗಾಯದ ವೇದನೆ ಯಾಗಲು ಪಟಕ್ಕನೆ ಮಲಗಿ ನೆಕ್ಕ ಹತ್ತಿತು. ಎದ್ದು ಗೂಟದ ಸುತ್ತು ಗರಗರನೆ ತಿರುಗಿತು. ಇದೆಲ್ಲವನ್ನು ನೋಡಿ ಅಪ್ಪಾರಾಯರು ಮೋನಿಯಾದರು. ಮುಂದಿನ ಕಟ್ಟೆಯ ಮೇಲೆ ವಿಚಾರ ಮಗ್ನರಾಗಿ ಕುಳಿತರು.–ನನ್ನ ನಾಯಿಯ ಈ ಅವಸ್ಥೆಗೆ ಚಿನ್ನಯ್ಯನ ನಾಯಿಯೇ ಕಾರಣವಲ್ಲವೇ? ಆ ನಾಯಿಯನ್ನು ಏನು ಮಾಡಲಿ? ನಿಲ್ಲಿಸಿ ಸುಡಿಸ ಬಹುದೇ! ಗುಂಡಿಕ್ಕಿ ಕೊಲ್ಲಿಸಲೆ? ಏನು ಮಾಡಲಿ? ಎಂದು ದವಡೆ ಯನ್ನು ಬಿಗಿದರು. ಏನೋ ನೆನಪಾಗಿ "ರಾಜಣ್ಣಾ!" ಎಂದರು.

ಹತ್ತರ ಬಂದು "ಏನು?" ಎಂದು ಕೇಳಿದನು.

"ಆ ಚಿನ್ನನ ನಾಯಿಯನ್ನು ಹಿಡಿತರಿಸು."

"ಅವನ ನಾಯಿ ಊರಲ್ಲಿಲ್ಲ."

"ಇಲ್ಲ !"

"ಅಹುದು. ನಮಗೆ ಅಂಜಿ ಎಲ್ಲಿಯೋ ಸಾಗಿಸಿರುವನು ಕಳೆದ ಹದಿನೈದು ದಿನಗಳಿಂದ ಹುಡುಕುತ್ತಿರುವೆ. ನನಗೆ ಸಿಕ್ಕಿಲ್ಲ. ಕಣ್ಣಿಗೂ ಬಿದ್ದಿಲ್ಲ."

"ನೀನು ಹೋಗು. ಹಳಬನನ್ನು ಕಳಿಸು."

"ಹ." ರಾಜಣ್ಣನು ಹೋಗಿ ಹಳಬನನ್ನು ಕಳಿಸಿದನು. ಅವನು ಬಂದು ರಾಮರಾಮ ಮಾಡಿ ನಿಂತನು.

"ಚಿನ್ನಯ್ಯನನ್ನು ಕರೆದು ತಾ. ಅವನು ಈ ನಾಯಿಯ ಅವಸ್ಥೆಯನ್ನು ನೋಡಲಿ."

"ಅವರು ಊರಲ್ಲಿ ಇಲ್ಲರಿ, ಭತ್ತದ ಸುಗ್ಗಿಗೆ ಹೋಗಿರುವರು."

"ಎಂದು ಬರುವನು ?"

"೧೦-೧೫ ದಿನ ಬೇಕಂತೆ."

"ಹೋಗು."

ಹಳಬನು ಹೋದನು. ಉಭಯತರೂ ಗೌಡರ ಸಿಟ್ಟಿಗೆ ಹಾಜರಾಗಲಿಲ್ಲ. ಪಾರಾಗಿದ್ದರು. ಮನದಲ್ಲಿಯ ಸಿಟ್ಟು, ದ್ವೇಷ, ಸಂತಾಪ ಕಡಮೆಯಾಗಲಿಲ್ಲ. ಚಿನ್ನಯ್ಯನ ಮೇಲೆ ಯಾವದೇ ಬಗೆಯ ಸೇಡು ತೀರಿಸಬೇಕೆಂದು ಉತ್ತಪ್ತ ಮನಸು ಹವಣಿಸುತ್ತಿದ್ದಿತು.

ನಾಯಿಯ ಸ್ಥಿತಿ ಇನ್ನೂ ಕೆಟ್ಟಿತು. ಅಪ್ಪಾರಾಯರ ಕೋಪ ಮತ್ತೂ ಹೆಚ್ಚಾಯಿತು.

ಒಂದು ದಿನ ಹೊಲದಿಂದ ತಿರುಗಿ ಬರುವಾಗ ದೊಡ್ಡ ಮನೆಯ ತಂಗವ್ವ ಇದಿರಿಗೆ ಬಂದಳು. ಆ ಹೆಂಗಸು ಗೌಡರು ಬಂದರೆಂದು ನೆರೆಮನೆಯ ಕಟ್ಟೆಯ ಕಡೆಗೆ ನಿಂತು ದಾರಿಯನ್ನು ಬಿಟ್ಟಳು. ಅಪ್ಪಾರಾಯರು ಆಕೆಯನ್ನು ನೋಡಿದರು. ಫಕ್ಕನೆ ವಿಚಾರ ಹೊಳೆಯಿತು.

ಗಂಡ ಸತ್ತ ಮೇಲೆ ರಾಯರ ಕಣ್ಣು ತಂಗವ್ವನ ಮೇಲೆ

ಬಿದ್ದಿದ್ದಿತು. ಅನುಕೂಲ ಮಾಡಿಕೊಳ್ಳಬೇಕೆಂದು ಇಚ್ಛಿಸಿದ್ದರು. ಪ್ರಯತ್ನಿಸಿದ್ದರು. ಆದರೆ ಅವಳು ಬಗ್ಗಿರಲಿಲ್ಲ. ಬೆನ್ನು ಹತ್ತಿದ ಭೇತಾಳದಂತೆ ರಾಯರು ಮತ್ತೂ ಕಾಡಿದರು; ಅವಳು ರಾಯರ ಮಾತುಗಳನ್ನು, ಮಂಗ ಚೇಷ್ಟೆಗಳನ್ನು ಚಿನ್ನಯ್ಯನ ಮುಂದೆ ಹೇಳಿ ರಕ್ಷಾಕವಚವನ್ನು ಪಡೆದಿದ್ದಳು. ತಾವು ಕಣ್ಣಿಟ್ಟ ಹೆಣ್ಣಿನ ಮೇಲೆ ಚಿನ್ನಯ್ಯನು ಕಾವಲಿದ್ದುದು ಅವಮಾನವೆಂದು ಬಗೆದರು. ಕಿಡಿಕಿಡಿಯಾದರು. ಆ ಕಿಡಿಯನ್ನು ಕೃತಜ್ಞಳಾದ ಬಾಳವ್ವನು ತನ್ನ ದೇಹದ ಅಮೃತ ಜಲಧಾರೆಯನ್ನು ಸುರಿದು, ಶಾಂತಮಾಡಿದ್ದಳು. ಆದರೂ ಅಂದಿನ ಕೋಪ ಮನಸಿನ ಯಾವದೋ ಮೂಲೆಯಲ್ಲಿ ಅಡಗಿ ಕುಳಿತಿದ್ದಿತು. ಇಂದು ತಂಗವ್ವನನ್ನು ಕಾಣಲು ಮತ್ತೆ ಭುಗಿಲೆಂದಿತು. ಅದರ ಪರಾಮರ್ಶೆಗೆ ಒಂದು ಹಂಚಿಕೆಯು ಹೊಳೆಯಿತು.

ಮಧ್ಯಾಹ್ನ ಊಟವಾದ ಮೇಲೆ ಚಾವಡಿಗೆ ಬಂದು ಕುಳಿತರು. ಕೆಲವು ಪ್ರತಿಷ್ಠಿತರೂ ಬಂದು ಕುಳಿತರು. ಆ ಸುದ್ದಿ ಈ ಸುದ್ದಿ ನಡೆಯಿತು. ರಾಯರು ನಡೆದ ಮಾತನ್ನು ನಡುವೆ ನಿಲ್ಲಿಸಿ ಹಳಬನನ್ನು ಕರೆದರು. ಅವನು ಬಂದು ಮುಜುರೆಯನ್ನು ಮಾಡಿದನು.—"ಹೋಗು ದೊಡ್ಡಮನೆ ತಂಗವ್ವನನ್ನು ಕರೆದು ತಾ!" ಎಂದು ಆಜ್ಞಾಪಿಸಿದರು. ಹಳಬನು ಹೋಗಿ ತಂಗವ್ವನನ್ನು ಕರೆದು ತಂದನು. ಅವಳು ಅಂಜುತ್ತಲೇ ಬಂದು ಮರೆಯಲ್ಲಿ ನಿಂತಳು. ಅಪ್ಪಾರಾಯರು ತಂಬಾಕಿನ ರಸವನ್ನು ಪಿಚಕ್ಕನೆ ಉಗುಳಿ ಮೀಸೆಯ ಎಡ ಬಲಕ್ಕೆ ತೀಡಿ—"ಏನವ್ವಾ, ಮಳೆ ಬೆಳೆಯಾಗಿ ಎರಡು ದಿನ ನಾವು ಸುಖದಿಂದ ಬಾಳುವದು ನಿನಗೆ ಬೇಡಾಗಿದೆ ಏನು ?" ಎಂದು ನುಡಿದರು.

ತಂಗವ್ವನು ಗಾಬರಿಯಾಗಿ ಗೌಡರ ಮುಖವನ್ನು ನೋಡಿದಳು.

"ನಿನ್ನ ಕೆಟ್ಟ ಕೆಲಸದಿಂದ ದೇವರು ಸಿಟ್ಟಾದರೆ ನಾವು ಬದುಕುವದೆಂತು ? ಹೀಗೆ ಮಾಡುವದು ದೊಡ್ಡ ಮನೆಯ ಮನೆತನದ ವರಿಗೆ ಭೂಷಣವಲ್ಲ." ಏರು ದನಿಯಲ್ಲಿ ನುಡಿದರು.

ಯಾರಿಗೂ ಈ ಮಾತಿನ ಚಮತ್ಕಾರ ತಿಳಿಯಲಿಲ್ಲ.

"ನಾನು ಏನು ಮಾಡಿರುವೆ ಗೌಡರೆ ?" ತಂಗವ್ವ ಕೇಳಿದಳು.

"ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೂ ಜನರು ಅದನ್ನು ನೋಡುವರು." ಪುರಾಣಿಕರಂತೆ ನುಡಿದರು.

ತಂಗವ್ವ ಮಾತಾಡಲಿಲ್ಲ.

"ನಿನ್ನ ಹೊಲೆಮೈಲಿಗೆ ನಿಂತು ಎಷ್ಟು ದಿನಗಳಾದವು ?" ಗುಂಡು ಹಾರಿದಂತೆ ನುಡಿದರು.

ತಂಗವ್ವನು ಗಾಬರಿಯಾದಳು. ಯಾವ ಸ್ಥಳದಲ್ಲಿ ಯಾವ ಪ್ರಶ್ನೆ ! ಕುಳಿತ ಊರ ಹಿರಿಯರು ಕಕ್ಕಾಬಿಕ್ಕಿಯಾದರು.

"ಹೇಳು ಎಷ್ಟು ದಿನವಾಗಿದೆ. ಹೀಗೆ ಕೆಟ್ಟ ಕೆಲಸಮಾಡಿ ಅದರಿಂದ ಪಾರಾಗಲು ಯಾವ ಯಾವ ಹಂಚಿಕೆಗಳನ್ನು ಹಾಕಿರುವೆ. ನಿನ್ನ ಗಂಡ ಸತ್ತು ಆರುವರುಷವಾಗಿದೆ. ನೆನಪಿನಲ್ಲಿರಲಿ."

ತಂಗವ್ವನು ಭೂಮಿಗೆ ಇಳಿದಳು. ಮುಖವು ಸುಟ್ಟ ಬದನೆಯ ಕಾಯಿಯಂತೆ ಕಪ್ಪಿಟ್ಟಿತು.

"ಹೇಳು. ಹೇಳದಿದ್ದರೆ ಪರಿಣಾಮ ನೆಟ್ಟಗಾಗದು."

"ಹೇಳು ತಂಗವ್ವ. ಮಾಡಿದ ಪಾಪ ಹೊರಗೆ ಬರಲೇಬೇಕು. ಪರೀಕ್ಷೆ ಮಾಡಲು ತಾಲೂಕಿಗೆ ಕಳಿಸಿದರೆ ನಮ್ಮವರ ಹೊಲೆಗೇರಿಯು ಅಲ್ಲಿಯೂ ಪ್ರಸಿದ್ಧವಾಗುವದು. ಅದಕ್ಕೆ ಇಲ್ಲೇ ಮುಗಿಸುವದು ಒಳ್ಳೆಯದು. ಸತ್ಯವಾದ ಮಾತು ಹೇಳು. ನೀನು ಹೆಂಗಸು. ಹೆದರುವ ಕಾರಣವೇನು ? ಹೇಳಿಬಿಡು." ಒಬ್ಬ ಹಿರಿಯ ನುಡಿದನು.

"ಗುಳ್ಳವ್ವನ ಅಮಾವಾಸ್ಯೆಗೆ...."

"ಇಂದಿಗೆ ೪-೫ ತಿಂಗಳಾಯಿತು. ಏನುಮಾಡ ಬೇಕೆಂದಿರುವೆ ? ಈ ಸಾರೆಯೂ ಪಂಢರಪುರ ಜಾತ್ರೆಗೆ ಹೋಗುವೆಯೇನು ?" ರಾಯರು ಪ್ರಶ್ನಿಸಿದರು.

"ಜಾತ್ರೆ ಮುಗಿದು ಹೋಗಿದೆ." ಇನ್ನೊಬ್ಬ ಹಿರಿಯನೆಂದನು.

"ಒಂದು ಜಾತ್ರೆ ಮುಗಿದರೆ ಇನ್ನೊಂದು ! ನಮ್ಮ ದೇಶದಲ್ಲಿ ತಿಥಿಗೊಂದು ಜಾತ್ರೆಯ ಸ್ಥಳಗಳಿವೆ. ಪಾಪ ತೊಳೆದುಕೊಳ್ಳಲು

ಬಹಳ ಅನುಕೂಲ. ಮತ್ತೆ ಅವನು ಯಾರು? ಹೆಸರು ಹೇಳುವೆ ಏನು?"

"ಯಾರೆಂದು ಹೇಳುವದು ನನ್ನ ಕರ್ಮಕ್ಕೆ!" ತಂಗವ್ವ ನುಡಿದಳು.

"ಕರ್ಮಕ್ಕೆ ನೀನು ಪಾಲುಗಾರಳು ಸರಿ. ಆದರೆ ಧರ್ಮಕ್ಕೆ ಇನ್ನೊಬ್ಬನಿರುವನು."

"ಹತ್ತು ಜನರ ಹೆಸರು ಹೇಳಿದರೆ ಇದ್ದವನೊಬ್ಬನೂ ಕೈ ಬಿಡ ಬಹುದು. ನಿನ್ನ ಇಚ್ಛೆ ಇದ್ದರೆ ಅವನ ಹೆಸರು ಹೇಳು. ಮುಂದೆ ಇದರಿಂದ ಪ್ರಸಂಗದಲ್ಲಿ ನಿನಗೆ ಉಪಯೋಗವಾಗುವದು."

"ಬೇರೆ ಯಾರು ಇರುವರು!"

"ಚಿನ್ನಯ್ಯನೇನು?" ಒಬ್ಬ ಕೇಳಿದನು.

"ಹ!"

ಅಪ್ಪಾರಾಯರು ಮೀಸೆಯ ಮೇಲೆ ಕೈ ಎಳೆದರು. ತಂಬಾಕು ಉಗುಳಿ "ನಿನ್ನ ಸಲುವಾಗಿ ಒಂದು ಮೂಕ ಅರ್ಜಿ ಬಂದಿರುವದು. ನೀನು ಬಸಿರಿದ್ದು ಅದನ್ನು ಹೊರಗೆ ಹಾಕಿ ಕೊಳ್ಳುವ ಎತ್ತುಗಡೆಯಲ್ಲಿ ಇರುವೆಯಂತೆ. ಹೀಗೆ ಮಾಡುವದು ಅಪರಾಧವು. ಇದು ಭ್ರೂಣ ಹತ್ಯೆಯನ್ನು ಮಾಡಿದಂತೆ. ಇದಕ್ಕೆ ದೊಡ್ಡ ಶಿಕ್ಷೆಯಿದೆ. ಈಗ ನಾನು ನಿನ್ನ ಹೆರಿಗೆ ಆಗುವವರೆಗೆ ಕಾಯಲೇಬೇಕು. ನೀನು ತುಂಟತನ ಮಾಡಿದರೆ ನಿನ್ನನ್ನು ಸರಕಾರಕ್ಕೆ ಒಪ್ಪಿಸುವೆನು. ನೀನಾಗಿಯೇ ಅದನ್ನು ಸಂರಕ್ಷಿಸುವೆನೆಂದು ವಚನ ಕೊಟ್ಟರೆ, ಗಟ್ಟಿಯಾದ ಎರಡು ಜಾಮೀನು ಕೊಟ್ಟರೆ ಬಿಡುವೆ. ಇಲ್ಲದಿದ್ದರೆ ಮುಂದಿನ ಪರಿಣಾಮಕ್ಕೆ ಸಿದ್ಧಳಾಗು. ಏನೆಂದೆ?" ಎಂದು ಬೆದರಿಸಿದರು.

ತಂಗವ್ವನ ತಲೆಯ ಮೇಲೆ ಮುಗಿಲು ಹರಿದು ಬಿದ್ದಂತಾಯಿತು. ಜೀವನದಲ್ಲಿ ಇಂಥ ಅವಮಾನ, ಅದೂ ತುಂಬಿದ ಬೀದಿಯಲ್ಲಿ, ಇಷ್ಟು ಜನರ ಇದಿರು ಆದುದು ಇನ್ನೂ ಹೆಚ್ಚಿನ ಅವಮಾನವೆಂದೆನಿಸಿತು ಆದರೆ ಏನು ಮಾಡುವದು? ಬಂದುದನ್ನು ನುಂಗಬೇಕು? ಹೆಣ್ಣು

ತನದ ಪರಮಾವಧಿಯ ಧೈರ್ಯವನ್ನು ತೋರಿಸಬೇಕು ಎಂದು ಧೈರ್ಯವನ್ನು ಪಡೆದುಕೊಳ್ಳಹತ್ತಿದಳು.

"ಏನೆಂದೆ ?" ಗೌಡರು ಪುನಃ ಕೇಳಿದರು.

"ಅದನ್ನು ಸಂರಕ್ಷಿಸುವೆ, ಬೇಕಾದರೆ ಜಾಮೀನು ಕೊಡುವೆ." ಎಂದು ನುಡಿದಳು.

ಗೌಡರಿಗೆ ಈ ಉತ್ತರವು ಅಪಥ್ಯವಾಯಿತು. ದವಡೆಯಲ್ಲಿ ಹಿಡಿದ ಚರ್ವಿತ ತಂಬಾಕದ ಮುದ್ದೆಯರಸವು ಕಹಿಯಾಯಿತು. ಕೈಯಲ್ಲಿ ಉಗುಳಿಕೊಂಡು ದೂರ ಚಲ್ಲಿದರು.

೮

ಮುಖಕ್ಕೆ ಮುಖವಿಟ್ಟು ಮುದ್ದುಕೊಡುವ, ಸಬಕಾರ ಹಚ್ಚಿ ದಿನಂಪ್ರತಿ ಉಗುರು ಬೆಚ್ಚನ್ನ ನೀರಿನಿಂದ ಮೈ ತೊಳೆವ, ತೊಡೆಯ ಮೇಲೆ ಕುಳಿತುಕೊಂಡು ಮೈ ಮೇಲೆ ಕೈಯಾಡಿಸಿಕೊಳ್ಳುವ, ಹಾಸಿಗೆಯ ಪಕ್ಕದಲ್ಲಿ ಕುಳಿತು ತೇಕುತ್ತಿರುವ, ರತ್ನಗಂಬಳಿಯ ಮೇಲೆ ಮಲಗುವ, ತ್ರಿಕಾಲ ಸೇವೆಗೊಳ್ಳುವ, ಹದಿನೈದು ದಿನಕ್ಕೊಮ್ಮೆ ಒಂದು ಕೋಳಿಯನ್ನು ನುಂಗುವ, ಪುಣ್ಯದ ಅಂಶದಿಂದ ವೈಷ್ಣವರ ಸಹವಾಸದಲ್ಲಿ ಬೆಳೆದು ಬದುಕಿರುವ, ಅಪ್ಪಾರಾಯರಂತಹ ಪ್ರತಿಷ್ಠಿತರ ರಕ್ಷಣೆಯಲ್ಲಿರುವ, ಅವರಷ್ಟೇ ಮಾನ–ಮರ್ಯಾದೆಯನ್ನು ಪಡೆಯುತ್ತಿರುವ, ಹುಲಿಯಂತೆ ಬೆಳೆದಿರುವ, ಗೌಡ ಮನೆಯ ಭಾಗ್ಯ ಪತ್ರವನ್ನು ಹೊತ್ತು ನಿಂತಿರುವ ಮೋತ್ಯಾ ಇಂದು ಎಲ್ಲರ ಹೇಸಿಗೆಯ, ತಿರಸ್ಕಾರದ, ಅಸ್ಪೃಶ್ಯ ಪ್ರಾಣಿಯಾಗಿದೆ. ಮುಟ್ಟುವದೊತ್ತಟ್ಟಿಗಿರಲಿ ಕಣ್ಣಿಂದ ನೋಡಿದರೆ ಓಕರಿಕೆ ಬರಬೇಕು. ಅಷ್ಟು ಅಸಹ್ಯವಾಗಿದೆ. ಅದರ ಕೂಗಾಟ, ನರಳಾಟ ಮನೆಯವರೆಲ್ಲರ ನಿದ್ರಾಭಂಗಕ್ಕೆ ಕಾರಣವಾಗಿದೆ. ಅದರ ಹುಳು ಬಿದ್ದ ಗಾಯದ ದರ್ಶನವು ಊಟದ ಸಮಯದಲ್ಲಿ ನೆನಪಾಗಿ ವಾಂತಿಮಾಡಿಕೊಳ್ಳಲು ಕಾರಣವಾಗಿದೆ. ಅದರ ಕೋಣೆಯ ದರ್ಶನ ನರಕದ ನೆರಳಾಗಿದೆ. ಎಲ್ಲರ ಬಾಯಲ್ಲಿ ಅದು ಸಾಯಬೇಕು, ಶಾಂತಿಯನ್ನು ಪಡೆಯಬೇಕು.

ಎಂಬ ಚಿಂತನೆಯು ಮಂತ್ರವಾಗಿದೆ. ಅಪ್ಪಾರಾಯರು ಅದರ ಬದುಕಿನ ಆಶೆಯನ್ನು ಬಿಟ್ಟರು. ಸತ್ತರೆ ಒಳ್ಳೆಯದೆಂದು ದುಃಖದಿಂದ ಜಪಿಸ ಹತ್ತಿದರು. ಕಳೆದ ೩-೪ ದಿನಗಳಿಂದ ಅದರ ಬಳಿಗೆ ಹೋಗಿರಲಿಲ್ಲ. ಹೋಗಬೇಕೆಂದೂ ಇಚ್ಛಿಸಿರಲಿಲ್ಲ. ಸತ್ತ ಸುದ್ದಿಯನ್ನು ಮುಟ್ಟಿಸಿದರೆ ಸಾಕೆಂದು ದೂರದಲ್ಲಿ ಇರುತ್ತಿದ್ದರು.

ರಾಜಣ್ಣನೇ ಅದರ ವ್ಯವಸ್ಥೆಯ ಹೊಣೆಯನ್ನು ಹೊತ್ತನು. ಆ ಹೊಣೆಯಲ್ಲಿ ಅವನ ಗೆಳೆಯರೂ ಸಹಕಾರಿಯಾಗಿದ್ದರು. ಅವರಿಗೆ ಅದರ ಸಾವು ಒಂದು ಸಾಮಾನ್ಯ ಸಂಗತಿಯಾಗಿದ್ದಿತು.

ನಾಯಿಯ ಆರಯಿಕೆಯಿಂದ ರಾಜಣ್ಣನ ನೂರಾರು ಅಗತ್ಯದ ಕೆಲಸಗಳಿಗೆ ಅಡ್ಡಿಯಾಯಿತು. ಮನೆಯಲ್ಲಿ ಹೆಚ್ಚು ಕಾಲ ಕುಳಿತಿರುವದು, ಅದನ್ನು ಆಗಾಗ್ಗೆ ಸತ್ತಿತೇ ಎಂದು ನಿರೀಕ್ಷಿಸುವದು, ಹೆಚ್ಚು ಕೂಗಾಟ ಮಾಡ ಹತ್ತಿದರೆ ಗದರಿಸುವದು, ಅನ್ನ ಹಾಕುವದು, ದೂರದಿಂದ ಅದರ ಹೊಲಸನ್ನು ತೆಗೆಯಿಸುವದು ಕಷ್ಟಕ್ಕಿಟ್ಟು ಕೊಂಡಿತು. ಇದರಿಂದ ಅವನ ಹಿರಿದಾದ ಬಯಕೆಯ ಕಾರ್ಯಗಳು ಹಾಗೇ ಉಳಿದವು. ಮನಸು ಚಡಪಡಿಸ ಹತ್ತಿತು. ನಿಂಗಿಯ ಪಾರುಪತ್ಯಕ್ಕೆ ಜೀವ ಹಂಬಲಿಸುತ್ತಿದ್ದಿತು. ತಾಲೂಕಿಗೆ ಹೋಗಿ ನಾಲ್ಕಾರು ದಿವಸ ವಿನೋದದಲ್ಲಿ ವೇಳೆ ಕಳೆಯುವದು ಇನ್ನೂ ಉಳಿದಿದ್ದಿತು. ಕಳೆದ ೫-೬ ದಿನಗಳಿಂದ ಇಸ್ಪೇಟು ಆಡಿರಲಿಲ್ಲ. ಹಿಟಲರನ ಮಸಾಲೆಯ ಅನ್ನಕ್ಕೆ ರುಚಿಗೊಂಡ ನಾಲಗೆಯು ಜೊಲ್ಲನ್ನು ಹಾಗೆಯೇ ಸುರಿಸುತ್ತಿದ್ದಿತು. ಈ ಎಲ್ಲ ಕೆಲಸಗಳಿಗೆ ಮನಸು ಹೊರಗೆ-ಒಳಗೆ ಎಡತಾಕುತ್ತಿದ್ದಿತು. ಆದರೆ ಆ ಹಾಳು ನಾಯಿ, ತಂದೆಯ ನಿಷ್ಠುರ ಆಜ್ಞೆ ಕಟ್ಟಿ ಹಾಕಿದ್ದವು. ಇವುಗಳಿಂದ ಪಾರಾಗಲು ನಾಯಿಯ ಸಾವು ಅಗತ್ಯವಿದ್ದಿತು. ಅದು ತಾನಾಗಿ ಸಾಯಲೆಂಬ ಗಡವು ದಿನದಿನಕ್ಕೆ ಮುಂದೆ ಮುಂದೆ ಸಾಗಹತ್ತಿತು. ಸಾಯುವದು ನಿಶ್ಚಯ. ಸಾಯಲೇಬೇಕು. ಸತ್ತರೆ ಅದಕ್ಕೂ ಒಳ್ಳೆಯದು. ನಮಗೂ ಆನಂದ. ಎಲ್ಲರಿಗೂ ಹಿತ. ಅಂದ ಮೇಲೆ ಸಾಯಲಿಕ್ಕೆ

ಅನುಕೂಲಿಸಬಾರದೇಕೆ ? ನಾವು ಪ್ರಯತ್ನಿಸಬಾರದೇಕೆ ? ಎಂಬ ಆಲೋಚನೆಯು ರಾಜಣ್ಣನ ತಲೆಯಲ್ಲಿ ಮಿಂಚಿನಂತೆ ಸುಳಿಯಿತು. ಅದರ ಕೊನೆಯ ಎಳೆ ತಲೆಯಿಂದ ಹೊರ ಬೀಳುವದೊಂದೇ ತಡ ಜೀವದ ಗೆಳೆಯನಾದ ಕುದರೀ ನಿಂಗನು ತನ್ನ ಕಿಸೆಯಲ್ಲಿಯ ನಾಯಿಯ ಪುಡಿಯನ್ನು ಹೊರದೆಗೆಯುತ್ತ "ರಾಜಣ್ಣನವರೇ, ನಿಮ್ಮ ಗೋಳಾಟ ವನ್ನು ನೋಡಲಾರೆ." ಎಂದು ಪೊಟ್ಟಣವನ್ನು ಹಿಡಿದುಕೊಂಡನು.

"ಅಹುದು ನಿಂಗ. ಏನು ಮಾಡಬೇಕು ?" ಎಂದು ಒಣಗಿದ ಮೀಸೆಯ ಮೇಲೆ ಕೈಯಾಡಿಸುತ್ತ ಕೇಳಿದನು.

"೮-೧೦ ದಿನಗಳಾದವು. ಗೌಡರು ಈ ಕಡೆಗೆ ಬಂದಿಲ್ಲ. ಬರುವಂತೆಯೂ ಇಲ್ಲ. ಇನ್ನೂ ಸತ್ತಿಲ್ಲವೇ ? ಎಂದು ನಿನ್ನೆಯೆ ನುಡಿದಿರುವರು. ಅದಕ್ಕೆ ಇಂದು ಸತ್ತಿತೆಂದು ಏಕೆ ಹೇಳಬಾರದು ? "

"ಇನ್ನೂ ಜೀವದಿಂದಿದೆ. ಹೇಗೆ ಹೇಳುವದು ?"

"ಸತ್ತ ಮೇಲೆಯೇ ಹೇಳುವ."

"ಹ"

"ಇದೋ ! ಈ ಪುಡಿಯನ್ನು ಹಾಕಿದರೆ ಅರ್ಧತಾಸಿನಲ್ಲಿ ಲಟಪಟ." ಎಂದು ಪೊಟ್ಟಣವನ್ನು ತೋರಿಸಿದನು.

"ಏನಿದೆ ?"

"ನಾಯಿಯ ಪುಡಿಯು !"

ಯಾವ ಪುಡಿಯು ಚೆನ್ನಯ್ಯನ ನಾಯಿಗೆ ಮೀಸಲಾಗಿದ್ದಿತೋ, ಯಾವ ಪುಡಿಯು ನಿಂಗಿಯ ಪಾರುಪತ್ಯಕ್ಕೆ ಮುಡಿಪಾಗಿದ್ದಿತೋ ಅದೇ ಪುಡಿಯು ಇಂದು ಸ್ವಂತದ, ಪ್ರೀತಿಯ, ಗೃಹಲಕ್ಷ್ಮಿಗೆ ಸಮಾನವಾದ ನಾಯಿಯ ಮೇಲೆ ಪ್ರಯೋಗಿಸಲು ನಿಂತಿದೆ. ಮಾನವನ ಬಯಕೆಗೂ ದೈವದ ಆಟಕ್ಕೂ ಎಷ್ಟು ಅಂತರ! ಕುದುರೀ ನಿಂಗನು ತನ್ನ ಮಾತನ್ನು ಮುಂದುವರೆಸಿ "ರಾಜಣ್ಣನವರೇ, ಈ ಪುಡಿಯಿಂದ ಚೆನ್ನಯ್ಯನ ನಾಯಿಯನ್ನು ಕೊಲ್ಲಲು ಮನಸು ಮಾಡಿದೆವು. ಆದರೆ ನಮ್ಮ ಮುಂದಾಲೋಚನೆಯಿಂದ ಅವನ ನಾಯಿಯು ಸತ್ತಿತು.

ಮುಂದೆ ನಿಂಗಿಗೆ ಉಳಿಯಿತು. ಇಂದು ನಿಂಗಿಯು ನಮ್ಮ ದಂಡಕ್ಕೆ ಅಂಜಿ ಒಪ್ಪಿದಂತೆ ಮಾಡಿರುವಳು. ಇಲ್ಲದಿದ್ದರೆ ಆ ಪುಡಿಯು ನಿನ್ನೆ ರಾತ್ರಿಯೇ ಅವಳ ಹೊಟ್ಟೆಯನ್ನು ಸೇರುತ್ತಿದ್ದಿತು. ಒಪ್ಪಿ, ನಮ್ಮ ಪುಡಿ ನಮ್ಮ ಹತ್ತರವೇ ಉಳಿಯಿತು. ಈಗ ಈ ಪುಡಿಯನ್ನು ಈ ನಾಯಿಗೆ ಉಪಯೋಗಿಸಿ ಮುಕ್ತ ಮಾಡುವ. ಹಾಗೇ ಉಳಿಯಿತೆನ್ನಿರಿ. ಮುಂದೆ ಅದು ಯಾರಮೇಲೆ ಪ್ರಯೋಗಿಸಲಾಗುವದೋ ಹೇಳುವಂತಿಲ್ಲ. ಊರವರು ಮೊದಲೇ ನಮ್ಮ ಮೇಲೆ ಜಂಕಿಯನ್ನು ಕಾರಹತ್ತಿರುವರು. ನಮ್ಮಲ್ಲಿ ಭೇದವನ್ನು ಹುಟ್ಟಿಸಹತ್ತಿರುವರು. ಆ ಪುಡಿಯು ನಮ್ಮ ನಮ್ಮೊಳಗೇ ಪ್ರಯೋಗವಾದೀತು! ಅಲ್ಲದೆ ಪಾಪ, ಈ ನಾಯಿಯ ಗೋಳಾಟವನ್ನು ಇನ್ನೂ ಎಷ್ಟು ದಿನ ನೋಡುವದು! ನಿಮ್ಮ ಕೈಯಿಂದ ತಿನ್ನಿಸಿ ಸ್ವರ್ಗಕ್ಕೆ ಕಳಿಸಿರಿ. ಹಾರುವರ ಕೈಯಿಂದ ಸಾಯಬೇಕಾದರೆ ಪುಣ್ಯಬೇಕು. ನಾನು ಸಿದ್ಧಮಾಡಿಕೊಡುವೆ. ಏನೆಂದಿರಿ?" ಎಂದು ನುಡಿದು ಉತ್ತರದ ದಾರಿಯನ್ನು ನಿರೀಕ್ಷಿಸದೆ ಅನ್ನದಲ್ಲಿ ಕಲಿಸಿ ರಾಜಣ್ಣನ ಮುಂದೆ ಇಟ್ಟನು. ರಾಜಣ್ಣನು ಸುಮ್ಮನೆ ಕುಳಿತು ಅನುಮೋದಿಸಿದನು. ನಿಂಗನು ಅದನ್ನು ಕೈಗೆ ತೆಗೆದುಕೊಂಡು ರಾಜಣ್ಣನ ಎರಡು ಕೈಗೆ ತಗಲಿಸಿ ನಾಯಿಯ ಮುಂದೆ ಸರಿಸಿ–"ಮೋತ್ಯಾ, ತಿಂದು ಸ್ವರ್ಗದ ಹಾದಿಯನ್ನು ಹಿಡಿ" ಎಂದು ತಮ್ಮೆಲ್ಲರ ಬಯಕೆಯನ್ನು ಉಚ್ಚರಿಸಿದನು.

ಪಾಪ, ನಾಯಿಗೆ ಹೊಟ್ಟೆಯಲ್ಲಿ ತಳಮಳ, ಮೈಯಲ್ಲಿ ವೇದನೆ ಕಣ್ಣಲ್ಲಿ ಉರಿ, ಗಾಯಗಳಲ್ಲಿ ಜಂಕಿ, ಗಪಗಪನೆ ತಿಂದು ನಾಲಗೆಯಿಂದ ತುಟಿಗಳನ್ನು ಸವರಿಕೊಂಡಿತು. ಒಂದುಸಾರೆ ಮಲಗಿತು. ಎರಡು ಸಾರೆ ಎದ್ದು ನಿಂತಿತು. ಮೂರು ನಿಮಿಷಗಳು ಕಳೆದವು. ಮತ್ತೆ ಎದ್ದಿತು. ಅತ್ತಿತ್ತ ನಾಲ್ಕೈದು ಸುತ್ತು ಸುತ್ತಾಡಿತು. ಐದಾರು ನಿಮಿಷ ನೆಲ ಮುಗಿಲುಗಳನ್ನು ಕಣ್ಣಿನಿಂದ ಅಳೆಯಿತು. ಆರೇಳು ಕ್ಷಣ ತನ್ನಲ್ಲಿ ತಾನು ಧ್ಯಾನಿಸಿತು. ಏಳೆಂಟು ಬಾರಿ ಕಣ್ಣು ರೆಪ್ಪೆಗಳನ್ನು ಬಡಿದು ಸ್ವಚ್ಛ ಮಾಡಿಕೊಂಡಿತು. ಎಂಟು ಒಂಬತ್ತು ಸಲ ಗೋಡೆಯನ್ನು ನೋಡಿತು. ಒಂಬತ್ತು ಹತ್ತು ಸಾರೆ ರಾಜಣ್ಣನನ್ನು ಅವ

ಲೋಕಿಸಿತು. ಹತ್ತು ಹದಿನೈದು ಸಲ ಗಾಯದ ಕಡೆಗೆ ಬಾಯಿ ಹಾಕಿತು. ಪತ್ತಿಪ್ಪತ್ತು ಸರದಿ ಸರಪಳಿಯನ್ನು ಕಡಿಯಿತು. ಗಾದಿಯ ಮೇಲೆ ಮುಗ್ಗರಿಸಿತು. ಮತ್ತೆ ತುಟಿ ನೆಕ್ಕಿತು. ತಲೆಯು ಭಾರವಾಗಿ ಲಾಗ ಹಾಕಿತು. ಮತ್ತೆ ಕಂಪಿಸುತ್ತ ಎದ್ದಿತು. ತನ್ನ ತಲೆಯ ಸುತ್ತು ತಾನೇ ಪ್ರದಕ್ಷಣೆಯನ್ನು ಹಾಕಿತು. ಕಣ್ಣು ಮುಚ್ಚಿತು. ತೆರೆಯಿತು. ಕಾಲುಗಳು ತೊಡಕು ತೊಡಕಾದವು. ಮುಂದಿನ ಅನ್ನದ ತಟ್ಟೆಯನ್ನು ಮೂಸಿತು. ಕಣ್ಣಮುಂದೆ ಕತ್ತಲೆಯು ಸುಳಿಯಿತು. ರೆಪ್ಪೆಗಳು ಹೊಲಿದುಕೊಂಡವು. ಜೀವವು ಹೃದಯಕ್ಕೆ ಓಡಿ ಬಂದಿತು. ಅವಯವಗಳ ಶಕ್ತಿ ರಕ್ತಾಶಯದ ಬಡಿತದಲ್ಲಿ ಕೇಂದ್ರೀಕೃತವಾಯಿತು. ಭೂಮಿಯ ಅಸ್ತಿತ್ವವನ್ನು ಮರೆಯಿತು. ಮನೆಯ ಋಣಾನುಬಂಧನದ ಕೋಳಿತ ಎಳೆಗಳು ಹರಿಯ ಹತ್ತಿದವು. ತಾನು ನಾಯಿ ಎಂಬ ಪ್ರಜ್ಞೆ ಜೀವದಲ್ಲಿ ಅಡಗಿತು. ಶರೀರದ ಅಭಿಮಾನ ಮರೆಯಾಯಿತು. ವೇದನೆ ಶಾಂತವಾಯಿತು. ಭೂಮಿತಾಯಿಗೆ ಕೊನೆಗೊಮ್ಮೆ ನಮಸ್ಕರಿಸಿ ಅಡ್ಡಾಯಿತು. ದೇಹದ ಚೈತನ್ಯ ಹೊರಟು ಹೋಗುವ ಮುಂದೆ ಒಂದಿಷ್ಟು ಲಟಪಟಿಸಿತು. ಮೈಯಲ್ಲಿಯ ಉಳಿದ ಕಾವು ಆಕಾಶಕ್ಕೆ ಹಾರಿತು. ಪುಪ್ಪುಸಗಳಲ್ಲಿ ತುಂಬಿದ ಹವೆಯು ವಾಯುದೇವನಲ್ಲಿ ಲೀನವಾಯಿತು. ವಸುಂಧರೆಗೆ ತನ್ನ ಮೈಯ ಮೀಸಲ ಮಣ್ಣನ್ನು ನೈವೇದ್ಯವೆಂದು ಉದ್ದ ಕಾಲು ಚಾಚಿ, ಗಿಡ್ಡ ತಲೆ ಚೆಲ್ಲಿ ಮರೆವಾಗಿ, ಕಟ್ಟಿಗೆಯ ತುಂಡಾಗಿ ಮಲಗಿತು. ದೇಹವೆಂಬುವದು ಭೂಮಿಯ ಒಂದು ಹಿಡಿಮಣ್ಣು! ಎಂಬ ಅದ್ಭುತ ವೇದಾಂತ ತತ್ವವನ್ನು ಸಾರುವಂತೆ ಪ್ರಾಣಬಿಟ್ಟಿತು. "ವಾಸಾಂಸಿ ಜೀರ್ಣಾನಿ" ಎಂಬ ಶ್ರೀಮತ್ ಭಗವಂತನ ದಿವ್ಯವಾದ ಅಮರವಾದ ವಾಣಿಗೆ ಪ್ರತ್ಯಕ್ಷ ಉದಾಹರಣೆ ತಾನೆಂದು ಚಿರಮೌನದಲ್ಲಿ ಮಲಗಿತು.

ರಾಜಣ್ಣನು ಅದರ ಪ್ರಾಣಗತದ ಚಿತ್ರವನ್ನು ನೋಡಿ ಮರುಗಿದನು. ಆಶ್ಚರ್ಯಪಟ್ಟನು. ಸಾವೆಂಬುವದು ಇಷ್ಟು ವಿಚಿತ್ರವಾದುದೇ; ಇಷ್ಟು ಅದ್ಭುತವಾದುದೇ ಎಂದು ದಿಗ್ಭ್ರಾಂತನಾದನು.

ಭೀಮನು ಕಟ್ಟಿಗೆಯಿಂದ [illegible] ಆ ಕಡೆಗೆ ಉರುಳಿಸಿದನು.

ಈ ಕಡೆಗೆ ಎಳೆದನು. ಕಣ್ಣಿನ ಮೇಲೆ ಚುಚ್ಚಿದನು. ಮೋತ್ಯಾ ಮಿಸು ಕಾಡಲಿಲ್ಲ. ಸತ್ತಿತೆಂದು ನಿರ್ಣಯಿಸಿ "ರಾಜಣ್ಣಾ, ನಾಯಿಯು ಸತ್ತಿತು" ಎಂದು ಹರ್ಷೋದ್ಗಾರ ತೆಗೆದನು.

"ಅಹುದು." ರಾಜಣ್ಣಾ, ಮೆಲ್ಲಗೆ ನುಡಿದನು.

ಅವನಿಗೆ ಸಾವಿನ ಭಯಾನಕ ಚಿತ್ರ ಇನ್ನೂ ಕಾಣುತ್ತಿದ್ದಿತು. ನಾಯಿಯನ್ನೇ ಕಣ್ಣಿಟ್ಟು ನೋಡುತ್ತಿದ್ದನು.

"ರಾಜಣ್ಣಾ, ಒಂದು ಮಾತು ಮರೆಯಬಾರದು." ಹಿಟಲರನು ನುಡಿದನು.

"ಏನು ?" ಎಚ್ಚತ್ತವನಂತೆ ಕೇಳಿದನು.

"ನಾಯಿ ಸತ್ತಿತು."

"ಹ."

"ಬಿಡುವು ಸಿಕ್ಕಂತಾಯಿತು."

"ಹ."

"ಇಂದು ನೀವು ತಂಗವ್ವನಿಗೆ ಸಮಾಧಾನವನ್ನು ಹೇಳಲೇಬೇಕು."

"ಏಕೆ ?"

"ಆ ಪ್ರಾಣಿಯ ಅವಸಾನ ಶಾಂತವಾಗಬೇಕಾದರೆ ನಿಮ್ಮ ನೆರವು ಅವಶ್ಯ. ಚಿನ್ನಯ್ಯನವರಿದ್ದಿದ್ದರೆ ಏನಾಗುತ್ತಿದ್ದಿತೋ ನಾನು ಹೇಳ ಲಾರೆ. ನೀವು ಬನ್ನಿರಿ. ನಾನು ಅವಳನ್ನು ಕಂಡು ಮಾತಾಡಿರುವೆ."

"ಅಲ್ಲ, ನಮ್ಮ ತಂದೆಯನ್ನು ತಿರಸ್ಕರಿಸಿದವಳು! ಅಂಥ ಅಭಿಮಾನಿ! ನನ್ನ ಮಾತನ್ನು ಕೇಳುವಳೇ ?"

"ಅಂದಿನ ಅಭಿಮಾನವೆಲ್ಲ ಇಂದು ಸುಟ್ಟು ಸುಣ್ಣವಾಗಿದೆ. ಅವ ಳಿಗೆ ಇನ್ನೂ ಎರಡು ಹೊತ್ತು ಬದುಕಬೇಕೆಂಬ ಆಶೆಯಿದೆ. ನೀವು ಬನ್ನಿರಿ. ನಾನು ಪೂರ್ವ ಪೀಠಿಕೆಯನ್ನು ಮಾಡುವೆ."

"ಆಗಲಿ."

"ಒಳ್ಳೇದು. ನಾವು ಹೋಗುವೆವು." ಎಂದು ಎಲ್ಲರೂ ಹೊರಟು ನಿಂತರು.

ರಾಜಣ್ಣನು ಅಪ್ಪಣೆಯನ್ನು ಕೊಟ್ಟನು. ಎಲ್ಲರೂ ತಮ್ಮ ಮನೆಗೆ ಹೋದರು. ನಾಲ್ಕೈದು ನಿಮಿಷಗಳು ಮೌನದಲ್ಲಿ ಕಳೆದವು. ರಾಜಣ್ಣ ಹೊರಗೆ ಬಂದನು. ತನ್ನ ಕಣ್ಣಲ್ಲಿ ಮೂಡಿನಿಂತ ಮೋಹ್ಯಾನ ಕಳೇವರದ ಚಿತ್ರವನ್ನು ಅಳಿಸಿಕೊಂಡನು. ಸ್ವಚ್ಛ ಮಾಡಿಕೊಂಡು ತಂಗವ್ವನ ತಂಬುಲದುಟಿಯ ಚಿತ್ರವನ್ನು ಕೊರೆದುಕೊಂಡು ಅವ ಲೋಕಿಸ ಹತ್ತಿದನು.

ಅಹಹ! ಏನು ರೂಪು! ಎಂಥ ಚೆಲುವು! ಎಷ್ಟು ಮೋಹಕತೆ! ಹಳ್ಳಿಯಲ್ಲಿ ಇಂಥ ಹೆಣ್ಣು ಸಿಕ್ಕುವುದು ಅಪರೂಪ! ಮೈ ಬಣ್ಣ ಗೇರುಹಣ್ಣಿನಂತಿದ್ದರೂ ಹೊಳಪಿದೆ. ತುಂಬಿದ ಕೆನ್ನೆ. ಹರವಾದ ಹಣೆ. ದುಂಡನ್ನ ಮೂಗು. ಮೂಗಿನ ತುದಿಗೆ ಜೋತಾಡುವ ನೂರು ಮುತ್ತಿನ ಮೂಗುಬಟ್ಟು. ಕಿವಿಯಲ್ಲಿ ಬಂಗಾರದ ಬಟ್ಟಿನ ಬೆಂಡೋಲೆ. ಗುಂಗಿಯ ಹುಳದಂತೆ ಕಪ್ಪಾದ ಉದ್ದವಾದ ಎಳೆಯಂತಹ ಕೂದಲು. ಹೊಸ ಕೊಡದಂತಹ ಕುತ್ತಿಗೆ. ಉಬ್ಬೇರಿದ ಎದೆ. ದೇಹವು ನೋಡಲು ಗಡುತರವಲ್ಲ. ಹಿಡಿಯಲು ಸೀರಲ್ಲ. ವಯಸ್ಸಿಗೆ ತಕ್ಕಂತೆ ಎತ್ತರ. ಅಂಥ ಹೆಣ್ಣನ್ನು ನೋಡುವದು, ಮಾತಾಡುವದು, ಕೂಡುವದು ಪುರುಷನ ಏಳು ಜನ್ಮದ ಭಾಗ್ಯ. ತಂಗವ್ವನನ್ನು ಕಾಣಬೇಕು, ರಕ್ಷಿಸಬೇಕು, ಉಳಿಸಬೇಕು, ಬದುಕಿಸಬೇಕು; ಅವಳಿಗಾದ ಅವಮಾನವನ್ನು ತೊಡೆದು ಹಾಕಬೇಕು. ಹಿಟಲರನು ನೆರವಾದರೆ ಯಾವ ಕೆಲಸ ಅಸಾಧ್ಯ! ಎಂದು ಮುಂತಾಗಿ ರಾಜಣ್ಣನು ಸ್ವಪ್ನಚಿತ್ರಗಳನ್ನು ಕಣ್ಣಮುಂದೆ ಕುಣಿಸಿಕೊಂಡು ಸಂತಸಪಟ್ಟನು.

ಆದರೆ ಅವಳು ಉಡಿಯಲ್ಲಿ ಕಲ್ಲು ಕಟ್ಟಿಕೊಂಡು ಕೆರೆಯ ತಳದಲ್ಲಿ ಆ ರಾತ್ರಿಯೇ ಸೇರಿ, ಸುಖವಾಗಿ ಮಲಗಳಿದ್ದಳೆಂದು ರಾಜಣ್ಣನಿಗೇ ಆಗಲಿ, ಅವನ ಗೆಳೆಯರಿಗಾಗಲಿ ಗೊತ್ತಿರಲಿಲ್ಲ. ಗಂಗಾದೇವಿಯು ಆ ಬಡವಿಯ ಕಷ್ಟವನ್ನು ನಿವಾರಣೆಮಾಡಿ, ತನ್ನಲ್ಲಿ ಅಡಗಿಸಿಕೊಳ್ಳಲು ಸ್ಥಳವನ್ನಿಟ್ಟಿದ್ದಳು. ಅವಳೊಬ್ಬಳಿಗನ್ನೇ ಗೊತ್ತು.

# ೬

ನಾಯಿಯ ಸಾವನ್ನು ಕೇಳಿ ಅಪ್ಪಾರಾಯರು ಬಹಳ ದುಃಖ ಪಟ್ಟರು. ಕಲ್ಲು ಹೊಲದಲ್ಲ ನಟ್ಟು ಕಡಿಸುತ್ತಿದ್ದರು. ನಡೆದು ಬಂದರೋ, ಓಡಿಬಂದರೋ, ಕುದುರೆಯ ಮೇಲಿಂದ ಬಂದರೋ, ಚಕ್ಕಡಿಯಿಂದ ಬಂದರೋ ಎಂಬುವನ್ನೇ ಅರಿಯರು. ಮನೆಗೆ ಬಂದುದೊಂದು ಗೊತ್ತು. ಜೀವನದಲ್ಲಿ ಇಂಥ ದುಃಖ ಸಂತಾಪ ವನ್ನು ಇಷ್ಟು ತೀವ್ರತರವಾಗಿ ಅನುಭವಿಸಿದುದು ಇದೇ ಮೊದಲು. ಆ ಹಳ್ಳಿಯಲ್ಲಿ ತಂದೆ ಸತ್ತಮೇಲೆ ಹೊಲ-ಮನೆಯನ್ನು ಮಾಡಹತ್ತಿ, ಗೌಡಿಕೆಯನ್ನು ಸ್ವೀಕರಿಸಿದಂದಿನಿಂದ ಸೋಲು, ದುಃಖ, ಚಿಂತೆಗಳನ್ನು ಒಂದು ದಿನ ಕೂಡ ಅನುಭವಿಸಿರಲಿಲ್ಲ. ಹೊಲಗಳು ವರ್ಷಂಪ್ರತಿ ಬೆಳೆಯನ್ನು ಕೊಡುತ್ತಿದ್ದವು. ತೋಟಪಟ್ಟಿಗಳು ಕೈತುಂಬ ಹಣ ವನ್ನು ಒದಗಿಸುತ್ತಿದ್ದವು. ಗೌಡಿಕೆಯು ಊರಲ್ಲಿ ಅಧಿಕಾರ, ಅಧಿಕಾರಿ ಗಳಲ್ಲಿ ಸೌಜನ್ಯವನ್ನು ತಂದುಕೊಡುತ್ತಿದ್ದವು. ತಮ್ಮಲ್ಲಿದ್ದ ವಿದ್ಯೆ ಹಿರಿತನಕ್ಕೆ ಮನ್ನಣೆಯ ಸ್ಥಾನವಾಗಿದ್ದಿತು. ಶತ್ರುಗಳನ್ನು ಬಾಯಿ ಕಟ್ಟುವ, ಸೀಳಿ ಒಗೆವ ಸಾಧನವಾಗಿದ್ದಿತು. ಅವರ ಬಾಯಿಯ ಶಬ್ದಕ್ಕೆ ಎಂಜಲತನವಿರಲಿಲ್ಲ. ಲೇಖಣಿಯ ತುದಿಗೆ ತುಕ್ಕು ಹಿಡಿದಿರ ಲಿಲ್ಲ. ಮಸಿಯ ಕುಡಿಕೆಯು ಬರಿದಾಗಿರಲಿಲ್ಲ. ಈ ಸರ್ವಮಾನ್ಯ ದಿಂದ ಅಧಿಕಾರಿಗಳೂ ಇವರ ಮಾತನ್ನು ನಡೆಸುತ್ತಿದ್ದರು. ತಲೆಯ

ಮೇಲೆ ಪಗಡಿಯಿಲ್ಲದಿದ್ದರೂ ಪೇಶವಾಯಿಯ ಅಮಲು ಸಾಗಿದ್ದಿತು. ಆದರೆ ಒಂದು ನಾಯಿ, ಯಃಕಶ್ಚಿತ ಒಂದು ಪ್ರಾಣಿ ಅವರ ಜೀವನದಲ್ಲಿ ಹುಳಿ ಹಿಂಡಿತು. ಈ ಮೊದಲು ಅದೆಷ್ಟೋ ನಾಯಿಗಳನ್ನು ಸಾಕಿದ್ದರು. ಕೆಲವು ಸತ್ತಿದ್ದವು. ಕೆಲವು ಬಾಡಿಹೋಗಿದ್ದವು. ತಾವಾಗಿ ಕೆಲವನ್ನು ಹೊಲೆಗೇರಿಗೆ ಅಟ್ಟಿದ್ದರು. ದುಃಖಪಟ್ಟಿರಲಿಲ್ಲ. ಹಳಹಳಿಸಿರಲಿಲ್ಲ. ಹಳೆಯ ನಾಯಿಯು ಸತ್ತಮೇಲೆ ಹೊಸದೊಂದು ಮರಿನಾಯಿಯು ಆ ಸ್ಥಳವನ್ನು ಅಲಂಕರಿಸಿ ಬರಿದಾದ ಸ್ಥಾನವನ್ನು ತುಂಬಿ ತೆಗೆಯುತ್ತಿದ್ದಿತು. ಆದರೆ ಮೋತ್ಯಾನ ಸಾವು ಸಾಮಾನ್ಯವೆನಿಸಲಿಲ್ಲ. ಅದು ದೇಸಾಯರ ಕಾಣಿಕೆ, ತಮ್ಮ ಮಾನಮರ್ಯಾದೆಯ, ಬುದ್ಧಿಯ ಬೆಳವಣಿಗೆಯ, ಪ್ರತೀಕವೆಂದುಕೊಂಡಿದ್ದರು. ಅದರ ಮೇಲೆ ತಮ್ಮ ಮನೆಯ ಕೀರ್ತಿಯ ಕಳಶವನ್ನು, ಭಾಗ್ಯಶ್ರೀಯನ್ನು ಹೇರಿದ್ದರು. ಅದಕ್ಕೆ ಕಾರಣವೇನಿದ್ದಿತೋ ತಿಳಿಯದು. ಗೆಳೆಯರು ಕೇಳಿದರೆ, ನನ್ನ ಮನಸ್ಸಾಕ್ಷಿ; ಇಷ್ಟೇ ನುಡಿಯುತ್ತಿದ್ದರು. ಈ ನಿರುತ್ತರದಿಂದ ಜನರು ಬಾಯಿಕಟ್ಟಿಕೊಂಡು ಸುಮ್ಮನಿರುತ್ತಿದ್ದರು. ಆದರೆ ಇಂದು ಮೋತ್ಯಾ ಸತ್ತಿತು.

ಮನೆಗೆ ಧಾವಿಸಿ ಬಂದರು. ಸತ್ತು ಮಲಗಿದ, ಕೊಳೆತು ನಾರುವ ನಾಯಿಯನ್ನು ಕಂಡರು. ದುಃಖವು ಉಕ್ಕಿ ಬಂದಿತು. ಕಣ್ಣಂಚಿನಿಂದ ಹನಿಗಳು ಉದುರಿದವು. ದೂರ ನಿಂತು ವಲ್ಲಿಯಿಂದ ಕಣ್ಣೊರಸಿಕೊಂಡರು. ಹೆಚ್ಚು ಹೊತ್ತು ನಿಲ್ಲದೆ ಹೊರಗೆ ಬಂದರು. ವಲ್ಲಿಯನ್ನು ಮುಖಕ್ಕೆ ಹಾಕಿಕೊಂಡು ಬಿಕ್ಕಹತ್ತಿದರು. ನೆರೆದವರು ಅನೇಕ ಬಗೆಯಿಂದ ಸಮಾಧಾನ ಹೇಳಿದರು. ಕೆಲವರು ನುಗ್ಗಿಬಂದ ನಗೆಯನ್ನು ಬಿಗಿದ ಹಲ್ಲುಗಳಲ್ಲಿ ಬಂಧಿಸಿದರು. ಕೊನೆಗೆ ಕಣ್ಣೊರಸಿಕೊಂಡು ಸಮಾಧಾನವನ್ನು ಹೊಂದಿ ರಾಜಣ್ಣನನ್ನು ಕರೆದರು. ಮಗನು ಬಳಿಗೆ ಬಂದು ತಂದೆಯ ಮುಖವನ್ನು ನೋಡಿದನು.

"ಹೋಗು ಮನೆಯ ಮುಂದಿನ ಕೈದೋಟದಲ್ಲಿ ಒಂದು ತೆಗ್ಗು ತೆಗೆಯಲು ಆಳಿಗೆ ಹೇಳು." ಎಂದು ಆಜ್ಞಾಪಿಸಿದರು.

ರಾಜಣ್ಣನು ಹಾಗೆಯೇ ನಿಂತನು.

“ಏಕೆ ನಿಂತೆ? ಹೋಗು ರಾಜಣ್ಣ.”

“ಅಲ್ಲ. ಅದು ನಮ್ಮ ಮನೆಯ ನಾಯಿ. ಸುಟ್ಟರೆ ಒಳ್ಳೆಯದಲ್ಲವೇ?” ಎಂದು ಬುದ್ಧಿಯನ್ನು ಖರ್ಚುಮಾಡಿ ಕೇಳಿದನು.

“ಅದೇಕೆ ರಾಜಣ್ಣ?”

“ನಾವು ಬ್ರಾಹ್ಮಣರು. ಹುಗಿಯಬಾರದು. ಸುಡಬೇಕು.”

ಅಪ್ಪಾರಾಯರು ದುಃಖದಲ್ಲಿದ್ದರೂ ಮೀಸೆಯಲ್ಲಿ ಸಣ್ಣ ನಗೆಯನ್ನು ತಂದು—“ಹಾಗೂ ಮಾಡಬಹುದು. ಆದರೆ ಹುಗಿಸುವದೇ ಒಳ್ಳೆಯದು. ಆಳುಗಳಿಗೆ ಹೇಳಿ ತೆಗ್ಗು ತೆಗೆಯಿಸು.” ಎಂದರು.

ರಾಜಣ್ಣನು—“ಆಗಲಿ.” ಎಂದು ಹೋದನು.

ಅಪ್ಪಾರಾಯರ ಮನಸಿಗೆ ಕೇವಲ ದಫನದಿಂದ ಶಾಂತವಾಗುವಂತಿರಲಿಲ್ಲ. ಅವರ ಆಂತರಿಕ ಮನಸು ಬೇರೊಂದನ್ನು ಚಿಂತಿಸುತ್ತಿದ್ದಿತು—

ಕೈದೋಟದಲ್ಲಿ ಅದನ್ನು ಹುಗಿಸಬೇಕು. ಅದರ ಮೇಲೆ ಒಂದು ಸುಂದರವಾದ ಸಮಾಧಿಯನ್ನು ಕಟ್ಟಬೇಕು. ಸಮಾಧಿಗೆ ಶಹಾಬಾದಿಯ ಕಲ್ಲುಗಳನ್ನು ಉಪಯೋಗಿಸಬೇಕು. ಕಲ್ಲುಗಳಿಗೆ ಹೊಳಪು ಹಾಕಿಸಬೇಕು. ಮೇಲೆ ಒಂದು ದುಂಡನ್ನ ಬಾನಿಯನ್ನು ರಚಿಸಿ ಅದರಲ್ಲಿ ರಕ್ತಗುಲಾಬಿಯ ಟೊಂಗೆಯನ್ನು ನೆಡಬೇಕು. ನಾಲ್ಕು ಮೂಲೆಗಳಲ್ಲಿ ನಾಲ್ಕು ದುಂಡನ್ನ ಕಟ್ಟೆಯನ್ನು ಕಟ್ಟಿಸಿ ದುಂಡುಮಲ್ಲಿಗೆಯ ಕಂಟಿಯನ್ನು ಹಚ್ಚಬೇಕು. ಒಂದು ಮಂಟಪವನ್ನು ಕಟ್ಟಿ ಅದರ ಮೇಲೆ ಬಳ್ಳಿಯನ್ನು ಹಬ್ಬಿಸಬೇಕು. ಬೇಸಗೆಯ ದಿನ ಆ ಮಲ್ಲಿಗೆಯ ಹೂಗಳು ಸಮಾಧಿಯ ಮೇಲೆ ಬೀಳಬೇಕು. ಒಂದಿಷ್ಟು ಅಂತರದ ಮೇಲೆ ತುಳಸಿಯ ತೋಟವನ್ನು ಹಚ್ಚಿ ನಿತ್ಯ ನೀರು ಹನಿಸುವ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕಾಗಿ ಒಂದು ಹೊಲವನ್ನು ಮೀಸಲು ತೆಗೆದಿಟ್ಟರೂ ಸರಿ. ಅಂದರೆ ಮೋತ್ಯಾನ ಆತ್ಮಕ್ಕೆ ಶಾಂತಿ. ನನ್ನ ಜೀವಕ್ಕೆ ಸಮಾಧಾನ ಎಂದು ಎಣಿಕೆ ಹಾಕಿದರು.

ಇದು ಕಾರ್ಯರೂಪಕ್ಕೆ ಬರುವದು ತಡವಾಗಲಿಲ್ಲ.

ನಾಯಿಯನ್ನು ತೆಗ್ಗಿನಲ್ಲಿ ಇರಿಸಿ ಮೂರು ಬೊಗಸೆ ಮಣ್ಣು ಚೆಲ್ಲಿದರು. ಐದು ಹನಿ ಕಣ್ಣೀರು ಉದುರಿಸಿದರು. ಕೈತೊಳೆದು ಕೊಂಡು ಸ್ನಾನಮಾಡಿ ಉಪ್ಪಾರನನ್ನು ಕರೆಸಿದರು. ಎಲ್ಲವನ್ನೂ ಹೇಳಿದರು. ಅಳತೆಯನ್ನು ಮಾಡಿಕೊಟ್ಟರು. ಸಂಚು ಹಣವನ್ನೂ ಕೊಟ್ಟರು. ಅವನು ಎಲೆ ತಿಂದು ಮನೆಗೆ ಹೋದನು.

ರಾಯರು ಅಂದು ಬರೀ ನೀರು ಕುಡಿದರು. ಊಟ ಮಾಡಲಿಲ್ಲ.

# ೧೦

ರಾಯರ ಮನೆಯ ಮುಂದೆ ಶಾಬಾದಿಯ ಸುಂದರವಾದ ಕಲ್ಲುಗಳು, ಮಜ್ಜಿಗೆಹಳ್ಳದ ಸಣ್ಣನ್ನ ಉಸುಕು, ಯಾದವಾಡದ ಸುಣ್ಣನ್ನ ಹರಳುಗಳು ಮೋತ್ಯಾನ ಸ್ಮಾರಕಕ್ಕಾಗಿ ಬಂದ ಸಂತಸದ ಸುದ್ದಿಯನ್ನು ತಿಳಿಸುವಂತೆ ನೆಲಕ್ಕೆ ಹೊಂದಿ ನಿಂತುಕೊಂಡವು. ಒಂದು ಮಗ್ಗಲಿಗೆ ಪದ್ಮಾಸನವನ್ನು ಹಾಕಿ ಕುಳಿತ ಸುಣ್ಣದಭಟ್ಟಿಯು ಹೊಟ್ಟೆಯಲ್ಲಿ ಹರಳುಗಳನ್ನು ತುಂಬಿಕೊಂಡು ಹೊತ್ತಿದ ಜಠರಾಗ್ನಿಯಿಂದ ಹರಳುಗಳನ್ನು ಹೂವಾಗಿ ರೂಪಾಂತರಿಸುತ್ತ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಈ ಸುದ್ದಿಯನ್ನು ಡಂಗುರ ಹೊಯಿದು ಸಾರುವಂತೆ ಹೊಗೆಯ ಕೈಗಳನ್ನು ಮೇಲೆ ಮೇಲೆ ಎತ್ತಿ ಮುಂದೆ ಮುಂದೆ ಸಾಗಿದ್ದಿತು. ಉಪ್ಪಾರಟ್ಟಿಯ ಉಪ್ಪಾರರು ಚಾಣಗಳನ್ನು ಕುಲುಮೆಗಳಲ್ಲಿ ಕಾಯ ಹಾಕಿದ್ದರು. ಗಚ್ಚಿನವರು ಗಾಣದಲ್ಲಿ ಉಸುಕು ಸುಣ್ಣ ಬೆರಸಿ ಎತ್ತುಗಳನ್ನು ಹೂಡಿದ್ದರು. ನೆಲವನ್ನು ಅಳೆದದ್ದಾಯಿತು. ಬೂದಿಯಿಂದ ಗೆರೆ ಹಾಕಿದ್ದಾಯಿತು. ಪೂಜೆಯಾಯಿತು. ಕಾಯಿ ಒಡೆದು ಕಪ್ಪೂರ ಹಚ್ಚಿದ್ದಾಯಿತು. ಚುರಮುರಿ ತಿಂದರು. ನೆಲವನ್ನು ಗಟ್ಟಿಮಾಡುವ, ತೆಗ್ಗು ತೆವರುಗಳನ್ನು ಸರಿಪಡಿಸುವ ಕೆಲಸ ಭರದಿಂದ ಸಾಗಿತು. ಅಪ್ಪಾರಾಯರ ಒಂದು ಕಣ್ಣಲ್ಲಿ ಹನಿ, ಇನ್ನೊಂದು ಕಣ್ಣಲ್ಲಿ ಸಂತಸ. ಒಂದು ಕೆನ್ನೆಯ ಮೇಲೆ ಚಿಂತೆಯ ಗೆರೆ, ಇನ್ನೊಂದರ ಮೇಲೆ

ಸಂತೋಷದ ಉಬ್ಬು. ಒಂದು ತುಟಿ ಸಪ್ಪಗೆ, ಇನ್ನೊಂದರ ಮೇಲೆ ಆನಂದಾತಿರೇಕದ ಕೆಂಪು ಛಾಯೆ. ಒಮ್ಮೆ ಬಾಯಿಂದ ಹ! ಇನ್ನೊಮ್ಮೆ ಹೂ! ಸಾಗಲಿ! ಎಂಬ ಉಭಯ ಭಾವನೆಗಳಿಂದ ಮನಸನ್ನು ಹೆರಿಬಿಟ್ಟು ಕೆಲಸವನ್ನು ಒತ್ತರಿಸುತ್ತಿದ್ದರು.

ಮನೆಯಲ್ಲಿಯ ಮಮತೆಯವರ ಮೊದಲಿನ ಸಾವಿನಿಂದ ಎಲ್ಲರ ಜೀವನದಲ್ಲಿ ಇಂಥ ತಳಮಳವು ಹುಟ್ಟುವದೇ? ಎಂದು ಕೇಳಿಕೊಳ್ಳುವರು. ಆಗ ಸ್ನೇಹದ ಸೆಲೆಯು, ಪ್ರೀತಿಯ ನೆರೆಯು ಉಕ್ಕುವದು. ಕರ್ತವ್ಯದ ರುಕ್ಷವಾದ ಗಾಳಿಯು ಬೀಸಲು ಕಾರ್ಯಕ್ಕೆ ಮತ್ತೆ ಇಳಿಯುವರು, ಎಂದೂ ಅರ್ಥ ಮಾಡುವರು. ಕೆಲಸದವರು ಕೆಲಸವನ್ನು ಸಾಗಿಸಿದ್ದರು. ಕಲ್ಲಿನ ಕಟಕಟ ಸಪ್ಪಳ, ಗಾಣದ ಮುರುಮುರು ನಾದ, ಭಟ್ಟಿಯ ಚಟಪಟ ಧ್ವನಿ ನಡೆದಿದ್ದಿತು. ರಾಯರು ದವಡೆಯಲ್ಲಿ ತಂಬಾಕಿನ ಮುದ್ದೆಯನ್ನು ಹಿಡಿದು ತುಟಿಗಳನ್ನು ಮೊಲಿದು ಕೊಂಡು ನಿರೀಕ್ಷಣೆಯನ್ನು ನಡೆಸಿದ್ದರು. ಒಬ್ಬ ಹಳಬನು ಬಂದು ರಾಮ್ರಾಮು ಮಾಡಿದನು.

"ಏನೋ!" ಎಂದು ನುಡಿದರು.

"ಕೆರೆಯಲ್ಲಿ ಒಂದು ಹೆಣ...."

"ಹೆಣ!"

"ಹೌದು. ಹೆಂಗಸಿನದು."

"ಯಾರದೋ?"

"ಹೆಂಗಸಿನದು ತಿಳಿಯದು. ಮುಖವು ನೀರಲ್ಲಿ ಮುಳುಗಿದೆ. ಅದಕ್ಕೆ ಬಂದಿರುವೆ." ಎಂದು ಮಾತು ಮುಗಿಸಿದನು.

"ಬಂದೆ ನಡೆ. ಕೆರೆಯ ದಂಡೆಯ ಮೇಲೆ ನೀನಿರು." ಎಂದು ಆಜ್ಞಾಪಿಸಿ ಕಳಿಸಿದರು.

ಗೌಡರು ವಿಚಾರದಲ್ಲಿ ಮಗ್ನರಾದರು. ಯಾರದಾಗಿರಬೇಕು? ತಿಳಿಯಲಿಲ್ಲ. ಹಳ್ಳಿಯಲ್ಲಿ ಇಂಥ ಹೆಂಗಸರ ಸಾವು ಅಧಿಕವಾಗಿದ್ದಿತು. ಗಂಡ-ಹೆಂಡರ ಬಡಿದಾಟದಿಂದ ವರುಷಕ್ಕೆ ಏಳೆಂಟು ಹೆಣಗಳು

ಕೆರೆಯಲ್ಲಿ ತೇಲುತ್ತಿದ್ದವು. ಸುಗ್ಗಿಯಕಾಲಕ್ಕೆ, ಮಹಾನೋಮಿ, ದೀವಳಿಗೆ, ಹೋಳೀ ಹುಣ್ಣಿಮೆ, ಓಕಳಿಯ ಸುಮಾರಿಗೆ ಗಂಡಸರ ಕೊಲೆಯೂ ನಡೆಯುತ್ತಿದ್ದಿತು. ಬಡತನದ ಕಾಟಕ್ಕೆ ಮನೆಯ ತೊಲೆಗೆ, ಊರ ಹೊರಗಿನ ಗಿಡಕ್ಕೆ ಗಂಡಸರ, ಹೆಂಗಸರ, ತರುಣರ ಹೆಣಗಳೂ ತೂಗಾಡುತ್ತಿದ್ದವು. ಅಲ್ಲದೆ ಬಣಬೆಗಳನ್ನು ಸುಡುವದು, ಬೆಳೆಗಳಿಗೆ ಉರಿ ಹಚ್ಚುವದು, ಹಗೆವುಗಳಿಗೆ ನೀರು ಬಿಡುವದು, ಮನೆಗಳನ್ನು ಒಡೆಯುವದು ಸಾಮಾನ್ಯವಾಗಿದ್ದವು. ಮೂಗು, ಕಿವಿ, ಕೈ ಕಾಲುಗಳ ಬೆರಳುಗಳನ್ನು ಕತ್ತರಿಸುವದು ಹೆಂಗಸರು ತಲೆಯೊಳಗಿನ ಹೇನುಗಳನ್ನು ಒರೆದಂತೆ ಅಲಕ್ಷಿತ ಸಂಗತಿಗಳಾಗಿದ್ದವು. ಇವು ಸಮಾಜಘಾತುಕ ವಿದ್ರೋಹದ ಕಾರ್ಯಗಳೇನೋ ನಿಜ. ಆದರೆ ಅಪ್ಪಾರಾಯರಿಗೆ ಇವೆಲ್ಲ ಕುಟುಂಬ ರಕ್ಷಣೆಯ ಮಾರ್ಗಗಳಾಗಿದ್ದವು. ಈ ಅನ್ಯಾಯಗಳು ಅಬಾಧಿತವಾಗಿ ಸಾಗಲೆಂದು ಅವರ ಇಚ್ಛೆಯು ಇರಲಿಲ್ಲ. ಬಂದ ಪ್ರಸಂಗವನ್ನು ವ್ಯರ್ಥವಾಗಿ ಬಿಡುತ್ತಿರಲಿಲ್ಲ. ಅಧಿಕಾರಿಗಳೂ ಈ ತತ್ವವನ್ನು ಅನುಮೋದಿಸುತ್ತಿದ್ದರು. ಹೆಂಗಸು ಸತ್ತುದು ದುಃಖದ ಮಾತು. ಅದನ್ನು ಒಪ್ಪುತ್ತಿದ್ದರು. ಆದರೂ ಅದನ್ನು ಸುಧಾರಿಸಿಕೊಂಡು ಹೋಗುವಲ್ಲಿ ಅವರ ಬುದ್ಧಿ ಚಕ್ರದ ಅನೇಕ ಹಲ್ಲುಗಳು ಮೊಂಡವಾಗಬೇಕಾಗುತ್ತಿದ್ದವು. ಆ ಮೊಂಡ ಹಲ್ಲುಗಳನ್ನು ಮಸೆದುಕೊಂಡು ಮುಂದಿನ ಬೇಟೆಗೆ ಹೋಗುತ್ತಿದ್ದರು. ಚಂಚಿಯನ್ನು ಬಿಚ್ಚಿದರು. ಬಿಳಿಯ ಅಡಕೆಯನ್ನು ಕಾಗದದಂತೆ ಕತ್ತರಿಸಿದರು. ಕೆಂಗೆರೆಯ ಎಲೆಗಳನ್ನು ತೆಗೆದು ಸುಣ್ಣ ಕೆದರಿ ತೀಡಿದರು. ಬಾಯಲ್ಲಿ ಹಾಕಿಕೊಂಡು ಮೆಲುಕಾಡಿಸ ಹತ್ತಿದರು. ಕಾಚು ಚಿವುಟಿಕೊಂಡು ಬಾಯಿಗೆ ಒಗೆದರು. ಏಕರಸವಾಗಿ ರಕ್ತದ ಪಾಕಾಗಲು ಒಂದು ಗುಟುಕು ಪಿಚಕ್ಕೆಂದು ಉಗುಳಿದರು. ಚಿಮುಟಿ ತಂಬಾಕು ತೆಗೆದು ಎಡಗೈ ಅಂಗೈಯಲ್ಲಿ ಇಟ್ಟು ಮೆದ್ದಿ ಪುಡಿ ಮಾಡಿದರು. ಪಟ್ಟೆಂದು ನಾಲ್ಕು ಬೆರಳುಗಳಿಂದ ಬಡಿದರು. ಅಂಗೈ ತಳದಲ್ಲಿ ಏಕೀಕೃತವಾಗುವಂತೆ ಸುತ್ತಲಿನ ಏರುಗ್ಗೆ ತಳವನ್ನು ತರ್ಜನಿ

ಯಿಂದ ಹೊಡೆದರು. ಬಾಯಿಗೆ ಹಾಕಿಕೊಂಡರು. ದವಡೆಯಲ್ಲಿ ನಾಲಗೆಯಿಂದ ಸರಿಸಿ ಹಿಡಿದರು. ಕೈ ತಳವನ್ನು ಊದಿ ಹತ್ತಿದ ತಂಬಾಕಿನ ಸಣ್ಣ ಪುಡಿಯನ್ನು ಹಾರಿಸಿದರು. ತಂಬಾಕಿನ ಅಮೃತದ ರುಚಿಯು ನಾಲಗೆಗೆ ಇಳಿಯ ಹತ್ತಿತು. ನಾಲಗೆಯ ಜ್ಞಾನತಂತು ಗಳು ರಸಮಾಧುರ್ಯವನ್ನು ತಲೆಗೆ ತಿಳಿಸಿದವು. ತಲೆಯು ಮಾಧುರ್ಯ ವನ್ನು ಸವಿದು ಶಾಂತವಾಯಿತು. ಕೂಡಿದ ರಸವನ್ನು ಉಗುಳಿ "ಏ ಹಳಬನೆಲ್ಲಿ ?" ಎಂದರು.

ಒಬ್ಬನು ಬಂದು ನಿಂತನು.

"ಹೋಗು, ಮೇಲ್‌ಮನೆಯ ಸಿದರಾಯಿ, ಕೆಳಮನೆಯ ಮುಕುಂದಪ್ಪ, ಸಾವುಕಾರ ಸಿದ್ದಯ್ಯ, ಒಂಟಿಯ ಮಲ್ಲಪ್ಪ, ಬರಿಗಾಲಿ ಭೂಪಾಲ ಇವರನ್ನು ಕರೆದುಕೊಂಡು ಬಾ, ನಾನು ಆ ಕಡೆಗೆ ಹೋಗಿ ರುವೆ. ಹೋಗು." ಎಂದು ಆಜ್ಞಾಪಿಸಿದರು.

ಹಳಬನು ಹೋದನು. ರಾಯರು ಕೆರೆಯ ದಂಡೆಯ ಹಾದಿ ಯನ್ನು ಹಿಡಿದರು. ದಾರಿಯಲ್ಲಿ ಎಲ್ಲ ಹಿರಿಯರು ಕೂಡಿದರು. ಸತ್ತವಳ ಸುದ್ದಿಯನ್ನೇ ಮಾತಾಡುತ್ತ ಕೆರೆಗೆ ಬಂದರು. ಕೆಲಸವಿಲ್ಲದ ಜನ ಹಿಂಡುಗಟ್ಟಿಕೊಂಡು ಬಂದಿದ್ದಿತು. ಗೌಡರು, ಊರ ಹಿರಿಯರು ಬರಲು ಸ್ಥಳ ಮಾಡಿಕೊಟ್ಟಿತು. ರಾಯರು ದಂಡೆಯ ಮೇಲಿನ ಒಂದು ಗಿಡದ ನೆಳಲಲ್ಲಿ ವಿರಮಿಸಿದರು. ಪಂಚರೂ ಕುಳಿತರು. ಉಳಿದವರು ಇವರನ್ನು ಬಳಸಿ ನಿಂತರು. ಕೆರೆಯ ಪೃಷ್ಠಭಾಗ ನಿಚ್ಚಳವಾಗಿ ಕಾಣುತ್ತಿದ್ದಿತು. ಸತ್ತವಳೂ ನೀರ ಮೇಲೆ ತೇಲು ತ್ತಿದ್ದಳು.

ಸತ್ತವಳು ತಂಗವ್ವನೆಂದು ನೂರಾರು ತರ್ಕಮಾಡಿ ಸಿದ್ಧಾಂತಕ್ಕೆ ಬಂದ ಕೆಲವು ಜನರು ಗೌಡರಿಗೆ ನಿವೇದಿಸಿದರು.

"ಸಾಯಲಿಕ್ಕೆ ಏನಾಗಿದ್ದಿತು ಆ ಚೆಲುವೆಗೆ ?" ರಾಯರೆಂದರು.

ಜನರು ಮಾತಾಡಲಿಲ್ಲ.

ಹೆಡ್‌ಕ್ವಾರ್ಟರದಿಂದ ಪೋಲೀಸ ಅಧಿಕಾರಿಯು ಬರಲು ಒಂದಿಷ್ಟು

ತಡವಾಯಿತು. ಆವರೆಗೆ ರಾಯರ ಚಂಚಿ ಬರಿದಾಯಿತು. ಹಳಬ ನನ್ನು ಮನೆಗೆ ಕಳಿಸಿ ಮತ್ತೆ ತುಂಬಿಸಿ ತರಿಸಿದರು. ಆಗಲೆ ಪೋಲೀಸ ಅಧಿಕಾರಿಯು ಬಂದನು. ಎಲ್ಲರೂ ಕೂಡಿ ಹೆಣವನ್ನು ತೆಗೆಯಲು ಆಜ್ಞಾಪಿಸಿದರು. ಹೊಲೆಯರು ನೀರಲ್ಲಿ ಇಳಿದು ಹೆಣವನ್ನು ಜಗ್ಗಿದರು. ಹೆಣವು ತೀರ ದಂಡೆಗೆ ಬಂದಿತು. ಇನ್ನು ಅದನ್ನು ಎತ್ತಿ ಮೇಲೆ ತೆಗೆಯಬೇಕು. ಒಬ್ಬನು ಕಾಲ ಕಡೆಗೆ ಕೈ ಹಾಕಿದನು. ಇನ್ನೊಬ್ಬನು ತಲೆಯ ಕಡೆಗೆ ಕೈ ಹಾಕಿದನು. ಒಂದಿಷ್ಟು ಮೇಲೆತ್ತಿದರು. ಹೆಣದ ಇಳಿಬಿದ್ದ ಕೈಯಿಂದ ಒಂದು ವಸ್ತುವು ಜಾರಿ ನೀರಲ್ಲಿ ಬಿದ್ದು ಮುಳುಗಿತು. ಹೆಣ್ಣು ಹೆಣವು ಮುಂದೆ ಬಂದಿತು. ಜಾರಿ ಮುಳುಗಿದ ವಸ್ತು ಮೇಲೆದ್ದಿತು. ಒಬ್ಬ ಹೊಲೆಯನ ಕೈಗೆ ತಾಕಿತು. ಹೌಹಾರಿ ಹಿಂದೆ ಸರಿದನು. ಏನೆಂದು ನೋಡಿದನು. ಕೊಳೆತ ಚೀಲದ ಒಂದು ಭಾಗದಿಂದ ಕೊಳೆತು ನಾರುವ ನಾಯಿಯ ಮುಖವು ಕಂಡಿತು.

"ಅಪ್ಪಾ ಇವರೇ, ಒಂದು ನಾಯಿ ಇದೆ." ಎಂದು ಕೂಗಿದನು.

"ನಾಯಿ !" ರಾಯರು ಪ್ರಶ್ನಿಸಿದರು.

"ಹೌದು."

"ಅದನ್ನೂ ತೆಗೆಯಿರಿ."

ಎರಡೂ ಹೆಣಗಳು ಮೇಲೆ ಬಂದವು. ಒಂದು ತಂಗವ್ವನ ಹೆಣ. ಇನ್ನೊಂದು ಚಿನ್ನಯ್ಯನ ಪ್ರೀತಿಯ ಕರಿಯ ನಾಯಿಯ ಹೆಣ. ಒಂದು ತಾಜಾ ಇದ್ದಿತು. ಇನ್ನೊಂದು ಕೊಳೆತು ವಿಕೃತ ವಾಗಿದ್ದಿತು.

ಪಂಚನಾಮೆಯ ಕೆಲಸ ಆರಂಭವಾಗಲು ನಾಯಿಯ ಸಾವು ಎಳ್ಳಷ್ಟೂ ಉಪಯೋಗಕ್ಕೆ ಬರಲಿಲ್ಲ. ಅದರ ಹೆಸರನ್ನು ಪಂಚ ನಾಮೆಯಲ್ಲಿಯೂ ಸೇರಿಸಲಿಲ್ಲ. ತಂಗವ್ವನ ಸಾವೇ ಮುಖ್ಯ ಸಂಗತಿ ಯಾಗಿ ನಿಂತಿತು. ಜನರ ನೂರು ತರ್ಕ, ಸಾವಿರ ಹೇಳಿಕೆ, ಅಷ್ಟೇ ಊಹೆ ನಿರುಪಯೋಗಿಯಾಗಿ–ಗೌಡರು ಮತ್ತು ಆ ಪಂಚರು ಹೇಳಿದ

ಒಂದೆರಡು ಮಾತುಗಳು ಮುಕ್ತಾಯಕ್ಕೆ ಕಾರಣವಾದವು—

ತಂಗವ್ವ ವಿಧವೆ. ಗಂಡ ಸತ್ತು ೭-೮ ವರುಷಗಳಾಗಿರಬೇಕು. ಅಂದಿನಿಂದ ವ್ಯಭಿಚಾರ ಮಾಡುತ್ತಿರುವಳು. ಈವರೆಗೆ ಹೇಗೋ ಮುಚ್ಚಿಕೊಂಡು ಬಂದಳು. ಈಗ ಇವಳು ಗರ್ಭವತಿ. ೪-೫ ತಿಂಗಳು ಆಗಿರಬೇಕು. ನಮಗೆ ತಿಳಿದು ಬಂದಿತು. ಕರೆಸಿ ಕೇಳಿದೆವು. ಒಪ್ಪಿದಳು. ರಕ್ಷಿಸುವೆನೆಂದು ವಚನವಿತ್ತಳು. ಇದು ಈ ಪಂಚರಿಗೆಲ್ಲ ಗೊತ್ತು. ತನ್ನ ಆಟ ಬೈಲಿಗೆ ಬಂದಿತೆಂದು ಕೆರೆಗೆ ಹಾರಿ ಪ್ರಾಣ ಕೊಟ್ಟಿರುವಳು ಎಂದು ಗೌಡರು ಸಂಕ್ಷೇಪವಾಗಿ ಪೋಲೀಸ ಅಧಿಕಾರಿಗೆ ತಿಳಿಸಿದರು.

ಇದು ಸತ್ಯವೆಂದು ಪಂಚರು ಒಪ್ಪಿದರು.

ಪೋಲೀಸ ಅಧಿಕಾರಿಗೆ ಹೆಚ್ಚಿನ ಕಿತಾಪತಿಯು ಅನವಶ್ಯವೆನಿಸಿತು. ಹಾಗೆಯೇ ಬರೆದುಕೊಳ್ಳಹತ್ತಿದನು. ಅಪ್ಪಾರಾಯರು ತಮ್ಮ ಮಾತು ಪೋಲೀಸ ಅಧಿಕಾರಿಯ ಮನಸಿಗೆ ನಾಟುವಂತೆ 'ನಮ್ಮ ಹಳ್ಳಿಯ ನೂರಾರು ತರುಣರ ಕೈಯಲ್ಲಿ ಪರಟಿಯನ್ನು ಕೊಟ್ಟು ಹತ್ತಿಪ್ಪತ್ತು ಗರತಿಯರ ಸಂಸಾರದಲ್ಲಿ ಮಣ್ಣುಹೊಯಿದು, ಊರ ಬಸವಿಯಾಗಿ ಮೆರೆದು ಇಂದು ಅಭಿಮಾನಧನರಂತೆ ಸತ್ತಿರುವಳು. ರಾಯರೆ, ಊರಲ್ಲಿ ಇವಳ ಕುಣಿತವೇನು; ಒಯ್ಯಾರವೇನು! ಬೆಡಗೇನು! ಬಿನ್ನಾಣವೇನು! ಸಿನೇಮಾ ನಟಿಯರು ಈಕೆಯ ಮುಂದೆ ಮೂಗು ತಿಕ್ಕಿದರು. ಉಟ್ಟದ್ದನ್ನು ಉಡುತ್ತಿರಲಿಲ್ಲ. ತೊಟ್ಟದ್ದನ್ನು ತೊಡುತ್ತಿರಲಿಲ್ಲ. ಕಣ್ಣಲ್ಲಿ ಮೂಡಿದವನನ್ನು ಕಾಲಲ್ಲಿ ತುಳಿದಳು. ಕರೆದವನನ್ನು ಛೀಮಾರಿ ಮಾಡಿದಳು. ಹಾಡಿ ಹೆರಸಿದವನನ್ನು ಓಡಿಸಿದಳು. ಒಂದು ರೂಪದಿಂದ, ಒಂದು ಒಯ್ಯಾರದಿಂದ, ಒಂದು ಬಡಿವಾರದಿಂದ ಎಷ್ಟೊಂದು ಗಂಡುಗಳನ್ನು ಆಳಿದಳು! ಗುದ್ದಲಿಯಿಂದ ಬದುಕುವವ ಗುದ್ದಲಿಯನ್ನು ಮಾರಿಕೊಂಡ, ಕೊಡಲಿಯಿಂದ ಬಾಳಿದವ ಕೊಡಲಿಯನ್ನು ಅಡವಿಟ್ಟ; ನೇಗಿಲದಿಂದ ಜೀವಿಸಿದವ ನೇಗಿಲನ್ನು ಕಳೆದುಕೊಂಡ. ಕೊನೆಗೆ ಪ್ರಾಣವನ್ನೂ

ಕಳೆದುಕೊಂಡರು. ನಮ್ಮೂರ ವಿಷ ಹೋಯಿತು." ಎಂದು ಬಾಯಿ ತುಂಬ ಆಕೆಯನ್ನು ಹಳಿದರು.

ಬರೆಯುವದಾದ ಮೇಲೆ ಅಧಿಕಾರಿಯು ಆಕೆಯ ಕೈಕಾಲು ನೋಡಿದ. ಅಲ್ಲಲ್ಲಿ ಪರೀಕ್ಷಿಸಿದ. ಆದರೆ ಬಡಿದು ಕೊಂದುದಾಗಲಿ, ಕತ್ತು ಹಿಸುಕಿ ಚಲ್ಲಿದುದಾಗಲಿ ಅವನಮಟ್ಟಿಗೆ ಕಂಡು ಬರಲಿಲ್ಲ. ಅಲ್ಲದೆ ಆಕೆಯ ಉಗುರಿನ ಕಣ್ಣಲ್ಲಿ ನೆಲವನ್ನು ಕೆದರಿದ ಗುರುತು, ಕೈಕೆತ್ತಿದ, ಬೆರಳು ತರೆದ ಸಣ್ಣ ಗಾಯುಗಳು ಕಂಡವು. ಇದು ಆತ್ಮಹತ್ಯವೆಂದು ನಿರ್ಧರಿಸಿದನು. 'ವ್ಯಭಿಚಾರವು ಬೈಲಿಗೆ ಬಂದುದಕ್ಕೆ ಸತ್ತಿರುವಳು.' ಎಂದು ಬರೆದು ಮುಗಿಸಿದನು. ಆದರೆ ಅಂದು ರಾಯರ ಬಾಯಿ ತುಂಬಲಿಲ್ಲ. ಕೈ ಬೆಚ್ಚಗಾಗಲಿಲ್ಲ. ಕೆರೆಯ ತಣ್ಣೀರಲ್ಲಿ ಕೈತೊಳೆದು ಕೊಂಡು ಬಂದರು.

ಅಧಿಕಾರಿಯು ಮೇಲೆದ್ದನು. ಗೌಡರೂ ಪಂಚರೂ ಎದ್ದರು.

"ಸಿದರಾಯಿಯವರೇ, ಅವಳ ಅಂತ್ಯ ವಿಧಿ?" ಗೌಡರು ಕೇಳಿದರು.

"ಯಾರು ಮಾಡಬೇಕು ?" ತಿರುಗಿ ಪ್ರಶ್ನಿಸಿದರು.

"ಅವರ ಬಳಗದವರಿರುವರಲ್ಲ."

"ಇರುವರು."

"ಅವರು ಮಾಡುವದಿಲ್ಲವೇ ?"

"ಜೀವದಿಂದಿರುವವರೆಗೆ ಅವರೆಲ್ಲ ಈಕೆಯ ಶತ್ರುಗಳು."

"ಈಗ ಸತ್ತಿರುವಳು."

"ನಮಗೆ ಹೇಗೆ ತಿಳಿಯಬೇಕು. "

"ಇವಳು ಸತ್ತಿರುವಳೆಂದು ತಿಳಿದಾಕ್ಷಣವೇ ಎಲ್ಲರೂ ಗಾಬರಿ ಯಾಗಿ ತಾಲೂಕಿಗೆ ಹೋಗಿರುವರಂತೆ !" ಮುಕುಂದನೆಂದ.

"ತಾಲೂಕಿಗೇನಿಲ್ಲ. ಎಲ್ಲಿಯೋ ಹೋಗಿರುವರು." ಮಲ್ಲಪ್ಪ ನುಡಿದನು.

"ಯಾರಾದರೂ ಮಾಡುವವರಿದ್ದರೆ ಮುಂದೆ ಬಂದಾರು." ಎಂದು ಗೌಡರು ನುಡಿದರು. ಆದರೆ ಯಾರೂ ಬರಲಿಲ್ಲ. ಬರುವ ಲಕ್ಷಣವೂ

ಕಂಡು ಬರಲಿಲ್ಲ. ಕಡೆಗೆ "ಒಂದರ್ಧ ತಾಸು ನೋಡಿರಿ. ಅವರ ಮನೆಯವರು ಯಾರಾದರೂ ಬಂದರೆ ಒಪ್ಪಿಸಿರಿ. ಇಲ್ಲದಿದ್ದರೆ ನೀವೇ ಆಕೆಯನ್ನು ಹೂಳಿ ಬಿಡಿರಿ." ಎಂದು ಹೊಲೆಯರಿಗೆ ಹೇಳಿ ಮನೆಯ ಕಡೆಗೆ ಸಾಗಿದರು.

ಪಾಪ! ನಮ್ಮೂರ ತರುಣರ ಕಣ್ಣಲ್ಲಿ ರಂಭೆಯಾಗಿ ಮೆರೆದ, ಊರ್ವಸಿಯಾಗಿ ಕಂಡ, ಮೇನಕೆಯಾಗಿ ತಿರುಗಾಡಿದ ತಂಗವ್ವನು ಹೊಲೆಯರಿಂದ ನಾಲ್ಕು ಹಿಡಿ ಮಣ್ಣನ್ನು ಎರಚಿಕೊಳ್ಳಬೇಕಾಯಿತು.

ನಾಯಿಯನ್ನು ಎಳೆದು ತಂದು ಬೇಲಿಯ ಕಡೆಗೆ ಒಗೆದರು. ತಂಗವ್ವನು ತನ್ನ ಮೂರು ಮೊಳದ ನೆಲದ ಕಡೆಗೆ ಸಾಗಿದಳು. ಊರವರು ಮನೆಯ ಹಾದಿಯನ್ನು ಹಿಡಿದರು.

ನಾಯಿಯ ಸುತ್ತುಮುತ್ತು ಹದ್ದು, ರಣ ಹದ್ದುಗಳು ಕುಳಿತು ಈ ಅಮೌಲ್ಯ ಪಂಚಾಮೃತವನ್ನು ಯಾವ ಕಡೆಯಿಂದ ತಿನ್ನಲು ಆರಂಭಿಸುವ! ಎಂದು ಆಲೋಚಿಸುತ್ತಿದ್ದವು.

# ೧೧

ಚಿನ್ನಯ್ಯನು ಭತ್ತವನ್ನು ಹೇರಿಸಿಕೊಂಡು ಊರಿಗೆ ಬಂದನು. ಆದರೆ ಬರುವ ಮುಂದಿನ ಸಂತೋಷ ಊರು ಸೇರಿ ಎರಡು ತಾಸಿನಲ್ಲಿ ಮಾಯವಾಯಿತು.

ಹತ್ತು-ಇಪ್ಪತ್ತು ದಿನಗಳಿಂದ ನಿಷ್ಠುರ ಬ್ರಹ್ಮಚರ್ಯೆಯಿಂದ ಕಳೆದ ಚಿನ್ನಯ್ಯನು ಇಂದೂ ಆ ವ್ರತವನ್ನು ಯಥಾ ಸಾಂಗವಾಗಿ ನೆರವೇರಿಸಬೇಕಾಯಿತು. ಮಲೆನಾಡಿನ ವಾಸದ ಅಷ್ಟು ದಿನಗಳನ್ನು ನಿತ್ಯದ ಕರ್ತವ್ಯದಲ್ಲಿ ಕಳೆದಿದ್ದನು. ಒಮ್ಮೊಮ್ಮೆ ರಾತ್ರಿ ತಂಗವ್ವನ ಸಹವಾಸವನ್ನು ಜೀವವು ನೆನೆಯುತ್ತಿದ್ದಿತು. ಅವಳ ಮುಖವನ್ನು ಕಣ್ಣು ಮುಂದೆ ಕೊರೆದು ಮುತ್ತಿಡುತ್ತಿದ್ದಿತು. ಅವಳ ರೂಪವನ್ನು ನಿರ್ಮಿಸಿಕೊಂಡು ದೃಷ್ಟಿ ಸಂತಸ ಪಡುತ್ತಿದ್ದಿತು. ಅವಳು ಕೊಟ್ಟ ಕರವಸ್ತ್ರ, ಅದರ ಮೇಲಿನ ಗುಲಾಬಿಯ ಬಳ್ಳಿ ಸ್ಪರ್ಶಸುಖವನ್ನೀಯುತ್ತಿದ್ದಿತು. ಈ ಭಾವೋನ್ಮಾದ ಸುಖದಲ್ಲಿ ದಿನಗಳೆದು ಇಂದು ಪ್ರತ್ಯಕ್ಷ ಸೃಷ್ಟಿಯಲ್ಲಿ ಕಾಲಿಟ್ಟಿರುವನು. ಶರೀರದ ಇಂದ್ರಿಯಗಳು, ಅವುಗಳ ವಾಸನೆಗಳು ನೂರು ಬಗೆಯ ಆಶಾ ಚಿತ್ರಗಳನ್ನು ಹೆಣೆದಿವೆ. ಅವುಗಳ ಸಿದ್ಧಿಗೆ ಸಾಧನಗಳನ್ನು ಅಳವಡಿಸಿವೆ. ತೃಪ್ತ ಸುಖದ ಬಟ್ಟಲನ್ನು ತುಂಬಿಕೊಂಡಿವೆ. ಆದರೆ ತಂಗವ್ವ ಇಂದಿಗೆ ಸತ್ತು ವಾರದ ಮೇಲಾಗಿದೆ. ಪರ್ವತದ ಮೇಲಿಂದ ನೂಕಿದಂತೆ ಮನಸು

ಕಠೋರವಾಯಿತು. ಕಲ್ಲಾಯಿತು. ಅತೃಪ್ತ ಜೀವ, ಅತೃಪ್ತ ಭಾವನೆ, ಅತೃಪ್ತ ವಾಸನೆಗಳು ಭುಗಿ ಭುಗಿಭುಗಿಲೆಂದು ಉರಿವೆದ್ದವು.

ರಾತ್ರಿ ಊಟ ಮಾಡಿ ಮಂಚದ ಮೇಲೆ ಮಲಗಿದನು. ನೆರೆ ಮನೆಯ ಸಿದ್ದಯ್ಯ ಮೆಲ್ಲಗೆ ಬಂದನು. ಚಿನ್ನಯ್ಯನನ್ನು ಕಂಡು ನಮಸ್ಕರಿಸಿದನು. ಅಯ್ಯನು ಕರೆದು ಬರಮಾಡಿಕೊಂಡನು.

"ನೀವು ಈಗ ಎಂಟು ದಿನಗಳ ಹಿಂದೆಯೇ ಬರುವವರಿದ್ದಿರಿ ಚಿನ್ನಯ್ಯನವರೇ, ತಡವೇಕಾಯಿತು?" ಸಿದ್ದಯ್ಯ ಕೇಳಿದನು.

"ರಾಸಿಯು ಬೇಗನೆ ಆಗಲಿಲ್ಲ. ಏಳೆಂಟು ದಿನಗಳು ಹೆಚ್ಚಿಗೆ ಹಿಡಿದವು." ಚಿನ್ನಯ್ಯ ಬೇಡಾಗಿ ನುಡಿದನು.

"ನೀವು ಬಂದಿದ್ದರೆ ಪ್ರಸಂಗವು ಹೀಗಾಗುತ್ತಿರಲಿಲ್ಲ."

ಚಿನ್ನಯ್ಯ ಮಾತಾಡಲಿಲ್ಲ.

"ಹೋಗಲಿ ಬಿಡಿರಿ. ನೀವು ಚಿಂತಿಸಬೇಡಿರಿ."

ಚಿನ್ನಯ್ಯ ಒಂದು ಉಸಿರುಗರೆದನು.

"ನಿಮ್ಮ ವೈಭವ, ಸ್ವತಂತ್ರ ಜೀವನ ಆ ಗೌಡನಿಗೆ ಮೊದಲಿನಿಂದಲೂ ಸೇರದು. ಊರ ಮಾನ, ಸನ್ಮಾನ, ಕೀರ್ತಿ, ದುಡ್ಡು ತನ್ನ ಮನೆಗೇ ಸೇರಬೇಕೆಂದು ಅತ್ಯಾಸೆ. ಮೊದಲು ಅವನಿಗೆ ರಾಮ ರಾಮ ಹೊಡೆದು ಆ ಎಂಜಲು ಕೈಯನ್ನು ಮತ್ತೊಬ್ಬರಿಗೆ ಹೊಡೆಯಬೇಕಂತೆ. ನಮಗೇನು! ನೀವೂ ದೊಡ್ಡವರು ಅವರೂ ದೊಡ್ಡವರು. ನಿಮ್ಮಿಬ್ಬರ ದೊಡ್ಡಸ್ತಿಕೆಯಲ್ಲಿ ಯಾರು ಹೆಚ್ಚಿನವರೆಂದು ನಾವು ಹೇಗೆ ತಿಳಿಯುವದು? ವಿಚಾರಿಸಿದರೆ ನಮ್ಮ ಕುಲಕ್ಕೆ ನೀವು ಸಮೀಪವಾಗಿ ಬರುವಿರಿ, ನಿಮ್ಮ ಮನೆಯ ಹುಟ್ಟು-ಸಾವಿನಲ್ಲಿ, ಕೆಲಸ-ಕಾರ್ಯದಲ್ಲಿ ಲಗ್ನ-ಉಡಿಯಕ್ಕಿಯಲ್ಲಿ ನಾವು ಓಡಾಡಬಹುದು. ಊಟ ಮಾಡಬಹುದು. ನೀರಿನ ಬಳಕೆಯಾಗಬಹುದು. ಆದರೆ ಗೌಡರ ಮನೆಯ ಯಾವ ಕಾರ್ಯಕ್ಕೆ ನಾವು ಉಪಯೋಗ? ಅವರ ಮನೆಯ ಹಂದರ ಹಾಕಬಹುದು, ಸುಣ್ಣ ಬಳಿಯಬಹುದು. ಉಂಡ ಎಲೆಯನ್ನು ಉಡುಗಿ ಚೆಲ್ಲಬಹುದು. ಇಂಥ ಕೂಲಿಗಳಿಂದ ನಾವು ಇರುವದು.

ದೊಡ್ಡವರ ನಿಂದೆಯನ್ನು ಮಾಡಬಾರದು. ಆದರೆ ತಂಗವ್ವನನ್ನು ಹೀಗೆ ಗದರಿಸಬೇಕೇ ? ಪಾಪ...."

"ಏನು ?"

"ನಿಮಗೆ ಇನ್ನೂ ತಿಳಿದಿಲ್ಲವೇ ?"

"ಇಲ್ಲ."

"ನೀನು ಬಸವಂತಿ ಇರುವೆ. ಯಾರಿಂದ ಆಯಿತು. ಹೇಳು, ಇಲ್ಲದಿದ್ದರೆ ಪೋಲೀಸರಿಗೆ ಒಪ್ಪಿಸುವೆ. ತಾಲೂಕಿಗೆ ಕಳಿಸುವೆ. ಕಾವಲಲ್ಲಿಡುವೆ. ಎಂದು ಬೆದರಿಕೆ ಹಾಕಿದರು."

"ಆಗ...."

"ಅವಳು ನಿಮ್ಮ ಹೆಸರನ್ನು ಹೇಳಿದಳು."

"ನನ್ನದೇ ?"

"ಅಹುದು. ಪಂಚರ ಮುಂದೆ ಹೇಳಿದಳು. ಹೇಳಿದ ಮರು ದಿವಸವೇ ಸತ್ತಳು."

"ತನ್ನ ಸಂಗಡ ನನ್ನ ಅವಮಾನವನ್ನೂ ಮಾಡಿದಳೇ ! ಅವಳು ಜೀವದಿಂದಿದ್ದರೆ ಸುಡಿಸುತ್ತಿದ್ದೆ. ಹಾಳಾದ ಹೆಂಗಸು. ತಾನು ಮಾಡಿದ ಪಾಪಕ್ಕೆ ನನ್ನನ್ನು ಗುರಿಮಾಡುವದೆಂದರೆ ! ಏನೋ ಅನಾಥ ಳೆಂದು ತಿಳಿದು ಅಲ್ಪ ಸ್ವಲ್ಪ ಸಹಾಯ ಮಾಡುತ್ತಿದ್ದೆ. ಅದರ ಪ್ರತಿಫಲವನ್ನು ಈರೀತಿ ಮುಟ್ಟಿಸಿದಳು " ಎಂದು ಕೃತಕ ಕೋಪವನ್ನು ತೋರಿಸಿದನು.

"ಮತ್ತು...."

"ಅವಳು ಸಾಯಲಿ ಸಿದ್ದಯ್ಯ. ನನ್ನ ಮನೆಯ ಕಾಳು ಕಡ್ಡಿಗಳು ಉಳಿದವು. ಶ್ರಮ ಉಳಿಯಿತು. ಆದರೆ ನನ್ನ ನಾಯಿಯನ್ನೂ ಹೀಗೆ ಅಮಾನುಷವಾಗಿ ಕೊಂದವರಾರು ? ಪಾಪ ಅದು ಮಾಡಿದತಪ್ಪೇನು?"

"ಇದೊಂದು ಗೌಡ ಬಂಗಾಲಿಯೆ ನೋಡಿರಿ. ಕೆರೆಯಲ್ಲಿ ಯಾರು ಮುಳುಗಿಸಿದರೋ ತಿಳಿಯದು."

"ಮತ್ತಾರಿರುವರು ! ಆ ಪುಂಡರೇ ಇರಬೇಕು"

"ನನಗೂ ಅದೇ ಸಂಶಯ. ಆದರೆ ಬಾಯಿಂದ ಆಡುವಂತಿಲ್ಲ. ಇಂದು ಬಾಯಿಬಿಟ್ಟರೆ ನಾಳೆಯೇ ಮನೆಯ ಲೂಟಿ, ಬಣಬೆಗೆ ಬೆಂಕಿ."

"ಸಿದ್ದಯ್ಯ, ಆ ಹಾರುವನ ಸೊಕ್ಕು ಮುರಿಯುವದು ತಡವಿಲ್ಲ. ನಾನು ಅದಕ್ಕಾಗಿ ಬೇಕಾದಷ್ಟು ಹಣವನ್ನು ವೆಚ್ಚಮಾಡಬಲ್ಲೆ. ನಾನು ಸಾಮಾನ್ಯನೆಂದು ತಿಳಿಯಬೇಡ. ನಮ್ಮ ಹಳ್ಳಿಯ ಸುತ್ತಲಿನ ಎಲ್ಲ ದೇಸಾಯರನ್ನು ಬಲ್ಲೆ. ಅವರಿಂದ ನಾನು ಅನೇಕ ಕೆಲಸಗಳನ್ನು ಮಾಡಿಕೊಂಡು ಬಂದಿರುವೆ. ನನ್ನಿಂದಲೂ ಅನೇಕ ಸಹಾಯಗಳನ್ನು ಪಡೆದಿರುವರು. ಆದರೆ ನಿಮ್ಮಲ್ಲಿ ತಾಳವಿಲ್ಲ. ಒಮ್ಮತವಿಲ್ಲ. ನನ್ನ ಮುಂದೂ ಹೌದೆನ್ನುವಿರಿ. ಅವನ ಮುಂದೂ ಹೌದೆನ್ನುವಿರಿ. ಕೊನೆಗೆ ಅವನು ಹೇಳಿದ್ದೇ ಮುಖ್ಯ. ಹೋದ ಸಲ ಓಕಳಿಗೆ ನಾನು ನಿಮ್ಮೆಲ್ಲರನ್ನೂ ಕೂಡಿಸಿ ಆಡಲು ಪರವಾನಗಿಯನ್ನು ತಂದೆನು. ನಿಮಗೆ ಗೊತ್ತಿದೆ. ಆದರೆ ಅವನು ಫೌಜದಾರನಿಂದ ಹರಕತ್ತು ಮಾಡಿಸಿದನು. ಮೇಲೆ ತಕರಾರು ಒಯ್ಯುವಾ ಬನ್ನಿರೆಂದರೆ ಒಬ್ಬರೂ ಬರಲಿಲ್ಲ. ಊರಲ್ಲಿ ಇಬ್ಬರು ಪೋಲೀಸರು ಬಂದರೆ ಅಂಜಿ ಮನೆ ಸೇರುವಿರಿ. ಆಗ ಅವನ ಮಾತಿನಂತೆ ನಡೆದ. ಮುಂದಿನ ಹುಣ್ಣಿಮೆಗೆ ಆಚರಿಸಿದಿರಿ. ಇದರಿಂದ ಯಾರ ಅಪಮಾನ?"

ಸಿದ್ದಯ್ಯನು ಮಾತಾಡಲಿಲ್ಲ. ಸುಮ್ಮನೆ ಕುಳಿತಿದ್ದನು.

"ಓಕಳಿಗೆ ಕೌಜಲಗಿ ನಿಂಗಿಯ ಆಟವನ್ನು ತರೋಣ ಎಂದು ನಾನು ನಿಮಗೆ ಹೇಳಿದೆ. ನೀವೂ ಒಪ್ಪಿದಿರಿ. ೨೫ ರೂಪಾಯಿ ಸಂಚುಗಾರಿ ಹಣವನ್ನು ನನ್ನಿಂದ ಪಡೆದುಕೊಂಡು ಹೋಗಿ ನೀವೇ ಕೊಟ್ಟು ಬಂದಿರಿ. ಆದರೆ ಅದನ್ನು ಮುರಿದು ಅವನು ಹೇಳಿದಂತೆ ತವಗದ ಬಾಳಪ್ಪನ ಆಟವನ್ನು ಆಡಿಸಿದಿರಿ. ಇದೇನು? ನಿಮಗೆ ತಿಳಿಯದು. ನಮ್ಮಲ್ಲಿ ಒಡಕು ಹುಟ್ಟಿಸಿ, ನಮ್ಮ ಶಕ್ತಿಯನ್ನು ಮುರಿದು ತನ್ನ ಹೋಳಿಗೆ ತುಪ್ಪದಲ್ಲಿ ಬೀಳುವಂತೆ ಮಾಡುತ್ತ ನಡೆದಿರುವನು. ನೀವೂ ಸೈ ಎನ್ನುತ್ತ ನಡೆದಿರುವಿರಿ."

ಸಿದ್ದಯ್ಯನು ತಲೆತೂಗುತ್ತ ಕುಳಿತಿದ್ದನು.

"ನೀವು ಅವನಿಗೆ ಅನುಕೂಲವಾಗಿ ಇರುವವರೆಗೆ ಆ ಹಾರುವನ ಚೆಲ್ಲಾಟ ಹೀಗೆಯೇ ನಡೆಯುವದು."

"ಅವನಲ್ಲಿ ಅಂತಹ ಹಿಮ್ಮತ್ತು ಇರುವದು. ಜನರಿಗೆ ಹೇಳಿದಂತೆ ಮಾಡಿ ತೋರಿಸುವನು. ಮುರಿಯಬೇಕಾದುದನ್ನು ಮುರಿದೇ ಬಿಡುವನು."

"ನೀವೆಲ್ಲರು ಒಂದಾದರೆ ನಾನೂ ಮಾಡಿ ತೋರಿಸುವೆನು. ಅವನ ಜುಟ್ಟಿಗೆ ಒಂದು ಹನಿ ಎಣ್ಣೆ ಸಿಗದಂತೆ ಮಾಡುವೆನು."

"ಎಣ್ಣೆ ಸಿಗದಂತೆ ಮಾಡಿದರೆ ಊರನ್ನು ಬಿಟ್ಟುಹೋಗುವನು."

"ಹೋಗಲಿ. ಊರೊಳಗಿನ ಘಡಗಳ್ಳಿ ಹೋಯಿತೆಂದು ತಿಳಿಯಿರಿ."

"ಈಗ ನಾಲ್ಕು ವರುಷದ ಹಿಂದೆ ಘಡಗಳ್ಳಿಗೆ ಹುಳುಹತ್ತಿ ಎಷ್ಟು ಹಾನಿಯಾಗಿದೆ ಎನ್ನುವಿರಿ? ನಿಮಗೇನು ಗೊತ್ತು ಇದು. ಹೊಲದ, ತೋಟದ, ಹಿತ್ತಲಿನ ಬೇಲಿಯೇ ಹೋಗಿ ಎಲ್ಲವೂ ಏಕಾಕಾರವಾಗಿ ನಿಂತಿವೆ. ಒಕ್ಕಲಿಗರು ತಂತೀ ಬೇಲಿಯನ್ನು ಕಟ್ಟಲಾದೀತೆ? ಮುಕ್ಕು ಜೋಳ ಬರುವ ಹೊಲಕ್ಕೆ ನೂರು ರೂಪಾಯಿಯ ತಂತಿಯ ಬೇಲಿಯನ್ನು ಯಾರು ಕಟ್ಟಬೇಕು? ಘಡಗಳ್ಳಿ ಇರಬೇಕು. ಹೆಚ್ಚು ಮುಂದೆ ಬಂದರೆ ಕಡಿದು ಸುಡಬೇಕು. ಅಂದರೆ ನಮ್ಮ ಸೀಮೆ, ಫಸಲು ಬಚಾವು ಆಗಿ ಉಳಿಯುವುವು." ಎಂದು ಘಡಗಳ್ಳಿಯ ಮಹಾತ್ಮೆಯನ್ನು ಹೇಳಿದನು ಸಿದ್ದಯ್ಯ.

"ನಿಮ್ಮಂತಹವರಿಂದಲೇ ಅವನ ಚೆಲ್ಲಾಟ."

"ನಮಗೆ ನಿಜವಾದದ್ದು ಯಾವದೆಂಬುವದೇ ತಿಳಿಯದು. ನಿಮ್ಮ ಮುಂದೆ ನೀವೇ ಖರೇ. ನಿಮ್ಮ ಮಾತೇ ಖರೆ ಎನಿಸುವದು. ಅವನ ಮುಂದೆ ಅವನದೆಲ್ಲವೂ ಖರೇ ಎನಿಸುವದು. ನಮಗೆ ನಿಜವಾದದ್ದು ಯಾವದೆಂಬುವದೇ ತಿಳಿಯದು."

"ಖರೇವು ಒಂದು ದಿನ ಬೈಲಿಗೆ ಬರುವದು."

"ಈ ಮಾತು ಖರೇವು."

( ೨ )

ಬೇಸಗೆಯ ಸುಮಾರಿಗೆ ಹಳ್ಳಿಯಲ್ಲಿ ನಾರಿನ ಹಾವಳಿ ಬಹಳ. ನಾರುಹುಣ್ಣು ಒಕ್ಕಲ ಮಕ್ಕಳಿಗೇ ಹೆಚ್ಚು. ಈ ಹುಣ್ಣಿಗೆ ದೇವಿಯ ಕೋಪವೆಂದೇ ಅವರ ನಂಬಿಗೆ. ಕೆಲವು ಹಿರಿಯರು "ಬೇಸಗೆಯಲ್ಲಿ ಹಳ್ಳವು ಹರಿಗಡಿಯುವದು. ಆಗ ನೀವು ನಿಂತ ನೀರಿನಲ್ಲಿ ಪುಂಡಿ-ಗಾದೇರಿಗಳನ್ನು ಕೊಳೆಯಿಡುವಿರಿ. ಮುಂದೆ ನಾರು ಬಡಿದುಕೊಂಡು ಮನೆಗೆ ತರುವಿರಿ. ಆ ನೀರು ಕುಡಿದರೆ ನೀರಿನ ಸಂಗಡ ನಾರಿನ ಸಣ್ಣ ಸಣ್ಣ ಎಳೆಗಳು ಹೊಟ್ಟೆಯೊಳಗೆ ಹೋಗುವವು. ಅವೇ ಬೆಳೆದು ದೊಡ್ಡವಾಗುವವು." ಎನ್ನುವರು.

"ಆ ಎಳೆಗೆ ಜೀವ ಹೇಗೆ ತುಂಬುವದು?" ಎಂದು ಕೆಲವು ತರುಣರು ಕೇಳುವರು.

ಹಿರಿಯರು ಹುಳುಕುಹಲ್ಲಿನ ಬಾಯಿ ತೆರೆದು ಗಹಗಹಿಸಿ ನಗುತ್ತ — "ನಿರ್ಜೀವ ರೊಟ್ಟಿ, ನುಚ್ಚು, ನೀರು, ಗಜ್ಜರಿ, ಗೆಣಸು ಮುಂತಾದುವುಗಳು ಹೊಟ್ಟೆಯನ್ನು ಸೇರಿ ಜೀವಧಾರಣ ಮಾಡುವದಿಲ್ಲವೇ? ನಾರೇಕೆ ಜೀವವನ್ನು ಪಡೆಯಬಾರದು? ಮೇಲಿನವು ಸಪ್ಪೆಯಾಗಿ ಹೊರಗೆ ಬರುವವು. ಆದರೆ ನಾರಿನ ಎಳೆಯು ಕರುಳಿಗೆ ಸುತ್ತಿಕೊಂಡು ಬೆಳೆಯುವದು. ಮೈಯಿಂದ ಮುಂದೆ ಹೊರಬರುವದು."

"ಹೊಟ್ಟೆಯೊಳಗಿದ್ದ ನಾರಿನ ಹುಳು ಬೆನ್ನಿನಮೇಲೆ, ತೊಡೆ

ಯಲ್ಲಿ, ಕಾಲುಗಳ ಹಿಮ್ಮಡದಲ್ಲಿ, ಕೈಯಲ್ಲಿ ಏಕೆ ಬರಬೇಕು" ಎಂದು ಸವಾಲು ಹಾಕುತ್ತಿದ್ದರು.

"ಏ ಪೆದ್ದಾ, ಆ ಹುಳು ಸೂಜಿಗಿಂತ ಸಣ್ಣ. ಅರಳೆಯ ಎಳೆಗಿಂತ ಚಿಕ್ಕದು. ಕೂದಲಿನ ಬೇರಿನ ಸಂಗಡ ಬೇಕಾದಂತೆ, ಬೇಕಾದಲ್ಲಿ ಹರಿದಾಡಬಹುದು. ಆದಕ್ಕೆ ನಮ್ಮ ಶರೀರವೇ ಬೈಲಾಟ. ಹೊರಗೆ ಬರುವ ಮುಂದೆ ತೊಗಲನ್ನು ಕೊರೆದು ಬರುವದು. ನಾರಿನ ನೀರು ಕುಡಿಯದಿದ್ದರೆ ನಿಮಗೆ ನಾರೇಕೆ ಬರುವದು. ಹಾರುವರು ಅಂಥ ನೀರು ಕುಡಿಯುವದಿಲ್ಲ. ಅದಕ್ಕೆ ಅವರಿಗೆ ಕಡಮೆ."

"ಅದೇಕೆ! ರಾಜಣ್ಣನಿಗೆ ಹೋದ ವರುಷ ಆಗಿರಲಿಲ್ಲವೇನು? ಎರಡು ನಾರುಗಳನ್ನು ನಾವಲಿಗರ ಹನುಮಪ್ಪ ತೆಗೆದನು."

"ಅವನೆಂತಹ ಹಾರುವರವನು! ತಲೆಯಮೇಲೆ ಜುಟ್ಟು ಇಲ್ಲ. ಕೊರಳೊಳಗೆ ಜನಿವಾರವಿಲ್ಲ. ಹಣೆಯಮೇಲೆ ಗಂಧವಿಲ್ಲ. ಅಲ್ಲದೆ ಅವನು ಬಾಯಿಹಾಕದ ನೀರು ಯಾವದು? ಕುಡಿಯದ ಬಚ್ಚಲು ಯಾವದು? ಉಣ್ಣದ ಮನೆ ಯಾವದು? ಮುಟ್ಟದ ಪ್ರಾಣಿ ಯಾವದು? ನಿಲ್ಲದ ನೆಲ ಯಾವದು? ಏನೋ ಗೌಡರ ಹೊಟ್ಟೆಯಿಂದ ಹುಟ್ಟಿದವನೆಂದು ಹಾರುವನೆನ್ನಬೇಕು. ನಮ್ಮವರೊಳಗೆ, ನಮ್ಮೊಳಗೆ ನಿಂತರೆ ಇವನು ಹಾರುವನೆಂದು ಹೇಳಬೇಕಾದರೆ ಹನುಮಂತದೇವರ ಆಣೆ ಹಾಕಬೇಕು."

ಎಲ್ಲರು ಗೊಳ್ಳೆಂದು ನಕ್ಕರು.

ಈ ತತ್ವವು ಸುಳ್ಳೋ ಸತ್ಯವೋ ಯಾರೂ ನಿರ್ಣಯಿಸಲಿಕ್ಕೆ ಹೋಗಲಿಲ್ಲ. ಬೇಸಗೆಯ ಆರಂಭಕ್ಕೆ ಎಲ್ಲರಿಗೂ ನಾರುಹುಣ್ಣು ಬರುತ್ತಿದ್ದುದು ನಿಜವಿದ್ದಿತು. ಪ್ರಕೃತಿಯ ಕೋಪವೆಂದು ತಿಳಿದವರೇ ಬಹಳ ಜನರಿದ್ದರು.

ನಾರು ಹಬ್ಬಿದ ವರುಷ ನಾವಲಿಗರಿಗೆ ಬಿಡುವೇ ಇರುತ್ತಿದ್ದಿಲ್ಲ. ಅದೊಂದು ಸಾಮಾಜಿಕ ಉತ್ಪನ್ನದ ಬಾಬು ಆಗಿಬಿಡುತ್ತಿದ್ದಿತು. ಒಂದು ನಾರು ತೆಗೆಯಲು ಒಂದು ರೂಪಾಯಿ ಪೇಟೆಯ ದರವಾಗು

ತ್ತಿದ್ದಿತು. ಒಬ್ಬೊಬ್ಬನು ಒಂದೊಂದು ದಿನದಲ್ಲಿ ನಾಲ್ಕೈದು ನಾರು ಗಳನ್ನು ತೆಗೆದು ನಾಲ್ಕೈದು ರೂಪಾಯಿ ಗಳಿಸಿ ಏಳೆಂಟು ಸೇರು ಕಾಳು ಗಳನ್ನು ಸೀದಾ ಎಂದು ಎತ್ತುತ್ತಿದ್ದನು. ಆಗ ರೈತರಿಗೆ ಕಷ್ಟ.

ಊರಲ್ಲಿ ನಾವಲಿಗರ ಸಂಖ್ಯೆ ಕಡಮೆ. ಎರಡು ಸಾವಿರ ವಸತಿಯ ಆ ಹಳ್ಳಿಗೆ ಕೇವಲ ನಾಲ್ವರೇ ನಾವಲಿಗರು. ಅದರಲ್ಲಿ ಒಬ್ಬ ಹಳೆಯ ಕಾಲದ ಮುದುಕ ಗರುಡಪ್ಪ. ಕತ್ತಿಯನ್ನು ಆಡಿಸುವ ಮುಂದೆ ಕೈ ನಡುಗುತ್ತಿದ್ದಿತು. ಬೇಡರ ಕೆಂಚಪ್ಪನ ತಲೆಯನ್ನು ಬೋಳಿಸುವ ಮುಂದೆ ಅವನ ಕಿವಿಯನ್ನು ಕೊಯಿದ ಮೇಲೆಯೋ ಅವನಿಗೆ ಪೆನಶನ್ ಆಯಿತು. ಈಗ ಅವನು ರೈತರ ಗೋಜಿಗೆ ಹೋಗುವದಿಲ್ಲ. ಬ್ರಾಹ್ಮಣ ವಿಧವೆಯರು ಆತನನ್ನೇ ನಂಬಿಕೊಂಡಿರುವರು. ಆ ಸನ್ಯಾಸಿಗಳು ಮುದುಕ ಗರುಡಪ್ಪನು ತಮ್ಮ ಕಿವಿಯನ್ನು ಕೊಯಿದರೂ ಸರಿ, ಮೂಗು ಕೊಯಿದರೂ ಸರಿ, ಕೊನೆಗೆ ತಮ್ಮ ಕುತ್ತಿಗೆಯನ್ನು ಕೊಯಿದರೂ ಸರಿ ಎಂಬ ವೈರಾಗ್ಯದ ಉದಾತ್ತ ಧ್ಯೇಯವನ್ನು ನಂಬಿ ಅವನಿಂದಲೇ ತಮ್ಮ ತಲೆಯ ಹೊಲಸನ್ನು ತೆಗೆಸುತ್ತಿದ್ದರು. ಗರುಡಪ್ಪನಾದರೂ ಬೇಡರ ಕೆಂಚಪ್ಪನ ದುರಂತದಿಂದ ಸುಧಾರಿಸಿಕೊಂಡು ಆ ವೈರಾಗ್ಯಮೂರ್ತಿಗಳ ದಯೆಗೆ ಪಾತ್ರನಾಗಿದ್ದನು.

ಮುಂಜಾನೆ ಇವರ ಮನೆಯ ಮುಂದೆ ಉದ್ದಗಡ್ಡದ ರೈತರ ಹಿಂಡೇ ನೆರೆಯುತ್ತಿದ್ದಿತು. ಅವರು ಪಟ್ಟಣಿಗರಂತೆ ವಾರದಲ್ಲಿ ಮೂರು ಸಾರೆ ಮಾಡಿಸಿದವರಲ್ಲ. ಒಮ್ಮೆ ಮಾಡಿಸಿದ ಮೇಲೆ ಎರಡನೆಯ ಬಾರಿಯು ಬರಲು ದಿನಗಳ ಗಡುವನ್ನು ಇಟ್ಟುಕೊಂಡಿರಲಿಲ್ಲ. ಅದಕ್ಕಾಗಿ ಒಂದು ಸಾಮಾನ್ಯ ನಿಯಮವನ್ನು ಮಾಡಿಕೊಂಡಿದ್ದರು. ಕೂದಲು ಬೆಳೆದ ಮೇಲೆ ತರ್ಜನಿ ಮತ್ತು ಮಧ್ಯಮಾ ಬೆರಳುಗಳನ್ನು ಕೂಡಿಸಿ ಗಡ್ಡವನ್ನು ಹಿಡಿಯುತ್ತಿದ್ದರು. ಆ ಜೋಡಿಸಿದ ಬೆರಳುಗಳ ಕೆಳಗೆ ಮತ್ತೊಂದು ಕೈಯ ಅಂಗೈ ಬೆನ್ನನ್ನು ಆಡಿಸುತ್ತಿದ್ದರು. ಆಗ ಅಂಗೈ ಬೆನ್ನಿಗೆ ಚೂಪಾದ ಕೂದಲಿನ ತಿಕ್ಕಾಟದಿಂದ ವೇದನೆ ಎನಿಸಿದರೆ ನಾವಲಿಗನ ಮನೆಯನ್ನು ಹುಡುಕುತ್ತಿದ್ದರು. ಎಲ್ಲರೂ

ಇದೇ ಕ್ರಮವನ್ನಿಟ್ಟಿದ್ದರೂ ಸರದಿಯ ಸಾಲನ್ನು ಕಾಯಬೇಕಾಗುತ್ತಿದ್ದಿತು. ಆದರೆ ಇತ್ತಲಾಗಿ ಹೊಸ ತರುಣರು ಈ ಗದ್ದಲವನ್ನು ಕಡಮೆ ಮಾಡಿದ್ದರು. ಅವರು ಹಳ್ಳಿಯ ನಾವಲಿಗರ ಕೈಯಲ್ಲಿ ತಲೆಯನ್ನು ಕೊಡುವದನ್ನು ನಿಲ್ಲಿಸಿದರು. ಕೇಳಿದರೆ ಒಂದು ಮಾತನ್ನು ಹೇಳುತ್ತಿದ್ದರು. ಅದು ರಾಜಣ್ಣನ ಮಾತೇ ಸರಿ.

ರಾಜಣ್ಣನು "ಗರುಡಪ್ಪನ ಕೈಯಲ್ಲಿಯ ಕತ್ತಿ ಅವನ ಅಜ್ಜನದೆಂದು ಕೇಳಿರುವೆ. ಅವನ ಅಜ್ಜನಿದ್ದರೆ ಅವನೂ ಹೇಳಬಹುದಿದ್ದಿತು ಅದು ನಮ್ಮ ಅಜ್ಜನದೆಂದು. ಈ ತಲೆ ತಲಾಂತರದಿಂದ ಬಂದ ಕತ್ತಿಯನ್ನು ಒಂದು ದಿನ ಮಸೆದಂತಿಲ್ಲ. ಸಾಣೆ ಹಿಡಿದಂತಿಲ್ಲ. ಮೊಳಕಾಲ ಮುಂದುಗಡೆ ಚಟಪಟ ತಿಕ್ಕಿ ತಲೆಯನ್ನು ಕೆರೆಯಹತ್ತಿದನೆಂದರೆ ತೊಗಲು ಸುಲಿಯುವನೇನೋ ಎನ್ನುವಷ್ಟು ವೇದನೆ. ನಮ್ಮ ಕೂದಲನ್ನು ಕತ್ತರಿಸುವದು ಅದೇ ಕತ್ತರಿ. ಎಮ್ಮೆಯ ಕರುವಿನ ಕೂದಲನ್ನು ಕತ್ತರಿಸಲೂ ಅದೇ. ಕುದುರೆಗೂ ಅದೇ ! ಹೋಗಲಿ. ಒಂದು ದಿನ ಸಬಕಾರ ಹಚ್ಚುವನೇ ! ಕೊಬ್ಬರಿ ಎಣ್ಣೆ ಒರಸಿದವನೇ ! ಒಂದು ರೂಪಾಯಿಯಷ್ಟು ತಲೆಯನ್ನು ಬೋಳಿಸಬೇಕಾದರೆ ಮೂರು ಕಡೆಗೆ ರಕ್ತ. ಇದಕ್ಕಿಂತಲೂ ಕಿತ್ತಿ ತೆಗೆದರೆ ಕಷ್ಟವೇನು ? ನನಗೆ ಅವನಿಂದ ಸಾಯುವದು ಸಾಕಾಯಿತು. ತಾಲೂಕಿಗೆ ಹೋಗಿ ನಾಲ್ಕಾಣೆ ಒಗೆದರೆ ಸರಿ. ಕೂದಲ ಕತ್ತರಿಸುವರೋ ತಲೆಯ ಮೇಲೆ ಸುಮ್ಮನೆ ಕೈಯಾಡಿಸುವರೋ ! ತಿಳಿಯುವದಿಲ್ಲ. ಅಷ್ಟು ನಯವಾಗಿ ಮಾಡುವರು. ಒಮ್ಮೆ ನಾನು ಇವನಿಂದಲೇ ಮಾಡಿಸಿದ್ದೆ. ಕತ್ತಿ ಕಡಿದಂತೆ ಅಸಹ್ಯ. ತಾಲೂಕಿನಲ್ಲಿ ಎಣ್ಣೆ ಹಚ್ಚಿ ಮಾಲೀಸು ಮಾಡುವರು. ತಲೆಯನ್ನು ತೊಳೆದು ತೆಗೆಯುವರು. ಸ್ನೋ ಹಚ್ಚುವರು. ಪಾವಡರ ಬಳಿಯುವರು. ಕೊನೆಗೆ ತಲೆ ಮತ್ತು ಮುಖದ ಮೇಲೆ ತುಂತುರ ನುಳಿಯನ್ನು ಬಿಡುವರು. ಇದೆಲ್ಲ ಇವರಿಗೇನು ಗೊತ್ತು ! ಎಮ್ಮೆಯನ್ನು ಬೋಳಿಸುವವರ ಕೈಯಲ್ಲಿ ತಲೆಯನ್ನು ಕೊಡುವದುಂಟೇ !" ಎಂದು ಹಳ್ಳಿಯ ನಾವಲಿ

ಗರನ್ನು ಬೀಳುಗಳೆದು ತಾಲೂಕಿನ ನಾವಲಿಗರನ್ನು ಕರ್ಣರಸಾಯನವಾಗುವಂತೆ ವರ್ಣಿಸಿದ್ದನು. ತರುಣರಿಗೆ ಅವನ ಮಾತು ಸರಿ ಎನಿಸಿದ್ದಿತು. ಹೆಚ್ಚಾಗಿ ಸಂತೆಯ ದಿನ ತಾಲೂಕಿಗೆ ಹೋಗಿ ತಲೆಯನ್ನು ಅಲಂಕರಿಸಿಕೊಂಡು ಬರುತ್ತಿದ್ದರು.

ಹಳ್ಳಿಯಲ್ಲಿ ಈ ಬಗೆಯ ಕ್ರಾಂತಿಯಾದರೂ ನಾವಲಿಗರಿಗೆ ಅವರ ಆಯಾ, ಸೀದಾ ತಪ್ಪುತ್ತಿರಲಿಲ್ಲ. ನಾರು ಹುಣ್ಣಿನ ಸಾಂಕ್ರಾಮಿಕದಲ್ಲಿ ಈ ಹೊಸ ಉತ್ಪನ್ನವೂ ಬರುತ್ತಿದ್ದಿತು. ಆದರೆ ರಾಜಣ್ಣನು ತರುಣರನ್ನು ಕೆರಳಿಸಿ ತಾಲೂಕಿನ ಹಾದಿಯನ್ನು ಹಿಡಿಸಿದ್ದರಿಂದ ಅವನ ಮೇಲೆ ಸಿಟ್ಟಾಗಿದ್ದರು. ಒಳಗೊಳಗೇ ದ್ವೇಷಿಸುತ್ತಿದ್ದರು.

ಬೇಸಗೆಯು ಮುಗಿಯುಬಂದರೂ ಒಬ್ಬರ ಕಾಲಿಗೆ ನಾರು ಹುಣ್ಣಿನ ಪಟ್ಟಿ ಕಂಡು ಬರಲಿಲ್ಲ. ಯುದ್ಧ ಭೂಮಿಯಲ್ಲಿಯ ರೆಡ್ ಕ್ರಾಸ್ ಸಂಸ್ಥೆಯು ಓಬರದಂತೆ ಕಾಣುವ ಹಳ್ಳಿ ಈ ವರುಷ ಸ್ವಚ್ಛವಾಗಿದ್ದಿತು. ಇದರಿಂದ ಜನರು ಸಂತೋಷ ಭರಿತರಾದರು. ಸುಗ್ಗಿಯು ಮುಗಿದೂ ಒಂದೆರಡು ತಿಂಗಳಾಗಿದ್ದಿತು. ಜನರ ಮನೆಗಳಲ್ಲಿ ಕಾಳು ಕಡಿಗಳೂ ಸಾಕಷ್ಟಿದ್ದವು. ವರುಷದ ಅಂಬಲಿಗೆ ಕಾಳಜಿಯಿಲ್ಲದಂದು ವಯಸ್ಸಾದ ಮುದುಕರು ಅಗಸೆಯ ಕಟ್ಟೆಯ ಮೇಲೆ ಕುಳಿತು ಹರಟೆಯನ್ನು ಹೊಡೆಯುತ್ತಿದ್ದರು. ಈ ಸಂತಸದ ಭರದಲ್ಲಿ ಓಕಳಿಯು ನೆನಪಾಯಿತು. ಒಂದು ಕಮಿಟಿಯನ್ನು ಮಾಡಿದರು. ಓಕಳಿಯಾಡಿಸುವದು, ಕುಸ್ತಿಗಳನ್ನು ಹಿಡಿಯುವದು, ಸಿಂಗಿನ ಪಾರಿಜಾತ ನೋಡುವದು ಎಂದು ಕಾರ್ಯಕ್ರಮವನ್ನು ನಿಶ್ಚಯಿಸಿದರು. ಎತ್ತಿಗೆ ಒಂದು ಆಣೆಯು, ನೇಗಿಲಕ್ಕೆ ಎರಡಾಣೆಯು, ಮನೆಗೆ ಒಂದು ರೂಪಾಯಿಗಿಂತ ಕಡಿಮೆಯಿಲ್ಲದಷ್ಟು ಪಟ್ಟಿ ಎಂದು ನಿಧಿ ಸಂಗ್ರಹದ ನಿಯಮವನ್ನು ನಿಶ್ಚಯಿಸಿ ಗೌಡರ ಸಮ್ಮತಿಗೆ ಅವರ ಮನೆಯ ಹಾದಿಯನ್ನು ಹಿಡಿದರು.

## ೧೩

ಚಿನ್ನಯ್ಯನು ಹಲ್ಲು ಮಸೆದು ತೀಕ್ಷ್ಣ ಮಾಡಿಕೊಂಡಿದ್ದನು. ಕೈ ತಿಕ್ಕಿ ಕಾವೇರಿಸಿಕೊಂಡಿದ್ದನು. ಕೂದಲು ಕಿತ್ತಿ ಬುದ್ಧಿಯನ್ನು ಸೋಯಿಸಿಕೊಂಡಿದ್ದನು. ಆದರೆ ಗೌಡರು ಅವನ ಹಲ್ಲಿಗೂ ಸಿಕ್ಕಲಿಲ್ಲ. ಕೈಗೂ ದೊರಕಲಿಲ್ಲ. ಅವರ ವೈಭವ, ಮಾನ ಬೆಳೆಯುತ್ತಲೇ ನಡೆಯಿತು. ಓಕಳಿಯ ನಿರ್ಣಯದಿಂದ ಚಿನ್ನಯ್ಯನವರಿಗೆ ಹೊಸ ಅವಮಾನವಾಯಿತು.

ತನಗೆ ಈವರೆಗೆ ಆದ ಅಪಮಾನಗಳ ಒಂದು ಯಾದಿಯೇ ತಲೆಯಲ್ಲಿ ಸುರುಳಿಯಾಗಿ ಮಲಗಿದ್ದಿತು. ಇಂದಿನ ಹೊಸ ಪ್ರಸಂಗದಿಂದ ಮತ್ತೆ ಜೀವಕಳೆ ತುಂಬಿ ಚಿತ್ರವಾಡಹತ್ತಿದವು.

ದಸರೆಯ ದಿನ ಬೇಟೆಯಾಡಿಕೊಂಡು ಜೇಡರು ಊರಲ್ಲಿ ಮೆರೆಸುತ್ತ ಬರುವದು ಅಲ್ಲಿಯ ಜನರ ಸಾಂಪ್ರದಾಯವಾಗಿದ್ದಿತು. ಬೇಟೆಯಲ್ಲಿ ಮೊಲಗಳೇ ಹೆಚ್ಚು. ಚಿಗರೆಗಳು ಕಡಿಮೆ. ಊರೊಳಗೆ ಹೊಕ್ಕು ದೇವರಿಗೆ ನಮಸ್ಕರಿಸಿ ತಮ್ಮ ಪೌರುಷ ಪ್ರದರ್ಶನವನ್ನು ಮೂಕವಾಣಿಯಿಂದ ಒಪ್ಪಿಸುತ್ತಿದ್ದರು. ಮುಂದೆ ಹಾಳು ಬಿದ್ದ ದೇಸಾಯರ ವಾಡೆ, ಗೌಡ–ಕುಲಕರ್ಣಿಯರ ಮನೆ ಮತ್ತು ಊರ ಪ್ರತಿಷ್ಠಿತರ ಮನೆಗಳ ಮುಂದೆ ನಿಂತು "ಟಿಂಗನ ಕುಡುಕುಡು" ಎಂದು ಬಾರಿಸಿ, ನಮಸ್ಕರಿಸಿ, ತಮ್ಮ ಬೇಟೆಗಳನ್ನು ತೋರಿಸಿ ತಾರತಮ್ಯದ

ರೀತಿಯನ್ನು ಪಾಲಿಸುತ್ತಿದ್ದರು. ಕುರುಬರು ಅಂದು ಚಿನ್ನಯ್ಯನ ಹೆಸರನ್ನು ಸನ್ಮಾನ್ಯ ಗೃಹಸ್ಥರ ಸ್ಥಾನದಲ್ಲಿ ಸೇರಿಸಿ ಅವನ ಮನೆಯ ಮುಂದೆ ಬಾರಿಸಿ ಪಾವುಡವನ್ನು ಮೆಚ್ಚು ಪಡೆದುಕೊಂಡು ಬಂದರು. ಗೌಡರಿಗೆ ಇದು ತಿಳಿಯಿತು. ಕಿಡಿಕಿದಿಯಾಗಿ ಆ ಓಲಗದವರ ವಾದ್ಯಗಳನ್ನು ಕಸಿದುಕೊಂಡು ಚಾವಡಿಯಲ್ಲಿ ಕುಳ್ಳಿರಿಸಿ "ನಿಮ್ಮ ಈ ಕೃತ್ಯದಿಂದ ಊರಲ್ಲಿ ದಂಗೆಯಾಗುವಂತೆ ಕಾಣುತ್ತದೆ. ಜಾಮೀನು ಕೊಟ್ಟು ಮನೆಗೆ ಹೋಗಿರಿ" ಎಂದು ಗದರಿಸಿ ಕಾವಲಿಗೆ ಬಿಚ್ಚು ಗತ್ತಿಯ ಹಳಬನನ್ನು ನಿಲ್ಲಿಸಿ ಮನೆಗೆ ಬಂದರು. ಬಂಧಿತರು ಗಾಬರಿ ಯಾದರು. ಅಪ್ಪಾರಾಯರ ದರ್ಪ ಅಂಥದು. ಊರ ಕೆಲ ಹಿರಿಯರು ಛೀಹಾಕಿ ಗೌಡರ ಕ್ಷಮಾಯಾಚನೆಯನ್ನು ಮಾಡಿಸಿ ಬಿಡಿಸಿದರು. ಅಂದಿನಿಂದ ಚಿನ್ನಯ್ಯನ ಮನೆಯ ಮುಂದೆ ಓಲಗದವರ ಸಪ್ಪಳ ತಪ್ಪಿತು.

ಮೊದಲನೆಯ ಚುನಾವಣೆಯಲ್ಲಿ ಚುನಾವಣೆಗೆ ನಿಂತ ಸ್ವತಂತ್ರ ಪಕ್ಷದ ರಾವಬಹದ್ದೂರರು ಚಿನ್ನಯ್ಯನ ಮೊರೆಹೊಕ್ಕು ಮತಪ್ರಚಾರಕ್ಕೆ ಬಂದಿದ್ದರು. ಗೌಡರು ಗಾಂಧೀಜಿಯವರ ಕಾಂಗ್ರೆಸ ಪಕ್ಷದವರು. ಕಾಂಗ್ರೆಸದವರಿಗೇ ಮತಕೊಡಬೇಕೆಂದು ತಮ್ಮ ಸ್ವಂತ ಹೊಣೆಯ ಮೇಲೆ ಡಂಗುರ ಹೊಡೆಸಿ ಊರ ಮುಂದಿನ ಅಗಸೆಯ ಬಾಗಿಲದ ಎದುರು ಹೂಡಿದ ಜೋಡೆತ್ತಿನ ಭವ್ಯಚಿತ್ರವನ್ನು ನಿಲ್ಲಿಸಿ ನಿತ್ಯಪೂಜಿಸು ತ್ತಿದ್ದರು. ರಾವಬಹದ್ದೂರರು ಬಂದ ಸುದ್ದಿಯು ತಿಳಿಯಿತು. ಗೌಡರು ಯಾವ ಮಂತ್ರವನ್ನು ಊದಿದರೋ! ಊರಿಗೆ ಊರೇ ಮೌನವಾಯಿತು. ಚಿನ್ನಯ್ಯನು ನಾಲ್ಕೈದು ಮನೆಗಳನ್ನು ಸುತ್ತಾಡಿ ದನು. ಆದರೆ ಮತದಾರರು ಅಡಿಗೆಯ ಮನೆಯಲ್ಲಿ ಕುಳಿತು ಮನೆಯ ವರಿಂದ ಹೊಲಕ್ಕೆ ಹೋಗಿರುವರೆಂದು ಹೇಳಿಕಳಿಸಿದರು. ಅಂದು ಸಂಜೆಗೆ ರಾವಬಹದ್ದೂರರ ಸಭೆಯೂ ಆಗಲಿಲ್ಲ. ಮತದ ಆಶ್ವಾಸನವೂ ಸಿಕ್ಕಿರಲಿಲ್ಲ, ತಿರುಗಿ ಹೋಗುವ ಮುಂದೆ ಅವರ ಮೋಟಾರಿನ ಹಿಂದುಮುಂದೆ ಕತ್ತೆಯ ದಂಡನ್ನು ಓಡಿಸಿ ಹೇಹೇ!

ಎಂದು ನಗಿಸಿ ಅಪಮಾನ ಮಾಡಿ ಕಳಿಸಿದರು.

ಹಳ್ಳದ ದಂಡೆಯ ಮೇಲಿನ ಲೋ. ಬೋ. ಬಾವಿಗೆ ನಾಲ್ಕು ಗಡಗಡಿಗಳನ್ನು ಹಚ್ಚಿದ್ದರು. ಅಪ್ಪಾರಾಯರು ಊರ ನಾಲ್ಕು ಭಾಗದವರಿಗೆ ನಾಲ್ಕು ಗಡಗಡೆಗಳನ್ನು ಹಂಚಿಕೊಟ್ಟಿದ್ದರು. ತಮಗಾಗಿ ಇಟ್ಟುಕೊಂಡ ಗಡಗಡಿ ಊರ ಕಡೆಗಿದ್ದಿತು. ತಮ್ಮ ಮನೆಯವರಾಗಲಿ, ಊರಲ್ಲಿಯ ಬೇರಾವ ಬ್ರಾಹ್ಮಣರಾಗಲಿ ನೀರು ಸೇದ ಬಂದರೆ ಅನ್ಯರು ಬಿಟ್ಟುಕೊಡುತ್ತಿದ್ದರು. ಒಮ್ಮೆ ಚಿನ್ನಯ್ಯನ ಮನೆಯ ಆಳು ಅವಾಸ್ತವವಾಗಿ ಆ ಗಡಗಡೆಯನ್ನು ಹಿಡಿದು ವೇಳೆ ಗಳೆದನು. ಗೌಡರು "ನೀನು ನೀರಿಗೆ ಬರಬೇಡ. ಬಂದೆ ಎಂದರೆ, ಕೊಡವನ್ನು ಒಡೆದುಹಾಕುವೆನು" ಎಂದು ಗದರಿಸಿದರು. ಅಂದಿನಿಂದ ನೀರು ಸೇದಗೊಡಲಿಲ್ಲ. ಚಿನ್ನಯ್ಯನು ಮೇಲೆ ಅರ್ಜಿಯನ್ನು ಹಾಕಿದನು. ಚವಕಸಿಗೆ ಬರಲು "ಗಂಜಲು ತುಂಬುವ ಬಿಂದಿಗೆಯನ್ನು ನೀರಲ್ಲಿ ಬಿಡುವದುಂಟೇ! ಆ ಹೊಲಸಿನಿಂದ ಊರಲ್ಲಿ ಕಾಲರಾ ಹಬ್ಬಿ ಸರ್ವನಾಶವಾದರೆ ಗತಿಯೇನು? ಅದಕ್ಕೇ ಅಡ್ಡಿಯನ್ನು ಮಾಡಿದೆ!" ಎಂದು ಖಡಾಖಡಿಯಾಗಿ ನುಡಿದರು. ಅದರಿಂದ ಬಾವಿಯ ಪಕ್ಕದಲ್ಲಿ ಒಂದು ಬೋರ್ಡು ನಿಂತಿತು. ಬೋರ್ಡಿನ ಆಧಾರದಮೇಲೂ ಅವರಿಗೆ ಮುಂದೆ ತಿಂಗಳ ವರೆಗೆ ನೀರು ಸಿಕ್ಕುವಂತೆ ಮಾಡಲಿಲ್ಲ. ಕೆಲ ಹಿರಿಯರು ಹೇಳಲು ಮುಂದೆ ಬಿಟ್ಟರು.

ಹೀಗೆ ಒಂದಲ್ಲ ಎರಡಲ್ಲ ಅನೇಕ ಸಂಗತಿಗಳು ಚಿನ್ನಯ್ಯನ ಕಣ್ಣ ಮುಂದೆ ಹಾದುಹೋದವು. ಎಲ್ಲವುಗಳಲ್ಲಿ ಗೌಡರ ಕೈಯೇ ಮೇಲು.

ಈಗ ನಾಯಿಯ ಸಾವು, ತಂಗವ್ವನ ಆತ್ಮಹತ್ಯೆ ಬಿಸಿಬಿಸಿಯಾದ ಅವಮಾನ. ಆ ಹಾರುವನನ್ನು ಏನು ಮಾಡಲಿ, ಏನು ಮಾಡಲಿ? ಎಂದು ನುಡಿಯುತ್ತ ಪಡಸಾಲೆಯಲ್ಲಿ ಶತಪಥ ಹಾಕಹತ್ತಿದನು.

ಗೌಡರ ದರ್ಪ, ಅಧಿಕಾರ, ಜನಸಂಗ್ರಹದ ಮುಂದೆ ತನ್ನ ಆಟ ಸಾಗದೆಂದು ಆಂತರಿಕ ಮನಸು ನುಡಿಯುತ್ತಿದ್ದರೂ ಹಟವು ಏಕೆ ಅವನನ್ನು ಮುರಿಯಬಾರದು? ಎಂದು ಪಿಸುಗುಟ್ಟುತ್ತಿದ್ದಿತು. ಆದ ಕೆ

ಬುದ್ಧಿಯು, ತಾಳ್ಮೆಯು, ಅನುಭವವು ಇದಾಗದೆಂದು ಹೇಳುತ್ತಿದ್ದವು. ಈ ಮಾತಿಗೆ ಇಷ್ಟು ದಿನದ ಪ್ರಸಂಗಗಳು, ವ್ಯವಹಾರಗಳು ಉದಾಹರಣೆಯಾಗಿ ನಿಂತು ಗೋಕಾವಿಯ ಕಹಿ ಸವತೆಯಕಾಯಿಯನ್ನು ತಿಂದಂತೆ ಮೋರೆಯನ್ನು ಕಿವುಚಿ, ಹಲ್ಲುಗಳನ್ನು ತೆಗೆದು, ನಾಲಗೆಯನ್ನು ಜೋಲುಬಿಟ್ಟು ಹೇಳಿದವು. ಹಟವು ಹಿಂದೆ ಸರಿಯಿತು. ಬುದ್ಧಿಯು ಸ್ಥಿಮಿತಕ್ಕೆ ಬಂದಿತು.

ಕೈಯೊಳಗಿನ ಬ್ಯಾಟರಿಯನ್ನು ಹಿಸುಕಿ ಒಳಗಿನ ಕೋಣೆಯ ಗೋಡೆಯ ಮೇಲೆ ಬೆಳಕನ್ನು ಕೆಡವಿದ. ತಂಗವ್ವನಿಗಾಗಿ ತಂದ ರಸಕೇಳಿಯ ವಸ್ತುಗಳು ಕಣ್ಣಲ್ಲಿ ಮೂಡಿದವು.

ಅದು ತೋಪಸೆರಗಿನ ತೆನೆತಿರುವಿನ ಶಹಪೂರ ಸೀರೆಯು. ಹಾಪಸೆ ಬಣ್ಣದ ಮೈ. ನಡುನಡುವೆ ಜರದ ಕಡ್ಡಿ. ಅಂಚಿನಲ್ಲಿ ಗೋಮುಗನ ಸಾಲು. ಕೆಂಬಣ್ಣದ ಸೆರಗು. ಬಣ್ಣದಿಂದಲೂ, ಮೆರುಗಿನಿಂದಲೂ ಮನೋಹರವಾಗಿ ಕಾಣುವದು. ಅದನ್ನು ತಂಗವ್ವನಿಗೆ ಉಡಿಸಿ ರೂಪಾಯಿಯನ್ನಾಗಿ ಮಾಡಿ ಕಣ್ಣದಣಿ, ಮನದಣಿ ನೋಡಿ, ಕೂಡಬೇಕೆಂದು ಮಾಡಿದ ಬಯಕೆ ಇಂದು ಮೊಟಕಾಗಿ ನಿಂತಿದೆ.

ಮಗ್ಗುಲಲ್ಲಿಯೇ ಕೆಂಪು ಬಣ್ಣದ ಸ್ಯಾಟಿನ್ನಿನ ಝಂಪರು. ಮಲೆನಾಡಿಗೆ ಹೋಗುವ ಮುಂದೆ ಅವಳ ಕೈ ಅಳತೆ, ಕುತ್ತಿಗೆಯ ಅಳತೆ, ಬೆನ್ನಳತೆ, ಎದೆಯಳತೆಯನ್ನು ಬರೆದುಕೊಂಡಿದ್ದರು. ಸಿಂಪಿಗನಿಗೆ ಹೇಳಿ, ಕುಳಿತು ಹೊಲಿಸಿ ತಂದಿದ್ದರು. ಸ್ವತಃ ತಂಗವ್ವನಿಗೆ ಕೊಡಿಸಿ, ಗುಂಡಿಗಳನ್ನು ಕಟ್ಟಿ ಎದೆಎದೆಯನ್ನು ತಟ್ಟಬೇಕೆಂದು ಮಾಡಿದ ಆಶೆ ಇಂದು ಗಾಸಿಯಾಗಿದೆ.

ಹತ್ತರದ ಕಪಾಟಿನಲ್ಲಿ ಮೂಗುಬಟ್ಟಿನ ಕರಡಿಗೆ ವಜ್ರದ ಹರಳು ಕೆತ್ತಿದೆ. ಮೂಗಿಗೆ ಕೂಡಿಸಿ ಕೆನ್ನೆಗೆ ನೂರು ಮುತ್ತು ಕೊಡಬೇಕೆಂದು ಮಾಡಿದ ಲವಲವಿಕೆ ಇಂದು ಲವಿಲವಿಯಾಗಿದೆ. ಕೈಯೊಳಗಿನ ಮೂರು ಸೆಲ್ಲಿನ ಬ್ಯಾಟರಿಯಿಂದ ಅವಳ ಅಂಗ ಪ್ರತ್ಯಂಗಗಳ ಮೇಲೆ ಬೆಳಕು ಕೆಡವಿ ಸೂರ್ಯನಾರಾಯಣನೂ ನೋಡದ

ಸೌಂದರ್ಯ ಪ್ರದೇಶಗಳನ್ನು ನೋಡಬೇಕೆಂದು ಮಾಡಿದ ಕಣ್ಣಾಸೆ ಇಂದು ಕುರುಡಾಗಿದೆ. ಈ ಕಾಮ ಭಾವನೆಯ ನಿರಾಶೆಯ ಉದ್ವಿಗ್ನತೆ ನೂರು ಉರಿ ನಾಲಗೆಯಿಂದ ಎದ್ದು ನಿಂತಿತು. ಗೌಡರನ್ನು ಮುತ್ತಿಕೊಂಡಿತು. ಏನು ಮಾಡಲಿ? ಏನು ಮಾಡಲಿ? ಎಂದು ಆಲೋಚಿಸಿತು. ಆದರೆ ಗೌಡರ ಜನಸಂಗ್ರಹ, ಧರ್ಮರಕ್ಷೆ ಅವರನ್ನು ಎದೆ ಹಿಡಿದು ನಿಲ್ಲಿಸಿತು. ಸೋತು ಹಿಂದೆ ಸರಿದರು. ಎದುರು ನಿಂತು ಸೋಲಿಸುವುದು ಅಸಾಧ್ಯವೆನಿಸಿತು. ಮುಂದೆ? ಹಿಂದೆ? ಬುದ್ಧಿಯ ವಿಕೃತ ರೂಪವು ಮೈದಾಳಿ ಬೇರೊಂದು ದಾರಿಯನ್ನು ಹಿಡಿಯಿತು. ದಾರಿಯೂ ಸಾಗಿತು, ಬೆಳಕೂ ಕಂಡಿತು. ಕೃತಿಯು ಸಿದ್ಧಿಸುವಂತೆ ಕಂಡಿತು. ಜಟ್ಟರ ಧೂಮನನ್ನು ಕರೆಕಳಿಸಿದರು. ಅವನು ೮-೧೦ ನಿಮಿಷದಲ್ಲಿ ಬಂದು ಸಲಾಮು ಮಾಡಿದನು.

"ಧೂಮು, ನೀನು ಮನೆಯಲ್ಲಿ ಇರುವೆಯೋ ಇಲ್ಲವೋ ಎಂದು ತಿಳಿದಿದ್ದೆ." ಎಂದು ನುಡಿಯುತ್ತ ಒಂದು ಸಿಗರೇಟು ಸೇದಲು ಕೊಟ್ಟನು.

ಬರುಟು ತಂಬಾಕದ, ಮಣ್ಣಿನ ಚಿಲುಮೆಯ ಭಕ್ತನಾದ ಧೂಮನಿಗೆ ಸಿಗರೇಟಿನ ಆದರವು ಘನ ಮರ್ಯಾದೆಯಾಯಿತು.

"ಇದೇಕೆ ಅಪ್ಪಾ ಅವರೇ? ರಾತ್ರಿ ಮನೆ ಬಿಟ್ಟು ಎಲ್ಲಿ ಹೋಗುವದು?"

"ಹಗಲು ಕೆಲಸವಿಲ್ಲ. ರಾತ್ರಿ ಉದ್ಯೋಗವಿಲ್ಲ. ಜೀವನವನ್ನು ಸುಖದಿಂದ ಕಳೆಯುವಿರಿ ಎಂದರೆ ಯಾರಾದರು ನಂಬಬಹುದೇ?" ಎಂದು ಮೂರು ಮಂಗನ ಕಡ್ಡಿಯ ಪೆಟ್ಟಿಗೆಯನ್ನು ಚೆಲ್ಲಿದನು.

"ನೀವೂ ಹೀಗೆ ಅನ್ನ ಹತ್ತಿದರೆ ನಾವು ಬದುಕುವದೆಂತು!" ಎಂದು ಕಡ್ಡಿಯನ್ನು ಕೆರೆದು ಸಿಗರೇಟು ಹೊತ್ತಿಸಿದನು.

"ನನ್ನದೊಂದು ಕೆಲಸವನ್ನು ಮಾಡುವೆ ಏನು?" ಸಿಗರೇಟು ಹೊತ್ತಿಸುತ್ತ ಕೇಳಿದ ಚಿನ್ನಯ್ಯ.

"ಏನರಿ?" ಹೊಗೆಯ ಬಾಯಿಂದ ಕೇಳಿದನು.

"ನೀನು ಬೇಡಿದಷ್ಟು ಹಣ ಕೊಡುವೆ." ಬಾಯಿಂದ ಹೊಗೆಯೇ ಬಂದಿತು. ಬೆಂಕಿಯು ಇಲ್ಲವೆ ಉರಿಯು ಬರಲಿಲ್ಲ ಇನ್ನು.

"ಏನು ಹೇಳಿರಿ."

"ಸಮೀಪಕ್ಕೆ ಬಾ." ಎಂದು ಕರೆದು ಗೌಡರ ಮನೆಯನ್ನು ಒಡೆದು ಇದ್ದುದೆಲ್ಲವನ್ನು ದೋಚಿಕೊಂಡು ಹೋಗಲು ವಿವರವಾಗಿ ತಿಳಿಸಿದನು.

"ಗೌಡರ ಮನೆ !"

"ನಾನು ಒಂದು ದಿನ ಹೇಳುವೆ. ನೀನೂ ವಿಚಾರದಲ್ಲಿರು."

"ಹೆದರಿಕೆ ಅಪ್ಪಾ ಅವರೇ !"

"ಹೆದರಬೇಕಿಲ್ಲ."

"ಅವರು ಊರಗೌಡರು. ನಮ್ಮ ಗಂಡಸರನ್ನೆಲ್ಲ ಬೇಡಿಯಲ್ಲಿ ಕೂಡಿಸಬಹುದು."

"ಹೆದರಬೇಡ. ಅದರಲ್ಲಿ ಜಯವಾದರೆ ತಂದುದೆಲ್ಲ ವಸ್ತ್ರ-ಒಡವೆಗಳು ನಿಮ್ಮವೇ ! ಮೇಲೆ ನನ್ನ ಇನಾಮು."

"ಸಿಕ್ಕರೆ !"

"ಹಣವನ್ನು ರಾಸಿಯಾಗಿ ಸುರಿದು ಬಿಡಿಸಿ ತರುವೆ."

"ತುರಂಗ !"

"ಎಲ್ಲರೂ ಸಿಗುವೆವೆಂದು ಹೆದರಿದರೆ ನಿಮಗೆ ಜಟ್ಟರೆಂದು ಯಾರು ಕರೆಯುವರು. ನೀವು ಸಿಕ್ಕುವದೇ ಇಲ್ಲ. ನಾಲ್ವರಲ್ಲಿ ಒಬ್ಬನು ಸಿಕ್ಕನೆಂದು ತಿಳಿಯಿರಿ. ಅವನೊಬ್ಬನು ತುರಂಗ ಸೇರಿದರಾಯಿತು. ಬಿಡಿಸಲು ನಾನು ಪ್ರಯತ್ನಿಸುವೆ. ತುರಂಗವೇ ನಿಶ್ಚಯವಾಯಿತೆನ್ನಿ. ನಾನು ಅವನ ಮನೆಯವರಿಗೆ ತಿಂಗಳೂ ಸಾಲುವಷ್ಟು ಹಣವನ್ನು ಕೊಡುವೆ. ಇದು ನಿಶ್ಚಯ. ನನ್ನ ಮಾತೆಂದರೆ ವಚನವೆಂದು ತಿಳಿಯಿರಿ. ನನ್ನಿಂದ ಅದಾಗದೆನ್ನುವಿರಾ ?"

"ಹಾಗೇನಿಲ್ಲ ಬಿಡರಿ."

"ಮಾಡಿರಿ. ಮಾಡುವೆನೆಂದು ವಚನ ಕೊಡಿರಿ."

"ವಿಚಾರಿಸುವೆವು."

"ಇದೋ ನೂರು ರೂಪಾಯಿ." ಎಂದು ಹಸಿರು ನೋಟೊಂದನ್ನು ಅವನ ಮುಂದೆ ಒಗೆದನು.

"ನೋಡಿ ಹೇಳುವೆವು."

"ಹಾಗೇ ಆಗಲಿ. ನೋಟು ತಿಗೆದುಕೋ !"

"ಆ ಮೇಲೆ ಒಯ್ಯುವೆವು."

"ತೆಗೆದುಕೋ ! ಆಗಲಿಲ್ಲವೆಂದರೆ ಬಂದು ಹೇಳುವಿರಿ. ಆಗ ತಂದುಕೊಡು. ತೆಗೆದುಕೋ !"

ಧೂಮನು ಅನುಮಾನಿಸಹತ್ತಿದನು.

"ತೆಗೆದುಕೋ. ಹೆದರಬೇಡ."

ಧೂಮನು ನೋಟನ್ನು ತೆಗೆದುಕೊಂಡು ಎದ್ದು ನಿಂತನು.

"ಆದರೆ ಇನ್ನೊಂದು...." ಚಿನ್ನಯ್ಯನು ನುಡಿದನು.

"ಅದೇನು ?"

"ಕಡೆಯ ಮಾತು...."

"ಅದು ನಮ್ಮಿಂದ ಆಗದು."

"ಅದೇ ಮುಖ್ಯ."

"ಅದು ನಮಗೆ ಸಲ್ಲದ ಮಾತು. ಮನೆಯಲ್ಲಿ ನಮಗೆ ಹೆಂಡತಿಯರಿರುವರು. ಕಳವು ಮಾಡುವೆವು. ಹೊಲಸು ಕೆಲಸ ಮಾಡುವದಿಲ್ಲ ಅಪ್ಪಾ ಅವರೇ....ದೇವರು ಮೆಚ್ಚಲಾರ."

"ಧೂಮ ನನ್ನ ಮುಖ್ಯ ಕೆಲಸ ಅದೇ ಇದ್ದಿತು !"

"ಉಹು....ಹೋಗುವೆನು." ಎಂದು ಮುಜುರೆಯನ್ನು ಮಾಡಿ ಸಿಗರೇಟಿನ ತುದಿಯ ಬೆಂಕಿಯನ್ನು ನಂದಿಸಿ ತುಂಡು ಸಿಗರೇಟನ್ನು ಕಿಸೆಯಲ್ಲಿಟ್ಟುಕೊಂಡು ಮನೆಯ ಹಾದಿಯನ್ನು ಹಿಡಿದನು.

ಚಿನ್ನಯ್ಯನು ತೂಗುಬಿದ್ದ, ತಂಗವ್ವನಿಗಾಗಿ ತಂದ ಸೀರೆಯನ್ನು ಮುದ್ದೆಯನ್ನಾಗಿ ಮಾಡಿ ಎದೆಗೆ ಒತ್ತಿಕೊಳ್ಳ ಹತ್ತಿದನು. ಗಂಗಾವನ ವನ್ನು ಮುಖದ ಮೇಲೆ ಆಡಿಸಿಕೊಳ್ಳ ಹತ್ತಿದನು.

೧೪

ಓಕಳಿಯೊಳಗೆ ಜನರ ತುಳಿದಾಟದಿಂದ ಮುಗಿಲವರೆಗೆ ಎದ್ದ ಪಾದ ಧೂಳಿಯು ಒಮ್ಮೆ ನೆಲಕ್ಕೆ ಬಂದು ಕುಳಿತಿತು. ನಾಲ್ಕಾರು ದಿನ ಹುಚ್ಚು ಹೊಳೆಯಾಗಿ ಹರಿದ ಸಂತಸ ಒಮ್ಮೆಲೆ ಹರಿಗಡಿಯಿತು. ಜನರು ಪುನಃ ತಮ್ಮ ಉದ್ಯೋಗ-ವ್ಯವಸಾಯಗಳಿಗೆ ತೊಡಗಿದರು. ಕೆಲವು ನಿರುದ್ಯೋಗಿ ಮುದುಕರು, ಅವರ ಎದುರು ಬೀಡಿಯನ್ನು ಸೇದುವ ಕೆಲವು ಕುಚೋದ್ಯ ತರುಣರು ಓಕಳಿಯ ಸಂಭ್ರಮದ ಹರಟೆಯನ್ನು ಕಟ್ಟೆಯ ಮೇಲೆ ಕುಳಿತು ಇನ್ನೂ ಹೊಡೆಯುವರು. ಓಕಳಿಯ ಹೊಂಡದ ತಳದಲ್ಲಿ ಉಳಿದ ಶೇಷ ಜಲದಲ್ಲಿ ಸಾಲೆಯ ಮಕ್ಕಳು ಕೈ ಅದ್ದಿ ಎದುರು ನಿಂತವರಿಗೆ ಚಿಮುಕಿಸುವರು. ಇಲ್ಲವೆ ಕಲ್ಲು ಒಗೆದು ನೀರು ಜಗಿಸುವರು. ಮತ್ತು ತೇಲಿ ಬಿಟ್ಟ ನಾವೆಗಳಲ್ಲಿ ಮಣ್ಣು-ಕಲ್ಲು ತುಂಬಿ ಮುಳುಗಿಸಿ ಕೇಕೆ ಹೊಡೆಯುವರು. ಓಕಳಿಯಲ್ಲಿ ಹೋಳಿಗೆ-ಹುಗ್ಗಿಗಳನ್ನು ತಿಂದು ಹುಳಿಯೇರಿದ ನಾಲಗೆಯು ಬಿಳಿ ಜೋಳದ ರೊಟ್ಟಿ-ನುಚ್ಚನ್ನು ಬೇಡುತ್ತಿದೆ. ಇಂಥ ಸಮಯದಲ್ಲಿ ಅಪ್ಪಾರಾಯರು ಪಡಸಾಲೆಯಲ್ಲಿ ಕುಳಿತು ಚಂಚಿಯನ್ನು ಬಿಚ್ಚಿ ಅಡಕೆಯನ್ನು ಕತ್ತರಿಸುತ್ತಿದ್ದರು. ಮನಸಿಗೆ ಅಂದು ಬೇಜಾರು. ಕೈ ಕಾಲುಗಳು ಸೋತಿದ್ದವು. ವಯೋಮಾನಕ್ಕನುಸರಿಸಿ ಮನಸೂ ಮುದುಡಿದ್ದಿತು. ಓಕಳಿಯಲ್ಲಿ ಓಡಾಡಿದ ದಣಿವೆಂದೇ ಅವರ ಭಾವನೆ.

ಹಿರಿಯ ಮಗನಾದ, ವಯಸಿಗೆ ಬಂದ ರಾಜಣ್ಣ ಓಕಳಿಯ ೭-೮ ದಿನ ಕಣ್ಣಿಗೆ ಬಿದ್ದಿರಲಿಲ್ಲ. ಮಗನ ದಿನಚರಿಯ ಕಡೆಗೆ ಈವರೆಗೆ ಲಕ್ಷ್ಯ ಹಾಕಿರಲಿಲ್ಲ. ತೋಟ-ಪಟ್ಟಿ, ಹೊಲ-ಗದ್ದೆಗಳನ್ನು ತಾವೇ ಸುತ್ತಾಡಿ ಬರಬೇಕಿದ್ದಿತು, ರೈತರ ಖಂಡ, ಲಾವಣಿಗಳನ್ನು ತಾವೇ ನಿರ್ಧರಿಸ ಬೇಕಾಗಿದ್ದಿತು. ಅದರ ವಸೂಲಿಗಾಗಿ ತಾವೇ ಹೆಣಗಾಡುತ್ತಿದ್ದರು. ಮನೆಯಲ್ಲಿ ಈ ವರುಷ ಬಂದ ಜೋಳವೆಷ್ಟು, ಕಡಲೆ ಎಷ್ಟು, ನವಣೆ ಎಷ್ಟು, ಸೆಜ್ಜೆ ಎಷ್ಟು, ಕುಸುಬೆ ಎಷ್ಟು ಇವುಗಳ ಲೆಕ್ಕವನ್ನು ತಾವೇ ಇಡುತ್ತಿದ್ದರು. ತೋಟದಲ್ಲಿಯ ಫಸಲೆಷ್ಟು? ಯಾವ ಫಸಲಿಗೆ ಯಾವ ಬೆಲೆ? ಈಗ ಮಾರಬಹುದೇ? ತಿಂಗಳವರೆಗೆ ನಿಲ್ಲಬಹುದೇ? ತಾಲೂಕಿನಲ್ಲಿ ಅದರ ಬೆಲೆ ಏನು? ಧಾರಣೆ ಏರೀತೇ? ಇಳಿಯು ವದೇ? ದಲಾಲ ಚೌಡಪ್ಪನನ್ನು ಎಂದು ಕಾಣುವದು? ಮಾಲನ್ನು ಅಡತಿಯ ಅಂಗಡಿಗೆ ಎಂದು ಹಚ್ಚುವದು? ಮಾರಿ ಬಂದ ಹಣದಿಂದ ಅಕ್ಕಿಯನ್ನು ಎಷ್ಟು ತರುವದು? ಅರವಿಗೆ ಎಷ್ಟು ಹಣ ಇಡುವದು? ಉಪ್ಪು, ಮಸಾಲೆಗಾಗಿ ಹಣವೆಷ್ಟು? ಇದನ್ನೂ ವಿಚಾರಿಸಬೇಕಾಗಿ ದ್ದಿತು. ಅಲ್ಲದೆ ಹೊಲದ ಒಡ್ಡು-ಬಡಕಲುಗಳಿಗೆ ಹಣವೆಷ್ಟು, ಯಾವ ಹೊಲದ ಕರಿಕೆಯನ್ನು ಕಡಿಸಬೇಕು, ಎಂಟು ಎತ್ತಿನ ನೇಗಿಲನ್ನು ಯಾವ ಹೊಲಕ್ಕೆ ಹೊಡೆಯಿಸಬೇಕು, ಆಳಿನವರ ಕೂಲಿ, ಗಂಡಾಳು ಹೆಣ್ಣಾಳು ಎಷ್ಟು? ತಮ್ಮ ಖಾಸಗೀ ಖರ್ಚಿಗೆ ಎಷ್ಟು ಹಣವನ್ನಿಟ್ಟುಕೊಳ್ಳಬೇಕು. ಇತ್ಯಾದಿಗಳನ್ನು ತಾವೇ ಲೆಕ್ಕ ಹಾಕಿ ಗೊತ್ತು ಮಾಡಬೇಕಾಗಿದ್ದಿತು. ರಾಜಣ್ಣನು ಲೋಕಾಭಿರಾಮನಂತೆ ಊಟ, ಬೇಟ ಇವೆರಡನ್ನೇ ಇಟ್ಟುಕೊಂಡಿದ್ದನು. ತಂದೆಗೆ ಬಹುಶಃ ಭೆಟ್ಟಿಯಾಗುತ್ತಿರಲಿಲ್ಲ. ಅಪ್ಪಾರಾಯರಿಗೆ ಇಷ್ಟೆಲ್ಲ ಸಂಗತಿಗಳು ಕಣ್ಣ ಮುಂದೆ ಮೂಡಿ ಮೂಡಿ ಮರೆಯಾದವು. ಇದು ತಮ್ಮ ವೃದ್ಧಾಪ್ಯದ ಪೂರ್ವಸೂಚನೆಯೆಂದು ತಿಳಿದರು. ರಾಜಣ್ಣನ ನೆರವು ಬೇಕು! ಅಥವಾ ಇದೆಲ್ಲವನ್ನು ಅವನೇ ಸಾಗಿಸಿಕೊಂಡು ಹೋಗಬಾರದೇಕೆ? ಎಂದೂ ವಿಚಾರಿಸಿದರು. ಮನಸು ನಾಲ್ಕಾರು ವರುಷ ಮಾರ್ಗದರ್ಶಕ

ರಾಗಿ ನಿಂತು ಮಗನ ಪ್ರಪಂಚ ನಿರೀಕ್ಷಣೆ ಮಾಡಬೇಕೆಂದು ಆಶಿಸು ತ್ತಿದ್ದಿತು. ಅದಕ್ಕಾಗಿ ರಾಜಣ್ಣನನ್ನು ಕರೆದರು. ಆದರೆ ಊಟದ ಮನೆಯಲ್ಲಿ ಎಲೆಗಳಲ್ಲಿ ಬೆಲ್ಲದ ಕೆನೆ ಮೊಸರಿನ ಅನ್ನ ಮತ್ತು ಬೆಣ್ಣೆ ಯನ್ನು ಸವರಿದ ರೊಟ್ಟಿಗಾಗಿ ಎರಡು ಗಂಡು ಬೆಕ್ಕುಗಳು ಹುಚ್ಚೆದ್ದು ಬಡಿದಾಡುತ್ತಿದ್ದವು. ಅವುಗಳ ಕರ್ಕಶ ಧ್ವನಿಯು ಅಶಿಕ್ಷಿತರ ಮನೆ ಯಲ್ಲಿಯ ಸಾವಿನ ಅಳುವನ್ನು ಜ್ಞಾಪಿಸಿಕೊಡುತ್ತಿದ್ದಿತು. ರಾಜಣ್ಣ ಎಷ್ಟು 'ಉಸ್'ಎಂದರೂ ಹೋಗಿರಲಿಲ್ಲ. ಕೂದಲಿನ ಬಾಲವನ್ನು ನಿಗರಿಸಿ, ಸೂಲದ ಹಲ್ಲುಗಳನ್ನು ಹಿರಿದು, ಪಂಜರದ ಉಗುರುಗಳನ್ನು ಹೊರದೆಗೆದು, ಮೀಸೆಯ ಕೂದಲನ್ನು ತಿರುವುತ್ತ, ಮೈಯುಬ್ಬಿಸಿ, ದನಿ ಹೆಚ್ಚಿಸಿ ಇನ್ನೂ ಬಡಿದಾಡುತ್ತಿದ್ದವು. ಎರಡರಲ್ಲಿ ಒಂದು ಸಾಯಲೇಬೇಕು ಎಂಬ ಸಂಕಲ್ಪದಿಂದ ಯಾರಿಗೂ ಹೆದರದೆ ನಿಂತಿದ್ದವು. ರಾಜಣ್ಣನು ಒಣಹಾಕುವ ಕೋಲನ್ನು ತಂದು ಒಂದರ ಮೇಲೆ ಹೇರಿದನು. ಒಂದು ಓಡಿಹೋಯಿತು. ಬಡಿತ ತಿಂದುದು ಸೊಂಟವನ್ನು ಎಳೆಯುತ್ತ ಪಾರಾಯಿತು. ಈವರೆಗೆ ಅಪ್ಪಾರಾಯರು ರಾಜಣ್ಣನನ್ನು ೪–೫ ಸಾರಿ ಕೂಗಿದ್ದರು. ಕೊನೆಗೊಮ್ಮೆ ಗಟ್ಟಿಯಾಗಿ "ರಾಜಣ್ಣ !" ಎಂದರು. ರಾಜಣ್ಣನು ಕೈಯೊಳಗಿನ ಬೀಡಿಯನ್ನು ಮಾಡದಲ್ಲಿಟ್ಟು ಓಡುತ್ತ ಬಂದು– "ಏನು" ? ಎಂದನು.

"ಕಿವಿ ಇಲ್ಲವೇನೋ ಮುಟ್ಠಾಳಾ !" ಎಂದು ಬಿರುಸಾಗಿ ನುಡಿದರು.

"ಬೆಕ್ಕಿನ ಕೂಗಾಟದಲ್ಲಿ ಕೇಳಿಸಲಿಲ್ಲ." ಎಂದು ನುಡಿದು ತಂದೆಯ ಬಳಿಯಲ್ಲಿ ಉತ್ತಂಕನಂತೆ ಕೃತಕ ವಿನಮ್ರತೆಯಿಂದ ಕುಳಿತನು.

ಅಪ್ಪಾರಾಯರು ಕತ್ತರಿಸಿದ ಎಲೆಯನ್ನು ಅಂಗೈಯಲ್ಲಿ ತಿಕ್ಕಿ ಬಾಯಿಗೆ ಹಾಕಿಕೊಂಡು, ರಾಜಣ್ಣನನ್ನು ಆಪಾದಮಸ್ತಕದವರೆಗೆ ನೋಡಿ–"ನೀನು ದೊಡ್ಡವನಾದೆ ರಾಜಣ್ಣಾ!" ಎಂದು ನುಡಿದರು.

ರಾಜಣ್ಣನು ಮಾತಾಡಲಿಲ್ಲ.

"ನನಗೂ ವಯಸ್ಸಾಯಿತು ರಾಜಣ್ಣ."

ರಾಜಣ್ಣನು ತಂದೆಯ ಮುಖವನ್ನು ನೋಡಿದನು.

" ಈ ಹೊಲ ಮನೆಯ ಭಾರ ನಿನ್ನಮೇಲೆ ಹಾಕಿ ಎರಡು ದಿನ ಕಾಯಾಗಿ ಇರಬೇಕೆನ್ನುವೆನು. ಏನೆಂದೆ ರಾಜಣ್ಣ ?"

"ನೀವಿರುವ ವರೆಗೆ ಒಪ್ಪಿಸಬೇಡಿರಿ."

"ಅದೇಕೆ ಮಗನೇ ?"

"ನಿಮ್ಮನ್ನು ನೋಡಿ ಆ ಹೊಲತಾಯಿ ಕಾಳು ಕೊಡುವಳು."

"ನೀನಾದರೆ ?"

"ನನಗೆ ಅವಳನ್ನು ಒಲಿಸಿಕೊಳ್ಳುವದು ತಿಳಿಯದು."

"ಎಲ್ಲ ತಿಳಿಯುವದು ರಾಜಣ್ಣ."

ರಾಜಣ್ಣನಿಗೆ ಮುಂದೆ ಮಾತಾಡುವದು ತಿಳಿಯಲಿಲ್ಲ. ಮುಖವನ್ನು ಕೆಳಗೆ ಹಾಕಿ ಕುಳಿತನು.

ಮಗನ ಮಾತಿನಿಂದ, ಮಾತಿನ ಚಮತ್ಕೃತಿಯಿಂದ ಅಪ್ಪಾರಾಯರಿಗೆ ಹರ್ಷವಾಗಿದ್ದಿತು. ಇಂಥ ವಿವೇಕಯುಕ್ತ, ಬುದ್ಧಿಗಮ್ಯವಾದ, ಸುಂದರವಾದ ಮಾತನ್ನು ಆಡಬಹುದೆಂದು ತಿಳಿದಿರಲಿಲ್ಲ. ಆ ಮುದುಕನು ಕಣ್ಣಲ್ಲಿ ಇಳಿದುಬಂದ ಎರಡು ಹನಿ ನೀರನ್ನು ವಲ್ಲಿಯಿಂದ ಒರಸಿಕೊಂಡು—"ಸುಣ್ಣದಕಾಯಿಯಲ್ಲಿ ಸುಣ್ಣವನ್ನು ತುಂಬಿ ತಾ !" ಎಂದು ಹೇಳಿದರು. ರಾಜಣ್ಣನು ಕಾಯಿಯನ್ನು ತೆಗೆದುಕೊಂಡು ಹೊರಗೆ ಬಂದನು. ಕಿಟಕಿಯಿಂದ ಹಿಟಲರನ ಸಿಳ್ಳು ಕೇಳಿಸಿತು. ಬಂದೆ ನಡೆ!' ಎಂದು ಸನ್ನೆಯನ್ನು ಮಾಡಿ ಕಳಿಸಿ ಸುಣ್ಣವನ್ನು ತುಂಬಿ ತಂದಿಟ್ಟನು.

"ನಿಮ್ಮ ಹೊಲ - ತೋಟಗಳನ್ನಾದರೂ ನೋಡಿರುವೆಯಾ?" ಎಲೆಗೆ ಸುಣ್ಣ ತೊಡೆಯುತ್ತ ಕೇಳಿದರು.

"ನೋಡಿರುವೆ."

"ಯಾವವು ?"

"ಗೊತ್ತಿವೆ." ನಗುತ್ತ ನುಡಿದನು.

"ಆ ಮಾಡದಲ್ಲಿಯ ನಕಾಶವನ್ನು ತಾ. ಎಲ್ಲವನ್ನು ತೋರಿಸುವೆ"

ಎಂದರು.

ರಾಜಣ್ಣನು ನಕಾಶದ ಮೇಲಿನ ಧೂಳನ್ನು ಜಾಡಿಸುತ್ತ ತಂದು ಇಟ್ಟನು. ಅಪ್ಪಾರಾಯರು ನೆಲದ ಮೇಲೆ ಅದನ್ನು ಹರಹಿ ಒಂದು ಮೂಲೆಯ ಮೇಲೆ ಚಂಚಿ, ಇನ್ನೊಂದರ ಮೇಲೆ ಅಡಕೊತ್ತು, ಮೂರನೆಯದರ ಮೇಲೆ ಸುಣ್ಣದಕಾಯನ್ನು ಇಟ್ಟರು. ನಾಲ್ಕನೆಯ ಮೂಲೆಯ ಮೇಲೆ ತಮ್ಮ ಎಡಗೈಯನ್ನು ಊರಿ, "ಇದು ನಮ್ಮ ಊರು" ಎಂದು ತೋರಿಸಿದರು.

ರಾಜಣ್ಣನು ಹೂ ಎಂದನು.

"ನಮ್ಮ ಮನೆಯು ಊರ ದಕ್ಷಿಣಕ್ಕೆ ಇದೆ. ಸುಮಾರು ಇಲ್ಲಿ ಬರುವದು."

"ಅಹುದು."

"ಇದು ಗುಳ್ಳಪ್ಪನ ತೋಟ. ಊರ ಆಗ್ನೇಯ ದಿಕ್ಕಿಗಿದೆ. ೬ ಎಕರೆ ಆಗುವದು. ಬಾವಿಯನ್ನು ನಾನೇ ಕಡಿಸಿ ತೋಟ ಮಾಡಿರುವೆ. ವರುಷಕ್ಕೆ ೪೦೦-೫೦೦ ರೂ. ಪ್ರಾಪ್ತಿ ಇದೆ. ಹೊಲ ವಿದ್ದಾಗ್ಗೆ ೮-೧೦ ಚೀಲಕ್ಕೂ ಗತಿಯಿರಲಿಲ್ಲ."

"ನಾನು ನೋಡಿದ್ದೇನೆ."

"ಬಾವಿಯ ನೀರು ಕಬ್ಬಿನ ರಸದಂತೆ ಸೀ."

"ಅಹುದು, ನನಗೆ ಗೊತ್ತು. ಅನೇಕ ಸಲ ಕುಡಿದಿರುವೆ."

"ಇದು ಎಕ್ಕೀ ತೋಟ. ೩ ಎಕರೆ ೧೮ ಗುಂಟೆ ಇದೆ."

"ಹ." ಬೆನ್ನು ತುರಿಸುತ್ತ ನುಡಿದನು.

"ತೋಟದ ಕಾಲು ಭಾಗ ನೆಲ ಗರಸು. ಮತ್ತು ಯಾತದಿಂದ ಎತ್ತರ. ಇನ್ನೂರು ರೂಪಾಯಿಗೆ ಸಾವಿಲ್ಲ."

"ಹ! ನನಗೆ ಗೊತ್ತು. ನಿಮ್ಮ ಸಂಗಡ ಅನೇಕ ಸಾರೆ ಬಂದಿರುವೆ. ಹೋದ ವರುಷ ಉಮ್ಮಿಗೆಯನ್ನು ತಿಂದು ಆ ತೋಟದ ಮೇಲಿಂದ ಬಂದಿರುವೆವು."

"ಇದು ಸೀಮೇ ಹೊಲ. ೫ ಎಕರೆ ೧೯ ಗುಂಟೆ. ಇದು

ಕುಂಟನ ಹೊಲ ೩ ಎಕರೆ ೨೦ ಗುಂಟೆ. ಇದು ಕೋಡೀ ಹೊಲ ೪ ಎಕರೆ. ಇದು ಮೂಲೀ ಹೊಲ ೩ ಎಕರೆ ೩೦ ಗುಂಟೆ. ಕೊನೆಯದು ಇದು ಕಲ್ಲು ಹೊಲ ೧ ಎಕರೆ ೨೭ ಗುಂಟೆ. ಇದರಲ್ಲಿ ಎರಡು ನಂಬರುಗಳಿವೆ. ಮೇಲ್ ಭಾಗವು ಹೊಲ. ಕೆಳಭಾಗದಲ್ಲಿ ಮಾವಿನ, ಹುಣಿಸೆಯ ಗಿಡಗಳಿವೆ. ಉತ್ತಮ ಜಾತಿಯ ಮಾವಿನ ಗಿಡಗಳನ್ನು ನಮ್ಮ ಅಜ್ಜಂದಿರು ಹಚ್ಚಿರುವರು. ನಮ್ಮ ಬನದ ಹಣ್ಣಿನಂತಹ ಹಣ್ಣುಗಳು ಸಮೀಪದಲ್ಲಿ ಸಿಕ್ಕುವದಿಲ್ಲ. ಬಾಳೆಮಾವಿನ ಸೀಕರಣೆ ಬಾಳೆಯ ಹಣ್ಣಿನ ರಸದಂತೆ, ಜೇನು ಮಾವಿನ ಸೀಕರಣೆ ಜೇನು ತುಪ್ಪದಂತೆ, ಕರಿ ಗಿಡದ ಹಣ್ಣು ರಕ್ತದಂತೆ ಕೆಂಪು. ಈ ಹಣ್ಣುಗಳ ಸೀಕರಣೆಗೆ ಸಕ್ಕರೆ, ಬೆಲ್ಲ ಸೇರಿಸುವ ಅವಶ್ಯಕತೆಯಿಲ್ಲ. ಏಲಕ್ಕಿ ಮಾವು ಏಲಕ್ಕಿಯಂತೆ ವಾಸನೆಯುಳ್ಳದು. ಹುಣಿಸೆಯ ಹಣ್ಣಾದರೆ ಈ ಕಡೆಗೆ ತಿನ್ನಲಿಕ್ಕೆ ಜನರಿಲ್ಲ. ಅಷ್ಟು ಹಣ್ಣು. ಅಷ್ಟು ದೊಡ್ಡ ದೊಡ್ಡ ಮರಗಳು. ಪೂರ್ವದ ಕಡೆಯ ಗಿಡಗಳನ್ನು ನಾನೇ ಹಚ್ಚಿರುವೆ. ಹಳ್ಳದ ನೀರನ್ನು ಎತ್ತಿ ತಂದು ಹನಿಸಿ ನಾನೇ ಬೆಳೆಸಿರುವೆ. ಇಷ್ಟು ಪಿತ್ರಾರ್ಜಿತ. ಈ ಕಡೆಯ ಎರಡು ಹೊಲಗಳನ್ನು ನನ್ನ ಸ್ವಂತ ಕರ್ತೃತ್ವದಿಂದ ಗಳಿಸಿರುವೆ. ನೀನು ಇವುಗಳನ್ನು ಚೆನ್ನಾಗಿ ನೋಡಿಕೊಂಡು ಹೋದರೆ ಭೂದೇವಿ ನಿನಗೆ ಏನೂ, ಯಾವ ಬಗೆಯಿಂದಲೂ ಕೊರತೆ ಮಾಡಳು. ಹೊಲಗಳಿಂದ ಬೇಕಾದಷ್ಟು ಕಾಳು ಕಡಿಗಳು ಬರುವವು. ತೋಟಗಳಿಂದ ಮೇಲ್ ಖರ್ಚಿಗೆ ಹಣವು ಬರುವದು. ಒಂದಿಷ್ಟು ಬುದ್ಧಿಯನ್ನು ತೋರಿಸಿದರೆ ಊರಿಂದ ಮಾನ-ಸನ್ಮಾನ ಸಿಕ್ಕುವದು. ಇದು ನಿನ್ನ ವಿವೇಕ ಶಕ್ತಿಯನ್ನು ಅವಲಂಬಿಸಿದೆ. ನೋಡು!" ಎಂದು ನುಡಿದು ತುಂಬಿದ ಬಾಯ ರಸವನ್ನು ಉಗುಳಲು ಎದ್ದರು.

ರಾಜಣ್ಣನು ತಂದೆಯ ಮಾತನ್ನು ಕೇಳುತ್ತಿದ್ದನು.

ಅಪ್ಪಾರಾಯರು ತಿರುಗಿ ಬಂದು—"ರೈತರು ಮಹಾ ಘಟಿಂಗರು. ಯಜಮಾನನ ಕಣ್ಣು ತಪ್ಪಿಸಿ ಬೇಕಾದಂತೆ ನಡೆಯುವರು. ಅವರನ್ನು

ನೂರು ಕಣ್ಣುಗಳಿಂದ ಪರೀಕ್ಷಿಸಬೇಕು. ಒಮ್ಮೆ ಗದರಿಸಬೇಕು. ಒಮ್ಮೆ ಉಬ್ಬಿಸಬೇಕು. ಒಬ್ಬನ ಬೆನ್ನು ತಟ್ಟಿ ಒಬ್ಬನನ್ನು ತುಳಿದು ನಿಲ್ಲಬೇಕು. ಮುಂದೆ ಅವನನ್ನೂ ತುಳಿಯಬೇಕು. ಒಳ್ಳೆಯವನ ಕೂಡ ಒಳ್ಳೆಯವನಾಗಿ ಇರಬೇಕು. ಮೊಂಡ ರೈತನನ್ನು ಪೇಚಿನಲ್ಲಿ ಹಿಡಿಯಬೇಕು. ಅವನ ಗೋಳಾಟವನ್ನು ಹತ್ತು ಜನರಂತೆ ನಿರೀಕ್ಷಿಸಬೇಕು. ಅವನು ಅಸಹಾಯನಾದನೆಂದು ಕಂಡು ಬಂದ ಮೇಲೆ ಧರ್ಮದೇವತೆಯಂತೆ ಅವನ ಬಳಿಗೆ ಹೋಗಿ ಸಹಾಯಮಾಡಿ ಉಳಿಸಬೇಕು. ಅಂದರೆ ಯಜಮಾನನಲ್ಲಿ ಭಕ್ತಿ, ಭಯ ಎರಡೂ ಉಳಿಯುವವು." ಒಂದಿಷ್ಟು ಆಯಾಸವಾಗಲು ನಿಂತರು.

ರಾಜಣ್ಣನು ಎಲ್ಲವನ್ನು ಗ್ರಹಿಸುವಂತೆ ಸುಮ್ಮನಿದ್ದನು.

"ಅಡವಿಯಲ್ಲಿ ಅಷ್ಟು ಹೊಲವಾದರೆ ಊರಲ್ಲಿ ಇದೊಂದು ಮನೆ. ನಿನ್ನಜ್ಜ ಇಷ್ಟು ದೊಡ್ಡ ಮನೆಯನ್ನು ಕಟ್ಟಿಸಿರಲಿಲ್ಲ. ಪ್ರಪಂಚ ಬೆಳೆದಂತೆ ನಾನೇ ವಿಸ್ತರಿಸಿರುವೆ. ಇಷ್ಟು ದೊಡ್ಡ ಮನೆ ಊರಲ್ಲಿ ಮತ್ತಾರದಿಲ್ಲ. ತಾಲೂಕಿನ ಫೌಜದಾರರು, ಮಾಮಲೆದಾರರು, ಒಂದು ಸಲ ಕಲೆಕ್ಟರರು ಇಲ್ಲಿಯೆ ನಿಂತು ಊಟ ಮಾಡಿರುವರು. ಹಾಲು ಕುಡಿದಿರುವರು. ಹಣ್ಣು ತಿಂದಿರುವರು. ಉತ್ತರಾದಿ ಮಠದ ಸ್ವಾಮಿಗಳು ಇದೇ ನಮ್ಮ ಮನೆಯ ಅಂಗಳದಲ್ಲಿ ತಮ್ಮ ರತ್ನ ಮಂಟಪವನ್ನು ಕೂಡಿಸಿ ಮೂರು ದಿನ ಒಂದೇ ಸಮನೆ ಪೂಜೆ ಮಾಡಿ ತೀರ್ಥ-ಪ್ರಸಾದ ಸೇವಿಸಿರುವರು. ನಮ್ಮೂರು ಖಾದಿಯ ಕೇಂದ್ರ ಎದ್ದ ಸಮಯದಲ್ಲಿ ದೇಶಭಕ್ತರಾದ, ಮಹಾತ್ಮಾ ಗಾಂಧಿಜಿಯವರ ಪಟ್ಟ ಶಿಷ್ಯರಾದ ಜಮುನಾಲಾಲ ಬಜಾಜರು ಊರ ಪ್ರತಿಷ್ಠಿತರ ಸಂಗಡ ಇಲ್ಲಿಯೇ ಊಟ ಮಾಡಿ, ಅಂದಿನ ರಾತ್ರಿಯನ್ನು ಇಲ್ಲಿಯೇ ಕಳೆದಿರುವರು. ಇಷ್ಟು ಮರ್ಯಾದೆಯ ಮನೆಯಲ್ಲಿ ನೀನು ಹುಟ್ಟಿರುವೆ. ಆ ಮನೆಯ, ಕುಲದ ಮರ್ಯಾದೆಯನ್ನು ಕಾಯ್ದುಕೊಂಡು ಹೋಗುವದು ನಿನ್ನ ಕೆಲಸ." ಎಂದು ಉಪದೇಶವನ್ನು ಮುಗಿಸಿ ಸುಮ್ಮನಾದರು.

ರಾಜಣ್ಣನು ತಂದೆಯ ಉಪದೇಶವನ್ನು ಕೇಳುತ್ತ ಕುಳಿತಿದ್ದನು.

"ರಾಜಣ್ಣ ಏನೆಂದೆ ?"

"ನಿಮ್ಮ ಸಹಾಯದಿಂದ ಎಲ್ಲವನ್ನು ಕಲಿತು ನೀವು ಹೇಳಿದಂತೆ ನಡೆಯುವೆ."

"ನಿನ್ನ ಸಂಬಂಧ ಕೆಲವು ಇಲ್ಲದ–ಸಲ್ಲದ ಮಾತುಗಳನ್ನು ಕೇಳಿರುವೆ."

"ಅವೆಲ್ಲ ಹುಟ್ಟಿಸಿದ ಮಾತುಗಳು. ನೀವು ನಂಬಬೇಡಿರಿ."

"ಹಾಗೆ ಹುಟ್ಟಿಸದಂತೆಯೇ ನಡೆಯಬೇಕು."

"ನಮ್ಮ ಮೇಲೆ ಕೆಲವರು ಬೇಕೆಂತಲೇ ಬೆಂಕಿಯನ್ನು ಕಾರುವರು."

"ಕಾರಲಿ ಒಂದಿಲ್ಲೊಂದು ದಿನ ಅವರ ಬೆಂಕಿ ತಣ್ಣಗಾಗುವದು."

"ನಾನು ನೀವು ಹೇಳಿದಂತೆ ಕೇಳುವೆ."

"ಇದೇ ಬೇಕು ರಾಜಣ್ಣ."

ಒಳಗಿನಿಂದ "ರಾಜಣ್ಣ. ರಾಜಣ್ಣ !" ಎಂದು ಕೂಗಿದರು.

"ಏನು ? ನೋಡು." ಅಪ್ಪಾರಾಯರು ನುಡಿದರು.

ರಾಜಣ್ಣನು ಒಳಗೆ ಹೋಗಿ, ತಿರುಗಿ ಬಂದು ನಿಂತನು.

"ಏನು ?" ಎಂದು ಕೇಳಿದರು.

"ಏನಿಲ್ಲ." ಮುಖವನ್ನು ಹೊರಳಿಸಿದನು

"ಅದೇನು ?"

"ಅವ್ವನು ಬಂದಳು."

"ಸ್ತ್ರೀ ರತ್ನ. ಹೆಣ್ಣುಮರಿ. ಕೊನೆಗೆ ಅಕ್ಕಾಮರಿಯು ಪಾರಾದಳು. ಬೆಳಗಿನಿಂದ ಗೋಳಾಡುತ್ತಿದ್ದಳು. ದೇವರು ಪಾರು ಮಾಡಿದನು. ಎಂಥ ಸುಂದರ ಕೂಸು. ಅಕ್ಕಾಮರಿಯ ಬಾಯಿಂದ ಕಳಚಿ ಬಿದ್ದಂತಿದೆ. ಬಹಳ ಮುದ್ದು ! ಬಹಳ ಮಾಟ ! ಪಿಟ್ಟೇದ ಗೊಂಬೆಯಾಗಿದೆ." ಎಂದು ರಾಜಣ್ಣನ ತಾಯಿಯಾದ ಅವ್ವಕ್ಕನು ಒಂದೇ ಉಸಿರಿನಿಂದ ನುಡಿದಳು.

ರಾಜಣ್ಣನು ಮೀಸೆಯಲ್ಲಿಯೇ ನಕ್ಕನು.

"ಇಂದು ನೀನು ತಂದೆಯಾದೆ ರಾಜಣ್ಣ !"

"ಅಹುದು ರಾಜಣ್ಣ. ಅಪ್ಪನ ಸಿಂಹಾಸನವನ್ನು ಇಂದು ನೀನು ಕಸಿದುಕೊಂಡೆ." ಎಂದು ಅಪ್ಪಾರಾಯರು ನಗ ಹತ್ತಿದರು.

"ಅಪ್ಪಾ ಬಾ....!" ಅವ್ವಕ್ಕನೂ ನಗ ಹತ್ತಿದಳು.

"ಇರಲಿ ಬಿಡು ಅವ್ವಾ...."

"ನೀವು ಬಾಳಂತಿಯ ಸಾಮಾನುಗಳನ್ನು ಇನ್ನೂ ತಂದಿಲ್ಲ. ಸೊಸೆಯು ತಾಯಿಯಾದಳು. ನಿಮ್ಮ ಕೆಲಸದ ದರಬಾರದಲ್ಲಿ ಮನೆಯವರನ್ನು ನೋಡಲು ವೇಳೆಯೇ ಉಳಿಯುವದಿಲ್ಲ. ಇನ್ನಾದರೂ ತೆಗೆದುಕೊಂಡು ಬನ್ನಿರಿ." ಅವ್ವನು ನುಡಿದಳು.

"ಹೋದ ಸಂತೆಗೆ ತರಿಸಿರುವೆ. ನೀನೇ ತೆಗೆದು ಇಟ್ಟಿರುವೆ."

"ಹೋದ ಸಂತೆಯ ಗಂಟಿನಲ್ಲಿ ಬಾಳಂತಿಯ ಸಾಮಾನುಗಳಿರುವವೇ ! ಇನ್ನೂ ನಾನು ಬಿಚ್ಚಿಯೇ ಇಲ್ಲ."

"ನಿನ್ನಂತಹ ಮರವ ಗೇಡಿ ನೀನೇ ಸರಿ. ಇದು ಹಿಡಿ ಕಸ್ತೂರಿಯ ಬಾಟಲಿ. ವಿಳ್ಯದ ಎಲೆಗಳು ಬಚ್ಚಲ ಮನೆಯ ಉಸುಕಿನಲ್ಲಿರುವವು" ಎಂದು ಕಸ್ತೂರಿಯ ಬಾಟಲಿಯನ್ನು ಕೊಟ್ಟರು. ಅವ್ವಕ್ಕನು ತೆಗೆದುಕೊಂಡು ಒಳಗೆ ಹೋದಳು.

"ರಾಜಣ್ಣ ಇಂದು ರಾತ್ರಿ ಆಚಾರ್ಯರಿಗೆ ಬರಹೇಳು."

"ಏಕೆ ?"

"ರಾತ್ರಿ ಸೂಕ್ತಕ್ಕೆ. ಹೆಸರಿಡುವ ದಿನ ಸತ್ಯನಾರಾಯಣನ ಪೂಜೆಯಾಗಲಿ. ಸಕ್ಕರೆಯನ್ನು ಹಂಚಿರಿ. ಏನೇ ಒಳಗೆ ಹೋದೆ ಏನು ?"

"ಅವ್ವಾ ಇಲ್ಲಿ ಬಾ."

ಅವ್ವಕ್ಕನು ಬಂದಳು.

"ರಾಜಣ್ಣ ನೀನು ಹೋಗು. ಕೋಟಿಗೇರವನ ಅಂಗಡಿಯಿಂದ ಒಂದು ಮಣ ಸಕ್ಕರೆಯನ್ನು ತೆಗೆದುಕೊಂಡು ಬಾ."

"ಒಂದು ಮಣ !"

"ಹೌದು. ಊರೊಳಗಿನ ನಮ್ಮ ಪರಿಚಯದ ಎಲ್ಲರ ಮನೆಗೆ ಮುಟ್ಟಿಸಬೇಕು. ನೀನುಹೋಗು."

ರಾಜಣ್ಣನು ಒಬ್ಬ ಹಳಬನನ್ನು ಕರೆದುಕೊಂಡು ಹೋದನು.

"ಏಕೆ ಕರೆದಿರಿ ?" ಅವ್ವಕ್ಕ ಕೇಳಿದಳು.

"ನಾನು ಕೂಸನ್ನು ನೋಡಲೇನು ? ಬಹಳ ದಿನಗಳಿಂದ ಮನೆಯಲ್ಲಿ ಸಣ್ಣ ಮಕ್ಕಳು ಇರಲಿಲ್ಲ."

"ಇನ್ನೊಂದಿಷ್ಟು ನಿಲ್ಲಿರಿ. ಅಲ್ಲಿಯು ಹೊಲಸು ತೆಗೆಯು ಬೇಕಾಗಿದೆ."

"ಏನೇ ದನಿಯೋ ಕೇಳವೊಲ್ಲದು ! ಅತ್ತಿತೋ ಇಲ್ಲವೋ ?"

"ಅಳದೇನು ? ಬಾಯಿಯನ್ನು ಆಡಿಸುವದು ನಿಲ್ಲಲಿ. ಎಲ್ಲವೂ ಕೇಳುವದು. ಕೇಳಿರಿ. ಕೇಳಿರಿ...."

ಅಪ್ಪಾರಾಯರು ದವಡೆಗಳನ್ನು ಕೂಡಿಸಿದರು. ಕಿವಿಗಳನ್ನು ಅರಳಿಸಿದರು. ಲಾಲಿಸುತ್ತ "ಅಹುದಲ್ಲ ! ಎಷ್ಟು ಕೋಮಲವಾಗಿದೆ. ಎಲ್ಲಮ್ಮನ ಕಾಲಗೆಜ್ಜೆಯಂತೆ ಎಷ್ಟು ಕೋಮಲ !" ಎಂದು ಮೀಸೆಯಲ್ಲಿ ಮುಗುಳುನಗೆಯ ಮಲ್ಲಿಗೆಯನ್ನು ಚಿಮ್ಮಿದರು.

# ೧೫

ಚಿನ್ನಯ್ಯನ? ತೇಜೋವಧೆಯು ಸರದಿಯು ಸಾಲಿನಂತೆ ಸಾಗಿತ್ತು. ಅವನಲ್ಲಿ ಹಣವಿದ್ದಿತು. ಕೆಲಜನರ ಬೆಂಬಲವಿದ್ದಿತು. ತಾಲೂಕಿನವರೆಗೂ ಹಣವನ್ನು ಸುರಿದು ಹಿಡಿದ ಕೆಲಸವನ್ನು ಮಾಡೇನೆಂಬ ಹೆಮ್ಮೆ ಇದ್ದಿತು. ಮೈಯಲ್ಲಿ ಇನ್ನೂ ಬಿಸಿರಕ್ತವಿದ್ದಿತು. ಆದರೆ ಪ್ರತಿ ಸ್ಪರ್ಧಿಯಾಗಿ ಗೌಡರು ಬಂದರೆ ಚಲವಿಚಲಿತನಾಗುತ್ತಿದ್ದನು. ಗೌಡರಿಗೆ ಊರಲ್ಲಿ ಪ್ರತಿಷ್ಠೆ. ತಾಲೂಕಿನಲ್ಲಿ ವಸೀಲಿ. ಮೇಲೆ ಕಚೇರಿಯಲ್ಲಿ ತಮ್ಮ ಜಾತಿಯ ಒಬ್ಬಿಬ್ಬರು ಸಣ್ಣಪುಟ್ಟ ಅಧಿಕಾರಿಗಳು. ಅವರಿಗೆ ಕಾಯದೆಯಂತೆಯೇ ನಡೆದು ಕೆಲಸವನ್ನು ಸಾಧಿಸಿಕೊಳ್ಳುವ ಪೂರ್ವಾನುಭವದ ಹತೋಟಿ. ಇದರಿಂದ ಒಕ್ಕಲ ಮಕ್ಕಳಲ್ಲಿ ಅವರ ಬಗ್ಗೆ ಇದ್ದ ಪೂಜ್ಯ ಭಾವನೆ ಕಡಮೆಯಾಗಿರಲಿಲ್ಲ. ಚಿನ್ನಯ್ಯ, ಗೌಡರ ಪಾರುಪತ್ಯಕ್ಕೆ ವಾಮ ಮಾರ್ಗವನ್ನು ಹಿಡಿಯಬೇಕಾಯಿತು. ಬೇರೆದಾರಿ ಇರಲಿಲ್ಲ. ಅದಕ್ಕಾಗಿ ಜಟ್ಟರನ್ನು ಹುರಿದುಂಬಿಸಿದ್ದನು. ನಾಲ್ಕಾರು ಸಾರೆ ಕರೆಸಿ ತಿನಿಸಿದ್ದನು. ಕೈ ಬೆಚ್ಚಗೆ ಮಾಡಿದ್ದನು. ಮಾತಿನಿಂದ ಅವರ ಗಡ್ಡ-ತುಟಿಗಳನ್ನು ಹಿಡಿದಿದ್ದನು. ಆದರೆ ಅವರು ಕೆಲದಿನ ನಿಲ್ಲಿರಿ. ಇನ್ನೆರಡು ದಿನ ಹೋಗಲಿ. ಗೌಡರು ಎಚ್ಚರದಿಂದ ಇರುವವರೆಗೆ ಈ ಕೆಲಸ ಆಗದು. ಅವರು ಮೈ ಮರೆಯಲಿ. ಎಲ್ಲ ಮಾಡುವೆವು. ನಿಮಗೆ ವಚನ ಕೊಟ್ಟ

ಮೇಲೆ ಮಾಡಿಯೇ ತೀರುವೆವು. ಎಂದು ನುಡಿಯುತ್ತಿದ್ದರು.

"ನೀವು ಒಪ್ಪಿ ಈಗ ಮೂರು-ನಾಲ್ಕು ತಿಂಗಳಾಯಿತು." ಚಿನ್ನಯ್ಯ ಕೇಳಿದನು.

"ಅಹುದು. ಇದೇನು ದೊಡ್ಡ ಮಾತು."

"ನಾಲ್ಕು ತಿಂಗಳೆಂದರೆ ಕಡಮೆಯೇ ?"

"ರಾಯರೇ ಬಗರನಾಳದ ಗುಜ್ಜರ ಮನೆಯನ್ನು ಲೂಟಿ ಮಾಡಲು ೮ ತಿಂಗಳ ಹಾದಿಯನ್ನು ನೋಡಿದೆವು. ಇಂದು ರಾತ್ರಿ ತಲೆಯಲ್ಲಿ ವಿಚಾರ ಬಂದರೆ ನಾಳೆ ರಾತ್ರಿಯೆ ಹೊರಡಬಹುದೇ! ಮನೆಯನ್ನು ಒಡೆಯುವ ಪೂರ್ವದಲ್ಲಿ ಎಲ್ಲ ದಿಕ್ಕುಗಳಿಂದ ಆದರ ಪರೀಕ್ಷೆ ಮಾಡಬೇಕಾಗುವದು."

"ಅಂದರೆ !"

"ನಾವು ಒಡೆಯುವ ಮನೆಯ ಕಲ್ಲುಗಳನ್ನು ಎಣಿಸುವೆವು. ಗೋಡೆಯನ್ನು ಅಳೆಯುವೆವು. ಬಾಗಿಲುಗಳ ಲೆಕ್ಕ ಹಾಕುವೆವು. ಅಕ್ಕ ಪಕ್ಕದ ಮನೆಗಳನ್ನು ನೋಡುವೆವು. ಅವುಗಳಲ್ಲಿ ವಾಸಿಸುವ ಗಂಡು-ಹೆಣ್ಣುಗಳ ಸ್ವಭಾವವನ್ನು ತಿಳಿಯುವೆವು. ಮನೆಯ ಕಿಂಡಿ-ಕಿಡಿಕಿಗಳ ಎಣಿಕೆ ಹಾಕುವೆವು. ಅಲ್ಲಿ ಮಲಗುವ ಕೂಲಿ-ನಾಲಿಗಳ ಮುಖವನ್ನು ನೋಡಿಕೊಳ್ಳುವೆವು. ಬಾಗಿಲುಗಳ ಚಿಲಕ-ಕೊಂಡಿಗಳ ಕ್ರಮವನ್ನು ತಿಳಿಯಬೇಕು. ಕಳವು ಮಾಡುವ ಮನೆಯ ಹಬ್ಬ-ಸೋಬಾನಗಳನ್ನು ನೆನಪಿನಲ್ಲಿಡಬೇಕು. ಕೊನೆಗೆ ನಾವೆಲ್ಲರೂ ಕೂಡಿ ನಿರ್ಣಯಿಸಬೇಕು. ದಿನವನ್ನು ಗೊತ್ತುಮಾಡಬೇಕು. ಒಳಗೆ ಹೋಗುವವರು ಯಾರು, ಹೊರಗೆ ನಿಲ್ಲುವವರು ಯಾರು, ದೂರ ಇರುವವರು ಯಾರು ? ಓಡಿ ಹೋಗುವವರು ಯಾರು, ಯಾವ ದಿಕ್ಕಿಗೆ ಹೋಗಬೇಕು, ಪುನಃ ಎಲ್ಲಿ ಕೂಡಬೇಕು ? ಇಷ್ಟೆಲ್ಲ ಆದಮೇಲೆ ಕಳವು, ತುಡುಗು, ದರವಡೆ ! ಗುಂಡು ಹಾರಿದಂತೆ ಕೆಲಸವಾದರೆ ಊರಲ್ಲಿ ಬದುಕುವುದುಂಟೇ !" ಎಂದು ನುಡಿದನು.

ಅವನು ಒಪ್ಪಿಕೊಂಡ ಕೆಲಸದ ಹಿಂದೆ ಇಷ್ಟು ಆಲೋಚನೆ,

ತಂತ್ರ, ಮಂತ್ರ ಇರುವದೆಂದು ಚಿನ್ನಯ್ಯನು ತಿಳಿದಿರಲಿಲ್ಲ ಅವನ ಸುದೀರ್ಘ ಭಾಷಣವನ್ನು ಕೇಳಿ "ಬೇಗನೆ ಮುಗಿದು ಸಂತೋಷ ಪಡಬೇಕೆಂದಿರುವೆನು ಧೂಮ !" ಎಂದು ಮೆಲ್ಲಗೆ ನುಡಿದನು.

"ಇನ್ನಷ್ಟು ದಿನ ತಾಳಿರಿ. ಮಾಡುವೆವು." ಎಂದು ನುಡಿದು ನಮಸ್ಕರಿಸಿ ಹೋದನು ಧೂಮ.

ವಿಕೃತಮಾರ್ಗದಿಂದ ಹರಿವ ಚಿನ್ನಯ್ಯನ ವಿಚಾರಧಾರೆ ಮತ್ತೆ ಆಲೋಚಿಸಹತ್ತಿತು. ಆದರೆ ಕೊನೆಮೊದಲಿಲ್ಲ. ಸಾಗಿಸಾಗಿ ಮತ್ತೆ ತಿರುಗಿ ಬಂದಿತು. ಆದರೂ ಕೆಲದಿನಗಳ ಹಿಂದೆ ಒಂದು ಕೆಲಸವನ್ನು ಮಾಡಹೇಳಿದ್ದನು. ಅದರ ಫಲಿತಾಂಶವನ್ನು ನಿರೀಕ್ಷಿಸಬೇಕೆಂದು ಥಕ್ಕನೆ ನೆನಪಾಯಿತು. ಸೂರ್ಯನು ಪಶ್ಚಿಮಕ್ಕೆ ಇಳಿಯುತ್ತಿದ್ದನು. ಬಟ್ಟೆಬರೆಗಳನ್ನು ತೊಟ್ಟುಕೊಂಡನು. ಕುದುರೆಗೆ ಥಡಿಯನ್ನು ಏರಿಸಿದನು. ಸಂದಿಯ ಹಾದಿಯನ್ನು ಹಿಡಿದನು. ತಾಸೆರಡು ತಾಸಿನಲ್ಲಿ ಹಳ್ಳಿಯನ್ನು ಮುಟ್ಟಿದನು. ದೊಡ್ಡಪ್ಪನ ಮನೆಯ ಮುಂದೆ ಕುದುರೆಯನ್ನು ನಿಲ್ಲಿಸಿ—

"ಇರುವನೇ ?" ಎಂದು ಕೂಗಿದನು.

ದೊಡ್ಡಪ್ಪನು ಹಿತ್ತಿಲಲ್ಲಿ ಹಗ್ಗವನ್ನು ಹೊಸೆಯುತ್ತಿದ್ದನು. ಕುದುರೆಯನ್ನು ಕಂಡು, ನಾರುಪಾಚಿಗಳನ್ನು ಹಿಡಿದುಕೊಂಡು ಹೊರಗೆ ಬಂದು ನಮಸ್ಕಾರವನ್ನು ಹೇಳಿ ಸ್ವಾಗತಿಸಿದನು. ಚಿನ್ನಯ್ಯನು ಇಳಿದು ಒಳಗೆ ಪಡಸಾಲೆಯಲ್ಲಿ ಹಾಸಿದ ಕಂಬಳಿಯ ಮೇಲೆ ಮಂಡಿಸಿದನು. ದೊಡ್ಡಪ್ಪನು ಕುದುರೆಯನ್ನು ಕಟ್ಟಿ ಹುಲ್ಲು ಹಾಕಿ, ಥಡಿ ಇಳಿಸಿ ಎದುರು ಬಂದು ಕುಳಿತನು.

"ದೊಡ್ಡಪ್ಪ ರೂಪಾಯಿಯನ್ನು ಕೂಡಿಸಿದೆಯೋ ಇಲ್ಲವೋ ?"

"ಬಳ್ಳೊಳ್ಳಿಯನ್ನು ಮಾರಿ ನಿಮ್ಮ ಹಣ ಕೊಡುವೆ. ಇನ್ನೊಂದು ಹದಿನೈದು ದಿನಗಳು ಹೋಗಲಿ."

"ಅಲ್ಲ. ನನ್ನ ಹಣದ ಅಡಚಣೆಯನ್ನು ನೀನು ನೋಡಬೇಕು ದೊಡ್ಡಪ್ಪ !"

"ನೋಡಿರುವೆ ಸಾವುಕಾರರೇ! ಬಳ್ಳೊಳ್ಳಿ ವಾರಿಂದ ಮೇಲೆ ನಿಮ್ಮ ಹಣದಲ್ಲಿಯು ಒಂದು ದುಡ್ಡು ಇಟ್ಟುಕೊಳ್ಳುವದಿಲ್ಲ. ನಿಮ್ಮ ಮನೆಯವರಿಗೆ ತಂದು ಮುಟ್ಟಿಸುವೆ"

"ನೋಡು!"

"ನಿಜವಾಗಿ. ಬಸವಣ್ಣನ ಆಣೆ ಎಂದರೂ ಮುಟ್ಟಿಸುವೆ."

"ಆಗಲಿ. ಪುಟ್ಟವ್ವನ ಹಣಕ್ಕೆ ಏನು ಮಾಡಿದೆ?"

"ಈ ವರುಷ ಆಗುವದಿಲ್ಲವೆಂದು ಸ್ಪಷ್ಟ ಹೇಳಿರುವೆ."

"ಅದಕ್ಕೆ ಅವಳು ಏನೆಂದಳು?"

"ನೀನು ಕೊಡದಿದ್ದರೆ ನಿನ್ನ ಹೊಸ್ತಿಲ ಮುಂದೆ ಉಪವಾಸ ಬಿದ್ದು ಸಾಯುವೆನೆಂದು ಹೇಳಿರುವಳು."

"ಹೋಗಲಿ. ನೀನು ಕೊಡಲೇಬೇಡ."

"ಕೊಡುವದುಂಟೇ!"

"ಸಾಯಲಿ ಒಂದು ಪೀಡೆಯಾದರೂ ಹೋದೀತು."

"ನೋಡಿರಿ! ಒಂದು ಕಾಸು ಕೊಡುವದಿಲ್ಲ."

"ಒಳ್ಳೇದು ನಾನು ಹೋಗುವೆ."

"ಹಾಲು ಕಾಯಲಿಕ್ಕೆ ಇಟ್ಟಿರುವೆನು."

"ಬೇಡ. ನನಗೆ ಬೇರೆ ಕೆಲಸವಿದೆ." ಎಂದು ನುಡಿದು ಕುದುರೆಯನ್ನು ಹತ್ತಿ ಮೆಲ್ಲಗೆ ಸಾಗಿದನು. ೭-೮ ಹೆಜ್ಜೆ ನಡೆದಿರ ಬೇಕು. ಒಂದು ಹುಡುಗಿಯು ಓಡುತ್ತ ಬಂದು ಕುದುರೆಯ ಮುಂದೆ ನಿಂತಿತು.

"ನೀನು ಯಾರು! ಕುದುರೆಯ ಕಾಲಲ್ಲಿ ಸಿಕ್ಕು ಸಾಯ ಬೇಕೆಂದಿರುವೆ ಏನು?" ಎಂದು ಗದರಿಸಿದನು.

"ಪುಟ್ಟವ್ವನವರು ನಿಮ್ಮನ್ನು ಕಾಣಬೇಕೆಂದಿರುವರು. ನಿಮಗೆ ವೇಳೆ ಇದೆಯೋ? ಎಂದು ಕೇಳಿರುವರು." ಎಂದು ಚಿನ್ನಯ್ಯನವರನ್ನು ಉದ್ದೇಶಿಸಿ ನುಡಿಯಿತು.

"ಅವರಿಗೆ ನಾನು ಬಂದುದು ಹೇಗೆ ಗೊತ್ತು?"

"ಹಳ್ಳದಿಂದ ನೀರು ತರುವ ಮುಂದೆ ನಿಮ್ಮ ಕುದುರೆಯನ್ನು ನೋಡಿದರಂತೆ."

"ಈಗ ಅವರು ಎಲ್ಲಿರುವರು ?"

"ಇದೇ ಓಣಿಯ ತುದಿಯಲ್ಲಿರುವರು ? ನೋಡಿರಿ. ಅಲ್ಲಿ ನಿಂತಿರುವರು."

"ನಾನು ಬರುವೆನೆಂದು ಹೇಳು."

ಹುಡುಗಿಯು ಹೋದಳು.

ಚಿನ್ನಯ್ಯನ ಕುದುರೆ ಮುಂದೆ ಸಾಗಿತು. 'ಏನು ಕೆಲಸ ವಿರಬೇಕು ?' ಎಂದು ಆಲೋಚಿಸುತ್ತ ಫಕೀರನ ಮನೆಗೆ ಬಂದನು. ಫಕೀರನು ಬರಮಾಡಿಕೊಂಡನು.

"ಪುಟ್ಟವ್ವನವರು ನಿಮ್ಮನ್ನು ಹುಡುಕುತ್ತಿದ್ದರು."

"ಅಹುದು."

"ಹೋಗಿ ಬನ್ನಿರಿ. ಏನು ಅಡಚಣಿಯೋ ? ಇಲ್ಲಿ ಒಬ್ಬರ ಮುಂದೂ ಬಾಯಿ ತೆಗೆದವರಲ್ಲ. ಕೈ ಮುಂದೆ ಮಾಡಿದವರಲ್ಲ."

"ಮತ್ತೇನಿರುವದು ! ಹೋದ ವರುಷ ಇಸಿದುಕೊಂಡ ನೂರು ರೂಪಾಯಿಗಳನ್ನು ಇನ್ನೂ ಮುಟ್ಟಿಸಿಲ್ಲ. ಈಗ ಮತ್ತೆ ಹಣ ಬೇಕಾಗಿದ್ದೀತು !"

"ದೊಡ್ಡಪ್ಪ ಹೋದ ವರುಷದಿಂದ ಲಾವಣಿಯ ಹಣವನ್ನು ಕೊಟ್ಟಿಲ್ಲ. ಇಲ್ಲಿಯ ಆಕೆಯ ಬಳಗದವರು ನೋಡುವದಿಲ್ಲ. ಪಾಪ ಹೇಗೆ ಬದುಕಬೇಕು ! ಆದರೂ ನಿಮ್ಮ ಸಾಲದ ಹಣದಿಂದ ಇನ್ನೂ ಜೀವದಿಂದ ಇರುವಳು."

"ಹಾರುವರ ಹೆಂಗಸರು ನಿಮ್ಮಂತೆ ರೊಟ್ಟಿ, ನುಚ್ಚು ತಿನ್ನುವದಿಲ್ಲ. ಅವರಿಗೆ ಅಕ್ಕಿಬೇಕು. ತುಪ್ಪಬೇಕು. ಬೇಳೆಬೇಕು. ಬೆಲ್ಲಬೇಕು. ಹಬ್ಬ-ಹುಣ್ಣಿವೆಗೆ ಹೋಳಿಗೆ-ಕಡಬುಬೇಕು. ಅವರು ಒಂದು ಹೊತ್ತು ತಿಂದರೂ ನಿಮ್ಮ ನಾಲ್ಕು ದಿನದಷ್ಟು ಉಣ್ಣುವರು. ಅದಕ್ಕೆ ಅವರ ಮುಖದ ಮೇಲೆ ಬೆಳಕಿರುವದು. ಮಾತಿನಲ್ಲಿ ಸಕ್ಕರೆ

ಇರುವದು. ನಿಮ್ಮಂತೆ ಕತ್ತಲೆಯು ; :ತಿಯಾಗಲಿ, ಒಣಗಿದ ಒರಟು ಮಾತುಗಳಾಗಲಿ ಇರುವದಿಲ್ಲ. ತಿಂದರೆ ಅದನ್ನೇ ತಿನ್ನುವರು. ಇಲ್ಲದಿದ್ದರೆ ಉಪವಾಸ ಸಾಯುವರು."

"ಅವರದು ಅವರಿಗೆ. ನಮ್ಮದು ನಮಗೆ ಚಿನ್ನಯ್ಯನವರೇ !"

ಚಿನ್ನಯ್ಯನು ಅಲ್ಲಿಂದ ಹೊರಟು ಪುಟ್ಟವ್ವನ ಮನೆಯ ಕಡೆಗೆ ಸಾಗಿದನು. ಪುಟ್ಟವ್ವನು ಕಟ್ಟೆಯಮೇಲೆ ಕುಳಿತಿದ್ದಳು. ಅಯ್ಯನವರ ಬರವನ್ನು ಕಂಡು ಸಾವರಿಸಿಕೊಂಡು ಎದ್ದುನಿಂತು ಒಳಗೆ ಬರಲು ಹೇಳಿದಳು. ಚಿನ್ನಯ್ಯನು ಹಾಸಿದ ಹುಲ್ಲಿನ ಚಾಪೆಯ ಮೇಲೆ ಕುಳಿತನು. ದೂರದಲ್ಲಿ ಎದುರು ಪುಟ್ಟವ್ವನು ಕುಳಿತಳು.

"ನೀವು ಬಂದುದು ನನಗೆ ಗೊತ್ತಾಯಿತು. ಅದಕ್ಕೆ ಕಾಣ ಬೇಕೆಂದು ಹೇಳಿಕಳಿಸಿದ್ದೆ."

"ಗೊತ್ತಾಯಿತು. ಅದಕ್ಕೆ ಬಂದಿರುವೆ. ಏನು ?"

"ಏನು ಹೇಳಬೇಕು ! ನನ್ನ ಬವಣೆಯನ್ನು ಕೇಳಲು ನೀವೊಬ್ಬ ರಾದರೂ ಇರುವಿರಿ. ಇದೇ ನನ್ನ ಸುದೈವ."

"ನಿಮ್ಮ ಭಾವ–ಮೈದುನರು ಇರುವರು."

"ಇರುವರು. ನನ್ನ ಸಾವಿನ ದಿನಗಳನ್ನು ಎಣಿಸುತ್ತಿರುವರು."

"ಹೀಗೇ ?"

"ಅದನ್ನೇನು ಮಾಡುವಿರಿ. ಇಂದಿಗೆ ಅವರು ನನ್ನ ಕಡು ವೈರಿಗಳು."

"ಹಾಗಾದರೆ ಮತ್ತೇನು ?"

"ದೊಡ್ಡಪ್ಪ ನನ್ನ ರೈತ. ನೀವು ಬಲ್ಲಿರಿ. ಗಂಡ ಸತ್ತಮೇಲೆ ಭಾವ-ಮೈದುನರ ಮನೆಯಲ್ಲಿಯೇ ನಿಂತೆನು. ಆದರೆ ಅವರ ಹೆಂಡರ ಕಾಟ ಮಿತಿಮೀರಿತು. ನಾನು ಅಡಿಗೆಯವಳೆಂದೇ ತಿಳಿದರು. ಮಕ್ಕಳು ಮರಿಗಳು ಸಹ ನನ್ನನ್ನು ಹಾಗೆಯೇ ಕರೆಯ ಹತ್ತಿದವು. ನನ್ನ ಕಾಟವನ್ನು ಭಾವ ಮೈದುನರು ಕಾಣುತ್ತಿರಲಿಲ್ಲ. ಕೇಳುತ್ತಿರಲಿಲ್ಲ. ಮಗಳ ಮನೆಯಲ್ಲಿ ಹೋಗಿ ನಿಲ್ಲಲು ನನಗೆ ಮನಸುಬಾರದು. ನಾನು

ಬೇರೆ ನಿಲ್ಲಬೇಕೆಂದೆ. ಉತ್ಪನ್ನವನ್ನು ಅವರೇ ಬಳಿದುಕೊಂಡರು. ನನ್ನ ಹೊಟ್ಟೆಗೆ ಒಂದು ಹೊಲವನ್ನು ಬಿಟ್ಟಿರುವರು. ಇದು ಅಪ್ಪಾರಾಯನ ಪುಣ್ಯ. ನಾನು ಕೊಟ್ಟ ಮಗಳಿಗಾಗಿ ಅವರು ಕೋರಿದ ಕೃಪೆ. ಅದರಿಂದ ಬರುವ ಹಣದಲ್ಲಿ ಏನೋ ಗಂಜಿಯನ್ನು ಕುಡಿದು ಬದುಕಿರುವೆ. ಈಗ ಮೂರು ವರುಷದಿಂದ ಅಪ್ಪಾರಾಯನು ಬೇರೆಯಾಗಿರುವನು. ಇದೆಲ್ಲ ಅವರ ಕುಚೋದ್ಯವೇ ಇರಬೇಕು. ಆಚೆಯ ವರುಷ ನೂರು ರೂಪಾಯಿ ಕೊಟ್ಟನು. ಹೋದ ವರುಷ ಐವತ್ತು ಕೊಟ್ಟನು. ಈ ವರುಷ ಬೆಳೆಗೇಡು ಎನ್ನುತ್ತಿರುವನು. ಭಾವಮೈದುನರಿಗೆ ಹೇಳುವಂತಿಲ್ಲ. ಹೇಳಿದರೆ ಮಣ್ಣು ತಿನ್ನು ಹೊಲ ಇಟ್ಟುಕೊಂಡಿರುವೆ, ಎನ್ನುವರು. ಹೆಚ್ಚು ಕೇಳುವಂತಿಲ್ಲ. ಆ ಗಯ್ಯಾಳಿ ನಾದಿನಿಯ ಮಾತುಗಳಿಂದ ಅವರು ನನ್ನನ್ನು ಅಸ್ಪೃಶ್ಯಳನ್ನಾಗಿ ಮಾಡಿರುವರು. ಅವರ ಶ್ರಾದ್ಧವನ್ನು ಮಾಡುವರೆಂದು ಕೇಳಿರುವೆ. ಊಟಕ್ಕೆ ಸಹ ಕರೆಯುವದನ್ನು ಬಿಟ್ಟಿರುವರು. ಈಗ ನನಗೆ ಯಾರೂ ಇಲ್ಲ. ನನ್ನ ಹೊಲ ಮನೆಯ ವ್ಯವಹಾರವನ್ನು ನಾನೇ ಮಾಡಬೇಕಾಗಿದೆ ಅದಕ್ಕಾಗಿ ಅವರಿವರನ್ನು ಕಾಣಬೇಕಾಗುವದು. ಮಾತಾಡಬೇಕಾಗುವದು. ಬೇಡು-ಕೊಡುವದಾಗುವದು. ಇದರಿಂದ ಹಾನಿಏನು? ಹೆಂಗಸು ಅಲ್ಲಲ್ಲಿ ಹೋಗುವದು ಅಪವಾದದ ಮೂಲವಂತೆ! ಇದು ದೇವರ ವರೆಗೂ ಸರದಿ. ಅದನ್ನು ತೆಗೆದುಕೊಂಡು ಮಾಡುವದೇನು? ಈಗ ನಿಮಗೆ ಶರಣು ಬಂದಿರುವೆನು. ನನ್ನ ಉಪಜೀವನದ ಮಾರ್ಗ ನಿಮ್ಮ ಕೈಯಲ್ಲಿದೆ. ನೀವು ಪ್ರಯತ್ನಿಸಿದರೆ ನಾನು ಎರಡು ತುತ್ತು ತಿನ್ನುವೆನು. ಇದೆಲ್ಲವನ್ನು ತೋಡಿಕೊಳ್ಳಬೇಕೆಂದು ನಿಮ್ಮನ್ನು ಕಾಣಬೇಕೆಂದಿದ್ದೆ." ಎಂದು ಕಣ್ಣೊರಸಿಕೊಂಡಳು.

"ನಿಮ್ಮ ಭಾವ-ಮೈದುನರು ನಿಮಗೆ ನೆರವಾಗಬೇಕು."

"ಅವರು ನನ್ನ ಪಾಲಿಗೆ ಸತ್ತಿರುವರು. ನಾನು ಸಾಯುವ ಹಾದಿಯನ್ನು ನೋಡುತ್ತಿರುವರು. ನನಗೂ ಬದುಕಬೇಕೆಂಬ ಆಶೆ ಇಲ್ಲ. ಪ್ರಾಣ ಹೋಗಬೇಕಷ್ಟೇ! ದುರ್ಮರಣದಿಂದ ಸತ್ತು ಇಲ್ಲಿಯ

ಕಷ್ಟಕ್ಕಿಂತಲೂ ಅಧಿಕವಾದ ಕಷ್ಟವನ್ನು ಯಮದೂತರ ಕೈಯಿಂದ ತಿನ್ನಬೇಕೇ ?" ಕಂಪಿಸುತ್ತ ಮಾತಾಡಿದಳು

"ನಿಮ್ಮ ಜಾತಿಯವರಿರುವರಲ್ಲ !"

"ಇರುವರು ಹುಟ್ಟಿದಾಗ. ಸತ್ತಾಗ, ಹಬ್ಬ-ಹುಣ್ಣಿವೆಗೆ ಮೃಷ್ಟಾನ್ನ ಭೋಜನಕ್ಕೆ, ಕೈ ತುಂಬ ದಕ್ಷಿಣೆಗೆ, ಬಾಯಿ ತುಂಬ ತಾಂಬೂಲಕ್ಕೆ ಮೇಲೆ ಬಿದ್ದು ಬರುವರು."

"ಅಲ್ಲ, ನೀವು ಬ್ರಾಹ್ಮಣರು, ಸುಸಂಸ್ಕೃತರು, ತಿಳಿದವರು, ಜ್ಞಾನಿಗಳು, ಒಬ್ಬರು ಇನ್ನೊಬ್ಬರಿಗೆ ಕಷ್ಟದಲ್ಲಿ ನೆರವಾಗುವದಿಲ್ಲವೇ?"

"ಈ ನಿಮ್ಮ ಮಾತುಗಳು ಪುರಾಣಯುಗದ ಬ್ರಾಹ್ಮಣರಿಗೆ ಅನ್ವಯಿಸುವವು. ಇಂದಿನ ಬ್ರಾಹ್ಮಣರೂ ಹಾಗೇ ಎಂದರೆ, ಬ್ರಾಹ್ಮಣನು ಮಹಾತ್ಮಾ ಗಾಂಧಿಯವರನ್ನು ಕೊಲ್ಲುತ್ತಿದ್ದನೇ?"

"ನಿಮ್ಮ ವಂಶವಾದರೂ ಶ್ರೇಷ್ಠವಲ್ಲವೇ ?"

"ಹೌದು. ಅದಕ್ಕಾಗಿಯೇ ಗಂಡ ಸತ್ತಮೇಲೆ ನನ್ನ ತಲೆಯನ್ನು ಬೋಳಿಸಿ ಅಮಂಗಳನ್ನಳಾಗಿ ಮಾಡಿರುವರು. ಇದರಿಂದ ಇತ್ತ ಧರ್ಮಕ್ಕೂ ಬಾಹಿರಳು, ಸಮಾಜಕ್ಕೂ ಬಾಹಿರಳು. ಕನ್ನಡಿಯಲ್ಲಿ ನನ್ನ ಮುಖವನ್ನು ನೋಡಿದರೆ ನನಗೇ ಹೇಸಿಕೆ ಎನಿಸುವದು. ಅದಕ್ಕೆ ನಾವು ಕನ್ನಡಿಯಲ್ಲಿ ಮುಖ ನೋಡಬಾರದೆಂದು ಶಾಸ್ತ್ರ ಹೇಳುವರು."

"ನನಗೆ ಕೆಡಕೆನಿಸುವದು "

"ಚಿನ್ನಯ್ಯನವರೇ, ಅವರು ತೀರಿಕೊಂಡ ಮೇಲೆ ನನ್ನ ಪ್ರಕೃತಿಯಲ್ಲಿ ಆದ ಬದಲಾವಣೆ ಏನು ? ಹಸಿವೆ ಮೊದಲಿನಂತೆಯೇ ಇದೆ. ಎದೆಯು ಮೊದಲಿನಂತೆಯೇ ಇದೆ. ನಿದ್ದೆ, ನೀರಡಿಕೆ, ಆಶೆ, ಆಕಾಂಕ್ಷೆ ಯಾವದರಲ್ಲಿ ಲೋಪ ! ಜೀವ ಬದುಕಬೇಕೆಂದು ಇನ್ನೂ ಆಶಿಸುವದು. ನಾಳೆ ಹೇಗೆ ಎಂದು ಇಂದೇ ಆಲೋಚಿಸುವದು. ಮಾನವನ ಸಾಮಾನ್ಯವಾದ ಬಯಕೆಗಳು—ಭಾವನೆಗಳು ಇನ್ನೂ ಇವೆ. ಆದರೆ ಸಮಾಜವು ತಲೆ ಕೊಯಿದು, ಬಳೆ ಒಡಿದು, ಕುಂಕುಮ ಅಳಿಸಿ, ಮಂಗಳಸೂತ್ರ ಹರಿಯಿತು. ಹರಿದು ತೆಗೆದರೂ ಒಳಗಿನ ಒಂದು ಕಿಡಿಯನ್ನು ಸಹ

ನಂದಿಸಲಿಲ್ಲ. ಹಾಗೇ ಇವೆ, ಅಚ್ಚಳಿಯದೆ ಇವೆ. ದಿನಂಪ್ರತಿ ಹೊಸ ಹೊಸದಾಗಿ ಹುಟ್ಟುವವು." ಒಂದಿಷ್ಟು ತಡೆದು ಮತ್ತೆ–"ಇದೆಲ್ಲ ಏನು ಮಾಡುವದು! ನೀವು ಒಂದು ಕೆಲಸ ಮಾಡಿರಿ" ಎಂದು ಮಾತು ಮುಗಿಸಿದಳು.

ಚೆನ್ನಯ್ಯನು ಆ ಬ್ರಾಹ್ಮಣಿಯ ಮಾತುಗಳನ್ನು ಕಿವಿಯರಳಿಸಿ ಕೇಳುತ್ತಿದ್ದನು. ಅವಳ ವಾದ, ಅವುಗಳಿಗೆ ಕೊಟ್ಟ ಪ್ರಮಾಣ, ತನ್ನ ಆಂತರಿಕ ಭಾವನೆಗಳ ಉದ್ದೀಪನ, ಅವುಗಳ ಅಸಾಧ್ಯ ನಿರ್ಬಂಧನೆ, ತನ್ನ ಸಮಾಜವು ನಡಿಸಿಕೊಂಡ ಅರ್ಥಶೂನ್ಯ ಪರಂಪರಾಗತ ಕ್ರೌರ್ಯ, ಆ ಕೌರ್ಯದ ಅಶಾಂತಿಗೆ ತನ್ನವರು ತೋರಿಸುವ ಅವಹೇಳನ ಇತ್ಯಾದಿಗಳನ್ನು ಅರಿತುಕೊಂಡನು. ಬ್ರಾಹ್ಮಣರಲ್ಲಿ ಏನಿಲ್ಲದಿದ್ದರೂ ನಾಲಗೆಯ ಮೇಲೆ ಪ್ರಸಂಗಕ್ಕೆ ಉಚಿತವಾಗಿ ಮಾತನಾಡುವ ಶಬ್ದ ಶಕ್ತಿಯಿದೆ, ಅರ್ಥ ಶಕ್ತಿಯಿದೆ, ಭಾವ ಶಕ್ತಿಯಿದೆ, ಇನ್ನೊಂದು ಜೀವವನ್ನು ತನ್ನ ಅಭಿಪ್ರಾಯಕ್ಕೆ ಪರಿವರ್ತಿಸುವ ಮಾತ ಸಾಮರ್ಥ್ಯವಿದೆ ಎಂದು ತಿಳಿದುಕೊಂಡನು. ಪುಟ್ಟವ್ವನು ಅನಾಥಳಾದರೂ, ಅಸಹಾಯಳಾದರೂ, ಹೆಂಗಸಾದರೂ ಒಂದು ಬಗೆಯ ಗೌರವಕ್ಕೆ ಪಾತ್ರಳೆಂದು ಸ್ಪಷ್ಟವಾಯಿತು. ಸಹಾಯಮಾಡುವದು ಕರ್ತವ್ಯವೆಂದು ಕೊನೆಗೆ "ನಿಮ್ಮ ಕೆಲಸವೇನು ಹೇಳಿರಿ?" ಎಂದು ಕೇಳಿದನು.

"ದೊಡ್ಡಪ್ಪನು ನಿಮ್ಮ ರೈತ. ನಿಮ್ಮ ಮಾತನ್ನು ಕೇಳುವನು. ನಿಮ್ಮ ಹೆದರಿಕೆಯೂ ಇದೆ. ಅವನಿಂದ ನನ್ನ ಹಣವು ಬರುವಂತೆ ಮಾಡಿದರೆ ನಿಮ್ಮ ಉಪಕಾರವನ್ನು ಸ್ಮರಿಸುತ್ತ ಊಟ ಮಾಡುವೆ. ಈ ಬ್ರಾಹ್ಮಣ ವಿಧವೆಯು ನಿಮಗೆ ಹೇಳಿಕೊಳ್ಳುವದು ಇಷ್ಟೇ!" ಎಂದು ನುಡಿದು ತನ್ನ ಹಸಿಯಾದ ಕಣ್ಣುಗಳನ್ನು ಒರಸಿಕೊಂಡಳು.

"ನಾನು ಮಾಡುವೆ. ಇನ್ನು ಮುಂದೆ ನಿಮ್ಮ ಹೊಲದ ಹಣವನ್ನು ನಾನೇ ಮುಟ್ಟಿಸುವೆನು." ಎಂದು ಹೇಳಿದನು.

ಈ ಆಶ್ವಾಸನದಿಂದ ಆ ವಿಧವೆಯ ಮುಖದ ಮೇಲೆ ಸಂತೋಷದ

ಮಿಂಚು ಮೂಡಿದಂತಾಯಿತು. ಮುಖವು ಚೆಂಬಣ್ಣಕ್ಕೆ ತಿರುಗಿತು.

ಪುಟ್ಟವ್ವನು ಮೊದಲೇ ರೂಪವತಿಯು. ದೇಹದ ಮಾಟ ಚಿಕ್ಕದು. ಬಣ್ಣ ನಸುಗೆಂಪು. ಮಿಂಚುವ ಕಣ್ಣು, ಉಬ್ಬಿದ ಕೆನ್ನೆ, ನೀಳವಾದ ಮುಖ, ತೀಡಿದ ಹುಬ್ಬು, ಉಬ್ಬಿದ ಎದೆ, ಅವಳು ತಾಯಿಯಾಗಿರುವಳೆಂಬ ಮಾತಿಗೆ ಸಂಶಯವನ್ನುಂಟು ಮಾಡು ತ್ತಿದ್ದವು. ಅಲ್ಲದೆ ಗಂಡ ಸತ್ತ ಮೇಲಿನ ಒಂದು ಹೊತ್ತಿನ ಊಟದಿಂದ ಮುತ್ತೈದೆಯ ಕಾಲದಲ್ಲಿಯ ಕೊಬ್ಬೆಲ್ಲ ಕರಗಿ ಈಗ ಹುರಿಹಾಕಿದ ಹಗ್ಗದಂತಾಗಿದ್ದಿತು. ಚಿನ್ನಯ್ಯ ಆಪಾದಮಸ್ತಕದವರೆಗೆ ನೋಡಿ ಬೆರಗಾದನು.

"ಇನ್ನು ನೀವು ಹೆದರಬೇಕಿಲ್ಲ. ಸುಗ್ಗಿಮುಗಿಯಲು ನಾನೇ ಹಣವನ್ನು ತಂದು ಒಪ್ಪಿಸುವೆನು." ಮತ್ತೆ ನುಡಿದನು.

"ನಿಮ್ಮ ಉಪಕಾರವನ್ನು ಮರೆಯಲಾರೆ." ಎಂದು ಎದ್ದು ಒಳಗೆ ಹೋಗಿ ಬಂದು ತಟ್ಟೆಯಲ್ಲಿ ಉಂಡೆ, ಅವಲಕ್ಕಿ, ಚಕ್ಕುಲಿಯನ್ನು ತಂದಿಟ್ಟಳು.

"ಇದೇನು ಪುಟ್ಟವ್ವನವರೇ ?"

"ಏನೋ ಅಲ್ಪೋಪಹಾರ. ತೆಗೆದುಕೊಳ್ಳಿರಿ." ಎಂದು ಆಗ್ರಹ ಮಾಡಿದಳು.

ಚಿನ್ನಯ್ಯನು ಅವಳನ್ನೇ ನೋಡ ಹತ್ತಿದನು.

"ಏನೋ ಸಂತೋಷವೆನಿಸಿ ಕೊಟ್ಟಿರುವೆ. ತೆಗೆದುಕೊಳ್ಳಿರಿ." ಎಂದು ವಿನಂತಿಸಿದಳು.

ಚಿನ್ನಯ್ಯನು ಒಂದೊಂದಾಗಿ ತಿನ್ನ ಹತ್ತಿದನು.

"ಬ್ರಾಹ್ಮಣರ ಅಡಿಗೆ ಬಹಳ ರುಚಿ. ನನಗೆ ಗೊತ್ತಿದೆ. ನಮ್ಮ ಜಾತಿಯವರು ಇಂಥ ತಿಂಡಿ ಮಾಡಬೇಕಾದರೆ ನೂರು ವರುಷ ಬೇಕು." ಎಂದು ಮೆಲುಕಾಡಿಸುತ್ತ ವರ್ಣಿಸಿದನು.

"ಅದೇಕೆ ನಿಮ್ಮಲ್ಲಿಯ ಹೆಂಗಸರೂ ಮಾಡಬಲ್ಲರು."

"ಇಲ್ಲ ಬಿಡಿರಿ ! ನಿಮ್ಮ ಅಡಿಗೆ ಬಹಳ ರುಚಿ."

"ಹಾಗಾದರೆ ಇಂದು ಇಲ್ಲೇ ಊಟಮಾಡಿರಿ. ನಾನು ಮಾಡಿ ಹಾಕುವೆ."

"ಮಠಕ್ಕೆ ಹೇಳಿಕಳಿಸಿರುವೆನು."

"ಕಳಿಸಿದರೇನಾಯಿತು! ಈಗ ಬರುವದಾಗುವದಿಲ್ಲವೆಂದು ಹೇಳಿಕಳಿಸಿರಿ."

"ಅಲ್ಲ........"ಅನುಮಾನಿಸ ಹತ್ತಿದನು.

"ನೀವು ಇಂದು ಇಲ್ಲೇ ಊಟಮಾಡಿರಿ. ಅರ್ಧತಾಸಿನಲ್ಲಿ ಮಾಡಿ ಹಾಕುವೆ."

"ಈಗಲೆ ಹೊಟ್ಟೆ ತುಂಬಿತು. ಇನ್ನೆಲ್ಲಿಯ ಹಸಿವೆ."

"ಹೋದಷ್ಟು........"

೧೬

ಆ ವರುಷ ನಾರು ಬೇನೆಯು ಹಬ್ಬದಿರಲು ಒಕ್ಕಲಿಗರು ಬಹಳ ಸಂತೋಷ ಪಟ್ಟರು. ದೇವರು ತಮ್ಮ ಮೇಲೆ ದಯೆ ತೋರಿಸಿದನೆಂದು ತಿಳಿದರು. ಪ್ರತಿ ವರುಷಕ್ಕಿಂತಲೂ ಹೆಚ್ಚು ವೈಭವದಿಂದ ಬಸವಣ್ಣನ ಜಾತ್ರೆಯನ್ನು ಮಾಡಬೇಕೆಂದು ನಿರ್ಣಯಿಸಿದರು. ಅದಕ್ಕಾಗಿ ಒಂದು ಉತ್ಸವ ಮಂಡಲವನ್ನು ಮಾಡಿದರು. ಅಧ್ಯಕ್ಷರು ಅಪ್ಪಾ ರಾಯರಾದರು. ಕೋಶಾಧ್ಯಕ್ಷರು ಒಬ್ಬರಾದರು. ನಿಧಿ ಸಂಗ್ರಹದ ಮುಖ್ಯರು ಇನ್ನೊಬ್ಬರಾದರು ಕಾರ್ಯಕ್ರಮಕ್ಕೆ ಮೂವರನ್ನು ಗೊತ್ತು ಮಾಡಿದರು. ಉತ್ಸವ ಕಮಿಟಿಯಲ್ಲಿ ಐವರನ್ನು ಸೇರಿಸಿದರು. ಆದರೆ ಕಾರ್ಯಕ್ರಮವನ್ನು ನಿರ್ಣಯಿಸುವಲ್ಲಿ ಒಂದಿಷ್ಟು ಮಾತು ಕತೆಯಾಯಿತು. ವಾದ ಪ್ರತಿವಾದದಿಂದ ಕೊನೆಗೆ ಹುಲಕುಂದ ತಮ್ಯಾನ ಆಟ, ಒಂದು ಜಂಗೀಕುಸ್ತಿ, ಕಲ್ಲೆತ್ತುವದು. ಎತ್ತುಗಳ ಶರ್ಯತ್ತು, ಟಗರಿನ ಥಿಕ್ಕಿ, ಹುಂಜದ ಕಾದಾಟ, ಮುಕುಂದನ ಕಿಳ್ಳಿ ಕೇತದ ಭಾರತದ ಆಟ, ಮಣ್ಣೂರ ಮಾರುತಿಯ ಗೀಗಿಪದ ಇಷ್ಟನ್ನು ಇಡುವದೆಂದು ಗೊತ್ತಾಯಿತು. ಅಪ್ಪಾರಾಯರಿಗೆ ಹೇಳಿ ಅವರ ಅಪ್ಪಣೆಯನ್ನು ಪಡೆದುಕೊಂಡು ಊರಲ್ಲಿ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಡಂಗುರ ಹೊಡೆಸಿದರು.

ಈ ನಾನಾವಿಧದ ಕಾರ್ಯಗಳಿಂದ, ಚಿತ್ರ ವಿಚಿತ್ರವಾದ

ವಿನೋದ ತಮಾಷೆಗಳಿಂದ ಜಾತ್ರೆಗೆ ಸುತ್ತಲಿನ ಎಲ್ಲ ಹಳ್ಳಿಯವರು ನೆರೆದರು. ಅವರ ಪ್ರಮಾಣಕ್ಕೆ ಹೊಂದಿಕೆಯಾಗುವಂತೆ ಕಿರಾಣಿ ಅಂಗಡಿಯವರು. ಮಿಠಾಯಿಗಾರರು, ಬಳೆಗಾರರು, ಹೋಟೇಲಿನವರು, ಜಾನುಗಾರರು ಬಹಳವಾಗಿ ಕೂಡಿದರು. ಹಳ್ಳದ ದಂಡೆಯ ಮೇಲಿನ ದಾರಿಯ ಇಕ್ಕೆಲದಲ್ಲಿ ತಮ್ಮ ಮಳಿಗೆಗಳನ್ನು ನಿಲ್ಲಿಸಿ ಪ್ರಚಾರ ವ್ಯಾಪಾರ ಮಾಡಹತ್ತಿದರು. ಬಸವಣ್ಣನ ಜಾತ್ರೆ ವೈಭವದಿಂದ ಸಾಗಿತು. ಕುಸ್ತಿಯ ಜಟ್ಟಿಗಳು ಪ್ರತಿಸ್ಪರ್ಧಿಯನ್ನು ಒಗೆದು ಬೆಳ್ಳಿಯ ಕಡಗಗಳನ್ನು ಪಡೆದುಕೊಂಡು ಹೋದರು. ಗೆದ್ದ ಎತ್ತುಗಳಿಗೆ ಬೊಲುಗಳಾದವು. ಸೋತ ಟಗರು ತಲೆಯೊಡೆದುಕೊಂಡುಹೋಯಿತು. ಹಿಂದೆ ಸರಿದ ಕೋಳಿ ಇನಾಮುಸಾಬಿಯ ಖಾದ್ಯವಾಯಿತು. ಐದು ದಿನದ ಜಾತ್ರೆಯಲ್ಲಿ ಎಲ್ಲರಿಗೂ ಕೆಲಸ, ಎಲ್ಲರಿಗೂ ಉತ್ಸುಕತೆ, ಎಲ್ಲರಿಗೂ ಆನಂದ, ಎಲ್ಲರಿಗೂ ಹರ್ಷ. ಕೊನೆಗೆ ಜಾತ್ರೆಯ ಗಜಿಬಿಜಿಯು ಮುಗಿಯಿತು. ಈ ಐದು ದಿನದ ಹೊಲಸನ್ನು ತೆಗೆಯಲು ಗೌಡರಿಗೆ ಮತ್ತೆ ಐದು ದಿನ ಹಿಡಿಯಿತು. ಜಾತ್ರೆಯಲ್ಲಿ ಗೌಡರ ಮಾತು ವೇದವಾಕ್ಯ. ಅವರ ಹಸ್ತ ಕೃಪಾಹಸ್ತ. ಅವರ ದೃಷ್ಟಿ ದಯಾದೃಷ್ಟಿ, ಇಷ್ಟೊಂದು. ದೊಡ್ಡ ಜಾತ್ರೆಯನ್ನು ತಮ್ಮ ಅನುಭವ, ಬುದ್ಧಿ ಮತ್ತೆ, ಸಮತೋಲ ಭಾವನೆಯಿಂದ ಸಾಂಗಗೊಳಿಸಿದುದು ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರವಾಯಿತು.

ಚಾವಡಿಯ ಮುಂದೆ ಗಡೆಯ ಕಟ್ಟೆಯ ಮೇಲೆ ಅಪ್ಪಾರಾಯರು, ಕೆಲವು ಪ್ರತಿಷ್ಠಿತರು, ಊರ ಪಂಚರು ಹರಟೆಯನ್ನು ಹೊಡೆಯುತ್ತ ಕುಳಿತಿದ್ದರು. ಹರಟೆಯ ವಿಷಯವು ಈ ಸಾರೆ ಜೋಳಕ್ಕೆ ಕಾಡಿಗೆಯ ರೋಗ ತಗಲಿದುದು, ಗೋಧಿಗೆ ಕುಂಕುಮ ರೋಗ ಹತ್ತಿದದು, ಅಕ್ಕಡಿ ಕಾಳುಗಳಿಗೆ ಕೀಡಿಗಳು ಹತ್ತಿದುದು ಇದೇ ಆಗಿದ್ದಿತು. ಒಕ್ಕಲ ತನದ ಶಾಖೆಯವರು ತಮಗೆ ಮುಂಜಾಗ್ರತೆಯನ್ನು ವಹಿಸಿ ಸಹಾಯ ಮಾಡದಿದ್ದರೆ ಮರುವರುಷದ ಗೋಧಿಯ ಬಿತ್ತಿಗೆಗೆ ಬೀಜ ಸಿಗುವದು ದುಸ್ತರವಿದ್ದಿತೆಂದು ನುಡಿಯುತ್ತಿದ್ದರು.

"ಚಿಟ್ಟೆಯ ಹಾವಳಿಯೂ ಈ ವರುಷ ಹೆಚ್ಚಾಯಿತು !" ಒಬ್ಬ ಪಂಚನೆಂದನು.

"ಗುಡ್ಡದ ಕಡೆಗೆ ಹುಲಬನ್ನಿ ಇದೆ. ಅಲ್ಲಿಯೇ ಚಿಟ್ಟೆ ಒಂದಿಷ್ಟು ಕಂಡವು. ಪೂರ್ವದ ಭಾಗಕ್ಕೆ ಚಿಟ್ಟೆ ಇರಲಿಲ್ಲ." ಗೌಡರೆಂದರು.

"ಮತ್ತು ಚಿಟ್ಟೆಯ ಪುಡಿಯು ಸಕಾಲಕ್ಕೆ ಒದಗಲಿಲ್ಲ. ಅದರಿಂದಲೇ ಬಹಳ ಹಾನಿಯಾಯಿತು." ಎಂದು ಮತ್ತೊಬ್ಬ ಪಂಚನೆಂದನು.

"ಮುಳ್ಳುಗಳ್ಳಿ ಹೋಗಿ ನಮಗೆ ಬಹಳ ಹಾನಿಯಾಗಿದೆ ಗೌಡರೇ ! ಹೊಲಕ್ಕೆ, ತೋಟಕ್ಕೆ ವೆಚ್ಚವಿಲ್ಲದೆ ಬೇಲಿಯಾಗುತ್ತಿದ್ದಿತು. ಆ ಜಪಾನಿ ಹುಳುಗಳನ್ನು ತಂದು ಕಳ್ಳಿಯ ಸಂಶವನ್ನೇ ಹಾಳುಮಾಡಿದರು. ತಂತಿಯ ಬೇಲಿಯನ್ನು ಕಟ್ಟುವದು ಒಕ್ಕಲಿಗನಿಂದ ಸಾಧ್ಯವೇ ? ಕಳ್ಳಿಯು ಸಾಯುವ ಮುಂದೆ ಸಂತೋಷಪಟ್ಟೆವು. ಈಗ ಅಷ್ಟೇ ದುಃಖ ಪಡಬೇಕಾಗಿದೆ." ಒಬ್ಬ ರೈತನೆಂದನು.

"ಕಳ್ಳಿಯು ನಮ್ಮ ಮಕ್ಕಳ ಕೆಮ್ಮಿಗೆ ಔಷಧವಾಗಿದ್ದಿತು. ಹೊಲದ ಕಾವಲಾಗಿದ್ದಿತು. ಬಡವರ ಉರುವಲಪಾಗಿದ್ದಿತು. ಕಂಗಾಲರ ಅನ್ನವಾಗಿದ್ದಿತು. ಅದು ಹಾಳಾಗಿ ನಮಗೆ ಬಹಳ ಹಾನಿಯನ್ನು ತಂದಿತು." ಒಬ್ಬ ಮುದುಕನೆಂದನು.

"ಕಳ್ಳಿಯ ಹಣ್ಣು ಕಾಗೆಯ ಅನ್ನ ! ಅದನ್ನು ಯಾರಾದರು ತಿನ್ನಬಹುದೇ !" ಒಬ್ಬ ಪ್ರತಿಷ್ಠಿತನೆಂದನು.

"ಅದೇಕೆ ಯಜಮಾನರೇ ! ಹೋದ ಬರಗಾಲದಲ್ಲಿ ನಾನೇ ತಿಂದು ನೀರು ಕುಡಿದಿರುವೆ. ಕಳ್ಳಿಯಿಂದ ಹಣ್ಣನ್ನು ಉದುರಿಸಿ ಎಲೆಯುಳ್ಳ ಟೊಂಗೆಗಳಿಂದ ಅದನ್ನು ಮೆಲ್ಲಗೆ ಬಡಿಯಬೇಕು. ಅದರ ಮೇಲಿನ ಸುಂಕದಂತಹ ಮುಳ್ಳುಗಳು ಹೋಗುವವು. ಉದ್ದವಿದ್ದ ಮುಳ್ಳುಗಳನ್ನು ಕಿತ್ತಿ ತೆಗೆಯಬೇಕು. ಆಗ ಅದನ್ನು ಹಾಗೇ ತಿನ್ನಬಹುದು. ಇಲ್ಲವೆ ಒಂದಿಷ್ಟು ಹುಲ್ಲಿನಲ್ಲಿ ಸುಟ್ಟು ತಿನ್ನಬಹುದು. ಪೇರಲ ಹಣ್ಣಿನಂತೆ ರುಚಿಯಾಗಿರುವದು. ಬರಗಾಲದಲ್ಲಿ ಐದಾರು ದಿವಸ

ತಿಂದು ಬದುಕಿರುವೆ. ಇದೆಲ್ಲ ವಿದ್ಯೆ ನಿಮಗೆ ಹೇಗೆ ಗೊತ್ತಾಗಬೇಕು. ರಾಗೆಯ ಅನ್ನ ! ಎನ್ನುವಿರಿ !"

ಮುದುಕನ ಮಾತಿಗೆ ಎಲ್ಲರು ಘೊಳ್ಳೆಂದು ನಗಹತ್ತಿದರು.

ಈ ಹರಟೆಯು ಹೀಗೆಯೇ ಸಾಗಿರುವ ಸಮಯದಲ್ಲಿ ಕುರುಬರ ಕೇರಿಯಿಂದ ಒಬ್ಬನು ಧಾವಿಸಿಬಂದು "ಕುರುಬರ ಕೆಂಚಪ್ಪನನ್ನು ಮಾರೆಮ್ಮನು ಹಿಡಿದುಕೊಂಡಿರುವಳು !" ಎಂದು ನುಡಿದನು.

"ಯಾವ ಕೆಂಚಪ್ಪ ?" ಒಬ್ಬ ಪಂಚನು ಕೇಳಿದನು.

"ಹಿತ್ತಲಮನಿ ಕೆಂಚಪ್ಪ !"

ಒಸರಿಗೆ ತಿಳಿಯಲಿಲ್ಲ. ಅವನ ಮುಖವನ್ನು ನೋಡಹತ್ತಿದರು.

"ಮೊನ್ನೆಯ ಬಸವಣ್ಣನ ಜಾತ್ರೆಯೊಳಗಿನ ಸೋತ ಟಗರಿನ ಕೆಂಚಪ್ಪ. ಬಿಳೀ ಕಲ್ಲೀ ಮೀಸೆಯ, ಕರೀಗಿಡ್ಡ ! ಅವನೇ ಕುರುಬರ ಕೆಂಚಪ್ಪ !"

ಎಲ್ಲರೂ "ಹ !" ಎಂದರು.

"ಮಾರಮ್ಮನು ಹಿಡಿದಿರುವಳು !" ಒಬ್ಬ ಆಶ್ಚರ್ಯದಿಂದ ಕೇಳಿದನು.

"ಆಕೆಗೇನು ಜಾತ್ರೆಯಲ್ಲಿ ಕಡಮೆ ಮಾಡಿರುವೆವು. ಐದು ಕುರಿಯು, ಹತ್ತು ಕೋಳಿಯು ಬಾನವನ್ನು ನೈವೇದ್ಯವೆಂದು ಕಳಿಸಿರುವೆವಲ್ಲ !" ಒಬ್ಬ ಹಿರಿಯ ರೈತನು ನುಡಿದನು.

"ಏನಾಯಿತು ? ಹೇಗಾಯಿತು ?" ಇನ್ನೊಬ್ಬ ಕೇಳಿದನು.

"ಗುಡ್ಡದಿಂದ ಕುರಿಗಳನ್ನು ಹೊಡೆದುಕೊಂಡು ಬೇಗ ಬಂದನಂತೆ. ಆಗ ಸೂರ್ಯನು ಇನ್ನೂ ಪಡುವಣಕ್ಕೆ ಇಳಿದಿರಲಿಲ್ಲ. ಕುರಿಗಳನ್ನು ದೊಡ್ಡಿಯಲ್ಲಿ ಹೋಗಿಸಿ ಬಾಗಿಲಿಗೆ ಈಡುಇಟ್ಟು ನಡುಮನೆಯಲ್ಲಿ ಅಡ್ಡಾದನಂತೆ. ಹೊಟ್ಟೆಯಲ್ಲಿ ಏನೋ ಆಗಿ ಎರಡುಸಾರೆ ಕಾರಿಕೊಂಡನು. ಅದೇಕ್ಷಣ ಒಂದೆರಡುಸಾರೆ ಬೈಲಕಡೆಗೆ ಕುಳಿತನು. ಈಗ ಮಾತಿಲ್ಲ. ಕತೆಯಿಲ್ಲ. ಕಣ್ಣು ಒಳಗೆ ಸೇರಿವೆ. ಮೈ ಮೇಲೆ ಎಚ್ಚರವಿಲ್ಲ. ಕೈಕಾಲು ತಣ್ಣಗಾಗುತ್ತ ನಡೆದಿವೆ. ಸಂಜೆಗೆ ಬದುಕುವನೋ ಇಲ್ಲವೋ !

ದೇವರಾಟ !" ಎಂದು ಸಂಕ್ಷೇಪಿಸಿ ನುಡಿದು ಸುಮ್ಮನಾದನು.

ಗೌಡರು ಹೆಳಬನನ್ನು ಕಳಿಸಿದರು. ಅವನು ಹೋಗಿ ೫-೬ ನಿಮಿಷದಲ್ಲಿ ತಿರುಗಿಬಂದನು. ಅಹುದೆಂದು ವರದಿಯನ್ನು ಒಪ್ಪಿಸಿದನು. ಗೌಡರು ಹೊಸದೊಂದು ಸಂಕಟದಲ್ಲಿ ಬಿದ್ದಂತೆ ಚಡಪಡಿಸಿದರು. ತಮ್ಮ ಕರ್ತವ್ಯವನ್ನು ನಿರ್ವಹಿಸುವಂತೆ "ನೀರನ್ನು ಕಾಸಿ ಕುಡಿಯಿರಿ. ತಂಗುಳ-ಮುಂಗುಳವೆನ್ನಬೇಡಿರಿ. ಅನ್ನ-ನೀರಿನ ಬಗ್ಗೆ ಎಚ್ಚರದಿಂದಿರಿ" ಎಂದು ಊರಲ್ಲಿ ಡಂಗುರವನ್ನು ಹೊಯಿಸಿದರು. ಅಲ್ಲದೆ ತಾಲೂಕಿಗೆ- "ತಮ್ಮಲ್ಲಿ ಕಾಲರಾದ ಪಿಡುಗು ಕಾಣಹತ್ತಿದೆ. ಬೇಗನೆ ಬಂದು ಚುಚ್ಚುಮದ್ದು ಹಾಕಬೇಕು." ಎಂದು ಜರೂರಿಯ ಅರ್ಜಿಯನ್ನು ಬರೆದರು.

ಅಂದಿನ ರಾತ್ರಿ ಕಳೆದು ಬೆಳಗು ಕಾಣುವಷ್ಟರಲ್ಲಿ ಕುರುಬರ ಕೇರಿಯಲ್ಲಿ ಐವರಿಗೆ ತಗುಲಿ ನಾಲ್ವರು ಸತ್ತರು. ಮರುದಿನ ಕೆಳಗಿನ ಓಣಿಯಲ್ಲಿ ಮೂವರಿಗೆ ತಗುಲಿ ಒಬ್ಬನು ಸತ್ತನು. ಮುಂದೆ ಎರಡು ದಿನಗಳಮೇಲೆ ಮೇಲಿನ ಓಣಿಯಲ್ಲಿ ಒಬ್ಬನಿಗೆ ತಗುಲಿ ಒಬ್ಬನೇ ಸತ್ತನು. ಅದೇದಿನ ಹಳ್ಳದ ಕಡೆಗೆ ಇಬ್ಬರಿಗೆ ತಗುಲಿ ಇಬ್ಬರೂ ಸತ್ತರು. ಊರ ನಡುವಿನ ಭಾಗದಲ್ಲಿ ಮೂವರಿಗೆ ತಗುಲಿ ಇನ್ನೂ ನಿರ್ಣಯವಾಗಿರಲಿಲ್ಲ.

ಗೌಡರು ಗಾಬರಿಯಾದರು. ಮನೆಯಲ್ಲಿ ನೀರು ಕಾಸಲು ಹೇಳಿದರು. ತಂಗುಳ ಉಳಿಸದಿರಲು, ತಿನ್ನದಿರಲು ಕಡಕ ಎಚ್ಚರಿಕೆ ಯನ್ನು ಕೊಟ್ಟರು.

ಮಾರೆಮ್ಮ ಊರತುಂಬ ಕಾಲಿಟ್ಟಿದ್ದಳು. ಒಂದು ಭಾಗವನ್ನು ಸಹ ಬಿಟ್ಟಿರಲಿಲ್ಲ. 'ಯಾವ ಓಣಿಯಲ್ಲಿ ಹೊಸದೊಂದು ಆಹುತಿಯನ್ನು ತೆಗೆದುಕೊಳ್ಳುವಳೋ ? ಯಾರ ಮನೆಯನ್ನು ಇಂದು ಹೊಗುವಳೋ? ಯಾರನ್ನು ಎಳೆಯುವಳೋ ?' ಎಂದು ಜನರು ಬಾಯಲ್ಲಿ ಎಳ್ಳು ಹಿಡಿದು ಕುಳಿತಿದ್ದರು. ಮಕ್ಕಳು ಅಜೀರ್ಣದಿಂದ "ಬಾ !" ಎಂದರೆ 'ಮಾರೆಮ್ಮ ಬಂದಳು, ಹೊಟ್ಟೆಯಲ್ಲಿ ಜಂತು ಆಗಿ ಬಾ ! ಎಂದರೆ ಮಾರೆಮ್ಮ !' ಎಂದು ಮಾರೆಮ್ಮನ ಕಾಮಣಿಯಿಂದ ಕಕ್ಕಾಬಿಕ್ಕಿ

ಯಾಗಿದ್ದರು.

ಕಳೆದ ಒಂದು ವಾರದಲ್ಲಿ, ಎರಡು ಸಾವಿರ ವಸತಿಯ, ನಾಲ್ಕೈದು ನೂರು ಮನೆಗಳುಳ್ಳ ಆ ಚಿಕ್ಕಹಳ್ಳಿಯಲ್ಲಿ ಮಾರೆಮ್ಮ ದೇವತೆಯು ಇಪ್ಪತ್ತ ಮೂರು ಜನರನ್ನು ಬಲಿಯಾಗಿ ನುಂಗಿದ್ದಳು. ಅವಳ ಕುಂಭಕರ್ಣ ಹೊಟ್ಟೆ ಇನ್ನೂ ತುಂಬಿರಲಿಲ್ಲ. ಬೇಕು, ಇನ್ನೂ ಬೇಕು ಎಂದು ಹೊಸಹೊಸ ಓಣಿ, ಹೊಸಹೊಸ ಮನೆಗಳಲ್ಲಿ ಸುಳಿಯುತ್ತಿದ್ದಳು. ಗಂಡಸರು, ಹೆಂಗಸರು, ಸಣ್ಣವರು, ದೊಡ್ಡವರು, ಶ್ರೀಮಂತರು–ಬಡವರು ಎಂಬ ಯಾವ ಭೇದ ಭಾವವಿಲ್ಲದೆ ಅವರನ್ನು ಹೊಟ್ಟೆ ಹಿಸುಕಿ ಕಕ್ಕಿಸಿ, ಬೆನ್ನುಸೀಳಿ ಭೇದಿಮಾಡಿಸಿ ಮೀನಗಳನ್ನು ತೊಳೆದಂತೆ ತೊಳೆದು ಸ್ವಚ್ಛಮಾಡಿ ತಿನ್ನುತ್ತಿದ್ದಳು. ಮನೆಯ ಹಿರಿಯ ಸತ್ತುದಕ್ಕೆ ಅಳುವವರ ಸಂಖ್ಯೆ ಕಡಿಮೆಯಿರಲಿಲ್ಲ. ನಾಯಿಮನೆಂದು ಹೆದರಿ ಅಳುವವರ ಸಂಖ್ಯೆಗೂ ಕಡಿಮೆಯಿರಲಿಲ್ಲ. ಒಂದು ಹೆಣವನ್ನು ಸ್ಮಶಾನ ಕಟ್ಟಿಗೆ ಮುಟ್ಟಿಸಿ ಬರುವಷ್ಟರಲ್ಲಿ ಇನ್ನೊಂದು ಓಣಿಯಲ್ಲಿ ಸಾಗಿಸುವ ಸಿದ್ಧತೆ ನಡೆದಿರುತ್ತಿದ್ದಿತು. ಸ್ಮಶಾನ ವಾದ್ಯಗಳಿಗೆ ಬಿಡುವೇ ಇರುತ್ತಿದ್ದಿಲ್ಲ. ಅದಕ್ಕೆ ಅವುಗಳನ್ನು ಕಾಯಿಸುತ್ತಿರಲಿಲ್ಲ. ಜನರ ದುಃಖದ ಧ್ವನಿಯ ಸಂಗಡ ತಮ್ಮ ಅಪಸ್ವರವನ್ನು ಎತ್ತುತ್ತಿದ್ದವು.

ಅಪ್ಪಾರಾಯರು ರಾಜಣ್ಣನ ಬಗ್ಗೆ ಮನೆಯಲ್ಲಿ ವಿಚಾರಿಸಿದರು. ಅವನು ಮನೆಯಲ್ಲಿಲ್ಲವೆಂದು. ಅವ್ವಕ್ಕ ಹೇಳಿದಳು.

"ಎಲ್ಲಿ ಹೋಗಿರುವ?"

"ದೇವರಿಗಾದರು ಗೊತ್ತಿದೆಯೋ ಇಲ್ಲವೋ?"

"ಇಂದು ಊಟಕ್ಕೆ ಬಂದಿದ್ದನೇ?"

"ಇಲ್ಲ"

"ನಿನ್ನೆ ರಾತ್ರಿ ಇಲ್ಲಿಯೇ ಮಲಗಿದ್ದನೇ?"

"ನಿನ್ನೆ ರಾತ್ರಿ ಊಟವನ್ನು ಮಾತ್ರ ಮಾಡಿಲ್ಲ."

"ಮಲಗಿದ್ದನೇ?"

"ಅದು ಹೇಗೆ ತಿಳಿಯಬೇಕು!"

"ಅಕ್ಕಾಮರಿಯನ್ನು ಕೇಳು."

"ನಾನು ಕೇಳಿರುವೆ. ಇಲ್ಲವಂತೆ" ಮಾತು ಮುಗಿಸಲು ಹೇಳಿದಳು.

ಅಪ್ಪಾರಾಯರು ಹಣೆಯನ್ನು ಹಿಡಿದುಕೊಂಡರು. ಚಿಂತೆಯ ದನಿಯಲ್ಲಿ 'ಎಂಥ ಮಗ! ದೇವರು ಇಂಥ ಅವಿವೇಕಿ ಮಗನನ್ನು ಕೊಡದೆ ನಿಷುತ್ರಿಕನನ್ನಾಗಿ ಇಟ್ಟಿದ್ದರೆ ಎಷ್ಟೋ ಹಿತವಿದ್ದಿತು. ಒಂದು ದಿನ ಮನೆಯಲ್ಲಿರುವದಿಲ್ಲ. ಮನೆಯ ಬಗ್ಗೆ ಕಾಳಜಿ ಇಲ್ಲ. ನನಗೆ ನೆರ ವಾಗಬೇಕೆಂಬ ಬುದ್ಧಿಯಿಲ್ಲ. ನಾಲ್ಕು ಜನ ಉಡಾಳರನ್ನು ಕಟ್ಟಿಕೊಂಡು ವ್ಯರ್ಥ ಕಾಲಹರಣ ಮಾಡುವನು. ಗೌಡರ ಮನೆಯವ, ಬ್ರಾಹ್ಮಣರ ಹೊಟ್ಟೆಯಿಂದ ಹುಟ್ಟಿದವ, ಪ್ರತಿಷ್ಠಿತ ಮನೆಯ ಭಾವೀ ಯಜಮಾನ ಇವುಗಳ ಕಡೆಗೆ ಲಕ್ಷವಿದೆಯೇ ? ತನ್ನ ಕುಲವೇನು ? ಜಾತಿ ಏನು ? ಮರ್ಯಾದೆ ಏನು ? ಸ್ಥಿತಿ ಏನು ? ಗತಿ ಏನು ? ಮುಂದೇನು ? ಯಾವದರ ಪರವೆ ಇಲ್ಲ. ಹಸಿದಲ್ಲಿ ಉಣ್ಣುವನು, ಹಾಸಿದಲ್ಲಿ ಮಲಗು ವನು, ಕರೆದಲ್ಲಿ ಹೋಗುವನು, ಕೀಳರ ಬೆನ್ನುಹತ್ತಿ ಅತಿ ಕೀಳಾಗಿರುವನು. ಅವನಿಗೆ ಎಂದು ವಿವೇಕ ಬರುವದೋ ? ಹೊಲ ಮನೆಯ ಕಡೆಗೆ ಲಕ್ಷ್ಯ ಹಾಕೆಂದು ಅನೇಕ ಸಾರೆ ಹೇಳಿದೆನು. ಹೊಲಗಳನ್ನು ತೋರಿಸಿಕೊಟ್ಟೆ, ರೈತರನ್ನು ಪರಿಚಯ ಮಾಡಿಸಿದೆ, ಹೊಲಗಳ ಗುಣಧರ್ಮಗಳನ್ನು ಹೇಳಿದೆ, ಅವುಗಳನ್ನು ನೋಡಿಕೊಂಡು ಹೋಗುವ ಕಲೆಯನ್ನು ತಿಳಿಸಿಕೊಟ್ಟೆ, ಆದರೆ ಅವನ ಲಕ್ಷವೇ ಇಲ್ಲ. ಇತ್ತ ಓದು ಬರೆಹ ಕಲಿತು ನವಕರಿಯನ್ನು ಹಿಡಿಯಲಿಲ್ಲ. ಹೊಲ ಮನೆಗಳನ್ನು ತೂಗಿಸಿಕೊಂಡು ಹೋಗುವ ವ್ಯವಹಾರವನ್ನು ಅರಿಯಲಿಲ್ಲ. ಮುಂದೆ ಇವನ ಬಾಳುವೆಯು ಹೇಗೆ ಸಾಗಬೇಕು ? ಬ್ರಾಹ್ಮಣರು ನವಕರಿಯ ಕೂಲಿಯುವರಾಗಬೇಕು. ಆಜನ್ಮ ಶ್ರೀಮಂತರಿರಬೇಕು. ಇಲ್ಲವೆ ಒಕ್ಕಲಿಗರಾದರೂ ಆಗಬೇಕು. ಇವು ಗಳನ್ನು ಬಿಟ್ಟರೆ ? ಬಿಟ್ಟರೆ ಮುಂದೇನು ? ಭಿಕ್ಷುಕರು ! ಬ್ರಾಹ್ಮಣರು ಭಿಕ್ಷುಕ ಸಮಾಜದವರೆಂದು ಸಮಾಜವು ನಾಮಕರಣವನ್ನು ಮಾಡಿತು.

ಆದರೆ ಮೊದಲೂ ಭಿಕ್ಷೆ ಹಾಕಲಿಲ್ಲ. ಈಗ ಹಾಕುವಂತೆಯೂ ಇಲ್ಲ. ಹೆಸರು ಮಾತ್ರ ಭಿಕ್ಷುಕರೆಂದು ಉಳಿಯಿತು. ಅವನ ಪಾಲಿಗೆ ಭಿಕ್ಷೆಯೇ ಇದ್ದರೆ [illegible] ಬಿಡಿಸಬೇಕು. ಇಂಥ ಮಗನನ್ನು ದೇವರೇ ಕಾಪಾಡಿದರೆ ಸರಿ' ಎಂದು ನಾನಾ ಬಗೆಯಾಗಿ ತಾವೇ ಮಾತಾಡಿಕೊಂಡರು.

ಅಂದು ರಾತ್ರಿಯ ಊಟಕ್ಕೂ ರಾಜಣ್ಣನು ಬರಲಿಲ್ಲ. ಅಪ್ಪಾರಾಯರು ಕಾದು ಕಾದು ಬೇಸತ್ತರು. ಕೊನೆಗೆ ತಾವೊಬ್ಬರೇ ಅಡಿಗೆಯ ಮನೆಯಲ್ಲಿ ಕುಳಿತು ಊಟ ಮುಗಿಸಿದರು. ಕೈ ಬಾಯಿ ತೊಳೆದುಕೊಂಡು ಪಡಸಾಲೆಯ ಮುಂದಿನ ಕಟ್ಟೆಯ ಮೇಲೆ ಕುಳಿತುಕೊಂಡರು. ಒಬ್ಬಿಬ್ಬ ರೈತರೂ ಬಂದು ಕುಳಿತಿದ್ದರು. ಎಲೆ-ಅಡಕೆಯನ್ನು ತಿಂದು ತಂಬಾಕಿನ ಚಿಮುಟಗೆಯನ್ನು ಎತ್ತಿ ಎಡಗೈಯ ಅಂಗೈಯಲ್ಲಿ ಇಟ್ಟುಕೊಂಡು ಚಂಚಿಯನ್ನು ಸುತ್ತಿ ರೈತರ ಮುಂದ ಒಗೆದರು. ರೈತರು ಚಂಚಿಯನ್ನು ಬಿಚ್ಚಿ ಅಡಕೆಯನ್ನು ಕತ್ತರಿಸಹತ್ತಿದರು. ಅಪ್ಪಾರಾಯರು ತಂಬಾಕನ್ನು ಬಾಯಿಗೆ ತೂರಿಕೊಂಡು ಕೈಜಾಡಿಸಿ ಕುಳಿತರು.

"ಗೌಡರೇ ಮಾರೆಮ್ಮನನ್ನು ನಮ್ಮ ಊರಿಂದ ಹೇಗೆ ಹೊರಗೆ ಹಾಕುವದು ? ತಿಂಗಳೊಪ್ಪತ್ತಿನಲ್ಲಿ ಜನರು ಬಹಳ ಸತ್ತರು" ಎಂದು ಒಬ್ಬನು ಕೇಳಿದನು.

"ಬೇರೆ ಉಪಾಯವೇನು ? ನೀರು ಕುದಿಸಿ ಕುಡಿಯಬೇಕು, ಬಿಸಿ ಕೂಳು ತಿನ್ನಬೇಕು. ತಾಲೂಕಿನಿಂದ ಡಾಕ್ಟರರು ಬರುವವರೆಗೆ ಇದೇ ಉಪಾಯ" ಎಂದು ನುಡಿದರು.

"ನಾಳೆ ನಾವು ಮಾರೆಮ್ಮನಿಗೆ ೨೧ ಕೋಳಿ, ೧೧ ಆಡು ಬಲಿ ಕೊಡಬೇಕೆಂದಿರುವೆವು."

"ಇದರಿಂದ ಕಡಮೆಯಾಗುವದೇ ?"

"ನಿನ್ನೆ ನಮ್ಮ ಓಣಿಯ ಎಲ್ಲವ್ವನ ಮೈಯಲ್ಲಿ ದೇವಿಯು ಬಂದಿದ್ದಳು."

"ಆಕೆಯು ಏನು ಹೇಳಿದಳು ?" ಅಪ್ಪಾರಾಯರು ಕೌತುಕ ದಿಂದ ಕೇಳಿದರು.

"ಮಕ್ಕಳೇ ಊರಲ್ಲಿ ಪಾಪವು ಬಹಳವಾಗಿದೆ. ಬಾಯಿಂದ ದೇವರು ಅನ್ನುವಿರಿ. ಆದರೆ ನಿತ್ಯ ಅಧರ್ಮದ ಕೆಲಸ ಮಾಡುವಿರಿ. ಜಾತ್ರೆಯಲ್ಲಿ ನಿಮ್ಮ ಹೊಟ್ಟೆಯು ಹರಿಯುವಂತೆ ತಿಂದಿರಿ. ನನಗೇನು ಕೊಟ್ಟಿರಿ. ಒಣಗಿದ ಬಾಳುಕದ ಅನ್ನ. ಇಂಥ ಭೇದಭಾವ ನೋಡ ಲಾರೆನು, ನೋಡಿ ಸಹಿಸಲಾರೆನು. ಅರ್ಧ ಊರು ನುಂಗುವೆ. ಅರ್ಧ ಊರು ಹಾಳುಗೆಡವುವೆ !" ಎಂದು ಚೀರಿದಳು.

"ಸಿದರಾಯನು ತಾಯೀ ಕ್ಷಮಿಸು. ನಮ್ಮ ತಪ್ಪನ್ನು ಕ್ಷಮಿಸು. ಅಂದಿನ ತಪ್ಪನ್ನು ಇಂದು ಒಪ್ಪಿಸುವೆವು ! ಏನು ಬೇಕು ಹೇಳು ?" ಎಂದು ದೋತರ ಹಾಸಿ ಮಲಗಿದನು.

"ಹಸಿವೆ. ಹಸಿವೆ. ಹಸಿವೆ !" ಎಂದು ದೇವಿಯು ಕೂಗಿದಳು.

"ನನ್ನನ್ನು ನುಂಗು!" ಎಂದು ಅಷ್ಟೇ ದನಿಯಿಂದ ಕೂಗಿದನು.

"ಹಸಿವೆ. ಹಸಿವೆ" ದೇವಿಯು ಮೆಲ್ಲಗೆ ನುಡಿದಳು.

"ನಮ್ಮೆಲ್ಲರನ್ನು ಕೊಂದರೆ ನಿನ್ನನ್ನು ಪೂಜಿಸುವವರು ಯಾರು? ನೈವೇದ್ಯ ಕೊಡುವವರು ಯಾರು ? ಆರತಿ ಎತ್ತುವವರು ಯಾರು ? ಗುಡಿಯ ಗಂಟೆ, ನಗಾರಿ, ಜಾಗಟೆಯನ್ನು ಬಾರಿಸಲಿಕ್ಕೆ ಜನರುಳಿಯ ದಂತೆ ನಮ್ಮನ್ನು ಕೊಂದರೆ ನಿನ್ನ ಗತಿಯೇನು ? ಗುಡಿಯಲ್ಲಿ ಹಾರಾಡುವ ಸಣ್ಣ ಕಪ್ಪಡಿಗಳಿಂದ ಪೂಜೆಗೊಳ್ಳುವೆ ಏನು ? ನಿನ್ನ ಇಚ್ಛೆ ಹಾಗಿದ್ದರೆ ಕೊಲ್ಲು. ಸಾಯುವೆವು" ಎಂದು ಛೀಮಾರಿ ಮಾಡಿದನು.

"ಆಗ ದೇವಿಯು ಶಾಂತಳಾಗಿ–ನನಗೆ ೨೧ ಕೋಳಿ, ೧೧ ಆಡುಗಳ ರಕ್ತ ಮಾಂಸ ಕೊಡಿರಿ. ಅಂದರೆ ಶಾಂತಳಾಗುವೆನು. ಶಾಂತಳಾಗುವೆನು. ಶಾಂತಳಾಗುವೆನು–ಎಂದು ನುಡಿದಳು. ಕೂಡಿದ ವರು ಒಪ್ಪಿಕೊಂಡಿರುವರು. ನಾಳೆ ಆಕೆಗೆ ಬಲಿ ಒಪ್ಪಿಸಬೇಕೆಂದು ಇರುವರು" ಎಂದು ರೈತ ವಿವರಿಸಿ ಹೇಳಿದನು.

"ದೇವಿಯು ಹೇಳಿದ್ದರೆ ಮಾಡಿರಿ. ನಾನು ಬೇಡೆಂದು ಹೇಳಿ ಆಕೆಯ ಕೋಪಕ್ಕೆ ಏಕೆ ಗುರಿಯಾಗಲಿ. ಆದರೆ ಅದರ ಸಂಗಡ ಡಂಗುರದ ಮಾತನ್ನೂ ನೆನಪಿನಲ್ಲಿಡಿರಿ."

ರಾತ್ರಿಯಾಯಿತೆಂದು ಮನೆಗೆ ಹೋದರು.

ಅಪ್ಪಾರಾಯರು ಮಲಗುವ ವೇಳೆಯಾಯಿತೆಂದು ದೇವರಿಗೆ ದೀಪ ಹಚ್ಚಿ ನಮಸ್ಕರಿಸಿದರು. ಲಕ್ಷ್ಮೀನಾರಾಯಣರ ಚಿತ್ರವನ್ನು ಕಣ್ಣುಬಿಟ್ಟು ನೋಡಿ ಪಾದಮುಟ್ಟಿ ಶಿರಕ್ಕೆ ಇಟ್ಟುಕೊಂಡರು. ಗುರುರಾಯರನ್ನು ಸ್ಮರಿಸಿದರು. ಹಾಸಿಗೆಯ ಮೇಲೆ ಬಂದು ಕುಳಿತರು. ಚಂಚಿಯನ್ನು ಬಿಚ್ಚಿ ಅಡಕೆಯನ್ನು ಕತ್ತರಿಸಿ ಬಾಯಿಗೆ ಹಾಕಿಕೊಂಡರು. ಎಲೆ, ಸುಣ್ಣ, ಕಾಚು, ತಂಬಾಕು ಕ್ರಮದಿಂದ ಸೇರಿದವು. ಒಂದಿಷ್ಟು ರಸಸ್ವಾದ ಮಾಡಿ ಉಗುಳಿದರು. ಬಾಯಿ ತೊಳೆದುಕೊಂಡರು. ಹೊದ್ದುಕೊಂಡು ಮಲಗಿದರು.

ಮಧ್ಯರಾತ್ರಿಯು ಮೀರಿಹೋಗಿದ್ದಿತು. ಮನೆಯಲ್ಲಿ ಎಲ್ಲರೂ ನಿದ್ರಾದೇವಿಯ ತೊಟ್ಟಿಲಲ್ಲಿ ತನ್ಮಯರಾಗಿದ್ದರು. ಮನೆಯ ಒಂದು ಮೂಲೆಯಲ್ಲಿ ಸಣ್ಣದೀಪ ಕತ್ತಲೆಯ ಸಂಗಡ ತುಮುಲ ಯುದ್ಧವನ್ನು ನಡಿಸಿದ್ದಿತು. ರಾತ್ರೀ ಸಮಯದ ಜೀರುಂಡೆಗಳ 'ಜೀರ್‌ರ್' ಎಂಬ ಸಪ್ಪಳ ಕೋಣೆಯ ಮೂಲೆಗಳಿಂದ ಬರುತ್ತಿದ್ದಿತು ರಾಜಣ್ಣನು ಮನೆಯಲ್ಲಿರಲಿಲ್ಲ. ಹೊರಗೆ ಗಾಢವಾದ ಕತ್ತಲೆ. ಪಡಸಾಲೆಯಲ್ಲಿ ಒಬ್ಬ ಹಳಬ ಕಂಬಳಿಯ ಮುಸುಕಿನಲ್ಲಿ ಗೊರಕೆ ಹೊಡೆಯುತ್ತಿದ್ದನು. ದನದ ಹಟ್ಟಿಯಲ್ಲಿ ದನಗಳು ಬಿರುಸಾದ ದಂಟನ್ನು ಕಟಕಟ ಒಡೆದು ತಿನ್ನುತ್ತಿದ್ದವು. ಮಲಗಿದ ಎತ್ತುಗಳು ಸಪ್ಪಳ ಮಾಡುತ್ತ ಎದ್ದು ನಿಲ್ಲುತ್ತಿದ್ದವು. ನಿಂತ ಎತ್ತುಗಳು ಕುಳಿತು ಉಸ್ಸೆಂದು ಬಿಸಿಯುಸಿರು ಗರೆಯುತ್ತಿದ್ದವು. ಎರಡು ದನಗಳು ಕೋಡುಗಳನ್ನು ತಿಕ್ಕಾಡಿ ಕಟ್ಟಿಕಟ್ಟೆಂದು ಸಪ್ಪಳ ಮಾಡುತ್ತಿದ್ದವು. ಇಂಥ ಗಂಭೀರ ಸಮಯದಲ್ಲಿ ಅಪ್ಪಾರಾಯರು ಹಾಸಿಗೆಯ ಮೇಲೆ ಎದ್ದು ಕುಳಿತರು. ಹೊಟ್ಟೆಯಲ್ಲಿ ಎಂಥದೋ ಸಂಕಟ. ಎಂಥದೋ ತಳಮಳ. ಅಸಹನೀಯವೇದನೆ.

"ಅಕ್ಕಾಮರಿ !" ಎಂದು ಕೂಗಿದರು. ಎದೆಯಲ್ಲಿ ಏನೋ ಗಡಬಡಿಸಿ ದಂತಾಯಿತು. 'ಗುರ್ ಗುರ್' ಸಪ್ಪಳವು ಸ್ಪಷ್ಟವಾಯಿತು. ಅನ್ನಾಶಯದ ಚೀಲ ಮೇಲೆ ಕೆಳಗೆ ಹೊಯದಾಡಿದಂತಾಯಿತು. ಮತ್ತೆ "ಅಕ್ಕಾಮರಿ !" ಎಂದು ಕೂಗಿದರು. ಉಂಡ ಅನ್ನ ನಿಲ್ಲದೆ ಹೊರಗೆ ಗಕ್ಕೆಂದು ಬಂದಿತು. ಮತ್ತೂ ಬಂದಿತು. ಅಸಹ್ಯವಾಸನೆ ! ದುರ್ಗಂಧ ವಾಸನೆ ! ಕೋಣೆಯು ತುಂಬವಾಯಿತು. ಕರುಳು ಹರಿದು ಬಾಯಿಗೆ ಬಂದಂತೆ ಓಕರಿಕೆಯಾಯಿತು. ರಾಯರ ಓಕರಿಕೆಯ ಸಪ್ಪಳಕ್ಕೆ ಅವ್ವಕ್ಕನು ಓಡಿ ಬಂದಳು. ಗಂಡನ ಅವಸ್ಥೆಯನ್ನು ನೋಡಿ ಗಾಬರಿಯಾಗಿ ಕೂಗಿದಳು. "ಅಯ್ಯೋ !" ಎಂದು ಚೀರಿದಳು. ಅಕ್ಕಾಮರಿಯೂ ಬಂದಳು. ರಾಜಣ್ಣನ ಮಗಳು ಲಲ್ಲಿಯೂ ಅಳುತ್ತ ಬಂದು ನಿಂತಿತು. ಅವ್ವಕ್ಕನು ಅಪ್ಪಾರಾಯರ ತಲೆ ಹಿಡಿದು "ಏನಾಯಿತು ? ಏನಾಯಿತು ?" ಎಂದು ಅಳುತ್ತ ಕೇಳಿದಳು.

"ವಾಂತಿ. ಮಲಗುವೆ. ಮಲಗಿಸು." ಎಂದು ಕಷ್ಟದಿಂದ ನುಡಿದರು.

ಆ ಇಬ್ಬರು ಹೆಣ್ಣುಮಕ್ಕಳು ಮೆಲ್ಲಗೆ ಹಾಸಿಗೆಯ ಮೇಲೆ ಮಲಗಿಸಿದರು.

"ರಾಜಣ್ಣ ಬಂದಿರುವನೇ ?" ಒಣಗಿದ ದನಿಯಿಂದ ಕೇಳಿದರು.

"ಇಲ್ಲ." ಅಕ್ಕಾಮರಿಯು ನುಡಿದಳು.

"ಕರೆಯಿಸು."

ಅಕ್ಕಾಮರಿಯು ಹಳಬನನ್ನು ಎಬ್ಬಿಸಿದಳು. ರಾಜಣ್ಣನನ್ನು ಕರೆದು ತರಲು ತಿಳಿಸಿದಳು.

ಅಪ್ಪಾರಾಯರಿಗೆ ಹಾಸಿಗೆಯಲ್ಲಿಯೇ ಭೇದಿಯಾಯಿತು. ಅಕ್ಕಿಯ ದಟ್ಟ ಗಂಜಿಯಂತಹ ಭೇದಿ. ಭೇದಿಯಾದುದರ ಪ್ರಜ್ಞೆ ಇರಲಿಲ್ಲ. ಅವ್ವಕ್ಕನು ಎದೆ ಎದೆ ಬಡಿದುಕೊಂಡಳು. ಅಕ್ಕಾಮರಿಯು ಲಲ್ಲಿಯನ್ನು ಎದೆಗೆ ಹಿಡಿದು ರೋಧಿಸಹತ್ತಿದಳು. ನೆರೆಮನೆಯ

ಇಬ್ಬರು ಹಿರಿಯರು ಸಪ್ಪಳವನ್ನು ಕೇಳಿ ಧಾವಿಸಿ ಬಂದರು. ಏನೆಂದು ವಿಚಾರಿಸಿದರು. ಇಬ್ಬರೂ ಉತ್ತರಿಸಲಿಲ್ಲ. ಉತ್ತರಿಸಲು ಬಾಯಿ ಬರಲಿಲ್ಲ. ಅಪ್ಪಾರಾಯರನ್ನು ತೋರಿಸಿದರು. ಅಪ್ಪಾರಾಯರ ಹೆಸರೆತ್ತಿ ಕೂಗಿದರು. ಮಾತು ಬರಲಿಲ್ಲ. ಕಣ್ಣು ಪಿಳಿಕಿಸಿ ನೋಡಿದರು. ಮತ್ತೆ ವಾಂತಿಯಾಯಿತು. ಮುಂದೆ ಅರ್ಧತಾಸಿ ನೊಳಗೆ ಭೇದಿಯಾಯಿತು. ಮೂತ್ರ ಆಗಿರಲಿಲ್ಲ. ಮಾರೀಬೇನೆಯ ಲಕ್ಷಣಗಳು ಸ್ಪಷ್ಟವಾದವು.

ರಾಜಣ್ಣನು ಮನೆಯಲ್ಲಿ ಇಲ್ಲದ್ದಕ್ಕೆ ಅಕ್ಕಾಮರಿಯು ಕಿಡಿ ಕಿಡಿಯಾದಳು.

ಈ ಸುದ್ದಿ ಊರ ತುಂಬ ಹಬ್ಬಿತು. ಮತ್ತೆ ಕೆಲಹಿರಿಯರು ಬಂದರು ಹಳ್ಳಿಯೊಳಗಿನ ವೈದ್ಯ ಬಂದನು. ಗುಳಿಗೆಗಳನ್ನು ಪುಡಿ ಮಾಡಿ ನೀರಲ್ಲಿ ಕಲಸಿ ಕುಡಿಸಿದರು. ಪುಡಿಯನ್ನು ನೆಕ್ಕಿಸಿದರು. ಮಂತ್ರವಾದಿ ಬಂದು ತಾಯಿತವನ್ನು ಕಟ್ಟಿದನು. ಅವ್ವಕ್ಕನು ಗ್ರಾಮ ದೇವತೆಗೆ ೫ರೂ ಮುಡಿಪು ತೆಗೆದಿಟ್ಟಳು. ಅಕ್ಕಾಮರಿಯು ಕೊರಳ ಚಂದ್ರಹಾರವನ್ನು ಬಳಿ ತೆಗದು ಇಟ್ಟಳು. ಕಾಸಿದರು, ಕಟ್ಟಿದರು, ಹರಕೆಯನ್ನು ಹೊತ್ತರು. ಆದರೆ ಇವರೆಲ್ಲರ ಇಚ್ಛೆಯನ್ನು ಮೀರಿ ಅಪ್ಪಾರಾಯರು ಬೆಳಗಿನ ಸುಮಾರಿಗೆ ತಮ್ಮ ಮನೆ, ಮಡದಿ, ಸೊಸೆ, ಮಮ್ಮೊಗಳು, ಆಳು, ಹೋಳು, ಪರಿಚಯದವರು, ಗೆಳೆಯರು ಎಲ್ಲರನ್ನೂ ಬಿಟ್ಟು ವೈಕುಂಠಕ್ಕೆ ತೆರಳಿದರು. ತಮ್ಮ ಜೀವ ಸತ್ವವನ್ನು ತೆಗೆದುಕೊಂಡು ಅದೃಶ್ಯರಾದರು. ಈ ಲೀಲಾಭೂಮಿಯು ಕಳೇವರವನ್ನು ಇಲ್ಲಿಯೇ ಜನರು ನೋಡಲು ಬಿಟ್ಟರು.

ಮನೆಯಲ್ಲಿ ಒಂದೇ ಬಗೆಯ ಹಾಹಾಕಾರ! ಆಕ್ರಂದ! ದುಃಖ! ಕಣ್ಣೀರು! ಅಳುವು! ಜನ ಜಾತ್ರೆಯಾಗಿ ನೆರೆಯಿತು. ಅವ್ವಕ್ಕನು ಹೆಣದ ಸಂಗಡ ಹೆಣವಾಗಿ ದುಃಖಿಸುತ್ತಿದ್ದಳು. ಅವಳ ಆಕ್ರೋಶ, ಬಡಿದುಕೊಳ್ಳುವದು, ಹೊಡೆದುಕೊಳ್ಳುವದು ನೋಡಲಸಾಧ್ಯ. ಎಲ್ಲರ ಬಾಯಲ್ಲೂ ಅಪ್ಪಾರಾಯರ ದೊಡ್ಡಸ್ತಿಕೆ, ಧರ್ಮ, ಸಮತೋಲ ಬುದ್ಧಿ

ಪ್ರಸಂಗಾವಧಾನಗಳ ಪ್ರಶಂಸೆಯೇ ಪ್ರಶಂಸೆ. ಊರ ಹಿರಿಯರು, ಊರ ಮಾನವಂತರು, ಊರ ದೊಡ್ಡವರು ಹೋದರೆಂದೇ ಭಾವನೆ. ಅವರ ಅನಿರೀಕ್ಷಿತ ಮರಣಕ್ಕೆ ಮಮ್ಮಲ ಮರುಗಿದರು ಶೋಕಿಸಿದರು.

ಬೆಳಗಾಗಿ ಅರ್ಧತಾಸು ಹೊತ್ತೇರಲು ತಾಲೂಕಿನಿಂದ ಡಾಕ್ಟರರು ಔಷಧ, ಬಾಟಲಿ, ಆಳು ಮುಂತಾದ ಸರಂಜಾಮುದಿಂದ ಬಂದರು. ಆಗ ಊರ ಹಿರಿಯರು ಸ್ಮಶಾನ ಯಾತ್ರೆಯ ಸಂಭ್ರಮದ ಸಿದ್ಧತೆಯಲ್ಲಿದ್ದರು.

ಅಳುತ್ತ ನಿಂತ ಗದ್ದಲದೊಳಗೆ, ರಾಜಣ್ಣ ನಿಂಗಿಯ ತೋಟದ ಗುಡಿಸಲದಿಂದ ಇದೇ ಬಂದು ಕಣ್ಣೊರಸಿಕೊಳ್ಳುತ್ತ ಅಪ್ಪಾರಾಯರ ಹೆಣವನ್ನು ಮುಟ್ಟಿದನು.

# ೧೭

ಅಪ್ಪಾರಾಯರು ಸತ್ತಂದಿನಿಂದ ರಾಜಣ್ಣನು ಮನೆಯನ್ನು ಹಿಡಿದನು. ಗಂಡನು ವಿವೇಕಿಯಾದನೆಂದು ಅಕ್ಕಾಮರಿಯು ತಿಳಿದಳು. ಇದೇ ಬುದ್ಧಿ ಕೊನೆಯುವರೆಗೆ ಉಳಿದರೆ ತನ್ನ ಬಾಳು ಎಷ್ಟೋ ಉತ್ತಮವಾಗುವದು. 'ತಲೆಗೆ ಬಡಿದ ಮೇಲೆಯೇ ಪ್ರತಿಯೊಬ್ಬರಿಗೆ ಬುದ್ಧಿ ಬರುವದು.' ಆ ಬಂದ ಬುದ್ಧಿ ಶಾಶ್ವತವಾಗಿ ಉಳಿಯುಬಹುದು 'ದೇವಾ ಅವರಲ್ಲಿ ಇದೇ ಬುದ್ಧಿಯನ್ನು ಇಡು. ಮಾವನ ಮನೆಯನ್ನು ಸಂರಕ್ಷಿಸು' ಎಂದು ಸೂತಕದಲ್ಲಿಯೇ ಅನೇಕ ಸಾರೆ ದೇವರನ್ನು ಪ್ರಾರ್ಥಿಸಿದಳು. ಆದರೂ ಒಂದು ವಿಷಯದಲ್ಲಿ ಮಾತ್ರ ಗಂಡನನ್ನು ಛೀಮಾರಿ ಮಾಡಬೇಕಾಯಿತು.

ಮೈಲಿಗೆಯ ಐದನೆಯ ದಿನ ಮಧ್ಯರಾತ್ರಿಯ ಸುಮಾರಿಗೆ ರಾಜಣ್ಣನು ಹಾಸಿಗೆಯಿಂದ ಎದ್ದು, ಅಕ್ಕಾಮರಿಯು ಮಲಗಿದ ಕೋಣೆಗೆ ಹೋಗಿ ಬಾಗಿಲ ಚಿಲಕವನ್ನು ಮೆಲ್ಲಗೆ ಅಲುಗಾಡಿಸಿದನು. ಅಕ್ಕಾಮರಿಗೆ ಎಚ್ಚರಾದ ಚಿನ್ಹವು ಕಂಡುಬರಲಿಲ್ಲ. ಮತ್ತೆ ಅಲುಗಾಡಿಸಿದನು. ಬಾಗಿಲ ತೆರೆಯಲಿಲ್ಲ. ಬೆರಳಿನಿಂದ ಬಡಿದನು. ಮತ್ತೆ ಬಾಗಿಲು ಅಲುಗಾಡಿಸಿದನು. 'ನಾನು ಬಾಗಿಲು ತೆರೆ' ಎಂದು ಸಂದಿಯಲ್ಲಿ ಬಾಯಿಯನ್ನು ಇಟ್ಟು ಕೂಗಿದನು. ಮೊದಲು ಅಕ್ಕಾಮರಿಯು ಹೆದರಿದಳು. ಆದರೆ ಹೊರಗಿನಿಂದ 'ನಾನು ಬಾಗಿಲು ತೆರೆ!'

ಎಂಬ ಗಂಡನ ದನಿಯು ಪುನಃ ಕೇಳಬಂದಿತು.

"ಏಕೆ?" ಅಂಜುತ್ತ ಕೇಳಿದಳು.

"ನಿನ್ನ ಕಡೆಗೆ ಬಂದಿರುವೆ."

"ಏನು ಕೆಲಸ?"

"ನಿನ್ನ ಕಡೆಗೆ!" ಗಟ್ಟಿಸಿ ಆಘಾತದಿಂದ ನುಡಿದನು.

"ಮಾವನವರು ಸತ್ತು ಐದು ದಿನಗಳು ಸಹ ಆಗಿಲ್ಲ. ಜನರು ಏನೆಂದಾರು ! ಸುಮ್ಮನೆ ಹೋಗಿರಿ."

"ಬಾಗಿಲನ್ನು ತೆರೆಯುವಿಯೋ ಮುರಿಯಲೋ !" ಎಂದು ಸಿಟ್ಟಿನಿಂದ ನುಡಿದನು.

ಗಂಡನ ಹಟ, ಅವಿವೇಕವನ್ನು ಚೆನ್ನಾಗಿ ಬಲ್ಲಳು. ಹೆದರುತ್ತಲೆ "ಬಾಗಿಲನ್ನು ಬಿಡಿರಿ, ತೆಗೆಯುವೆ" ಎಂದಳು.

ರಾಜಣ್ಣನು ಬಾಗಿಲನ್ನು ಬಿಟ್ಟನು. ಅಕ್ಕಾಮರಿಯು ಚಿಲಕವನ್ನು ತೆಗೆದಳು. ಬಾಗಿಲನ್ನು ಎಳೆದುಕೊಂಡು ಮುದ್ದೆಯಾಗಿ ಹಾಸಿದ ಒಂದು ಮೂಲೆಯ ಕಡೆಗಿದ್ದ ಹಾಸಿಗೆಯ ಮೇಲೆ ಕುಳಿತಳು. ಲಲ್ಲಿಯು ಮಲಗಿ ಗುರುಗುರುಸುತ್ತಿದ್ದಿತು.

ರಾಜಣ್ಣನು ಒಳಗೆ ಬಂದು ಬಾಗಿಲನ್ನು ಇಕ್ಕಿದನು. ಚಿಲಕವನ್ನು ಜಡಿದನು. ಮಾಡದಲ್ಲಿ ಗುಬ್ಬಿಯ ಚಿಮಣಿ ಮಿಣಿ ಮಿಣಿಯಾಗಿ ಉರಿಯುತ್ತಿದ್ದಿತು. ಸಿಟ್ಟು, ಕೋಪ, ಅವಮಾನ ರಾಜಣ್ಣನ ಮೂಗಿನ ತುದಿಯ ಮೇಲೆ ಕುಣಿಯುತ್ತಿದ್ದವು. ಆ ಅಶಿಕ್ಷಿತ, ಮುಟ್ಠಾಳ ಕಾಮಾತುರನಿಗೆ ಭಯ, ಲಜ್ಜೆಯ ಎಳೆಯು ಸಹ ಇರದಂತೆ ಮುಖವು ಉಕ್ಕೃತವಾಗಿದ್ದಿತು. ಅಕ್ಕಾಮರಿಯು ಹುಲಿಯ ಬಾಯಲ್ಲಿ ಸಿಕ್ಕುದು ನಿಶ್ಚಯವೆಂದು ತಿಳಿದಿದ್ದರೂ ಸ್ತ್ರೀ ರಕ್ಷಣೆಗೆ, ಮಾನದ ರಕ್ಷಣೆಗೆ, ವಿವೇಕದ ರಕ್ಷಣೆಗೆ, ಅಭಿಮಾನದ ರಕ್ಷಣೆಗೆ, ವ್ಯಕ್ತಿತ್ವದ ರಕ್ಷಣೆಗೆ ಅಣಿಯಾಗಿದ್ದಳು. ಆದರೂ ಸಾಮದ ಮಾತಿನಿಂದ ಸಾಧ್ಯವಾದರೆ ತಿಳಿಯಹೇಳಬೇಕೆಂದು ಸಂಕಲ್ಪಿಸಿದಳು. "ಏಕೆ ನಿಮಗೆ ಏನಾಗಿದೆ?" ಎಂದು ಕೇಳಿದಳು.

"ಏನಾಗುವದೇ ಹುಚ್ಚ ಮುಂಡೇ! ಬಾಗಿಲನ್ನು ತೆರೆ ಎಂದರೆ ಎಷ್ಟು ಸೊಕ್ಕೇ!" ಹಸಿದವನಂತೆ ನುಡಿದನು.

"ಬಾಗಿಲನ್ನು ಹೇಗೆ ತೆಗೆಯುವದು?"

"ಏಕೆ? ನಾನು ಬಂದುದು ನಿನಗೆ ಗೊತ್ತು."

"ಗೊತ್ತು. ಆದರೆ...."

"ಆದರೇನೇ?"

"ತಿಂಗಳ ಮೈಲಿಗೆಯಲ್ಲಿರುವೆನಲ್ಲ! ಇಷ್ಟು ದಿವಸ ನೀವು ಮನೆಯಲ್ಲಿರುತ್ತಿದ್ದಿಲ್ಲ. ಅದು ನಿಮಗೆ ತಿಳಿಯುತ್ತಿರಲಿಲ್ಲ. ಈಗ ನಾಲ್ಕು ದಿನಗಳಿಂದ ಮನೆಯಲ್ಲಿರವಿರಿ. ನಿಮಗೆ ತಿಳಿಯದೇ? ಗೊತ್ತಿದ್ದು...."

"ಅದಕ್ಕೇನು."

"ಇಂಥ ಮಾತುಗಳನ್ನು ನಾನು ಕೇಳಲಾರೆ."

"ಕೇಳಲಾರೆ!" ಎಂದು ಮುಂದೆ ಸಾಗಿದನು.

"ನಿಲ್ಲಿರಿ. ಒಂದು ಮಾತು ಕೇಳಿರಿ. ಆಮೇಲೆ ನಿಮ್ಮ ಮನಸಿಗೆ ಬಂದಂತೆ ನಡೆಯಿರಿ."

"ಏನು?" ಒಂದು ಗೊಳ ಅಂತರದ ಮೇಲೆ ನಿಂತು ಕೇಳಿದನು.

"ನಾನು ಹೇಳಿರುವೆ. ಇಂದು ಮೈಲಿಗೆಯ ಎರಡನೆಯ ದಿನ. ಈಗ ನನ್ನನ್ನು ಮುಟ್ಟಬೇಡಿರಿ, ಮುಟ್ಟಿದರೆ ನಿಮಗೆ ವರುಷದಲ್ಲಿ ಬಿಳುಪು ಹತ್ತುವದು. ನನಗೆ ಚೆನ್ನಾಗಿ ಗೊತ್ತು. ಇಂಥ ಪಾಪ ಮಾಡಿದ್ದರಿಂದಲೇ ದುಗುಣಿ ಭೀಮಾಚಾರ್ಯರು ಬಿಳುಪು ಹತ್ತಿ ಹೊಲೆಯರಂತೆ ಸತ್ತರು. ಬಿಳುಪು ಹತ್ತಿದ ನಿಮ್ಮ ಸಹವಾಸದಿಂದ ನನಗೂ ಬಿಳುಪು ಹತ್ತುವುದು ಖಂಡಿತ. ನನಗೆ ಬಿಳುಪು ಹತ್ತಿದ ಮೇಲೆ ಒಂದು ದಿನ ನಿಮ್ಮ ಕೂಡ ಬಾಳುವೆ ಮಾಡಲಾರೆ. ಧರ್ಮಕ್ಕೂ ಬಾಹಿರಳು, ಕುಲಕ್ಕೂ ಬಾಹಿರಳು, ಮನೆಗೂ ಬಾಹಿರಳು ಆಗಿ ಅವಮಾನದಿಂದ ಇರಲಾರೆ. ಮಾವನು ಕಟ್ಟಿಸಿದ ಗುಳ್ಳವ್ವನ ತೋಟದ ಬಾವಿಯಲ್ಲಿ ಬಿದ್ದು ಪ್ರಾಣ ನೀಗುವೆನು. ಇಷ್ಟೊಂದು ಅನಾಹುತವು ನಿಮಗೆ ಬೇಕಾದರೆ, ಇಷ್ಟವಿದ್ದರೆ, ನೋಡಬೇಕೆಂಬ

ಆಶೆಯಿದ್ದರೆ ಬನ್ನಿರಿ. ಆದರೆ ಲಲ್ಲಿಯನ್ನು ಮಾತ್ರ ಕಾಪಾಡಿ, ಯೋಗ್ಯ ಮನೆಗೆ ಕೊಡಿರಿ. ಬನ್ನಿರಿ" ಎಂದು ಬಿಕ್ಕಳಿಸುತ್ತ ಅಳಹತ್ತಿದಳು.

ರಾಜಣ್ಣನು ತುಟಿಗಳನ್ನು ನೆಕ್ಕುತ್ತ ನಿಂತಿದ್ದನು.

"ಮಾವನವರು ಇದ್ದಿದ್ದರೆ ಇಂಥ ಹೊಲೆಗೆಲಸ ಎಂದಿಗೂ ಆಗುತ್ತಿರಲಿಲ್ಲ. ಆ ಪುಣ್ಯಾತ್ಮರು ಹೋಗಿ ನಮ್ಮನ್ನು ನರಕದಲ್ಲಿ ಕೆಡವಿದರು. ಅವರು ತಮ್ಮ ಸಾವಿನ ಸಂಗಡ ನಮ್ಮ ಮನೆಯ ಪುಣ್ಯ, ಕೀರ್ತಿ, ಬ್ರಾಹ್ಮಣಿಕೆ ಕರ್ಮ ಎಲ್ಲವನ್ನೂ ಬಳಿದುಕೊಂಡು ಹೋದರು." ಎಂದು ಕಣ್ಣೀರು ಉದಿರಿಸಹತ್ತಿದಳು.

ರಾಜಣ್ಣನ ಬುದ್ಧಿ-ವಿವೇಕದ ಯಾವ ಭಾಗದ ಮೇಲೆ ಅಪ್ಪಳಿಸಿತೊ! ವಟಗುಟ್ಟುತ್ತ ಬಾಗಿಲನ್ನು ತೆರೆದು ಹೊರಗೆ ಬಂದನು. ಆದರೂ ಅವನ ಮೈಯೊಳಗಿನ ಕಾವು ಇಳಿದಿರಲಿಲ್ಲ.

ಮರುದಿನ ನಿಂಗಿಯ ಮನೆಯಲ್ಲಿ ಹಿಂದಿನ ದಿನದ ಪುನರಾವೃತ್ತಿಯಾಯಿತು. ಆ ಸಾಮಾನ್ಯ ಹೆಂಗಸು ಸಹ "ರಾಜಣ್ಣಾ, ದೇವರಂತಹ ತಂದೆಯನ್ನು ಕಳೆದುಕೊಂಡು ಇಂದಿಗೆ ಹತ್ತು ದಿನಗಳು ಸಹ ಆಗಿಲ್ಲ. ಊರಿಗೆ ಊರೇ ಅವರ ಸಾವಿಗಾಗಿ ಮರುಗುತ್ತಿದೆ. ನಿಮ್ಮ ತಾಯಿ ಅವ್ವಕ್ಕ ಮುದುಕಿ ನೆಲಹಿಡಿದವಳು ಮೇಲೆ ಎದ್ದಿಲ್ಲ. ನಾಲ್ಕು ದಿನಗಳಿಂದ ನೀರು ಸಹ ಮುಟ್ಟಿಲ್ಲವೆಂದು ಕೇಳಿರುವೆ. ಮನೆಯಲ್ಲಿ ನಿನಗೆ ಗೌರಿಯಂತಹ ಹೆಂಡತಿಯಿರುವಳು. ಕಪ್ಪುರ ಗೊಂಬೆಯಂತಹ ಚಿಕ್ಕ ಮಗಳೊಬ್ಬಳಿರುವಳು. ಅವರಿಗೆ ನೀವೇ ಇಂದು ಹಿರಿಯರು. ಅವರ ಸುಖ ದುಃಖದಲ್ಲಿ ಪಾಲುಗಾರರಾಗಬೇಕು. ಅವರಿಗೆ ಸಮಾಧಾನದ ಮಾತು ಹೇಳಬೇಕು. ಧೈರ್ಯವನ್ನು ತಂದುಕೊಡಬೇಕು. ನಿಮ್ಮ ತಂದೆಯವರು ದರ್ಪದಿಂದ ಮನೆಯನ್ನು ನಡಿಸಿ ತಂದಂತೆ ನೀವು ತರಲು ಪ್ರಯತ್ನಿಸಬೇಕು. ಅದನ್ನು ಬಿಟ್ಟು ಒಬ್ಬ ಕುರುಬರ ಹೆಂಗಸಿಗಾಗಿ ರಾತ್ರಿಯಲ್ಲಿ ಮನೆಬಿಟ್ಟು, ಕಳ್ಳರಂತೆ ಎಬ್ಬಿಸುವದು ಎಂಥ ನ್ಯಾಯ! ಹೇಳಿ ಕೇಳಿ ನಾನು ರಂಡೆ-ಮುಂಡೆ. ನಿಮ್ಮ ಕೈಯೊಳಗಿನ ಬಂಗಾರದ ಬಳೆಯ ಕಡೆಗೂ ಮನಸು

ಹೆರಿಯುವದು. ಏನು ಮಾಡಲಿ ? ಎಂಬ ವಿಚಾರವು ತಲೆಯಲ್ಲಿ ಬರುವದು. ನೀವು ಬರಬಾರದಿದ್ದಿತು. ಬರಬಹುದೆಂದೂ ತಿಳಿದಿರಲಿಲ್ಲ. ಬಂದಿರುವಿರಿ. ನನ್ನ ಆಶೆಗಿಂತ ನಿಮ್ಮ ಆಶೆಯೇ ಹೆಚ್ಚಿನದೆಂದು ತಿಳಿಯುವೆ. ನಿಮ್ಮ ತಂದೆಯವರ ಕಾರ್ಯವು ಮುಗಿಯುವ ವರೆಗಾದರೂ ಬರಬೇಡಿರಿ. ಈಗ ನನಗೆ ನಿಮ್ಮ ಸಲುವಾಗಿ ಕೆಡಕು ಎನಿಸುವದು. ನೀವು ಮನೆಗೆ ಹೋಗಿರಿ. ಎಲ್ಲರನ್ನೂ ರಕ್ಷಿಸುವೆನೆಂದು ಹೇಳಿ ಮನೆಯಲ್ಲಿ ಮಲಗಿರಿ.” ಎಂದು ನುಡಿದಳು.

ರಾಜಣ್ಣನು ಮರುಮಾತಾಡದೆ ಮನೆಗೆ ಬಂದನು.

ಈ ಬಗೆಯ ಅವಮಾನದಿಂದ ಅವನ ತಲೆಯೂ, ಬುದ್ಧಿಯೂ ಬಿಸಿಬಿಸಿಯಾದವು. ಹತಾಶನಾಗಿ ಮನೆಯಲ್ಲಿ ಉಳಿದನು.

ಎಂದಿನಂತೆ ಅವನ ಸಂಗಡ ಮುಲಗಲು ಭೀಮ, ನಿಂಗ, ತಮ್ಯಾ ಹಿಟಲರರು ಬಂದರು. ಅಂದು ಅವರ ಮುಖದಲ್ಲಿ ತಿಳಿನಗೆಯು ಸೂಸುತ್ತಿದ್ದಿತು. ರಾಜಣ್ಣನ ಮುಖದ ಮೇಲೆ ವಿಷಾದದ ಕರಿನೆರಳು ಮುತ್ತಿಕೊಂಡಿದ್ದಿತು.

“ಯಾಕೆ ರಾಜಣ್ಣನವರೇ ತಂದೆಯ ಸಾವನ್ನು ಇನ್ನೂ ಮರೆ ತಿಲ್ಲವೇ ?” ಭೀಮ ಕೇಳಿದನು.

“ಅಲ್ಲ ! ಅಪ್ಪಾರಾಯರ ಸಾವು ಮರೆಯುವಂತಹದೇ ! ಹೆಜ್ಜೆ ಹೆಜ್ಜೆಗೆ ನೆನಪಾಗುವದು. ಆದರೂ ನಾವು ಮರೆಯಬೇಕು ರಾಜಣ್ಣ.” ನಿಂಗನು ನುಡಿದನು.

“ಏನೋ ಮನಸಿಗೆ ಬೇಜಾರ !” ರಾಜಣ್ಣ ಹೇಳಿದನು.

“ಬೇಜಾರ ಬಂದೇ ಬರುವದು.”

“ಮನೆಯ ಭಾರವೆಲ್ಲ ನಿಮ್ಮ ಮೇಲೆ ಬೀಳಲು ಬೇಜಾರ ಬಂದು ಬೇಲಿಯನ್ನು ಹೊಗುವಂತಾಗುವದು ಮುಂದೆ. ಈಗಲೇ ನೀವು ಕೈಕಾಲು ಕಳೆದುಕೊಂಡರೆ ಹೇಗೆ ರಾಜಣ್ಣ!” ನಿಂಗ ಉಪದೇಶಿಸಿದನು.

“ಆದರೆ ಬೇಜಾರ ಕಳೆದುಕೊಳ್ಳಲು ಒಂದು ಉಪಾಯವಿದೆ. ನಾವು ಇಂದು ಹುಡುಕಿಕೊಂಡು ಬಂದಿರುವೆವು.” ಹಿಟಲರನು ನುಡಿದ.

"ಏನು?" ರಾಜಣ್ಣಾ ಕೇಳಿದನು.

"ಇದೋ!" ಸೆರೆಯ ೪-೫ ಸೀಸೆಗಳನ್ನು ತೋರಿಸಿದನು.

ರಾಜಣ್ಣನ ಮುಖದಮೇಲೆ ಹುಸಿನಗೆಯು ಮೂಡಿತು.

"ಹೇಗೆ ದೊರಕಿಸಿದಿರಿ?"

ಸೆರೆಗಾಗಿ ಹೇಳಿದ್ದು, ಅವುಗಳನ್ನು ಕಳ್ಳತನದಿಂದ ಸಿದ್ಧಪಡಿಸಿದ್ದು, ದೊರಕಿಸಿದ್ದು, ಇಲ್ಲಿಯವರೆಗೆ ತಂದದ್ದು ಎಲ್ಲವನ್ನೂ ಹಿಟಲರನು ಸಾದ್ಯಂತವಾಗಿ ಹೇಳಿ "ಇನ್ನು ನಿಮ್ಮ ಬೇಜಾರನ್ನು ಕಳೆದುಕೊಳ್ಳಿರಿ!" ಎಂದು ಒಂದು ಸೀಸೆಯ ಮುಚ್ಚಳವನ್ನು ತೆಗೆದು ರಾಜಣ್ಣನ ಕೈಗೆ ಕೊಟ್ಟನು. ರಾಜಣ್ಣನು ಒಂದು ಗುಟುಕು ಗಂಟಲಿಗೆ ಇಳಿಸುತ್ತ "ಏನಿಲ್ಲದಿದ್ದರೂ ಕೊನೆಗೆ ಇದನ್ನು ತಂದಿರಿ. ನನಗೂ ಇದೇ ಬೇಕಾಗಿದ್ದಿತು. ನೀವು ಕೆಟ್ಟವರೆಂದು ಯಾರೇ ಹೇಳಲಿ, ಎಲ್ಲರೂ ಹೇಳಲಿ, ಊರಿಗೆ ಊರೇ ನುಡಿಯಲಿ. ನಾನು ಯಾವದನ್ನೂ ನಂಬುವದಿಲ್ಲ. ದೇವರನ್ನು ಸ್ಮರಿಸಿ ಒಂದೇ ಮಾತು ನುಡಿಯುವೆ–ನೀವು ನನ್ನ ಜೀವದ ಗೆಳೆಯರು. ಪ್ರಾಣಕ್ಕೆ ಪ್ರಾಣವನ್ನು ಕೊಡುವಂತಹರು." ಎಂದು ಗುಟುಕರಿಸಹತ್ತಿದನು.

ಉಳಿದವರೂ ತಮ್ಮ ಪಾಲಿನ ಪೇಯವನ್ನು ಸೀಟುತ್ತ ಕುಡಿಯಹತ್ತಿದರು. ಸೀಸೆಗಳು ಉರುಳಾಡಹತ್ತಿದವು. ಉನ್ಮಾದವು ಹೆಜ್ಜೆ ಹೆಜ್ಜೆಯಾಗಿ ಮೈ ಮನಗಳನ್ನು ಆವರಿಸಹತ್ತಿತು. ಒಂದು ದೀಪ ಐದು ದೀಪಗಳಾಗಿ ಕಾಣ ಹತ್ತಿದವು. ದೀಪದ ಸುತ್ತು ಕಾಮನಬಿಲ್ಲಿನ ಬಳೆಗಳು ಓಡಾಡಹತ್ತಿದವು. ತಲೆಯು ದೇಹದ ಮೇಲೆ ತೂಗಾಡ ಹತ್ತಿತು. ಅತೃಪ್ತ ಭಾವನೆಗಳು, ಹಸಿದ ಆಶೆ-ಆಕಾಂಕ್ಷೆಗಳು, ಸುಪ್ತ ಯೋಚನೆಗಳು ತಲೆಯನ್ನು ತುಂಬಿ ಬಾಯಿಯನ್ನು ಬಿಚ್ಚಿಸಿದವು. ಅವು ಶಬ್ದ ರೂಪವಾಗಿ, ನಟನೆಯ ಕೃತಿಯಾಗಿ ಹೊರಬೀಳಹತ್ತಿದವು. ಹಾಡಿದರು. ತಾಳ ಹಿಡಿದರು, ಚೀರಿದರು, ಕೂಗಿದರು, ನಿಂದಿಸಿದರು, ಹಳಿದರು, ತೋಳೇರಿಸಿದರು, ಸಡ್ಡು ಹೊಡೆದರು, ಬೈದರು, ಬೊಗಳಿದರು. ಗಂಟಲಿನ ಸ್ನಾಯು

ಮಂಡಲಗಳು ಸೋತವು. ಕೈಕಾಲುಗಳು ಹಣ್ಣಾದವು. ಒಬ್ಬೊಬ್ಬರಾಗಿ ಉರುಳಿದರು. ತುಸು ಹೊತ್ತಿನಲ್ಲಿ ನಿದ್ದೆ ಹತ್ತಿತು.

ಅಡಿಗೆಯ ಮನೆಯಲ್ಲಿ ಒಂದು ಚಾಪೆಯ ಮೇಲೆ ಅವ್ವಕ್ಕನು ಅಡ್ಡಾಗಿದ್ದಳು. ಅನ್ನ-ನೀರಿಲ್ಲದೆ ಗತ ಪ್ರಾಣಳಾಗಿ ಮಲಗಿದ್ದಳು. ಒಳಗಿನ ಕೋಣೆಯಲ್ಲಿ ಅಕ್ಕಾಮರಿಯು ತನ್ನ ಕೂಸನ್ನು ಮಲಗಿಸಿಕೊಂಡು ನಿದ್ರಿಸುತ್ತಿದ್ದಳು. ಒಬ್ಬ ವೃದ್ಧ ಹಳಬ ಹೊರಗಿನ ಬೈಲಲ್ಲಿ ಕಣಕೆಯ ಮೇಲೆ ಕಂಬಳಿಯನ್ನು ಚೆಲ್ಲಿ ಗೊರಕೆ ಹೊಡೆಯುತ್ತಿದ್ದನು. ಮುಂದಿನ ಮನೆಯಲ್ಲಿ ರಾಜಣ್ಣ, ನಾಲ್ವರು ಗೆಳೆಯರು ಅಸ್ತವ್ಯಸ್ತವಾಗಿ ಮಲಗಿ ಆಗೀಗ ಕನವರಿಸುತ್ತಿದ್ದರು.

ಒಳಗಿನಿಂದ ಅಕ್ಕಾಮರಿಯು "ಮನೆಯಲ್ಲಿ ಸಪ್ಪಳವಾಗುತ್ತಿದೆ. ಯಾರವರು ?" ಎಂದು ಕೂಗಿದಳು.

ಒಂದಿಷ್ಟು ಸಪ್ಪಳ ಕಡಿಮೆಯಾಯಿತು.

"ಯಾರವರು ?" ಮತ್ತೆ ಕೂಗಿದಳು.

ಮನೆಯಲ್ಲಿ ಎಲ್ಲವೂ ಶಾಂತವಿದ್ದಿತು.

"ಮನೆಯಲ್ಲಿ ನಡೆದಾಡುವವರು ಯಾರು ?" ಮತ್ತೊಮ್ಮೆ ಗಟ್ಟಿಯಾಗಿ ಕೂಗಿದಳು.

ಅವಳ ಕೂಗಿಗೆ ಯಾರೂ ಉತ್ತರಿಸಲಿಲ್ಲ. ಯಾರೂ ಎದ್ದು ಬರಲಿಲ್ಲ. ತಾನೇ ನೋಡಬೇಕೆಂದು ಮೆಲ್ಲಗೆ ಬಾಗಿಲನ್ನು ತೆರೆದಳು. ಯಾರೋ ಒಳ ನುಗ್ಗಿ ಆಕೆಯ ಬಾಯಿಂದ ಹೊರಡುವ ಗಾಬರಿಯ "ಅಯ್ಯೋ !" ಶಬ್ದ ಬರಗೊಡದಂತೆ ಮಾಡಿದರು. ಮುಂದೆ ಅಕ್ಕಾಮರಿಯ ಮಾತೂ ಹೊರಡಲಿಲ್ಲ.

ಬೆಳಗಾಯಿತು. ಒಕ್ಕಲಿಗರು ತಮ್ಮ ಹೊಲ-ತೋಟಗಳಿಗೆ ಎತ್ತುಗಳನ್ನು ಬಿಟ್ಟುಕೊಂಡು ನಡೆದರು. ಗುಬ್ಬಿ-ಕಾಗೆಗಳು ಪ್ರಭಾತ ಗೀತವನ್ನು ಹಾಡಹತ್ತಿದವು. ಕೋಳಿಗಳು ಸೂರ್ಯನ ಬರವಿಗೆ ಕಾಳೆಯಂತೆ ಕುತ್ತಿಗೆಯನ್ನು ಎತ್ತಿಕೊಂಡು ನಿಂತಿದ್ದವು. ಆದರೆ ಗೌಡರ ಮನೆಯ ಹಿತ್ತಲ ಗೋಡೆಯ ಬಾಗಿಲು ಹಾರ ಹೊಡೆದಿದ್ದಿತು.

ಒಬ್ಬನು ಇಣಿಕಿಕ್ಕಿ ನೋಡಿದನು. ಮನೆಯವರು ಎದ್ದ ಸುಳುವಿರಲಿಲ್ಲ. ಮುಂದುಗಡೆಗೆ ಬಂದು ಎಬ್ಬಿಸಿದನು. ಒಬ್ಬೊಬ್ಬರಾಗಿ ಎದ್ದರು. ರಾಜಣ್ಣನು ಸ್ವರ್ಗಸುಖದ ಸ್ವಪ್ನ ಸಾಮ್ರಾಜ್ಯದಿಂದ ಅದೇ ಎದ್ದು ಹಾಸಿಗೆಯ ಮೇಲೆ ಕುಳಿತನು. "ಏನು ?" ಎಂದು ಕೇಳಿದನು.

"ಒಳಗೆ ಗದ್ದಲವಾಗಿದೆ." ಒಬ್ಬನೆಂದನು.

ಒಳಗೆ ಹೋದರು. ಅತ್ತಿತ್ತ ನೋಡಿದರು. ಮನೆಯ ಎಲ್ಲ ಸಂಪತ್ತು ಕಳುವಾಗಿದ್ದಿತು. ಕೂಸಿಗೆ ಹಾಲು ಹಾಕುವ ಬೆಳ್ಳಿಯ ಬಟ್ಟಲು, ಚಮಚೆ, ಸಹ ಇರಲಿಲ್ಲ.

ಅಕ್ಕಾಮರಿಯು ಇನ್ನೂ ಎದ್ದಿರಲಿಲ್ಲ. ಕೂಗಿದರು. ಒದರಿದರು. 'ಹಾಹೂ' ಯಾವ ಸಪ್ಪಳವೂ ಬರಲಿಲ್ಲ. ಕೋಣೆಯ ಬಾಗಿಲು ಸಹ ತೆಗೆದಿದ್ದಿತು. ಕೋಣೆಯನ್ನು ಹೊಕ್ಕರು. ಅದೇನು ? ಬಾಯಲ್ಲಿ ಚಂಡು ತುರುಕಿ ಕೈಗಳನ್ನು ಹಿಂದೆ ಕಟ್ಟಿ ಮಂಚಕ್ಕೆ ಬಿಗಿದಿರುವರು. ಕಣ್ಣು ಪಿಳುಕಿಸುತ್ತ ಮೇಲೆ ನೋಡುತ್ತಿರುವಳು. ರಾಜಣ್ಣನು ಹೋಗಿ ಕಟ್ಟುಗಳನ್ನು ಬಿಚ್ಚಿದನು.

ಪಾಪ ಹೆಂಗಸು ಗಾಬರಿಯಾಗಿದ್ದಳು. ಎದ್ದು ಕುಳಿತು ಸಾವರಿಸಿಕೊಂಡಳು. ಬಾಯಿಂದ ಮಾತೇ ಹೊರಡಲಿಲ್ಲ. ಮಾತಾಡಬೇಕೆಂದರೆ ದನಿಯು ಬಾರದು. ನಾದವಿರಲಿಲ್ಲ. ನೆರೆದವರು ಸಮಾಧಾನ ಪಡಿಸಿ "ಏನಾಯಿತು ತಾಯೀ !" ಎಂದರು.

ಮೊದಲಿನ ಮಾತು 'ಸಸಾ'ದಲ್ಲಿ ಮುಗಿದವು.

"ಯಾರು ಬಂದಿದ್ದರು ?" ಮತ್ತೆ ಕೇಳಿದರು.

"ನನಗೆ ಅವರ ಸುಳಿವು ಹತ್ತಿತು. ಗಂಟಲು ಹಸಿಯಾಗಿದ್ದಿತು." ಮಾತು ಹೊರಡ ಹತ್ತಿದವು.

"ಯಾರು ?"

"ನನಗೆ ತಿಳಿಯದು. ಅವರ ಅಕರಾಳ ವಿಕರಾಳ ಮುಖ ನೋಡಿ ಹೆದರಿಕೆ ಬಂದಿತು. ನಡುವೆ ೪-೫ ಸಾರೆ ಕೂಗಿದೆ. ಇವರು ಯಾರೂ ಏಳಲಿಲ್ಲ. ಬಾಗಿಲು ತೆರೆದು ನೋಡಬೇಕೆಂದೆ. ಇಬ್ಬರು

ಟೊಣಪರು ಬಂದು ನನ್ನನ್ನು ಕಟ್ಟಿ ಹಾಕಿದರು. ನೀವು ಎದ್ದಿದ್ದರೆ ನನ್ನ ಹಣೆಯಬರಹವು ಹೀಗಾಗುತ್ತಿರಲಿಲ್ಲ! ನನ್ನ ಮನೆಯು ತೊಳೆದು ಹೋಯಿತು!" ಎಂದು ಗಟ್ಟಿಯಾಗಿ ಅಳ ಹತ್ತಿದಳು.

ಅಪ್ಪಾರಾಯರು ಧರ್ಮದಿಂದ ಗಳಿಸಿದ ಬಂಗಾರ, ಬೆಳ್ಳಿ, ದುಡ್ಡು ಗಂಟಿನೊಳಗಿನ ಸೀರೆ-ಪೀತಾಂಬರಗಳು ಎಲ್ಲವೂ ಒಂದು ರಾತ್ರಿಯ ಮೂರು ತಾಸಿನಲ್ಲಿ ಹೋಗಿಬಿಟ್ಟವು. ಅಕ್ಕಾಮರಿಯು ಮನೆಯನ್ನು, ಮಾವನನ್ನು ನೆನೆಸುತ್ತ ಅಳ ಹತ್ತಿದಳು.

ರಾಜಣ್ಣನು ತಲೆ ಹಿಡಿದುಕೊಂಡು ಪಡಸಾಲೆಯಲ್ಲಿ ಕುಳಿತನು. ಸೆರೆಯ ಅಮಲು ಸಂಪೂರ್ಣ ಇಳಿದಿದ್ದಿತು.

## ೧೮

ಅಪ್ಪಾರಾಯರ ಮೇಲೆ ಚಿನ್ನಯ್ಯನ ದ್ವೇಷಾಗ್ನಿ ತೀಕ್ಷ್ಣವಾಗಿದ್ದರೂ ಅವರ ಮರಣದಿಂದ ಅದರ ಶಾಖ ಕಡಿಮೆಯಾಯಿತು. ವೈರಿಯು ಜೀವಂತನಿದ್ದು, ಅವನ ಪೌರುಷ ಶಕ್ತಿಯ ಎದುರು ನಿಂತು ಸೆಣಸಬೇಕು, ಅವನನ್ನು ಸೋಲಿಸಬೇಕು, ಜಯದ ಮಾಲೆಯನ್ನು ತೊಟ್ಟುಕೊಳ್ಳಬೇಕು, ಹತ್ತು ಜನರಿಂದ ಹೌದೆನ್ನಿಸಿಕೊಳ್ಳಬೇಕು, ಅವಮಾನದ ಪರಿಮಾರ್ಜನೆಯನ್ನು ಮಾಡಿಕೊಳ್ಳಬೇಕು ಎಂಬುದು ಸಾಮಾನ್ಯವಾಗಿ ದೃಢ ಪ್ರಕೃತಿಯ ಪ್ರತಿಯೊಬ್ಬನೂ ತಿಳಿದುಕೊಂಡು ಬಂದ ಸಂಗತಿ. ಇದು ಸತ್ಯವಾದುದು. ದುರ್ಬಲ ಪ್ರಕೃತಿಯವನು ವೈರಿಯ ಹೆಣದ ಮೇಲೆ ಸೇಡು ತೀರಿಸಿಕೊಳ್ಳುವನು. ಇದನ್ನು ಯಾರೂ ಮೆಚ್ಚರು. ಮೆಚ್ಚುವ ವಿಷಯವೂ ಅಲ್ಲ. ಚಿನ್ನಯ್ಯನು ಉಳಿದೆಲ್ಲ ವಿಷಯಗಳಲ್ಲಿ ಏನೇ ಇರಲಿ ಅಪ್ಪಾರಾಯರು ಜೀವದಿಂದಿರಬೇಕಾಗಿದ್ದಿತೆಂದು ನುಡಿಯುವನು. ಅಲ್ಲದೆ–ಅವರನ್ನು ಕಾಡಬೇಕು. ಅವರ ತೇಜೋವಧೆಯನ್ನು ಮಾಡಬೇಕು. ಒಂದು ಸಣ್ಣ ಪ್ರಸಂಗದಲ್ಲಾದರೂ ಸರಿ ಅವರನ್ನು ಇರುಕಿನಲ್ಲಿ ಹಿಡಿಯಬೇಕು. ಅವಮಾನಪಡಿಸಬೇಕು. ರಾಕ್ಷಸೀ ತೃಪ್ತಿಯನ್ನು ಹೊಂದಬೇಕು ಎದು ಸಂಕಲ್ಪಿಸಿದ್ದನು. ಆದರೆ ಅಪ್ಪಾರಾಯರು ಸತ್ತರು. ವೈರಿಯು ಸತ್ತನೆಂದು ಸಮಾಧಾನಪಡಲಿಲ್ಲ. ವಿಷಾದವಾಯಿತು. ಒಂದು ಬಗೆಯ ದುಃಖ

ವಾಯಿತು. ಎದುರಾಳಿಯನ್ನು ಸ್ಪರ್ಧಿಸಬೇಕೆಂಬ ಹಟದ ನಿರ್ಧಾರವು ಲೋಪವಾಯಿತು. ಇದಕ್ಕೆ ಇನ್ನೂ ಒಂದು ಕಾರಣವಿದ್ದಿತು.

ಪುಟ್ಟವ್ವನ ರೈತನನ್ನು ಪುಸಲಾಯಿಸಿ ಆಕೆಗೆ ಆಕೆಯ ವರುಷದ ಹೊಲದ ಲಾವಣಿಯನ್ನು ಕೊಡಬಾರದೆಂದು ಹೇಳಿದ್ದನು. ಪುಟ್ಟವ್ವನು ರೈತನ ಮನೆಗೆ ಹತ್ತಿಪ್ಪತ್ತು ಸಾರೆ ಎಡತಾಕಿದ್ದಳು. ಬೇಡಿಕೊಂಡಿದ್ದಳು. ಅಂಗಲಾಚಿದ್ದಳು. ತನ್ನ ಕಷ್ಟವನ್ನು ನಿವೇದಿಸಿದ್ದಳು. ಆದರೆ ಅವನು ಆಗದೆಂದು ನುಡಿದಿದ್ದನು. ಪುಟ್ಟವ್ವನು ಗಂಡ ಸತ್ತ ಮೇಲೆ ನಿಜವಾಗಿ ಅನಾಥಳಾಗಿದ್ದಳು. ಭಾವ-ಮೈದುನರು ಇವಳ ಸುಖದುಃಖದ ಮಾತುಗಳನ್ನು ಕೇಳುವ ಸಿದ್ಧತೆಯಲ್ಲಿರಲಿಲ್ಲ. ಸಹಾಯದ ಮಾತು ದೂರ ಉಳಿಯಿತು. ಅಲ್ಲದೆ ಪುಟ್ಟವ್ವನು ಬೇಗನೆ ಸತ್ತರೆ ಅವಳ ಹೊಲವೊಂದು ಸಿಕ್ಕು ತಮ್ಮ ಪ್ರಪಂಚಕ್ಕೆ ಅನುಕೂಲವಾಗುವುದೆಂಬ ಎಣಿಕೆಯಲ್ಲಿದ್ದರು. ಈ ಸಂಗತಿಯನ್ನು ಪುಟ್ಟವ್ವನು ಹೇಗೋ ಅರಿತುಕೊಂಡಿದ್ದಳು. ಅದಕ್ಕೆ ತನ್ನ ಸುಖದ ಹಾದಿಯನ್ನು ತಾನೇ ಕೊರೆದುಕೊಂಡು ಸಾಗಿದ್ದಳು. ಅವಳ ಈ ಸ್ವತಂತ್ರಜೀವನ ಅನೇಕರ–ವಿಶೇಷತಃ ಸಂಬಂಧಿಸಿದವರ ಟೀಕೆಗೆ ಪಾತ್ರವಾಗಿದ್ದಿತು. ಆದರೆ ಪುಟ್ಟವ್ವ ಹೆದರಲಿಲ್ಲ. ತನ್ನನ್ನು ಗೌರವಿಸುವ ಕೆಲವು ಬ್ರಾಹ್ಮಣರಿರುವರಲ್ಲ! ಮಾಡಹತ್ತಿದ ಗಂಡನ ಶ್ರಾದ್ಧಕ್ಕೆ ಊಟಕ್ಕೆ ಬರುವರಲ್ಲ! ತಾನು ಕೊಟ್ಟ ದಕ್ಷಿಣೆಯನ್ನು ತೆಗೆದುಕೊಳ್ಳುವರಲ್ಲ! ಈ ವಿಶ್ವಾಸವನ್ನು ನಂಬಿ ನಡೆದಿದ್ದಳು.

ಈ ಸ್ವಚ್ಛಂದ ವೃತ್ತಿಯ ಪುಟ್ಟವ್ವ ತನ್ನನ್ನು ಆದರಿಸಿದಳು. ಮನೆಯವರೆಗೆ ಕರೆದಳು. ಸಹಾಯ ಬೇಡಿದಳು. ಉಪಕಾರವನ್ನು ಸ್ಮರಿಸಿದಳು. ಅನ್ನದಾತನೆಂದಳು. ಒಂದು ಬ್ರಾಹ್ಮಣ ಮನೆತನದ ಹೆಣ್ಣು, ಒಂದು ದೊಡ್ಡ ಮನೆತನಕ್ಕೆ ತನ್ನ ಸುಸ್ವರೂಪಳಾದ ಮಗಳನ್ನು ಕೊಟ್ಟ ಹೆಣ್ಣು, ತಿನ್ನಲು ಕೊಟ್ಟದು, ಮೇಲಿಂದ ಮೇಲೆ ದರ್ಶನ ಲಾಭವನ್ನು ಆಶಿಸಿದುದು, ಅಡಿಗೆ ಮಾಡಿ ಊಟಕ್ಕೆ ಹಾಕಿದುದು, ಹಾಸಿಗೆಯನ್ನು ಮಲಗಲು ನೀಡಿದುದು ಅಸಾಮಾನ್ಯ

ಘಟನೆಯೆಂದು ತಿಳಿದನು. ಸ್ವಜಾತಿಯವರು ಮಾಡದಿದ್ದುದನ್ನು ಪುಟ್ಟವ್ವನು ಮಾಡಹತ್ತಿದ್ದು ದೈವೀ ಚಮತ್ಕಾರವೆಂದನು.

ಪುಟ್ಟವ್ವನ ಶುಚಿರುಚಿಯಾದ ಸ್ನೇಹ ಚಿನ್ನಯ್ಯನ ದ್ವೇಷಾಗ್ನಿಯನ್ನು ನಂದಿಸಲು ಪ್ರಬಲವಾದ ಕಾರಣವಾಯಿತು. ವಾರದಲ್ಲಿ ಎರಡು ಮೂರು ಸಾರೆ ಅವಳ ಹಳ್ಳಿಗೆ ಹೋಗಿ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರುತ್ತಿದ್ದನು! "ಇದು ಇದೆಯೇ ? ಇದು ಬೇಕೆ ? ಇದನ್ನು ತರಲೇ ?" ಎಂದು ಮೇಲೆ ಬಿದ್ದು ತಾನೇ ಕೇಳುತ್ತಿದ್ದನು.

ಪುಟ್ಟವ್ವನಿಗೆ ತನ್ನ ಹೊಲದ ಲಾವಣಿಯು ನೇರವಾಗಿ ಬರುವದಲ್ಲದೆ ಚಿನ್ನಯ್ಯನವರಿಂದ ಕಾಳುಕಡ್ಡಿ, ಹಣ್ಣುಹಂಪಲು, ಕಾಯಿಪಲ್ಲೆ, ಅರಿವೆ ಅಂಚಡಿ, ಕೂಡಿದಾಗ ಮೇಲೆ ಹಣವು ಬರಹತ್ತಿತು. ಎರಡು ವರುಷದಲ್ಲಿ ಮೂರು ರೇಸಿಮೆಯ ಲೋಪ ಸೆರಗಿನ, ತೆನೆ ತಿರುವಿಡ ಸೀರೆಗಳು ಉಡುಗೊರೆಯಾಗಿ ಸಿಕ್ಕಿದವು. ಕೊರಳಿಗೆ ಬಂಗಾರದಲ್ಲಿ ಪೋಣಿಸಿದ ಜಪಮಾಲೆಯಾಯಿತು. ಉಣಲು-ಉಡಲು ಕೊರತೆ ತಪ್ಪಿತು. ಗಂಡನ ಕಾಲದಲ್ಲಿಯ ಸುಖವನ್ನು ಮರೆಯುವಂತಾಯಿತು. ಸುಖ-ಸಮಾಧಾನ-ಶಾಂತಿಯ ಜತೆಗೆ ಮೈಬಣ್ಣ ತಿರುಗಿತು. ಬಾಡಿದ ಕೆನ್ನೆಗಳು ಉಬ್ಬಿದವು. ಗುಳಿಬಿದ್ದ ಕಣ್ಣುಗಳು ಹೊರಗೆ ಬಂದವು. ದೇಹವು ಸ್ಥೂಲವಾಗಿ ಹೊಂಬಣ್ಣದ ಕಳೆಗೊಂಡಿತು. ಶ್ರಾದ್ಧ-ಪಕ್ಷದ ಊಟಕ್ಕೆ ನವಣಕ್ಕಿಯ ಅನ್ನವನ್ನು ಮಾಡಿ ಬ್ರಾಹ್ಮಣರ ಭೋಜನವನ್ನು ಮಾಡಿಸುವ ಭಾವ-ಮೈದುನರ ಹೊಟ್ಟೆಯಲ್ಲಿ ಕಾರ ಕಲಸಿ, ಬಿಸಿನೀರು ಎರಚಿದಂತಾಯಿತು. ಪುಟ್ಟವ್ವನ ವೈಭವ ಅವರಿಗೆ ಕಣ್ಣಿನ ಕೊಳೆಯಾಯಿತು. ಮನದ ಮಲಿನತೆಯಾಯಿತು. ಹೊಟ್ಟೆಯೊಳಗಿನ ಕೊಳೆ ಶಬ್ದ ರೂಪದಿಂದ ಬಂದು-'ವೇಶ್ಯೆ. ವೇಶ್ಯೆ. ವೇಶ್ಯೆ !' ಎಂದು ಬಡಬಡಿಸಹತ್ತಿತು. ಆದರೆ ಪುಟ್ಟವ್ವನು ಈ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ನಾಯಿ ಬೊಗಳುವದು ! ಎಂದು ಆನೆಯಂತೆ ಗಂಭೀರವಾಗಿ ಸಾಗಿದಳು.

ಈ ಸಂಗತಿಗಳಿಂದ ಕಾಯಾಪಲ್ಲಟನಾದ ಚಿನ್ನಯ್ಯನು

ಇನ್ನೊಂದು ವಿಷಾದದ ಸಂಗತಿಯನ್ನು ಕೇಳಬೇಕಾಯಿತು.

ಜಟ್ಟೆರು ಮುಂದೆ ಕೆಲವು ದಿನಗಳ ಮೇಲೆ ಚಿನ್ನಯ್ಯನನ್ನು ಕಾಣಲು ಬಂದರು. ತಮ್ಮ ಸಾಹಸದ ಕೃತ್ಯವನ್ನು ನಿವೇದಿಸಿದರು. ಕಾರ್ಯಸಾಧನೆಯಲ್ಲಿ ತಾವು ಮಾಡಿದ ಆಲೋಚನೆ, ಸಾಧಿಸುವ ಮುಂದೆ ತೋರಿದ ಧೈರ್ಯ, ತಮ್ಮಲ್ಲಿಯ ಒಕ್ಕಟ್ಟು, ತಂದ ಸಾಮಾನುಗಳು, ಜನರ ಕೈಯಲ್ಲಿ ಸಿಕ್ಕಿದ್ದರೆ ಪಡುವ ಕಷ್ಟ, ದುಷ್ಪರಿಣಾಮದಿಂದ ಊರಲ್ಲಿ ತಾವು ವಾಸ ಮಾಡಿರುವ ಭಯ, ಅಕ್ಕಾಮರಿಯನ್ನು ಕಟ್ಟಿಹಾಕಿದ ಪ್ರಸಂಗಾವಧಾನ, ರಾಜಣ್ಣನ ಪರಿವಾರಕ್ಕೆ ನೆರೆಯನ್ನು ಕುಡಿಸಿ ಮತ್ತರನ್ನಾಗಿ ಮಾಡಿದ ಕೌತುಕ, ದೇವರು ತಮ್ಮನ್ನು ಕಾಪಾಡಿದ ಉಪಕಾರ ಇತ್ಯಾದಿಗಳನ್ನು ಬಣ್ಣಬಣ್ಣದಿಂದ ವರ್ಣಿಸಿದರು. ಚಿನ್ನಯ್ಯನು ಮನಸಿಲ್ಲದೆ ಇವೆಲ್ಲವುಗಳನ್ನು ಕೇಳಿದನು. ಕೇಳಿ ಸುಮ್ಮನಾದನು. ಏನೂ ಮಾತಾಡಲಿಲ್ಲ. ಜಟ್ಟೆರು 'ಚಿನ್ನಯ್ಯನು ತಮ್ಮನ್ನು ಹೊಗಳಬಹುದು, ಸ್ತುತಿಸಬಹುದು, ಶಾಬಾಸ್ ಅನ್ನಬಹುದು' ಎಂದು ತಿಳಿದಿದ್ದರು. ಆದರೆ ಅವರ ಬಾಯಿಂದ ಒಂದು ಚಕಾರ ಶಬ್ದ ಸಹ ಹೊರಡಲಿಲ್ಲ. ಐದಾರು ನಿಮಿಷಗಳು ಕಳೆದವು. ಕೊನೆಗೆ—"ಏಕೆ ಚಿನ್ನಯ್ಯನವರೇ ಸುಮ್ಮನೆ ಕುಳಿತಿರಿ ?" ಎಂದು ಧೂಮನು ಕೇಳಿಯೇಬಿಟ್ಟನು.

"ಏನಿಲ್ಲ. ನಿಮ್ಮ ಸಾಹಸವನ್ನು ನಾನು ಬಾಯಿತುಂಬ ಹೊಗಳುವೆ" ಎಂದು ಕೃತಕವಾದ ಸ್ತುತಿಯನ್ನು ನುಡಿದನು.

"ಇನ್ನು ನಮ್ಮ ಇನಾಮು...."

"ಈಗಾಗಲೆ ೭-೮ ಸಾವಿರದಷ್ಟು ಹಣವನ್ನು ಪಡೆದಿರುವಿರಿ. ಮೇಲೆ ನನ್ನ ಇನಾಮು ಬೇಕೇ ?" ನಗುತ್ತ ನುಡಿದನು.

"ನೀವು ಮಾತು ಕೊಟ್ಟಿರುವಿರಿ. ಅದಕ್ಕೆ ಬಂದಿರುವೆವು."

"ಈಗ ಪಡೆದುದು ಸಾಕಾಗಿಲ್ಲವೇ ?"

"ಚಿನ್ನಯ್ಯನವರೇ ! ಅದು ನಮ್ಮ ಪ್ರಯತ್ನದ ಫಲ. ನೀವು ವಚನ ಕೊಟ್ಟಂತೆ ಕೊಡಲೇಬೇಕು !" ಇನ್ನೊಬ್ಬ ನುಡಿದನು.

"ನಾವು ಭಿಕ್ಷೆ, ದಾನವೆಂದು ಬಂದಿಲ್ಲ. ನಾವು ಕಾರ್ಯವನ್ನು ಮಾಡುವ ಪೂರ್ವದಲ್ಲಿ ನೀವು ಹೇಳಿದ ಮಾತುಗಳನ್ನು ನೆನೆಯಿರಿ. ಆ ಮಾತು ನಿಜವಿದ್ದರೆ ಕೊಡಿರಿ. ನಾವು ಬಿಟ್ಟು ಹೋಗಲಾರೆವು."

"ಬರಿಗೈಯಿಂದ ಜಟ್ಟರು ಹೋಗುವದು ಅಪಮಾನ."

ಅವರ ಮಾತಿನಲ್ಲಿ ಹಟವಿದ್ದಿತು, ನಿರ್ಧಾರವಿದ್ದಿತು.

ಚಿನ್ನಯ್ಯನು ಅಪ್ಪಾರಾಯರಿಗೆ ಒಂದು ದಿನ ಕೂಡ ಹೆದರಿರಲಿಲ್ಲ. ಹೆದರುವ ಕಾರಣವಿರಲಿಲ್ಲ. ಅವರು ಏನೇ ಸಾಧಿಸಲಿ, ಏನೇ ಅನ್ಯಾಯ ಮಾಡಲಿ, ಯಾವದೇ ಅಪರಾಧಗೈಯಲಿ ಅವರ ಹಿಂದೆ ಕಾಯದೆ, ಕಾನೂನುಗಳ ರಕ್ಷಣೆ ಇರುತ್ತಿದ್ದಿತು. ಎದುರಾಳಿ ಮಿಸುಕಾಡದಂತೆ ಬಿಗಿದು ಹಿಡಿಯುತ್ತಿದ್ದರು. ತನ್ನ ರಕ್ಷಣೆಯೂ ಇರುತ್ತಿದ್ದಿತು. ಅಪರಾಧಿಯು ಸರಕಾರಿ ಅಲ್ಪಶಿಕ್ಷೆಯನ್ನು ಅನುಭವಿಸುತ್ತಿದ್ದನು. ದ್ವೇಷ ಹಿಡಿಯಲು ಕಾರಣವಿರಲಿಲ್ಲ. ಒಂದುವೇಳೆ ದ್ವೇಷ ಹಿಡಿದು ಏನಾದರೂ ಗೊಂದಲ ಹಾಕಿದರೆ ಹೆಚ್ಚಿನ ಶಿಕ್ಷೆಗೆ ಪಾತ್ರನಾಗಬೇಕಿದ್ದಿತು. ಇಷ್ಟೇ ಸಾಕು ಎಂದು ನುಂಗಿ, ಮೋರೆ ತಪ್ಪಿಸಿ ಊರಲ್ಲಿ ಉಳಿಯುತ್ತಿದ್ದನು. ಆದರೆ ಜಟ್ಟರ ಮಾತು ಹಾಗಲ್ಲ. ಕಾಯದೆಯ ಮಾತು ಅವರಿಗೆ ಗೊತ್ತಿರಲಿಲ್ಲ. ತಾವು, ತಮ್ಮ ಭಾವನೆಯ ಓಟ, ತಮ್ಮ ಸ್ವಾರ್ಥ ಇಷ್ಟನ್ನೇ ನೋಡಿ ನಡೆಯುವ ಹಟವಾದಿಗಳು. ತಮ್ಮ ಮಾತಿಗೆ ಒಪ್ಪಿದರೆ ಸರಿ. ಇಲ್ಲದಿದ್ದರೆ ಶಾಸನವನ್ನು ಅವರ ವೈರಿಯು ವಿಚಾರಿಸಲು, ಬದುಕಲು ಸಮಯವನ್ನೇ ಕೊಡುತ್ತಿರಲಿಲ್ಲ. ಚಿನ್ನಯ್ಯನು ಅದಕ್ಕಾಗಿ ಅವರಿಗೆ ಬಹಳ ಹೆದರುತ್ತಿದ್ದನು.

"ಆಗಲಿ. ನಾಳೆ ಬನ್ನಿರಿ, ಕೊಡುವೆ." ಎಂದನು.

"ಏನು ಕೊಡುವಿರಿ?"

"ಐವತ್ತು ರೂಪಾಯಿ."

"ಆಗದು. ಕಡಮೆ ಎಂದರೆ ನೂರು ರೂಪಾಯಿ ಬೇಕು. ನಾವು ಹತ್ತು ಜನರಿದ್ದೇವೆ."

"ಬಹಳವಾಗುವದು.

"ಅಷ್ಟು ಬೇಕು. ನೀವು ಕೊಡಲು ಸಮರ್ಥರಿದ್ದೀರಿ" ಎಂದು ನುಡಿದು ಮುಜುರೆಯನ್ನು ಮಾಡಿ ಹೊರಬಿದ್ದರು. ಕೊನೆಗೆ ಧೂಮನೊಬ್ಬನೇ ಉಳಿದನು.

"ಒಂದು ಮಾತು ಸಾವುಕಾರರೇ !"

"ಏನು ?"

"ಹೆಸರು ಹೊರಬಿದ್ದರೆ ನೀವೇ ಕಾರಣರೆಂದು ತಿಳಿಯುತ್ತೇವೆ."

"ಅದು ಹೇಗೆ ?"

"ಹತ್ತು ಒಂದು. ಹನ್ನೊಂದು ಜನಕ್ಕೆ ಇದು ಗೊತ್ತು. ಇನ್ನೊಬ್ಬರಿಗೆ ಎಂದೂ ಗೊತ್ತಾಗದು."

"ನೀವು ಯಾರಾದರೂ ?"

"ನಾವು ಜಾತಿಯಿಂದ ಜಟ್ಟರು."

"ಹತ್ತನ್ನು ಬಿಟ್ಟು ಒಬ್ಬನನ್ನೇ ಹಿಡಿಯಬೇಕೇ ?"

"ನಿಮ್ಮ ಅಜ್ಜನ ಮನೆಯನ್ನು ಒಡೆದವರ ಹೆಸರು ನನಗೆ ಗೊತ್ತು. ನಿಮಗೆ ಗೊತ್ತಿಲ್ಲ. ಈ ತಲೆಯೊಳಗಿನ ಅಂಥ ಯಾವ ಮಾತೂ ಹೊರಬರುವದಿಲ್ಲ. ಜಟ್ಟರ ತಲೆಯೆಂದರೆ ಕೊಡದಲ್ಲಿ ಬಿದ್ದ ನೀರ ಹನಿಯೆಂದು ತಿಳಿಯಿರಿ."

"ಆಗಲಿ. ಆದರೆ ಇನ್ನೊಂದು ಕೆಲಸ ಮಾಡಿದಿರೇನು ?"

"ಏನು ?"

"ಅಪ್ಪಾರಾಯರ ಸೊಸೆ...."

"ಹ ! ನಾವು ನಿಮಗೆ ಮೊದಲೇ ಹೇಳಿರಲಿಲ್ಲವೇ ! ನಾವು ಕಳವು ಮಾಡಲು ಹೋಗಿದ್ದೆವು. ಅವರ ಮನೆಯಲ್ಲಿ ದುಡ್ಡು-ದುಗ್ಗಾಣಿಯನ್ನು ತರುವದು ನಮ್ಮ ಕೆಲಸ. ನೆರೆಮನೆಯ ಹೆಣ್ಣು ಮಕ್ಕಳ ಮಾನಭಂಗ ಮಾಡುವದು ನಮ್ಮ ಕೆಲಸವಲ್ಲ. ನಮಗೆ ಅದು ಸೇರಿಕೆ ಇಲ್ಲ. ಅಂಥದು ನಮಗೆ ಸೇರುವ ಮಾತೂ ಅಲ್ಲ. ಅದೆಲ್ಲವನ್ನೂ ಮಾಡುತ್ತ ಹೋದರೆ ದೇವತೆಯು ನಮ್ಮನ್ನು ಮುರಿದು ತಿಂದಾಳು. ನಮ್ಮಲ್ಲಿಯ ಒಕ್ಕಟ್ಟೂ ಹಾಳಾದೀತು. ನಾವೂ ನಾಶವಾದೇವು.

ಆ ಗೌರಿಯಂತಹ ಬಾಲೆಯನ್ನು ಯಾವ ನೀಚನು ಕೆಡಿಸಬಹುದು! ಆ ದೇವಿಯ ಮುಖವನ್ನು ನೋಡಿದರೆ ತಲೆಯು ಮಣಿಯುವದು. ನಾವು ಆಕೆಯನ್ನು ಕಟ್ಟಿದೆವು. ಎಚ್ಚರಾದಳೆಂದು ಕಟ್ಟಿದೆವು. ಒದರ ಹಂತೆ ಬಾಯಲ್ಲಿ ಚೆಂಡುಹಾಕಿದೆವು. ಬೆರಳು ಹಚ್ಚಿ ಮುಟ್ಟಲಿಲ್ಲ. ಮೈ ಮೇಲಿನ ಆಭರಣಗಳನ್ನು ಕಿತ್ತುಕೊಂಡೆವು. ಇದನ್ನು ನಾವು ನಿಮಗೆ ಮೊದಲೇ ಹೇಳಿದಂತೆ ಮಾಡಿರುವೆವು."

"ಇದೊಂದು ಸಂತೋಷದ ಸಂಗತಿ." ಚಿನ್ನಯ್ಯ ನುಡಿದನು.

"ಒಳ್ಳೇದು ಹೋಗುವೆನು. ನಾಳೆ ಬರುವೆನು." ಎಂದು ನಮಸ್ಕರಿಸಿ ಹೋದನು.

ಚಿನ್ನಯ್ಯನಿಗೆ ಧೂಮನ ವಿವೇಕದ ಮಾತುಗಳಿಂದ ಸಂಕಟವಾಯಿತು. ಕಳುವಿನಿಂದ ಬದುಕುವ ಆ ಅಶಿಕ್ಷಿತನು ತನ್ನ ಮನದ ಬಯಕೆಯ ಮೇಲೆ ನೂರು ಪೆಟ್ಟುಗಳನ್ನು ಹಾಕಿದಂತೆ ಪೇಚಾಡಿದನು. ಗೌಡರ ಮನೆಯನ್ನು ಕಳವು ಮಾಡಲು ಒಪ್ಪಿದ ಹುಂಬರು ಈ ಮಾತನ್ನೂ ಒಪ್ಪಬಹುದೆಂದು ತಿಳಿದು ಹೇಳಿದ್ದನು. ಕಳ್ಳರು ಸಹ ನೈತಿಕ ವಿಷಯದಲ್ಲಿ ಇಷ್ಟು ಗಟ್ಟಿ ಮುಟ್ಟಾಗಿರುವದು ಸೋಜಿಗದ ಸಂಗತಿ ಎನಿಸಿತು. ಧೂಮನು ನೀಚನೂ ಸರಿ. ಸಜ್ಜನನೂ ಸರಿ ಎಂದುಕೊಂಡನು. ಆ ಮಾತು ಮಾತ್ರ ಹೊಲಸಿನ ಮೇಲೆ ಕಲ್ಲು ಚೆಲ್ಲಿ ಮುಖಕ್ಕೆ ಸಿಡಿಸಿಕೊಂಡಂತಾಗಿದ್ದಿತು.

## ೧೯

ಹಳ್ಳಿಯಲ್ಲಿ ಪ್ರತಿಷ್ಠಿತ ಮನೆತನದ ಬ್ರಾಹ್ಮಣನು ಸಾಯುವದು, ರಾಜಧಾನಿಯಲ್ಲಿ ಅರಸನು ಸಾಯುವದು ಅನೇಕ ವಿಷಯಗಳಲ್ಲಿ ಎರಡೂ ಒಂದೇ ಎಂದು ಹೇಳಬಹುದು. ರಾಜಣ್ಣನಿಗೆ ಈ ಜ್ಞಾನವಿರದಿದ್ದರೂ ಒಂದರ ಬಗ್ಗೆ ಮಾತ್ರ ಸಂಪೂರ್ಣ ತಿಳಿವಳಿಕೆ ಬಂದಿತು.

ಮನೆಯಲ್ಲಿ ಕಳುವು ಆಗಿ ಇದ್ದುದೆಲ್ಲ ತೊಳೆದು ಹೋಯಿತು. ಉತ್ತರ ಕ್ರಿಯಾದಿಗಳಿಗೆ ಕೈಯಲ್ಲಿ ಹಣವು ಉಳಿಯಲಿಲ್ಲ. ಕ್ರಿಯಾಕರ್ಮಗಳನ್ನು ನಿಲ್ಲಿಸಿಬಿಡುವಂತಿರಲಿಲ್ಲ. ಅಣ್ಣ ತಮ್ಮಂದಿರಿದ್ದ ಹಳ್ಳಿಯಲ್ಲಿ ಅಲ್ಪ ಸ್ವಲ್ಪವಾಗಿ ಮಾಡುವದು ಸಹ ಕಷ್ಟದ ಸಂಗತಿಯು. ಅಪ್ಪಾರಾಯರು ಜೀವದಿಂದಿರುವವರೆಗೆ ಹುಲಿಯಾಗಿದ್ದರು. ಅವರ ಗುಡುಗಿಗೆ ಊರೇ ನಡುಗುತ್ತಿದ್ದಿತು. ಅವರ ನಖ—ದಂತಗಳಿಗೆ ವೈರಿಗಳು ಎದೆಯನ್ನು ಕಳೆದುಕೊಂಡಿದ್ದರು. ಇಂಥವರ ಗೌರವಕ್ಕೆ ಸಮಾನವಾಗಿ, ಸನ್ಮಾನ್ಯವಾಗಿ ಶ್ರಾದ್ಧ ಪಿಂಡಾದಿಗಳು ಆಗಬೇಕಿದ್ದವು. ತರ್ಪಣಾದಿಗಳಿಂದ, ದಾನ-ಮಾನದಿಂದ, ಬ್ರಾಹ್ಮಣ ಭೋಜನದಿಂದ ಭೂರಿ ದಕ್ಷಿಣೆಗಳಿಂದ, ಬಳಗದವರ ನೇತ್ರಾಂಜಲಿ ಜಲದಿಂದ ಸ್ವರ್ಗಕ್ಕೆ ಹೋಗಬೇಬೇಕಾಗಿದ್ದಿತು. ಈ ಎಲ್ಲ ಕೆಲಸಗಳಿಗೆ ರಾಜಣ್ಣನು ಹಣವನ್ನು ಒದಗಿಸುವದು ಧರ್ಮವಾಗಿದ್ದಿತು. ಈ ಧರ್ಮದಿಂದ ಕರ್ಮದ ಕೈಯನ್ನು ತೊಳೆಯಬೇಕಿದ್ದಿತು. ಆದರೆ ಅವನಿಗೆ ಹಣವನ್ನು

ಸಂಗ್ರಹಿಸುವ ವಿದ್ಯೆ ಗೊತ್ತಿರಲಿಲ್ಲ. ಹೊಲದವರು ಕಾಳುಗಳನ್ನು ಕೊಟ್ಟದ್ದರು. ಕೆಲವರು ಹಣವನ್ನು ಕೊಟ್ಟದ್ದರು. ತೋಟದ ಮಾಮೂಲಿಯು ಬಂದಿದ್ದಿತು. ಅಲ್ಲದೆ ಇದ್ದ ಹಣವನ್ನು ವ್ಯವಸ್ಥಿತ ರೀತಿಯಿಂದ ಖರ್ಚು ಮಾಡುವ ಕಲೆಯೂ ಗೊತ್ತಿರಲಿಲ್ಲ. ಹೀಗಾಗಿ ಅವನಿಗೆ ಸಂಕಟವೆನಿಸಹತ್ತಿತು. ಏನು ಮಾಡಬೇಕೆಂದು ನಿತ್ಯ ವಿಚಾರಿಸುತ್ತಿದ್ದನು.

ಉತ್ತರಕ್ರಿಯೆಗೆ ತನ್ನ ಅತ್ತೆ, ಪುರೋಹಿತ ರಾಮಾಚಾರ್ಯರು, ಅವನ ಹೆಂಡತಿ, ಅರ್ಧ ಡಜನು ಮಕ್ಕಳು, ಅಲ್ಲದೆ ತನ್ನ ತಾಯಿಯ ಬಳಗದ ಒಬ್ಬಿಬ್ಬರು ಹೆಣ್ಣುಮಕ್ಕಳು, ಅವರ ಗಂಡಂದಿರು, ಒಂದೆರಡು ಮುಂಗುಡಿ ಕೂಸುಗಳು, ಅವುಗಳನ್ನು ಎತ್ತಿಕೊಂಡು ಆಡಿಸಲು, ಇಬ್ಬರು ಒಕ್ಕಲಿಗರು ಇತ್ಯಾದಿ ಜನರು ಬಂದಿದ್ದರು. ಬ್ರಾಹ್ಮಣರಲ್ಲಿ ಮದುವೆಗೂ ಇಷ್ಟು ಜನರು ಬೇಕು. ಸತ್ತರೂ ಇಷ್ಟು ಬೇಕು. ಸತ್ತು ಸ್ವರ್ಗದ ದಾರಿಯಲ್ಲಿದ್ದ ಅಪ್ಪಾರಾಯರ ಬರಿದಾದ ಸ್ಥಳವನ್ನು ತುಂಬಲು ಕಣ್ಣೀರಿನ ಕಾಲುವೆಯಿಂದ ಅವರ ಜೀವಾತ್ಮನನ್ನು ಸ್ವರ್ಗದ ವರೆಗೆ ತೇಲಿಸಿಕೊಂಡು ಹೋಗಲು ಅವರ ಆತ್ಮಾಂಶದ ನೂರಾರು ತುಂಡುಗಳಾದ ಈ ಬಳಗದ ಕುಡಿಗಳು ಭೂರಿಭೋಜನದಿಂದ ತಮ್ಮ ತೃಪ್ತಿಯನ್ನು ರಾಯರ ಆತ್ಮಕ್ಕೆ ನೀಡಲು ಆತುರರಾಗಿ ಸ್ವಯಂಪ್ರೇರಣೆಯಿಂದ ಬಂದಿದ್ದರು. ಇಷ್ಟೊಂದು ಜನರ ಹೊಟ್ಟೆ ನೆತ್ತಿಯನ್ನು ನೋಡುವದು ರಾಜಣ್ಣನಿಗೆ ತಿಳಿಯಲಾರದ ಒಗಟಾಯಿತು. ಪರಶುರಾಮ ಸರ್ಕಸಿನಂತೆ ಮನೆ ತುಂಬಿದ ಈ ಜನರಿಗೆ ಮುಂಜಾನೆ ಒಂದು ಹಂಡೆಯಷ್ಟು ಚಹ, ಮಕ್ಕಳು ಕೈಬಿಟ್ಟು ಆಡುತ್ತ ಕೆಲಸಗಳಿಗೆ ಅನುಕೂಲ ಮಾಡಿಕೊಡಲು ನೂರಾರು ಉಂಡಿ, ೪-೬ ಸೇರಿನಷ್ಟು ಅವಲಕ್ಕಿ, ಅದರ ಇಮ್ಮಡಿಯಷ್ಟು ಚುರಮರಿ - ಫುಠಾಣಿ ಬೇಕಾಗುತ್ತಿದ್ದವು. ಮಕ್ಕಳ ನೆವದಿಂದ ಹಿರಿಯರಿಗೂ ಈ ಅಲ್ಪೋಪಹಾರದ ಸೇವನೆಯಾಗುತ್ತಿದ್ದಿತು, ಇದರಿಂದ ಕೈಗೆ ಕೆಲಸವಾಗಿ, ನಾಲಿಗೆಗೆ ಮಾತಾಗಿ, ದೇಹದಲ್ಲಿ ಉತ್ಸಾಹ ತುಂಬು

ತ್ತಿದ್ದಿತು. ಮಧ್ಯಾಹ್ನ ಯಥಾಸ್ಥಿತಿ ಅಡಿಗೆ. ಈ ವ್ಯವಸ್ಥೆಯ ಅವ್ಯವಸ್ಥತೆಗೆ ವೇ. ಮೂ. ರಾಮಾಚಾರ್ಯರು ನೆರವಾದರು. ಎಂಟನೆಯ ದಿನ ರಾಜಣ್ಣನನ್ನು ಕರೆದು – "ಯಜಮಾನರ ದಿನಕರ್ಮವನ್ನು ದುರಂಧರವಾಗಿ ಮಾಡಬೇಕು ರಾಜಣ್ಣ ! ಅವರ ಯೋಗ್ಯತೆ ದೊಡ್ಡದು. ಸಾವಿರ ಜನರಿಗೆ ಬೇಕಾದವರು. ಅವರಿಗೆ ನೀನೊಬ್ಬನೇ ಮಗ. ಅವರನ್ನು ನರಕದಿಂದ ಉಳಿಸುವದು ನಿನ್ನ ಧರ್ಮ ಎಂದು ಮಹಾದೇವನ ಪೂಜೆಯ ಮಂಗಳಾಷ್ಟಕ ಶ್ಲೋಕಗಳ ಮೊದಲನೆಯ ಶಂಖವನ್ನು ಊದಿದರು.

"ನೀವು ಹೇಳಿಸಿ ಮಾಡಿಸಿರಿ" ಈ ವ್ಯವಹಾರವನ್ನೇ ಅರಿಯದ ರಾಜಣ್ಣನು ನುಡಿದನು.

"ಒಂದಿಷ್ಟು ಕೈ ನಡಿಯಲು ಬಿಡಬೇಕು."

"ನೀವು ಬಿಡಿಸಿರಿ."

"ಮನೆಯಲ್ಲಿ ಹಣವೆಷ್ಟಿದೆ ?"

"ಏನೂ ಇಲ್ಲ."

"ಹಾಗಾದರೆ ಹೇಗೆ ?"

"ಕಳವು ಆಗಿ ಎಲ್ಲಾ ಹೋಗಿದೆ."

"ಅದರ ಸುಳಿವು ಹತ್ತಿತೇ ?"

"ಈವರೆಗೂ ಇಲ್ಲ. ಪೋಲೀಸರಿಂದ ಚವಕಸಿ ನಡೆದಿದೆ."

"ಹೋದದ್ದು ಮರಳಿ ಹೇಗೆ ಸಿಗುವದೋ ?"

"ನನಗೂ ಸಂಶಯು."

"ಮುಂದೆ ?"

"ಮುಂದೆ ನೀವೇ ಇರುವಿರಿ."

"ಮನೆಯಲ್ಲಿ ಮತ್ತೇನಾದರು ?"

"ಮತ್ತೇನಿರಬೇಕು. ನಾವಷ್ಟು ಜನ ಇರುವೆವು."

"ಅದಲ್ಲ."

"ಮತ್ತೆ ?"

"ಬಂಗಾರ."

"ಅದೂ ಇಲ್ಲ. ಬಂಗಾರದಲ್ಲಿ ಮಾಡಿಸಿದ ಆಕೆಯ ಮಂಗಳ ಸೂತ್ರವನ್ನು ಸಹ ಹರಿದುಕೊಂಡು ಹೋಗಿರುವರು."

"ಇಂಥ ದಿನ ಬರಬಾರದು ರಾಜಣ್ಣ! ನಿಮ್ಮ ತಂದೆಯವರು ದೇವರಂತಹವರು. ಗ್ರಾಮದೇವತೆಗೆ ಮೊದಲನೆಯ ನಮಸ್ಕಾರ, ಎರಡನೆಯ ನಮಸ್ಕಾರ ನಿಮ್ಮ ತಂದೆಗೆ ಮೀಸಲು. ಇಂಥ ಘನ ವಂತರು."

ರಾಜಣ್ಣನು ಉತ್ತರಿಸಲಿಲ್ಲ.

"ಕಾರ್ಯ ಮಾಡಲೇಬೇಕು. ಬಿಡುವಂತಿಲ್ಲ. ಬ್ರಾಹ್ಮಣಿಕೆ ಕರ್ಮ ರಾಜಣ್ಣ."

"ಹ."

"ಕಾಳು ಕಡಿಗಳನ್ನು ಮಾರಿಯಾದರೂ ಮಾಡಬೇಕು."

"ಕಾಳು ಕಡಿ ಕಳುವಾಗಿಲ್ಲ. ಇವೆ."

"ವರುಷಕ್ಕೆ ಸಾಲುವಷ್ಟು ಇಟ್ಟುಕೊಂಡು ಉಳಿದವುಗಳನ್ನು ಮಾರು."

"ಆಗಲಿ."

ಅಂದೇ ಕೈಗೆ ಬಂದಂತೆ ಮಾರಲಾಯಿತು. ಹಿಟಲನು ಹಿರಿಮಣಿಯಾಗಿ ಮಾರಿಸಿದನು.

ಆದರೆ ಆ ಹಣ ಎಷ್ಟು ದಿನ ಸಾಲಬೇಕು? ಎರಡು ದಿನಗಳಲ್ಲಿ ತೀರಿದವು.

ರಾಮಾಚಾರ್ಯರು ರಾಜಣ್ಣನಿಗೆ—ಇದನ್ನು ಇಂದು ದಾನ ಮಾಡು, ಅದನ್ನು ನಾಳೆ ಕೊಡು, ಮತ್ತೊಂದನ್ನು ಆಮೇಲೆ ಕೊಡು, ಉಳಿದವುಗಳನ್ನು ವರ್ಷಶ್ರಾದ್ಧಕ್ಕೆ ಕೊಟ್ಟರೆ ಸರಿ. ಇನ್ನುಳಿದವು ಗಳನ್ನು ನಿನ್ನ ಮನಸಿಗೆ ಬಂದಂತೆ ಯಥಾ ಶಕ್ತಿಯಿಂದ ಮಾಡು. ಆಗ ರಾಯರ ಆತ್ಮಕ್ಕೆ ಶಾಂತಿ, ಸಮಾಧಾನ, ಹಿತ, ಎಂದು ಹೇಳುತ್ತ ಹಣವನ್ನು ಸೆಳೆದೇ ಸೆಳೆದರು. ಎಳೆದೇ ಎಳೆದರು. ಜಿಗಣಿಯಂತಹ

ಆ ಧರ್ಮದ ಕೀಟಕ್ಕೆ ಎಷ್ಟು ಪಡೆದರೂ ತೃಪ್ತಿಯಿಲ್ಲ. ಎಷ್ಟು ಸಂಪಾದಿಸಿದರೂ ಸಮಾಧಾನವಿಲ್ಲ. ಅಪ್ಪಾರಾಯರಂತಹ ಯಜಮಾನರು ಸಾಯುವದು ವಿರಳ. ಹತ್ತು ವರುಷಕ್ಕೋ, ಇಪ್ಪತ್ತು ವರುಷಕ್ಕೋ ಒಬ್ಬರು. ಕನ್ಯಾಗತದಂತಹ ಯೋಗಾಯೋಗ. ಇಂಥ ಸುಪ್ರಸಂಗವನ್ನು ವ್ಯರ್ಥವಾಗಿ ಕಳೆದುಕೊಳ್ಳಬಾರದು ಎಂದು ಮನದಲ್ಲಿ ಗುಣಿಸುತ್ತ ಗರುಡಪುರಾಣವನ್ನು ಕೈಯಲ್ಲಿ ಹಿಡಿದುಕೊಂಡು ಹಾಳೆಹಾಳೆಯಂತೆ ಮುಗುಚಿ ರಾಜಣ್ಣನಿಂದ ಸಾಧ್ಯವಾದಷ್ಟು, ಅವನು ಕೈಯೂರಿ ಕೂಡುವವರೆಗೆ ಮಾಡಿಸಿದನು. ಗೃಹಸಂಸ್ಕಾರದ ಕಾರ್ಯಗಳನ್ನು ಮುಗಿಸಿ ಕೊನೆಯ ದಿನ ಖೀರು ಕುಡಿದು, ಸಂಭಾವನೆಯನ್ನು ಪಡೆದು, ವಸ್ತ್ರದಾನವೆಂದು ರಾಯರ ಜರದ ರೇಸಿಮೆಯ ಗಂಟಿನೊಳಗಿನ ಮಡಿಯನ್ನು ಗಿಟ್ಟಿಸಿ, ಷೋಡಸ ತಾಂಬೂಲ ರಸವನ್ನು ಸವಿಯುತ್ತ ರಾಜಣ್ಣನ ಉದಾರ ಹಸ್ತಕ್ಕೆ ಹೊಗಳುತ್ತ ರೈತನ ಚಕ್ಕಡಿಯನ್ನು ಹತ್ತಿ ಊರ ಹಾದಿಯನ್ನು ಹಿಡಿದನು. ಆಚಾರ್ಯರಿಗೆ ಇದೆಲ್ಲ ಸೀಬಾಯಿ ಆಯಿತು. ಆದರೆ ರಾಜಣ್ಣನ ಬಾಯಿಯ ರುಚಿಯನ್ನು ಯಾರಿಗೂ ನಿರ್ಣಯಿಸಲು ಬರಲಿಲ್ಲ.

ಎಲೆಯಲ್ಲಿ ಚೆಲ್ಲಿದ ಕೆನೆಮೊಸರಿನ ಅನ್ನಕ್ಕಾಗಿ ಬಡಿದಾಡುವ ಬೆಕ್ಕುಗಳಿಗೆ ಇಂದು ಒಂದು ಇಲಿಯ ಬುಡ್ತಕಿಗೂ ಗತಿಯಿಲ್ಲದಾಯಿತು! ರಾಜಣ್ಣನು ಹೌಹಾರಿ ಕುಳಿತನು. ಮನೆಯನ್ನು ಹೇಗೆ ನಡಿಸಬೇಕು? ಇವರೆಲ್ಲರಿಗೆ ಅನ್ನ-ಬಟ್ಟೆಯನ್ನು ಹೇಗೆ ಒದಗಿಸಬೇಕು ? ಅದರಲ್ಲಿ ಸ್ವಲ್ಪ ಸಾಲವನ್ನು ಹೇಗೆ ಮುಚ್ಚಿಸಬೇಕು ? ಎಂಬ ಚಿಂತೆ ಬಲವತ್ತರವಾಯಿತು.

ಈ ಎರಡೇ ಪ್ರಶ್ನೆಗಳು ತೀರ ಜಟಿಲವಾದವು. ಜೀವನ ಕಲಹದ ಪರೀಕ್ಷೆಗೆ ಎಂದೂ ಕುಳಿತವನಲ್ಲ. ಉತ್ತರಿಸಿದವನಲ್ಲ. ಇಂದು ಒಮ್ಮೆಲೇ ಕುಳಿತುಕೊಳ್ಳಬೇಕಾಯಿತು. ಉತ್ತರಿಸಬೇಕಾಯಿತು. ಗೊತ್ತಿಲ್ಲದ ವಿಷಯದ ಪರೀಕ್ಷೆಗೆ ಕುಳಿತು ಬಿಳಿಯ ಕಾಗದವನ್ನು ಕೊಟ್ಟು

ಪರೀಕ್ಷಾ ಕೇಂದ್ರದಿಂದ ಹೊರಬೀಳುವ ವಿದ್ಯಾರ್ಥಿಯಂತೆ ರಾಜಣ್ಣನು ಪಡಸಾಲೆಯಿಂದ ಹೊರಬಂದು ಪಟಾಂಗಣದ ಮೂಲೆಯಲ್ಲಿರುವ ತುಳಸಿಯ ಕಟ್ಟೆಯಮೇಲೆ ಕುಳಿತನು. ಕಿಸೆಯಲ್ಲಿ ಕೈಹಾಕಿ ಬೀಡಿಯನ್ನು ತೆಗೆದು ಹೊತ್ತಿಸಿದನು. ಹೊಗೆಯ ಮೋಡವನ್ನು ತಲೆಯ ಮೇಲೆ ಊದಿಕೊಂಡು ಬೋಳಿಸಿ ತೆಗೆದ ತಾಮ್ರದ ತಂಬಿಗೆಯಂತಹ ತಲೆಯಮೇಲೆ ಕೈಯಾಡಿಸಿದನು. ಚಿಗುರಿ ಮೊಂಡ ಮೀಸೆಯೊಡೆದ ಮೇಲ್ ತುಟಿಯಮೇಲೆ ಬೆರಳು ಆಡಿಸಿದನು. ಮತ್ತೆ ಬೀಡಿಯನ್ನು ಬಾಯಲ್ಲಿ ಇಟ್ಟುಕೊಂಡನು. ಸೇದಿದನು. ಅದು ಆರಿದ್ದಿತು. ಕಡ್ಡಿಯನ್ನು ಕೊರೆದು ಆರಿದ ಬೀಡಿಯ ಕರಿಯ ಮುಖಕ್ಕೆ ಹಿಡಿದನು.

ಅಂದು ನೀರ ಒಲೆಯಲ್ಲಿ ಮಲಗಿದ ಚಿಕ್ಕ ಹೊತ್ತೇರಿದ್ದರೂ ಎದ್ದಿರಲಿಲ್ಲ.

## ೨೦

ಅಪ್ಪಾರಾಯರ ಸೀಬಾಯಿ ಆದಮೇಲೆ ಬಹುಶಃ ಎಲ್ಲರೂ ಹೋದರು. ಆದರೆ ಪುಟ್ಟವ್ವನು ಉಳಿದಳು. ಅದಕ್ಕೆ ಎರಡು ಕಾರಣ ಗಳಿದ್ದವು. ಅವ್ವಕ್ಕನು ನೆಲಹಿಡಿದು ಬಿದ್ದಿದ್ದಳು. ಮನೆಯಲ್ಲಿ ಅಡಿಗೆ ಯನ್ನು ಮಾಡುವವರು ಇರಲಿಲ್ಲ. ತಾನು ಹೊರಟುಹೋದರೆ ಆ ಸಾಯಲಿರುವ ಮುದುಕಿಯ ಸೇವೆಯ ಜತೆಗೆ ಮನೆಯ ಭಾರವು ಸಹ ಮಗಳ ಮೇಲೆ ಬೀಳುವದು. ಮತ್ತು ಅವಿಚಾರಿಯಾದ ರಾಜಣ್ಣನನ್ನು ಅಕ್ಕಾಮರಿಯ ಬುದ್ಧಿವಾದದಿಂದ ದಾರಿಗೆ ತರಹಚ್ಚು ವದು! ಆ ಮುಂದೆ ಅವರ ವ್ಯವಸ್ಥಿತ ಸಂಸಾರವನ್ನು ನೋಡುವದು! ಈ ಆಲೋಚನೆಯಿಂದ ನಿಂತಳು. ಅಡಿಗೆಯ ಹೊಣೆಯನ್ನು ತನ್ನ ಪಾಲಿಗೆ ಇಟ್ಟುಕೊಂಡಳು. ಆದರೆ ನೀರಿನ ಭಾರವು ಅಕ್ಕಾಮರಿಯ ಪಾಲಿಗೆ ಬಿದ್ದಿತು. ತನ್ನ ಚೌಕಟ್ಟಿನ ಗೆಳೆಯರ ನಡುವೆ ಕುಳಿತು ಹರಟೆ ಹೊಡೆಯುವುದನ್ನು ರಾಜಣ್ಣನು ಇಟ್ಟುಕೊಂಡನು.

ರಾಜಣ್ಣನ ಮನೆಗೂ ಹಳ್ಳಕ್ಕೂ ಅಂತರವಿದ್ದಿತು. ಬೇಸಗೆ ಯಲ್ಲಿ ಲೋ. ಬೋ. ಬಾವಿಯಿಂದ ಜನರು ನೀರು ಸೇದಿ ತರು ತ್ತಿದ್ದರು. ಹಳ್ಳದಲ್ಲಿ ಮಳೆಗಾಲದ ಮತ್ತು ಚಳಿಗಾಲದ ಅರ್ಧಭಾಗ ದಲ್ಲಿ ನೀರು ಹರಿಯುತ್ತಿದ್ದಿತು. ಆಗ ಊರ ಜನರೆಲ್ಲ ಹಳ್ಳದ ನೀರನ್ನೇ ತೆಗೆದುಕೊಂಡು ಹೋಗುತ್ತಿದ್ದರು. ಬಾವಿಯ ನೀರಿಗಿಂತ

ಹಳ್ಳದ ನೀರೇ ಅವರಿಗೆ ರುಚಿಯೆನಿಸುತ್ತಿದ್ದಿತು. ಬೇಸಗೆಯಲ್ಲಿ ಸಹ ಕೆಲ ಊರ ಹಿರಿಯರು ಹಳ್ಳದಲ್ಲಿ ಗುಂಡು ಕಡಿದು ಅದರ ನೀರನ್ನೇ ಕುಡಿಯುವ ರೂಢಿಯನ್ನಿಟ್ಟುಕೊಂಡಿದ್ದರು. ಹಳ್ಳದ ನೀರನ್ನೇ ಕುಡಿದೇ ವೆಂದು ಅವರ ಪ್ರತಿಜ್ಞೆಯೇನೋ? ಅಲ್ಲದೆ ಹಳ್ಳದ ನೀರನ್ನು ತೆಗೆದು ಕೊಂಡು ಹೋಗುವಲ್ಲಿ ಒಂದು ಸೌಲಭ್ಯವಿದ್ದಿತೇನೋ? ಬಾವಿಯ ನೀರನ್ನು ತರುವದಾದರೆ ಹಗ್ಗವನ್ನು ಒಯ್ದು, ಬಾವಿಯಲ್ಲಿ ಬಿಟ್ಟು, ಕೊಡದ ಕುತ್ತಿಗೆಗೆ ಉರುಲುಹಾಕಿ, ಮುಳುಗಿಸಿ, ಮೇಲೆ ಸೇದಿ, ಹಗ್ಗವನ್ನು ಸುತ್ತಿ, ಎರಡನ್ನೂ ಹೊತ್ತು ತರುವ ಉಭಯ ಕಷ್ಟವಿದ್ದಿತು. ಈ ಕಷ್ಟದಿಂದ ಪಾರಾಗಲು ಹಳ್ಳದ ನೀರನ್ನು ತೆಗೆದುಕೊಂಡು ಹೋಗುತ್ತಿದ್ದರು.

ಒಕ್ಕಲ ಮಕ್ಕಳಲ್ಲಿ ಮನೆಯ ಹಿರಿಯನು ಬೇಗನೆದ್ದು, ಹೆಂಡತಿಯು ರೊಟ್ಟಿಗಳನ್ನು ಬಡಿದು, ಸುಟ್ಟು, ಗಂಟು ಕಟ್ಟುವವರೆಗೆ ೪-೫ ಕೊಡ ನೀರನ್ನು ತಂದುಬಿಡುತ್ತಿದ್ದನು. "ಹ!. ಗಂಟು ಕಟ್ಟಿದೆ!" ಎಂದು ಹೆಂಡತಿಯು ಎಚ್ಚರಿಸಲು ಹಸಿದ ತಂಗುಳ ಹೊಟ್ಟೆಗೆ ಒಂದೆರಡು ರೊಟ್ಟಿಗಳನ್ನು ನುಂಗಿ, ಎತ್ತುಗಳನ್ನು ಬಿಚ್ಚಿಕೊಂಡು ಹೊಲಕ್ಕೆ ಹೋಗುವದು ಒಂದು ಸಾಮಾನ್ಯ ಸಂಪ್ರದಾಯವಾಗಿದ್ದಿತು. ಮುಂದೆ ಹೆಂಡತಿಯು ಉಳಿದ ರೊಟ್ಟಿಗಳನ್ನು ಬಡಿದು, ಮುಗಿಸಿ ತಾನು ೫-೬ ಕೊಡ ನೀರು ತಂದುಬಿಟ್ಟರೆ ಅಂದಿನ ನೀರಿನ ಸರದಿ ಮುಗಿಯು ತ್ತಿದ್ದಿತು. ಆದರೆ ಬ್ರಾಹ್ಮಣರಲ್ಲಿ ಇದಕ್ಕೆ ವಿಪರೀತ ಪದ್ಧತಿಯಿದ್ದಿತು.

ಅಕ್ಕಾಮರಿಯು ಕುದುರೆಯನ್ನು ಬಿಚ್ಚಿ, ಲಗಳಿಯನ್ನು ಕಟ್ಟಿ, ಕೊಡಗಳನ್ನು ಹೇರಿ, ತಾನೊಂದು ಸಣ್ಣ ಕೊಡವನ್ನು ಟೊಂಕದ ಮೇಲಿಟ್ಟುಕೊಂಡು ಹಳ್ಳದ ಹಾದಿಯನ್ನು ಹಿಡಿದಳು. ಮೊದಲಿನ ಎರಡು ಸರದಿಗಳು ಸರಿಯಾಗಿ ಬಂದವು. ಮಡಿಸೀರೆಗೆಂದು ಕೊನೆಯ ಸಾರೆ ಧಾವಳಿಯನ್ನು ಹೆಚ್ಚಿಕೊಂಡು ಕುದುರೆಯನ್ನು ಹೊಡೆದು ಕೊಂಡು ನಡೆದಳು. ಹಳ್ಳಕ್ಕೆ ಬಂದು ಕೊಡಗಳನ್ನು ತುಂಬಿದಳು. ಕರೆಯುದುಮೇಲೆ ಅವುಗಳನ್ನು ಹೇರಿದಳು. ತನ್ನ ಕೊಡವನ್ನು ಎತ್ತಿ

ಟೊಂಕದಮೇಲೆ ಇಟ್ಟುಕೊಳ್ಳಬೇಕೆಂದು ಬಗ್ಗಿದಳು. ತನ್ನ ಕುದುರೆಯು ಒಂದಿಷ್ಟು ದೂರದಲ್ಲಿ ಎದುರು ನಿಂತ, ಲಗಳಿಯನ್ನು ಬಿಗಿಸಿಕೊಂಡ ಚಿನ್ನಯ್ಯನ ಹೆಣ್ಣು ಕುದುರೆಯನ್ನು ನೋಡಿತು. ರಾಜಣ್ಣನ ಕುದುರೆಯು ನೆಲವನ್ನು ಕೆದರಿ 'ಹೆಹೆ' ಎಂದು ಕೆನೆಯಿತು. ಚಿನ್ನಯ್ಯನ ಕುದುರೆ 'ಹೂಹೂ' ಎಂದು ಸ್ವಾಗತಿಸಿತು. ಗೌಡರ ಕುದುರೆ ಜಿಗಿದು ಚಿನ್ನಯ್ಯನ ಕುದುರೆಯ ಬಳಿಗೆ ಹೋಯಿತು. 'ಹೆಹೆಹೇ ಹುಹುಹೂ' ಎಂದು ಎರಡೂ ಕುದುರೆಗಳ ಕೆನೆದಾಟ, ಕುಣಿದಾಟ ಆರಂಭವಾಯಿತು. ನಿಮಿಷ ನಿಮಿಷಕ್ಕೆ ಅಧಿಕವಾಗಹತ್ತಿತು. ಅಕ್ಕಾಮರಿಯು ಗಾಬರಿಯಾಗಿ ಟೊಂಕದ ಮೇಲಿನ ಕೊಡವನ್ನು ಕೆಳಗಿಳಿಸಿ ತನ್ನ ಕುದುರೆಯನ್ನು ಹಿಡಿಯಹೋದಳು. ನೋಡಿದವರು ಸಹಾಯಕ್ಕೆ ಬಂದರು. ಆದರೆ ಅಕ್ಕಾಮರಿಯು--ನಿಲ್ಲಿರಿ. ನಾನೇ ಹಿಡಿಯುವೆ. ಅದರ ಮೇಲೆ ಮಡಿನೀರಿನ ಕೊಡಗಳಿವೆ! ಎಂದು ಓಡಹತ್ತಿದಳು. ಚಿನ್ನಯ್ಯನ ಆಳು ಸಹ ತನ್ನ ಕುದುರೆಯನ್ನು ಸಾವರಿಸಿ ಹಿಡಿಯ ಹೋದನು. ಆದರೆ ಆ ಉನ್ಮತ್ತ ಪಶುಗಳು ಯಾರ ಕೈಗೂ ಸಿಗದೆ, ತಮ್ಮ ಕೆನೆದಾಟಕ್ಕೆ ಕೆನೆಗಟ್ಟುವಂತೆ ಹೇಕರಿಸುತ್ತ ಕುಣಿದಾಡ ಹತ್ತಿದವು. ಕೊಡಗಳು ಪುಟಚೆಂಡಿನಂತೆ ಹಾರಹತ್ತಿದವು. ಹಾರಿ ಬಿದ್ದವುಗಳು ಉರುಳಹತ್ತಿದವು. ಉಳಿದವುಗಳು ಬಾಯಿಂದ ನೀರನ್ನು ಕಕ್ಕಹತ್ತಿದವು. ಬರಿದಾದ ಲಗಳಿಯು ಇನ್ನೂ ಬೆನ್ನಿಗೆ ಅಂಟಿಕೊಂಡಿದ್ದಿತು. ಅವುಗಳು ಮುಖ ಮುಖವನ್ನು ಮೂಸಿನೋಡಿದವು. ಬೆನ್ನು ಬೆನ್ನು ಹಾಯಿದವು. ತಲೆ ತಲೆ ತಿಕ್ಕಿಕೊಂಡವು. ಹಿಂಗಾಲು ಹಿಂಗಾಲುಗಳು ಜಿಗಿದು ಮುದ್ದಿಟ್ಟವು. ಮುಂಗಾಲು ಮುಂಗಾಲುಗಳನ್ನು ಮೇಲೆ ನೆಗೆದು ಅಪ್ಪಿಕೊಂಡವು. ಲೀಲಾವಿನೋದಗಳಲ್ಲಿ ತದೇಕಧ್ಯಾನಿಗಳಾಗಿ ಕೊನೆಗೆ ಒಂದು ದಿಕ್ಕನ್ನು ಹಿಡಿದು ಓಡಹತ್ತಿದವು. ಗೌಡರ ಲಗಳಿಯ ಹಗ್ಗ ಹರಿದು, ಮೈಯಿಂದ ಪುಟಿದು ದೂರದ ಹೊಲದಲ್ಲಿ ಬಿದ್ದಿತು. ಕಟ್ಟಿದ ಥಡಿ ಮುದ್ದೆಯಾಗಿ ಇನ್ನೂ ದೂರ ಬಿದ್ದಿತು. ಕುದುರೆಗಳು ತಮ್ಮ ಕ್ರೀಡೆಗಾಗಿ ಮಾವಿನ ವನವನ್ನು

ಸೇರಿ ಅದೃಶ್ಯವಾದವು.

ಅಕ್ಕಾಮರಿಯು ಅಳುತ್ತ ಹಳ್ಳದಲ್ಲಿ ನಿಂತಳು. ನೀರು ತುಂಬ ಬಂದ ಹೆಂಗಸರು ಅವಳ ಸ್ಥಿತಿಯನ್ನು ನೋಡಿ ಮರುಗಿದರು. “ರಾಜಣ್ಣನು ಮನೆಯಲ್ಲಿ ಉಡಾಳರನ್ನು ಕಟ್ಟಿಕೊಂಡು ಹರಟೆಯನ್ನು ಹೊಡೆಯುವದು, ಪಾಪ ಈ ಬಾಲೆಯನ್ನು ನೀರು ತರಲು ಕಳಿಸುವದು, ಎಲ್ಲಿಯ ನ್ಯಾಯ !” ಎಂದು ನಿಂದೆಯಾಡಿದರು. ಇನ್ನು ಕೆಲವರು ಬಾಯಮೇಲೆ ಸರಗುಹಾಕಿ ಕಿಸಕಿಸನೆ ನಗಹತ್ತಿದರು.

ಚಿನ್ನಯ್ಯನ ಆಳು—“ನೀವು ಮನೆಗೆ ಹೋಗಿರಿ. ನಾನು ಕೊಡಗಳನ್ನು ಹುಡುಕಿ ತರುವೆ. ಲಗಳಿ, ಥಡಿಗಳು ಇಲ್ಲಿಯೇ ಬಿದ್ದಿವೆ. ತಂದಿಡುವೆ. ನೀವು ತೆಗೆದುಕೊಂಡು ಹೋಗಬಹುದು” ಎಂದು ಸಮಾಧಾನದ ಮಾತುಗಳನ್ನು ಹೇಳಿದನು.

ಅಕ್ಕಾಮರಿಯು ಕೆಂಪುಕಣ್ಣು ಮಾಡಿಕೊಂಡು, ಕೆಂಪು ಮೂಗಿನಿಂದ, ಕೆಂಜಗದ ಮುಖದಿಂದ ಮನೆಗೆ ಬಂದು ಅಡಿಗೆಯ ಮನೆಯಲ್ಲಿ ಗೋಡೆಯನ್ನು ನಂಬಿ ಕುಳಿತಳು.

ಮನೆಯಲ್ಲಿ ಒಂದು ಸಾಮಾನ್ಯ ಪ್ರಕರಣವು ಉಪಸ್ಥಿತವಾಗಿ ಮಾತುಮಾತುಗಳ ಗೊಬ್ಬರ-ನೀರಿನಿಂದ ಬೆಳೆದು ಉಲ್ಬಣಾವಸ್ಥಿತಿಗೆ ಬಂದು ನಿಂತಿದ್ದಿತು.

“ರಾಜಣ್ಣ, ಅವ್ವಕ್ಕ ಈಗ ಬದುಕಿದಷ್ಟು ದಿನ ಮುಂದೆ ಬದುಕಲಾರಳು.” ಎಂಬ ತಾಯಿಯ ಮೊದಲನೆಯ ಮಾತು ಅಕ್ಕಾಮರಿಯ ಕಿವಿಗೆ ಬಿದ್ದವು.

“ಈವರೆಗೆ ಬದುಕಲೂ ನಾನು ಹೇಳಿಲ್ಲ. ಮುಂದೆ ಇಂತಿಷ್ಟು ದಿನ ಬದುಕಲಿ ಎಂದೂ ಆಶಿಸುವದಿಲ್ಲ. ಆದರೆ ಅದು ನನ್ನಿಂದಾಗದು.” ಎಂದು ಗಂಡನ ಉತ್ತರವು ಕೇಳಬಂದಿತು.

“ಹಾಗಲ್ಲ. ಬ್ರಾಹ್ಮಣರಿಂದ ಪ್ರಾಯಶ್ಚಿತ್ತವು ಇಲ್ಲದೆ, ಸಾಯುವದುಂಟೇ ! ಏನೋ ಮುದಿಕೆಯ ಆಶೆ. ನಿನ್ನ ಮನೆತನವನ್ನಾದರೂ ನೋಡಿ ಮಾಡು. ಇದು ಮಗನ ಕರ್ತವ್ಯ” ಎಂದು

ಪುಟ್ಟವ್ವ ನುಡಿದಳು.

"ಇದೆಲ್ಲ ಸರಿ. ಆದರೆ ಈಗ ನಾಲ್ಕು ದಿನಗಳಿಂದ ಕೇಳುತ್ತಿರುವೆ ಈ ಮುದುಕಿಯ ವಟವಟ. ಹುಚ್ಚು ಹಿಡಿಯಬೇಕು! ಅಂಥ ಮಾತುಗಳು."

"ತಾಯಿಯು ಒಂದೆರಡು ಮಾತುಗಳನ್ನು ಆಡಿರಬೇಕು ತಾಳು ರಾಜಣ್ಣ!"

"ಹೇಗೆ ತಾಳುವದು ನೀವೇ ಹೇಳಿರಿ? 'ಅವರ (ಅಪ್ಪನ) ಧನವೆಷ್ಟು? ದೌಲತ್ತೇನು! ನಂದನವನದಂತೆ ಇದ್ದ ಮನೆಯನ್ನು ಈ ಹಾಳು ಮಗನು ಹಟ್ಟಿ ಧ್ವಂಸಮಾಡಿದನು. ಮನೆಯಲ್ಲಿ ಇವನೊಬ್ಬ ಶನಿ? ಈ ಶನಿಯಿಂದಲೇ ನನ್ನದೆಲ್ಲವೂ ಹಾಳಾಗುವ ಹೊತ್ತು ಬಂದಿತು. ಮನೆಯಲ್ಲಿಯದನ್ನು ತಾನೂ ತಿನ್ನಲಾರ. ಇನ್ನೊಬ್ಬರಿಗೂ ಹಾಕಲಾರ! ಆ ಪುಣ್ಯಾತ್ಮರು ಸತ್ತ ಮೇಲೆ ಮಾಡಿದುದೇನು? ಹಾಸಿಗೆಯನ್ನು ದಾನಮಾಡಿದನೇ? ಕೊಡೆಯನ್ನು ದಾನ ಮಾಡಿದನೇ? ಚಪ್ಪಲಿಯನ್ನು ದಾನಮಾಡಿದನೇ? ಗೋದಾನ ಮಾಡಿದನೇ? ಏನಿಲ್ಲ. ಏನೂ ಮಾಡಲಿಲ್ಲ. ಬಂದವರಿಗೆ ಹೊಟ್ಟೆ ತುಂಬ ಅನ್ನ ಹಾಕಲು ಹೆದರಿತು. ಸ್ವರ್ಗದಲ್ಲಿ ಅವರು ನಡೆಯುವ ಮುಂದೆ ಕಾಲಿಗೆ ಚಪ್ಪಲಿಗಳು ಬೇಡವೇ? ಮನೆಗೆ ಬಂದಂದಿನಿಂದ ಅವರು ಬರಿಗಾಲಿನಿಂದ ನಡೆದುದನ್ನು ಒಂದು ದಿನ ನೋಡಿಲ್ಲ. ಬಿಸಲಿಗೆ ಹಿಡಿಯಲು ಕೊಡೆ ಬೇಡವೇ? ಕುಡಿಯಲು ನೀರು ಬೇಡವೇ? ಇಂಥ ದರಿದ್ರ ಮಗನು ಏನು ಮಾಡೀತು? ಮಕ್ಕಳು ತಂದೆಯನ್ನು ನರಕದಿಂದ ತಪ್ಪಿಸಲು ಹುಟ್ಟುವರಂತೆ! ಇವನು ಹುಟ್ಟಿ ಅವರನ್ನು ನರಕದಲ್ಲಿ ಕೆಡವಿದನು.' ಈ ಮಾತುಗಳನ್ನು ಆ ಮುದುಕಿಯ ಬಾಯಿಂದ ಕೇಳಿರುವೆ! ಇವುಗಳನ್ನು ಸಹಿಸಬೇಕೆ? ಹೇಗೆ ಸಹಿಸುವದು ನೀವೇ ಹೇಳಿರಿ? ಅವರಿಗೆ ಮಾಡಿದ ಕೆಲಸದ ಸ್ಮರಣೆಯಿಲ್ಲ. ಮಾಡದ್ದನ್ನು ಗುಡ್ಡದಷ್ಟು ಮಾಡಿ ನಿಂದಿಸುವದು" ಎಂದು ನುಡಿದನು.

"ಅಹುದು. ಇದರಲ್ಲಿ ಸುಳ್ಳೇನಿದೆ ?" ಹಾಸಿಗೆಯಲ್ಲಿ ಮಲಗಿದ ಅವ್ವಕ್ಕನು ಮೆಲ್ಲಗೆ ನುಡಿದಳು.

"ಸಾಕು ಸುಮ್ಮನಿರು ಹುಚ್ಚಮುಂಡೇ !"

"ಹೀಗೆ ತಾಯಿಯನ್ನು ಬಯ್ಯಬಾರದು ರಾಜಣ್ಣ."

"ನೀವು ನನಗೆ ಏನೂ ಉಪದೇಶ ಮಾಡಬೇಡಿರಿ. ಆಕೆಯ ಪ್ರಾಯಶ್ಚಿತ್ತವು ಬೇರೆ ಇದೆ. ಅದೇ ಅವಳ ಪ್ರಾಯಶ್ಚಿತ್ತ. ನಾನು ನಿಶ್ಚಯ ಮಾಡಿ ಇಟ್ಟಿರುವೆ." ನಿರ್ಧಾರದಂತೆ ನುಡಿದನು.

"ನಾಲ್ಕು ಜನ ಬ್ರಾಹ್ಮಣರನ್ನು, ಮುತ್ತೈದೆಯರನ್ನು ಕರಿಸು. ಕೈಲಾದ ಮಟ್ಟಿಗೆ ಮನೆಯಲ್ಲಿದ್ದುದನ್ನು ದಾನಮಾಡು. ಅದರಿಂದ ತಾಯಿಯ ಆತ್ಮಕ್ಕೆ ಶಾಂತಿಯಾಗುವದು."

"ನೀವು ಮಾತಾಡಬೇಡಿರಿ. ಆ ಹುಚ್ಚ ಮುಂಡೆಯನ್ನು ಹೊಲೆಯರಿಂದ ಎಳೆಸಿ ಹಾಕದಿದ್ದರೆ ನಾನು ರಾಜಣ್ಣನಲ್ಲ ! ಆಕೆಗೆ ಕೊಡಿಸುವ ಪ್ರಾಯಶ್ಚಿತ್ತ ಇದೇ ! ಇದೇ ಯೋಗ್ಯವಾದುದು." ಎಂದು ಗಟ್ಟಿಯಾಗಿ ನುಡಿದನು.

ಪುಟ್ಟವ್ವ ಮರುಮಾತಾಡದೆ ಒಳಗೆ ಹೋದಳು.

ಅಕ್ಕಾಮರಿಯು ಧಾವಳಿಯನ್ನು ಕಳೆದು ಸೀರೆಯನ್ನು ಉಟ್ಟುಕೊಂಡು ಬಾಗಿಲಿಗೆ ಬಂದು ನಿಂತಿದ್ದಳು.

"ಲಗಳಿಯೊಳಗಿನ ಕೊಡಗಳನ್ನು ಒಬ್ಬಳೇ ಇಳಿಸಿದೆ ಏನು ?" ತಾಯಿಯು ಕೇಳಿದಳು.

"ಇಲ್ಲ."

"ಹಾಗೇ ಕುದುರೆಯೂ ನಿಂತಿರುವದೇನು ?" ರಾಜಣ್ಣ ಕೇಳಿದನು.

"ಕುದುರೆಯೂ ಇಲ್ಲ."

"ಹ !"

"ಇಷ್ಟುಹೊತ್ತು ಉದ್ದ ಹುರಿದೆ ಏನು ?" ರಾಜಣ್ಣನು ಕಿಡಿ ಕಿಡಿಯಾಗಿ ನುಡಿದನು.

"ಕುದುರೆ ಓಡಿಹೋಗಿದೆ." ಅಕ್ಕಾಮರಿಯು ಮೆಲ್ಲಗೆ ನುಡಿದಳು.

"ಓಡಿಹೋಗಿದೆ ?" ರಾಜಣ್ಣ ಆಶ್ಚರ್ಯದಿಂದ ಕೇಳಿದನು.

"ಅಹುದು. ನಾನು ನೀರು ತುಂಬಿ ಕೊಡಗಳನ್ನು ಲಗಳಿಯ ಮೇಲೆ ಹೇರಿದೆನು. ಚಿನ್ನಯ್ಯನ ಕುದುರೆಯೂ ಹಳ್ಳಕ್ಕೆ ಬಂದಿತು. ಅದನ್ನು ಕಂಡು ಲಗಳಿಯನ್ನು, ಕೊಡಗಳನ್ನು ಚೆಲ್ಲಿ ಓಡಿ ಹೋಯಿತು."

"ಹಗ್ಗದಿಂದ ಬಿಗಿದಿರಲಿಲ್ಲವೋ ?"

"ಹಗ್ಗ ಹರಿಯಿತು. ಕೈಯೊಳಗಿನ ಕೋಲೂ ಮುರಿಯಿತು. ಕಡೆಗೆ ಓಡಿಹೋಯಿತು."

"ಓಡುವ ಮುಂದೆ ಕತ್ತೆಯನ್ನು ಕಾಯುತ್ತಿದ್ದೆ ಏನು ?" ಆವೇಗದಿಂದ ನುಡಿದನು.

"ಕತ್ತೆಯನ್ನೇನು ಕಾಯುವದು. ವಾಂಡ ಕುದುರೆ !"

"ಅದರ ಮೇಲೆಯೇ ನೀರು ತರುತ್ತಿರುವೆವು. ಅದು ವಾಂಡಲ್ಲ. ನೀನು ವಾಂಡ !"

"ತಾವು ಒಂದು ಕೊಡನೀರು ತರುವದಿಲ್ಲ. ಕಟ್ಟೆಯಮೇಲೆ ಕುಳಿತು ಊರ ಹರಟೆಯನ್ನು ಹೊಡೆಯುವದು. ಕಕ್ಕನ ಮನೆಯವರು ನಿಮ್ಮಂತೆ...."

"ನೀನೂ ಎದ್ದುನಿಂತೋ ?" ಎಂದು ಎದ್ದುಬಂದು ಅಕ್ಕಾಮರಿಯನ್ನು ರಪರಪನೆ ಹೊಡೆದನು. ಮತ್ತೂ ಹೊಡೆಯ ಹತ್ತಿದನು. ಪುಟ್ಟವ್ವನು ಓಡುತ್ತ ಬಂದು ಮಗಳನ್ನು ಬಿಡಿಸಿಕೊಂಡಳು. ರಾಜಣ್ಣನ ಆವೇಶದಲ್ಲಿ ಅವಳಿಗೂ ಒಂದೆರಡು ಬಡಿತಗಳು ಬಿದ್ದವು.

ಅಕ್ಕಾಮರಿಯು ರೋ ಎಂದು ಅಳಹತ್ತಿದಳು. ಕೈಯ ಒಂದೆರಡು ಬಳೆಗಳು ಹೆಚ್ಚಿದವು. ಕೊರಳೊಳಗಿನ ಉಕ್ಕಸರವು ಹರಿದು ಗುಂಡಗಳು ಚೆಲ್ಲಾಪಿಲ್ಲಿಯಾದವು. ಹಣೆಯ ಕುಂಕುಮವೂ ಕೆದರಿತು. ಗಲ್ಲದ ಮೇಲೆ ಒಂದೆರಡು ಬಾಸುಂಡೆಗಳು ಕಾಣಹತ್ತಿದವು. ಕೂದಲು ಕೆದರಿ ನಿಂತವು. ಅಳುವು ಹಾಗೇ ಸಾಗಿತು.

ಪುಟ್ಟವ್ವನು ಮಗಳನ್ನು ಹಿಡಿದುಕೊಂಡು, ಬೆನ್ನಮೇಲೆ ಕೈ ಎಳೆಯುತ್ತ “ಸುಮ್ಮನಿರು ಮಗಳೇ ! ಏನು ಮಾಡುವದು ನನ್ನ ಕರ್ಮ !” ಎಂದು ಕೂದಲು ತೀಡಹತ್ತಿದಳು.

“ಮನೆಯೊಳಗಿನ ಯಾವತ್ತರು ನನ್ನ ಪಾಲಿಗೆ ಶತ್ರುಗಳಾಗಿರುವಿರಿ. ಕಾಡುವದೆಂದರೆ ಹೀಗೆಯೇ ! ಮನುಷ್ಯನ ತಾಳ್ಮೆಗೂ ಒಂದು ಸೀಮೆಇದೆ. ಒಂದು ಗೆರೆ ಇದೆ. ಆ ಮುದುಕಿಯು ನನ್ನನ್ನು ಹಣ್ಣಾಗಿ ಕೊಲ್ಲಹತ್ತಿರುವಳು. ಮೇಲೆ ಈ ಗಯ್ಯಾಳಿ ನುಡುವದರಮೇಲೆ ಉಪ್ಪು ಹಾಕಿದಂತೆ ನೀರುತಾ ! ಎಂದು ಉಪದೇಶ ಮಾಡುವಳು.” ಎಂದು ಸಿಟ್ಟಿನಿಂದ ನುಡಿದನು.

“ರಾಮಣ್ಣಾ ನಿನ್ನ ಹೆಂಡತಿಯು ಒಂದು ದಿನ ಹೊರಬಿದ್ದವಳಲ್ಲ. ಅಪ್ಪಾರಾಯರು ಮಗಳಂತೆ ನಡಿಸಿ ತಂದಿರುವರು. ಅದನ್ನು ಇವೇ ಕಣ್ಣುಗಳು ನೋಡಿದ್ದುಂಟು. ಒಂದು ಕೊಡ ಎತ್ತಿದವಳಲ್ಲ. ಇಲ್ಲಿಯು ತಂಬಿಗೆಯನ್ನು ಅಲ್ಲಿ ಇಟ್ಟವಳಲ್ಲ. ಒಮ್ಮೆಲೆ ಲಗಳಿಗೆ ಕಳಿಸುವದು ತರವೇ ? ನೀನೂ ಒಂದೆರಡು ಸಾರೆ ತರಬೇಕು. ತರುವ ಮುಂದೆ ಆಕೆಗೆ ಸಹಾಯ ಮಾಡಬೇಕು. ಅದರ ಸಂಪೂರ್ಣ ಪರಿಚಯವನ್ನು ಮಾಡಿಕೊಡಬೇಕು. ಅದನ್ನು ಬಿಟ್ಟು ದನ ಬಡಿದಂತೆ ಬಡಿದರೆ ಆಗುವದೇನು ? ನನಗೆ ಇದು ಸರಿಬಾರದು.”

“ಸರಿಬರದಿದ್ದರೆ ಬಿಟ್ಟು ಬಿಡಿರಿ.”

“ಬಿಟ್ಟರೆ ಹೇಗೆ ನಡೆಯಬೇಕು ?”

“ನನ್ನ ಮನೆಯಲ್ಲಿ ನಾನು ಸರ್ವಾಧಿಕಾರಿ. ನಾನು ಬೇಕಾದ ಹಾಗೆ ನಡೆಯುವೆ. ನಿಮಗೆ ಸರಿಬರದಿದ್ದರೆ ಸುಮ್ಮನಿರಿ.”

“ಹೇಗೆ ಸುಮ್ಮನಿರಬೇಕು. ಇದೆಲ್ಲವನ್ನು ನೋಡಿ ಸುಮ್ಮನಿರುವದೇ ?”

“ನೋಡುವದಾಗದಿದ್ದರೆ ಒಳಗೆ ಹೋಗಿರಿ. ನಿಮಗೆ ತಿಳಿದಲ್ಲಿ ಹೋಗಿರಿ. ನಾನು ಅಡ್ಡಿಯನ್ನು ಮಾಡಲಾರೆ.”

ಪುಟ್ಟವ್ವನಿಗೆ ಸಿಟ್ಟು ಬಂದಿತು. “ನನಗೂ ಒಂದೆರಡು ಮಾತಾ

ಡಲು ಅಧಿಕಾರವಿದೆ. ಮರೆಯಬೇಡ."

"ನಿಮ್ಮ ಅಧಿಕಾರ ಇಲ್ಲಿ ನಡೆಯಲಾರದು. ನಿಮ್ಮನ್ನು ನಾನು ಕರೆಕಳುಹಿಲ್ಲ. ಹೋಗಿರಿ." ಚೀರಿ ನುಡಿದನು.

"ರಾಜಣ್ಣ ನನಗೂ ಮನೆಯಿದೆ. ಹೋಗಲು ದಾರಿ ಇದೆ. ಉಪಜೀವಿಸಲು ಮಾರ್ಗವಿದೆ. ಮಗಳ, ಮುರಿಯು ಹೊರಟ ಸಂಸಾರ ವನ್ನು ಸರಿಪಡಿಸಿ ಹೋಗಬೇಕೆಂದು ಎರಡು ದಿನ ನಿಂತಿರುವೆ. ನೀನು ಹೀಗೆ ಮಾತಾಡಿದರೆ ನಾಳೆ ನಿನ್ನ ಮನೆಯಲ್ಲಿ ನಿಂತು ನೀರು ಕುಡಿದರೆ ದೇವರಾಣೆ! ನೀನಾಯಿತು. ನಿನ್ನ ಮನೆಯಾಯಿತು. ಅದರ ಕಡೆಗೆ ಕಣ್ಣೆತ್ತಿ ನೋಡುವದಿಲ್ಲ" ಎಂದು ಕಾಲು ಅಪ್ಪಳಿಸುತ್ತ ಮಗ ಳನ್ನು ಕರೆದುಕೊಂಡು ಒಳಗೆ ಹೋದಳು.

ರಾಜಣ್ಣನು ಅವಾಕ್‌ಮನದಿಂದ ಸುಮ್ಮನೆ ಹೊರಗೆ ಬಂದನು.

## ೨೧

ಅಂದು ರಾತ್ರಿ ಪುಟ್ಟವ್ವ, ಅಕ್ಕಾಮರಿಯು ಊರನ್ನು ಬಿಡಲು ಅನೇಕ ಬಗೆಯಾಗಿ ಚರ್ಚಿಸಿದರು. ಪುಟ್ಟವ್ವನಿಗೆ ಕೆಲದಿನದ ಮಟ್ಟಿಗಾದರೂ ಮಗಳನ್ನು ಗಂಡನಿಂದ ಅಗಲಿಸಬೇಕೆಂದು ಬಯಕೆ. ಅಕ್ಕಾಮರಿಯು ಇಂಥ ಅವಿವೇಕಿ ಗಂಡನನ್ನು ಬಿಟ್ಟು ಹೋಗುವದು ಅಪಾಯದ ಸಂಗತಿಯೆಂದು ತಿಳಿದುಕೊಂಡಿದ್ದಳು. ತರ್ಕದ ಕಣ್ಣಲ್ಲಿ ಉಭಯತರ ಮಾತು ಸತ್ಯವಿದ್ದಿತು. ಆದರೆ ಪುಟ್ಟವ್ವನು ಎರಡು ದಿನವಾದರೂ ಸರಿ ತನ್ನ ಮನೆಯಲ್ಲಿ ಮಗಳು ಇರಲು ಬರಲಿ ! ಎಂಬ ಉತ್ಕಟ ಆಶೆಯಿಂದ "ಮಗಳೇ ನಿನ್ನ ಮಾತು ನಿಜ. ನಾನು ಒಪ್ಪುವೆ. ರಾಜಣ್ಣನಂತಹ ಹುಂಬನನ್ನು ಹಾದಿಗೆ ತರಲು ಎರಡು ಮಾರ್ಗಗಳಿವೆ. ಒಂದು ಹೆಂಡತಿಯ ಹಟ. ಇನ್ನೊಂದು ಪರಿಸ್ಥಿತಿಯ ಒತ್ತಾಯ. ಪರಿಸ್ಥಿತಿಯ ಕಷ್ಟ ತಿಳಿದು ಸುಧಾರಿಸಬೇಕಾದರೆ ವಿವೇಕಬುದ್ಧಿ ಬೇಕು. ಅನುಭವ ಬೇಕು. ಸಾರಾಸಾರ ವಿಚಾರ ಬೇಕು. ಹಿರಿಯರ ಮಾತಿನಲ್ಲಿ ನಂಬಿಕೆ ಬೇಕು. ಒಳ್ಳೆಯ ಜನರ ಸಹವಾಸ ಬೇಕು. ಇವುಗಳಲ್ಲಿ ಯಾವ ಗುಣಗಳನ್ನು ನಿನ್ನ ಗಂಡನಲ್ಲಿ ಕಂಡಿರುವೆ ? ನನಗೆ ತಿಳಿದನುಟ್ಟಿಗೆ ಹೇಳುವದೆಂದರೆ-ಪರಿಸ್ಥಿತಿಗೆ ಹೊಂದಿಕೊಂಡು ಸುಧಾರಿಸುವ ಹಠೋಟಿ ಅವನಲ್ಲಿ ಇಲ್ಲ. ಅದಕ್ಕೆ ನನ್ನ ಸಂಗಡ ಬಾ. ಕಾಲಾಂತರದಿಂದ ಸುಧಾರಿಸಬಹುದು". ಎಂದು ಮನಸಿನಲ್ಲಿ ನಾಟು

ವಂತೆ ಹೇಳಿದಳು.

"ತಾಯೀ ನನಗೆ ಇದೆಲ್ಲ ಗೊತ್ತು. ಅವರು ಉಳಿಮುಟ್ಟದ ಲಿಂಗವೆಂದೇ ತಿಳಿದಿರುವೆ. ಪರಿಸ್ಥಿತಿಯೂ ಗೊತ್ತಿಲ್ಲ. ಪ್ರಮಾಣವೂ ಗೊತ್ತಿಲ್ಲ. ಮನೆತನದ ಸ್ಥಿತಿಗತಿಯೂ ಗೊತ್ತಿಲ್ಲ. ಇಂಥವರ ಸಂಗಡ ಹೇಗೆ ಬಾಳುವದು? ಹೇಗೆ ಕೂಡಿ ಇರುವದು? ನನ್ನ ಬಾಳು ನಾಯಿಯ ಬಾಳಿಗೂ ಕೀಳಾಯಿತು" ಎಂದು ಅಳಹತ್ತಿದಳು.

"ಅಳಬೇಡ ಅಕ್ಕಾಮರಿ. ನಾನು ಸುಧಾರಿಸುವೆ, ನಾಲ್ಕು ದಿನ ನನ್ನ ಸಂಗಡ ಬಾ. ಅವನಿಗೆ ವಿವೇಕವು ಬಂದೇ ಬರುವದು. ಆಗ ನೀನು ಹೇಳಿದಂತೆ ಕೇಳುವನು. ಮುರಿದ ಮನೆಯನ್ನು ಸುಧಾರಿಸು. ನಿನ್ನಲ್ಲಿ ಬುದ್ಧಿ ಕಡಮೆ ಇಲ್ಲ. ಜಾಣತನವೂ ಕಡಿಮೆಯಿಲ್ಲ. ಅನುಭವವೂ ಕಡಿಮೆ ಇಲ್ಲ."

"ಈಗ ಹೇಗೆ ಬರಲಿ ತಾಯೀ! ಮನೆಯಲ್ಲಿ ಅತ್ತೆಯವರು ಸಾಯಲು ಹೊರಟಿರುವರು. ಏಳಲು, ಕೂಡ್ರಲು ಇನ್ನೂ ಸರಿಯಾಗಿ ಬರುತ್ತಿಲ್ಲ. ಹೇಗೆ ಬರಲಿ?"

"ಇದು ಅನುಕೂಲವೆಂದೇ ತಿಳಿ."

"ಅವರನ್ನಾದರೂ ನೋಡಿ ನಿಲ್ಲಬೇಕೆನಿಸುವದು."

"ಮನೆಯ ಯಜಮಾನನೇ ತಾಯಿಯು ಸಾಯಲಿ! ಎಂದು ಜಪಿಸುತ್ತ ಕುಳಿತ ಸಮಯದಲ್ಲಿ ನಿನ್ನ ಯಾವ ಸಹಾಯದಿಂದ ಆ ಬಡಪಾಯಿ ಬದುಕಬೇಕು? ಒಳ್ಳೇದು. ಆಕೆಯು ಬದುಕಿದಷ್ಟು ದಿನ ನಿನಗೆ ಸಂಕಟ. ನೀನು ಇಲ್ಲಿ ಇರುವವರೆಗೆ ಆಕೆಯ ಸ್ನಾನ, ಅಡಿಗೆ, ಸೇವೆ ಎಲ್ಲವನ್ನೂ ನೀನೇ ಮಾಡಬೇಕು. ರಾಜಣ್ಣನು ರಾಜಣ್ಣನೇ ಸರಿ. ನೀನು ಹೊರಟು ಬಂದೆ ಎಂದರೆ ರಾಜಣ್ಣ ತಾನೇ ಮಾಡುವನು. ಎರಡು ದಿನದಲ್ಲಿ ಬುದ್ಧಿ ಬರುವದು."

"ತಾಯೀ ಜನರು ಏನೆಂದಾರು?"

"ಗಂಡನಕಾಟಕ್ಕೆ ಕೆಲ ದಿನ ತಾಯಿಯ ಕೂಡ ಹೋದಳೆಂದು ಜನರು ಅನ್ನುವರು."

"ತುಂಬಿದ ಮನೆ."

"ಮನೆ ಎಲ್ಲಿ ಹೋಗುವುದು! ನೀನು ನನ್ನಲ್ಲಿ ಕಡೆಯವರೆಗೆ ಇರಬೇಕಾಗಿದೆ ಏನು? ಎರಡು ದಿನ! ತಿರುಗಿ ಬಂದರಾಯಿತು."

"ಅವರು?"

"ಅವನಿಗೆ ಮನೆಯ ಚಿಂತೆ ಎಲ್ಲಿ! ಆ ನಾಲ್ಕು ಜನ ಘಟಿಂಗರ ಮನೆಯ ತಂಗುಳ ರೊಟ್ಟಿಯಾದರೆ ಊಟವಾಯಿತು. ಒಂದು ಕಂಬಳಿಯಾದರೆ ಸಿದ್ಧಿಯಾಯಿತು. ಎರಡು ಬೀಡಿಗಳಾದರೆ ನೇಳಿ ಕಳೆಯಿತು. ತಿಂಗಳಲ್ಲಿ ಮನೆಯ ಊಟವನ್ನು ಎಷ್ಟು ಸಾರೆ ಮಾಡುವನು? ಎಷ್ಟು ರಾತ್ರಿ ಮಲಗಿರುವನು?"

"ನನಗೆ ಹೇಗೆ ಹೇಗೋ ಎನಿಸುವದು."

"ಇಷ್ಟಾಗಿ ನೀನು ಮನೆಯಲ್ಲಿ ನಿಂತೆಯಾದರೆ ನಿತ್ಯ ನಿನಗೆ ಬೈಗಳು, ಬಡಿತ ತಪ್ಪಿದುವಲ್ಲ. ಮೊನ್ನೆ ಬಡಿದ ಬಾಸುಳ ಇನ್ನೂ ಅಳಿಸಿಲ್ಲ" ಎಂದು ತುಂಬುಗಲ್ಲದ ಮೇಲೆ ಕೈಯಾಡಿಸಿದಳು.

ಅಕ್ಕಾಮರಿಯು ತಾಯಿಯನ್ನು ಹಿಡಿದುಕೊಂಡು ಬಿಕ್ಕಿಬಿಕ್ಕಿ ಅಳಹತ್ತಿದಳು.

"ಅಳಬೇಡ ತಾಯೀ! ಎಲ್ಲವೂ ಸರಿಯಾಗುವದು. ನೀನು ಅಳ ಹತ್ತಿದರೆ ನನ್ನ ಕರುಳುಗಳನ್ನು ಹಿಸುಕಿದಂತಾಗುವದು. ಅಳಬೇಡ." ಎಂದು ಸೆರಗಿನಿಂದ ಕಣ್ಣೊರಸಿದಳು.

"ತಾಯೀ ನನ್ನನ್ನು ಹೆತ್ತು ಮೇಲೆ ಕಲ್ಲು ಕಟ್ಟಿ ಬಾವಿಯಲ್ಲಿ ಒಗೆದಿದ್ದರೆ ಸುಖವಿದ್ದಿತು. ಇಂಥ ಕಷ್ಟವಾದರೂ ತಪ್ಪುತ್ತಿದ್ದಿತು. ನೀನೂ ನೋಡುತ್ತಿರಲಿಲ್ಲ."

ಪುಟ್ಟಪ್ಪನು ಮಗಳನ್ನು ತಬ್ಬಿಕೊಂಡು "ಅಕ್ಕಾಮರಿ, ನಿನ್ನ ಮನೆಯೆಂದರೆ ಇಂದ್ರನ ಅಮರಾವತಿಯಾಗಿರಲಿಲ್ಲವೇ? ಕಾಳು ಕಡಿಗಳೇನು! ಹಾಲು-ಮೊಸರೇನು! ಬೆಣ್ಣೆ ತುಪ್ಪವೇನು! ನಿನ್ನ ಮನೆಯಲ್ಲಿ ಉಕ್ಕಿದಷ್ಟು ತುಪ್ಪವನ್ನು ಯಾವ ಆಗರ್ಭ ಶ್ರೀಮಂತನೂ ತಿನ್ನಲಾರ. ಇದೆಲ್ಲವನ್ನೂ ಇವೇ ಕಣ್ಣುಗಳಿಂದ ನೋಡಿರುವೆ.

ಅಳಬೇಡ. ನಾನು ಎಲ್ಲವನ್ನೂ ಸರಿಮಾಡುವೆ. ನಿನ್ನ ಸುಖ-ಸಮಾಧಾನದ ದಿನಗಳನ್ನು ಪುನಃ ನೋಡುವೆ." ಎಂದು ಚಿಕ್ಕ ಮಗುವಿನಂತೆ ಬೆನ್ನ ಮೇಲೆ ಚಪ್ಪರಿಸ ಹತ್ತಿದಳು.

ಆ ತಾಯಿ ಮಗಳಿಗೆ ನಿದ್ದೆ ಹತ್ತಿದ್ದೇ ಗೊತ್ತಾಗಲಿಲ್ಲ. ಬೆಳಗಿನ ಕೋಳಿಯ ಕೂಗಿಗೆ ಎದ್ದರು. ತಮ್ಮ ಗಂಟು-ಗದಡಿಗಳನ್ನು ಕಟ್ಟಿಕೊಂಡರು. ರೈತನಿಗೆ ಹೇಳಿ ಒಂದು ಚಕ್ಕಡಿಯನ್ನು ತರಿಸಿದರು. ಕಣಿಕೆಯನ್ನು ಹಾಕಿ, ಮೇಲೆ ಗುಡಾರವನ್ನು ಹಾಸಿ, ಸವಾರಿಯನ್ನು ಕಟ್ಟಿಸಿದರು. ಪ್ರಾತಃಕಾಲದ ಅಲ್ಪ ಸ್ವಲ್ಪ ಪೇಯ ಪದಾರ್ಥಗಳನ್ನು ಕುಡಿದರು. ಎಲ್ಲ ಸಿದ್ಧತೆಯಾದ ಮೇಲೆ ಅಡಿಗೆಯ ಮನೆಯಲ್ಲಿ ಚಾಪೆಯ ಮೇಲೆ ಅಡ್ಡಾದ ಅವ್ವಕ್ಕನಿಗೆ ಹೇಳಿದರು. ಆ ಮುದುಕಿಯು ಕಣ್ಣು ತುಂಬ ನೀರು ತಂದು "ಕಡೆಗೆ ಹೋಗುವದನ್ನೇ ನಿಶ್ಚಯಿಸಿದಿರಾ ?" ಎಂದು ಕೇಳಿದಳು.

"ಎರಡು ದಿನ ಹೋಗುವೆ. ಮನೆಯನ್ನು ಬಿಟ್ಟು ಬಂದು ಬಹಳ ದಿನಗಳಾದವು."

"ಅಹುದು ಹೋಗಿಬನ್ನಿರಿ. ನೀವು ಇಲ್ಲಿ ಎಷ್ಟು ದಿನ ನಿಲ್ಲಬಹುದು." ಎಂದು ಮೆಲ್ಲಗೆ ಒಂದೊಂದು ಶಬ್ದದಂತೆ ನುಡಿದಳು

"ಮಗಳನ್ನೂ ಕರೆದುಕೊಂಡು ಹೋಗಬೇಕೆಂದಿರುವೆ ?"

"ನೀನೂ ಹೋಗುವೆ ಅಕ್ಕಾಮರಿ ?"

"ಅವ್ವನು ಕರೆಯುತ್ತಿರುವಳು."

"ಆಗಲಿ." ಎಂದು ಅವ್ವಕ್ಕನು ತನ್ನ ಹಲ್ಲಿಲ್ಲದ ಬಾಯಿಂದ ತೊದಲು ನುಡಿಯುತ್ತ ತನ್ನ ಒಣಗಿದ ಕಣ್ಣಲ್ಲಿ ಒಂದೆರಡು ಹನಿ ನೀರು ತಂದಳು.

"ಅಪ್ಪನ ಆಗ್ರಹಕ್ಕೆ ಹೋಗಬೇಕೆಂದಿರುವೆ. ನೀವು ಹೋಗೆಂದರೆ ಹೋಗುವೆನು."

"ನೀನೂ ಹೋಗು. ನಾನೂ ಹೋಗುವೆನು. ಆ ಮುಟ್ಠಾಳನಿಗೆ ಬುದ್ಧಿಯಾದರೂ ಬಂದೀತು. ನನಗೂ ಬದುಕಬೇಕೆಂದು

ಇಚ್ಛೆ ಇಲ್ಲ. ಬೇಗನೆ ಸಾವು ಬರಲಿ. ಇಂದೇ ಬರಲಿ. ಈಗಲೇ ಬರಲಿ ಎಂದು ದೇವರನ್ನು ಬೇಡಿಕೊಳ್ಳುತ್ತಿರುವೆ. ಯಮರಾಯನು ಇನ್ನೂ ಏಕೆ ಬರಲೊಲ್ಲನೋ ತಿಳಿಯದು."

"ಹೀಗೇಕೆ ಮಾತಾಡುವಿರಿ ಅತ್ತೆಯವರೇ! ನನಗೆ ದುಃಖ ವಾಗುವದು."

"ಈಗ ಆದ ದುಃಖವೇ ನಿನಗೆ ಹೆಚ್ಚು. ತಾಯಿಯ ಮನೆಯಲ್ಲಿ ಎರಡು ದಿನವಾದರೂ ಸುಖದಿಂದಿರು. ನನ್ನದು ನನ್ನ ಪಾಲಿಗಿರಲಿ. ನೀನು ಹೋಗು."

"ಆಶೀರ್ವದಿಸುವಿರಾ?" ಅಕ್ಕಾಮರಿಯು ಅಳುತ್ತ ಕೇಳಿದಳು.

"ಹೋಗಿ ಬಾ ಮಗು! ನನ್ನ ಪೂರ್ಣಾಶೀರ್ವಾದವಿದೆ." ಎಂದು ನುಡಿದು ಮತ್ತೆ ಚಾಪೆಯ ಮೇಲೆ ಮಲಗಿದಳು.

ಪುಟ್ಟವ್ವ, ಅಕ್ಕಾಮರಿಯು ಕಣ್ಣೊರಸಿಕೊಂಡು ಹೊರಗೆ ಬಂದರು. ಬಿಸಿಲು ಏರುತ್ತಿದ್ದಿತು. ಹೊರಡುವ ವೇಳೆಯಾಗಿದ್ದಿತು. ರಾಜಣ್ಣನು ಇನ್ನೂ ಹೊರಗಿನಿಂದ ಬಂದಿರಲಿಲ್ಲ. ಅವನಿಗಾಗಿ ತುಸುವೇಳೆ ನಿಲ್ಲಬೇಕಾಯಿತು. ಆದರೂ ಬರಲಿಲ್ಲ. ಇನ್ನೇನು ಹೊರಡುವವರು. ಎದುರು ರಾಜಣ್ಣನು ಬಂದನು. ಅವನಿಗೆ ಹಿಂದೆ ಸರಿದು ದಾರಿಯನ್ನು ಕೊಟ್ಟರು. ರಾಜಣ್ಣನು ನೇರವಾಗಿ ತನ್ನ ಕೋಣೆಗೆ ಹೋದನು. ಬಟ್ಟೆಗಳನ್ನು ಬದಲಿಸಿದನು. ಒಂದು ಕಡೆಗೆ ಕುಳಿತು ಬೀಡಿಯನ್ನು ಹೊತ್ತಿಸಿದನು. ಪುಟ್ಟವ್ವನು ಮೆಲ್ಲಗೆ ಕೋಣೆಯವರೆಗೆ ಬಂದಳು. ಎದುರು ರಾಜಣ್ಣನು ಕುಳಿತು ಬೀಡಿಯ ಹೊಗೆಯನ್ನು ಬಿಡುತ್ತಿದ್ದುದು ಕಾಣಹತ್ತಿತು. ಬಾಗಿಲಲ್ಲಿ ಇಣಿಕಿಕ್ಕಿ

"ಇಂದು ಊರಿಗೆ ಹೋಗುವೆ." ಎಂದು ನುಡಿದಳು

"ಒಳ್ಳೇದು." ಹೊಗೆಯನ್ನು ಬಿಡುತ್ತ ರಾಜಣ್ಣನು ನುಡಿದನು.

"ಅಕ್ಕಾಮರಿಯನ್ನೂ ಎರಡು ದಿನ ಕರೆದುಕೊಂಡು ಹೋಗುವೆನು."

"ಎಲ್ಲ ಸಿದ್ಧತೆಯನ್ನೂ ಮಾಡಿದ ಮೇಲೆ ಕೇಳುವ ಅವಶ್ಯಕತೆ

ಯೇನು ?"

"ನನ್ನ ಸಲುವಾಗಿ ನಾನು ಕೇಳದಿದ್ದರೂ ನಡದೀತು. ಅವಳ ಸಲುವಾಗಿ ಕೇಳಲೇಬೇಕು."

"ಇಷ್ಟರ ಸಲುವಾಗಿಯಾದರೂ ಕೇಳುವ ಗೌರವವನ್ನು ಇಟ್ಟಿರುವಿರಿ."

"ನಿಮ್ಮನ್ನು ಅಗೌರಿಸಿದ್ದೆಂದು ?"

"ಈಗ ಅದೆಲ್ಲವೇಕೆ?"

"ಕಳಿಸುವದಿದ್ದರೆ ಕಳಿಸಿರಿ."

"ಅವಳು ಬರುತ್ತಿದ್ದರೆ ಕರೆದುಕೊಂಡು ಹೋಗಿರಿ."

"ಹಾಗಾದರೆ ಹೋಗುವೆವು." ಎಂದು ನುಡಿದು ಹೊರಳಿದಳು.

ಅಕ್ಕಾ ಮರಿಯು ಹಿಂದೆಯೇ ನಿಂತಿದ್ದಳು. ತಾನು ಸ್ವತಃ ಕೇಳಬೇಕು. ಗಂಡನಿಂದ ಅಪ್ಪಣೆಯನ್ನು ಪಡೆಯಬೇಕು ಎಂಬ ಲವಲವಿಕೆಯಿಂದ ಮುಂದೆ ಸರಿದಳು. ಆದರೆ ಪುಟ್ಟವ್ವನು ಮಗಳನ್ನು ಮುಂದೆ ಬಿಡದೆ ರಟ್ಟೆಯನ್ನು ಹಿಡಿದು ಹಿಂದೆ ಎಳೆದಳು. ಅಕ್ಕಾಮರಿಯು ಹೋಗಿ ಕೇಳಬೇಕೆಂಬ ಆತುರದಲ್ಲಿಯೇ ಇದ್ದಳು. ಪುಟ್ಟವ್ವನು ರಟ್ಟೆಯನ್ನು ಬಿಡದೆ ಎಳೆದುಕೊಂಡು ಹೊರಗೆ ಬಂದಳು.

ತಲೆಬಾಗಿಲವರೆಗೆ ಬಂದು ಅಕ್ಕಾಮರಿಯು ಒಮ್ಮೆ ತುಂಬ ಕಣ್ಣು ಬಿಟ್ಟು ಮನೆಯನ್ನು ನೋಡಿದಳು. 'ಎಂಥ ಭವ್ಯವಾದ ಮನೆ! ನೂರಾರು ಜನರು ಓಡಾಡಿದರೂ ಸಾಲುವಷ್ಟು ಮನೆ! ಈ ಕಡೆಗೆ ದನಗಳ ಮನೆ. ಎಮ್ಮೆಗಳು, ಆಕಳುಗಳು ನಿಂತು ಮೆಲುಕಾಡಿಸುತ್ತಿದ್ದವು. ಆ ಕಡೆಗೆ ಬಚ್ಚಲಮನೆ. ಎದುರು ದೊಡ್ಡ ಪಡಸಾಲೆ. ನಡುವೆ ದೊಡ್ಡ ಬೈಲು. ಮನೆ ತುಂಬಿಸಿಕೊಂಡ ದಿನ ಎಂಥ ಗದ್ದಲ! ಸ್ವಾಮಿಗಳ ಮೂಲಕ ರಾಮದೇವರ ಪೂಜೆ! ಎಂಥ ಗಂಭೀರವಾದ ಮಂತ್ರಘೋಷಣೆ! ತನ್ನ ಚೊಚ್ಚಲ ಮಗುವಿನ ನಾಮಕರಣದ ದಿನ ಬ್ರಾಹ್ಮಣರು, ಮುತ್ತೈದೆಯರು, ಒಕ್ಕಲಿಗರು, ರೈತರು ಅಂಗಳದ ತುಂಬ ಕುಳಿತು ಊಟಮಾಡಿದ್ದರು. ಹಾಡಿದ್ದರು. ಹರಿಸಿದ್ದರು. ತೊಟ್ಟಿಲ

ತುಂಬ ಕಾಣಿಕೆಗಳು. ಈ ಮನೆಯಲ್ಲಿ ಸಾಮಾನ್ಯರಿಗೆ ಕಾಲಿಡಲು ಭಯವಾಗುತ್ತಿದ್ದಿತು. ಬಾಗಿಲಲ್ಲಿ ಸದಾ ಒಬ್ಬ ಹೆಳಬನ ಕಾವಲು. ಅಂಥ ಮನೆಯು ಇಂದು ಬರಿದು, ಬರಿದು, ತುಂಬಿದ ಮನೆಗೆ ಈಗ ಉಳಿದವರು ಕೇವಲ ಮೂವರು! ಅದರಲ್ಲಿ ಒಂದು ಸಾಯಲಿಕ್ಕೆ ಹೊರಟ ಮುದುಕಿ! ದೇವಾ ಈ ಮನೆಯು ಇನ್ನೊಂದು ತುಂಬುವದು! ಮಕ್ಕಳು–ಮರಿಗಳಿಂದ, ಆಳು–ಹೋಳುಗಳಿಂದ, ಧನ–ದೌಲತ್ತಿನಿಂದ, ಮಾನ–ಮರ್ಯಾದೆಯಿಂದ ಎಂದು ತುಂಬಿ ಬರುವದು! ದೇವಾ ಈ ನನ್ನ ಬಯಕೆಯನ್ನು ಈಡೇರಿಸಬಲ್ಲೆಯಾ? ಈಡೇರಿಸುವೆಯಾ?" ಎಂಬ ಭಾವನೆಯ ಕೋಲ್ಮಿಂಚು ಸೆಳೆಯಿತು. ಈ ಥಲಕು ಮಲಕು ವಿಚಾರಗಳ ಸುಳಿಯಲ್ಲಿ ಸಿಕ್ಕು, ದಿಙ್ಮೂಢಳಾಗಿ ಹಾಗೆಯೇ ನಿಂತಳು ಲಲ್ಲಿಯು "ನಡೆ ಅಕ್ಕಾ" ಎಂದು ಎಷ್ಟುಸಲ ನುಡಿದರೂ ಪ್ರಜ್ಞೆ ಇಲ್ಲ. ನಿಂತಳು. ಹಾಗೆಯೇ ನಿಂತಳು. ಕಣ್ಣಿನಿಂದ ನೀರು ಇಳಿಯುತ್ತಿದ್ದಿತು.

ಮುಂದೆ ಹೋದ ಪುಟ್ಟವ್ವನು ತಿರುಗಿಬಂದು "ಇಲ್ಲೇಕೆ ನಿಂತೆ ನಡೆ. ಚಕ್ಕಡಿಯು ಹಳ್ಳವನ್ನು ದಾಟಿಹೋಯಿತು." ಎಂದು ಲಲ್ಲಿಯನ್ನು ಕರೆದುಕೊಂಡು ಅಕ್ಕಾಮರಿಯ ಕೈ ಹಿಡಿದು ಎಳೆದು ಕೊಂಡು ಮುಂದೆ ಸಾಗಿದಳು.

ಅಕ್ಕಾಮರಿಯು ಕೊನೆಗೊಮ್ಮೆ ಮನೆಯನ್ನು ನೋಡಿ, ಬೆನ್ನು ತೋರಿಸುತ್ತ ತಾಯಿಯ ಸಂಗಡ ನಡೆದಳು.

ರಾಜಣ್ಣನು ಬಾಗಿಲ ಹೊರಗೆ ಬಂದು ಅವರು ಹೋಗುವದನ್ನು ನೋಡುತ್ತ ಬೀಡಿಯ ಹೊಗೆಯನ್ನು ಉಗುಳ ಹತ್ತಿದನು.

## ೨೨

ಆ ದೊಡ್ಡ ಮನೆಗೆ ರಾಜಣ್ಣನೊಬ್ಬನೇ ಉಳಿದನು. ಒತ್ತಲ ಮನೆಯಿಂದ ಮುಂದಿನ ಬಾಗಿಲವರೆಗೆ, ಬಚ್ಚಲಮನೆಯಿಂದ ದನಗಳ ಮನೆಯವರೆಗೆ ಓಡಾಡಿದರೆ ತಾನೇ ಓಡಾಡಬೇಕು. ಅವುಗಳ ವ್ಯವಸ್ಥೆಯನ್ನು ತಾನೇ ನೋಡಬೇಕು. ಚಿಲಕ ಹಾಕಿದೆಯೇ ? ಬಾಗಿಲು ಮುಚ್ಚಿದೆಯೇ ? ಯಾರಾದರೂ ಮನೆಯನ್ನು ಸೇರಿರುವರೇ ? ಕೋಣೆಯಲ್ಲಿ ಕಾಳು ಇದೆಯೇ ? ಡಬ್ಬಿಗಳ ಬಾಗಿಲು ಮುಚ್ಚಿದೆಯೇ ? ನಾಳೆ ಏನು ತರಬೇಕು ? ಇಂದು ಯಾವುದು ತೀರಿತು ? ಇತ್ಯಾದಿಗಳ ಆಲೋಚನೆಯನ್ನು ತಾನೇ ಮಾಡುವದು. ಅಕ್ಕಾಮರಿಯು ಹೋದ ನಾಲ್ಕಾರು ದಿನಗಳಲ್ಲಿ ಬೇಜಾರಕ್ಕಿಟ್ಟುಕೊಂಡಿತು. ಮನೆಯನ್ನು ನಡಿಸುವದೆಂದರೆ ಇಷ್ಟೆಲ್ಲ ಸಂಗತಿಗಳ ಕಡೆಗೆ ಲಕ್ಷ್ಯವಿರಬೇಕೆಂದು ಅಂದೇ ಅರಿತನು.

ಅಡಿಗೆಯ ಮನೆಯಲ್ಲಿ ಹೋದರೆ ನರಳುತ್ತ ಮಲಗಿದ ತಾಯಿ ! ಪಡಸಾಲೆಯಲ್ಲಿ ತಾನು ! ಆಗಾಗ ಹರಟೆಯನ್ನು ಹೊಡೆಯಲು ಬಂದು ಕುಳಿತುಕೊಳ್ಳುವ ನಾಲ್ವರು ಗೆಳೆಯರು ! ಮುಗಿಯಿತು. ಮನೆಯಲ್ಲಿಯ ಜೀವಂತ ಪ್ರಾಣಿಗಳೆಂದರೆ ಇಷ್ಟೇ. ಗೆಳೆಯರಾದರೂ ಬಹಳ ಹೊತ್ತು ಕುಳಿತಿರುತ್ತಿರಲಿಲ್ಲ. ರಾಜಣ್ಣನಲ್ಲಿ ಹಣವಿದ್ದ ಸಮಯದಲ್ಲಿ ಆತನ ಬಾಲದಂತೆ ಬೆನ್ನು ಹತ್ತುತ್ತಿದ್ದರು. ಈಗ ಹಣವೆಲ್ಲ ತೀರಿ

ದ್ದಿತು. ಅವನಿಂದ ತಿನಿಸು, ಉಣಿಸು, ದುಡ್ಡು, ದುಗ್ಗಾಣಿ ಸಿಕ್ಕುತ್ತಿರಲಿಲ್ಲ. ಇದು ಗೊತ್ತಿದ್ದರೂ ಹಳೆಯ ಸ್ನೇಹ ಒಮ್ಮೆಲೇ ಹರಿದುಕೊಂಡು ನಿಲ್ಲುವದು ಅವರಿಗೂ ಅಸಾಧ್ಯವಾಗಿದ್ದಿತು. ಮೊದಲಿನ ಪ್ರೇಮದ ರುಚಿಯು ಕೆಲಸವಿಲ್ಲದ ಸಮಯದಲ್ಲಿ ರಾಜಣ್ಣನ ಮನೆಯವರೆಗೆ ಎಳೆದುಕೊಂಡು ಬರುತ್ತಿದ್ದಿತು. ಒಂದೆರಡು ಬೀಡಿಯನ್ನು ಸೇದಿ ಅಲ್ಪಸ್ವಲ್ಪ ಮಾತಾಡಿ ತಮ್ಮ ಕೆಲಸಗಳಿಗೆ ಹೋಗುತ್ತಿದ್ದರು. ಆಗ ರಾಜಣ್ಣ ಒಬ್ಬನೇ ಒಬ್ಬನಾಗುತ್ತಿದ್ದನು.

ಇಂದು ಮನೆಯಲ್ಲಿ ಕಟ್ಟಿಗೆ ಇರಲಿಲ್ಲ. ಇಲ್ಲವೆಂದು ನಿನ್ನೆಯೇ ಅರಿತಿದ್ದನು. ಆದರೆ ಹೇಗೆ ಸಂಪಾದಿಸಬೇಕು? ವಿಚಾರಿಸಿರಲಿಲ್ಲ. ನಾಳೆ ನೋಡಿದರಾಯಿತು ಎಂದು ಸುಮ್ಮನಿದ್ದನು. ತಾನು ಎಲ್ಲಿಯಾದರೂ ಊಟವನ್ನು ಮಾಡಬಹುದು. ಏನಾದರೂ ತಿನ್ನಬಹುದು. ಆದರೆ ತಾಯಿಯು ಒಂದು ಹಿಡಿ ಅಕ್ಕಿಯನ್ನು ಬೇಯಿಸಿಕೊಳ್ಳಲು ಒಂದೆರಡು ಕಟ್ಟಿಗೆಗಳಾದರೂ ಬೇಕಿದ್ದವು. ಮನೆಯಲ್ಲಿ ಮೊದಲು ಗೋದನೆಯಲ್ಲಿ ಎಮ್ಮೆ ಆಕಳುಗಳಿದ್ದವು. ಒಂದು ಕುದುರೆಯೂ ಇದ್ದಿತು. ತಿಂದುಬಿಟ್ಟ ಉರುಟು ದಂಟುಗಳನ್ನು ಒಲೆಗೆ ಹಚ್ಚಬಹುದಿದ್ದಿತು. ದಂಟುಗಳ ಹೊಗೆಯುರಿಯಲ್ಲಿ ಅಕ್ಕಿಯು ಹೇಗೋ ಬೆಯಿದು ಬರುತ್ತಿದ್ದಿತು. ಅಪ್ಪಾರಾಯರು ಸತ್ತಮೇಲೆ ಮೊದಲು ಎಮ್ಮೆಯನ್ನು ಮಾರಿದನು. ಆಕಳು, ಹಾಲನ್ನು ಕೊಡುವದು ನಿಲ್ಲಿಸಲು ಅದನ್ನೂ ಮಾರಿದನು. ಕುದುರೆಯು ಮೊಂಡವೆಂದು ಅದನ್ನೂ ಕೊಟ್ಟನು. ಇದರಿಂದ ಬೆಪ್ಪಾಡಿಗಳು ಸಿಗದಂತಾದವು. ಮುಂಜಾನೆ ಹಳ್ಳದ ಕಡೆಗೆ ಹೋದ ಸಮಯದಲ್ಲಿ ತನ್ನ ಮಾವಿನ ಬನವನ್ನು ಸುತ್ತಿ ಬಂದಿದ್ದನು. ಒಣಗಿದ ಟೊಂಗೆಯು ಒಂದೂ ಕಂಡುಬರಲಿಲ್ಲ. ಆದರೆ ನಡುವಿನ ಮನೆಯವರ ಬನದಲ್ಲಿ ಕೊಳ್ಳಿಯು ಹಾಯಿದು ಒಣಗಿದಂತಹ ಒಂದು ದೊಡ್ಡ ಟೊಂಗೆಯು ಕಂಡುಬಂದಿತು. ಕೇಳಿ ಪಡೆಯಬೇಕೆಂಬ ಆಶೆಯಾಯಿತು. ಅಪ್ಪಾರಾಯರು ಜೀವದಿಂದಿದ್ದ ಸಮಯದಲ್ಲಿ ಅವರನ್ನು ಕೇಳಿ, ಸತ್ತಮೇಲೆ ತನ್ನನ್ನು ಕೇಳಿ ಅವರು ಒಣಗಿದ

ಟೊಂಗೆಗಳನ್ನು ಕಡಿದುಕೊಂಡು ಹೋಗಿದ್ದರು. ಇದು ತನಗೂ ಗೊತ್ತು, ಅವರಿಗೂ ಗೊತ್ತು. ಒಣಗಿದ ಟೊಂಗೆಗಳನ್ನು ಕಡಿಯುವುದರ ಜೊತೆಗೆ ಅನೇಕ ಸಣ್ಣ ಪುಟ್ಟ ಹಸಿ ಟೊಂಗೆಗಳನ್ನೂ ಕಡಿದು ಇದ್ದರು. ತಾನು ಪ್ರತ್ಯಕ್ಷ ನೋಡಿದ್ದನು. ಜನರ ಬಾಯಿಂದಲೂ ಕೇಳಿದ್ದನು. 'ಏನು ಮಹಾ!' ಎಂದು ತಾತ್ಸಾರ ಮಾಡಿ ಸುಮ್ಮನಿದ್ದನು. ಅದಕ್ಕೆ ಈಗ ಕೇಳಿದರೆ ಬೇಕಾದಹಾಗೆ ತನಗೆ ಕೊಡಬಹುದೆಂದು ನಂಬಿದ್ದನು. ಕೊಟ್ಟರೆ ನಾಲ್ಕಾರು ತಿಂಗಳ ಕಟ್ಟಿಗೆಯ ಕಾಟ ತಪ್ಪುವದೆಂದು ಎಣಿಕೆ ಹಾಕಿದ್ದನು.

ಮನೆಗೆ ಬಂದ ಮೇಲೆ ನೇರವಾಗಿ ಅವರ ಮನೆಗೆ ಹೋದನು. ಎಂದೂ ಬಾರದ ರಾಜಣ್ಣ ಇಂದು ತಮ್ಮ ಮನೆಗೆ ಬಂದನೆಂದು ಎಲ್ಲರಿಗೂ ಕುತೂಹಲ. ಸಣ್ಣವರು, ದೊಡ್ಡವರು ಎಲ್ಲರೂ ಕೂಡಿ ಬಂದರು. ಏನೆಂದು ಕೇಳಿದರು. ರಾಜಣ್ಣನು "ಮನೆಯಲ್ಲಿ ಕಟ್ಟಿಗೆ ಇಲ್ಲ. ನನ್ನ ಬನದಲ್ಲಿ ಒಣಗಿದ ಒಂದು ಟೊಂಗೆಯೂ ಇಲ್ಲ. ನಿಮ್ಮ ಬನದಲ್ಲಿ ಹಳ್ಳದ ಕಡೆಗಿದ್ದ ಗಿಡದಲ್ಲಿ ಒಂದು ಟೊಂಗೆಯು ಕಂಡು ಬಂದಿತು. ಅದಕ್ಕೆ ಅದನ್ನು ಕಡಿದುಕೊಳ್ಳಬೇಕೆಂದಿರುವೆನು. ನಿಮಗೆ ತಿಳಿಸಲು ಬಂದಿರುವೆ." ಎಂದು ನುಡಿದನು.

ರಾಜಣ್ಣನಲ್ಲಿ ಹೀಗೆ ಕೇಳಿ ಕಡಿದುಕೊಳ್ಳುವ ಬುದ್ಧಿಯು ಹುಟ್ಟಿದುದಕ್ಕೆ ಯಜಮಾನಿಗೆ ಸಂತೋಷವಾಯಿತು. 'ಆದರೆ ಅವನು ಯಜಮಾನರನ್ನು ಕೇಳಲು ಬಂದವನು, ಅವರೇ ಹೇಳಲಿ' ಎಂದು ಸುಮ್ಮನಾದಳು. ಯಜಮಾನನು "ಓ! ಆ ಟೊಂಗೆಯೋ!" ಎಂದು ತಂಬಾಕು ಉಗುಳಲು ಹೊರಗೆ ಹೋದನು.

"ಅಹುದು ಕಾಕಾ! ಒಂದು ಸಣ್ಣ ಟೊಂಗೆ ಇದೆ. ಒಪ್ಪಿದರೆ ಈಗ ಕಡಿಸಿ ತರಬೇಕೆಂದಿರುವೆನು. ಕಡಿಯಬಹುದೇ?"

ಕಕ್ಕನು ಉಗುಳಿ ಬಂದು – "ರಾಜಣ್ಣ ನಿನ್ನ ಮುಂದೆ ಸತ್ಯವಾಗಿ ಹೇಳುವೆನು. ಆ ಟೊಂಗೆಯನ್ನು ಹೋದ ಶನಿವಾರವೇ ಕಡಿಸಬೇಕೆಂದು ಮಾಡಿದ್ದೆ. ಕೂಲಿಯವರು ಸಿಕ್ಕದ್ದರಿಂದ ಹಾಗೆಯೇ

ಉಳಿದಿದೆ. ನಮ್ಮ ಮನೆಯಲ್ಲಿಯೂ ಕಟ್ಟಿಗೆಯು ತೀರಿದೆ. ನಿನಗೆ ಕೊಟ್ಟರೆ ನಾನು ಯಾವ ಬನಕ್ಕೆ ಹೋಗಲಿ? ಮಳೆಗಾಲದ ಕಟ್ಟಿಗೆಯ ಭಾರವನ್ನು ಆ ಟೊಂಗೆಯ ಮೇಲೆಯೇ ಹೇರಿರುವೆ. ಇನ್ನೊಂದು ಒಣಗಿದ್ದರೆ ಕಡಿದುಕೊಂಡು ಹೋಗು. ಹಳ್ಳದ ಕಡೆಗೆ ಇದ್ದ ಟೊಂಗೆ ನನಗಿರಲಿ!" ಎಂದು ಹಲ್ಲುಗಳಲ್ಲಿ ಸಿಕ್ಕ ಅಡಿಕೆಯ ಚೂರುಗಳನ್ನು ನಾಲಗೆಯಿಂದ ಕೆದರಿ ಥೂಥೂ ಎಂದು ಉಗುಳ ಹತ್ತಿದರು.

"ಈಗ ನೀವು ಕಟ್ಟಿಗೆಯನ್ನು ಬನದಿಂದ ತಂದ ಮೇಲೆಯೇ ಅಡಿಗೆಯನ್ನು ಮಾಡಬೇಕೆಂದೇನಿಲ್ಲವಲ್ಲವೇ ....?

"ಪ್ರಪಂಚಿಕರು ಹಾಗೆಂದಾದರೂ ಮಾಡುವದುಂಟೇ? ಒಲೆಯ ಮೇಲೆ ಎಸರಿಟ್ಟು ಹಿಟ್ಟಿಗೆ ಪೇಟೆಗೆ ಹೋಗುವದುಂಟೇ? ಇದನ್ನೇನು ಮಾತಾಡುವೆ?"

"ಅದನ್ನೇ ಹೇಳುವೆನು. ಪೂರ್ವದ ಕಡೆಗಿದ್ದ ಹುಳಿಗಿಡವನ್ನು ಕಡಿಸಬೇಕೆಂದು ಅನೇಕ ದಿನಗಳಿಂದ ಹೇಳುತ್ತಿರುವಿರಿ. ಅದನ್ನು ನೀವು ಕಡಿಸಿಕೊಳ್ಳಿರಿ. ಆ ಒಣಗಿದ ಟೊಂಗೆಯು ನನಗಿರಲಿ."

"ಊಹು. ಹಾಗೆ ಮಾಡಬೇಡ. ಬನವು ದೊಡ್ಡದಿದೆ. ಕಣ್ಣು ತಪ್ಪಿ ಎಲ್ಲಿಯಾದರೂ ಉಳಿದಿರುವ ಸಂಭವವಿದೆ. ಹುಡುಕು. ಅದನ್ನು ನೀನು ಕಡಿದುಕೊಂಡು ಹೋಗು. ನಾನು ಅಡ್ಡಿಯನ್ನು ಎಂದೂ ಮಾಡಲಾರೆ."

"ಕಾಕಾ ಆ ಇನ್ನೊಂದನ್ನು ನಿಮ್ಮ ಪಾಲಿಗೆ ಇಟ್ಟುಕೊಂಡು ಇದನ್ನು ನನಗೆ ಕೊಡಿರಿ. ಇದರಿಂದ ನಿಮ್ಮ ಮಾತೇ ನಡೆದಂತೆ ಆಗುವದು."

"ಏನಪ್ಪಾ ರಾಜಣ್ಣಾ, ನನ್ನ ಮಾತಿನಿಂದಲೇ ನನ್ನನ್ನು ಕಟ್ಟ ಬಯಸುವೆ. ಇದ್ದ ನಾಲ್ಕು ಮನೆಯ ಬ್ರಾಹ್ಮಣರಲ್ಲಿ ನೀನು ಹೀಗೆ ಕಟ್ಟಿಗೆ ಮುರಿದಂತೆ ಮಾತಾಡಬಹುದೇ?"

"ಮತ್ತೆ ಹೇಗೆ ಮಾತಾಡುವದು. ಏನೂ ಮಾತಾಡದಿದ್ದರೆ,

ಮುಗ್ಧ, ಮಾತನ್ನು ಆಡಲಿಕ್ಕೆ ಬಾರದ ಶುಂಭನೆನ್ನುವಿರಿ. ಒಂದೆರಡು ಹೆಚ್ಚು ಮಾತಾಡಿದರೆ ಉದ್ಧಟನೆನ್ನುವಿರಿ. ಅದು ಏನೇ ಇರಲಿ, ನೀವು ಹಿರಿಯರು. ನನಗೆ ತಿಳಿದ ಎರಡು ಮಾತು ಆಡಿಯೇ ಬಿಡುವೆನು. ಕಾಕಾ, ನನ್ನ ಬನದಿಂದ ೧೦-೧೫ ಗಾಡಿಯಷ್ಟು ಕಟ್ಟಿಗೆಯನ್ನು ತಂದಿರುವಿರಿ. ನಿಮಗೆ ಗೊತ್ತಿದೆ. ಊರವರೆಲ್ಲರೂ ಬಲ್ಲರು. ಮಾರಿದ್ದರೆ ೫೦-೬೦ ರೂಪಾಯಿಗಳು ಬರುತ್ತಿದ್ದವೆಂದು ನನಗೆ ಅನೇಕ ಜನ ಹೇಳಿರುವರು. ಈಗ ನನ್ನ ಅವಶ್ಯಕ್ಕಾಗಿ ಒಂದು ಟೊಂಗೆಯನ್ನು ಕೇಳಿದರೆ ಹೀಗೆ ಮಾತಾಡುವಿರಿ. ಈ ಮಾತು ನಿಮಗೆ ಭೂಷಣವು. ಕೊಡುವ ಇಚ್ಛೆಯಿದ್ದರೆ ಕೊಡಿರಿ. ಇಲ್ಲದಿದ್ದರೆ ಇಲ್ಲ ಎನ್ನಿರಿ. ನಾನು ಹಳ್ಳದ ಕಡೆಯ ಟೊಂಗೆಯನ್ನೇ ಕೇಳಲು ಬಂದಿರುವೆನು." ಒಂದಿಷ್ಟು ಎತ್ತರಿಸಿದ ದನಿಯಿಂದ ನುಡಿದನು.

"ನಾನು ಅಂದುದೇನು ?"

"ಮತ್ತೇನು ಅನ್ನುವದು! ತಾನಾಗಿ ಒಣಗಿದ ಟೊಂಗೆ ನಿಮಗಾಯಿತು. ನನಗಾಗಬೇಕಾದರೆ ಒಂದು ಗಿಡದ ಬಳಿಗೆ ಹೋಗಬೇಕು. ಉಫ್ ಎಂದು ಮಂತ್ರ ಊದಬೇಕು. ಒಂದು ಟೊಂಗೆಯನ್ನು ಒಣಗಿಸಬೇಕು, ನಿಮಗೆ ಹೇಳಬೇಕು. ಅಪ್ಪಣೆಯನ್ನು ಪಡೆಯಬೇಕು. ಕಡಿಸಬೇಕು. ಗಾಡಿಯನ್ನು ಒಯ್ಯಬೇಕು. ಹೇರಿಸಿ ತರಬೇಕು. ನನ್ನ ಮನೆಯ ಬೇಳೆಯನ್ನು ಬೇಯಿಸಿಕೊಳ್ಳಬೇಕು. ಇದು ಈಗಿನ ನಿಮ್ಮ ಮಾತಿನ ಧೋರಣೆ."

"ರಾಜಣ್ಣಾ........"

"ನನ್ನ ಪುಣ್ಯಕ್ಕೆ ಒಣಗಿತು ಎಂದಿಟ್ಟುಕೊಳ್ಳುವ. ಆಗ ಕೇಳಿದರೆ ಅದು ಮುಂದಿನ ವರುಷಕ್ಕೆ ನನಗಿರಲಿ, ಇನ್ನೊಂದು ಒಣಗಿದ್ದರೆ ಕಡಿದುಕೊಂಡು ಹೋಗು! ಎಂದು ಎಲ್ಲಿ ಅನ್ನುವಿರೋ ಎಂದು ಸಂಶಯ! ಕಾಕಾ ನಾಲ್ಕು ಮನೆಯ ಬ್ರಾಹ್ಮಣರು ನಾವು! ಐದನೆಯ ಮನೆಯೂ ಇಲ್ಲ. ಆ ನಾಲ್ಕು ಮನೆಯ ಬ್ರಾಹ್ಮಣರಲ್ಲಿ ನೀವು ಹಿರಿಯರು. ಹಿರಿಯರೆಂದು ನಿಮ್ಮ ಹತ್ತಿರ ಇಷ್ಟು ದಿವಸದ

ಮೇಲೆ ಬಂದಿದ್ದೆ. ಆದರೆ ನೀವು ಒಬ್ಬರು ಇನ್ನೊಬ್ಬರಿಗೆ ಸಹಾಯ ಮಾಡುವ ಹೊಸ ಪದ್ಧತಿಯನ್ನು ನನ್ನಂತಹ ಮುಟ್ಠಾಳನಿಗೆ ಕಲಿಸುತ್ತಿರುವುದು, ಇದೇನು ಕಾಕಾ !"

ಕಾಕಾನ ಹಿರಿತನದ ಮಂಗಳಾರತಿಯು ಸಾಕಷ್ಟಾಯಿತು. ನಿಂತ ಸಣ್ಣವರು, ದೊಡ್ಡವರು ಬೆಕ್ಕಸಬೆರಗಾಗಿದ್ದರು. ಕಕ್ಕನು ಅವಮಾನಿತನಾಗಿ ಬುಸುಗುಟ್ಟುತ್ತಿದ್ದನು. ಕಕ್ಕನ ಹೆಂಡತಿಯು, ನಡುವೆ ಬಂದು, "ರಾಜಣ್ಣ ತೆಗೆದುಕೊಂಡು ಹೋಗು. ಮನೆಯಲ್ಲಿ ಒಂದಿಷ್ಟು ಕಟ್ಟಿಗೆ ಇದೆ. ದಂಟುಗಳೂ ಬೀಳುವವು. ನಾನು ಹೇಗಾದರೂ ಸಾಗಿಸಿಕೊಂಡು ಹೋಗುವೆನು. ನೀನು ಅದೇ ಟೊಂಗೆಯನ್ನು ಕಡಿದುಕೊಂಡು ಹೋಗು. ಆಳು ಸಿಕ್ಕದಿದ್ದರೆ ನಮ್ಮ ಈರನನ್ನು ಕರೆದುಕೊಂಡು ಹೋಗು." ಎಂದು ವಿವೇಕದಿಂದ ನುಡಿದಳು.

"ಬೇಡ ಕಕ್ಕೀ ! ನನಗೆ ಕಟ್ಟಿಗೆಯೇ ಬೇಡ. ಕಕ್ಕನ ಮಾತು ಮೀರಿ ಆ ಕಟ್ಟಿಗೆಯನ್ನು ಒಯ್ಯಲಾರೆ. ಒಯ್ದರೆ ಬೇಯಿದ ಬೇಳೆ ಹುಳಿಯಾದೀತು. ಅನ್ನ ಹಳಸಿ ಹೋದೀತು. ಒಯ್ಯಲಾರೆ. ಎಲ್ಲಿಯಾದರೂ ಸಂಪಾದಿಸುವೆ. ಕಕ್ಕನ ದೊಡ್ಡ ಮನಸಿನ ಎರಡು ಮಾತುಗಳು ನನಗೆ ಸಾಕಷ್ಟು ಕಟ್ಟಿಗೆಯನ್ನು ಒದಗಿಸಿದವು ! ಅವುಗಳನ್ನೇ ಸುಟ್ಟು ಅಡಿಗೆಯನ್ನು ಮಾಡಿಕೊಳ್ಳುವೆ. ಉಣ್ಣುವೆ. ಜೀರ್ಣಿಸಿಕೊಳ್ಳುವೆ. ಹೋಗುವೆನು." ಎಂದು ಬಾಣದಂತೆ ಹೊರಗೆ ಬಂದನು.

ಅಂದು ಕಕ್ಕನ ಮನೆಯ ಬಾಗಿಲು ರಾಜಣ್ಣನ ಪಾಲಿಗೆ ಮುಚ್ಚಿ, ಮುದ್ರೆಯನ್ನು ಹಾಕಿದಂತಾಯಿತು.

ಇನ್ನೊಮ್ಮೆ ಅನಿವಾರ್ಯವಾಗಿ ದೊಡ್ಡಪ್ಪನ ಮನೆಗೆ ಹೋಗಬೇಕಾಗಿ ಬಂದಿತು.

ಅಂದು ರಾಜಣ್ಣನು ಹತ್ತು ರೂಪಾಯಿಗಳ ತೀರ ಅಡಚಣೆಯಲ್ಲಿದ್ದನು. ಅಪ್ಪಾರಾಯರು ಸತ್ತ ಸಮಯದಲ್ಲಿ ಅಂಗಡಿಯ

ಚೆನ್ನನಿಂದ ಕೈಗಡ ತಂದು ಸಕ್ಕರೆಯನ್ನು ತರಿಸಿದ್ದನು. ಮನೆಯ ಜೊಂಜಾಟದಲ್ಲಿ ಮರೆತಿದ್ದನು. ನಾಳೆ ಕೊಟ್ಟಾನು ಎಂಬ ಎಣಿಕೆಯಲ್ಲಿ ಅವನೂ ಕೇಳಿರಲಿಲ್ಲ. ಅಸನು ಇಂದು ಬೇಕೆಂದು ಹಟ ಹಿಡಿದನು. ರಾಜಣ್ಣನು-ಮರೆತಿರುವೆ. ಕೊಡುವೆನು. ಎಂದು ಮರವಿನ ಮೇಲೆ ನಾಲ್ಕು ಬಿರುಸು ಮಾತುಗಳನ್ನು ಆಡಿ ವಚನವಿತ್ತಂತೆ ಮಾಡಿದನು. ಇಂದು ಅವನಿಗೆ ಹತ್ತು ರೂಪಾಯಿಗಳನ್ನು ಕೊಡಲೇಬೇಕಾಗಿದ್ದಿತು. ಅಲ್ಲಿ ಇಲ್ಲಿ ಕೇಳಿದನು. ಎಲ್ಲಿಯೂ ಹುಟ್ಟಲಿಲ್ಲ. ರೈತರನ್ನು ಕೇಳು ವಂತಿರಲಿಲ್ಲ. ಕಕ್ಕನ ಮನೆಯ ಬಾಗಿಲು ರಾಜಣ್ಣನ ವ್ಯವಹಾರಕ್ಕೆ ಮುಚ್ಚಿ ಹೋಗಿದ್ದಿತು. ದೊಡ್ಡಪ್ಪನ ಮನೆಯು ಮಾತ್ರ ಒಂದು ಉಳಿದಿದ್ದಿತು. ಅದಕ್ಕೆ ಅವನ ಮನೆಗೆ ಹೋದನು. ದೊಡ್ಡಪ್ಪನು ಎಲೆಹಚ್ಚುತ್ತ ಅಂಗಳದಲ್ಲಿ ಕುಳಿತಿದ್ದನು. ಹತ್ತಿರವೇ ಬಿಚ್ಚಿದ ಚಂಚಿ ಬಾಯಿ ತೆರೆದು ಅಡ್ಡ ಮಲಗಿದ್ದಿತು. ದೊಡ್ಡಪ್ಪನು ರಾಜಣ್ಣ ನನ್ನು ಕಂಡು "ಬಾ!" ಎಂದನು.

ರಾಜಣ್ಣನು ಬಳಿಗೆ ಹೋಗಿ ಸುಮ್ಮನೆ ನಿಂತನು.

"ಏಕೆ ಬಂದಿದ್ದೆ ರಾಜಣ್ಣ?" ದೊಡ್ಡಪ್ಪ ಕೇಳಿದನು.

"ಒಂದು ಕೆಲಸಕ್ಕಾಗಿ ನಿಮ್ಮ ಕಡೆಗೆ ಬಂದಿರುವೆ ದೊಡ್ಡಪ್ಪ!" ಎಂದು ಉಪೋದ್ಘಾತದ ಎಳೆಯನ್ನು ತೆಗೆದನು.

"ಏನು?" ಕೈಯೊಳಗಿನ ಕಡ್ಡಿಯನ್ನು ಮುರಿದು ದೊಡ್ಡಪ್ಪ ಕೇಳಿದನು.

"ಹತ್ತು ರೂಪಾಯಿ ಕೊಡಿರಿ. ತೀರ ಅಡಚಣೆಯಲ್ಲಿರುವೆ. ನಾಲ್ಕು ದಿನಗಳಲ್ಲಿ ಮರೆಯುದೆ ಮುಟ್ಟಿಸುವೆ." ಎಂದು ಅಗತ್ಯದಿಂದ ನುಡಿದನು.

ದೊಡ್ಡಪ್ಪನು ರಾಜಣ್ಣನನ್ನು ಪೂರ್ವಗ್ರಹದೂಷಿತ ದೃಷ್ಟಿ ಯಿಂದಲೇ ನೋಡುತ್ತಿದ್ದನು. ಅವನ ಆಚಾರ, ವ್ಯವಹಾರ, ರೀತಿ ನೀತಿ ಯಾವವೂ ಅವರ ಮನಸಿಗೆ ಬಂದಿರಲಿಲ್ಲ. ಅಪ್ಪಾರಾಯರು ಸತ್ತಮೇಲೆ ಮನೆಯ ವ್ಯವಹಾರದ ಸಂಬಂಧವಾಗಿ ಒಂದೆರಡು ಸಾರೆ

ಉಪದೇಶಿಸಿದ್ದರು. ಅದನ್ನು ಹೀಗೆ ಮಾಡಬಾರದು, ಇದನ್ನು ಹೀಗೆ ಮಾಡಬೇಕು ಎಂದು ತಿಳಿಹೇಳಿದ್ದರು. ಆದರೆ ಅವರ ಉಪದೇಶನನ್ನು ವ್ಯವಹಾರದ ಮಾತುಗಳನ್ನು ಬೋರ್ಗಲ್ಲ ಮೇಲೆ ಮಳೆಗರೆದಂತೆ ಮಾಡಿ ನಡೆಸಿದ್ದನು, ರಾಜಣ್ಣ. ಅದರಿಂದ ಅವನ ದಾರಿಯನ್ನು ಬಿಟ್ಟಿದ್ದರು. ನಿಜವಾಗಿ ಈಗ ಅವನ ಬರವೂ ಇಷ್ಟವಿರಲಿಲ್ಲ.

"ಏತಕ್ಕೆ ?" ಎಂದು ಕೇಳಿದರು.

"ಒಬ್ಬನಿಗೆ ಮುಟ್ಟಿಸಬೇಕಾಗಿದೆ."

ಉತ್ತರವು ದೊಡ್ಡಪ್ಪನಿಗೆ ಸರಿ ಎನಿಸಲಿಲ್ಲ. ಸುಳ್ಳೆಂದೇ ತಿಳಿದನು. ಯಾವದೋ ತನ್ನ ಚಟಕ್ಕೆ ಬೇಕಾಗಿದೆ ಎಂದು ಅರ್ಥ ಮಾಡಿದನು.

"ನಾಲ್ಕು ದಿನಗಳಲ್ಲಿ ನನಗೆ ಮುಟ್ಟಿಸುವ ನೀನು ಅವನಿಗೆ ಹೇಳಿದರೆ ಅವನೂ ತಡೆಯಬಹುದು !"

"ಇಂದು ಕೊಡುವೆನೆಂದು ವಚನ ಕೊಟ್ಟಿರುವೆ."

ವಚನ ಶಬ್ದದಿಂದ ದೊಡ್ಡಪ್ಪನ ಮುಖದಲ್ಲಿ ನಗೆಯಾಡಿತು. ಈ ಮುಟ್ಠಾಳನು ವಚನದ ಮಹಾತ್ಮೆಯನ್ನು ನನ್ನ ಮುಂದೆ ಹೇಳುವನು ! ಇಂಥ ಕೀಳರೂ ವಚನದಂತೆ ನಡೆಯುವರೇ ? ಇದೆಲ್ಲ ಸುಳ್ಳು. ಸಂಪೂರ್ಣ ಸುಳ್ಳೆಂದೇ ಗ್ರಹಿಸಿ—

"ರೂಪಾಯಿಗಳನ್ನು ನಾಲ್ಕು ದಿನಗಳಲ್ಲಿ ನನಗೆ ಹೇಗೆ ಮುಟ್ಟಿಸುವೆ ರಾಜಣ್ಣ ?" ಎಂದು ಪರೀಕ್ಷಿಸುವಂತೆ ಕೇಳಿದನು.

ಈ ಪ್ರಶ್ನೆ ರಾಜಣ್ಣನ ಮರ್ಮಸ್ಥಾನಕ್ಕೆ ತಗಲಿತು. ತಾನು ಕೀಳನಿರಲಿ, ಹೀನನಿರಲಿ, ಸಾಮಾನ್ಯವಾದ ಅಭಿಮಾನವು ವ್ಯಕ್ತಿಗತ ಸತ್ವವೆಂದು ರಾಜಣ್ಣನ ಭಾವನೆಯು. ಆದರೆ ಇದೆಂತಹ ಪ್ರಶ್ನೆ ? ತನ್ನಲ್ಲಿ ಹತ್ತು ರೂಪಾಯಿಗಳನ್ನು ಮುಟ್ಟಿಸುವ ಯೋಗ್ಯತೆ ಇಲ್ಲವೆಂದು ದೊಡ್ಡಪ್ಪನು ತಿಳಿದ ವಿಷಯ. ಇದು ನಿಶ್ಚಯ. ಈ ನಿಶ್ಚಯದಿಂದಲೇ ಹೀಗೆ ಕೇಳಿರುವರು ಎಂದು ಸಿದ್ಧಾಂತ ಮಾಡಿಕೊಂಡನು. ಒಂದಿಷ್ಟು ಸಿಟ್ಟೂ ಬಂದಿತು.

"ಮನೆಯಲ್ಲಿ ನಾಲ್ಕಾರು ಹಂಡೆಗಳಿವೆ, ಏಳೆಂಟು ತಪ್ಪೇಲಿಗಳಿವೆ ದೊಡ್ಡಪ್ಪ. ಎಲ್ಲಿಯೂ ಸಿಕ್ಕದಿದ್ದರೆ ಅವುಗಳನ್ನು ಮಾರಿ ತೀರಿಸುವೆ" ಎಂದು ನುಡಿದನು.

ರಾಜಣ್ಣನ ಮಾತು ಸತ್ಯವಿದ್ದರೂ ದೊಡ್ಡಪ್ಪನ ಬಿಳಿ ಕೂದಲಿನ ಹಣ್ಣುತಲೆಗೆ ಪೆಟ್ಟುಬಿದ್ದಿತು. ಅಭಿಮಾನಕ್ಕೂ ಏಟು ಬಿದ್ದಿತು. ಆದರೂ ತೋರಗೊಡದೆ - "ಹಾಗಾದರೆ ಅವುಗಳನ್ನೇ ಮಾರಿಕೊಡಬಾರದೇಕೆ ? ನನ್ನ ಬಾಗಿಲಿಗೆ ಬರುವದಾದರೂ ತಪ್ಪುತ್ತಿತ್ತು."

"ತಡೆದು ಮಾರಿದರೆ ನಾಲ್ಕಾರು ದುಡ್ಡು ಹೆಚ್ಚು ಬರಬಹುದು; ಹಳ್ಳಿಯಲ್ಲಿ ಮಾರುವದಕ್ಕಿಂತ ಪಟ್ಟಣಕ್ಕೆ ಒಯ್ದು ಮಾರಿದರೆ ಇನ್ನೂ ನಾಲ್ಕಾರು ದುಡ್ಡು ಹೆಚ್ಚು ಬಂದಾವು. ಅದಕ್ಕೆ ನಿಂತಿರುವೆ...."

"ಈ ಬುದ್ಧಿ ಎಲ್ಲ ವ್ಯವಹಾರಕ್ಕೂ ಬೇಕು ರಾಜಣ್ಣಾ. ನಿನ್ನ ಮನೆ, ನಿನ್ನ ಹೊಲ, ನಿನ್ನ ಲಾಭ........"

"ದೊಡ್ಡಪ್ಪ ನಿಮ್ಮ ಉಪದೇಶವನ್ನು ಕೇಳಲು ಇನ್ನೊಂದು ದಿನ ಬರುವೆ. ವೇಳೆಯನ್ನು ಉಳಿಸಿಕೊಂಡೇ ಬರುವೆ. ಈಗ ಹಣವಿದ್ದರೆ ಕೊಡಿರಿ." ಮುಟ್ಟಿಸುವ ಆತುರದಿಂದ ಕೇಳಿದನು.

ದೊಡ್ಡಪ್ಪನ ಪಿತ್ತ ಒಮ್ಮೆಲೆ ನೆತ್ತಿಗೇರಿತು. ಅಭಿಮಾನಧನರಾದ ತಮ್ಮನ್ನು ತಮ್ಮ ಮುಂದೆ ಬೆಳೆದುಬಂದ ಒಬ್ಬ ಪೋರನು ಹೀಗೆ ಬೀಳುಗಳೆದು ಮಾತಾಡುವದೇ ! ಅಡಿಕೆಯು ನೆತ್ತಿಗೆ ಹತ್ತಿದಂತೆ ಚಡಪಡಿಸಿದರು. ತಲೆಯು ಬಿಸಿಯಾಯಿತು. ಮುಖವು ಕೆಂಪಾಯಿತು. ಸಿಟ್ಟಿನ ಕಾವು ಶರೀರದ ತುಂಬ ಸಂಚರಿಸಿತು. ಈ ದುಷ್ಟನ ನಾಲಗೆಗೆ ಹತ್ತುವದೂ ಕಷ್ಟ, ಬಿಡುವದೂ ಕಷ್ಟ ! ಮಾತು ಮಾತಿಗೆ ತಮ್ಮ ಹಿರಿಮೆಯ ಅವಹೇಳನ. ಕೋಪದ ಭರದಲ್ಲಿ ಸಾರಾ ಸಾರ ವಿಚಾರವನ್ನು ಮರೆತು "ನನ್ನ ಮನೆಯೆಂದರೆ ಇಂಪೀರಿಯಲ್ ಬ್ಯಾಂಕಲ್ಲ !" ಎಂದು ಗಟ್ಟಿಯಾಗಿ ನುಡಿದರು.

"ನನಗೆ ಗೊತ್ತು ದೊಡ್ಡಪ್ಪ."

"ಹಾಗಾದರೆ ಏಕೆ ಬಂದೆ ?"

"ದೊಡ್ಡಪ್ಪನೆಂದು !"

"ಈ ಒಣ ಸಂಬಂಧವನ್ನಿಟ್ಟುಕೊಂಡು ನನ್ನ ಮನೆಯ ಬಾಗಿಲಿಗೆ ಬರಲು ನಿನಗೆ ನಾಚಿಕೆಯೆನಿಸಲಿಲ್ಲವೇ ! ಹೊರಡು. ಹೊರಡು !"

ಎಂದು ಆಕ್ರೋಶದಿಂದ ನುಡಿದನು.

"ಹೊರಟೆ. ತಂದೆ ಸತ್ತ ಮೇಲೆ ನೀವಾದರು ಹಿರಿಯರು ಉಳಿದಿರುವಿರೆಂದು ತಿಳಿದಿದ್ದೆ. ನೀವು ನನ್ನ ತಂದೆಯ ಮೊದಲೇ ಸತ್ತಿರುವಿರೆಂದು ಈಗ ಅರಿತುಕೊಂಡೆನು. ಹೀಗೆ ಸತ್ತು ಮಾತಾಡು ವವರಿಂದ ನನಗೆ ಹಣವೇ ಬೇಡ. ಹೊರಟೆ." ಹೊರಟೇಬಿಟ್ಟನು.

ಕಕ್ಕ ಸಿಬಿರು ಮುರಿಯಲಿಲ್ಲ. ಎಲೆ ಹಚ್ಚಲಿಲ್ಲ. ರಾಜಣ್ಣನ ಮಾತುಗಳನ್ನು ಚರ್ಚಿಸುತ್ತ ಕುಳಿತನು.

ರಾಜಣ್ಣನು ಅಲ್ಲಿಂದ ಹೊರಟು ನೇರವಾಗಿ ಗುಳ್ಳಪ್ಪನ ತೋಟದ ಅಣ್ಣಪ್ಪನ ಮನೆಗೆ ಬಂದನು. ರೈತನು ಮನೆಯಲ್ಲಿದ್ದನು. ರಾಜಣ್ಣನ ಬರವನ್ನು ಕಂಡು ಆದರದಿಂದ ಬರಮಾಡಿಕೊಂಡನು. ಕುಡಿಯಲು ಹಾಲು ಕೊಟ್ಟನು. ಬಂದ ಕಾರಣವನ್ನು ಕೇಳಿದನು. ರಾಜಣ್ಣನು ಹತ್ತು ರೂಪಾಯಿಯ ಅಗತ್ಯವನ್ನು ಹೇಳಿದನು.

"ಹತ್ತು ರೂಪಾಯಿ ಸಾಕೇ !" ಎಂದು ಕೇಳಿದನು.

ಮಾತು ವಿಚಿತ್ರವೆನಿಸಿತು. ಇದೇನು ಸೌಜನ್ಯದ ಪ್ರಶ್ನೆಯೋ, ಅಣಕದ ಮಾತೋ ! ರಾಜಣ್ಣನಿಗೆ ತಿಳಿಯಲಿಲ್ಲ. ದೊಡ್ಡಪ್ಪನ ಸಂಗಡ ಇದೇ ವಾದ ಹಾಕಿ ಮಾತಿನ ಒಳ ಹೊರಗಿನ ಗುಟ್ಟನ್ನು ಅರಿತಿದ್ದನು. ಆದರೂ ಧೈರ್ಯ ! ದೊಡ್ಡಪ್ಪನಂತೆ ಅಣ್ಣಪ್ಪ ಕಲಿತವನಲ್ಲ. ಸುಸಂಸ್ಕೃತನಲ್ಲ. ದೊಡ್ಡಸ್ತನಕ್ಕೆ ಹೆಸಿದವನಲ್ಲ. ಹಿರಿತನಕ್ಕೆ ಆಶಿಸಿದವನಲ್ಲ. ಸರಳಜೀವಿ. ಸರಳ ಸ್ವಭಾವಿ. ಸರಳವಾಗಿ ಮಾತಾಡುವವ. ಎಂದು ನಂಬಿ—

"ಹತ್ತು ರೂಪಾಯಿಗಳಾದರೆ ಸಾಕು." ಎಂದನು.

"ಹತ್ತು ರೂಪಾಯಿ ಕೊಡುವ ನಿಮಗೆ...."

"ನನಗೇನು ?"

"ಮನೆಗೆ ಬೇಕಾದರೆ ಒಂದೆರಡು ಕೊಡಬೇಕೆಂದಿರುವೆ. ಅದಕ್ಕೆ ಕೇಳಿದೆನು." ಎಂದು ನುಡಿದನು ಅಣ್ಣಪ್ಪ.

ರಾಜಣ್ಣನು ಅತ್ಯಾಶ್ಚರ್ಯಪಟ್ಟನು. ದೊಡ್ಡಪ್ಪನೆಲ್ಲಿ, ಅಣ್ಣಪ್ಪನೆಲ್ಲಿ! ಒಬ್ಬ ರಕ್ತ ಸಂಬಂಧಿಕ, ಇನ್ನೊಬ್ಬ ಹೊಲದ ಸಂಬಂಧಿಕ. ಒಬ್ಬ ಕಲಿತವ. ಒಬ್ಬ ಕಲಿಯದವ. ಒಬ್ಬ ಬೇಡಿದಷ್ಟು ಕೊಡಲು ಹಿಂಜರಿಯುವ. ಒಬ್ಬ ಹೆಚ್ಚು ಹಣವನ್ನು ಕೊಡಬೇಕೇ! ಎಂದು ಕೇಳುವ. ಈ ವ್ಯವಹಾರ ಧರ್ಮದ ಗುಟ್ಟೇ ತಿಳಿಯಲಿಲ್ಲ! ಮನಸು ಇಲ್ಲಿ ಹಣವು ಸಿಕ್ಕುವದು ಎಂದು ನಂಬಿಕೊಂಡಲ್ಲಿ, ಸಿಕ್ಕಲಿಲ್ಲ; ಇಲ್ಲಿ ಸಿಗದು ಎಂದು ತಿಳಿದುಕೊಂಡಲ್ಲಿ ಹೆಚ್ಚು ಹಣ ಸಿಕ್ಕುವದು! ಈ ವೈಚಿತ್ರ್ಯದ ನಿರ್ಣಯವು ಅಸಾಧ್ಯವಾಯಿತು. ಏನು ಹೇಳಲಿ? ಎಂದು ಆಲೋಚಿಸುವಷ್ಟರಲ್ಲಿ ಅಣ್ಣಪ್ಪನು ಇಪ್ಪತ್ತು ರೂಪಾಯಿಗಳನ್ನು ಮುಂದೆ ಇಟ್ಟು ಇಷ್ಟನ್ನು ಈಗ ತೆಗೆದುಕೊಂಡು ಹೋಗಿರಿ. ಮುಂದೆ ಮಾತಾಡಿಕೊಳ್ಳುವೆ."

ರೂಪಾಯಿಗಳನ್ನು ರಾಜಣ್ಣನು ಎತ್ತಿಕೊಂಡನು.

"ಕೊಟ್ಟ ರೂಪಾಯಿಗಳು ಎಷ್ಟೆಂಬುದು ನೆನಪಿನಲ್ಲಿರಲಿ."

"ನೆನಪಿದೆ ಅಣ್ಣಪ್ಪ ಈವರೆಗೆ ನೂರು ರೂಪಾಯಿಗಳಾದವು. ಆಹುದೇ?" ಎಂದು ಕೇಳಿದನು.

"ಹ....ಹ....ನೆನಪಿನಲ್ಲಿರಬೇಕು ರಾಜಣ್ಣ."

"ಉಪಕಾರ ಮಾಡಿದೆ."

"ಉಪಕಾರವೆಂಥದು ರಾಜಣ್ಣ! ನಿಮ್ಮ ತೋಟದಿಂದ ಬೆಳೆದಿರುವೆ. ಎರಡು ಹೊತ್ತು ಊಟ ಮಾಡುವೆ. ದೇವರಂತಹ ನಿಮ್ಮ ತಂದೆಯವರು ನನ್ನ ತಂದೆಯನ್ನೂ ಕಾಯ್ದುಕೊಂಡು ಬಂದರು. ನನ್ನನ್ನೂ ಉಳಿಸಿಕೊಂಡು ಬಂದರು. ಊರವರ ಕಣ್ಣು ಈ ತೋಟದ ಮೇಲೆ ಬಹಳ. ಸಾವಿರ ಜನರು ಸಾವಿರ ಮಾತಾಡಿದರೂ ನಿಮ್ಮ ತಂದೆಯವರು ಆ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ನಮ್ಮಿಂದ ತೋಟವನ್ನು ಬಿಡಿಸಲಿಲ್ಲ. ತೋಟ ಬಿಡಿಸಿದರೆ ಒಂದು ಹಿಡಿ

ರಾಗಿಯ ಮುದ್ದೆಗೂ ನನಗೆ ಗತಿ ಇಲ್ಲ. ನಾನು ಉಣ್ಣುವದು ನಿಮ್ಮದೇ ಉಪಕಾರ !" ಎಂದು ವರ್ಣಿಸಿದನು.

"ಇನ್ನು ಹೋಗುವೆ." ಎಂದು ರಾಜಣ್ಣನು ಹೇಳಿ ಅಲ್ಲಿಂದ ಚೆನ್ನನ ಅಂಗಡಿಗೆ ಬಂದನು. ಚೆನ್ನನು ಅಂಗಡಿಯಲ್ಲಿದ್ದನು. ಅವನಿಗೆ ಹತ್ತುರೂಪಾಯಿಗಳ ನೋಟನ್ನು ಕೊಟ್ಟು "ಮುಟ್ಟಿತು ಚೆನ್ನಪ್ಪ." ಎಂದು ನುಡಿದನು.

"ಮುಟ್ಟಿದವು. ವಚನದಂತೆ ನಡದೆ ರಾಜಣ್ಣ. ಏನಾದರೂ ಬೇಕಾದರೆ ತೆಗೆದುಕೊಂಡು ಹೋಗುತ್ತ ಬಾ !" ಎಂದು ಹೇಳಿದನು.

"ಹಾಗಾದರೆ ನನಗೆ ಈಗ ಅಕ್ಕಿ, ಹಿಟ್ಟು, ಬೇಳೆ ಒಂದಿಷ್ಟು ಕೊಡು." ಎಂದನು.

"ಎಷ್ಟು ಕೊಡಲಿ ?"

ರಾಜಣ್ಣನು ಯಾದಿಯನ್ನು ಬರೆದುಕೊಟ್ಟನು. ಚೆನ್ನನು ಹೇಳಿದಂತೆ ಸಾಮಾನುಗಳನ್ನು ಅಳೆದನು. ರಾಜಣ್ಣನು ಕಟ್ಟಿಕೊಂಡು ಮನೆಗೆ ಬಂದನು.

ಅಂದಿನ ವ್ಯವಹಾರದಿಂದ ರಾಜಣ್ಣನಿಗೆ ವಿಚಿತ್ರವೆನಿಸಿದ್ದಿತು. ಒಂದು ಕಡೆಗೆ ಅವಮಾನದಿಂದ ಇಲ್ಲಾದರೂ, ಇನ್ನೊಂದು ಕಡೆಗೆ ಮಾನದಿಂದ ತುಂಬಿ ಬಂದಿತು ! ಇದೇನು ? ಹೀಗೇಕೆ ? ಈ ನಿರುಕ್ತ ಸಮಸ್ಯೆಯಿಂದ ಒಂದು ಬಗೆಯ ಹಿತವೆನಿಸುತ್ತಿದ್ದಿತು. ದೊಡ್ಡ ಮೋರೆಯನ್ನು ಮಾಡಿಕೊಂಡು ಮನೆಗೆ ಬಂದನು.

## ೨೩

ಅಕ್ಕಾಮರಿಯು ತವರೂರಿಗೆ ಬಂದಮೇಲೆ ಎಲ್ಲವೂ ವಿಚಿತ್ರವೆನಿಸಹತ್ತಿತು. ತಾಯಿಯ ಮನೆ, ಮನೆಯ ಸ್ಥಿತಿಗತಿ, ರೀತಿ ನೀತಿ ಹೊಸ ಹೊಸದಾಗಿ ಕಾಣಹತ್ತಿದವು. ಗಂಡನ ಮನೆಯಲ್ಲಿ ಬೈಗುಳ, ಬಡಿತ, ಉಪವಾಸ, ವನವಾಸಗಳನ್ನು ಅನುಭವಿಸಿ ಜೀವನದ ಕಷ್ಟ-ನಷ್ಟಗಳನ್ನು ಉಂಡು ಬದುಕಿನ ಮೇಲೆ ಜಿಗುಪ್ಸೆಗೊಂಡ ಜೀವ ಹರ್ಷ ಪುಲಕಿತವಾಯಿತು. ಇಂಥ ಸುಖವನ್ನು ನನ್ನ ಜೀವವೂ ಆಶಿಸುತ್ತಿದ್ದಿತು. ಆಶಿಸದೇನು ಮಾಡೀತು? ಎಂದು ನುಡಿದುಕೊಂಡಳು.

ತಾಯಿಯು—ತನ್ನವರೆಂಬುವವರನ್ನು ಹರಿದುಕೊಂಡು ನಿಂತ ಸರಳ ಸ್ವಚ್ಛಂದ ಜೀವಿಯೆಂದೂ, ಗಂಡನನ್ನು ಕಳೆದುಕೊಂಡು ಬಾಳುವ ವಿಧವೆಯೆಂದೂ, ಸನ್ಯಾಸಿ ವ್ರತದ ಸಾರೂಪ್ಯದ ಜೀವಿಯೆಂದೂ, ಬೆಡಗು ಬಿನ್ನಾಣಗಳನ್ನು ಕಳೆದುಕೊಂಡ ನಿಸರ್ಗದಗ್ಧ ಪ್ರಕೃತಿಯುಳ್ಳವಳೆಂದೂ, ಒಂದು ಹೊತ್ತು ಊಟದ ಪ್ರಾಣಿಯೆಂದೂ, ಕೆಲಸ—ಬೊಗಸೆಯ ತರುವಾಯ ದೇವರ ಚಿಂತನೆಯಲ್ಲಿ ಕಳೆಯುವ ಸಾಧು-ಸಂತಳೆಂದೂ ತಿಳಿದುಕೊಂಡ ಭಾವನೆಗಳೆಲ್ಲ ತಲೆಕೆಳಗೆ ಕಾಲು ಮೇಲಾದವು. ಇಂದು ಅವಳ ಮನೆಯು ಒಂದು ಅಲಂಕಾರದ ಕರಡಿಗೆ. ನೋಡಿದಲ್ಲಿ ಶೃಂಗಾರ. ಕಂಡಲ್ಲಿ ರಮ್ಯತೆ. ಕಣ್ಣಿಟ್ಟಲ್ಲಿ ಬೆಡಗು. ಬೆರಳಿಟ್ಟಲ್ಲಿ ಚೆಲುವು. ಇದು ತಾಯಿಯ ಮನೆಯೋ? ತಂದೆಯನ್ನು

ಕಳೆದುಕೊಂಡ ತನ್ನ ತಾಯಿಯ ಮನೆಯೋ? ಗೃಹಸ್ಥ ಜೀವನದ ಸುಖ ಸಂತೋಷಗಳನ್ನು, ಉಲ್ಲಾಸ ವೈಭವಗಳನ್ನು ತೋರ್ಪಡಿಸುವ ಈ ಮನೆಯು ತನ್ನ ತಾಯಿಯದೇ? ವಿಧವೆಯಾದ ತನ್ನ ತಾಯಿಯ ಮನೆಯೋ! ಎಂದು ಹಲವು ಸಾರೆ ಪ್ರಶ್ನಿಸಿಕೊಂಡಳು. ಆದರೆ ಅದು ತಾಯಿಯ ಮನೆಯಿದ್ದುದು ನಿಜವಿದ್ದಿತು. ಏಳೆಂಟು ದಿನಗಳಲ್ಲಿ ಆ ಪ್ರಶ್ನೆ, ಸಂಶಯಗಳ ಆವೇಗವು ಕಡಮೆಯಾಯಿತು. ತನ್ನ ತಾಯಿಯ ಮನೆಯೆಂದೇ ಗಟ್ಟಿಯಾಯಿತು.

ಪಡಸಾಲೆಯ ಎದುರು ಗೋಡೆಗೆ ಲಕ್ಷ್ಮೀ-ನಾರಾಯಣರ ಭವ್ಯವಾದ ಫೋಟೋ. ಮಕಮುಲಿನ ಅರಿವೆಯ ಹಿನ್ನೆಲೆಯನ್ನಿಟ್ಟು ಲಕ್ಷ್ಮೀ-ನಾರಾಯಣರ ಚಿತ್ರವನ್ನು ಅಂಟಿಸಿ ಜರಿ ತುಂಬಲಾಗಿದ್ದಿತು. ಪಕ್ಕದಲ್ಲಿ ಮಧ್ವಾಚಾರ್ಯರ ಚಿತ್ರ. ಇನ್ನೊಂದು ಮಗ್ಗಲು ಪುರಂಧರ ದಾಸರ ನೃತ್ಯ ಚಿತ್ರ. ಎಡಬಲದ ಗೋಡೆಗಳಿಗೆ ಗಾಂಧಿ-ನೆಹರೂರವರ ಎತ್ತರವಾದ ತೈಲಚಿತ್ರ. ಗೋಡೆಯು ಸುಣ್ಣ-ಬಣ್ಣದ್ದು. ಒಂದು ಕಡೆಗೆ ನಾಲ್ಕಾರು ಕುರ್ಚಿ. ನಡುವೆ ಒಂದು ತೂಗು ಮಂಚ. ಇನ್ನೊಂದು ಕಡೆಗೆ ನೆಲಕ್ಕೆ ದಪ್ಪನ್ನ ಜಮಖಾನೆಯನ್ನು ಹಾಸಿದೆ. ಒಂದು ದೊಡ್ಡ ದಿಂಬು. ದಿಂಬಿಗೆ ಬಿಳಿಯ ಅರಿವೆಯ ಗವಸಣಿಗೆ. ಒಳಮನೆಯ ಒಂದು ಕೋಣೆಯಲ್ಲಿ ಪಲಂಗು. ಹಸಿರು ಬಣ್ಣವನ್ನು ಸವರಿದೆ. ಪಲಂಗಿನ ಮೇಲೆ ಗೇಣೆತ್ತರದ ಗಾದಿ. ಸುಂದರವಾದ ಮುಗ್ಗಲ ಹಾಸಿಗೆ. ಕಾಲ ದೆಸೆಯಲ್ಲಿ ಬಿಳಿಯ ಸಣ್ಣ ನೂಲಿನ ಕಂಬಳಿ. ಒಂದು ಚದ್ದರು. ಪಲಂಗಿನ ಸುತ್ತ ಇಳಿಬಿಟ್ಟ ಸಣ್ಣ ಕಣ್ಣಿನ ಪರದೆ. ಹತ್ತರವೇ ಒಂದು ಕುರ್ಚಿ. ಪಕ್ಕದಲ್ಲಿ ಒಂದು ಸಣ್ಣ ಟೇಬಲು. ಅದರ ಮೇಲೆ ಎಲೆಯ ಡಿಕೆಯ ಹಿತ್ತಾಳಿಯ ಡಬ್ಬಿ. ನೋಡಿದರೆ ಮುಖ ಕಾಣಬೇಕು ಅಷ್ಟು ಲಕಲಿತ. ಅಷ್ಟು ನುಣುಪು. ಮಂಚದ ಎದುರು ಗೋಡೆಗೆ ನಿಲು ಗನ್ನಡಿ. ಬಂಗಾರದ ಬಣ್ಣದ ದಪ್ಪವಾದ ಚೌಕಟ್ಟಿನಲ್ಲಿ ಗೋಡೆಗೆ. ತೂಗು ಬಿದ್ದಿದೆ. ಕೋಣೆಯ ತುಂಬ ಅತ್ತರದ ವಾಸನೆ ಕಾಲಕೆಳಗೆ ಒಂದು ಮೆತ್ತನ್ನ ಹಗ್ಗದ ಹಾಸಿಗೆ.

ಅಡಿಗೆಯ ಮನೆಯಲ್ಲಿ ಕಪ್ಪು, ಬಸಿ, ಚಮಚ, ತಾಟು, ಬಟ್ಟಲು, ಡಬ್ಬಿ, ತಪ್ಪೇಲಿ, ತಂಬಿಗೆ, ಬಟ್ಟಲ, ತಾಲಿಗಳು ಮಿರುಗಿಡು ತ್ತಿವೆ. ಎಲ್ಲ ಕಡೆಗೆ ವ್ಯವಸ್ಥೆ, ಎಲ್ಲ ಕಡೆಗೆ ಓರಣ. ಗೋಡೆಗೆ ತೂಗುಬೀಳುವವು ತೂಗುಬಿದ್ದಿವೆ. ಕಪಾಟಿನಲ್ಲಿರುವವು ಕಪಾಟಿನಲ್ಲಿವೆ. ನೆಲದ ಮೇಲಿರುವವು ನೆಲದಮೇಲಿವೆ. ನೋಡಿದರೆ ಒಂದು ಕಣ್ಣಳತೆ ಯಲ್ಲಿವೆ. ಎಲ್ಲವೂ ಕಾಣುವವು. ನಿತ್ಯ ಉಪಯೋಗದಂತೆ ತೋರು ವವು. ನೋಡಿ ಅಕ್ಕಾಮರಿಯು ಬೆಕ್ಕಸ ಬೆರಗಾದಳು. ಮನೆಯ ಅಚ್ಚುಕಟ್ಟುತನವನ್ನು ಕೊಂಡಾಡಿದಳು? ಇವೆಲ್ಲ ಹೇಗೆ? ನಾಲ್ಕೈದು ಜನರ ಒಂದು ಕುಟುಂಬವು ವಾಸಮಾಡುವಷ್ಟು ಪಾತ್ರೆ ಪದಾರ್ಥ ಗಳಿವೆ! ಹಾಸಿಗೆ ಇವೆ! ಹೊದ್ದುಕೊಳ್ಳಲಿಕ್ಕೆ ಇವೆ! ಇದೇನು? ತಾಯಿಯು ತನಗೆ ಬರುವ ಇನ್ನೂರು ರೂಪಾಯಿಗಳಲ್ಲಿ ಇಷ್ಟೆಲ್ಲವನ್ನೂ ಹೇಗೆ ಮಾಡಬಲ್ಲಳು? ಹೇಗೆ ಮಾಡಿದಳು? ಮಾಡುವದು ಸಾಧ್ಯವೇ? ಬಿಚ್ಚಲಾರದ ಒಗಟಾಯಿತು.

ಈ ಸಮಸ್ಯೆಯನ್ನು ಬಿಡಿಸಲು ತಡವಾಗಲಿಲ್ಲ.

ಅಕ್ಕಾಮರಿಯು ಊರಿಗೆ ಬಂದ ಏಳೆಂಟು ದಿನಗಳಲ್ಲಿ ಚಿನ್ನಯ್ಯ ನವರ ಸವಾರಿಯು ಆಗಮಿಸಿತು.

ಪುಟ್ಟವ್ವನು ಆದರದಿಂದ ಬರಮಾಡಿಕೊಂಡಳು. ಮಂಚದ ಮೇಲೆ ಕೂಡ್ರ ಹೇಳಿದಳು. ಒಂದೆರಡು ಸುಖದ ಮಾತುಗಳನ್ನು ಕೇಳಿದಳು. ಚಹ ಮಾಡಿ ಕಪ್ಪಿನಲ್ಲಿ ತುಂಬಿ ತಂದು ಇಟ್ಟಳು. ಇನ್ನೊಂದರಲ್ಲಿ ಉಂಡೆ, ಖಾರದ ಅವಲಕ್ಕಿಯನ್ನು ತುಂಬಿ ತಂದಿಟ್ಟಳು. ತಾನೂ, ಅಕ್ಕಾಮರಿಯೂ ಒಂದೊಂದು ಕಪ್ಪಿನಲ್ಲಿ ಚಹ ಹಾಕಿಕೊಂಡು ಚಿನ್ನಯ್ಯನ ಎದುರು ಬಂದು ಕುಳಿತರು.

"ಇವರೆಂದು ಬಂದಿರುವರು ಪುಟ್ಟವ್ವನವರೇ ?" ಎಂದು ಚಿನ್ನಯ್ಯನು ಉಂಡೆಯನ್ನು ಕಡಿಯುತ್ತ ಕೇಳಿದನು.

"ಬಂದು ಬಹಳ ದಿನಗಳಾದವು. ನಿಮಗೆ ತಿಳಿದಿರಬೇಕೆಂದು ಮಾಡಿದ್ದೆ. ನೀವೂ ಮನೆಯ ಕಡೆಗೆ ಬಾರದೆ ಬಹಳ ದಿನಗಳಾದವು."

ಎಂದು ಹುಸಿನಗುತ್ತ ಪುಟ್ಟವ್ವನು ನುಡಿದಳು.

"ಹೌದು. ನಾನು ಜಿಲ್ಲೆಗೆ ಹೋಗಿದ್ದೆ. ಈ ಸಾರೆ ಸೇಂಗಾದ ಬೆಳೆಯು ಇತ್ತಲಾಗಿ ಬಹಳ. ನನಗೆ ಸೇಂಗಾ ಬಹಳ ಬಂದಿದ್ದಿತು. ಇಂದಿನವರೆಗೆ ತಾಲೂಕಿನಲ್ಲಿಯೇ ಮಾರುತ್ತಿದ್ದೆ. ಆದರೆ ಈ ಸಾರೆ ಜಿಲ್ಲೆಯವರೆಗೆ ಹೋಗಿ ಆ ವ್ಯಾಪಾರದ ಮರ್ಮವನ್ನು ತಿಳಿದುಕೊಳ್ಳ ಬೇಕೆಂದು ಹೋಗಿದ್ದೆ. ಇಷ್ಟು ದಿನ ಅಲ್ಲಿಯೇ ಇದ್ದೆ. ನಿನ್ನೆ ಬಂದಿರುವೆನು. ನೀವು ಹೋಗಿರುವಿರೆಂದು ತಿಳಿಯಿತು. ಇಂದು ಬಂದೆ" ಎಂದು ಸಾತಾಡಿ ಮುಖದ ಮೇಲಿನ ಬೆವರನ್ನು ಒರಸಿ ಕೊಂಡನು.

"ಮತ್ತೆ ಸೇಂಗಾದ ವ್ಯಾಪಾರದಲ್ಲಿ ಲಾಭವಾಯಿತೇ ?"

"ಲಾಭದ ಮಾತು ಈಗಿಲ್ಲ. ಇನ್ನು ಮುಂದೆ."

"ಮತ್ತೇನು ! ನಿಮ್ಮ ಹಳ್ಳಿಯ ಸುದ್ದಿ ?"

"ಮತ್ತೇನಿರಬೇಕು ? ಅಪ್ಪಾರಾಯರ ಮನೆಯ ಅವಸ್ಥೆಯು ಹೀಗಾಗಬಾರದಿದ್ದಿತು !"

"ಏನು ಮಾಡುವದು ಚಿನ್ನಯ್ಯನವರೇ ! ಎಲ್ಲವೂ ದೇವರ ಆಟ."

"ಅಪ್ಪಾರಾಯರು ತೀರಿಕೊಂಡರು. ಅವ್ವಕ್ಕನು ಅವರ ಹಾದಿ ಯನ್ನು ಹಿಡಿಯಲಿರುವಳಂತೆ ! ಅವರ ಮನೆಯ ಪುಣ್ಯವೇ ಮುಗಿಯಿ ತೆನ್ನುವದು !"

"ಆ ಮುದುಕಿ ಇನ್ನೂ ಸತ್ತಿಲ್ಲವೇ ?" ಪುಟ್ಟವ್ವ ಕೇಳಿದಳು.

"ಸತ್ತ ಸುದ್ದಿಯು ಊರಲ್ಲಿ ಇಲ್ಲ. ಸತ್ತರೆ ಸುದ್ದಿಯಾಗ ದುಂಟೇ ! ಮೇಲಾಗಿ ರಾಜಣ್ಣ ವಿಚಿತ್ರ ಮನುಷ್ಯ. ಇದ್ದ ನಾಲ್ಕು ಮನೆಯ ಬ್ರಾಹ್ಮಣರ ಸಂಗಡ ಹೊಂದಿಕೆ ಇಲ್ಲ. ಅವರ ಸಹಾಯ ವನ್ನು ಕೇಳಲಾರ. ಆಲೋಚನೆಯನ್ನು ಮಾಡಲಾರ. ತಾನಾಯಿತು, ತನ್ನ ನಾಲ್ವರು ಘಟಿಂಗ ಗೆಳೆಯರಾಯಿತು. ಅವ್ವಕ್ಕ ಸತ್ತರೂ ಊರಿಗೆ ತಿಳಿಯಗೊಡದಂತಹ ಹಟವಾದಿ. ಅದು ಏನೇ ಇರಲಿ.

ಅವ್ವಕ್ಕ ಇನ್ನೂ ಜೀವದಿಂದಿರಬೇಕು."

ಪುಟ್ಟವ್ವನು ಸುಮ್ಮನಿದ್ದಳು. ಅಕ್ಕಾಮರಿಯು ತಲೆಯನ್ನು ಬಗ್ಗಿಸಿ ಹಾಗೇ ಕುಳಿತಿದ್ದಳು.

"ಪಾಪ ಅವ್ವಕ್ಕನಿಗೆ ಮುಪ್ಪಿನ ಕಾಲಕ್ಕೆ ಇಂಥ ಕಷ್ಟ ಬರಬಾರದು. ದೇವರು ಆಕೆಯನ್ನು ಬೇಗನೆ ಒಯ್ಯಬೇಕು."

"ನಮಗೂ ಹಾಗೆಯೇ ಎನಿಸುವದು. ಆದರೆ ಎಲ್ಲವೂ ನಮ್ಮ ಎಣಿಕೆಯಂತೆ ಎಲ್ಲಿ ನಡೆಯುವದು! ಅವಳು ತನ್ನ ಆಯುಷ್ಯ ತುಂಬುವವರೆಗೆ ಹೀಗೆಯೇ ದುಃಖ, ಕಷ್ಟವನ್ನು ಉಣ್ಣಬೇಕಲ್ಲ!"

"ಅಹುದು. ಯಾರ ಪ್ರಾರಬ್ಧಕರ್ಮವನ್ನು ಯಾರು ಬಲ್ಲರು! ನಮ್ಮ ದೈವದಲ್ಲಿ ಏನಿದೆಯೋ ಯಾರು ಬಲ್ಲರು."

ಈ ಒಣಹರಟೆಯಲ್ಲಿ ಚಹದ ಪ್ರಕರಣವು ಮುಗಿಯಿತು. ಆದರೂ ಮೊದಲಿನ ಮಾತಿನ ಎಳೆಯನ್ನು ಮುಂದೆ ಸಾಗಿಸುವಂತೆ ಚಿನ್ನಯ್ಯನು ಬಾಯಿ ಬಿಟ್ಟನು–

"ಅಪ್ಪಾರಾಯರು ಜೀವದಿಂದಿರುವವರೆಗೆ ಹಳ್ಳಿಯಲ್ಲಿ ಇನ್ನೊಬ್ಬನ ತಲೆಯನ್ನು ಎತ್ತಗೊಡಲಿಲ್ಲ. ಅವರ ದರ್ಪ, ಅಧಿಕಾರ ಅಂಥ ಪ್ರಖರವಾದುದು. ಅವರನ್ನು ಕಂಡರೆ ಊರಿಗೇ ಊರು ನಡುಗುತ್ತಿದ್ದಿತು. ಅವರ ಎದುರು ಯಾವ ಶಕ್ತಿಯೂ ನಿಲ್ಲುತ್ತಿರಲಿಲ್ಲ. ನನ್ನ ಶತ್ರುಗಳೇನೋ ಸರಿ. ನಾನೂ ದ್ವೇಷಿಸಿದೆ. ಆದರೆ ಒಂದು ದಿನ ಸಹ ನನಗೆ ಬಗ್ಗಲಿಲ್ಲ. ಮಣಿಯಲಿಲ್ಲ. ನನ್ನನ್ನು ಎಂದೂ ಗಣಿಸಿರಲಿಲ್ಲ. ಅವರ ವೈರವೂ ಹೆಚ್ಚಿನದು. ಹಟವೂ ದೀರ್ಘವಾದುದು. ಹಳ್ಳಿಯಲ್ಲಿ ಅಭಿಮಾನದಿಂದ ಬಾಳಿದರು. ಅಭಿಮಾನದಿಂದಲೇ ಮಗನ ಕೈಯಿಂದ ಪಾರಾದರು."

"ಅಹುದು. ಅವರಿರುವವರೆಗೆ ಮನೆಯು ಸ್ವರ್ಗದಂತಿದ್ದಿತು. ಈಗ ನರಕಕ್ಕೂ ಕೀಳು. ನನಗೆ ಕೆಡಕೆನಿಸಿ ಹೀಗೆ ನುಡಿಯುವೆ ಚಿನ್ನಯ್ಯನವರೇ!" ಎಂದು ಪುಟ್ಟವ್ವ ನುಡಿದುಬಿಟ್ಟಳು.

"ಅಕ್ಕಾಮರಿಯು ಇನ್ನೂ ಎಷ್ಟು ದಿನ ಇರುವರು?"

"ರಾಜಣ್ಣನು ಕರೆಯಲು ಬರುವವರೆಗೆ ಇಟ್ಟುಕೊಳ್ಳಬೇಕೆಂದು ಮಾಡಿರುವೆ."

"ಆ ಮುಟ್ಠಾಳನೇನು ಕರೆಯಲು ಬರುವನು! ಈಗ ಮನೆಯು ಒಂದು ಗಡಂಗವಾಗಿದೆ. ಆ ನಾಲ್ವರೂ ಘಟಿಂಗರು ಸದಾ ಮನೆಯಲ್ಲಿ ಇದ್ದಿರುವರು. ಹಿತ್ತಲ ತಿಪ್ಪೆಯಲ್ಲಿ ಕೋಳಿಯ ತುಪ್ಪಳಗಳೇ ಹಾರಾಡುವವು."

"ಅಂದರೆ?" ಪುಟ್ಟವ್ವ ಕೇಳಿದಳು.

"ಕೋಳಿಯನ್ನು ತಿನ್ನುತ್ತಿರಬೇಕು."

"ಕೋಳಿಯನ್ನು?"

"ಹ! ಹ!"

"ಕಲಿಕಾಲ ಚಿನ್ನಯ್ಯನವರೇ! ಎಂಥವರ ಹೊಟ್ಟೆಯಿಂದ ಎಂಥ ಮಗ! ಏನು ಮಾಡುವದು? ಮಗಳನ್ನು ನೋಡಿದರೆ ಉಡಿಯು ಬಡಿದಂತೆ ಎನಿಸುವದು! ಏನು ಮುದುಕಿಯೇ, ಇನ್ನೂ ಚಿಕ್ಕವಳು. ಇಂಥವಳನ್ನು ಆ ಹುಂಬನಿಗೆ ಕೊಟ್ಟು ಮಗಳ ಕುತ್ತಿಗೆಯನ್ನು ಕೊಯಿದೆನು. ಅಲ್ಲಿಯ ಅವಳ ಕಷ್ಟವನ್ನು ನೋಡಲಾರದೆ ಇಲ್ಲಿಗೆ ಕರೆದುತಂದಿರುವೆ" ಎಂದು ನುಡಿದಳು.

ಅಕ್ಕಾಮರಿಯು ಎದ್ದು ಒಳಗೆ ಹೋದಳು. ಪುಟ್ಟವ್ವನು ಲಿಲ್ಲಿಯನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಕೆನ್ನೆ-ತುಟಿಗಳನ್ನು ಹಿಂಡಿದಳು.

"ಇದು ಅಕ್ಕಾಮರಿಯ ಮರಿಏನು?"

"ಅಹುದು. ಇಂಥ ಮುದ್ದು ಮಗಳನ್ನು, ಅಂಥ ರೂಪವತಿಯಾದ ಹೆಂಡತಿಯನ್ನು ಮನೆಯಲ್ಲಿಟ್ಟುಕೊಂಡು ಬಾಳುವೆಯನ್ನು ಮಾಡುವ ಭಾಗ್ಯವು ಬರಬೇಕಾದರೆ ದೈವದ ಸಹಾಯ, ಅನುಕೂಲತೆ ಇರಬೇಕು."

"ಬಾ ಮಗು!" ಎಂದು ಚಿನ್ನಯ್ಯನು ಲಿಲ್ಲಿಯನ್ನು ಕರೆದನು.

ಮಗುವು ಹೋಗಲಿಲ್ಲ.

"ಹೋಗು ಮಗು. ಅವರು ನಮ್ಮವರು. ಹೋಗು" ಎಂದು ಎದ್ದು ಚಿನ್ನಯ್ಯನವರೆಗೆ ಮಗುವನ್ನು ಕಳಿಸಿದಳು.

ಚಿನ್ನಯ್ಯನು ಮಗುವನ್ನು ಎತ್ತಿಕೊಂಡನು, ಓಡಾಡಿದನು, ಕೆನ್ನೆಯಮೇಲೆ ಕೈಯಾಡಿಸಿದನು. ಮುದ್ದು ಕೊಟ್ಟನು, ಮಾತಾಡಿಸಿದನು, ನಗೆಯಾಡಿಸಿದನು. ಮಗುವು ಐದಾರು ನಿಮಿಷಗಳಲ್ಲಿ ಅವನ ಪರಿಚಯವನ್ನು ಮಾಡಿಕೊಂಡುಬಿಟ್ಟಿತು. ಚಿನ್ನಯ್ಯನ ಮುಖವನ್ನು ಮೇಲಿಂದಮೇಲೆ ನೋಡಹತ್ತಿತು.

"ನಿನ್ನ ಹೆಸರೇನು ?" ಎಂದು ತಲೆಯಮೇಲೆ ಕೈಯಾಡಿಸಿ ಕೇಳಿದನು.

"ಹೇಳು, ನಿನ್ನ ಹೆಸರೇನು ಹೇಳು ?" ಪುಟ್ಟವ್ವನು ಉತ್ತೇಜನವನ್ನು ಕೊಟ್ಟಳು.

"ನಿನ್ನ ಹೆಸರೇನು ಹೇಳು ? ಹೇಳಿದರೆ ಇನಾಮು ಕೊಡುವೆ!" ಎಂದನು.

"ಹೇಳು!" ಪುಟ್ಟವ್ವ ಪುನಃ ನುಡಿದಳು.

"ಲಿಲ್ಲಿ!" ಎಂದು ಅಸ್ಪಷ್ಟವಾಗಿ ನುಡಿಯಿತು.

ಚಿನ್ನಯ್ಯನು – "ಶಾಬಾಶ !" ಎಂದು ನುಡಿದು ಅಪ್ಪಿಕೊಂಡು ಮುದ್ದಿಟ್ಟನು.

ಪುಟ್ಟವ್ವನು ನಗಹತ್ತಿದಳು.

ಚಿನ್ನಯ್ಯನು ಕಿಸೆಯೊಳಗಿನ ಐದು ರೂಪಾಯಿ ತೆಗೆದು ಮಗುವಿನ ಕೈಯಲ್ಲಿ ಇಡುತ್ತ, ಇವುಗಳಿಂದ ನಿಮ್ಮ ಅಜ್ಜಿಗೆ ಅರಿವೆಯನ್ನು ಹೊಲಿಸಿಕೊಡೆಂದು ಹೇಳಿ ಮಗುವನ್ನು ಕೆಳಗೆ ಬಿಟ್ಟನು. ಲಿಲ್ಲಿಯು ಓಡುತ್ತ ಅಜ್ಜಿಯ ಬಳಿಗೆ ಬಂದಿತು.

ಈ ಮಗಳ ಲೀಲೆಯನ್ನು, ಚಿನ್ನಯ್ಯನ ಆಟವನ್ನು ಬಾಗಿಲಲ್ಲಿ ನಿಂತು ಅಕ್ಕಾಮರಿಯು ನೋಡುತ್ತಿದ್ದಳು. ತನ್ನ ಗಂಡನು ಒಂದು ದಿನ ಸಹ ತನ್ನ ಮಗಳನ್ನು ಪ್ರೀತಿಸಿರಲಿಲ್ಲ, ಆಡಿಸಿರಲಿಲ್ಲ, ನಗಿಸಿರಲಿಲ್ಲ, ಕೈಯಲ್ಲಿ ಹಣವನ್ನು ಕೊಟ್ಟಿರಲಿಲ್ಲ. ಅವೆಲ್ಲ ರುಕ್ಷ ಪ್ರಸಂಗಗಳು

ಒಮ್ಮೆಲೆ ನೆನಪಾದವು. ಗಂಡನ ಒರಟು ಸ್ವಭಾವಕ್ಕೆ ಸಿಟ್ಟೊ ಬಂದಿತು. ಚಿನ್ನಯ್ಯನನ್ನು ಕದ್ದು ಕದ್ದು ನೋಡಿದಳು. 'ಎಂಥ ನಗೆ ಮುಖ, ಎಂಥ ತುಂಬಿದ ಮುಖ. ತನ್ನ ಗಂಡನ ಒಣಗಿದ ಮುಖವೆತ್ತ. ಇವರ ರಸರಸಿತ ಮುಖವೆತ್ತ?' ಎಂದುಕೊಂಡಳು. ಆದರೂ 'ಅವನು ಗಂಡನು. ಇವನು ಪರಿಚಯುದವನು!' ಎಂದು ಅಂತಃಸಾಕ್ಷಿ ತಿಳಿಹೇಳಿತು.

"ಒಳ್ಳೇದು!" ಚಿನ್ನಯ್ಯನು ಹೊರಡುವ ಸಿದ್ಧತೆಯಿಂದ ಎದ್ದನು.

"ಹೊರಟರೇನು?" ಪುಟ್ಟವ್ವ ಕೇಳಿದಳು.

"ಹ!"

"ವೇಳೆಯಾಗಿದೆ. ಇಂದು ಊಟವನ್ನು ಇಲ್ಲಿಯೇ ಮಾಡಿರಿ. ಇನ್ನೆಲ್ಲಿ ಹೋಗುವದು."

"ನನಗೆ ಹಸಿವೆ ಇಲ್ಲ."

"ಇದ್ದಷ್ಟು?"

"ಬರುವ ಮುಂದೆ ಊಟವನ್ನು ಮಾಡಿ ಬಂದಿದ್ದೆ. ಮೇಲೆ ನಿಮ್ಮ ಫರಾಳವಾಯಿತು. ಒಂದು ತುತ್ತಿಗೂ ಸ್ಥಳವಿಲ್ಲ. ಒಂದಿಷ್ಟು ಅಡ್ಡಾಡಿಕೊಂಡು ಊರ ಹಾದಿಯನ್ನು ಹಿಡಿಯುವೆ" ಎಂದು ಹೋಗಲಾರದ ಮನಸಿನಿಂದ ಮನೆಯಲ್ಲಿ ಅತ್ತಿತ್ತ ಅಡ್ಡಾಡಹತ್ತಿದನು.

"ಒಂದಿಷ್ಟು ಬಿಸಿ ಅನ್ನ! ನೀವು ತಂದುಕೊಟ್ಟ ಸಣ್ಣಕಾಳು ಇನ್ನೂ ಇವೆ. ನಿಮ್ಮ ಹೆಸರಿನಿಂದ ಅಕ್ಕಾಮರಿಯೂ ಉಣ್ಣುವಳು."

"ಏನೂ ಬೇಡ. ನನಗಂತೂ ಹಸಿವೆ ಇಲ್ಲ. ಅಕ್ಕಾಮರಿಗೆ ಮಾಡಿ ಹಾಕಿರಿ. ಅವಳು ಉಂಡಳೆಂದರೆ ನನಗೆ ಸಂತೋಷ. ಲಿಲ್ಲಿಯು ಉಣ್ಣುವದೇನು?"

"ನೀವು ನಿಂತು ನೋಡಬೇಕು."

"ಆಗಲಿ. ಹಾಗಾದರೆ ನಿಲ್ಲುವೆ." ಎಂದು ಕೋಟು, ರುಮಾಲು ತೆಗೆದು ಗೂಟಕ್ಕೆ ಹಾಕಿದನು. ಮಂಚದ ಮೇಲೆ ಮೆಲ್ಲಗೆ ಅಡ್ಡಾದನು.

ಅಂದು ರಾತ್ರಿ ಪುಟ್ಟವ್ವನು ಸಣ್ಣಕ್ಕಿಯ ಅನ್ನವನು

ಮಾಡಿದಳು. ಸಂಡಿಗೆಯನ್ನು ಕರಿದಳು. ಹಪ್ಪಳವನ್ನು ಸುಟ್ಟಳು. ಪುಠಾಣಿಯ ಚಟ್ನಿಯನ್ನು ಕುಟ್ಟಿದಳು. ಚಿನ್ನಯ್ಯನು ಒಳಮನೆಯಲ್ಲಿ ಮಣೆಯಮೇಲೆ ಊಟಕ್ಕೆ ಕುಳಿತನು. ಅಡಿಗೆಯ ಮನೆಯಲ್ಲಿ ಅಕ್ಕಾಮರಿ, ಲಿಲ್ಲಿಯು ಊಟಕ್ಕೆ ಕುಳಿತರು. ಊಟವು ಯಥೇಚ್ಛವಾಯಿತು. ಚಿನ್ನಯ್ಯನು ಕೈಬಾಯಿ ತೊಳೆದುಕೊಂಡು ಹೊರಗಿನ ಮನೆಗೆ ಬಂದನು. ಅಕ್ಕಾಮರಿಯು ತಾಟು ತೆಗೆದು, ಗೋಮಯ ಮಾಡಿ ಲಿಲ್ಲಿಯನ್ನು ಕರೆದುಕೊಂಡು ಬಾಗಿಲಲ್ಲಿ ಕುಳಿತಳು. ಪುಟ್ಟವ್ವನು ಎಲೆ-ಅಡಿಕೆಯ ಡಬ್ಬಿಯನ್ನು ತಂದು ಚಿನ್ನಯ್ಯನ ಮುಂದಿಟ್ಟಳು. ಚಿನ್ನಯ್ಯನು ಅಡಿಕೆಯನ್ನು ತಿನ್ನಹತ್ತಿದನು.

ಇದೆಲ್ಲವೂ ಅಕ್ಕಾಮರಿಗೆ ವಿಚಿತ್ರವೆನಿಸಹತ್ತಿತು. ತಾಯಿಯು ಇಷ್ಟೊಂದು ಮಮತೆಯಿಂದ ಕಾಣುವ ಕಾರಣವೇನು ? ಚಿನ್ನಯ್ಯನ ಕುಲ ಬೇರೆ ! ಜಾತಿ ಬೇರೆ ! ಹೀಗಿದ್ದು - ತನ್ನ ಮನೆಯವರಂತೆ, ಆಪ್ತರಂತೆ ಎಷ್ಟೊಂದು ಅಕ್ಕರತೆಯಿಂದ ತನ್ನ ತಾಯಿಯು ಕಾಣುವಳಲ್ಲ ! ಏಕೆ ? ಹೀಗೇಕೆ ? ಎಂದು ಕುತೂಹಲದಿಂದ ಅದೆಲ್ಲವನ್ನೂ ನೋಡುತ್ತಿದ್ದಳು.

ಚಿನ್ನಯ್ಯನು ನೋಡಲು ಸುದೃಢನು. ಅವನ ದುಂಡನ್ನ ಮೈಮಾಟ, ಮೈಗೆ ಹಾಳತವಾಗಿ ತೊಟ್ಟ ಬಟ್ಟೆ, ಕಲಿತವರಂತಹ ಮಾತು ಮೋಹಕವಾಗಿದ್ದವು. ಈವರೆಗೆ ಕಂಡುಬಂದ ಸ್ವಭಾವ, ಗುಣ, ಪ್ರೇಮ ಮೆಚ್ಚುವಂತಹವು. ತಾಯಿ ಅವನ ಸಂಗಡ ಸಲಿಗೆಯಿಂದ, ಪ್ರೀತಿಯಿಂದ, ಸೌಜನ್ಯದಿಂದ ನಡೆದುಬಂದುದು ಒಂದು ಬಗೆಯ ಪರಿಣಾಮವನ್ನೂ ಮಾಡಿತು. ಪರಕೀಯನಲ್ಲ, ತಾಯಿಯ ಸ್ನೇಹಿತ, ತಾಯಿಯ ಹಿತಚಿಂತಕ ಎಂಬ ಭಾವನೆಯು ಬಲಿತಂತೆ ಅಕ್ಕಾಮರಿಯ ಭಯವೂ ಕಡಿಮೆಯಾಯಿತು. ಸಂಕೋಚವೂ ಲೋಪವಾಯಿತು.

ಎಲೆಯನ್ನು ತಿನ್ನುತ್ತ ಚಿನ್ನಯ್ಯನು - "ಅಕ್ಕಾಮರಿ, ಎಂದು ಹೋಗಬೇಕೆಂದು ಮಾಡಿರುವೆ?" ಎಂದು ಕೇಳಿಬಿಟ್ಟನು.

"ಅವರು ಕರೆಯಬಂದ ದಿನ ಹೋಗುವೆ" ಎಂದು ಹೇಗೋ ನುಡಿದಳು.

"ಇದು ಸರಿಯಾದ ಮಾತು. ನಾನು ನಿನ್ನ ಬಾಯಿಂದ ಇದೇ ಮಾತನ್ನು ಬಯಸಿದ್ದೆ!" ಎಂದು ನಗುತ್ತ ನುಡಿದನು.

"ಒಂದುವೇಳೆ ಕರೆಯಲು ಬರದಿದ್ದರೇ ?" ಎಂದು ಪ್ರಶ್ನಿಸಿದನು.

ಅಕ್ಕಾಮರಿಯು ಉತ್ತರಿಸಲಿಲ್ಲ.

" ಉತ್ತರವು ಕಠಿಣವೆನಿಸಿತೇನೋ ?" ಎಂದು ತಾನೇ ನುಡಿದನು.

ಪುಟ್ಟವ್ವನು ಒಳಗಿನ ಅಲ್ಪ ಸ್ವಲ್ಪ ಕೆಲಸವನ್ನು ಮುಗಿಸಿ, "ನೀವು ಹಿರಿಯರಿರುವಿರಲ್ಲ, ಅದಕ್ಕೆ ಏನು ಮಾಡಬೇಕೆಂಬುದನ್ನು ನೀವೇ ಹೇಳಬೇಕು. ಆ ಬಾಲೆ ಏನು ಉತ್ತರವನ್ನು ಹೇಳಬಹುದು" ಎಂದು ಉತ್ತರಿಸುತ್ತ ಹೊರಗೆ ಬಂದು ಕುಳಿತಳು.

"ನೀವು ಸುಮ್ಮನಿರಿ. ಆಕೆ ಉತ್ತರ ಹೇಳಲಿ ! ಅಕ್ಕಾಮರಿ, ಏನು ಮಾಡುವೆ ಹೇಳು ?"

"ನನಗೆ ತಿಳಿಯದು."

ಚಿನ್ನಯ್ಯ, ಪುಟ್ಟವ್ವ ನಗಹತ್ತಿದರು. ಉತ್ತರವು ಸ್ಪಷ್ಟವೆಂದೇ ಅವರ ನಗೆಯ ಇಂಗಿತ.

"ನಾನು ಸುಮ್ಮನೆ ಕೇಳಿದೆ. ಹಾಗೆ ಎಂದಿಗೂ ಆಗದು. ರಾಜಣ್ಣನು ಬರದಿದ್ದರೆ ಅವನ ಕಿವಿಯನ್ನು ಹಿಡಿದು ಇಲ್ಲಿಯವರೆಗೆ ಕರೆದುಕೊಂಡು ಬರುವ ಸಾಮರ್ಥ್ಯವಿದೆ. ಹೆದರಬೇಡ" ಎಂದು ಸಮಾಧಾನ ಹೇಳಿದನು.

ಅಂದು ಚಿನ್ನಯ್ಯನ ರಾತ್ರಿಯ ವಾಸವು ಅವರ ಮನೆಯಲ್ಲಿಯೇ ಆಯಿತು. ಪುಟ್ಟವ್ವನು ಅದಕ್ಕಾಗಿ ಒಂದು ವ್ಯವಸ್ಥೆಯನ್ನು ಮಾಡಿದಳು.

ಚಿನ್ನಯ್ಯನು ಹೊರಗಿನ ಮನೆಯಲ್ಲಿ ಮಲಗಿದನು.

ತಾಯಿ–ಮಗಳು-ಮೊಮ್ಮಗಳು ನಡುಮನೆಯ ಕೋಣೆಯಲ್ಲಿ

ಮಲಗಿದರು.

ಬೆಳಗಾಗಲು ಅಕ್ಕಾಮರಿಯು ಕಣ್ಣು ಬಿಟ್ಟು ನೋಡಿದಳು. ತಾಯಿಯು ಅಡಿಗೆಯ ಮನೆಯಲ್ಲಿ ಕೆಲಸದಲ್ಲಿ ತೊಡಗಿದ್ದಳು. ಚಿನ್ನಯ್ಯನು ಮನೆಯಲ್ಲಿರಲಿಲ್ಲ. ಯಾವಾಗ್ಗೆ ಎದ್ದು ಹೋದನೆಂಬುದೂ ತಿಳಿಯದು. ಆದರೆ ಒಂದು ಮಾತನ್ನು ನಿಚ್ಚಳವಾಗಿ ಅರಿತು ಬಿಟ್ಟಳು–ರಾತ್ರಿಯಲ್ಲಿ ಒಂದೆರಡು ಸಾರೆ ಎಚ್ಚರಾದ ಸಮಯದಲ್ಲಿ ತಾಯಿಯು ಹಾಸಿಗೆಯ ಮೇಲೆ ಇರಲಿಲ್ಲ.ಎಲ್ಲಿ ಹೋದಳೆಂಬುದು ತಿಳಿಯುವಂತಿರಲಿಲ್ಲ. ಕೋಣೆಯೆಲ್ಲ, ಮನೆಯೆಲ್ಲ ಕತ್ತಲೆ. ಈಗ ಬಂದಾಳು ಎಂದು ಮುಸುಕಿನಲ್ಲಿ ಕಿವಿ ಬಿಟ್ಟು ಕೇಳುತ್ತಿದ್ದಳು. ತಾಸರ್ಧತಾಸಿನವರೆಗೂ ಅವಳು ಬಂದ, ಬರುವ ಲಕ್ಷಣ ಕಂಡು ಬರಲಿಲ್ಲ. ಮುಂದಿನ ಮನೆಯಲ್ಲಿ ಹಾಸಿಗೆಯು ಸರಿದಾಡಿದಂತೆ ಸಪ್ಪಳವು ಸಣ್ಣಾಗಿ ಕೇಳುತ್ತಿದ್ದಿತು. ಲಿಲ್ಲಿಯನ್ನು ಮಗ್ಗಲಲ್ಲಿ ಎಳೆದುಕೊಂಡು, ಎದೆಗೆ ಹಿಡಿದುಕೊಂಡು ಹಾಗೆಯೇ ಮಲಗಿದ್ದಳು. ನಿದ್ದೆಯು ಹತ್ತಿ ಬಿಟ್ಟಿತು,

ಒಂದು ಮಗುವಿನ ತಾಯಿಯಾದ ಅಕ್ಕಾಮರಿಗೆ ಈ ಘಟನೆಯ ನಿರ್ಣಯವನ್ನು ಮಾಡಲು ಬೇರೊಬ್ಬರ ಬುದ್ಧಿ, ತರ್ಕ, ವಿಚಾರಗಳ ಅವಶ್ಯಕತೆಯಾಗಲಿಲ್ಲ.

೨೪

ಸಮಾಜವನ್ನು, ಸ್ವಧರ್ಮವನ್ನು, ಸ್ವಾತ್ಮವನ್ನು ವಂಚಿಸಿ ಮಾಡಿದ ಅಘಟಿತ ಘಟನೆಯ ನೆನಪು ರಾಜಣ್ಣನಿಗೆ ಇದ್ದಿತೋ ಇಲ್ಲವೋ ಹೇಳಲಾಸಲ್ಲ. ಸಂಬಂಧಿಸಿದವರೇ ಅದನ್ನು ತಾತ್ಸಾರ ಮಾಡಿದ ಮೇಲೆ ಆ ಪಾಪದ ಪಾರುಪತ್ಯಕ್ಕೆ ಜೇರೊಬ್ಬರು ಪ್ರಯತ್ನಿಸುವಂತಿರಲಿಲ್ಲ. ಆದರೆ ಚಿನ್ನಯ್ಯನು ತನ್ನ ಪ್ರೀತಿಯ ನಾಯಿಯು ಸತ್ತ ಮೇಲೆ ಮರುಗಿದನು. ಸೇಡೆಂದನು. ಜಿಗಿದಾಡಿದನು. ಕೂಗಾಡಿದನು. ಆದರೆ ಅಪ್ಪಾರಾಯರ ದರ್ಪದ ಬೆಳಕಿನ ಮುಂದೆ ಕೈಸಾಗದೆ ಕತ್ತಲೆಯನ್ನು ಸೇರಿದ್ದನು. ಈಗಂತೂ ಪುಟ್ಟವ್ವನ ಸಹವಾಸದಿಂದ, ರಾಯರ ಮರಣದಿಂದ ಅವೆಲ್ಲ ದ್ವೇಷಭಾವನೆಗಳು ಕಾರುಣ್ಯದ ರೂಪವನ್ನು ತಾಳಿದ್ದವು. ಅವನೂ ಮರೆತಿದ್ದನು. ಆದರೆ ದೈವವು ಮರೆತಿರಲಿಲ್ಲ. ಜಪ್ಪಿಸಿಕೊಂಡು ಕುಳಿತು ದಾರಿಯನ್ನು ನೋಡುತ್ತಿದ್ದಿತು. ಸಮಯವನ್ನು ಕಾಯುತ್ತಿದ್ದಿತು. ಇದನ್ನು ರಾಜಣ್ಣನೂ ಅರಿಯ; ತಿಳಿಯ. ಕನಸೂ ಕಾಣ. ಮನಸೂ ನೋಡ. ಏಕೆಂದರೆ ದೈವವು ಮಾತಾಡಿರಲಿಲ್ಲ. ಎಚ್ಚರಿಕೆಯನ್ನೂ ಕೊಟ್ಟಿರಲಿಲ್ಲ. ಕೋಲು ಹಿಡಿದುಕೊಂಡು ರಾಜಣ್ಣನ ಬೆನ್ನನ್ನೂ ಹತ್ತಿರಲಿಲ್ಲ. ಬಾಯಿ ಮುಚ್ಚಿಕೊಂಡು, ಕಣ್ಣು ರೆಪ್ಪೆಗಳನ್ನು ಹೊಲಿದುಕೊಂಡು ಅದೃಶ್ಯವಾಗಿ ಎಲ್ಲಿಯೋ ಕುಳಿತಿದ್ದಿತು. ಆ ಸೇಡನ್ನು ಇಂದು ತೀರಿಸಿತು. ರಾಜಣ್ಣ ಅಂದಿನ ಸಂತೋಷದಷ್ಟು ಇಂದು ದುಃಖವನ್ನು ಉಂಡನು.

ಮಲಗುವ ಪೂರ್ವದಲ್ಲಿ ಮುದುಕಿ ಮನೆಯನ್ನು ಶೋಧಿಸಿದಳು.

ಪುಟ್ಟಪ್ಪನು ಊರಿಗೆ ಹೋದ ಮೇಲೆ ಅಪ್ಪಕ್ಕನು ತನ್ನ ಅನ್ನವನ್ನು ತಾನೇ ಕುದಿಸಿಕೊಳ್ಳುತ್ತಿದ್ದಳು. ರಾಜಣ್ಣನು ಬಹುಶಃ ಮನೆಯಲ್ಲಿ ಊಟವನ್ನು ಮಾಡುತ್ತಿರಲಿಲ್ಲ. "ಎಲ್ಲಿ ಊಟವನ್ನು ಮಾಡುವೆ?" ಎಂದು ಅಪ್ಪಕ್ಕನು ಕೇಳಿರಲಿಲ್ಲ. ಕೇಳುವ ಸಾಹಸಕ್ಕೂ ಹೋಗಿರಲಿಲ್ಲ. ಮುದುಕಿಯು ಸಹ ನಿತ್ಯವಾಗಿ ಊಟವನ್ನು ಮಾಡುವ ರೂಢಿಯನ್ನು ಇಟ್ಟುಕೊಂಡಿರಲಿಲ್ಲ. ಹೊಟ್ಟೆಯಲ್ಲಿ ಹಸಿವೆಯು ಕಲಮಲವೆದ್ದ ದಿನ ಹಾಸಿಗೆಯಿಂದ ಮೆಲ್ಲಗೆ ಏಳುತ್ತಿದ್ದಳು. ನೆರೆಮನೆಯ ಒಂದು ಹುಡುಗಿಯನ್ನು ಕರೆದು ಒಂದು ಕೊಡ ನೀರನ್ನು ತರಿಸಿಕೊಳ್ಳುತ್ತಿದ್ದಳು. ಒಮ್ಮೊಮ್ಮೆ ರಾಜಣ್ಣನೇ ತಂದು ಇಟ್ಟಿರುತ್ತಿದ್ದನು. ಆ ಒಂದು ಕೊಡವಲ್ಲಿ ತನ್ನ ಸ್ನಾನ, ಅಡಿಗೆ, ಒರೆಸಾರಿಸುವದು ಎಲ್ಲವನ್ನೂ ಮಾಡಿಕೊಳ್ಳುತ್ತಿದ್ದಳು.

ಬೇಸರ ಬಂದ ದಿನ, ಮೈಯಲ್ಲಿ ಸರಿಯಿಲ್ಲದ ದಿನ ಅಡಿಗೆಯನ್ನು ಮಾಡುತ್ತಿರಲಿಲ್ಲ. ಹಿಟ್ಟೋ, ಹಣ್ಣೋ ತಿಂದುಬಿಡುತ್ತಿದ್ದಳು. ಮತ್ತೆ ಕೆಲ ದಿನ ಬೆಲ್ಲ ತಿಂದು ನೀರು ಕುಡಿದು ಮಲಗುತ್ತಿದ್ದಳು. ಬದುಕಬೇಕು, ಇನ್ನೂ ನಾಲ್ಕಾರು ಹೊತ್ತು ಇರಬೇಕು, ಜಗತ್ತನ್ನು ನೋಡಬೇಕು ಎಂಬ ಆಶೆಯೇ ಇರಲಿಲ್ಲ. ಅರ್ಜಿಯನ್ನು ಹಾಕಿ ಉತ್ತರವನ್ನು ನಿರೀಕ್ಷಿಸುವ ಉಮೇದುವಾರನಂತೆ ಸಾವಿನ ದಿನಗಳನ್ನು ಎಣಿಸುತ್ತಿದ್ದಳು.

ನಿನ್ನೆ ಏಕಾದಶಿಯಿದ್ದಿತು. ಸ್ನಾನಮಾಡಿದಳು. ಗುರು ಮಂತ್ರವನ್ನು ಅಂದುಕೊಂಡಳು. ದೇವರನ್ನು ಕಣ್ಣು ತುಂಬ ನೋಡಿ ನಮಸ್ಕರಿಸಿದಳು. ತಂಗಳ ತೀರ್ಥವನ್ನು ತೆಗೆದುಕೊಂಡಳು. ಒಣಗಿದ ಒಂದು ತುಳಸಿಯ ದಳವನ್ನು ಬಾಯಿಗೆ ಹಾಕಿಕೊಂಡಳು. ತಂಬಿಗೆಯೊಳಗಿನ ನೀರಿನಿಂದ ಮೂರು ಸಾರೆ ಆಚಮನವನ್ನು ಮಾಡಿದಳು. ತುಳಸಿಯ ಕಟ್ಟೆಯೊಳಗಿನ ಇದ್ದಲಿಯನ್ನು ತಂದು ಥಾಲಿಗೆ ಕೊರೆದು ಅಂಗಾರವನ್ನು ಹಚ್ಚಿಕೊಂಡಳು. ಕೊನೆಯ ನಮಸ್ಕಾರವನ್ನು ಮಾಡಿದಳು. ಇಷ್ಟರಿಂದ ಅಂದಿನ ಏಕಾದಶಿಯ ವ್ರತವು ಮುಗಿಯಿತು.

ಸಂಜೆಯಾದರೂ ರಾಜಣ್ಣನು ಮನೆಗೆ ಬಂದಿರಲಿಲ್ಲ.

ಮರುದಿನ ದ್ವಾದಶಿ.

ನೀರು ಸಾಕಷ್ಟು ಇದ್ದವು. ಕತ್ತಲಾಗುವ ಪೂರ್ವದಲ್ಲಿ ನೆರೆಮನೆಯ ಹುಡುಗೆಯೂ ಕೇಳಿ ಹೋಗಿದ್ದಿತು. ಬೇಡೆಂದರೂ ಒಂದು ಕೊಡವನ್ನು ತಂದು ಕೊಟ್ಟು ಹೋಗಿದ್ದಿತು. ನೀರಿನ ಚಿಂತೆ ತಪ್ಪಿದ್ದಿತು. ಇಷ್ಟರಿಂದ ದ್ವಾದಶಿ ಒಂದಲ್ಲ ತ್ರಯೋದಶಿಯನ್ನೂ ಕಳೆಯಬಹುದೆಂದು ಮುದುಕಿಯ ಸಂಕಲ್ಪ.

ಕೋಣೆಯೊಳಗಿನ ಡಬ್ಬಿಗಳನ್ನು ಬಡಿಬಡಿದು ನೋಡಿದಳು. ಎಲ್ಲವೂ ಪಂಚಮ ಸ್ವರವನ್ನು ತೆಗೆದು ಬರಿದೋ ಬರಿದು ಎಂದು ಕೂಗಿದವು. ಜೋಳದ ಹಿಟ್ಟೂ ಇರಲಿಲ್ಲ. ಸೆಜ್ಜೆ ತೀರಿ ಬಹಳ ದಿನಗಳಾಗಿದ್ದವು. ಗೋಧಿಯನ್ನು ಮೂರು ತಿಂಗಳಿನಿಂದ ನೋಡಿರಲಿಲ್ಲ. ಅಕ್ಕಿಯ ಊಟವನ್ನು ಗಂಡನ ಸೀಬಾಯಿಯ ದಿನ ಮಾಡಿದುದು ಸ್ಮರಣೆಯಲ್ಲಿದ್ದಿತು. ಮಾಡದೊಳಗಿನ ಸಣ್ಣ ಪುಟ್ಟ ಗಂಟುಗಳನ್ನು ಕೆಳಗಿಳಿಸಿ ನೋಡಿದಳು. ಏನೂ ಇರಲಿಲ್ಲ. ಎದುರಿನ ಮಾಡದಲ್ಲಿ ಕೈ ಹಾಕಿದಳು. ಅಲ್ಲಿಯು ಸಣ್ಣ ಡಬ್ಬಿಗಳೆಲ್ಲ ಬರಿದು. ಆದರೆ ಮಾಡದೊಳಗಿನ ಸಣ್ಣ ಮಾಡದಲ್ಲಿ ಒಂದು ಗೌರಿಯ ಗಡಿಗೆ. ಕೈಗೆ ಜಡವೆನಿಸಿತು. ಕೆಳಗೆ ಇಳಿಸಿದಳು. ಮೇಲಿನ ಮುಚ್ಚಳವನ್ನು ತೆಗೆದು ನೋಡಿದಳು. ಒಂದಿಷ್ಟು ನುಚ್ಚು ಕಂಡವು. ಮೊರಕ್ಕೆ ಸುರುವಿಕೊಂಡಳು. ಸಾಕಷ್ಟು ಗೊಂಡೆ ಕಟ್ಟಿದ್ದಿತು. ಗೊಂಡೆಗಳನ್ನು ತೆಗೆದೊಗೆದಳು. ಆದರೆ ನುಚ್ಚು ಯಾತರದೆಂದು ತಿಳಿಯಲಿಲ್ಲ. ವಾಸನೆಯಿಂದ ನಿರ್ಣಯಿಸಬೇಕೆಂದರೆ ಮುಗ್ಗು ವಾಸನೆಯಲ್ಲಿ ತಿಳಿಯ ಬರುವಂತಿರಲಿಲ್ಲ. ಏನೇ ಇರಲಿ, ನಾಳಿನ ಪಾರಣೆಗೆ ಒಂದು ಧಾನ್ಯ ಸಿಕ್ಕಿತು! ಇದೇ ಹೆಚ್ಚಿನ ಸಮಾಧಾನವೆನಿಸಿತು. ಕೇರಿ ಸ್ವಚ್ಛ ಮಾಡಿಕೊಂಡಳು. ಹರಳು, ಕಲ್ಲು, ಮಣ್ಣು ಕಾಣುವಂತಿರಲಿಲ್ಲ. ಮೊರದಲ್ಲಿ ಒಂದು ಕಡೆಗೆ ಕೂಡಿಸಿದಳು. ಒಂದು ಮಾಪು ಆಗಬಹುದೆಂದೆನಿಸಿತು. ಇದನ್ನೇ ತೆಳುವಾಗಿ ಕುದಿಸಿ ಒಂದರ್ಧದಲ್ಲಿ ಬೆಲ್ಲ ಹಾಕಿದರೆ ಪಾಯಸವಾಗುವದು, ಉಳಿದರ್ಧ ಅನ್ನದಂತಾಗುವದು ಎಂದು ನುಡಿದುಕೊಂಡಳು.

ಅವು ಯಾತರ ನುಚ್ಚು ಎಂಬುದನ್ನು ನಿರ್ಣಯಿಸಬೇಕೆಂಬ ಹಟವು

ಹುಟ್ಟಿತು. ಇಷ್ಟು ಜೋಳ, ಇಷ್ಟು ಗೋಧಿ, ಇಷ್ಟು ಸಜ್ಜೆಗಳನ್ನು ಮನೆಯಲ್ಲಿ ಒಟ್ಟಿ ರಾಸಿಯನ್ನು ಹಾಕಿ ಬಾಳುವೆಯನ್ನು ಮಾಡಿದ ತಾನು ಒಂದು ಕೊಳವಿಯಷ್ಟು ಕಾಳಿನ ಪರೀಕ್ಷೆ ಮಾಡದಿರುವದು ನಾಚಿಕೆಗೇಡು ! ಎಂದು ಸುಪ್ತ ಅಭಿಮಾನವು ಉರಿದೆದ್ದಿತು. ಅದನ್ನು ಪರೀಕ್ಷಿಸುವ ಹಟಕ್ಕೆ ಬಿದ್ದು ಶೋಧನೆಯ ಸೂತ್ರಗಳನ್ನು ಹುಡುಕಾಡ ಹತ್ತಿತ್ತು. ಅಂದು ಸಿಕಾದಿ ಇದ್ದುದರಿಂದ ಕಡಿದು ನೋಡುವಂತಿ ರಲಿಲ್ಲ. ಕಣ್ಣು, ಕೈಗಳಿಂದ ಪರೀಕ್ಷಿಸಬೇಕು. ನೋಡಿ ನೋಡಿ ಕಣ್ಣು ಅಪಜಯವನ್ನು ಒಪ್ಪಿಕೊಂಡಿತು. ತಿಕ್ಕಿ ತಿಕ್ಕಿ ಕೈ ಹೇಳದಾಯಿತು. ಕೊನೆಗೆ ಅಂಗೈಯಲ್ಲಿ ಒಂದು ಚಿಮುಟಿಯಷ್ಟು ಹಾಕಿಕೊಂಡು ಬೆರಳು ಗಳಿಂದ ತಿಕ್ಕಿದಳು. ಮತ್ತೂ ತಿಕ್ಕಿದಳು. ಮೂಸಿನೋಡಿದಳು. ಅನುಮಾನವು ನಿಶ್ಚಯವಾಯಿತು. ಒಂದು ಪಾತ್ರೆಯಲ್ಲಿ ತುಂಬಿ ಕೊಂಡಳು.

ನೀರೊಲೆಯ ಮುಂದೆ ಸುಟ್ಟುಬಿದ್ದ ಚಿಪ್ಪಾಡಿಗಳಿದ್ದವು. ಅವುಗ ಳನ್ನು ಆರಿಸಿಕೊಂಡಳು. ಎರಡು ತಂಬಿಗೆ ತಣ್ಣೀರು ಸುರಿದುಕೊಂಡರೆ ಇವು ಅಡಿಗೆಗೆ ಉಳಿಯುವವು. ಒಂದು ದಿನದ ಸ್ನಾನದಿಂದ ಏನಾಗು ವದು. ಅಥವಾ ಏನಾದರೂ ದುರ್ಘಟನೆ ಸಂಭವಿಸಿದರೆ ಕೇಡೇನು ! ಎಂದು ತರ್ಕಮಾಡಿ ಆ ಸುಟ್ಟು ಉಳಿದ ಚಿಪ್ಪಾಡಿಗಳನ್ನು ಅಡಿಗೆಯ ಒಲೆಯ ಮುಂದೆ ತಂದು ಇಟ್ಟುಕೊಂಡಳು. ಮುಚ್ಚಿನ ಪಾತ್ರೆಯನ್ನು ಹತ್ತರಿದಲ್ಲಿಟ್ಟು ಒಂದು ದೊಡ್ಡ ಪಾತ್ರೆಯನ್ನು ಮುಚ್ಚಿದಳು. ಮಾಡದಲ್ಲಿ ಬೆಲ್ಲದ ಡಬ್ಬಿಯು ಇದ್ದಿತು. ಅದನ್ನು ಇಳಿಸಿ ಕೆಳಗಿಟ್ಟು ಕೊಂಡಳು. ಆದರೆ ಊಟಕ್ಕೆ ಎಲೆ ಇರಲಿಲ್ಲ. ರಾಜಣ್ಣನಿಗೆ ಊಟದ ಎಲೆಯಬಗ್ಗೆ ಅನೇಕಸಾರೆ ಹೇಳಿದ್ದಳು. ನಿತ್ಯ ಊಟಕ್ಕೆ ಕೂಡ್ರುವ ಮುಂದೆ ಅದೊಂದು ಪ್ರಕರಣವೇ ಆಗುತ್ತಿದ್ದಿತು. ರಾಜಣ್ಣನಾದರೂ ನಾಳೆ ತರುವೆ ಎಂಬ ವಚನಗಳನ್ನು ಕೊಡುತ್ತಲೇ ನಡೆದಿದ್ದನು— ಈಗ ಮಳೆಗಾಲ. ಗಿಡಗಳ ಎಲೆಗಳು ಬಿರುಸಾಗಿರುವವು. ಈಗ ಚಳಿಗಾಲ. ಇದೇ ಗಿಡಗಳು ಚಿಗುರ ಹತ್ತಿವೆ ಎಂದು ಹೇಳುತ್ತ ಬಂದು ಎಷ್ಟೋ ಕಾಲಗಳು ಕಳೆದುಹೋದರೂ ಎಲೆಗಳನ್ನು

ತಂದಿರಲಿಲ್ಲ. ಅವನ ನಾಳೆ! ಇನ್ನೂ ಮುಗಿದಿರಲಿಲ್ಲ. ಮುದುಕಿಯು ಮನೆಯೊಳಗಿನ ಬಿಡಿಯಾಗಿದ್ದ ಆಲದ ಎಲೆಗಳನ್ನು ಜೋಡಿಸಿ ಸಿಬಿರು ಚುಚ್ಚಿ ಊಟದ ಎಲೆಯನ್ನು ಸಿದ್ಧಮಾಡಿಕೊಳ್ಳುತ್ತಿದ್ದಳು. ಊಟ ಮಾಡುವ ಮುಂದೆ ಎಲೆಯ ಸಿಬಿರು ಗಂಟಲಲ್ಲಿ ಸಿಕ್ಕು ಉಂಡದ್ದನ್ನೆಲ್ಲ ಕಾರಿಕೊಂಡ ಒಂದೆರಡು ಉದಾಹರಣೆಗಳಿದ್ದವು. ಅಂಥ ಸಂಗತಿಯನ್ನು ಮುದುಕಿಯು ಲಕ್ಷ್ಯಕ್ಕೆ ತರುತ್ತಿರಲಿಲ್ಲ. ನಾಳೆಗೆ ಊಟಕ್ಕೆ ಒಂದು ಎಲೆ ಬೇಕು! ಈಗ ಅದು ಅವಳ ಚಿಂತೆ. ನಿನ್ನೆ ದಶಮಿಯ ದಿನ ಮಾಲೆಯೊಳಗಿನ ಕೊನೆಯ ಎಲೆಗಳನ್ನು ನೆನೆಸಿ, ಚುಚ್ಚಿ ಊಟದ ಎಲೆಯನ್ನಾಗಿ ಮಾಡಿಕೊಂಡು ಮುಗಿಸಿದ್ದಳು. ಇಂದು ಎಲೆಗಳು ಇರಲಿಲ್ಲ. ಬೇರೆ ಕಡೆಯೂ ಕಂಡು ಬರಲಿಲ್ಲ. ಎಲೆ ಇಲ್ಲದೆ ವಿಧವೆಯರು ಉಣ್ಣುವದೆಂತು? ಮುದುಕಿಯು ಚಿಂತಿಸ ಹತ್ತಿದಳು. ಅಡಿಗೆಯಾದರೂ ಊಟಕ್ಕೆ ಸಾಧ್ಯವಿಲ್ಲವಲ್ಲ! ಎಂದು ಗೋಳಾಡಿದಳು. ನವಣಕ್ಕಿಯ ನುಚ್ಚು ಸಿಕ್ಕಿರದಿದ್ದರೆ ದ್ವಾದಸಿಯನ್ನು ಏಕಾದಶಿಯನ್ನಾಗಿ ಮಾಡುವ ಮನೋಧೈರ್ಯವು ಮುದುಕಿಯದಿದ್ದಿತು. ಆದರೆ ಎಲ್ಲವೂ ಒದಗಿ ಒಂದು ಎಲೆಗಾಗಿ ಏಕಾದಶಿಯ ಫಲವನ್ನು ಕಳೆದುಕೊಳ್ಳಬೇಕೇ? ಒಳಗೆ ಹೋಗಿ ಹುಡುಕಿದಳು, ಹೊರಗೆ ಬಂದು ನೋಡಿದಳು. ಮುಂದುಗಡೆ ಕಣ್ಣಾಡಿಸಿದಳು. ಹಿತ್ತಿಲಲ್ಲಿ ನೋಡಿದಳು. ಆದರೆ ಎಲ್ಲಿಯೂ ಎಲೆಗಳು ಕಂಡು ಬರಲಿಲ್ಲ. ನೆರೆಮನೆಯಿಂದ ಬೇಡಿ ತರುವಂತೆಯೂ ಇರಲಿಲ್ಲ. ಏನುಮಾಡಬೇಕು? ಬಿಳಿಯ ತಲೆಯ, ಹಣ್ಣು ಮೆದುಳಿನ ಮುದುಕಿಯ ಬುದ್ಧಿಗೆ ಯಾವದೂ ಹೊಳೆಯಲಿಲ್ಲ.

ಮನೆಯಲ್ಲಿ ಹಿತ್ತಾಳೆಯ ಒಂದೆರಡು ತಾಟುಗಳಿದ್ದವು. ಅವೆಲ್ಲ ಎಂಜಲ ಮೈಲಿಗೆಯವು. ಉಂಡು-ತಿಂದು ಅಶುದ್ಧವಾದವುಗಳು. ಅಂಥವುಗಳಲ್ಲಿ ತಮ್ಮಂತಹವರು ಊಟಮಾಡಬಾರದು. ಅಧರ್ಮ! ಬೆಳ್ಳಿಯ ತಾಟುಗಳಲ್ಲಿ ಮಾಡಬಹುದು. ಆದರೆ ಅವು ಕಳವಾಗಿ ಹೋಗಿದ್ದವು. ಅಲ್ಲದೆ ಸುಡುಗಾಡ ನವಣೆಯ ಅನ್ನವನ್ನು ಬೆಳ್ಳಿಯ ತಾಟಿನಲ್ಲಿ ಹಾಕಿಕೊಂಡು ತಿನ್ನುವದೇ? ನೆಲವನ್ನು ಸಾರಿಸಿ ಉಣ್ಣ

ಬೇಕೇ? ಚಾಂದ್ರಾಯಣ ವ್ರತದವರು ಉಣ್ಣುವರೆಂದು ಎಲ್ಲಿಯೋ ಕೇಳಿದ್ದಳು. ಸೀರೆಯನ್ನು ಹಾಸಿ ಊಟಮಾಡಬೇಕೇ? ಇವೆಲ್ಲ ಅಶಕ್ಯ ಕೋಟಿಯೊಳಗಿನ ಮಾತುಗಳೆಂದು ಮುದುಕಿಯ ಭಾವನೆ. ಅಡಿಗೆಯಾದರೂ ಊಟಕ್ಕೆ ಸಾಧ್ಯವಿಲ್ಲದುದಕ್ಕೆ ಉಪವಾಸ ಬಿದ್ದಂತೆ ಮುದುಕಿಗೆ ವೇದನೆಯಾಯಿತು.

ದ್ವಾದಶಿಯು ಇನ್ನೂ ಬಂದಿರಲಿಲ್ಲ. ಏಕಾದಶಿಯ ರಾತ್ರಿಯು ದಾಟಬೇಕಾಗಿದ್ದಿತು.

ಎಲೆಗೆ ಏನು ಮಾಡಬೇಕು?

ತಾಟಿನಲ್ಲಿ ಉಂಡಿದ್ದರೆ ಯಾರೂ ನೋಡುತ್ತಿರಲಿಲ್ಲ. ಊಟವಾಗುತ್ತಿದ್ದಿತು. ಹೊಟ್ಟೆಯು ತುಂಬುತ್ತಿದ್ದಿತು. ಏಕಾದಶಿಯ ಪಾರಣೆಯು ಮುಗಿಯುತ್ತಿದ್ದಿತು. ಆದರೆ ಬಲವತ್ತರವಾದ ವೈದಿಕ ಸಂಸ್ಕೃತಿಯು ಆಕೆಯನ್ನು ಬಿಗಿದು ಕಟ್ಟಿದ್ದಿತು. ಸಂಪ್ರದಾಯದ ವಿರುದ್ಧವಾಗಿ ನಡೆಯಲು ಆ ಮುದುಕಿಯ ಯಾವ ಇಂದ್ರಿಯಗಳೂ ಸಹಕರಿಸುವಂತಿರಲಿಲ್ಲ. ಆ ಪುರಾಣ ಸಂಸ್ಕೃತಿಯು ಇಷ್ಟೊಂದು ಬಗೆಯಿಂದ ಆಕೆಯನ್ನು ಗೋಳಾಡಿಸುತ್ತಿದ್ದಿತು.

ಮುದುಕಿಯು ಮತ್ತೆ ಕೋಣೆಯನ್ನು ಶೋಧಿಸಬೇಕೆಂದು ಎದ್ದಳು. ಈಗ ಮುದುಕಿಗೆ ನಿಲ್ಲುವದು ಅಸಾಧ್ಯವೆನಿಸಹತ್ತಿತು. ಉಪವಾಸ, ವನವಾಸಗಳಿಂದ ಮೊದಲೇ ದುರ್ಬಲಳಾಗಿದ್ದಳು. ಇಂದು ಏಕಾದಶಿ. ಒಂದು ಗುಟುಕನಷ್ಟು ನೀರಿನ ಹೊರತು ಬಾಯಲ್ಲಿ ಏನೂ ಹಾಕಿರಲಿಲ್ಲ. ಮೇಲೆ ದ್ವಾದಶಿಯ ಪಾರಣೆಗಾಗಿ ಆಗಸಿಂದ ಎಡತಾಕಿದ್ದಳು. ಎಲೆಗಾಗಿ ಸಾವಿರಸಾರೆ ವಿಚಾರಿಸಿ ತಲೆಯನ್ನು ಬಿಸಿಯಾಗಿ ಮಾಡಿಕೊಂಡಿದ್ದಳು. ಒಣಗ ಹಾಕುವ ಕೋಲಿನ ಆಧಾರದ ಮೇಲೆ ಎದ್ದಳು. ಹೆಜ್ಜೆ ಹೆಜ್ಜೆ ಇಡುತ್ತ ನಡೆಯ ಹತ್ತಿದಳು. ಅಡಿಗೆಯ ಮನೆಯಿಂದ ನಡುಮನೆಗೆ ಬರುವ ಮುಂದೆ ಹೊಸಲನ್ನು ದಾಟಬೇಕಾಗಿದ್ದಿತು. ದಾಟುವ ಮುಂದೆ ಕೈಯೊಳಗಿನ ಉದ್ದನ್ನ ಕೋಲು ಮೇಲೆ ಚೌಕಟ್ಟಿಗೆ ಬಡಿಯಿತು. ಚೌಕಟ್ಟಿನಿಂದ ನುಸುಳಿ ಕೈಯ ಶಕ್ತಿಯಿಂದ ಮುಂದೆ ಬಂದಿತು. ಚೌಕಟ್ಟಿನ ಕಟ್, ಎಂಬ ಸಪ್ಪಳದ

ಸಂಗಡ ಸಳ್‌ಸರ್ ಎಂಬ ನಾದವು ಕೇಳಬಂದಿತು. ಮೇಲೆ ನೋಡಿದಳು. ಬಾಗಿಲಿಗೆ ಕಟ್ಟಿದ ಮಾವಿನ ತಳಿರು ಕಂಡಿತು. ಮುದುಕಿಯ ತಲೆಯಲ್ಲಿ ಫಕ್ಕನೆ ಬೆಳಕು ಹರಿಯಿತು. ಇವುಗಳಿಂದ ಒಂದು ಎಲೆಯು ಆಗುವದು! ನನ್ನ ಚಿಂತೆ ದೇವರಿಗೆ ಇದೆ. ಊಟಕ್ಕೆ ದೇವರಿಂದ ಅಪ್ಪಣೆಯು ಸಿಕ್ಕಿತು. ಏಕಾದಶಿಯ ಫಲವೂ ಪಾಲಿಗೆ ಬಂದಿತು! ಎಂದು ತಳಿರು ಹರಿದಳು. ಎಲೆಗಳನ್ನು ಬಿಚ್ಚಿದಳು. ಸಿಬಿರುಗಳನ್ನು ಕಿತ್ತಿದಳು. ಎಲೆಗಳು ಒಣಗಿ ತಗಡಿನಂತಾಗಿದ್ದವು. ಒಂದಿಷ್ಟು ನೀರು ಚಿಮುಕಿಸಿ ಮಣೆಯ ಕೆಳಗೆ ಹೇರಿಟ್ಟಳು. ನಾಲ್ಕಾರು ರಾಮನಾಮ ಜಪವನ್ನು ಮಾಡಿದಳು. ನೆನೆದವೆಂದು ತಿಳಿದಳು. ಎಲೆಗಳನ್ನು ಹೊರಗೆ ತೆಗೆದಳು. ಒಂದೊಂದಾಗಿ ಜೋಡಿಸಿ ಸಿಬಿರು ಚುಚ್ಚಹತ್ತಿದಳು. ಒಂದು ಅಂಗೈಯಷ್ಟು ಎಲೆಯು ಸಿದ್ಧವಾಯಿತು. ಊಟಕ್ಕೆ ಇಷ್ಟು ಸಾಕು! ಎಂದು ಮುದುಕಿಯು ಹರ್ಷಪಟ್ಟಳು. ಉಳಿದ ಎಲೆಯ ಚೂರು, ಸಿಬಿರಿನ ಕಸ್ತುಗಳನ್ನು ಗೋಡೆಯ ಕಡೆಗೆ ಸರಿಸಿದಳು. ದ್ವಾದಶಿಯ ಸಿದ್ಧತೆಯೆಲ್ಲ ಮುಗಿದಂತಾಯಿತು. ರಾತ್ರಿಯು ಬಹಳವಾದಂತೆನಿಸಿ ಮಲಗಬೇಕೆಂದಳು. ಬಾಗಿಲನ್ನು ಸರಿಯಾಗಿ ಇಕ್ಕಿದೆಯೋ ಇಲ್ಲವೋ ನೋಡಬೇಕೆಂದು ಮತ್ತೆ ಎದ್ದಳು. ಈ ಸಾರೆ ದೇಹ ಇನ್ನೂ ಭಾರವೆನಿಸಿತು. ಕೋಲಿನ ಮೇಲೆ ಹೆಚ್ಚು ಭಾರವನ್ನು ಹಾಕಿ ನಡುಮನೆಗೆ ಬಂದಳು. ಬಾಗಿಲವರೆಗೆ ಬಂದಳು, ಬಾಗಿಲನ್ನು ಗಟ್ಟಿಯಾಗಿ ಹಾಕಲಾಗಿದ್ದಿತು. ವ್ಯರ್ಥವಾಗಿ ಬಂದೆ! ನಾನೇ ಈ ಮೊದಲು ಹಾಕಿದ್ದೆ. ಆದರೆ ಸ್ಮರಣೆ ಎಲ್ಲಿ? ಹೋಗಲಿ. ಪುನಃ ನೋಡಿದ್ದು ತಪ್ಪಲ್ಲ. ಎಂದು ನುಡಿದು ಮುಂದೆ ಬಂದಳು. ಇನ್ನು ನಡುಮನೆಯ ಹೊಸಲನ್ನು ದಾಟಿ ಅಡಿಗೆಯ ಮನೆಗೆ ಬರಬೇಕು. ಕೋಲನ್ನು ಎತ್ತಿ ಹೊಸಲ ಮುಂದೆ ಇಟ್ಟಳು. ಎಡಗೈಯಿಂದ ಬಾಗಿಲ ಚೌಕಟ್ಟನ್ನು ಹಿಡಿದಳು. ಬಲಗಾಲನ್ನು ಕಿತ್ತಿ ಒಳಗೆ ಇಡುವದು! ಕಾಲನ್ನು ಎತ್ತಿದಳು. ಮುಂದೆ ಮಾಡಿದಳು. ಕಾಲು ನೆಲಕ್ಕೆ ಊರಲಿಲ್ಲ. ಕಣ್ಣಿಗೆ ಕತ್ತಲೆಯು ಮುಸುಗಿತು. ತಲೆಯು ಗಿರಿಗಿರಿ ತಿರುಗಿದಂತಾಯಿತು. ಕಾಲುಗಳು ತತ್ತರಿಸಹತ್ತಿದವು. ಕೈಗಳು

ನಡುಗ ಹತ್ತಿದವು. ಕೋಲು ಜಾರಿ ಬಿದ್ದಿತು. ಎದ್ದು ನಿಲ್ಲುವದು ಅಸಾಧ್ಯವಾಯಿತು. ಕೂಡ್ರಬೇಕೆಂದರೂ ಸ್ನಾಯುಗಳು ನಿರ್ಜೀವ ವಾಗಿದ್ದವು. ಇಂದ್ರಿಯಗಳ ಸಂಯೋಜಿತ ವ್ಯಾಪಾರವು ಅಸ್ತವ್ಯಸ್ತ ವಾಗಿದ್ದಿತು. ಮುದುಕಿಯು ಶರೀರ ರಕ್ಷಣೆಯ ಜ್ಞಾನವನ್ನು ಕಳೆದು ಕೊಂಡಿದ್ದಳು. ಏನಾಗಿದ್ದಿತೋ ತಿಳಿಯದು! ಅವ್ವಕ್ಕನು ಧಡೀರೆಂದು ಹೊಸಲ ಮೇಲೆಯೇ ಬಿದ್ದಳು. ಹೊಸಲ ಕಟ್ಟಿಗೆ ಎದೆಗೆ ಅಪ್ಪಳಿಸಿತು. ತಲೆಯು ಮುಂದಿನ ಕಲ್ಲಿಗೆ ಹೊಡೆಯಿತು. ಕೋಲಿನ ಸಪ್ಪಳ, ಅವ್ವಕ್ಕನು ಬಿದ್ದ ಸಪ್ಪಳ ಕೂಡಿ ಹವೆಯಲ್ಲಿ ಅದೃಶ್ಯವಾದವು.

ಮಾಡದೊಳಗಿನ ಚಿಮಣಿಯು ಎಣ್ಣೆ ಇರುವವರೆಗೆ ಉರಿದು ಶಾಂತವಾಯಿತು. ಕತ್ತಲೆಯು ಗಟ್ಟಿಯಾದ ಪರದೆಯನ್ನು ಉರುಳಿ ಸುತ್ತ ಮಲಗಿದ ಅವ್ವಕ್ಕನ ಮೇಲೆ ಹಾಸಿ ಯಾರಿಗೂ ಕಾಣದಂತೆ ಮಾಡಿತು.

ದ್ವಾದಶಿಯ ದಿವಸ ರಾಜಣ್ಣನು ಚೆನ್ನನ ಅಂಗಡಿಯಿಂದ ಅಕ್ಕಿ, ಬೇಳೆ, ಬೆಲ್ಲ, ಎಲೆಗಳನ್ನು ಕೊಂಡು, ಬೆನ್ನ ಮೇಲೆ ಹೊತ್ತುಕೊಂಡು ಬಾಗಿಲಿಗೆ ಬಂದನು. ಆಗ ನಾಲ್ಕೈದು ತಾಸು ಹೊತ್ತು ಏರಿದ್ದಿತು. ಅವನಿಗೆ ಒಂದೇ ಸಂತೋಷ, ಒಂದೇ ಆನಂದ—

ತಾಯಿಯು ಎರಡು ದಿನಗಳಿಂದ ಉಂಡಿಲ್ಲ. ಇದನ್ನು ಕಣ್ಣಿನಿಂದ ಕಂಡಿರುವನು. ತಾನು ಆಕೆಯ ಸಂಗಡ ಕಳೆದ ತಿಂಗಳಿನಿಂದ ಮಾತುಬಿಟ್ಟಿದ್ದರೂ ಅವಳು ಉಂಡಳೋ ಇಲ್ಲವೋ ಎಂಬುದನ್ನು ನಿರೀಕ್ಷಿಸುತ್ತಿದ್ದ. ಉಂಡದಿನ ಊಟವನ್ನು ಮಾಡಿದೆಯಾ? ಎಂದಾಗಲಿ, ಊಟಮಾಡದ ದಿನ ಏಕೆ ಊಟವನ್ನು ಮಾಡಲಿಲ್ಲ? ಎಂದಾಗಲಿ ಕೇಳುತ್ತಿರಲಿಲ್ಲ. ಊಟವನ್ನು ಮಾಡಿದಳೋ ಇಲ್ಲವೋ? ಇಷ್ಟನ್ನು ಜ್ಞಾಪಕದಲ್ಲಿಟ್ಟುಕೊಳ್ಳುತ್ತಿದ್ದನು. ಅದಕ್ಕೆ—ಇಂದು ಒಂದಿಷ್ಟು ಅನ್ನವನ್ನು ಮಾಡಿಕೊಳ್ಳಲಿ. ತುಪ್ಪ ಇಲ್ಲದಿದ್ದರೂ ಉಪ್ಪು ಇದೆ. ಉಪ್ಪು ಅನ್ನ ತಿನ್ನಬಹುದು. ಹಾಲುತಂದು ಕೊಡುವೆನು. ಒಂದೆರಡು ತುತ್ತು ಹಾಲು-ಅನ್ನವನ್ನು ಉಣ್ಣಲಿ. ಏಳುವದಾಗದಿದ್ದರೆ ತಾನೇ ಮಾಡಿಕೊಟ್ಟರಾಯಿತು. ನನ್ನ ಕೈಯಿಂದ ಊಟವನ್ನು ಮಾಡುವಳೋ

ಇಲ್ಲವೋ ಎಂಬುದರ ಪರೀಕ್ಷೆಯೂ ಆಗುವದು. ನನ್ನನ್ನು ಎಷ್ಟೇ ಹಳಿಯಲಿ. ನಾನು ಅವಳ ಮಗ. ಅವಳು ನನಗೆ ತಾಯಿ. ಕುಳಿತು ಊಟಮಾಡುವದು ಅಶಕ್ಯವಾದರೆ ನಾನೇ ಒಂದೆರಡು ತುತ್ತು ತಿನ್ನಿಸ ಬೇಕು. ಕಣ್ಣೆತ್ತಿ ಮುಖವನ್ನು ನೋಡಿದರೆ ಹುಸಿ ನಗೆಯನ್ನು ಮುಖದ ಮೇಲೆ ತೋರಿಸಬೇಕು. ಮಾತಾಡಬೇಕು. ಸುಖ ದುಃಖ ಕೇಳಿಕೊಳ್ಳಬೇಕು. ಎಂದು ಎಣಿಕೆ-ಗುಣಿಕೆಗಳನ್ನು ಹಾಕಿಕೊಂಡು ಬಾಗಿಲನ್ನು ತಟ್ಟಿದನು. ಒಳಗಿನಿಂದ ಚಿಲಕವನ್ನು ಹಾಕಲಾಗಿದ್ದಿತು. ಚಿಲಕವನ್ನು ಬಾರಿಸಿದನು. ಒಂದಿಷ್ಟು ನಿಂತನು. ಬಾಗಿಲು ತೆರೆಯ ಲಿಲ್ಲ. ಗಟ್ಟಿಯಾಗಿ ಚಿಲಕವನ್ನು ಬಾರಿಸಿದನು, ಆದರೂ ತೆರೆಯಲಿಲ್ಲ. ಬಾಗಿಲನ್ನು ಹಿಂದು ಮುಂದಕ್ಕೆ ಧಡಧಡ ಅಲುಗಾಡಿಸಿದನು. ಚಿಲಕ ವನ್ನು ತೆರೆಯಲಿಲ್ಲ. ತಾಯಿಯು ಇನ್ನೂ ಮಲಗಿರಬಹುದೇ ? ಎಂದುಕೊಂಡನು. ಆದರೆ ತನಗೆ ಗೊತ್ತಿದ್ದಮಟ್ಟಿಗೆ ಹೊತ್ತೇರಿಡ ಮೇಲೆ ತಾಯಿಯು ಹಾಸಿಗೆಯಮೇಲೆ ಮಲಗಿದ ಒಂದು ದಿನವನ್ನೂ ಅರಿಯ. ಹೊರಗೆ ಹೆಚ್ಚು ಹೊತ್ತು ನಿಲ್ಲಲಾರದಾದನು. ಇಷ್ಟು ಕೂಗಿದರೂ ಬಾಗಿಲನ್ನು ತೆರೆಯದ್ದರಿಂದ ಒಂದಿಷ್ಟು ಸಿಟ್ಟೂ ಬಂದಿತು. ಹೆಗಲಿನ ಮೇಲಿನ ಗಂಟನ್ನು ಕೆಳಗಿಟ್ಟನು. ಕೊನೆಯ ಸಾರೆ ಬಾಗಿ ಲನ್ನು ಅಲುಗಾಡಿಸಿದನು. ಒಳಗಿನಿಂದ ಯಾರೂ ಬರಲಿಲ್ಲ. ಒಂದು ಬಾಗಿಲನ್ನು ಎತ್ತಿದನು. ಅದು ಮೇಲೆದ್ದಿತು. ಕಿತ್ತಿ ಓರೆ ಮಾಡಿದನು. ಒಳಗೆ ಹೋಗುವಷ್ಟು ದಾರಿಯಾಯಿತು. ಮೆಲ್ಲಗೆ ನುಸುಳಿ ಒಳ ಸೇರಿದನು. ಚಿಲಕವನ್ನು ತೆಗೆದು ಬಾಗಿಲನ್ನು ಸರಿಪಡಿಸಿದನು. ಅಕ್ಕಿ, ಬೇಳೆಯ ಗಂಟನ್ನು ಒಳಗೆ ತಂದಿಟ್ಟನು. ಸಿಟ್ಟು ಒಂದಿಷ್ಟು ಕೆಳಮುಖ ವಾಗಿದ್ದಿತು. ಆ ಬರಿದಾದ ಭಾಗವನ್ನು ಭಯವು ಆವರಿಸಲಿದ್ದಿತು.

"ಎಷ್ಟು ಹೊತ್ತು ಒದರುವದು. ಮನೆಯಲ್ಲಿ ಯಾರಾದರೂ ಇರುವರೋ ಇಲ್ಲವೋ ?" ಎಂದು ವಟಗುಟ್ಟುತ್ತ ಅಡಿಗೆಯ ಮನೆಯ ಕಡೆಗೆ ನಡೆದನು.

ಅಪ್ಪಕ್ಕನ ಸುಳಿವು ಕಂಡು ಬರಲಿಲ್ಲ. ನಿತ್ಯ ಏನಾದರೂ ಮಾತಾಡಿಕೊಳ್ಳುವವಳು ಇಂದು ಆಕೆಯ ದನಿಯೋ ಕೇಳಿಬರಲಿಲ್ಲ.

ಅಡಿಗೆಯ ಮನೆಯಲ್ಲಿ ಅಷ್ಟು ಹೊತ್ತಿಗೆ ಹೊಗೆಯಾಡುತ್ತಿದ್ದುದು, ಈಗ ಹೊಗೆಯೂ ಇರಲಿಲ್ಲ. ರಾಜಣ್ಣನಿಗೆ ಹೇಗೋ ಎನಿಸ ಹತ್ತಿತು. ಎದೆಯು ಹಾರ ಹತ್ತಿತು. ಎಂದಿಲ್ಲದ ಭಯವೆನಿಸ ಹತ್ತಿತು.

"ಅವ್ವಾ!" ಎಂದು ಕೂಗಿ ಅಡಿಗೆಯ ಮನೆಯ ಹೊಸಲನ್ನು ದಾಟಿಹೋದನು. ಕಾಲಿಗೆ ಏನೋ ತಗಲಿತು. ಅಲ್ಲಿ ಒಂದಿಷ್ಟು ಕತ್ತಲೆ. ರಾಜಣ್ಣನು ಇದೇ ಹೊರಗಿನಿಂದ ಬಂದಿದ್ದನು. ಬಗ್ಗಿ ನೋಡಿದನು. ತಾಯಿ!

"ಅವ್ವಾ!" ಎಂದನು.

ಉತ್ತರವು ಬರಲಿಲ್ಲ.

ಬಳಿಯಲ್ಲಿ ಮಂಡೆಗಾಲೂರಿ ಕುಳಿತು "ಅವ್ವಾ!" ಎಂದು ಮೈ ಮೇಲೆ ಕೈಯಾಡಿಸಿದನು. ಮೈ ತಣ್ಣಗಾಗಿದ್ದಿತು.

"ಅವ್ವಾ!" ಎಂದು ಅಳುತ್ತ ಹಣೆಯನ್ನು ಮುಟ್ಟಿದನು.

ಅದೂ ತಣ್ಣಗಾಗಿದ್ದಿತು.

ರಾಜಣ್ಣನು ದಿಗ್ಭ್ರಾಂತನಾದನು. ಅತೀವ ದುಃಖವಾಯಿತು. ತಾಯಿಯ ಕಳೇವರದ ಮೇಲೆ ಬಿದ್ದು ಅಳಹತ್ತಿದನು.

ಅದೃಶ್ಯವಾದ ದೈವವು ರಾಜಣ್ಣನ ಪಾಪಕೃತ್ಯದ ಸೇಡನ್ನು ಮೌನವಾಗಿ ಸ್ವೀಕರಿಸುತ್ತಿದ್ದಿತು.

೨೫

ಅಕ್ಕಾಮರಿಗೆ ಈಗ ಸ್ಪಷ್ಟವಾಯಿತು.

ತನ್ನ ತಾಯಿಯ ಮನೆಯು ಹೀಗೆ ಅಲಂಕಾರದ ಕರಡಿಗೆಯಾಗಲು ಕಾರಣವೇನೆಂಬುದು—

ಮೊದಮೊದಲು ತಾಯಿಯ ಈ ವ್ಯವಹಾರವು ಸರಿಬರಲಿಲ್ಲ. ಚಿತ್ರವಿಚಿತ್ರವೆನಿಸಿತು, ಹೇಸಿಕೆ ಎನಿಸಿತು, ಅಸಹ್ಯವೆನಿಸಿತು. ವಿಧವೆಯರು ಹೀಗೆ ಮಾಡಬಹುದೇ ? ಇದು ಒಳ್ಳೆಯದೇ ? ಬ್ರಾಹ್ಮಣರಿಗೆ ಸರಿಯಾದೀತೇ ? ಎಂದು ಕೇಳಿಕೊಂಡಳು. ಜೀವ ಛೀ....ಛೀ.... ಎಂದುಕೊಂಡಿತು.

ದಿನಗಳು ಕಳೆದವು. ತಿಂಗಳುಗಳು ಉರುಳಿದವು. ಚಿನ್ನಯ್ಯನ ಓಡಾಟಗಳೂ ಬಹಳವಾದವು. ಅವನ ದರ್ಶನ, ಮಾತು, ಕೈಕಾಣಿಕೆ, ತಿನಿಸು, ಉಣಿಸು ಅಧಿಕಾಧಿಕವಾದಂತೆ ಆತ್ಮೀಯನೆನಿಸಹತ್ತಿದನು. ಅವನ ಬರವು ಸಾಮಾನ್ಯವಾಯಿತು. ಮಾತು ರುಚಿಯಾಯಿತು. ರೂಪು ಒಳ್ಳೆಯದೆನಿಸಹತ್ತಿತು. ಬರಲಿ, ಇನ್ನೆರಡು ದಿನ ನಿಲ್ಲಲಿ, ಹರಟೆ ಹೊಡೆಯಲಿ ಎಂದು ಜೀವವು ನುಡಿಯಹತ್ತಿತು. ಲಿಲ್ಲಿಯಂತೂ ಮಾವನೆಂದು ಮೇಲೆಬಿದ್ದು ಆಡುತ್ತಿದ್ದಿತು. ಅವನ ಕೋಟಿನ ಗುಂಡಿಗಳನ್ನು ಎಣಿಸುತ್ತಿದ್ದಿತು. ಕಿಸೆಯಲ್ಲಿ ಕೈಹಾಕಿ ರೂಪಾಯಿಗಳನ್ನು ಬಾರಿಸುತ್ತಿದ್ದಿತು. ಚಿನ್ನಯ್ಯನು ತನ್ನ ಮಗಳಿಗಿಂತ ಹೆಚ್ಚಾದ ಪ್ರೀತಿಯಿಂದ ಕಾಣುತ್ತಿದ್ದನು. ಮುದ್ದಿಡುತ್ತಿದ್ದನು. ಗಟ್ಟಿಯಾಗಿ ಅಪ್ಪಿಕೊಂಡು ಪಡಸಾಲೆಯ ತುಂಬ ಓಡಾಡುತ್ತಿದ್ದನು. ಆಗ ಅಕ್ಕಾಮರಿಗೆ

ಎಂಥದೋ ಸಂತಸ, ಎಂಥದೋ ಆನಂದ! ಎಂಥದೋ ಉನ್ಮಾದದ ಸೆಳಕು!

ಹೆಣ್ಣು ಗಂಡಿನ ಎದುರು ಸುಳಿಯಬಾರದು. ಸುಳಿದರೂ ನಿಲ್ಲಬಾರದು. ನಿಂತರೂ ಪರಿಚಯವನ್ನು ಮಾಡಿಕೊಳ್ಳಬಾರದು. ಪರಿಚಯವಾದರೂ ಅಪರಿಚಿತರದಾಗಬಾರದು. ಆದರೂ ಅವರ ಸಂಗಡ ಮಾತಾಡಬಾರದು. ಮಾತಾಡಿದರೂ ಅಪ್ರಸಂಗ ಭಾಷಣಕ್ಕೆ ಎಳಸಬಾರದು. ಎಳಸಿದರೂ ಮುಖವನ್ನು ನಿರೀಕ್ಷಿಸಬಾರದು. ನಿರೀಕ್ಷಿಸಿದರೂ ನಗಬಾರದು. ನಕ್ಕರೂ ಮುಖದ ಗಾಂಭೀರ್ಯವನ್ನು ಕಳೆದುಕೊಳ್ಳಬಾರದು. ಕಳೆದುಕೊಂಡರೂ ಲೋಕಲಜ್ಜೆಯನ್ನು ಹರಿದು ಒಗೆಯಬಾರದು. ಹರಿದೊಗೆದರೂ ಗಂಡಿನ ಉನ್ಮಾದವನ್ನು ಕೆರಳಿಸಬಾರದು. ಕೆರಳಿಸಿದರೂ ವ್ಯಕ್ತಿತ್ವದ ನಷ್ಟಕ್ಕೆ ಸಿದ್ಧವಾಗಬಾರದು. ಸಿದ್ಧವಾದರೂ ಧರ್ಮವನ್ನು ಮರೆಯಬಾರದು. ಧರ್ಮವನ್ನು ಮರೆತರೂ ಅಧರ್ಮಕ್ಕೆ ಗುರಿಯಾಗಬಾರದು. ಗುರಿಯಾದರೂ ಪಾಪದ ಕಡೆಗೆ ಓಡಬಾರದು. ಓಡಿದರೂ ದೇವನ ಸಿಟ್ಟಿಗೆ ಪಾತ್ರವಾಗಬಾರದು. ಪಾತ್ರವಾದರೂ ಪ್ರಾಯಶ್ಚಿತ್ತದ ದಾರಿಯನ್ನು ಮುಚ್ಚಿಕೊಳ್ಳಬಾರದು. ಮುಚ್ಚಿಕೊಂಡರೂ ಏಕಾಂಗಿಯಾಗಿ ಬದುಕೇನೆಂಬ ಧೈರ್ಯವನ್ನು ಕಳೆದುಕೊಳ್ಳಬಾರದು. ಕಳೆದುಕೊಂಡರೂ ಹುಚ್ಚುತನವಿರಬೇಕು. ಹುಚ್ಚುತನವಿರದಿದ್ದರೆ ಮರಣಕ್ಕೆ ಸಿದ್ಧರಿರಬೇಕು. ಇವು ಮಂತ್ರೋಪದೇಶದಂತಹ ಮಾತುಗಳಿದ್ದರೂ ಜನರು ಲಕ್ಷಿಸುವದಿಲ್ಲ. ಒಮ್ಮೆ ಒಂದರ ಪರಿಚಯವಾದರೆ ತೀರಿತು. ಮನಸು, ಬುದ್ಧಿ ಮುಂದಿನ ಮೆಟ್ಟಲಿಗೆ ಓಡಹತ್ತುವವು. ಅಕ್ಕಾಮರಿಯ ಗತಿಯೂ ಹೀಗಾಯಿತು.

ಮೊದಮೊದಲು ತಾಯಿಯ ವ್ಯವಹಾರವು ಸರಿಯೆನಿಸಿರಲಿಲ್ಲ. ಅಸಹ್ಯ, ಥೂ! ಎಂದಿದ್ದಳು. ಒಮ್ಮೆ ಚಿನ್ನಯ್ಯನ ಮುಂದೆ ಸುಳಿದಳು: ನಿಂತಳು. ಪರಿಚಯವಾಯಿತು. ಅವನ ಮುಖವನ್ನು ನೋಡಿದಳು. ಮಾತಾಡಿದಳು. ಆಗ ತಾಯಿಯ ಸಂಬಂಧ ಕರುಣೆ ಹುಟ್ಟಿತು.

ಒಂದು ದಿನ ತಾನೇ ಮಾತಾಡಿಕೊಂಡಳು.

ತಾಯಿಯು ನನ್ನಂತೆಯೇ ಸ್ತ್ರೀ. ಮುದುಕಿಯಲ್ಲ, ಕೈ ನಡಗುತ್ತಿಲ್ಲ, ತಲೆಯು ಕುಣಿಯುತ್ತಿಲ್ಲ, ನಡುವು ಬಗ್ಗಿಲ್ಲ, ಮುಖದ ಮೇಲೆ ಇಳಿವಯಸ್ಸಿನ ಅಡ್ಡ-ಉದ್ದ ಗೆರೆಗಳು ಮೂಡಿಲ್ಲ. ಇನ್ನೂ ಚಿಕ್ಕವಳು. ತಿಂಗಳ ಮೈಲಿಗೆಯ ಕಾಟ ತಪ್ಪಿಲ್ಲ. ನನಗೂ ಆಕೆಗೂ ಬಹಳವಾದರೆ ೧೮-೨೦ ವರುಷಗಳ ಅಂತರ. ಸುಖದಲ್ಲಿ ಬೆಳೆದವಳು. ಸುಖದಿಂದ ಬಾಳಿರುವಳು. ಇಷ್ಟು ದಿನಗಳವರೆಗೆ ಕಷ್ಟದ ಕಾವನ್ನು, ದುಃಖದ ನೋವನ್ನು ಅರಿಯಳು. ಕಣ್ಣಿಟ್ಟು ಪರೀಕ್ಷಿಸಿದರೆ ನನಗಿಂತ ೧೦-೧೨ ವರುಷ ಹಿರಿಯಳೆಂಬ ಜನರ ಭಾವನೆ. ತಾಯಿ - ಮಗಳೆಂದು ಗೊತ್ತಿದ್ದವರಷ್ಟು ಜನರು ಬಲ್ಲರು. ಅವಸರದ ನೋಟದಲ್ಲಿ ಅಕ್ಕ ತಂಗಿಯರೆಂದು ತಿಳಿಯುವ ಜನರೇ ಬಹಳ. ತೆಳುವಾದ ದೇಹ, ಎತ್ತರವಲ್ಲದ ನಿಲುವು, ಕರಿಕೆಯಂತೆ ಇನ್ನೂ ಜಿಗುಟಾಗಿದೆ. ಮೈಯಲ್ಲಿ ಸಾಕಷ್ಟು ಕಾವಿದೆ. ಕೆಲಸದಲ್ಲಿ ಹುಮ್ಮಸ್ಸಿದೆ. ದೇಹದಲ್ಲಿ ಚಾಪಲ್ಯವಿದೆ. ಮಾತಿನಲ್ಲಿ ಬಾಳಬೇಕು, ಬದುಕಬೇಕು! ಎಂಬ ಲವಲವಿಕೆ ಇದೆ. ನಿತ್ಯದ ಊಟದಲ್ಲಿ ಸ್ವಾರಸ್ಯವಿದೆ. ನಿದ್ರೆಯಲ್ಲಿ ವಿಶ್ರಾಂತಿಯಿದೆ. ಈ ದೈಹಿಕ ಆಶೋತ್ತರಗಳಿಗೆ ಅನುಗುಣವಾಗಿ ಮಾನಸಿಕ ಆಶೋತ್ತರಗಳಿದ್ದರೆ ತಪ್ಪೇನು! ಮನಸಿಗೂ ದೇಹಕ್ಕೂ ನಿಕಟ ಸಂಬಂಧವಿರುವವರೆಗೆ ಆಕೆಯು ತನ್ನ ಸಹಜಪ್ರವೃತ್ತಿಗಳನ್ನು ಹೇಗೆ ತುಳಿದು ನಿಲ್ಲಬಹುದು! ನಿಲ್ಲುವದು ಅಸಾಧ್ಯವಾದ ಮೇಲೆ ಏನು ಮಾಡಬೇಕು? ಅಸಹಾಯ ಹಿಂದೂ ಧರ್ಮದ ಸ್ತ್ರೀಯರಿಗೆ ಬೇರೆ ದಾರಿಯಿಲ್ಲ. ಅದರಲ್ಲಿ ಬ್ರಾಹ್ಮಣ ವಿಧವೆಯರ ಗೋಳು ದೇವರಿಗೂ ಗೊತ್ತಿಲ್ಲ. ಅವರಿಗೆ ಒಂದೇ ದಾರಿ! ಒಂದೇ ಮಾರ್ಗ! ವಿಕೃತ ವಾದ!! ವಿಕೃತಿಯಾಗುವದು!!! ಬಾಹ್ಯ ರೂಪಾಂತರವಾಗುವದು. ಈ ವೈರಾಗ್ಯದ ಶುಷ್ಕ ಸಾರೂಪ್ಯವನ್ನು ಧರಿಸಿ, ನಿರಾಡಂಬರದ ಜಪಸರವನ್ನು ಕೊರಳಿಗೆ ಹಾಕಿಕೊಂಡು, ಬಹುದಿನಗಳಿಂದ ತುಕ್ಕುಹಿಡಿದ ಮಂತ್ರಗಳನ್ನು ಪಠಿಸುತ್ತ, ಅನೇಕರಿಂದ ಅಸಾಧ್ಯವೆಂದು ನಾಮಕರಣ ಮಾಡಿಸಿಕೊಂಡ ತೀರ್ಥವನ್ನು ಸೇವಿಸಿ, ಋಷಿ-ಮನ್ಮಾದಿಗಳು ಲಾಗ ಹಾಕಿದ ಪ್ರಸಾದ ಸೇವನೆಯನ್ನು ಮಾಡಿ, ಶೃಂಗಾರಮಯಸೃಷ್ಟಿಯಲ್ಲಿ

ಗತ್ರಮಸನ್ಯಾಸಿನಿಯಾಗಿ ಅಂಟಿಕೊಂಡು ನಿಲ್ಲುವದು ಎಂಥ ಚೋದ್ಯ! ಜೀವನರಂಗದಲ್ಲಿ ಬಹುದಿವಸ ಈಸಾಡಿ ಸಂತಸಮಯದ, ಸುಖದ ರುಚಿಯನ್ನು ದಿನದಿನಗಳಿಂದ ಸವಿಸವಿಯುತ್ತ ಬಂದ ದೈಹಿಕ ಭಾವನೆ ಒಂದು ದಿನದ ದುರಂತ ಘಟನೆಯಿಂದ, ಗಂಡನ ಮರಣದಿಂದ, ವೈರಾಗ್ಯದ, ನೈಷ್ಠಿಕ ಬ್ರಹ್ಮಚರ್ಯದ ನಿತಾಂತ, ನಿರ್ಗುಣ ಮಡುವಿಗೆ ಹಾರುವದೆಂತು! ಹಸಿಯಿಂದ ಸಾಗರವನ್ನು ಕಬಳಿಸುವದೆಂತು! ಸುಕುಮಾರ ಸೃಷ್ಟಿಯಿಂದ ನಿರಹಂಕಾರ ರುಕ್ಷಪ್ರದೇಶಕ್ಕೆ ಜಿಗಿಯುವದೆಂತು! ಛೀ.... ಛೀ.... ಛೀ.... ಆದರೆ ಇವರು ಹೀಗೆಯೇ ನಡೆಯಬೇಕು! ಧರ್ಮ! ಧರ್ಮದ ನಿಯಮ! ಧರ್ಮದ ಕಟ್ಟಳೆ! ಅಂತಃಶತ್ರುಗಳನ್ನು ಒಳಗಿಟ್ಟು ಕೋಟೆಯ ತೂತು-ಪಾತೆಗಳನ್ನು ಸರಿಪಡಿಸಿ, ಹುಲ್ಲು-ಗರಿಕೆಯನ್ನು ಕಿತ್ತಿಸಿ, ಗೋಡೆಗೆ ಸುಣ್ಣ-ಬಣ್ಣ ಬಳಿದು, ಹೆಬ್ಬಾಗಿಲಿಗೆ ಕೆಂಪು ಮಣಿಗಳನ್ನು ಒಣಗ ಹಾಕಿದರೆ ಅವರು ಒಳನುಗ್ಗಿ ಕೋಟೆಯನ್ನು ಹಾಳು-ಬೀಳುಗೆಡವಲಾರರೇ! ಇದರ ಸಂಬಂಧ ವಿಚಾರಿಸಿದವರಿರುವರೇ? ವಿಚಾರಿಸಲು ದಾರಿ ಇದೆಯೇ! ನಡೆಸುವದೊಂದು ಗೊತ್ತು. ನಡೆಯುತ್ತಿದೆ. ಕುಂಟುತ್ತ ನಡೆಯುತ್ತಿದೆ. ಕಾಲಿಲ್ಲದೆ ಕುಂಟುವದು ಕ್ಷಮ್ಯ ಕಾಲಿದ್ದು ಕುಂಟಿದರೆ ಏನೆನ್ನಬೇಕು! ನಡೆಯುವ ಮುಂದೆ ಜಾರಿಬಿದ್ದರೆ ಒಬ್ಬೊಬ್ಬ ಪುಣ್ಯಾತ್ಮರು ಮೇಲೇಳಬಹುದು. ಆದರೆ ಇದು ಅನ್ಯಾಯವಲ್ಲವೇ? ಪ್ರಕೃತಿಯು ತನ್ನ ಉತ್ಕ್ರಾಂತಿಯ ತತ್ವಕ್ಕನುಸರಿಸಿ ನಡೆದರೂ, ಕೆಲವು ನಮ್ಮ ಹಿರಿಯರು ಒಡೆದ ಹಿತ್ತಾಳೆಯ ಗಂಟೆಯನ್ನು ಕೊರಳಿಗೆ ಕಟ್ಟಿ, ಪರಂಪರೆಯ ಬೆರಳು ತಟ್ಟಿ ಅಪಸ್ವರವನ್ನು ತೆಗೆಯುವರಲ್ಲ!

ಈ ಬಗೆಯ ಸಂಗ್ರಹಿತ ವಿಚಾರಧಾರೆಯಿಂದ ತಾಯಿಯ ಮೇಲಿಂದ ಹಾರಲಿಟ್ಟ ಶ್ರದ್ಧೆ, ಮಮತ, ಭಕ್ತಿ ಮತ್ತೆ ನಿಂತವು. ಇನ್ನೂ ಗಟ್ಟಿಯಾದವು. ತಾಯಿಯ ಕೃತ್ಯ ಹೊಸದೆನಿಸಲಿಲ್ಲ. ನಿಸರ್ಗದ ಒಂದು ಭಾಗವೆಂದುಕೊಂಡಳು. ಇದರಿಂದ ಮನೆಯ ಆಡಂಬರವು ಯೋಗ್ಯವೆನಿಸ ಹತ್ತಿತು. ಅದರ ನಡುವೆ ತಾನು ಸಾಲಂಕೃತಳಾಗಿ ನಿರೀಕ್ಷಿಸಿದಳು. ತನಗೂ ರಮ್ಯವೆನಿಸಿತು. ಮಾವನ

ಮನೆಯಲ್ಲಿ ಕಾಣದ್ದನ್ನು ತವರು ಮನೆಯಲ್ಲಾದರೂ ಕಂಡೆನಲ್ಲ! ಎಂಬ ಸುಪ್ತ ಆಶೆಯು ಸಂತೋಷವನ್ನು ಪಡೆಯಿತು. ಮನೆಯ ಸಂಗಡ ಮನಸೂ ಮಾರ್ಪಟ್ಟಿತು.

ಚಿನ್ನಯ್ಯನು ಅನೇಕ ಸಾರೆ ಬಂದುಹೋದನು. ಅಕ್ಕಾಮರಿಯು ಅವನ ಮೂಗನ್ನು ನೋಡಿದಳು. ಸೀಳಾಗಿ ಕರಿಯ ಬಣ್ಣದಿಂದ ಮಿಂಚುತ್ತಿದ್ದಿತು. ಕಣ್ಣು ನೋಡಿದಳು. ಬೆಳಕು ತುಂಬಿ ಆಕರ್ಷಣೀಯವಾಗಿದ್ದವು. ಕೆನ್ನೆಗಳನ್ನು ನೋಡಿದಳು. ಗೋಲಾಕಾರವಾಗಿ ಹೊಳೆಯುತ್ತಿದ್ದವು. ತಲೆಯನ್ನು ನೋಡಿದಳು. ಗುಂಗುರ ಕೂದಲಿನ ಮುದ್ದೆ ಅಲ್ಲೊಂದು ಇಲ್ಲೊಂದು ಅಂಟಿಕೊಂಡಿದ್ದವು. ಎದೆಯು ಉಬ್ಬಿ, ಹೊಟ್ಟೆಯು ತಗ್ಗಾಗಿದ್ದಿತು. ಪಡಸಾಲೆಯಲ್ಲಿ ಬರಿ ಮೈಯಿಂದ ನಡೆದಾಡುವ ಸಮಯದಲ್ಲಿ ಅವನ ತುಂಬಿದ ತೊಡೆ, ಉಬ್ಬಿದ ಸ್ನಾಯುಮಂಡಲಗಳು ತೋಳು ಪ್ರಮಾಣಬದ್ಧವಾಗಿ ಕಂಡವು. ಹಣೆಯಮೇಲಿನ ಬುದ್ದ ತಲ, ಮೂಗಿನ ಬಲಬದಿಯ ಸಪೋಲಿ ಅಸಹ್ಯವೆನಿಸಲಿಲ್ಲ. ಜನರ ಕಣ್ಣೊಂಜಲವನ್ನು ತಡೆಗಟ್ಟುವ ಸಾಧನಗಳೆನಿಸಿದವು. ಅವನ ಕಪ್ಪಾದ ದೇಹವು ರಣ್ಣನ ತುಂಬ ಮಾಡಿಕೊಳ್ಳುತ್ತಿದ್ದಿತು.

ಅವನ ಮಾತು ತೀರ ರುಚಿಕರವು. ಅನ್ಯಜಾತಿಯವನಾದರೂ ಬ್ರಾಹ್ಮಣರಂತೆ ವ್ಯಾಕರಣಶುದ್ಧ. ಉಚ್ಚಾರಪೂರ್ಣ. ಅರ್ಥ ಮತ್ತು ಭಾವಪೂರ್ಣ. ಮಾತಿಗೆ ಮಾತು ಹೊಂದಿಕೆಯಾಗುತ್ತಿದ್ದವು.

ಅವನ ಮುಕ್ತ ಹಸ್ತದ ಪರಿಚಯವು ಅನೇಕಸಾರೆ ಅನುಭವಕ್ಕೆ ಬಂದಿದ್ದಿತು. ತಿನಿಸು-ಉಣಿಸಿನ ಪದಾರ್ಥಗಳನ್ನು ಹಲವು ಸಾರೆ ತಂದುಕೊಟ್ಟಿದ್ದನು. ಅವುಗಳ ವೈವಿಧ್ಯ, ರುಚಿಯನ್ನು ನಾಲಿಗೆ ಬಲ್ಲದು. ಹೊಟ್ಟೆ ಬಲ್ಲದು. ಶೃಂಗಾರ ಪ್ರಸಾಧನಗಳನ್ನು ತಂದು ಕೊಟ್ಟಿದ್ದನು. ಗುಲಾಬಿಯ ಪುಡಿಯು ಅಕ್ಕಾಮರಿಯ ಮುಖಕ್ಕೆ ಅಂಟಿ ಅವನ ಸ್ಪರ್ಶವನ್ನು ನಿತ್ಯ ತಂದುಕೊಡುತ್ತಿದ್ದಿತು. ಬೆರಳ ತುದಿಯ ಉಗುರಿಗೆ ಹಚ್ಚಿದ ಮದರಂಗಿಯ ರಸವು ಅವನದೇ! ಮೈಯಿಂದ ಹೊರಡುವ ಮೈಸೂರ ಗಂಧದ ಸಾಬೂನದ ವಾಸನೆಯು

ಅವನದೇ ! ತಲೆಯಲ್ಲಿ ಮುಡಗಿದ ಪಿನ್ನು-ಅಕ್ಕಡಗಳು, ಹೆರಳ ತುದಿಗೆ ಜೋಡಿಸಿದ ಮೆತ್ತನ್ನ ಕೂದಲಿನ ಗಂಗಾವನವು, ಮುಂಗೈ ತುದಿಗೆ ಸಾಲಾಗಿ ಸೇರಿದ ಕಪ್ಪುರದ ಕಪ್ಪನ್ನ ಬಳೆಗಳು ಅವನ ಆಶೆಯ ಪ್ರತೀಕಗಳಾಗಿ ಕಟ್ಟಿಹಾಕಿದ್ದವು. ಇವುಗಳಿಂದ ಅವನ ನಿತ್ಯನೂತನ ರಸಿಕತೆಯು ಎಲ್ಲರ ಪರಿಚಯದ್ದಾಗಿದ್ದಿತು. ಇಷ್ಟೊಂದು ಬಗೆಯ ಸ್ನೇಹದಿಂದ, ಪ್ರೇಮದಿಂದ, ಗೌರವದಿಂದ ಕಂಡುದಕ್ಕೆ, ನಿತ್ಯಸಲಿಗೆ ಯಿಂದ ಮಾತಾಡುತಿದ್ದುದಕ್ಕೆ, ನಗೆಯಾಡುತಿದ್ದುದಕ್ಕೆ ಹೆಮ್ಮೆಪಟ್ಟಳು. ಅಭಿಮಾನವೆನಿಸಹತ್ತಿತು. ಅವನ ಬರವು ತನಗೂ ಆನಂದದ ವಿಷಯ ವೆಂದುಕೊಂಡಳು. ಜೀವವು ಏಕೋ ಅವನ ಆಗಮನದ ನಿರೀಕ್ಷಣೆ ಯಲ್ಲಿರುತ್ತಿದ್ದಂತೆ ಭಾಸವಾಗಹತ್ತಿತು.

ಲಿಲ್ಲಿಯು ಎರಡು ಮೂರು ವರುಷದಷ್ಟು ದೊಡ್ಡದಾಗಿದ್ದಿತು. ಕೈ ಬಿಟ್ಟು ಓಡಾಡುತ್ತಿದ್ದಿತು. ಎದೆಯ ಹಾಲನ್ನು ಬಿಟ್ಟು ಮೆತ್ತನ್ನ ಅನ್ನ ಉಂಡು, ಹಾಲು ಹಣ್ಣು ತಿನ್ನುತ್ತಿದ್ದಿತು. ಮುದ್ದುಮುದ್ದಾಗಿ ಮಾತಾಡಿ, ಲುಟುಲುಟು ಹೆಜ್ಜೆಗಳನ್ನಿಡುತ್ತ ಎಲ್ಲರ ಕಣ್ಮಣಿಯಾಗಿದ್ದಿತು.

ಇಂದಿಗೆ ೮–೯ ದಿನಗಳಾಗಿದ್ದವು. ಚಿನ್ನಯ್ಯನು ಬಂದಿರಲಿಲ್ಲ. ತಾಯಿಯೂ ನುಡಿದಳು. ಅಕ್ಕಾಮರಿಯೂ ವಿಚಾರಿಸಿದಳು. ಆದರೆ ಕಾರಣವು ತಿಳಿಯಲಿಲ್ಲ. ಅವನೂ ಹೇಳಿಕಳಿಸಿರಲಿಲ್ಲ. ನಡುವೆ ಒಂದು ದಿನ ಲಿಲ್ಲಿಯು ಸಹ—"ಮಾವ ಬರಲಿಲ್ಲ !" ಎಂದು ನುಡಿದಳು.

ಪುಟ್ಟವ್ವನು ಆ ಕೂಸನ್ನು ಬರಸೆಳೆದುಕೊಂಡು "ನಿನಗೇಕೆ ಅವರ ಆಗಮನದ ಚಿಂತೆ ?" ಎಂದು ಎದೆಗೆ ಹಿಡಿದುಕೊಂಡು ಮುದ್ದಾಡಿದಳು.

ಅಕ್ಕಾಮರಿಗೆ ಮಗುವಿನ ಮಾತು ತೀರ ರಮ್ಯವೆನಿಸಿತು.

"ಅದೂ ನೆನಸುವದು ತಾಯೀ ! ಅವರ ಸ್ನೇಹ ಎಷ್ಟು ದೊಡ್ಡದು ನೋಡು !" ಎಂದು ತಾಯಿಯ ಕೈಯಿಂದ ಲಿಲ್ಲಿಯನ್ನು ಎತ್ತಿಕೊಂಡು ಚಪ್ಪಟೆಯಾಗುವಂತೆ ಎದೆಗೆ ಒತ್ತಿಕೊಂಡಳು. ಮಗುವು ಲಿವಿಲಿವಿ ಒದ್ದಾಡಲು ಕೆಳಗಿಳಿಸಿಬಿಟ್ಟಳು.

ಲಿಲ್ಲಿಯು ಕುಣಿಯುತ್ತ ಹೊರಗೆ ಹೋದಳು.

ಮರುದಿನ ದೀಪವನ್ನು ಹಚ್ಚುವ ಸುಮಾರಿಗೆ ಚಿನ್ನಯ್ಯನು ಬಂದನು. ಅಕ್ಕಾಮರಿಯ ಅಂಗಾಂಗಗಳು ಪುಲಕಿತವಾದವು. ಜೀವವು—ಅವರು ಬಂದರು. ಇಂದು ಬಂದರು! ಎಂದು ನುಡಿಯಿತು.

ಚಿನ್ನಯ್ಯನು ಒಳಗೆ ಬಂದು ಬಟ್ಟೆ-ಬರೆಗಳನ್ನು ಕಳೆಯುತ್ತ—"ಲಿಲ್ಲಿ, ಸಣ್ಣ ಮರಿ!" ಎಂದು ಕರೆದನು. ಲಿಲ್ಲಿಯು "ಪಾಪ, ಪಾಪ!" ಎಂದು ಓಡುತ್ತ ಬಳಿಗೆಹೋಯಿತು.

ಅಯ್ಯನು ಮೇಲೆತ್ತಿಕೊಂಡನು. ಮುದ್ದಿಟ್ಟನು. ಕುರುಳು ತೀಡಿದನು. ಗಲ್ಲ ಹಿಂಡಿದನು. ತುಟಿಗೆ ತುಟಿ ಹಚ್ಚಿ ಸವಿ ಸವಿ ಮುದ್ದು ಕೊಟ್ಟನು. ತನ್ನ ಕೆನ್ನೆಗೆ ಅದರ ಕೆನ್ನೆಯನ್ನು ಒತ್ತಿಕೊಂಡನು.

"ಎಲ್ಲಿದ್ದೆ ಪಾಪ?" ಲಿಲ್ಲಿಯು ಕೇಳಿದಳು.

"ದೂರ ಹೋಗಿದ್ದೆ."

"ಏನು ತಂದೆ?"

"ಏನಿಲ್ಲ."

"ಇದೆ."

"ಇಲ್ಲ."

"ಪ್ರತಿ ಸಾರೆ ಏನು ತರಬೇಕು?" ಪುಟ್ಟವ್ವನೆಂದಳು.

ಮಗುವು ಸುಮ್ಮನಾಯಿತು.

ಚಿನ್ನಯ್ಯನು ಮಗುವಿಗೆಂದು ತಂದ [illegible] ಮುತ್ತಿನ ಸರವನ್ನು ತೆಗೆದು "ಇದು ಯಾರಿಗೆ ಗೊತ್ತೆ!" ಎಂದು ಕೇಳಿದನು.

"ನನಗೆ!" ಎಂದು ಕೈಮುಂದೆ ಮಾಡಿತು.

"ಅಲ್ಲ." ಕೈ ಹಿಂದೆ ಸರಿಸಿದನು.

"ನನಗೆ ಬೇಕು."

"ಅಲ್ಲ, ಅಕ್ಕಾಮರಿಗೆ ಕೊಡುವೆ."

"ಆಕೆಗೆ ಬೇರೆ ಕೊಡು. ಇದು ನನಗೆ."

"ಊಹು...."

"ಇಲ್ಲ. ನನಗೆ ಬೇಕು!" ಎಂದು ಒಂದು ಎಳೆಯನ್ನು ಗಟ್ಟಿಯಾಗಿ ಹಿಡಿದಳು.

"ಬಿಡು. ಹರಿದಿಟ್ಟೀ !" ಅಕ್ಕಾಮರಿಯು ನುಡಿದಳು.

ಚಿನ್ನಯ್ಯನು "ಇದು ನಿನ್ನದು. ಅಕ್ಕಾಮರಿಗೆ ನೀನು ಹೇಳಿದಂತೆ ಬೇರೊಂದು ತಂದು ಕೊಡುವೆ." ಎಂದು ಮಗುವಿನ ಕೊರಳಿಗೆ ಹಾಕಿದನು. ಕೆಳಗಿಳಿಸಿ ನೋಡಿದನು. ಮಗುವು ಬಹಳ ಸುಂದರವಾಗಿ ಕಂಡಿತು. ಎತ್ತಿಕೊಂಡು ಮತ್ತೆ ಮುದ್ದಿಟ್ಟನು. ಕೆಳಗಿಳಿಸಲು ಕೇಕೆ ಹಾಕುತ್ತ ಅಕ್ಕಾಮರಿಯ ಕಡೆಗೆ ಓಡುತ್ತ ಬಂದಿತು.

ಪುಟ್ಟವ್ವನು ಒಳಗೆ ಹೋದಳು.

"ಅಕ್ಕಾಮರಿ, ಮಗುವಿನ ಕೊರಳಿಗೆ ಸರವು ಎಷ್ಟು ಸುಂದರ ವಾಗಿ ಕಾಣುವದು ನೋಡು." ಎಂದು ಹತ್ತಿರ ಬಂದು ಚಿನ್ನಯ್ಯನು ನುಡಿದನು.

"ಅಹುದು." ಸರದ ಮುತ್ತುಗಳನ್ನು ಪರೀಕ್ಷಿಸುತ್ತ ನುಡಿದಳು.

"ಲಿಲ್ಲಿ ಈಗ ಅತಿ ಸುಂದರ ! ಬಾಲರಾಧೆಯಂತೆ ಕಾಣುವದು."

"ಇದು ಅತಿ ವರ್ಣನೆಯಾಯಿತು."

"ವರ್ಣನೆಯಲ್ಲ. ತಾಯಿಯಂತೆ ಮಗುವೂ ಸುಂದರ."

"ನಾನೆಂಥ ಸುಂದರಿಯೋ !"

"ನಿನ್ನ ಬಾಲರೂಪವೇ ಲಿಲ್ಲಿ. ಚಿಕ್ಕವಳಿದ್ದ ಸಮಯದಲ್ಲಿ ನಿನ್ನನ್ನು ನಾನು ನೋಡದಿದ್ದರೂ ಲಿಲ್ಲಿಯಿಂದ ನಿನ್ನ ಬಾಲ್ಯರೂಪವನ್ನು ತಿಳಿಯಬಲ್ಲೆ. ಲಿಲ್ಲಿ !" ಎಂದು ಎಳೆದುಕೊಂಡು ಮಂಚದ ಮೇಲೆ ಹೋಗಿ ಕುಳಿತನು.

"ನಾನು ಹತ್ತು ಜನರಂತೆ ಇರುವೆ. ಲಿಲ್ಲಿಯಾದರೂ ಹತ್ತು ಮಕ್ಕಳಂತೆ ಇರುವಳು."

ಚಿನ್ನಯ್ಯನು ಲಿಲ್ಲಿಯನ್ನು ತೊಡೆಯ ಮೇಲೆ ಕೂಡ್ರಿಸಿ ಕೊಂಡು, ಅದರ ಪ್ರತಿಯೊಂದು ಅವಯವವನ್ನೂ ಮುಟ್ಟಿತಟ್ಟಿ ವರ್ಣಿಸುವಂತೆ "ಇದು ನಿನ್ನದೇ ಮೂಗು ! ಒಂದು ಮೂಗು-ಬಟ್ಟು ಇಟ್ಟರೆ ಕೊಯಿದು ಇದಕ್ಕೆ ಅಂಟಿಸಿದಂತೆ ಕಾಣುವದು. ಆಕಾರದಲ್ಲಿ ಒಂದಿಷ್ಟು ಚಿಕ್ಕದು. ಇದು ನಿನ್ನದೇ ಕಣ್ಣು. ರೆಪ್ಪೆಯ ಕೂದಲು ಇನ್ನೂ ಬೆಳೆಯಬೇಕು. ಕಣ್ಣಿನ ಗಾತ್ರ ದೊಡ್ಡದಾಗಬೇಕು. ಇದು ನಿನ್ನ

ಹುಬ್ಬು. ಕೂದಲು ಇನ್ನಷ್ಟು ಕಪ್ಪಾಗಬೇಕು. ಇವು ನಿನ್ನ ಕೆನ್ನೆ. ಉಬ್ಬು ಒಂದಿಷ್ಟು ಹೆಚ್ಚು. ಇವು ನಿನ್ನ ತುಟಿ. ಬಣ್ಣ ಒಂದಿಷ್ಟು ದಟ್ಟ. ಇದು ನಿನ್ನ ಗದ್ದ. ಇದು ನಿನ್ನ ಹಣೆ. ಇವು ನಿನ್ನ ಕುರುಳುಗಳು. ಇದು ನಿನ್ನ ಕುತ್ತಿಗೆ. ಇವು ನಿನ್ನ ಕೈ. ಇವು ನಿನ್ನ ಕಾಲು. ನಿನ್ನ ಸಣ್ಣ ಚಿತ್ರ ಜೀವ ಹೊಂದಿ, ಬಾಲರೂಪಾಗಿ, ನನ್ನ ತೊಡೆಯ ಮೇಲೆ ಕುಳಿತಂತಿದೆ" ಎಂದು ಮುದ್ದು ಕೊಟ್ಟು, ತುಟಿ ಕಡಿದು ಕೆಳಗಿಳಿಸಿ ನಗ ಹತ್ತಿದನು.

ಮಗುವು ತಾಯಿಯ ಬಳಿಗೆ ಓಡಿತು.

ಅಕ್ಕಮ್ಮನ ಮೈ ಮೇಲೆ ಹರ್ಷ-ಉನ್ಮಾದದ ರೋಮಗಳು ಎದ್ದು ನಿಂತವು. ಮುಖವು ಚೆಂಬಣ್ಣಕ್ಕೆ ತಿರುಗಿತು. ಮಗುವನ್ನು ಹಿಡಿದುಕೊಂಡು ಇನ್ನೂ ಬಿಸಿಬಿಸಿಯಾಗಿದ್ದ ಚಿನ್ನಯ್ಯನ ಮುದ್ದಿನ ಸ್ಥಳದ ಮೇಲೆ ತನ್ನ ತುಟಿಗಳನ್ನು ಗಟ್ಟಿಯಾಗಿ ಊರಿದಳು. ಮಗುವಿನ ತುಟಿಗಳನ್ನು ತನ್ನ ಕೆನ್ನೆಗೆ ತಗಲಿಸಿಕೊಂಡಳು. ಇವುಗಳಿಂದ ತನ್ನ ಮೈ ಮೇಲೆ ಎದ್ದ ನವಿರುಗಳು ಮಲಗಲು, ಮುತ್ತಿನಸರವನ್ನು ಕೈಯಲ್ಲಿ ಆಡಿಸುತ್ತ "ಇದು ನಿಜವಾದ ಮುತ್ತಿನ ಸರವೇ !" ಎಂದು ಕಳ್ಳ ನಗೆಯಿಂದ ಕೇಳಿದಳು.

"ಅಹುದು."

"ಬೆಲೆಯು ಬಹಳ ಬಿದ್ದಿರಬೇಕು !"

"ಅಷ್ಟೇನು ಇಲ್ಲ."

"ಅಂದರೆ !"

"ನೀನು ಬೆಲೆ ಕಟ್ಟಿ ಹೇಳು."

"ನನಗೆ ಹೇಗೆ ತಿಳಿಯಬೇಕು ?"

"ಅಜಮಾಸು ಹೇಳು."

"ನೂರಿನ್ನೂರು ಬಿದ್ದಿರಬೇಕು."

"ಇಲ್ಲ. ಅದಕ್ಕೂ ಕಡಿಮೆ."

"ಎಷ್ಟು ?"

"ಇತ್ತಲಾಗಿ ಒಂದು ಬಗೆಯ ಮುತ್ತುಗಳು ಬರಹತ್ತಿವೆ. ಅವು

ನಿಜವಾದ ಮುತ್ತುಗಳಲ್ಲದಿದ್ದರೂ ತಾಳಿಕೆಯಲ್ಲಿ, ಬಾಳಿಕೆಯಲ್ಲಿ, ತೇಜದಲ್ಲಿ ನಿಜವಾದ ಮುತ್ತುಗಳಂತೆಯೇ ಇರುವವು. ಅವು ಕೆಡುವದಿಲ್ಲ. ಸೊಪ್ಪೆ ಸುಲಿಯುವದಿಲ್ಲ. ಮುತ್ತಿನ ಹುಳಗಳನ್ನು ಸಾಕಿ ಮುತ್ತನ್ನು ಸಿದ್ಧಪಡಿಸುವರು. ಅದರಿಂದ ಅಗ್ಗವಾಗಿ ಸಿಗುವವು. ಪ್ರತಿಯೊಬ್ಬ ಹೆಣ್ಣುಮಗಳ ಕಿವಿ-ಕುತ್ತಿಗೆಯಲ್ಲಿ ಇವೇ ಮುತ್ತುಗಳು.

"ಏನು ಕೊಟ್ಟಿರಿ ?"

"ಅದೆನ್ನೇನು ಮಾಡುವದು. ಮಗುವಿಗೆ ತರಬೇಕೆಂಬ ಆಶೆಯಾಯಿತು. ತಂದಿರುವೆ. ಇಷ್ಟೇ."

"ಮಗುವಿನ ಮೇಲಿನ ಪ್ರೇಮಕ್ಕೆ ಬೆಲೆ ಇಲ್ಲ ಬಿಡಿರಿ." ಎಂದು ನಗೆಯಾಡಿದಳು.

"ಪ್ರೇಮಕ್ಕೆ ಬೆಲೆಯನ್ನು ಯಾರು ಕಟ್ಟಬಹುದು !"

ಅಂದು ಚಿನ್ನಯ್ಯನ ಊಟವು ಅಲ್ಲಿಯೇ ಆಯಿತು. ತಾಂಬೂಲ ಸೇವನೆಯಾಯಿತು. ಹರಟೆಯಾಯಿತು. ವಿನೋದವಾಯಿತು. ಬಿಸಿ ಹಾಲಾಯಿತು. ನಿದ್ರೆ ಬರಲು ಹಾಸಿಗೆಯಾಯಿತು.

ಆದರೆ ರಾತ್ರಿ—

ಅಕ್ಕಾಮರಿಯು ಮಧ್ಯರಾತ್ರಿ ಕಳೆದ ಮೇಲೆ ನಿದ್ರೆಯಿಂದ ಘಕ್ಕನೆ ಎಚ್ಚರಾದ ಸಮಯದಲ್ಲಿ ಪಕ್ಕದಲ್ಲಿ ಮಲಗಿದ ಪುಟ್ಟವ್ವನಿರಲಿಲ್ಲ. ಲಿಲ್ಲಿಯೂ ಇರಲಿಲ್ಲ. ಕೈಯಾಡಿಸಿ, ಕಣ್ಣು ತಿಕ್ಕಿ ಮಂದ ಬೆಳಕಿನಲ್ಲಿ ನೋಡಿದಳು. ಆದರೆ ತಲೆಯ ಕಡೆಗೆ ಚಿನ್ನಯ್ಯನು ಕುಳಿತಿದ್ದನು. ಅಕ್ಕಾಮರಿಯು ಹೆದರಿ ಮುಖವನ್ನು ಮುಚ್ಚಿಕೊಂಡಳು.

ಚಿನ್ನಯ್ಯನು ಮುಂದೆ ಸರಿಯುತ್ತ ಬಂದು "ಹೆದರಬೇಡ ಮರಿ ! ನಾನು. ನಾನಿದ್ದೇನೆ ! ನಿನ್ನ ತಾಯಿಯು ಮೂರು ದಿನದ ಮೈಲಿಗೆಯಿಂದ ಹೊರಗೆ ಮಲಗಿರುವಳು. ಲಿಲ್ಲಿಯೂ ಅವಳ ಬಳಿಯಲ್ಲಿದೆ. ನಾನು ! ಹೆದರಬೇಡ ಅಕ್ಕಾಮರಿ ! ನಾನು !" ಎಂದು ಮೈಮೇಲೆ ಕೈಯಾಡಿಸ ಹತ್ತಿದನು.

ಪುಟ್ಟವ್ವನು ಬಾಗಿಲ ಹೊರಗೆ ಕುಳಿತು ಅವರ ಮುಂದಿನ ಮಾತುಗಳನ್ನು ಆಲಿಸುತ್ತಿದ್ದಳು.

## ೨೬

ಆ ದುರ್ಘಟನೆ ನಡೆದು ಅನೇಕ ದಿನಗಳಾಗಿವೆ. ಸೂರ್ಯನು ನಿತ್ಯ ಪೂರ್ವಕ್ಕೆ ಹುಟ್ಟುವನು. ಪಶ್ಚಿಮಕ್ಕೆ ಮುಳುಗುವನು. ತಂಗಾಳಿಯು ತನ್ನ ನಿತ್ಯದ ದಾರಿಗುಂಟ ಮುಂಜಾವು, ಸಂಜೆಗಳಲ್ಲಿ ಇನ್ನೂ ಓಡುವದು. ಹಕ್ಕಿಗಳು ಹಾಡುವವು. ದನಗಳು ಓಂಡುವವು. ಹಳ್ಳವು ಹರಿಯುವದು. ಆದರೆ ಒಂದು ದಿನವಾಗಲಿ, ಒಂದು ಕ್ಷಣವಾಗಲಿ ಅದನ್ನು ಸ್ಮರಿಸಿಲ್ಲ. ಅದರ ಬಗ್ಗೆ ಚರ್ಚಿಸಿಲ್ಲ. ಸಾಧುವೋ, ಅಸಾಧುವೋ ಎಂದು ವಾದ ಹೂಡಿಲ್ಲ. ಸ್ಮರಣೆಯಲ್ಲಿಯೂ ಇರಲಿಕ್ಕಿಲ್ಲ. ಆದರೆ ಆ ಹಳ್ಳಿಯು ಅದನ್ನು ಇನ್ನೂ ಮರೆತಿಲ್ಲ. ಮರೆಯುವಂತೆಯೂ ಕಾಣುವದಿಲ್ಲ. ಎರಡು-ಮೂರು ಸಾವಿರ ಜನರು ಇನ್ನೂ ನೆನಪಿಗೆ ತಂದುಕೊಳ್ಳುವರು. ಹಳಿಯುವರು. ನಿಂದಿಸುವರು. ಶಪಿಸುವರು. ಮೂಗು ಮುರಿಯುವರು. ಕೂಡಿದಾಗ, ಮಾತಾಡುವಾಗ, ಹರಟೆಯ ತವುಡು ಕುಟ್ಟುವಾಗ, ಬಯ್ಯುವಾಗ, ಬಡಿದಾಡುವಾಗ ಅದನ್ನು ಉದಾಹರಣೆಯನ್ನಾಗಿ ಎತ್ತಿಕೊಳ್ಳುವರು. ಆಗಬಾರದ್ದಾಯಿತು, ಲೋಕ ವಿಲಕ್ಷಣವಾಗಿ ನಡೆಯಿತು, ಜನ ಲಜ್ಜೆಯನ್ನು ಮೀರಿ ಸಂಭವಿಸಿತು, ನಮ್ಮ ಕಣ್ಣ ಮುಂದೆ ಆಗಬಾರದಿದ್ದಿತು, ನಮ್ಮ ಊರಲ್ಲಿ ಆಗಬಾರದು, ಎಂದೇ ಅವರ ಎಣಿಕೆ.

ಅದು ಅವ್ವಕ್ಕನ ಸ್ಮಶಾನಯಾತ್ರೆ.

ಅವ್ವಕ್ಕನು ಸತ್ತ ಸುದ್ದಿಯು ಗುಳ್ಳವ್ವನ ತೋಟದ ಅಣ್ಣಪ್ಪನಿಗೆ ಬೇಗ ತಿಳಿಯಿತು. ಅವನು ತೋಟದಿಂದ ಧಾವಿಸಿ ಬಂದನು.

ರಾಜಣ್ಣನನ್ನು ಕಂಡನು. ಈ ರಾಜಣ್ಣನು ಹೊರಗಿನ ಕಟ್ಟೆಯ ಮೇಲೆ ತಲೆಯನ್ನು ಹಿಡಿದುಕೊಂಡು ಒಬ್ಬನೇ ಕುಳಿತಿದ್ದನು. ಮತ್ತಾರೂ ಇರಲಿಲ್ಲ. ಜನರೂ ಕೂಡಿರಲಿಲ್ಲ. ಅಪ್ಪಕ್ಕನು ಒಬ್ಬಳೇ ಒಳಗೆ ಸತ್ತು ಬಿದ್ದಿದ್ದಳು.

"ರಾಜಣ್ಣ, ಅಪ್ಪಕ್ಕನು ನತ್ತರೇ !" ದುಃಖದಿಂದ ಅಣ್ಣಪ್ಪನು ಕೇಳಿದನು.

"ಅಹುದು ಅಣ್ಣಪ್ಪ. ಸತ್ತಳು. ನನ್ನ ಕೈಯಿಂದ ಒಂದು ಹನಿ ನೀರಿನ ಆಶೆಯನ್ನು ಸಹ ಮಾಡದೆ ಸತ್ತಳು" ಎಂದು ನುಡಿಯುತ್ತ ಕಣ್ಣಂಚಿನಲ್ಲಿ ನೀರ ಹನಿಗಳನ್ನು ತಂದನು.

"ಪಾಪ ಹೀಗಾಗಬಾರದಿದ್ದಿತು. ಅವರು ನನ್ನ ತಾಯಿ ಇದ್ದಂತೆ ಇದ್ದರು. ಅವರ ಬಾಯಿಂದ ಒಂದು ಬಿರುಸು ಮಾತನ್ನು ನಾನು ಎಂದೂ ಕೇಳಲಿಲ್ಲ. ಊರವರೆಲ್ಲರಿಗೂ ಗೊತ್ತು. ಅಂಥ ತಾಯಿಯನ್ನು ನೀನೂ ಕಳೆದುಕೊಂಡೆ. ನಾನೂ ಕಳೆದುಕೊಂಡೆ."

"ಮಾಡುವದೇನು? ನನ್ನ ಕರ್ಮ !" ಕಣ್ಣೊರಸಿಕೊಂಡನು.

"ರಾಜಣ್ಣ ತಾಳಬೇಕು !"

ರಾಜಣ್ಣ ತಲೆಹಾಕಿ ಸುಮ್ಮನೆ ದುಃಖಿಸ ಹತ್ತಿದನು.

"ತಾಳು. ರಾಜಣ್ಣ ತಾಳು."

"ತಾಳುವೆ ಅಣ್ಣಪ್ಪ. ದುಃಖಿಸುತ್ತ ಬಹಳ ಹೊತ್ತು ಕೂಡ್ರುವದಿಲ್ಲ."

"ಪುಟ್ಟವ್ವನವರ ಸಂಗಡ ಬಡಿದಾಡಿ ಸುಳ್ಳೇ ಅವರನ್ನು ಹೊರಗೆ ಹಾಕಿದಿ. ಈ ಸಮಯದಲ್ಲಿ ಅವರು ಇದ್ದರೆ ಒಳಿತಾಗುತ್ತಿದ್ದಿತು."

"ಅದೊಂದು ಪೀಡೆ ಹೋಯಿತು ಎನ್ನುವೆನು."

"ಅಕ್ಕಾಮರಿಯವರೂ ಬರಲಿಲ್ಲ."

ರಾಜಣ್ಣ ಸುಮ್ಮನಿದ್ದನು.

"ಹೇಳಿ ಕಳಿಸಿದಿರಾ ?"

"ಇಲ್ಲ."

"ನಾನು ಯಾರನ್ನಾದರೂ ಕಳಿಸಲೇ ?"

"ಬೇಡ."

ಅಣ್ಣಪ್ಪನು ಮಂಕನಂತಾದನು.

"ಅವರೂ ಬೇಡೆಂದರೆ ಹೇಗೆ ರಾಜಣ್ಣ ?"

"ಯಾರು ಬಂದರೇನು ? ಅವ್ವನ ಜೀವ ತಿರುಗಿ ಬಂದೀತೆ ?"

"ತಿರುಗದು. ಸತ್ತವರ ಜೀವ ತಿರುಗಿ ಬರುವದೇ ? ಆದರೆ ನಿನಗೆ ಧೈರ್ಯ ಅವರು ಬಂದರೆ ! ಅದಕ್ಕೆ ಕರೆ ಕಳುಹಲೆ ?"

"ಬೇಡ."

"ಅಯ್ಯನವರ ಕುದುರೆ ಇದೆ ! ಈಗ ಕರೆ ಕಳುಹುವೆ."

"ಬೇಡ ಅಣ್ಣಪ್ಪ. ಒಂದು ಕೆಲಸ ಮಾಡು. ಅದಕ್ಕಾಗಿಯೆ ಇಷ್ಟುಹೊತ್ತಿನವರೆಗೆ ಚಿಂತಿಸುತ್ತಿರುವೆ."

"ಏನು ?"

"ಹೆಣವನ್ನು ಹಳ್ಳಕ್ಕೆ ಹೇಗೆ ಸಾಗಿಸುವದು !"

"ಊರಲ್ಲಿ ಹಾರುವರ ಮನೆಗಳು ಮೂರೇ ಇವೆ. ಎಲ್ಲರೂ ಕೂಡಿದರೂ ನಾಲ್ಕು ಜನರು ಆಗುವದಿಲ್ಲ. ಒಬ್ಬ ಮುದುಕ. ಕೈಯಲ್ಲಿ ಕಟ್ಟಿಗೆಯನ್ನು ಹಿಡಿದು ೭-೮ ವರುಷಗಳಾದವು. ಇನ್ನೊಬ್ಬ ಬೇನೆಯವ. ಹಾಲು-ಚಹದ ಮೇಲಿರುವನು. ಮೂರನೆಯವನು ಬರುವನೋ ಇಲ್ಲವೋ ಸಂಶಯ ? ಇನ್ನಾರು ಉಳಿದರು ! ಉಳಿದವರೆಲ್ಲರು ಸಣ್ಣವರು, ಹೆಂಗಸರು."

"ಯಾರೂ ಬೇಡ ಅಣ್ಣಪ್ಪ. ಅವರನ್ನು ಕರೆಯಬೇಕೆಂದು ನಾನು ಇಚ್ಛಿಸುವದಿಲ್ಲ. ಬರಲಿ ಎಂದೂ ಆಶಿಸುವದಿಲ್ಲ."

"ಮುಂದೆ ?"

"ಹಿಟಲರನನ್ನು ಕಳಿಸು."

"ಅವನೇಕೆ ರಾಜಣ್ಣಾ !" ಕುತೂಹಲದಿಂದ ಅಣ್ಣಪ್ಪನು ಕೇಳಿದನು.

"ಮುಂದಿನ ಕೆಲಸದ ತಯಾರಿಕೆಗೆ ಅವನೊಬ್ಬನಿರಲಿ."

"ಅವನೇ ?"

"ಹ ! ಆ ನನ್ನ ಜೀವದ ಗೆಳೆಯನು ಹೇಳಿದ ಎಲ್ಲ ಕೆಲಸವನ್ನೂ

ಮಾಡುವನು. ಅವನು ನನ್ನ ಹತ್ತಿರವಿದ್ದರೆ ನನಗೆ ಯಾವ ಹೆದರಿಕೆ ಇಲ್ಲ."

"ಆಗಲಿ. ಅವನನ್ನು ಕಳಿಸುವೆ." ಎಂದು ಹೇಳಿ ಹೊರಟು ಹೋದನು.

ರಾಜಣ್ಣನು ತಲೆಯನ್ನು ಹಿಡಿದುಕೊಂಡು ಸುಮ್ಮನೆ ಕುಳಿತನು.

ಅಣ್ಣಪ್ಪನು ಹಿಟಲರನನ್ನು ಕರೆಯಲು ಅಪ್ಪಣೆಯನ್ನು ಪಡೆದು ಕೊಂಡು ಹೋದನೇನೋ ನಿಜ. ಆದರೆ ಅವನ ಮನದಲ್ಲಿ ಏನೋ ಕಳವಳ ! ಎಂಥದೋ ಹೆದರಿಕೆ ! ಹಿಟಲರ, ಅವನ ಗೆಳೆಯರು ಕೂಡಿ ಅವ್ವಕ್ಕನನ್ನು ಹಳ್ಳಕ್ಕೆ ಸಾಗಿಸಿದರೆ ! ಎಂಥ ಅವಮಾನ. ಊರಲ್ಲಿ ಹಾರುವರಿದ್ದು ಹೀಗಾಗಬಾರದು. ಊರಿಗೆ ಬುದ್ಧಿಯನ್ನು ಹೇಳು ವವರು ಹಾರುವರು ! ಊರಲ್ಲಿ ಕಲಿತವರು ಅವರೇ ! ಬುದ್ಧಿವಂತರು ಅವರೇ ! ಅವರಲ್ಲಿಯೇ ಇಂಥ ಅನ್ಯಾಯಗಳು ನಡೆದರೆ ನಮ್ಮಂತಹ ಹಿಂದುಳಿದವರಲ್ಲಿ ಮತ್ತೆ ಏನೇನು ನಡೆಯುವವೋ ! ನಮ್ಮ ಜನರು ಇದನ್ನು ಕಂಡು ಸಿಕ್ಕಂತೆ ಕುಣಿದಾಡಿದರೆ ಹಿಡಿಯುವವರಾರು ! ದೊಡ್ಡಪ್ಪನಿಗೆ ತಿಳಿಸಿ ಅವರ ವಿಚಾರದಂತೆ ನಡೆಯುವಂತೆ ಮಾಡ ಬೇಕು ಎಂದು ತನ್ನಷ್ಟಕ್ಕೆ ತಾನೇ ವಿಚಾರಿಸಿಕೊಂಡು ದೊಡ್ಡಪ್ಪನ ಮನೆಯ ಹಾದಿಯನ್ನು ಹಿಡಿದನು. ಕೆಳಗಿನ ಓಣಿಗೆ ಬಂದನು. ಬಾಗಿಲಲ್ಲಿ ಒಂದು ಮಗುವು ಕುಳಿತಿದ್ದಿತು !

"ದೊಡ್ಡಪ್ಪನನ್ನು ಕರೆ !" ಎಂದು ಮಗುವಿಗೆ ಹೇಳಿದನು. ಅದು ಒಳಗೆ ಹೋಗಿ ತಿಳಿಸಿತು. ದೊಡ್ಡಪ್ಪನ ಹೆಂಡತಿಯು ಹೊರಗೆ ಬಂದು "ಏನು ಅಣ್ಣಪ್ಪ !" ಎಂದು ಕೇಳಿದಳು.

"ಅವ್ವಕ್ಕನವರು ತೀರಿಕೊಂಡರು !"

"ಅಯ್ಯೋ ಪಾಪ ! ಏನಾಗಿದ್ದಿತು ಅಣ್ಣಪ್ಪ ! ಬಹಳ ಅಶಕ್ತ ರಾಗಿರುವರೆಂದು ಕೇಳಿದ್ದೆವು !" ಎಂದು ಮರ ಮರ ಮರುಗಿದಳು.

"ಅವರಿಗೆ ಏನಾಗಿದ್ದಿತು ಎಲ್ಲರಿಗೂ ಗೊತ್ತು. ಆದರೆ ಇನ್ನೂ ತಿಂಗಳೊಪ್ಪತ್ತು ಬದುಕಬಹುದೆಂದು ತಿಳಿದಿದ್ದೆವು. ಆದರೆ ನಿನ್ನೆ ರಾತ್ರಿ ಅಕಸ್ಮಾತ್ತಾಗಿ ತೀರಿಕೊಂಡರು. ಅದಕ್ಕೆ ದೊಡ್ಡಪ್ಪನವರನ್ನು

ಕರೆಯಲು ಬಂದಿದ್ದೆ !"

"ಅವರು ನಿನ್ನೆ ತಾಲೂಕಿಗೆ ಹೋಗಿರುವರು. ಇದ್ದರೆ ಬಾರದುಂಟೇ ! ನಮ್ಮ ನಮ್ಮಲ್ಲಿ ಎಷ್ಟೇ ಮನಸ್ತಾಪದ ಮಾತುಗಳಾದರೂ ಇಂಥ ಸಮಯದಲ್ಲಿ ಲಕ್ಷ್ಯಕ್ಕೆ ತರುವದಿಲ್ಲ. ಅವರು ಊರಲ್ಲಿ ಇದ್ದರೆ ನಿನ್ನಿಂದ ಕರೆಯಿಸಿಕೊಳ್ಳಬಹುದಿದ್ದಿತೇ !" ಎಂದು ಗಂಡನ ಪಕ್ಷ ವಹಿಸಿ ವರ್ಣಿಸಿದಳು.

ಅಣ್ಣಪ್ಪನು ಸುಮ್ಮನೆ ನಿಂತನು.

"ಪಾಪ ಗಂಡ ಸತ್ತು ಬಹಳ ವರುಷಗಳಾಗಿಲ್ಲ. ನಾಳೆ ಫಾಲ್ಗುಣಕ್ಕೆ ಮೂರು ವರುಷವಾಗುವದು ! ತಾನೂ ಸತ್ತಳು. ಪುಣ್ಯವಂತೆಳಾದಳು. ಅಪ್ಪಾರಾಯರ ಮನೆಯ ಪುಣ್ಯವೇ ಹೋದಂತೆ !" ಎಂದು ಸಾಂತ್ವನದ ಮಾತುಗಳನ್ನು ಆಡಿದಳು.

"ದೊಡ್ಡಪ್ಪನವರು ಇಲ್ಲವೇ !"

"ಸುಳ್ಳೇಕೆ ನಿನ್ನಮುಂದೆ ಹೇಳುವದು ಅಣ್ಣಪ್ಪ. ಮನೆಯಲ್ಲಿದ್ದರೆ ಹೊರಗೆ ಬಾರದುಂಟೇ ! ಜನರ ಕಣ್ಣಿಗೆ ಬೀಳದುಂಟೇ ? ನಿನ್ನೆ ತಾಲೂಕಿಗೆ ಹೋಗಿರುವರು." ಎಂದು ಬೈಲಾಡಂಬರದ ಮಾತನ್ನು ಸುರಿಸಿದಳು.

"ಆಗಲಿ." ಎಂದು ನುಡಿದು ಅಣ್ಣಪ್ಪನು ಕುಲಕರ್ಣಿಯವರ ಮನೆಗೆ ಬಂದನು.

"ಕುಲಕರ್ಣಿಯವರು ಇರುವರೇ ?" ಎಂದು ಕೇಳಿದನು.

"ಯಾರು ?" ಎಂದು ನುಡಿದು ಅವನ ಹೆಂಡತಿಯು ಹೊರಗೆ ಬಂದಳು.

"ರಾಯರಿರುವರೇ !"

"ಇರುವರು ! ಅವ್ವಕ್ಕನು ತೀರಿಕೊಂಡಳೆಂದು ಕೇಳಿರುವೆವು. ಅಹುದೇ ? ಅಣ್ಣಪ್ಪ ?"

"ಅಹುದು. ಅದಕ್ಕೆ ಕರೆಯಲು ಬಂದಿರುವೆ. ಒಂದಿಷ್ಟು ಹೊರಗೆ ಕರೆಯಿರಿ."

"ಅವರು ಹೇಗೆ ಬರಬೇಕು ಅಣ್ಣಪ್ಪ !"

"ಏಕೆ ತಾಯಿ ?"

"ಇವರಿಂದ ತನ್ನ ಮನೆಯ ಯಾರದೇ ಹೆಣವನ್ನು ಮುಟ್ಟ ಗೊಡುವದಿಲ್ಲವೆಂದು ರಾಜಣ್ಣನು ಪಣ ತೊಟ್ಟಿರುವನು. ಹೇಗೆ ಬರಬೇಕು !" ಮೂಗು ಹಿಗ್ಗಿಸಿ ನುಡಿದಳು.

"ಏಕೆ ತಾಯೀ !" ಆಶ್ಚರ್ಯದಿಂದ ಕೇಳಿದನು.

"ಒಂದು ಸಣ್ಣ ಜಾಲಿಯ ಗಿಡದ ಸಲುವಾಗಿ ಇಷ್ಟೊಂದು ಪಣ, ಇಂಥ ಪ್ರತಿಜ್ಞೆ !"

"ಜಾಲಿಯ ಗಿಡ !"

"ಅಹುದು. ಅವನ ಕುಂಟನ ತೋಟದ ದಂಡೆಗೆ ಒಂದು ಜಾಲಿಯ ಗಿಡವಿದ್ದಿತು. ಆ ಗಿಡವು ನಮ್ಮ ಹೊಲದಲ್ಲಿದ್ದಿತು. ತೋಟದವ ತನ್ನ ತೋಟದ ಬೆಳೆಯ ಸಂರಕ್ಷಣೆಗೆ ಬೇಲಿ ಹಚ್ಚಿರುವ. ವರುವರುಷ ಬೇಲಿಯನ್ನು ಸರಿಸುತ್ತ ನಮ್ಮ ಹೊಲದಲ್ಲಿಯ ಒಂದು ಅಕ್ಕಡಿಯಷ್ಟು ನೆಲವನ್ನು ವ್ಯಾಪಿಸಿರುವನು. ಇವರು ರಾಜಣ್ಣನಿಗೆ ಬೇಲಿ ಮುಂದೆ ಬಂದಿದೆ! ಎಂದು ಅನೇಕ ಸಾರೆ ಹೇಳಿದರು. ತೋಟದವನೂ ಕಿವಿಯಮೇಲೆ ಹಾಕಿಕೊಳ್ಳಲಿಲ್ಲ. ರಾಜಣ್ಣನೂ ಕೇಳಲಿಲ್ಲ. ಮೊನ್ನೆ ಇವರು ಕಟ್ಟಿಗೆಯ ಸಲುವಾಗಿ ಗಿಡವನ್ನು ಕಡಿಸಿದರು. ಇದರಿಂದ ಜಗಳ ಹತ್ತಿತು. ಮಾತಿಗೆ ಮಾತು ಬೆಳೆದು ಇವರ ಕುತ್ತಿಗೆಯನ್ನು ಹಿಸುಕಬಂದಿದ್ದನು. ನೆರೆದವರು ಉಳಿಸಿದರು. ಆ ಸಮಯದಲ್ಲಿ ಈ ಪ್ರತಿಜ್ಞೆಯ ಉಚ್ಚಾರವನ್ನು ಮಾಡಿರುವನು !"

"ಇಂಥ ಪ್ರಸಂಗದಲ್ಲಿ ಅಂದಿನ ಮಾತನ್ನು ಸ್ಮರಿಸಬಹುದೇ !"

"ಸ್ಮರಿಸಬಾರದು ಅಣ್ಣಪ್ಪ. ಇದೆಲ್ಲ ಸರಿ. ನಮಗೂ ವ್ಯವಹಾರವು ತಿಳಿಯುವದು. ಆದರೆ ಅವರ ಅವಮಾನವಾದರೆ ಯಾರು ಹೊಣೆ? ರಾಜಣ್ಣನೇನು ವಿವೇಕಿಯೇ ! ತಿಳಿದವನೇ ! ಅವನಲ್ಲಿ ಹಿರಿಯರೆಂಬ ಮಾನ-ಮರ್ಯಾದೆಯೇ? ಬೆಂಕಿಯಂತಹ ನಾಲಗೆಯವ. ಬರ್ಫದಂತಹ ಮಾತಿನವ. ಯಾವ ಸಮಯಕ್ಕೆ ಹೇಗೆ ಮಾತಾಡಬಹುದೆಂಬ ನಿಯಮವಿಲ್ಲ. ಅದಕ್ಕೆ ಅವ್ವಕ್ಕನು ಸತ್ತ ಸುದ್ದಿಯನ್ನು ಕೇಳಿ ಸೀಮೆಯ ತೋಟದ ಕಡೆಗೆ ಹೋಗಿರುವರು. ಸಂಜೆಯವರೆಗೆ

ಋರುವದಿಲ್ಲ." ಎಂದು ತನ್ನ ಮನೆತನದ ಪುರಾಣವನ್ನು ಮುಗಿಸಿದಳು.

"ಒಳ್ಳೇದು ಬಿಡುತಾಯೀ!" ಎಂದು ಹೇಳಿ ತಿರುಗಿದನು.

"ರಾಜಣ್ಣನ ಸ್ಥಿತಿಯನ್ನು ಕಂಡು ನಮಗೂ ದುಃಖವಾಗುವದು! ಏನು ಮಾಡುವದು? ದೇವರಾಟ" ಎಂದು ಒಳಗೆ ಹೋದಳು.

ಅಣ್ಣಪ್ಪನು ಅಲ್ಲಿಂದ ಹೊರಟು ರಾಜಣ್ಣನ ಕಕ್ಕನ ಮನೆಗೆ ಬಂದನು. ಕಕ್ಕನು ಕಟ್ಟೆಯಮೇಲೆ ಕುಳಿತಿದ್ದನು. ತಂಬಾಕಿನ ಮುದ್ದೆ ದವಡೆಯಲ್ಲಿದ್ದಿತು. ಅಣ್ಣಪ್ಪನು ನಮಸ್ಕರಿಸಿ ನಿಂತನು.

"ಏನು ಅಣ್ಣಾ!"

"ಅಪ್ಪಕ್ಕನವರು ತೀರಿಕೊಂಡರು."

"ಕೇಳಿರುವೆ. ನಾನೂ ಹೊರಡುವ ಸಿದ್ಧತೆಯಲ್ಲಿರುವೆ. ಇದೋ, ಸಂಚಿಯನ್ನು ಹೆಗಲಮೇಲೆ ಇಟ್ಟುಕೊಂಡಿರುವೆ."

"ನಡೆಯಿರಿ. ಅಪ್ಪನವರು ಸತ್ತು ಬಹಳ ವೇಳೆಯಾಯಿತು. ಭೂಮಿಯ ಋಣವು ಇನ್ನೂ ಎಷ್ಟು ಇರುವದೋ!"

"ಎದ್ದೆ. ದೊಡ್ಡಪ್ಪನು ಬಂದಿರುವನೇ!"

"ಇಲ್ಲ. ಅವರು ತಾಲೂಕಿಗೆ ಹೋಗಿರುವರಂತೆ!"

"ತಾಲೂಕಿಗೆ! ಮುಂಜಾನೆ ಹಳ್ಳದಲ್ಲಿ ಕೈಕಾಲು ತೊಳೆಯುತ್ತಿದ್ದರು!"

"ಅವರ ಮನೆಯವರೇ ಹೇಳಿದರು."

"ಇದ್ದೀತು. ಕುಲಕರ್ಣಿಯು ಬಂದಿರುವನೇ?"

"ಅವರು ತೋಟಕ್ಕೆ ಹೋಗಿರುವರಂತೆ!"

"ಕರೆದು ತಾ!"

"ಇಲ್ಲ. ಅವರು ಸಂಜೆಯವರೆಗೆ ಬರುವದಿಲ್ಲವಂತೆ. ಬಂದರೂ ಹೆಣವನ್ನು ಮುಟ್ಟುವದಿಲ್ಲವಂತೆ."

"ಏಕೆ?"

"ಏನೋ ಪಣ!"

ಕಕ್ಕನು ತಲೆ ಹಿಡಿದುಕೊಂಡು ವಿಚಾರಿಸ ಹತ್ತಿದನು! ಇಬ್ಬರೂ ಬೇಕೆಂತಲೇ ತಪ್ಪಿಸಿರುವರು. ತಾನು ಸಹಾಯಕ್ಕೆ ಹೋಗಿ

ಹೆಚ್ಚಿನ ಕಾರುಣಿಕ ಆಗುವದು ಅಷ್ಟೇ ಇದೆ. ತಿರುಗಿ ಅವರ ದ್ವೇಷಕ್ಕೆ ಕಾರಣ. ರಾಜಣ್ಣನ ನೆರವು ತಪ್ಪಿದರೆ ನಡೆದೀತು! ಅವನ ನೆರವು ನನಗೆ ಬೇಡೇ ಬೇಡ. ಇವರು ಹೆಜ್ಜೆ ಹೆಜ್ಜೆಗೆ ಬೇಕಾದವರು. ಇವರನ್ನು ಬಿಡುವಂತಿಲ್ಲ. ಹೋದರೆ ಸಿಟ್ಟಾಗದುಂಟೇ! ಈ ವಿಕೃತ ವಿಚಾರದ ನಿರ್ಣಯದಿಂದ, ತಂಬಾಕದ ರಸವನ್ನು ಉಗುಳಿ ಬಾಯಿಯನ್ನು ಸ್ವಚ್ಛಮಾಡಿಕೊಂಡು, "ಅಣ್ಣಪ್ಪ, ನೀನು ಮುಂದೆ ಹೋಗು. ಅವಶ್ಯವೆನಿಸಿದರೆ ಕರೆಯಲು ಬಾ. ನಾನು ಇಲ್ಲೇ ಕಟ್ಟೆಯಮೇಲೆ ಕುಳಿತಿರುವೆ. ಬರುವೆ." ಎಂದರು.

"ನೀವೇ ಹಿರಿಯರಾಗಿ ಅಲ್ಲಿಗೆ ಬಂದು...."

"ನಿನಗೆ ತಿಳಿಯದು. ನನ್ನ ಹಿರಿತನವೆಲ್ಲ ಹಾಳಾಗಿದೆ. ರಾಜಣ್ಣನ ಕಣ್ಣಲ್ಲಿ ನಾವು ಉದುರಿಬಿದ್ದ ಬಿಳಿಯ ಗಡ್ಡದ ಚೂರುಗಳು. ನಿರುಪಯೋಗಿ, ತಿಪ್ಪೆಯ ಮೇಲಿನ ಕಸ. ಆ ಮಾತು ಬೇಡ. ಅವಶ್ಯವೆನಿಸಿದರೆ ಯಾರಿಂದಾದರೂ ಹೇಳಿಕಳಿಸು. ಪಂಚೆಯನ್ನು ಸುತ್ತಿಕೊಂಡು ಬಂದೆನೆಂದು ತಿಳಿ." ಎಂದರು.

ಅಣ್ಣಪ್ಪ ಕೈಗಳನ್ನು ಬೀಸಾಡುತ್ತ ತಿರುಗಿ ಬಂದನು.

ಪಿಟಲರ, ಭೀಮ, ತಮ್ಯಾ, ನಿಂಗ ಬಂದಿದ್ದರು. ಅಲ್ಲದೆ ಊರಲ್ಲಿಯ ಗಂಡಸರು, ಹೆಂಗಸರು, ಚಿಕ್ಕವರು ದೊಡ್ಡವರು ಅನೇಕ ಜನರು ನೆರೆದಿದ್ದರು. ದೂರದಲ್ಲಿ ಕೆಲವು ಬ್ರಾಹ್ಮಣಿಯರು ನಿಂತು, ತಮ್ಮತಮ್ಮೊಳಗೆ ಅದು-ಇದು, ಹೀಗಾಯಿತು-ಹಾಗಾಯಿತು ಎಂದು ಅವ್ವಕ್ಕನ ಗತಕಾಲದ ವೈಭವ, ದಾನ ಧರ್ಮದ ಪ್ರಸಂಗಗಳನ್ನು ಮಾತಾಡಿಕೊಳ್ಳುತ್ತಿದ್ದರು. ರಾಜಣ್ಣನ ಅವಿವೇಕದ ಸಂಗತಿಗಳನ್ನು ಚರ್ಚಿಸುತ್ತಿದ್ದರು. ಮನೆತನದ ನಿರ್ಭಾಗ್ಯದ ಚಿತ್ರಗಳನ್ನು ವರ್ಣಿಸುತ್ತಿದ್ದರು. ತಮ್ಮವರು ಬಾರದಿದ್ದುದಕ್ಕೆ ಕೆಲವು ಸಬಲ ಕಾರಣಗಳನ್ನು ನಿವೇದಿಸುತ್ತಿದ್ದರು. ಪಾಪ ಹೀಗಾಗಬಾರದು! ಎಂದು ಉತ್ತರಪೂಜೆಯ ಮಂತ್ರವನ್ನು ನಿವೇದಿಸುತ್ತಿದ್ದರು.

ಪಿಟಲರನು ತಾನು ಮಾಡಿದ ಕೆಲಸವನ್ನು ನಿಂಗನಿಗೆ ಒಪ್ಪಿಸಿ, ಎಲ್ಲ ಮುಗಿಸಿರುವೆ ಎಂದನು.

"ಕುರುಳುಗಳು ಹಳ್ಳಕ್ಕೆ ಹೋದವೆ ?" ನಿಂಗ ಕೇಳಿದನು.

"ಹ! ಮೇದಾರ ಫಕೀರವ್ವನು ತನ್ನ ಕುಳ್ಳುಬಾನವನ್ನು ಕೊಟ್ಟಳು. ಅದನ್ನು ಅಜ್ಜಪ್ಪನು ಒಯ್ದಿರಬೇಕು" ಎಂದು ನುಡಿದನು.

"ಯಾವ ಹಾರುವನೂ ಬರಲಿಲ್ಲ. ರಾಜಣ್ಣನ ಕಕ್ಕ, ಕುಲಕರ್ಣಿ, ಅವರ ಹಿರಿಯ ಮಗ, ದೊಡ್ಡರಾಯರು, ಅವರ ಬೀಗ ಎಲ್ಲರೂ ಊರಲ್ಲಿರುವರು. ಯಾರೂ ಬರಲಿಲ್ಲ. ಅವರಿಗೆ ಈ ಸುದ್ದಿ ತಿಳಿದಿರಲಿಕ್ಕಿಲ್ಲವೇ !" ಭೀಮು ಕೇಳಿದನು.

"ನಾನು ಕರೆದು ಬಂದೆ. ಅವರಾರೂ ಬರುವಂತಿಲ್ಲ." ಅಣ್ಣಪ್ಪ ಹೇಳಿದನು.

"ಕುಲಕರ್ಣಿಯ ಮಗ !" ಹಿಟಲರನು ಪ್ರಶ್ನಿಸಿದನು.

"ಅವನಿಗೆ ತಂದೆ ತಾಯಿ ಇರುವರಂತೆ ! ತಂದೆ ತಾಯಿ ಇದ್ದವರು ಹೆಣವನ್ನು ಹೊರಬಾರದಂತೆ !"

"ನಿಮ್ಮ ಧರ್ಮದಲ್ಲಿ ಹೀಗಿದೆಯೇ ರಾಜಣ್ಣ ?" ನಿಂಗ ಕೇಳಿದನು.

"ಅಹುದು. ತಾಯಿ ತಂದೆ ಇದ್ದವರು ಧರ್ಮದ ನಿಯಮದಂತೆ ಹೊರಬಾರದು. ಇಲ್ಲದವರು ಮನಸ್ಸಿನ ನಿಯಮದಂತೆ ಹೊರ ಬಾರದು. ಹೀಗೆ ಇದೆ."

"ಏನು ಮಾತು ರಾಜಣ್ಣ !"

"ಅಹುದು. ಅನುಕೂಲದಲ್ಲಿ ಧರ್ಮವೆನ್ನಬೇಕು. ಪ್ರತಿಕೂಲ ದಲ್ಲಿ ಅಧರ್ಮವೆನ್ನಬೇಕು."

"ಹಾಗಾದರೆ ಬ್ರಾಹ್ಮಣ ಧರ್ಮದಲ್ಲಿ ಸಾಯುವದು ಕಷ್ಟವೆಂದ ಹಾಗಾಯಿತು ಬಿಡು."

"ಅಹುದು. ಜೀವದಿಂದಿರುವವರೆಗೆ ಹಾರುವರಾಗಿರಬೇಕು. ಸಾಯುವ ಮುಂದೆ ಮುಸಲ್ಮಾನರಾಗಬೇಕು. ಅಂದರೆ ಎರಡೂ ಸಮನಾಗುವವು" ಎಂದು ರಾಜಣ್ಣನು ನುಡಿದನು.

ಈ ಮಾತಿನ ಅರ್ಥ ಅವರಿಗೆ ತಿಳಿಯಲಿಲ್ಲ.

"ಅಂದರೆ ರಾಜಣ್ಣ !" ಹಿಟಲರನು ಕೇಳಿದನು.

"ಜೀವದಿಂದಿದ್ದ ಸಮಯದಲ್ಲಿ ಹಾರುವನ ಹೊಟ್ಟೆಗೆ ಸಾವಿರಾರು

ಜನರ ಮನೆಯ ಹೋಳಿಗೆ ತುಪ್ಪವಾಗುವದು. ಮುಸಲ್ಮಾನನಾಗಿ ಸತ್ತರೆ ಸಾವಿರಾರು ಜನರು ಹೆಣಕ್ಕೆ ಹೆಗಲು ಹಚ್ಚುವರು. ಎರಡೂ ಸಮನಾಗುವವು." ಎಂದು ತನ್ನ ದುಃಖ, ಸಿರಾಶೆ, ಹಟವನ್ನು ಶಬ್ದ ಗಳಿಂದ ಹೊರಗೆ ಹಾಕಿದನು.

ಎಲ್ಲರೂ ತಿಳಿಯಾಗಿ ನಕ್ಕರು.

"ಹಾಗಾದರೆ ಮುಂಡೆ ಏನು ಮಾಡುವದು?" ಭೀಮ ಕೇಳಿದನು.

"ಮುಂದೆ ನಾನು, ಹಿಂದೆ ನೀವು. ಏಳಿರಿ "

"ಛೀ....ಛೀ....ಎಂದಿಗೂ ಆಗದು. ಆ ಪುಣ್ಯವಂತ ತಾಯಿ ಯನ್ನು ನಾವು ಮುಟ್ಟುವದೇ ?" ಹಿಟಲರನು ನುಡಿದನು.

"ಅದಕ್ಕೇ ಮುಟ್ಟುವದು ಹಿಟಲರ! ಅದರಿಂದ ನಮ್ಮ ಪಾಪ ವಾದರೂ ಒಂದಿಷ್ಟು ಕಡಮೆಯಾದೀತು !"

"ರಾಜಣ್ಣಾ, ನಾನು ಒಪ್ಪಲಾರೆ."

"ಒಪ್ಪದಿದ್ದರೆ ಹೆಣವು ಮನೆಯಲ್ಲಿ ಉಳಿಯುವದು. ರಾತ್ರಿ ನಾವೆಲ್ಲರೂ ಕಾಯುವ !"

ಎಲ್ಲರು ಮೌನದಿಂದ ಕುಳಿತರು. ಮತ್ತೆ ಮಾತುಗಳು ಆರಂಭ ವಾದವು. ಚರ್ಚೆಯಾಯಿತು. ವಿಚಾರವಾಯಿತು. ಫಲಿತಾಂಶವು ಹೊರಡಲಿಲ್ಲ. ಕೊನೆಗೆ ರಾಜಣ್ಣನು ಗಟ್ಟಿಯಾಗಿ ನುಡಿದನು.

"ಹೆಣಕ್ಕೆ ಪುಣ್ಯವಿಲ್ಲ; ಪಾಪವಿಲ್ಲ. ಅದು ನಮ್ಮ ನೆಲದ ಮಣ್ಣು. ನೀವು ಏಳಿರಿ ! ನನ್ನ ಇಚ್ಛೆ ನೀವೇ ಮುಚ್ಚಬೇಕೆಂದಿದೆ !" ಎಂದನು.

ಉಳಿದವರು ಮಾತಾಡಲಿಲ್ಲ.

"ಯಾವ ಹಾರುವರೂ ಬರುವದಿಲ್ಲ !" ಅಣ್ಣಪ್ಪ ನುಡಿದನು.

"ಹಿಟಲರ ಏಳು ! ಯಾರು ಬರದಿದ್ದರೂ ನಡೆಯುಬಹುದು. ನೀನು ನನ್ನ ಮಾತನ್ನು ಕೇಳಲೇಬೇಕು. ನನ್ನ ಇನ್ನೊಂದು ಜೀವ ವೆಂದರೆ ನೀನು ! ನಾನು ಮುಂದೆ ಹಿಡಿಯುವೆ. ನೀನು ಹಿಂದೆ ಹಿಡಿ. ಹೆಣವೂ ಹಗುರಿದೆ. ನನಗೆ ಭಾರವಾಗಬಾರದೆಂದು ಅವ್ವನು ತೀರ ಹಗುರಾಗಿರುವಳು" ಎಂದು ಹಿಟಲರನ ಕೈಹಿಡಿದು ಎಬ್ಬಿಸಿದನು.

"ಹರಹರ ಮಹಾದೇವ !" ಎಂದು ನ ೨ ಹಿಟಲರ ಎದ್ದನು.

ಕೊನೆಗೆ ಎಲ್ಲರೂ ಕೂಡಿ ಹೆಣವನ್ನು ಎತ್ತಿದರು. ಸಿಬಿಕೆಯ ಮೇಲೆ ತಂದಿಟ್ಟರು. ಅರಿವೆಯಿಂದ ಮುಚ್ಚಿದರು. ಹಗ್ಗದಿಂದ ಬಿಗಿದರು. ಮುಂದಿನ ಹಿಡಿಕೆಗಳ ಕಡೆಗೆ ರಾಜಣ್ಣ, ಹಿಟಲರರಾದರು. ಹಿಂದೆ ನಿಂಗ, ಭೀಮರಾದರು. ಎಡಬಲದಲ್ಲಿ ತಪ್ಪಾ, ಅಣ್ಣಪ್ಪ ನಿಂತರು. ಎಲ್ಲವೂ ಸಿದ್ಧವಾಯಿತು. ಎಲ್ಲರೂ ಸಿದ್ಧರಾದರು. ಜಯ ಶಂಕರ! ಎಂಬ ಹಿಟಲರನ ಕೂಗಿನಿಂದ ಬಗ್ಗಿದರು, ಹಿಡಿದರು, ಮೇಲೆ ಎತ್ತಿದರು, ಹೆಗಲ ಮೇಲಿಟ್ಟುಕೊಂಡರು, ದಕ್ಷಿಣದ ಮುಖಮಾಡಿ ಹೊರಟರು.

ಕಟ್ಟೆಯ ಮೇಲೆ ನಿಂತ ಬ್ರಾಹ್ಮಣಿಯರು—

'ಅಯ್ಯ! ವಿಧವೆಯ ಸಾವು! ಸ್ನಾನಕ್ಕೆ ಹಾಕಲಿಲ್ಲ.

'ಸೀರೆ ಉಡಿಸಲಿಲ್ಲ.

'ತುಳಸಿಯ ಕಾಷ್ಟ, ಗಂಧದ ಕೊರಡು ಕೆಳಗೆ ಇಡಲಿಲ್ಲ.

'ರಾಜಣ್ಣನು ಬೆಂಕಿಯನ್ನು ಹಿಡಿಯಲಿಲ್ಲ.

'ಮಂತ್ರವಿಲ್ಲ, ತಂತ್ರವಿಲ್ಲ.

'ಒಬ್ಬ ಬ್ರಾಹ್ಮಣನಿಲ್ಲ.

'ಪ್ರಾಯಶ್ಚಿತ್ತವಿಲ್ಲ.

'ಹನಿ ಕಣ್ಣೀರಿಲ್ಲ.

'ಅಳುವಿಲ್ಲ.

'ಹಾಗೇ ಸಾಗಿತು. ಅಧರ್ಮ....'ಎಂದು ಪಿಸುಗುಟ್ಟಿದರು.

ಈ ಅಬ್ರಾಹ್ಮಣ್ಯವಾದ, ಅಧರ್ಮವಾದ, ಸಂಪ್ರದಾಯ ವಿರುದ್ಧವಾದ, ಪರಂಪರಾಘಾತುಕವಾದ, ಹೀನವಾದ, ಅಧಃಪಾತವಾದ ಕಾರ್ಯವನ್ನು ಯಾರೂ ತಡೆಯಲಿಲ್ಲ. ಯಾರೂ ಅಡ್ಡ ಬರಲಿಲ್ಲ. ಆಕಾಶವು ಕಣ್ಣಿಟ್ಟು ನೋಡುತ್ತಿದ್ದಿತು. ದಿಶಾದೇವತೆಗಳು ಎಂಟೂ ಮೂಲೆಯಿಂದ ನೋಡುತ್ತಿದ್ದರು. ಸೂರ್ಯನಾರಾಯಣನು ಸಾಕ್ಷಿಯಾಗಿ ಆಕಾಶವಲ್ಲಿದ್ದನು. ವಾಯುದೇವನು ಅಡಗಿ, ಹನಿಯಲ್ಲಿ ಕರಗಿ ನಿರೀಕ್ಷಿಸಿದನು. ಹೆಣವು ಹನುಮನ ಗುಡಿಗೆ ಬಂದಿತು. ಗುಡಿಯ ಬಾಗಿಲು ತೆರೆದಿದ್ದಿತು! ಮಾರುತಿರಾಯನು ಹಾರುವ

ಮುದ್ರೆಯಲ್ಲಿ ನಿಂತಿದ್ದನು. ಬೆಳ್ಳಿಯ ಕಣ್ಣಿನಿಂದ ನೋಡಿದನು. ಮುಂದೆ ಲಕ್ಷ್ಮೀಗುಡಿಗೆ ಬಂದಿತು. ಚಂಚಲಸ್ವರೂಪಿಯಾದ ಮಹಾಲಕ್ಷ್ಮಿಯು ಕಟಾಕ್ಷಿಸಿದಳು. ಬಸವನಗುಡಿಗೆ ಬಂದಿತು. ಆ ಮಹಾಬಲನು ಅವಲೋಕಿಸಿದನು. ಮುಂದೆ ಸಾಗಿದಂತೆ ಕಿಟಕಿಯಲ್ಲಿ ಹಣಿಕಿಕ್ಕಿ ಕಕ್ಕ, ಮಾಳಿಗೆಯ ಮೇಲೇರಿ ಕುಲಕರ್ಣಿ ನೋಡಿದರು. ದೊಡ್ಡಪ್ಪ ಕಟ್ಟೆಯಮೇಲೆ ಕುಳಿತಿದ್ದನು. ಅವನು ಧಾರಾಳವಾಗಿ ನೋಡಿದನು. ಯಾರೂ ತಡೆಯಲಿಲ್ಲ. ಅಧರ್ಮವು ಸ್ವಚ್ಛಂದವಾಗಿ ಸರಾಗವಾಗಿ ನಡೆಯಿತು. ಈ ಕೌತುಕವನ್ನು ನೋಡಲು ಅನೇಕ ಜನರು ಬೆನ್ನು ಹತ್ತಿದರು. ಮುಂದೆ ಮುಂದೆ ಸಾಗಿದಂತೆ ಜನಸಂಖ್ಯೆ ಬೆಳೆಯಿತು. ಹಳ್ಳದ ದಂಡೆಯ ಮೇಲೆ ಜನಜಾತ್ರೆಯಾಯಿತು. ಸ್ಮಶಾನಕಟ್ಟೆಯ ಸುತ್ತು ಹಿಟಲರನು ಕೆಲವು ವ್ಯವಸ್ಥಾಪಕರನ್ನು ನಿಯಮಿಸಬೇಕಾಯಿತು. ಇದು ಅಪ್ಪಕ್ಕನ ಅಸ್ವಾಭಾವಿಕ, ಅನಿರೀಕ್ಷಿತ, ಅಗಂತುಕ ಕಳೇವರದ ಮೆರವಣಿಗೆಯಾಯಿತು. ಅಂತ್ಯಕ್ರಿಯೆಯಾಯಿತು.

ಆದರೆ—ಹಳ್ಳದಲ್ಲಿ ಜುಳುಜುಳು ಹೆಜ್ಜೆಯನ್ನಿಟ್ಟು ಹರಿವ ಲೋಕಪೂಜ್ಯಳಾದ ಗಂಗಾಮಾತೆಗೆ ಈ ಅಭದ್ರವನ್ನು ನೋಡಿ, ಈ ಅಶುಭವನ್ನು ನಿರೀಕ್ಷಿಸಿ, ಈ ಅಮಂಗಲವನ್ನು ಕಂಡು ಸಂತಾಪವಾಯಿತು. ಇಂಥ ದುಷ್ಟರನ್ನು ಸಂಹರಿಸಬೇಕೆಂದು ಸಂಕಲ್ಪಿಸಿದಳು. ಸಾದ್ಯಂತ ವರ್ತಮಾನವನ್ನು ಸರಿತ್‌ಪಿತನಿಗೆ ಅರಿಕೆಮಾಡಿದಳು. ಅವನು ಕ್ರೋಧಾವಿಷ್ಟನಾಗಿ ಸಿಡಿಲಿನ ಕುದುರೆಗಳನ್ನು ಓಡಿಸುತ್ತ, ಗುಡುಗಿನ ರಣವಾದ್ಯಗಳನ್ನು ಬಾರಿಸುತ್ತ, ಶತ್ರು ಸಂಹಾರಕ್ಕೆ ಕರಿಬೇಡರ ಪಡೆಯಾದ ಮೋಡಗಳನ್ನು ನುಗ್ಗಿಸುತ್ತ ಯಾರಿಗೂ ತಿಳಿಯದಂತೆ ಅನಿರೀಕ್ಷಿತವಾಗಿ ಹಳ್ಳಿಯನ್ನು ಸುತ್ತುವರಿದನು. ಜಲಧಾರೆಯ ಅಸಂಖ್ಯ ಶರಗಳನ್ನು ಬಿಟ್ಟನು. ಆಕಾಶದಲ್ಲಿಯ ಪಿತೃದೇವತೆಗಳು ರಿಮುಝಿಮು ಸ್ವರದಿಂದ ಅಳುತ್ತ ಕಣ್ಣೀರು ಉದುರಿಸ ಹತ್ತಿದರು. ಸರಿತ್‌ಪಿತನು ಇನ್ನೂ ಸಿಟ್ಟಾದನು. ಹಳ್ಳಿಯನ್ನು ನೀರಲ್ಲಿ ನೆನೆಯಿಟ್ಟಂತೆ ಮುಸಲ ಧಾರೆಯನ್ನು ಆರಂಭಿಸಿದನು. ಮೂರು ತಾಸು

ಅವ್ಯಾಹತವಾಗಿ, ಅಖಂಡವಾಗಿ ಮಳೆಬಿದ್ದಿತು. ಅಂದಿನಂತಹ ಮಳೆಯು ಜನ್ಮದಲ್ಲಿ ಆಗಿಲ್ಲ! ಎಂದು ಎಂಬತ್ತು ವರುಷದ ಮುದುಕನೊಬ್ಬ ದನಗಳನ್ನು ಹಟ್ಟಿಯಲ್ಲಿ ಅಡಗಿಸಿ ಗೊಣಗುತ್ತಿದ್ದನು. ಮೋರಿಗೆಗಳು ತುಂಬಿ ನೀರು ಹೊರಚಿಮ್ಮಿದವು. ಹಳ್ಳವು ಉಕ್ಕೇರಿ ಹರಿಯಿತು. ಮನೆಗಳು ಬಿದ್ದವು. ಗಿಡಗಳು ಉರುಳಿದವು. ಹೊಲದೊಳಗಿನ ರೈತರು ಹೊಲಕ್ಕೆ ಆಹುತಿಯಾದರು. ದನಗಳು ಹಳ್ಳದಗುಂಟ ತೇಲಿ ಹೋದವು. ಅವ್ವಕ್ಕನು, ಅವಳ ಅವಶೇಷಗಳು ತುಂಬಿ ಹರಿವ ಜಲದಲ್ಲಿ ಎಲ್ಲಿಯೋ ಹೋದವು. ಅವಳ ಚಿತಾಭಸ್ಮದ ಒಂದು ಕಣ, ಎಲುವಿನ ಒಂದು ಸಣ್ಣ ಚೂರು ಸಹ ಉಳಿಯಲಿಲ್ಲ. ಅಗ್ನಿ ಸಂಸ್ಕಾರದ ನೆಲದ ಗುರುತೇ ಇರಲಿಲ್ಲ. ಮಳಲಿನ ಒಂದು ರಾಶಿಯು ಎತ್ತರವಾಗಿ ಬಿದ್ದಿದ್ದಿತು.

ತಾಯಿಯ ಅಂತ್ಯಕ್ರಿಯೆಗೆ ಒಂದು ಎಲುವಿನ ಚೂರು ಸಹ ಉಳಿಯದಿರಲು ಅವರ ಘನವಾದ ಪಾಪವೇ ಕಾರಣವೆಂದು ಕೆಲವರಾಡಿದರು.

ಇದು ಅವ್ವಕ್ಕನ ಪುಣ್ಯದ ಪ್ರತ್ಯಕ್ಷ ದೃಷ್ಟಾಂತವೆಂದು ಉಳಿದವರು ನುಡಿದರು.

ಮೊದಲನೆಯದು ಮೂರೂ ಅರ್ಧ ಮನೆಯ ಹಾರುವರ ವಿಮರ್ಶೆ. ಎರಡನೆಯದು ಊರ ಹಿರಿಯರ ಹೇಳಿಕೆ.

ಈ ಭಿನ್ನಾಭಿಪ್ರಾಯದಿಂದಲೇ ಅದು ಇನ್ನೂ ಚರ್ಚೆಯ ವಿಷಯವಾಗಿ ನಿಂತಿದೆ.

## ೨೭

ಅಕ್ಕಾಮರಿಯ ಮುಟ್ಟು ನಿಂತು ಮೂರು ತಿಂಗಳಾಯಿತು. ಮುಟ್ಟಾಗಬೇಕೆಂದು ಗುಳಿಗೆಗಳನ್ನು ನುಂಗಿದಳು, ಭಸ್ಮವನ್ನು ನೆಕ್ಕಿದಳು, ಕಷಾಯ ಕುಡಿದಳು. ಹೊಟ್ಟೆಯನ್ನು ಹಿಸುಕಿಕೊಂಡಳು. ಆದರೆ ಮುಟ್ಟು ಗಟ್ಟಿಯಾಗಿದ್ದಿತು. ಈಗ ತಿನ್ನುವ ಬಯಕೆಗಿಂತ. ಮುಟ್ಟು ನಿಂತ ಭಯಕ್ಕೆ ಹಣ್ಣಾಗಿದ್ದಳು. ಬರಬರುತ್ತ ಊಟ ನಿಂತಿತು. ಜುಲುಮೆಯಿಂದ ಉಂಡದ್ದು ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ. ವಿನೋದ ಸಾಕಾಯಿತು. ಚಿನ್ನಯ್ಯನ ಸಹವಾಸ ಬೇಡಾಯಿತು. ಅಲಂಕಾರದ ಕರಡಿಗೆ ಎನಿಸುವ ತಾಯಿಯ ಮನೆಯು ಭಯಾನಕ ವೆನಿಸ ಹತ್ತಿತು. ಇನ್ನೇನು ಗತಿ ? ಎಂಬ ವಿರಾಟ ಸ್ವರೂಪಿಯಾದ ಪ್ರಶ್ನೆಯು ಕಣ್ಣು ಮುಂದೆ ನಿಂತು ಅಣಕಿಸ ಹತ್ತಿತು. ಏನು ಮಾಡಿದೆ ? ಏನಾಯಿತು ? ಹೇಗೆ ಪಾರಾಗುವದು ? ದಾರಿಯಿಲ್ಲವೇ ? ಸಾಯುವ ಹೊತ್ತು ಬಂದಿತೇ ? ಅದೇ ಯೋಗ್ಯವಲ್ಲವೇ ? ಎಂದು ಚಿಂತಿಸಿದಳು.

ಮಗಳು ಅಲ್ಲಿಯೂ ಬಂದು "ಅವ್ವಾ ನನಗೆ ಪೇಢೆ !" ಎಂದು ನುಡಿಯುತ್ತ ತೊಡೆಯನ್ನು ಏರಿತು.

ಅಕ್ಕಾಮರಿಗೆ ಮಗಳ ಮಾತಿನ ಕಡೆಗೆ ಲಕ್ಷ್ಯವಿರಲಿಲ್ಲ. ತನ್ನ ಚಿಂತೆಯಲ್ಲಿ ತನ್ಮಯಳಾಗಿ ಕುಳಿತಿದ್ದಳು. ಮಗುವು ತಾಯಿಯ ಮುಖವನ್ನು ಹಿಡಿದು ಮತ್ತೆ ಕೇಳಿತು. ಧ್ಯಾನ ಭಂಗವಾದುದಕ್ಕೆ ಮಗಳನ್ನು ದೂರ ಸರಿಸಿ ಸಾವರಿಸಿಕೊಂಡು ಕುಳಿತಳು. ಲಿಲ್ಲಿಯು ನೆಲಕ್ಕೆ ಬಿದ್ದು ಅಳ ಹತ್ತಿದಳು. ಪುಟ್ಟವ್ವನು ಓಡುತ್ತ ಬಂದು "ಏಕೆ

ಅಳುವೆ ಮಗು ?" ಎಂದು ಎತ್ತಿಕೊಂಡು ಕಣ್ಣೀರು ಒರೆಸಿದಳು.

"ಅವ್ವ....ಬಿದ್ದೆ...." ಎಂದು ಬಿಕ್ಕುತ್ತ ನುಡಿದಳು.

"ಮಗುವು ಬಿದ್ದು ಅಳ ಹತ್ತಿದರೂ ನಿನಗೆ ಎಚ್ಚರವಿಲ್ಲ. ಇದೆಂತಹ ನಿನ್ನ ಚಿಂತೆ !" ಎಂದು ನುಡಿದು ಮಗುವನ್ನು ಒಳಗೆ ಕರೆದುಕೊಂಡು ಹೋಗಿ ಪೇಢೆಯನ್ನು ಕೊಟ್ಟು ಸಮುದಾಯಿಸಿದಳು.

ಲಿಲ್ಲಿಯು ಕೆಳಗಿಳಿದು ತಿನ್ನುತ್ತ ತನ್ನ ಗೊಂಬೆಗಳನ್ನು ಹರಹಿಕೊಂಡು ಆಡ ಹತ್ತಿದಳು.

"ಹೀಗೆ ಚಿಂತೆ ಮಾಡಿದರೆ ಹೇಗೆ ಅಕ್ಕಾಮರಿ ?" ಪುಟ್ಟವ್ವನು ಮಗಳನ್ನು ಪ್ರಶ್ನಿಸಿದಳು.

"ಚಿಂತೆ ಮಾಡದೆ ಏನು ಮಾಡಲಿ ? ಕೆರೆಗೆ ಹಾರೆನ್ನುವೆಯಾ ?"

"ಕೆರೆಗೇಕೆ ಹಾರಬೇಕು ?"

"ಅಮ್ಮಾ, ತಿಳಿದೂ ನೀನು ಹೀಗೆ ಮಾತಾಡುವೆ."

"ನನಗೆ ಎಲ್ಲವೂ ತಿಳಿದಿದೆ. ಅದಕ್ಕೇ ಹೀಗೆ ಮಾತಾಡುವೆ."

"ನಿನ್ನ ಮಾತುಗಳೇ ನನಗೆ ತಿಳಿಯವು !" ಬೇಜಾರದಿಂದ ನುಡಿದಳು.

"ತಿಳಿಯುದೇನು. ನೀನು ಒಂದು ಮಗುವಿನ ತಾಯಿಯಾಗಿರುವ."

"ಇನ್ನೊಂದು ಮಗುವಿನ ತಾಯಿಯಾಗೆಂದು ಆಶೀರ್ವದಿಸುವೆಯಾ ?" ಆಕ್ರೋಶದಿಂದ ನುಡಿದಳು.

"ಅಹುದು."

"ವಿಷವಿದ್ದರೆ ತಂದುಕೊಡು. ನುಂಗಿ ಈ ಸ್ತ್ರೀಜನ್ಮವನ್ನು ನೀಗಿ ಸಂತೋಷ ಪಡುವೆ." ಎಂದು ಗಳಗಳ ಅಳಹತ್ತಿದಳು.

"ಅಳಬೇಡ ಅಕ್ಕಾಮರಿ. ನನಗೆ ಇದೆಲ್ಲ ಗೊತ್ತಾಗಿದೆ. ಆ ಬಗ್ಗೆ ವಿಚಾರಿಸಿಯೂ ಇಟ್ಟಿರುವೆ. ನಾಲ್ಕೈದು ದಿನಗಳವರೆಗೆ ತಾಳು, ಚಿನ್ನಯ್ಯನವರೂ ಪ್ರಯತ್ನದಲ್ಲಿರುವರು."

"ಇಷ್ಟೆಲ್ಲ ಅನಾಹುತಕ್ಕೆ ಆ ಹಾಳು ಮುಂಡೇಮಗನೇ ಕಾರಣ. ಇಲ್ಲದ ಆಶೆಯನ್ನು ತೋರಿಸಿ, ಇಲ್ಲದ ರಂಜಕದ ಮಾತುಗಳನ್ನು ಹೇಳಿ ನನ್ನನ್ನು ನರಕಕ್ಕೆ ತಳ್ಳಿದನು. ನಾನು ನರಕದಲ್ಲಿ ಬೀಳುವವನ್ನು ನೀನು

ನೋಡಿದೆ. ಅಲ್ಲದೆ ಪ್ರೋತ್ಸಾಹಿಸಿದೆ. ಅಮ್ಮಾ, ನಾನು ನಿನಗೆ ಬೇಡಾಗಿದ್ದರೆ ಹೀಗೆ ಮಾನಗೇಡಿಯನ್ನಾಗಿ ಮಾಡಿ ಕೊಲ್ಲುವದೇಕಿದ್ದಿತು. ಕರೆದು ತಂದದಿನ ಭಾರವೆನಿಸಿದ್ದರೆ ಕತ್ತುಹಿಸುಕಿ ಕೊಲ್ಲಬಾರದಿದ್ದಿತೇ ?"

ಪುಟ್ಟವ್ವನು ಮಗಳ ಅಭದ್ರ ನುಡಿಗಳನ್ನು ಕೇಳುತ್ತ ಸುಮ್ಮನೆ ನಿಂತಿದ್ದಳು.

"ಯಾರೇನು ಮಾಡುವದು ! ನನ್ನ ಹಣೆಯಬರೆಹವು ನನ್ನನ್ನು ನರಕಕ್ಕೆ ತಳ್ಳಿತು !" ಎಂದು ಮತ್ತೆ ಅಳ ಹತ್ತಿದಳು.

"ಅಕ್ಕಾಮರಿ, ಹೀಗೆ ಹುಚ್ಚಿಯಂತೆ ಮಾತಾಡಬೇಡ. ಎಲ್ಲಕ್ಕೂ ಸಮಯಬೇಕು. ತಾಳಿಕೊಂಡಿರು."

"ನನ್ನ ಮಾವನವರ ಮನೆಯು ಇಂದ್ರಭವನವಾಗಿದ್ದಿತು. ಮದುವೆಯನ್ನು ಮಾಡಿಕೊಂಡು ಅತ್ತೆಯ ಮನೆಗೆ ಹೋಗಿ ೫-೬ ವರುಷಗಳಾಗಿದ್ದರೂ ಹೊಸಲ ಹೊರಗೆ ಒಂದು ದಿನ ಕಾಲಿಟ್ಟರಲಿಲ್ಲ. ಮಾವ, ಅತ್ತೆ, ಅವರು ಇವರ ಹೊರತು ಬೇರೆಯವರ ಮುಖವನ್ನು ನೋಡಿರಲಿಲ್ಲ. ಪರದೆಯ ಹೆಂಗಸೆಂದು ಓರಗೆಯವರು ಅಂದ ಮಾತನ್ನು ಕೇಳಿರುವೆ. ಆ ದೈವ ನನಗೆ ಈಗೆಲ್ಲಿ! ಎಲ್ಲವೂ ಹಾಳಾಯಿತು. ಮಾವ ಸತ್ತರು ಅತ್ತೆ ಹೋದಳು. ಅವರು ಮನುಷ್ಯತ್ವವನ್ನು ಕಳೆದುಕೊಂಡು ನಿಂತಿರುವರು. ನಾನು ಇಲ್ಲಿ ನಿನ್ನ ಸಹವಾಸದಿಂದ ಸ್ತ್ರೀತ್ವವನ್ನು ಮಾರಿಬಿಟ್ಟು ಬದುಕಿರುವೆ. ಈಗ ನಾನು ಬಸವಿ. ದಾರಿಗುಂಟ ನಡೆಯುವ ಮುಂದೆ ನಿನ್ನ ಮನೆಯ ಬಳಗದವರು-'ನಟಿ, ನಟಿ, ನಟಿ ಬಂದಳು' ಎಂದು ಕಿವಿಗೆ ಕೇಳಬರುವಂತೆ ಅನ್ನುವರು. ಕೆಲವು ಕಿಡಿಗೇಡಿ ತರುಣರು ಮನೆಯ ಬಾಗಿಲ ಮೇಲೆ 'ವೇಶ್ಯಾಗೃಹ' ಎಂದು ಖಡುವಿನಿಂದ ಬರೆಯುವರು. ಅಮ್ಮಾ, ಹೂ ಮಾರಿದಲ್ಲಿ ಹುಲ್ಲು ಮಾರುವಂತಹ ಈ ಅವಮಾನವನ್ನು ಹೇಗೆ ಸಹಿಸಲಿ ? ನನಗೆ ವಿಷವಿದ್ದರೆ ಕೊಡು. ನಾನು ತಿಂದು ಪಾರಾಗುವೆ" ಎಂದು ತಡೆತಡೆದು ಆವೇಶದಿಂದಲೂ, ದುಃಖದಿಂದಲೂ ನುಡಿದಳು.

ಮಗಳ ಮಾತಿನಲ್ಲಿ ಕೆಲವು ತಪ್ಪುಗಳು ಸ್ಪಷ್ಟವಾಗಿದ್ದವು. ಆ ತಪ್ಪಿಗೆ ತಾನೇ ಹೊಣೆಗಾರಳಿದ್ದಳು. ಅವುಗಳ ನಿಷ್ಕರ್ಷೆಯನ್ನು

ಮಾಡಿ ತಿರುಗಿ ಮಗಳ ಕೊರಳಿಗೆ ಕಟ್ಟುವಂತಿರಲಿಲ್ಲ. ಸಂಕಟ ಬಂದಿದೆ ಎಂದು ಇದ್ದದ್ದರ ಜತೆಗೆ ಇಲ್ಲದ್ದನ್ನು ಆಡುವಳೆಂದು ಸ್ಪಷ್ಟ ಮಾಡಿಕೊಂಡಳು. ಕೆರೆಯಲ್ಲಿ ಮಗಳನ್ನು ನೂಕಿ ತಾನು ನೋಡುವ ಸ್ಥಿತಿಯಲ್ಲಿಯೂ ಇರಲಿಲ್ಲ. ಇಂದಿಗೆ ಮಗಳಿಂದಲೇ ತನ್ನ ಜೀವನ. ಮಗಳೇ ತನ್ನ ಸರ್ವಾಧಾರಳಾಗಿದ್ದಳು. ಮಗಳು ಗಂಡನ ಮನೆಗೆ ಹೋದರೆ ಇಲ್ಲವೆ ಸತ್ತರೆ ಅಥವಾ ಬೇರೆಯಾಗಿ ನಿಂತರೆ ಒಂದು ತುತ್ತು ಅನ್ನಕ್ಕೂ ಆಕೆಗೆ ಗತಿಯಿರಲಿಲ್ಲ. ಮೇಲೆ ಮುಪ್ಪು ತನ್ನಲ್ಲಿ ಹೆಜ್ಜೆ ಹೆಜ್ಜೆಯಾಗಿ ಕಾಲಿಡುತ್ತಿದ್ದಿತು. ಮಗಳ ಸಹಾಯದಿಂದ ತನ್ನ ಬಳಗ ದವರ ದ್ವೇಷಾಗ್ನಿಯನ್ನು ಮೆಟ್ಟಿ ದಾಟಬಲ್ಲೆನೆಂಬ ಆತ್ಮವಿಶ್ವಾಸ ವಿದ್ದಿತು. ಸಮಾಜದ ನಿಂದೆಗೆ ಆಕೆಯು ಬೆಲೆಯನ್ನು ಕೊಡುತ್ತಿರಲಿಲ್ಲ. ಸಮಾಜದಲ್ಲಿಯ ಪ್ರತಿಷ್ಠಿತರು ತನ್ನ ಸಲಿಗೆಯವರೆಂದು ಆಕೆಯ ಭಾವನೆ. ಉಳಿದವರು ಮೂಕದನಗಳೆಂದು ಆಕೆಯ ಎಣಿಕೆ. ಇಲ್ಲ ಸಲ್ಲದ್ದನ್ನು ನುಡಿದವರಿಂದ ಮಾನಹಾನಿಯ ದಂಡವನ್ನು ವಸೂಲ ಮಾಡಬಹುದೆಂದು ಆಕೆಯ ನಂಬಿಗೆ. ಸಮಾಜವಾದರೂ ಇವರ ನೈತಿಕ ಕ್ಷೇತ್ರದಲ್ಲಿ, ಧಾರ್ಮಿಕ ನೆಲೆಯಲ್ಲಿ ಪ್ರತ್ಯಕ್ಷವಾಗಿ ಕೈಹಾಕು ತ್ತಿರಲಿಲ್ಲ. ಹಾಕುವಂತೆಯೂ ಇರಲಿಲ್ಲ. ಏಕೆಂದರೆ ಅವರಿಗೆ ತಮ್ಮ ಮನೆಯ ಒಲೆಯೂ ಮಣ್ಣಿನದೆಂಬ ಜ್ಞಾನವಿದ್ದಿತು. ಹೀಗಾಗಿ ಪುಟ್ಟವ್ವನು ತನ್ನ ಹಳ್ಳಿಯಲ್ಲಿ ಗಣ್ಯವ್ಯಕ್ತಿಯಾಗಿದ್ದಳು. ಧನಿಕ ಕುಳ ವಾಗಿದ್ದಳು. ಕೈ ಸಡಿಲಾದವಳು. ನಾಲಗೆಯಿಂದ ರುಚಿ ಮಾತಿ ನವಳು. ಪ್ರಸಂಗ ವಿಶೇಷದಲ್ಲಿ ಕಾಳು-ಕಡಿ, ಅರಿವೆ-ಅಂಚಡಿ, ಊಟ-ಪಾಟಗಳನ್ನು ನೆರೆಹೊರೆಯವರಿಗೆ ಕೊಡುವ ಸಾಮರ್ಥ್ಯ ದವಳು. ಕೊಟ್ಟೂ ಇದ್ದಳು. ಇದರಿಂದ ಸಾಮಾನ್ಯರು ಆಕೆಯನ್ನು ವಿಶೇಷವಾಗಿ ಗೌರವಿಸುತ್ತಿದ್ದರು.

ಕೆಲವು ಗಣ್ಯವ್ಯಕ್ತಿಗಳು—

'ಅವಳ ಮನೆಯ ಹುಳುಕು ತೆಗೆದುಕೊಂಡು ನಮಗೇನು ಮಾಡುವದು. ಪಾಪ-ಪುಣ್ಯದ ಹೊಣೆಗಾರರು ಅವರು. ಅದರ ನಿರ್ಣಯ, ಶಿಕ್ಷೆಯು ಚಿತ್ರಗುಪ್ತರದು, ಯಮದೂತರದು. ಅವರ

ಒಳ್ಳೆತನವನ್ನು ನಾವು ಉಪಯೋಗಿಸಿಕೊಂಡರಾಯಿತು' ಎಂದು ಪ್ರಸಂಗವಿಶೇಷದಲ್ಲಿ ಆಕೆಯ ಸಲಹೆ ಸೂತ್ರಗಳನ್ನು ಕೇಳುತ್ತಿದ್ದರು. ಜಾತ್ರೆ-ಓಕಳಿಯಲ್ಲಿ ಆಕೆಯಿಂದ ಹೆಚ್ಚು ಹಣವನ್ನು ನಿಧಿಯಾಗಿ ಎತ್ತುತ್ತಿದ್ದರು. ಮತ್ತು ಪುಟ್ಟವ್ವನು ೪೫—೫೦ರ ಸುಮಾರಿಗೆ ಬಂದಿದ್ದರೂ ಅವಳ ಸ್ಥಿರ ಸೌಂದರ್ಯ ಅನೇಕರ ಕುತೂಹಲಕ್ಕೆ, ಜನಸಂಗ್ರಹಕ್ಕೆ, ಸೆಳೆತಕ್ಕೆ ಕಾರಣವಾಗಿದ್ದಿತು.

ಪುಟ್ಟವ್ವನು ಮಗಳನ್ನು ಹತ್ತರ ಸೆಳೆದುಕೊಂಡು, ಗದ್ದವನ್ನು ಹಿಡಿದು "ಅಕ್ಕಾಮರಿ, ನಾನು ಎಲ್ಲವನ್ನೂ ಮಾಡಿರುವೆ. ನೀನು ಹೆದರ ಬೇಡ. ಎರಡು ದಿನಗಳಲ್ಲಿ ರಾಜಣ್ಣನು ಇಲ್ಲಿಗೆ ಬರುವಂತೆ ಮಾಡಿರು ವೆನು. ಅವನು ಬರುವನು. ನಾಲ್ಕಾರು ದಿನ ನಿಲ್ಲುವನು. ನೀನು ಸುಮ್ಮನಿರು" ಎಂದು ಕೂದಲನ್ನು ನೇವರಿಸಿದಳು.

"ಅವರು ಬರುವರು !" ಆಶ್ಚರ್ಯದಿಂದ ಕೇಳಿದಳು.

"ಬರಬಹುದು. ಕರೆಕಳುಹಿರುವೆನು."

ಅಕ್ಕಾಮರಿಯು ಸುಮ್ಮನಾದಳು.

"ಏನು ವಿಚಾರಿಸುವೆ !" ಪುಟ್ಟವ್ವನೆಂದಳು.

"ಅವರು ಬಂದರೆ !" ಅಷ್ಟಕ್ಕೆ ತಡೆದಳು.

"ಗಂಡನು ಮನೆಗೆ ಬಂದರೆ ಮುಂದೇನು !"

"ನಾನು ಆವರ ಜತಗೆ ಹೋಗಬೇಕೇ ?"

"ನಿನ್ನ ಇಚ್ಛೆಯಾದರೆ ಹೋಗು."

"ನನ್ನಿಚ್ಛೆ ಏನು ?"

"ಅವನು ಕರೆದರೆ ಹೋಗು."

"ಅವರ ಜತೆಗೆ !"

"ಅಹುದು."

ಅಕ್ಕಾಮರಿಯು ಗಂಡನ ಜತೆಗೆ ಹಳ್ಳಿಗೆ ಹೋಗುವದು ಸಂಕಟದ ಮಾತಾಗಿದ್ದಿತು. ಗಂಡನೆಂಬ ಯಾವ ಹೊಣೆಯನ್ನರಿಯದ ಉದ್ದಂಡ ಗಂಡನೆಂದು ಅವಳು ನಿಶ್ಚಯಿಸಿಕೊಂಡ ಸಂಗತಿ. ಅದು ಹದಿನಾರಾಣೆ ಸತ್ಯವಾದ ಮಾತು. ಪ್ರಪಂಚವನ್ನು ನಡಿಸುವ ಯಾವ

ಜ್ಞಾನವಿರಲಿಲ್ಲ. ಕಾಳುಕಡ್ಡಿಯನ್ನು ಸಂಗ್ರಹಿಸುವದು, ಮನೆಯುವರನ್ನು ಪೋಷಿಸುವದು, ಹೊಲ ಮನೆಗಳನ್ನು ರಕ್ಷಿಸಿ ಒಕ್ಕಲತನವನ್ನು ನಡಿಸುವದು, ತನ್ನವರ ಸಂಗಡ ಸೌಜನ್ಯದಿಂದ ವರ್ತಿಸುವದು, ಅಲ್ಲದೆ ಮನೆಯುವರ ಕೂಡ ಮರ್ಯಾದೆಯಿಂದ ನಡೆಯುವದು ಇತ್ಯಾದಿ ಸಾಮಾನ್ಯಜ್ಞಾನವಾದರೂ ಅವನಲ್ಲಿ ಒಂದು ನಿಶ್ಚಿತಮಟ್ಟದಲ್ಲಿ ಇರಲಿಲ್ಲ. ಏರಿದಾಗ ಒಂದು, ಇಳಿದಾಗ ಇನ್ನೊಂದು! ಕಲಿತವನಲ್ಲ, ಕಲಿಯುದವನೂ ಅಲ್ಲ. ಹೊಲದ ವ್ಯವಹಾರವಾಗಲಿ, ಕೊಡಕೊಂಬ ವ್ಯವಹಾರವಾಗಲಿ, ಪೇಟಿ–ಕೋಟೆಯ ವ್ಯವಹಾರವಾಗಲಿ ಹೊಂದಿಗೆ ಇಲ್ಲದವು. ಅಪ್ಪಾರಾಯರು ಜೀವದಿಂದಿರುವವರೆಗೆ ಊಟ-ಬೇಟ ಎರಡನ್ನೇ ಮಾಡಿ ಬೆಳೆದವನು. ಹೀಗಿದ್ದು ಇಂಥ ಅನಾರ್ಯ ಗಂಡನ ಸಂಗಡ ಬದುಕುವದೆಂತು? ತಾನು ಮುಂದೆ ಹೊಕ್ಕು ವ್ಯವಹಾರ ಸಾಗಿಸಬೇಕೆಂದರೆ ಹಿಂದೆ ಸರಿಯುವವನಲ್ಲ! ಮಹಾ ಅಹಂಕಾರಿ! ಪಶು ಹೃದಯುದವ. ೪-೫ ಸಾರೆ ಮೈ ಹುಳಿಯೇರುವಂತೆ ಬಡಿತ ತಿಂದು ಅನುಭವ ಪಟ್ಟಿದ್ದಳು. ಈಗ ಆ ಮನೆಯಲ್ಲಿ ತಾನು, ಅವನು! ಜೀವ ತಳಮಳಿಸಿತು. ಭಾವನೆಯು ಲಟಪಟಿಸಿತು. ಮನಸು ತೂಗಾಡಿತು. ಅವನ ಸಂಗಡ ಬಾಳುವದು ಸಾಧ್ಯವಿಲ್ಲವೆಂದು ಗಟ್ಟಿಮಾಡಿಕೊಂಡಳು. ಆದರೂ ಅವರು ೪–೫ ದಿನಗಳಲ್ಲಿ ಬರುವರು! ಮನೆಗೆ ಕರೆಯುವರು! ಏನು ಹೇಳಬೇಕು? ಏನು ಉತ್ತರಿಸಬೇಕು? ಹೊಂದಿಕೆಯಾದರೆ ಹೋಗಬೇಕು! ಇಲ್ಲದಿದ್ದರೆ ತಾಯಿ ಏನೆನ್ನುವಳೋ....

"ಇಂದು ಚಿನ್ನಯ್ಯನವರು ಬರುವ ದಿನ. ಸುಮ್ಮನಿರು!" ಪುಟ್ಟವ್ವ ನುಡಿದಳು.

"ಇಂದೂ ಬರುವರೇ?"

"ನಿನ್ನೆ ಹೇಳಿ ಹೋಗಿರುವರು."

"ಅವ್ವಾ........"

"ಏನು?"

"ನನಗೆ ಇಂದು ವಿಶ್ರಾಂತಿ ಬೇಕು!"

"ನನಗೆ ನಿನ್ನ ಆಟದ ಅರ್ಥವಾಗದು. ತಿಳಿದಂತೆ ಮಾಡು" ಎಂದು ವಟಗುಟ್ಟುತ್ತ ಪುಟ್ಟವ್ವನು ಹೊರಗೆ ಹೋದಳು.

ಅಕ್ಕಮ್ಮಾರಿಯು ಲಿಲ್ಲಿಯನ್ನು ಕರೆದು ತೊಡೆಯಮೇಲೆ ಕೂಡಿಸಿ ಕೊಂಡು ಮುದ್ದುಗರೆಯ ಹತ್ತಿದಳು.

ಮಧ್ಯರಾತ್ರಿಯ ಸುಮಾರಿಗೆ ಚಿನ್ನಯ್ಯನು ಬಂದನು. ಪುಟ್ಟವ್ವನು ಬಾಗಿಲನ್ನು ತೆರೆದಳು. ಅಯ್ಯನು ಒಳಗೆ ಬಂದು ಮಂಚದಮೇಲೆ ಕುಳಿತನು. ಪುಟ್ಟವ್ವನು ಗಟ್ಟಿಯಾಗಿ ಬಾಗಿಲನ್ನು ಇಕ್ಕಿದಳು.

ಐದಾರು ನಿಮಿಷ ಮೌನದಲ್ಲಿ ಕಳೆಯಿತು. ಕೊನೆಗೆ ಪುಟ್ಟವ್ವನು "ರಾಜಣ್ಣನ ಸುದ್ದಿ ಏನು ?" ಎಂದು ಕೇಳಿದಳು.

"ಏನಿರಬೇಕು. ಅವನ ದಿನದ ವ್ಯವಹಾರವು ಹಾಗೆಯೇ ಸಾಗಿದೆ !"

"ಅಂದರೆ ?"

"ವಿನೋದ, ತಮಾಷೆ !"

ಪುಟ್ಟವ್ವನು ಸುಮ್ಮನೆ ಕುಳಿತಳು. ರಾಜಣ್ಣನ ಸುದ್ದಿಯನ್ನು ವಿವರವಾಗಿ ತಿಳಿಯಬೇಕೆಂದು ಅವಳ ಲವಲವಿಕೆ. ಚಿನ್ನಯ್ಯನು ಒಂದೆರಡು ಶಬ್ದದಲ್ಲಿ ಉತ್ತರಿಸುತ್ತ ನಡೆದಿದ್ದನು. ತಡೆಯದೆ "ಏನು? ಪೂರ್ಣ ಹೇಳಿರಿ" ಎಂದಳು.

"ಮನೆಗೆ ಈಗ ಒಬ್ಬನೇ ! ಕೇಳುವವರಿಲ್ಲ. ಹೇಳುವವರಿಲ್ಲ. ಅಡ್ಡಿ ಆತಂಕ ಮಾಡುವವರಿಲ್ಲ. ಎಲ್ಲ ಹೊಲಗಳ ಮೇಲೆ ಮುಂಗಡ ಹಣವನ್ನು ಪಡೆದುಕೊಂಡಿರುವನು. ಮೂರು–ನಾಲ್ಕು ವರುಷಗಳ ವರೆಗೆ ಹೊಲದಿಂದ ಒಂದು ಕಾಳಿಲ್ಲ. ತೋಟದಿಂದ ಒಂದು ಪಲ್ಲೆಯ ಎಸಳಿಲ್ಲ. ಈವರೆಗೆ ಪಡೆದ ಹಣದಲ್ಲಿ ಒಂದು ಬಿಡಿಕಾಸು ಕೈಯಲ್ಲಿಲ್ಲ. ತರುವ, ತೂರಿದಂತೆ ಮಾಡುವ. ನೊನ್ನೆ ಅವನ ಗೆಳೆಯನೊಬ್ಬನು ಏಜಂಟನಾಗಿ ನನ್ನ ಕಡೆಗೆ ಬಂದು ತೋಟದ ಮಾರಾಟದ ಸಂಬಂಧ ವಿಚಾರಿಸಿದನು. ನಾನು ನೋಡುವೆ ಎಂದಿರುವೆ" ಎಂದು ಹೇಳಿದನು.

ಪುಟ್ಟವ್ವನು ಭಯದಿಂದ ಇದನ್ನೆಲ್ಲಾ ಕೇಳುತ್ತಿದ್ದಳು. ರಾಜಣ್ಣನ ಸ್ಥಿತಿಯು ಇಲ್ಲಿಯವರೆಗೆ ಬಂದಿತೇ ! ಎಂದು ಚಡಪಡಿಸಿದಳು.

"ನೀವು ಹಾಗೇಕೆ ಹೇಳಿದಿರಿ?"

"ಮತ್ತೆ ಹೇಗೆ ಹೇಳಬೇಕಾಗಿದ್ದಿತು?"

"ನೀವು ಕೊಳ್ಳಬೇಕೆಂದಿರುವಿರಾ?" ವಿಷಯಾಂತರದಿಂದ ಬೇರೊಂದು ಪ್ರಶ್ನೆಯನ್ನು ಕೇಳಿದಳು.

"ಮಾರಬೇಕೆಂದಿರುವನೋ ಒತ್ತೆಯಲ್ಲಿರುವನೋ ನಿಶ್ಚಯವಾಗಿ ತಿಳಿಯದು. ಅವರಿಗೆ ಹೆಚ್ಚು ಹೆಚ್ಚು ಹಣವು ಬೇಕಾಗಿದೆ."

"ಮಾರಿದರೇ ಹೆಚ್ಚು ಹಣ ಬರುವದು."

"ಅಹುದು."

"ಅವನ ಇಚ್ಛೆ ಮಾರುವದೇ ಇರುವದೇ.?"

"ಹಾಗೂ ಮಾತಾಡಿದನು."

"ನೀವು ಕೊಳ್ಳುವಿರಾ?"

"ನಾನು ಕೊಳ್ಳದಿದ್ದರೆ ಇನ್ನೊಬ್ಬರಾದರೂ ಕೊಳ್ಳುವರು. ಮಾರುವವನಿಗೆ ನಾನೇನು, ಇನ್ನೊಬ್ಬನೇನು! ಅವನಿಗೆ ಹಣವು ಬೇಕು."

"ಹಾಗಾದರೆ ನೀವೇ ಕೊಳ್ಳಬಾರದೇಕೆ?"

"ನಾನು ಕೊಳ್ಳುವದು ಒಂದು ಕಡೆಗಿರಲಿ. ಇನ್ನೊಂದು ಮಾತು."

"ಏನು?"

"ಹಿರಿಯರ ಹೊಲಗಳನ್ನು ಹೀಗೆ ಮಾರದಂತೆ ಅಕ್ಕಾಮರಿಗೆ ಅಡ್ಡಿಯನ್ನು ಮಾಡಲು ಬರುವದು! ಹಾಗೆ ಮಾಡಬಾರದೇಕೆ?" ಎಂದು ಚಿನ್ನಯ್ಯನು ಕಾಯದೆಯ ಸಲಹೆಯನ್ನು ಕೊಟ್ಟನು.

ಪುಟ್ಟವ್ವನು ಕೇಳಿದಳು. ತಲೆಯಲ್ಲಿ ನೂರಾರು ವಿಚಾರದ ಚಕ್ರಗಳು ತಿರುಗ ಹತ್ತಿದವು. ಅಡ್ಡಿಯನ್ನು ಮಾಡಿದರೆ?....

ಹೊಲದ ಮಾರಾಟಕ್ಕೆ ತಡೆಯಾದೀತು!

ಆದರೆ ರಾಜಣ್ಣನು ಪರಮಶತ್ರುವಾಗುವನು!

ಅಕ್ಕಾಮರಿಯು ತನ್ನ ಉಭಯಲ್ಲಿ ಬಿದ್ದಳು.

ರಾಜಣ್ಣನನ್ನು ಇಂದಿನ ಮಟ್ಟಿಗೆ ಶತ್ರುವನ್ನಾಗಿ ಮಾಡಿಕೊಳ್ಳುವದು ಆವಳಿಗೆ ಬೇಕಾಗಿರಲಿಲ್ಲ. ಅವನನ್ನು ಕೆಲ ದಿನದ ಮಟ್ಟಿ

ಗಾದರೂ ಸರಿ ಪ್ರೀತಿಯ ಅಳಿಯನನ್ನಾಗಿ ಮಾಡಿಕೊಳ್ಳುವದಿದ್ದಿತು! ಅವನನ್ನು ನಾಲ್ಕು ದಿನ ಮನೆಯಲ್ಲಿ ಕರೆಸಿ ಇಟ್ಟುಕೊಳ್ಳಬೇಕಿದ್ದಿತು. ಅಕ್ಕಾಮರಿ–ಅವನ ಸರಸ – ಸಲ್ಲಾಪಗಳನ್ನು ನೋಡಬೇಕಿದ್ದಿತು. ಹೊಲವು ಹೋದರೂ ಮಗಳು ಬೇಕಿದ್ದಳು. ಅದಕ್ಕೆ "ಆ ಅಡ್ಡಿಯನ್ನೇನು ಸುಡುವದು? ಇಲ್ಲಿಯ ಗುಡ್ಡವನ್ನು ಮುಚ್ಚಿಕೊಳ್ಳಬೇಕಾಗಿದೆ!" ಎಂದಳು.

"ಅದೇನು ?"

"ಅಕ್ಕಾಮರಿಯನ್ನು ಕೇಳಿರಿ. "

"ಎಲ್ಲಿರುವಳು ?"

"ಅವಳೇ !" ಒಂದಿಷ್ಟು ತಡೆದಳು.

"ಹ !"

"ಎಲ್ಲಿರುವದು ! ಒಳಗೆ ಮಲಗಿರುವಳು."

"ಚಿನ್ನಯ್ಯನು ಎದ್ದನು, ಕೋಟು ಕಳೆದನು, ರುಮಾಲು ಬಿಚ್ಚಿ ಗೂಟಕ್ಕೆ ಹಾಕಿದನು. ಕಾಲನ್ನು ತೊಳೆಯಲು ನೀರು ಬೇಡಿದನು. ಪುಟ್ಟವ್ವ ನೀರು ತಂದು ಕೊಟ್ಟಳು. ಅಯ್ಯನು ಕಾಲು, ಮುಖ, ಕೈ ತೊಳೆದು ಬಂದು ಒರೆಸಿಕೊಂಡನು.

"ಊಟ ?" ಪುಟ್ಟವ್ವ ಕೇಳಿದಳು.

"ಮಾಡಿ ಬಂದಿರುವೆ."

"ಏನೂ ಬೇಡವೇ ? ನಾನು ಅಡಿಗೆಯನ್ನು ಮಾಡಿದ್ದೆ."

"ಒಂದಿಷ್ಟು ಹಾಲು ಕೊಡಿರಿ."

ಪುಟ್ಟವ್ವನು ಕಾಸಿದ ಹಾಲು ತಂದು ಕೊಟ್ಟಳು. ಚಿನ್ನಯ್ಯನು ಮೀಸೆಯನ್ನು ತೀಡಿ ಹಾಲು ಕುಡಿದು, ಎಲೆಯಡಿಕೆಯನ್ನು ಜಗಿಯ ಹತ್ತಿದನು. ಪುಟ್ಟವ್ವನು ಕೋಣೆಯೊಳಗಿನ ತನ್ನ ಹಾಸಿಗೆಯನ್ನು ಸುತ್ತಿ ಹೊರಗೆ ತಂದಳು. ಪಡಸಾಲೆಯಲ್ಲಿ ಹಾಸಿದಳು. ಮಲಗಿದ ಲಿಲ್ಲಿಯನ್ನು ಎತ್ತಿ ತಂದು ಹಾಸಿಗೆಯ ಮೇಲೆ ಮಲಗಿಸಿದಳು. ಹತ್ತಿರ ಕುಳಿತು ಚಿನ್ನಯ್ಯನ ಮುಖವನ್ನು ನೋಡಿದಳು—

"ಇಷ್ಟು ಮಾತುಕತೆಯಾದರೂ ಅಕ್ಕಾಮರಿಗೆ ಎಚ್ಚರಾಗಲಿಲ್ಲವೇ"

"ಆದಂತಿಲ್ಲ. ಇದೇ ಎಬ್ಬಿಸಿದೆ."

"ಎಲ್ಲಿ ಮಲಗಿರುವಳು ?"

"ಒಳಗೆ."

"ಒಳಗೆ ಮಲಗಿರುವಳೇ !" ಎಂದು ಮತ್ತೆ ಅಪೇಕ್ಷೆಯನ್ನು ಕತ್ತರಿಸ ಹತ್ತಿದನು.

ಪುಟ್ಟವ್ವನು ಒಳಗೆ ಹೋಗಿ "ಏಳು ಅಕ್ಕಾಮರಿ !" ಎಂದು ಮೆಲ್ಲಗೆ ನುಡಿದಳು.

"ನಿದ್ದೆ ಹೋಗೇ !" ಎಂದು ಅಕ್ಕಾಮರಿ ಮುಸುಕು ಹೊಡೆದು ಮತ್ತೆ ಮಲಗಿದಳು.

"ಏನು ! ಅವರು ಬಂದಿರುವರು."

"ನಿದ್ದೆ ಹೋಗು. ಇಂದು ನಿದ್ದೆ ಮಾಡುವೆ."

"ಏಳು. ಇದೇನು !"

"ಒಂದು ದಿನವಾದರೂ ಕಣ್ಣ ತುಂಬ ನಿದ್ದೆ ಮಾಡುವೆ. ಹೋಗು." ಎಂದು ಸಿಡುಕಿನಿಂದ ನುಡಿದಳು.

"ಏಳುವದಿಲ್ಲವೇ !"

"ಇದೊಂದು ದಿನ ಹೊರಗೆ ಮಲಗೆಂದು ಹೇಳು."

ಪುಟ್ಟವ್ವನು ವಿಷಣ್ಣ ವದನದಿಂದ ಹೊರಗೆ ಬಂದಳು.

"ಏಕೆ ಮುಖ ಸಪ್ಪೆಯಾಯಿತು.?"

ಪುಟ್ಟವ್ವ ಮಾತಾಡಲಿಲ್ಲ.

"ಇನ್ನೂ ಚಿಕ್ಕವಳು. ನಿದ್ದೆ ಬರುವದು ಸ್ವಾಭಾವಿಕ. ಮಲಗಲಿ. ನಾನೇ ನೋಡುವೆ ! ಎಚ್ಚರಾಗುವಳೋ ಇಲ್ಲವೋ !" ಎಂದು ಚೆನ್ನಯ್ಯನು ಆತ್ಮೀಯತೆಯಿಂದ ಒಳಗೆ ಹೋದನು.

ದೀಪವನ್ನು ಸಣ್ಣದುಮಾಡಿ ಲಿಲ್ಲಿಯನ್ನು ಮಗ್ಗುಲಲ್ಲಿ ಮಲಗಿಸಿ ಕೊಂಡು ಪುಟ್ಟವ್ವನೂ ಅಡ್ಡಾಗಿ ಮಗುವಿನ ಬಾಯಿಗೆ ತನ್ನ ಮೊಲೆಯ ಚೂಚಕವನ್ನು ಹಚ್ಚಿದಳು.

೨೮

ಇನ್ನೂರು ಫೂಟು ಉದ್ದ, ನೂರಾ ಐವತ್ತು ಫೂಟು ಅಗಲವಾದ ಭವ್ಯ-ಭಯಾನಕ ಮನೆಗೆ ರಾಜಣ್ಣನು ಸರ್ವಾಧಿಕಾರಿ ಅವನು ಅಡಿಗೆಯ ಮನೆಯಲ್ಲಿ ಮಲಗಬಹುದು, ನಡುಮನೆಯಲ್ಲಿ ಸ್ನಾನ ಮಾಡಬಹುದು, ಬಚ್ಚಲ ಮನೆಯಲ್ಲಿ ತನ್ನ ದೇವರ ಪೂಜೆಯನ್ನು ಮಾಡಬಹುದು, ಒಳಗಿನ ಕೋಣೆಯಲ್ಲಿ ಬೀಡಿಯ ಬಾಯಿಯನ್ನು ತೊಳೆಯಬಹುದು! ಹೀಗೇಕೆ ರಾಜಣ್ಣ ಎಂದು ಕೇಳುವವರು ಯಾರೂ ಇಲ್ಲ. ಇದು ತಪ್ಪು ರಾಜಣ್ಣ ಎಂದು ಉಪದೇಶಿಸುವವರೂ ಯಾರೂ ಇಲ್ಲ. ಮನೆಗೆ ಸರ್ವತಂತ್ರ ಸ್ವತಂತ್ರನು. ಅವನ ಸಂಪೂರ್ಣ ಸ್ವಾತಂತ್ರ್ಯದ ನಿಯಮಬದ್ಧ ಘಟನಾವಳಿಯನ್ನು ಒಮ್ಮತದಿಂದ ಅನುಮೋದಿಸಲು ಹಿಟಲರ, ಸಿಂಗ, ತಮ್ಮ್ಯಾ, ಭೀಮರು, ತ್ರಿಕಾಲ ಹಾಜರಿರುವರು. ಈ ಐವರ ಪಾದಧೂಳಿ, ಬೀಡಿಯ ಬೂದಿ ನಿತ್ಯ ಬಿದ್ದು ಮನೆಯು ಪವಿತ್ರಗೊಳ್ಳುತ್ತಿದೆ.

ಇಂದು ಅವರ ಸಂತಸದ ಸುಗ್ಗಿ. ಆನಂದದ ಬುಗ್ಗೆ

ಅಡಿಗೆಯ ಮನೆಯಲ್ಲಿ ತಮ್ಮ್ಯಾ ಇಳಿ ಹೊತ್ತಿನ ಖಾದ್ಯವನ್ನು ಸಿದ್ಧಪಡಿಸುತ್ತಿರುವರು. ರಾಜಣ್ಣ, ಭೀಮ, ಸಿಂಗ ಪಡಸಾಲೆಯಲ್ಲಿ ಹಾಸಿದ ಗುಂಡಾರದ ಮೇಲೆ ಇಸಪೇಟು ಆಡುತ್ತಿರುವರು.

ಎಲೆಗಳನ್ನು ಹಂಚಿರುವರು. ಗುಂಡಾರದ ಮೇಲೆ ಒಂದೊಂದಾಗಿ ಬೀಳುತ್ತಿವೆ. ಭೀಮ, ಸಿಂಗರ ಕೈಯಲ್ಲಿ ಕಡಮೆ. ರಾಜಣ್ಣನ ಕೈಯಲ್ಲಿ ಒಡಿಹಿಡಿಯಾಗಿವೆ. ರಾಜಣ್ಣನು ಕತ್ತೆಯಾಗುವ ಸಿದ್ಧತೆ

ಯಲ್ಲಿರುವನು. ಉಳಿದವರು ಮುಕ್ತರಾಗಿ ರಾಜಣ್ಣನನ್ನು ಕತ್ತೆಯಾಗಿ ಮಾಡಬೇಕೆಂದು ಪ್ರಯತ್ನಿಸುತ್ತಿರುವರು. ಅವನ ಬಾಯಿಂದ ಇನ್ನೊಮ್ಮೆ ಕತ್ತೆಯ ಕೂಗನ್ನು ಕೇಳಬೇಕೆಂದು ಅವರ ಆಸೆ. ಕತ್ತೆಯ ಆಟ ಕೌತುಕದಿಂದ ಸಾಗಿದ್ದಿತು.

ಶ್ರಾವಣ ಮಾಸದ ಯಾವ ಮಹಾಗೌರಿಯು ಸಾಲಂಕೃತಳಾಗಿ, ಕೇದಗೆ, ಗುಲಾಬಿ, ದವನ, ಕರಿಕೆ, ಪತ್ರಿ, ಧೂಪ, ದೀಪಗಳಿಂದ ಪೂಜೆಗೊಂಡು ತಿಂಗಳವರೆಗೆ ಮುತ್ತೈದೆಯರ ಮೀಸಲ ನೋಟದ ಮುಖ್ಯ ದೇವತೆಯಾಗಿ ಮನೆಯ ಸುಖ-ಶಾಂತಿ-ಸೌಶೀಲ್ಯಗಳಿಗೆ ಕಾರಣಳಾಗಿದ್ದಳೋ ಅಂಥ ದೇವಿಯ ಕಮಾನಿನ ಮಾಡದಲ್ಲಿ ಇಂದು ಹಳಸಿದ ಅನ್ನ, ಬೂಸುರು ಬಂದ ರೊಟ್ಟಿಯ ಚೂರುಗಳು ರಾಶಿಯಾಗಿ ಬಿದ್ದಿವೆ. ಅವುಗಳ ಸುತ್ತುಮುತ್ತು ನೊರಜುಗಳ ಹಾರಾಟ, ಗುಂಗಾಡುಗಳ ಸಂಗೀತ, ನೊಣಗಳ ಥಕಥೈ ನಡೆದಿದೆ.

ಭಾದ್ರಪದ ಮಾಸದಲ್ಲಿ ಮಂಗಲ ಮೂರ್ತಿಯಾದ ಗಣಪತಿಯು ಕುಳಿತು ಹತ್ತು ದಿವಸಗಳ ಹಗಲು-ರಾತ್ರಿ ಬ್ರಾಹ್ಮಣರಿಂದ ಪೂಜೆಗೊಂಡು, ಉಪಾಂತ್ಯ ದಿನದಲ್ಲಿ ಮಂತ್ರ-ಪುಷ್ಪವನ್ನು ಸ್ವೀಕರಿಸಿ, ವಿಘ್ನವಿನಾಶಕನೆಂಬ ಬಿರುದಿಗೆ ಅನುಗುಣವಾಗಿ ಗೃಹಾಭಿವೃದ್ಧಿಗೆ ವರದ ಹಸ್ತವನ್ನು ಎತ್ತುತ್ತಿದ್ದ ಸುಣ್ಣದ-ಬಣ್ಣದ ಮಾಡದಲ್ಲಿ ಈಗ ಸೆರೆಯ ಬರಿದಾದ ಬಾಟಲಿಗಳು, ಅವುಗಳ ಬೂಚುಗಳು ಮಲಗಿವೆ.

ಅಪ್ಪಾರಾಯರ ತಂದೆಯವರು ತಮ್ಮ ಧಾರ್ಮಿಕ ಭಾವನೆಗೆ ಉದಾಹರಣೆಗೆಂದು ಅಡಿಗೆಯ ಮನೆಯ ಪಕ್ಕದಲ್ಲಿ ಒಂದು ದೇವರ ಮನೆಯನ್ನು ಕಟ್ಟಿಸಿದ್ದರು. ಅಪ್ಪಾರಾಯರು ತಮ್ಮ ಇಡೀ ಜೀವಮಾನದಲ್ಲಿ ಒಂದು ನಂದಾ ದೀಪವನ್ನು ಇಟ್ಟಿದ್ದರು. ನವರಾತ್ರಿಯಲ್ಲಿ ನಾಲ್ಕು ತುಪ್ಪದ ದೀಪ, ನಾಲ್ಕು ಎಣ್ಣೆಯ ದೀಪಗಳು ಉರಿದು ಧರ್ಮದ ಬೆಳಕನ್ನು ಕೋಣೆಯ ತುಂಬ ಚೆಲ್ಲುತ್ತಿದ್ದವು. ದೊಡ್ಡದೊಡ್ಡ ಹಬ್ಬಗಳಲ್ಲಿ ದೊಡ್ಡ ದೇವರನ್ನು ತೆಗೆದು ಪಂಚಾಮೃತ ಅಭಿಷೇಕವಾಗಿ, ಮಂಗಳಗೀತಗಳಾಗಿ ಪವಿತ್ರತೆಯ ಸೀಮೆ, ಭಕ್ತಿಯ ಭಂಡಾರ, ದೈವತ್ವದ ಸಾಕ್ಷಾತ್ಕಾರ, ಕುಲದೇವತೆಯ ಕವಾಟ, ಪುಣ್ಯದ ನೆಲೆ

ವೀಡು, ಪಾಪ ವಿನಾಶದ ಸ್ಥಳ ಎಂದು ಎಲ್ಲರ ಭಾವನೆಗೆ ಸಾಕ್ಷ್ಯ ವಾಗಿದ್ದ ಆ ದೇವರಮನೆಯಲ್ಲಿ ಇಂದು ಕೋಳಿಯ ಪುಚ್ಛಗಳು, ಒಡೆದ ತತ್ತಿಯ ಬುರುಡೆಗಳು ಉರುಳಾಡುತ್ತಿವೆ.

ನೂರಾರು ಸಾರೆ ಸತ್ಯನಾರಾಯಣನ ಪ್ರಸಾದವನ್ನು ಕಂಪೆನಿಸು ವಂತೆ ಹುರಿದು ಪವಿತ್ರಗೊಂಡ ಇಟ್ಟಗೆಯ ಇದ್ದಲಿನ ಒಲೆಯಮೇಲೆ ಇಂದು ಮಾಂಸದ ಮಸಾಲೆಯ ಅನ್ನ ತಕಪಕನೆ ಕುದಿಯುತ್ತಿದೆ.

ಸಾವಿರಾರು ಸಾರೆ ವೈಶ್ವ ದೇವನಿಗೆ ಬಲಿಕೊಟ್ಟು ಕೈ ತೊಳೆದು ಕೊಂಡ ಸ್ಥಳದಲ್ಲಿ ಇಂದು ಸಣ್ಣ ಸಣ್ಣ ಎಲುಬಿನ ಕೊಳವಿಗಳು ಬಿದ್ದಿವೆ.

ಒಂದು ನೊತಿಳಿಯು ಬಿದ್ದರೂ ಅಪವಿತ್ರವೆನಿಸುವ ಸ್ಥಳದಲ್ಲಿ ಇಂದು ಸುಟ್ಟಬೀಡಿ, ಕೊರೆದ ಕಡ್ಡಿಗಳು ಲೆಕ್ಕವಿಲ್ಲದಷ್ಟು ಬಿದ್ದಿವೆ.

ಈ ಅನಾಹುತಗಳನ್ನು ಕಂಡು ನೆಲ-ದೇವತೆಯು ಕುರುಡಳಾಗಿ ರುವಳು, ಗೃಹದೇವತೆಯು ಮೂಕಳಾಗಿರುವಳು, ಗ್ರಾಮದೇವತೆಯು ಊರನ್ನು ಬಿಟ್ಟು ಹೊರಗೆ ಓಡಿರುವಳು.

ರಾಜಣ್ಣನ ಆಟ ತುಂಬಾ ಭರಕ್ಕೆ ಬಂದಿದೆ. ಕೈಯಲ್ಲಿ ಎಲ್ಲರ ಎಲೆಗಳು ತುಂಬಿಬಿಟ್ಟಿವೆ. ನಿಂಗನು 'ಪಾರು' ಆಗಿರುವನು. ಭೀಮನ ಕೈಯಲ್ಲಿ ಉಳಿದುದು ಒಂದು ಬಿಡಿ ಎಲೆ, ಆಟ ಅವನ ಸರದಿಯದು. ಆಡಿದನು. ರಾಜಣ್ಣನ ಕೈಯಲ್ಲಿ ನಾಲ್ಕು ಬಣ್ಣದ ಎಲೆಗಳಿದ್ದವು. "ಇದೆ !" ಎಂದು ಎಲ್ಲ ಎಲೆಗಳನ್ನು ಚೆಲ್ಲಿದನು.

"ಕತ್ತೆ. ಕತ್ತೆ. ಒದರು !" ಎಂದು ನಿಂಗನು ನಗ ಹತ್ತಿದನು.

ರಾಜಣ್ಣನು ದನಿಯನ್ನು ಸರಿಪಡಿಸಿಕೊಳ್ಳುತ್ತಿದ್ದನು. ಚೆನ್ನಯ್ಯನು ಬಂದನು.

ಅಡಿಗೆಯ ಮನೆಯಲ್ಲಿ ಕುದಿಯುವ ಅಮೇಧ್ಯ ಖಾದ್ಯದ ದುರ್ಗಂಧ ವಾಸನೆಯು ಚೆನ್ನಯ್ಯನನ್ನು ಬರಮಾಡಿಕೊಳ್ಳುವಂತೆ ಬಾಗಿಲಿನಿಂದ ದಾಟಿ ಬೀದಿಗೆ ನಡೆದಿದ್ದಿತು.

"ರಾಜಣ್ಣಾ !" ಎಂದು ಕೂಗಿ ತನ್ನ ಬರವನ್ನು ಸೂಚಿಸಿದನು.

ರಾಜಣ್ಣನು ಸಾವರಿಸಿಕೊಂಡು ಮೇಲೆದ್ದು ಅಯ್ಯನನ್ನು ಆದರ ದಿಂದ ಸ್ವಾಗತಿಸಿದನು.

ಚಿನ್ನಯ್ಯನು ಒಂದು ಕಡೆಗೆ ಕುಳಿತನು. ಮನೆಯ ಸ್ಥಿತಿಗತಿಯನ್ನು ಸಾವಧಾನವಾಗಿ ನಿರೀಕ್ಷಿಸಿದನು. ಇದು ಅಪ್ಪಾರಾಯರು ವಾಸಮಾಡಿದ ಮನೆಯೇ ? ಎಂದು ಸಂಶಯಪಟ್ಟನು.

"ಹೊರಗಿನ ಮನೆಯು ಬಿದ್ದುಹೋಗಿದೆ. ಎಂದು ಬಿದ್ದಿದೆ ರಾಜಣ್ಣ ?" ಎಂದು ಕೇಳಿದನು.

"ಮೊದಲು ಒಂದಿಷ್ಟು ಬಿದ್ದಿದ್ದಿತು. ಮೊನ್ನಿನ ಮಳೆಗಾಲಕ್ಕೆ ಸಂಪೂರ್ಣ ಬಿದ್ದಿದೆ."

"ಕಟ್ಟಿಸಬಾರದೇ ?"

"ಈಗ ಉಳಿದ ಮನೆಯೇ ದೊಡ್ಡದಾಗಿದೆ. ಅದನ್ನು ಕಟ್ಟಿಸಿ ಏನು ಮಾಡುವದು ?"

"ನಿಮ್ಮ ತಂದೆಯವರು ದೊಡ್ಡ ದೊಡ್ಡ ತೊಲೆ-ಜಂತಿಗಳನ್ನು ಹಾಕಿಸಿ ಅದನ್ನು ಬೆಳೆಸಿದ್ದರು. ನಾನು ಸ್ವತಃ ನೋಡಿರುವೆ. ಅವು ಈಗ ಕಾಣುವದಿಲ್ಲ. ಕೇವಲ ಮಣ್ಣಿನ ರಾಸಿಯೊಂದೇ ಕಾಣುವದು."

"ಅಹುದು."

"ಮಾರಿಕೊಂಡೆ ಏನು ?"

"ಮಾರಿದ್ದರೆ ಒಂದೆರಡು ರೂಪಾಯಿಗಳಾದರೂ ಬರುತ್ತಿದ್ದವು."

"ಏನಾದವು ?"

"ಹೋದವು."

"ಹುಡುಕಿಸಬಾರದೇ ?"

"ಎರಡುದಿನ ನಾನು ಮನೆಗೆ ಬಂದಿರಲಿಲ್ಲ. ಆಗ ಹೋದವು."

"ತೊಲೆಗಳನ್ನು ಕದ್ದರೇ !"

"ಹ !"

"ಹುಡುಕಿಸಿದೆಯಾ ?"

"ಹ !"

"ಹುಡುಕಿಸು. ತೊಲೆಗಳು ಬಚ್ಚಿಡುವ ವಸ್ತುವಲ್ಲ."

"ಹುಡುಕಿಸಿದರೂ ಆಗುವದೇನು ! ನೋಡಿದವರು ಹೇಳುವರು ! ದೊಡ್ಡವರ ಸಣ್ಣ ಮನಸನ್ನು ನೋಡಿ ಸುಮ್ಮನಿದ್ದೇನೆ."

"ಯಾರು ಕದ್ದಿರುವರು ?"

"ನಮ್ಮ ಪಕ್ಕ. ನೆರೆಮನೆಯ ಅನೇಕರು ಹೇಳಿರುವರು."

"ನೀನು ಗದರಿಸಬೇಕು."

"ಆ ಮಂಗನನ್ನು ಏನು ಗದರಿಸುವದು ಚಿನ್ನಯ್ಯನವರೇ ! ಏನಾದರೂ ಕೇಳಿದರೆ ಏನಾದರೂ ಹೇಳುವನು. ಅದು ವಿಕೋಪಕ್ಕೆ ಹೋಗಿ ಮತ್ತೆ ಬಡಿದಾಟ. ಈಗ ಆದುದು ಸಾಕು ಎಂದು ಸುಮ್ಮನಿದ್ದೇನೆ."

"ಜಂತಿಗಳನ್ನು ಅವನೇ ಒಯ್ದಿದಿರಬೇಕು."

"ಕೆಲವು ಉಳಿದಿದ್ದವು. ನಾವೇ ಉಪಯೋಗಿಸಿದೆವು. ನಾಳೆ ಬೇಸಗೆಗೆ ಒಂದು ಮಾವಿನ ಗಿಡವನ್ನು ಕಡಿಸಬೇಕೆಂದಿರುವೆನು. ಆ ವರೆಗೆ ಇವು ಸಾಲಿದಷ್ಟು ಸಾಲುವವು."

"ಏನೋ ಕಂಪುವಾಸನೆ ಬರುತ್ತದೆ ? ನಿಮ್ಮಲ್ಲಿಯದೇನು ?"

"ಅಹುದು. ಇದೆಲ್ಲ ಹಿಟಲರನ ಕಾರಭಾರ."

"ಇದು ಸರಿಯಲ್ಲ ರಾಜಣ್ಣ."

"ಹ !"

"ನಿಮ್ಮ ಮನೆತನವನ್ನು, ನಿಮ್ಮ ತಂದೆಯವರನ್ನು ನೋಡಿಯಾದರೂ ನೀನು ಇಂಥ ಕೆಲಸವನ್ನು ಬಿಡಬೇಕು."

"ಏನು ಮಾಡುವದು ಚಿನ್ನಯ್ಯನವರೇ ! ನಿಮ್ಮಂತವರು ನನ್ನನ್ನು ಕರೆಯುವದಿಲ್ಲ. ಮನೆಯವರೆಗೆ ಬರಗೊಡುವದಿಲ್ಲ. ಮಾತಾಡುವದಿಲ್ಲ. ನೋಡುವದಿಲ್ಲ. ಮನುಷ್ಯನೆಂದಮೇಲೆ ಒಬ್ಬಿಬ್ಬರಾದರೂ ಗೆಳೆಯರು ಬೇಡವೇ ! ಇವರು ಸಿಕ್ಕಿರುವರು. ಇವರ ಜತೆಗೆ ಹೇಗೆಯೋ ದಿನಗಳನ್ನು ಕಳೆಯುವದು."

"ನೀವು ಹಾರುವರು ರಾಜಣ್ಣ !"

"ನಾನು ಹಾರುವನಾದುದು ನನಗೆ ಸಂಕಟದ ವಿಷಯವಾಗಿದೆ ಚಿನ್ನಯ್ಯನವರೇ ! ಇಲ್ಲದಿದ್ದರೆ ನಿಮ್ಮಂತವರ ಚಪ್ಪಲಿಯನ್ನು ಹೊಲಿದಾದರೂ ಬದುಕುತ್ತಿದ್ದೆ."

ಚಿನ್ನಯ್ಯ ಮಾತಾಡಲಿಲ್ಲ. ಅವನ ಮಾತು ಕೀಳಾಗಿದ್ದಿತು.

"ನನ್ನ ತಂದೆಯವರು ನನಗೆ ನಟ್ಟು ಕಡಿಯಲು ಹೇಳಲಿಲ್ಲ.

ನೇಗಿಲ ಹೊಡೆಯಲು ತಿಳಿಸಲಿಲ್ಲ. ಗೋಡೆಯನ್ನು ಕಟ್ಟಲು ಕಲಿಸಲಿಲ್ಲ. ಕಲ್ಲು ಒಡೆಯಲು, ಮಣ್ಣು ಹೊರಲು, ಕಟ್ಟಿಗೆಗಳನ್ನು ಸೀಳಲು ಬಿಡಲಿಲ್ಲ. ಏಕೆಂದರೆ ನಾವು ಹಾರುವರು. ಹಾರುವರೆಂದು ಅವರು ತಿಳಿದದ್ದೇ ಇಲ್ಲಿಯವರೆಗೆ ನನ್ನನ್ನು ತಂದಿದೆ. ಇತ್ತ ನಾನು ಶಾಲೆಯನ್ನು ಕಲಿಯಲಿಲ್ಲ. ನವಕರಿಯನ್ನು ಹಿಡಿಯಲಿಲ್ಲ. ಯಾವದಾದರೊಂದು ಉದ್ಯೋಗವನ್ನು ಆರಂಭಿಸಲಿಲ್ಲ. ಏಕೆಂದರೆ ಹಾರುವರ ಗೌಡರ ಮಗನೆಂದು! ಹೀಗೆ ಎರಡಕ್ಕೂ ಎರವಾಗಿ ಹೀಗೆ ನಡಿಸಿದ್ದೇನೆ."

ಚಿನ್ನಯ್ಯನು ಯಾವದೋ ವಿಚಾರದಲ್ಲಿದ್ದನು.

"ಹಾರುವ ತಂದೆ-ತಾಯಿಯ ಮಗನು ಹಾರುವನೆಂಬ ಮಾತು ಮುಖ್ಯವಾದರೆ ನಾನು ಇನ್ನೂ ಹಾರುವನು. ಈ ಮಾತು ನಿಜವಾದುದಲ್ಲವೇ ಚಿನ್ನಯ್ಯನವರೇ !" ರಾಜಣ್ಣ ಮುಂದುವರಿಸಿದ್ದನು.

ಚಿನ್ನಯ್ಯನು ರಾಜಣ್ಣನ ಮುಖವನ್ನು ನೋಡಿದನು.

"ಅದನ್ನೇನು ಮಾಡುವದು ಸಾವುಕಾರರೇ ? ನನ್ನ ಮಾತು ಏನಾಯಿತು ?"

"ಯಾವದು ?"

"ತೋಟವನ್ನು ಬರೆಯಿಸಿಕೊಂಡು ಹಣವನ್ನು ಕೊಡಿರಿ. ಎಷ್ಟು ದಿನ ಉಪವಾಸ ಸಾಯಲಿ ?"

" ಮಾರುವದಾದರೆ ಹೊಲಗಳಿವೆ. ಅವುಗಳಲ್ಲಿ ಒಂದನ್ನು ಮಾರು."

"ಹೊಲಗಳಿಗೆ ಬೆಲೆಯು ಕಡಿಮೆ. ನನಗೆ ಸಾಲವು ಈಗಾಗಲೆ ಬಹಳವಾಗಿದೆ. ಆ ಸಾಲವನ್ನು ಹರಿದು ಕೈಯಲ್ಲಿ ಒಂದಿಷ್ಟು ಹಣವು ಬೇಡವೇ !. ಅದಕ್ಕೆ ತೋಟವನ್ನು ಮಾರಬೇಕಾಗಿದೆ."

"ಬರುವ ಶನಿವಾರ ಹೇಳುವೆನು. ಆದರೆ ಒಂದು ಕೆಲಸವಿದ್ದಿತು. ಅದಕ್ಕೆ ನಿನ್ನ ಕಡೆಗೆ ಬಂದಿರುವೆ."

"ಏನು ?" ವಿನಯದಿಂದ ಕೇಳಿದನು.

"ನಾನು ಮೊನ್ನೆ ಪುಟ್ಟಪ್ಪನವರ ಊರಿಗೆ ಹೋಗಿದ್ದೆ. ನಿಮ್ಮ ಅತ್ತೆಯವರು ಭೆಟ್ಟಿಯಾಗಿದ್ದರು."

"ಮುಂದೆ."

"ನಿನ್ನ ಕುಟುಂಬ ಶೀತವಂತೆ."

"ಶೀತವೇ!"

"ಒಂದು ಅಗುಳು ಅನ್ನ ದಕ್ಕಬೊಳ್ಳದು. ಒಂದು ಸಿಂಪಿ ಹಾಲು ಪಚನವಾಗಲೊಲ್ಲದು. ತೀರ ಅಶಕ್ತರಾಗಿರುವರು. ಆ ಪೂಜಾರಿ ವೈದ್ಯನು ಇದು ಸಂಗ್ರಹಣಿ! ಎಂದು ಹೆಸರಿಟ್ಟಿರುವನಂತೆ. ಪುಟ್ಟಪ್ಪನವರು ತಾಲೂಕಿಗೆ ಒಯ್ದು ತೋರಿಸಬೇಕೆನ್ನುವರು. ಪಾಪ, ಆ ಬಡಪಾಯಿ ತವರು ಮನೆಗೆ ಹೋದಮೇಲೆ ನೀನು ಬದುಕಿದರೇ, ಸತ್ತರೇ ಒಂದೂ ವಿಚಾರಿಸುತ್ತಿಲ್ಲ. ನೀನು ಇಲ್ಲಿ ನಿನ್ನ ಗೆಳೆಯರ ಸಂಗಡ ವೇಳೆಯನ್ನು ಕಳೆಯುತ್ತಿರುವೆ. ಇದು ಮೆಚ್ಚುವ ಮಾತೇ? ನಿನಗೆ ಬೇರೆ ಯಾವ ಉಪದೇಶವನ್ನೂ ಮಾಡಲಾರೆ. ಆದರೆ ಆ ಬಡಪಾಯಿಯ ಯೋಗಕ್ಷೇಮವನ್ನು ನೋಡುವದು ನಿನ್ನ ಕರ್ತವ್ಯವೆಂದು ಹೇಳುವೆ"

"ನನಗೆ ಗೊತ್ತಿಲ್ಲ!" ನಿಂಗನೆಂದನು.

"ಹೇಗೆ ಗೊತ್ತಾಗಬೇಕು. ಯಾವ ದಿಕ್ಕಿಗೂ ಅಲುಗಾಡದಂತೆ ರಾಜಣ್ಣನನ್ನು ಕಟ್ಟಿಹಾಕಿರುವಿರಿ. ಒಂದುವೇಳೆ ಆ ತಾಯಿಯು ಇದೇ ಬೇನೆಯಲ್ಲಿ ಸತ್ತರೆ, ಆಕೆಯ ಪಾಪದ ರಾಶಿ ನಿಮ್ಮ ತಲೆಯ ಮೇಲೆ ಏಳೇಳು ಜನ್ಮಕ್ಕೂ ನಿಲ್ಲುವದೆಂದು ತಿಳಿಯಿರಿ. ಅಗಲಿದ ಗಂಡ-ಹೆಂಡರನ್ನು ಕೂಡಿಸಬೇಕು. ದೇವರು ಮೆಚ್ಚುವ ವಿಷಯ 'ನೀವು ಅಗಲಿಸಿರುವಿರಿ' ಎಂದು ಪುಟ್ಟಪ್ಪನವರು ಆಡಿಕೊಂಡರೆ ಜನರು ಹೌದೆನ್ನಲಿಕ್ಕಿಲ್ಲವೇ!" ಎಂದು ಗಟ್ಟಿಸಿ ಮಾತಾಡಿದನು.

ಅವರು ಸುಮ್ಮನೆ ಕುಳಿತಿದ್ದರು.

"ನೀವು ಬೇಕಾದುದನ್ನು ಮಾಡಿರಿ. ಬೇಕಾದುದನ್ನು ತಿನ್ನಿರಿ. ನಾನು ಹೆಸರಿಡಲಾರೆ. ಈಗಿನ ತರುಣರೆಲ್ಲ ಇಂಥವರೇ! ಕಾಲವನ್ನು ಬಯ್ದೇನು! ನಿಮ್ಮನ್ನು ಬಯ್ಯಲಾರೆ. ಆದರೆ ಆ ತಾಯಿ-ರಾಜಣ್ಣ ಕೂಡಿ ಇರದಿದ್ದರೆ, ಕೂಡಿ ಬಾಳದಿದ್ದರೆ, ಕೂಡಿ ಪ್ರಪಂಚ ಮಾಡದಿದ್ದರೆ ಆ ತಪ್ಪೆಲ್ಲ ನಿಮ್ಮದೆಂದು ತಿಳಿಯಿರಿ. ನಮ್ಮೂರ

ಹನುಮಪ್ಪನು ಮಹಾ ಉಗ್ರನು. ನಿಮ್ಮನ್ನು ನೋಡದೆ ಬಿಡಲಾರನು!" ಎಂದು ಬೆದರಿಸಿದನು.

"ನನಗಾಗಲಿ, ರಾಜಣ್ಣನಿಗಾಗಲಿ ಈ ಸುದ್ದಿಯು ಗೊತ್ತಿಲ್ಲ ಚಿನ್ನಯ್ಯನವರೇ! ರತ್ನದಂತಹ ತಾಯಿಯನ್ನು ಕಳೆದುಕೊಂಡರೆ ರಾಜಣ್ಣನಿಗೆ ಮತ್ತಾರು ಉಳಿದರು! ಇವರಿಗಾದರೂ ನನ್ನವರೆಂದು ಹೇಳಿಕೊಳ್ಳಲು ಅವರೊಬ್ಬರೇ ಅಲ್ಲವೇ! ಆ ಹುಟ್ಟಿದ ಕರುಳು ಒಂದಲ್ಲವೇ! ಲೀಲಮ್ಮನವರು ಚೆನ್ನಾಗಿರುವರೇ?" ನಿಂಗನು ಕೊನೆಗೆ ಕೇಳಿದನು.

"ನಾನು ಅವರ ಮನೆಗೆ ಹೋಗಲಿಲ್ಲ."

"ಇದೆಲ್ಲವನ್ನು ಪುಟ್ಟಪ್ಪನವರು ಹೇಳಿದ್ದರೆ!"

"ನಾನು ರೈತನ ಮನೆಗೆ ಹೋಗಿದ್ದೆ. ಅವರೂ ಅಲ್ಲಿ ಹಣ ವಸೂಲಿಗಾಗಿ ಬಂದಿದ್ದರು. ಆಗ ಹೇಳಿದರು."

"ಮನೆಯವರೆಗೆ ಹೋಗಿ ಭೆಟ್ಟಿಯಾಗಬೇಕಿದ್ದಿತು!"

"ಛೇ. ಅದು ಎಂದೂ ಆಗದು. ಅವರಾದರೂ ನನ್ನಂತಹ ಅಪರಿಚಿತನ ಮುಂದೆ ಬಂದು ನಿಂತಾರೆ? ಇದೆಂತಹ ಮಾತು ನಿಂಗ! ಅವರು ನಮ್ಮ-ನಿಮ್ಮ ಮನೆಯ ಹೆಂಗಸರೆಂದು ತಿಳಿದೆ ಏನು?" ಎಂದು ಭೀಮೂರಿ ಮಾಡಿದನು.

ನಿಂಗನು ನಾಚಿಕೆಯಿಂದ ತಲೆಬಗ್ಗಿಸಿದನು.

"ನಾಳಿನ ದಿವಸ ಆ ಹಳ್ಳಿಯ ಅಗಸಿಯ ಬಾಗಿಲ ವರೆಗೆ ಮುಟ್ಟಿಸಿ ಬರುವೆವು" ಭೀಮನು ನುಡಿದನು.

"ಅಹುದು ಚಿನ್ನಯ್ಯನವರೇ, ಈ ಮಾತು ನನಗೆ ಮುಟ್ಟಿತು!" ನಿಂಗನು ಆಶ್ವಾಸನವನ್ನು ಕೊಟ್ಟನು.

"ಇಷ್ಟಾದರೆ ನೀವು ನಿಮ್ಮ ಗೆಳೆಯನ ಋಣವನ್ನು ಮುಟ್ಟಿಸಿದಂತೆ!"

"ಆಣೆಯೊಂದರೂ ಮುಟ್ಟಿಸುವೆವು."

"ಒಪ್ಪಿದಿರಾ ರಾಜಣ್ಣ?" ನಿಂಗ ಕೇಳಿದನು.

"ನೀವು ನಾಲ್ವರು ಕೂಡಿ ಹೊರುವದಕ್ಕಿಂತ ನಾನೇ ಹೋಗುವುದು ಉತ್ತಮ" ರಾಜಣ್ಣ ಎಂದನು.

ಎಲ್ಲರೂ ಕಿಸಕಿಸನೆ ನಗಹತ್ತಿದರು.

"ಮತ್ತೆ ನನ್ನ ಕೆಲಸ ಚಿನ್ನಯ್ಯನವರೇ?" ರಾಜಣ್ಣ ಕೇಳಿದನು.

"ಬರುವ ಶನಿವಾರ ಹಣ ಸಿಗುವಂತೆ ಮಾಡುವೆನು. ನಾನು ಹೋಗುವೆನು."

"ಮತ್ತೆ.... ನಮ್ಮ.... ಇದೆಲ್ಲ.... ಬೇರೆ ತಿಳಿಯಬೇಡಿರಿ."

"ನನಗೆ ರೂಢಿಯಿಲ್ಲ ರಾಜಣ್ಣ. ಇದ್ದರೆ ಒಂದು ಬಸಿಯುಷ್ಟು ರುಚಿ ನೋಡುತ್ತಿದ್ದೆ. ನಿಮ್ಮದು ಸಾಗಲಿ !" ಎಂದು ಹೋದನು.

ಎಲ್ಲರೂ ಹ.... ಹ.... ಎಂದು ನಗಹತ್ತಿದರು.

## ೨೯

ಅಕ್ಕಾಮರಿಯ ಬಯಕೆ ಕಠೋರವಾಗುತ್ತ ನಡೆದಂತೆ, ಮಾನಸಿಕ ಚಿಂತೆಯೂ ಬಲವತ್ತರವಾಗುತ್ತ ನಡೆಯಿತು. ಅಂತರಂಗದಲ್ಲಿಯ ಜೀವ ದಿನಕ್ಕೊಂದು ಬಗೆಯಿಂದ ಚೆಂದಚೆಂದವಾಗಿ ಬೆಳೆಯಹತ್ತಿತು. ಬಹಿರಂಗದಲ್ಲಿಯ ದೇಹ ದಿನಕ್ಕೊಂದು ತೆರದಿಂದ ಸವೆಯುತ್ತ ನಡೆಯಿತು. ನಾಲಗೆಯ ಹಸಿವು ಅದು ಬೇಕು ಇದು ಬೇಕು ಎಂದು ಆಶಿಸಿದರೆ ವ್ಯಾವಹಾರಿಕ ಚೈತನ್ಯವು ಅದು ಬೇಡ ಇದು ಬೇಡ ಎಂದು ತಾತ್ಸಾರ ಮಾಡಹತ್ತಿತು. ಸವೆ ಮತ್ತು ತುಂಬು ಈ ಶರೀರ ಶಾಸ್ತ್ರದ ನಿಯಮವು ಅಕ್ಕಾಮರಿಯ ವಿಷಯದಲ್ಲಿ ಸಮಪ್ರಮಾಣದಿಂದ ಸಾಗಲಿಲ್ಲ.

ಇದಕ್ಕಾಗಿ ತನ್ನನ್ನು ಹಳಿದುಕೊಳ್ಳುವಳು. ದೈವವನ್ನು ಬಯ್ಯುವಳು, ಚಿನ್ನಯ್ಯನಿಗೆ ಶಾಪವನ್ನು ಕೊಡುವಳು. ಸ್ತ್ರೀಜನ್ಮವನ್ನು ಧಿಃಕರಿಸುವಳು. ಬೆಳೆಯುವ ಪಿಂಡದ ಮೇಲೆ ಬೆಂಕಿಯನ್ನು ಕಾರುವಳು. ಗಂಡನನ್ನು ಹಳಿಯುವಳು. ತಾಯಿಯನ್ನು ಕೆಟ್ಟ ಕಣ್ಣಿನಿಂದ ನೋಡುವಳು. ಆದರೇನು! ಪ್ರಕೃತಿಯು ತನ್ನ ಧರ್ಮಕ್ಕನುಸರಿಸಿ ಬೆಳೆಸುತ್ತಲೆ ನಡೆದಿದ್ದಿತು.

ಈ ಭಾವನೆಯ ಸೆಳವಿನಲ್ಲಿ ವಿಕೋಪಕ್ಕೆ ಹೋಗಿ ಒಂದು ದಿನ ತಾಯಿಯನ್ನು ಗಟ್ಟಿಯಾಗಿ ಕೂಗಿದಳು. ಪುಟ್ಟವ್ವ ಓಡುತ್ತ ಬಂದು ಮಗಳನ್ನು ಹಿಡಿದುಕೊಂಡು "ಏನಾಯಿತು! ಏನಾಯಿತು ಅಕ್ಕಾಮರಿ?" ಎಂದು ಗಾಬರಿಯ ಸ್ವರದಲ್ಲಿ ಕೇಳಿದಳು.

ಅಕ್ಕಾನುರಿಯು ಮಾತಾಡದೆ ಕಣ್ಣುಗಳನ್ನು ಪಿಳಿಕಿಸುತ್ತ, ಕೈಗಳನ್ನು ಅತ್ತಿತ್ತ ಚೆಲ್ಲುತ್ತ, ತಲೆಯನ್ನು ತಾಯಿಯ ಹೆಗಲ ಮೇಲೆ ಇಟ್ಟಳು.

"ಅಮ್ಮ, ಮನೆಯಲ್ಲಿ ಸಾಯುವುದು ಒಳ್ಳೆಯದೋ, ಬಾವಿಯಲ್ಲಿ ಬಿದ್ದು ಸಾಯುವುದು ಒಳ್ಳೆಯದೋ? ವಿಚಾರಿಸುತ್ತಿರುವೆ. ಹೀಗೆ ವಿಚಾರಿಸಿ, ವಿಚಾರಿಸಿ, ತಲೆ ಕೆಡುತ್ತ ನಡೆದಿದೆ. ನೀನು ಏನೆಂದೆ?" ನಿರ್ಧಾರದಿಂದ ಕೇಳಿದಳು

ಪುಟ್ಟಮ್ಮನು ಜೀವವನ್ನು ಕಣ್ಣಲ್ಲಿ ಹಿಡಿದುಕೊಂಡು "ನೀನು ಸತ್ತರೆ ನನ್ನ ಗತಿಯೇನು. ಮಗಳ ಗತಿಯೇನು ಅಕ್ಕನುರಿ?"

"ದೇವರೇ ಗತಿ!"

"ಇಷ್ಟೇ [illegible] !"

"ನನ [illegible] ಸಾಯುವೆ. [illegible] ಅಷ್ಟೇ ಬರಲಿ."

"ಅ[illegible] [illegible], [illegible] ಮಗನನ್ನು [illegible] ಪೆಟ್ಟು ಲಾಗಿ. [illegible] [illegible] ಹಿತ! [illegible] ಇದ್ದ ನನ್ನ [illegible] [illegible]. ನನ್ನ [illegible], ನನ್ನನ್ನು ನೀನು [illegible]. [illegible] ಒಂದು ಪ್ರಮಾಣವಾಯಿತು. ಒಂದು [illegible] [illegible] [illegible]. [illegible]ಗೆ ಇಂದಿಗೂ [illegible] [illegible]"

"ನನಗೆ [illegible]. ನನಗೆ [illegible]."

"[illegible] [illegible] [illegible]. [illegible]ದೆ. ಸುಮಂಗಲಿ. [illegible]. [illegible] ಪ್ರಬಲವಾದ [illegible]. ನಾನು [illegible] [illegible]. [illegible] [illegible] ಸಫಲವಾಗಬೇಕಾದರೆ [illegible] ದಿನಗಳಾದರೂ ಬೇಡವೇ? ಸಮಾಧಾನ ದಿಂದಿರು."

"ನಾನು ಸಮಾಧಾನದಿಂದ ಮೂರು ನಾಲ್ಕು ತಿಂಗಳಿನಿಂದ ಇರುವೆ. ಆದರೆ ಇದಕ್ಕೆಲ್ಲಾ ಸಮಾಧಾನ! ದಿನಕ್ಕೊಂದು ಚೆಂದವಾಗಿ ಪ್ರದರ್ಶನವಾಗ ಹತ್ತಿದೆ" ಎಂದು ತನ್ನ ಹೊಟ್ಟೆಯನ್ನು ಉದ್ದೇಶಿಸಿ

ನುಡಿದಳು.

“ಸಾಯುವುದೇ ನಿಶ್ಚಯವಾದರೆ ಸಾಯಬಹುದು. ಅದಕ್ಕೆ ನನ್ನ ಮನೆಬೇಡ. ಬಾವಿಬೇಡ. ಕೆರೆಯೂ ಬೇಡ. ಕಾಶಿ-ರಾಮೇಶ್ವರಗಳಿವೆ. ಗೋಕರ್ಣ-ಪಂಢರಪುರಗಳಿವೆ. ಯಾತ್ರೆಗೆ ಅನುಕೂಲವಾಗುವಂತೆ ನನ್ನಲ್ಲಿ ಹಣವಿದೆ. ಚಿನ್ನದ [illegible] ನನಗಾಗಬಹುದು. ಯಾತ್ರಾಸ್ಥಳಗಳಿಗೆ ಹೋಗುವ [illegible]ನ್ನು ಕಳೆದುಕೊಂಡು ದೇವರ ಪಾದವನ್ನು ಮುಟ್ಟಿ ಪ್ರಾಣ ಬಿಡಬಹುದು. ತೀರ್ಥ-ಪ್ರಸಾದ-ಪೂಜೆಗಳಿಂದ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿಯನ್ನು ಮಾಡಿಕೊಂಡು ಸಾಯಬಹುದು. ಈಗ ಸಾಯುವ ಅವಸರವೇನು?” ಮಾತನ್ನು ಅರ್ಧಕ್ಕೆ ನಿಲ್ಲಿಸಿದಳು [illegible].

[illegible] ಕೇಳುತ್ತಿದ್ದ.

[illegible] ! [illegible]. [illegible] ! [illegible] ಎಂದು [illegible].

[illegible] ಮಾಡಿದನು. ಅವನಂದ—“[illegible]. ಇದೆಲ್ಲ ನನಗೆ ತಿಳಿದುದು. ಕಳೆದ ಹತ್ತು-ಹನ್ನೆರಡು ದಿನಗಳಿಂದ ಹೊಟ್ಟೆಯಲ್ಲಿ ಅನ್ನವಿಲ್ಲ. ದೇಹವು ದಣಿದಿದೆ. ಮನಸ್ಸು ಭಾರವಾಗಿದೆ. ವಿಚಾರದ ಘರ್ಷಣೆಯಿಂದ ಬುದ್ಧಿಯು ಮಂಕಾಗಿದೆ. ಏನು ಮಾಡಲಿ? ಈ

ಅಕ್ಕಾನುರಿಯು ಮಾತಾಡದೆ ಕಣ್ಣುಗಳನ್ನು ಪಿಳಿಕಿಸುತ್ತ, ಕೈಗಳನ್ನು ಅತ್ತಿತ್ತ ಚೆಲ್ಲುತ್ತ, ತಲೆಯನ್ನು ತಾಯಿಯ ಹೆಗಲ ಮೇಲೆ ಇಟ್ಟಳು.

"ಅವ್ವಾ. ಮನೆಯಲ್ಲಿ ಸಾಯುವದು ಒಳ್ಳೆಯದೋ, ಬಾವಿಯಲ್ಲಿ ಬಿದ್ದು ಸಾಯುವದು ಒಳ್ಳೆಯದೋ? ವಿಚಾರಿಸುತ್ತಿರುವೆ. ಹೀಗೆ ವಿಚಾರಿಸಿ, ವಿಚಾರಿಸಿ, ತಲೆಯು ಕೆಡುತ್ತ ನಡೆದಿದೆ. ನೀನು ಏನೆಂದೆ?" ನಿರ್ಧಾರದಿಂದ ಕೇಳಿದಳು

ಪುಟ್ಟವ್ವನು ಜೀವನನ್ನು ಕಣ್ಣಲ್ಲಿ ಹಿಡಿದುಕೊಂಡು "ನೀನು ಸತ್ತರೆ ನನ್ನ ಗತಿಯೇನು, ಮಗಳ ಗತಿಯೇನು ಅಕ್ಕಾನುರಿ?"

"ದೇವರೇ ಗತಿ!"

"ಇದೆಂತಹ ಮಾತು!"

"ನನ್ನ ಮಟ್ಟಿಗೆ ನಾನು ಸಾಯುವೆ. ನಿನ್ನ ಅಪ್ಪಣೆ ಇರಲಿ."

"ಅಕ್ಕಾವುರಿ, ಇಂಥ ಮಾತುಗಳನ್ನು ನಾನು ಎಂದಿಗೂ ಮೆಚ್ಚಲಾರೆ. ನೋಡು. ಇದರಿಂದ ಯಾರಿಗೆ ಹಿತ! ಸುಖದಿಂದ ಇದ್ದ ನನ್ನ ಜೀವನದಲ್ಲಿ ನೀನು ಬಂದೆ. ನನ್ನ ಮನೆಯನ್ನು, ನನ್ನನ್ನು ನೀನು ನಂಬಿದೆ. ಇಬ್ಬರ ಬಾಳುವೆಗೂ ಒಂದು ಕ್ರಮವಾಯಿತು. ಒಂದು ನೆಲೆಯಾಯಿತು. [illegible]ಯಿಂದ ಬದುಕಿದೆವು. ಆ ಬದುಕಿಗೆ ಇಂದಿಗೂ ಕೊರತೆ ಇಲ್ಲ

"ನನಗೆ ಉಂಟಾಗದೆ. ನನಗೆ ಸಾಕಾಗಿದೆ."

"ನೀನು ನನ್ನಂತೆ ವಿಕೇಶಿಯಲ್ಲ. ವಿಧವೆಯಲ್ಲ. ಮುತ್ತೈದೆ. ಸುಮಂಗಲಿ. ಗಂಡನಿರುವವಳು. ಬದುಕಲು ಪ್ರಬಲವಾದ ದಾರಿಯಿದೆ. ನಾನು ಹಂಚಿಕೆಯನ್ನು ಹಾಕಿರುವೆ. ಹಾಕಿದ ಹಂಚಿಕೆಯು ಸಫಲವಾಗಬೇಕಾದರೆ ಒಂದೆರಡು ದಿನಗಳಾದರೂ ಬೇಡವೇ? ಸಮಾಧಾನದಿಂದಿರು."

"ನಾನು ಸಮಾಧಾನದಿಂದ ಮೂರು ನಾಲ್ಕು ತಿಂಗಳಿನಿಂದ ಇರುವೆ. ಆದರೆ ಇದಕ್ಕೆಲ್ಲಿ ಸಮಾಧಾನ! ದಿನಕ್ಕೊಂದು ಚೆಂದವಾಗಿ ಪ್ರದರ್ಶನವಾಗ ಹತ್ತಿದೆ" ಎಂದು ತನ್ನ ಹೊಟ್ಟೆಯನ್ನು ಉದ್ದೇಶಿಸಿ

ನುಡಿದಳು.

“ಸಾಯುವದೇ ನಿಶ್ಚಯವಾದರೆ ಸಾಯಬಹುದು. ಅದಕ್ಕೆ ನನ್ನ ಮನೆಬೇಡ. ಬಾವಿಬೇಡ. ಕೆರೆಯೂ ಬೇಡ. ಕಾಶಿ-ರಾಮೇಶ್ವರಗಳಿವೆ. ಗೋಕರ್ಣ-ಪಂಢರಪುರಗಳಿವೆ. ಯಾತ್ರೆಗೆ ಅನುಕೂಲವಾಗುವಂತೆ ನಮ್ಮಲ್ಲಿ ಹಣವಿದೆ. ಚಿನ್ನಯ್ಯನವರೂ ನೆರವಾಗಬಹುದು. ಯಾತ್ರಾ ಸ್ಥಳಗಳಿಗೆ ಹೋಗುವ. ಪಾಪವನ್ನು ಕಳೆದುಕೊಂಡು ದೇವರ ಪಾದವನ್ನು ಮುಟ್ಟಿ ಪುಣ್ಯ ಪಡೆಯುವ. ತೀರ್ಥ-ಪ್ರಸಾದ-ಪೂಜೆಗಳಿಂದ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿಯನ್ನು ಮಾಡಿಕೊಂಡು ಮರಳಿ ಬರುವ. ಈಗ ಸಾಯುವ ಅವಸರವೇನು?” ಮಾತನ್ನು ಅಷ್ಟಕ್ಕೆ ನಿಲ್ಲಿಸಿದಳು ಪುಟ್ಟವ್ವ.

ಅಕ್ಕಾವರಿಯು ತಾಯಿಯ ಮಾತನ್ನು ಕಿವಿಯರಳಿಸಿ ಕೇಳುತ್ತಿದ್ದಳು.

“ನಮ್ಮ ಹಳ್ಳಿ ಇಷ್ಟೇ ಸಣ್ಣದಲ್ಲ! ಇನ್ನೂ ವಿಸ್ತಾರವಿದೆ. ಕಾಶಿಯಿಂದ ರಾಮೇಶ್ವರದವರೆಗೆ ಸಾವಿರಾರು ಮೈಲು ಉದ್ದವಾದ ನೆಲವಿದೆ. ಅಷ್ಟೇ ಅಗಲವಾದ ಸಮುದ್ರವಿದೆ. ಪಾಪವನ್ನು ಕಳೆದುಕೊಳ್ಳಲು ತೀರ್ಥಗಳಿಗೆ, ಕ್ಷೇತ್ರಗಳಿಗೆ ಹೋಗಬೇಕೆಂದು ಹಿರಿಯರು ಹೇಳುತ್ತಿರುವರು. ಯಾತ್ರಿಕರು ಅಂದಿನಿಂದ ಇಂದಿನವರೆಗೆ ತೀರ್ಥ-ಕ್ಷೇತ್ರಗಳಿಗೆ ಹೋಗಿ ಪಾಪವನ್ನು ಕಳೆದುಕೊಳ್ಳುತ್ತ ಬಂದಿರುವರು. ಅಲ್ಲಿಯ ದೇವರು ನಮ್ಮ ಪಾಪವನ್ನು ಕಳೆದು ಮುಂದಿನ ಜೀವನಕ್ಕೆ ಮಾರ್ಗ ಮಾಡಿಕೊಡುವರು. ಪರಿಸ್ಥಿತಿಯು ಹೀಗಿದ್ದು ನೀನು ಇಂದೇ, ಇಲ್ಲಿಯೇ ಸಾಯಬೇಕೆನ್ನುವೆ? ಎಂಥ ಮಾತು! ಹುಚ್ಚುತನವಲ್ಲವೇ!” ಎಂದು ಛೀ ಹಾಕಿದಳು ಪುಟ್ಟವ್ವ.

ಮಾತುಗಳು ಅಕ್ಕಾವರಿಯ ಮನಸಿನ ಮೇಲೆ ಪರಿಣಾಮವನ್ನು ಮಾಡಿದವು. ಅದರಿಂದ—“ನಾನು ಅವಿವೇಕಿ ಅಮ್ಮಾ, ಇದೆಲ್ಲ ನನಗೆ ತಿಳಿಯದು. ಕಳೆದ ಹತ್ತು-ಹದಿನೈದು ದಿನಗಳಿಂದ ಹೊಟ್ಟೆಯಲ್ಲಿ ಅನ್ನವಿಲ್ಲ. ದೇಹವು ದಣಿದಿದೆ. ಮನಸು ಭಾರವಾಗಿದೆ. ವಿಚಾರದ ಘರ್ಷಣೆಯಿಂದ ಬುದ್ಧಿಯು ಮಂಕಾಗಿದೆ. ಏನು ಮಾಡಲಿ? ಈ

ಸಂಕಟದಿಂದ ಪಾರಾಗಲು ಹಾಗೆ ನುಡಿದೆ.” ಎಂದು ನುಡಿದಳು.

“ನಿನ್ನ ಚಿಂತೆಯು ನನಗೂ ಇದೆ ಅಕ್ಕಾಮರಿ?”

“ಅವರು ಇಷ್ಟು ದಿನವಾದರೂ ಬರಲಿಲ್ಲ. ಅಲ್ಲಿಯ ಹಳ್ಳಿಯ ಹೆಣ್ಣಿನ ತೊಡಕು ಬಲವತ್ತರವಾದುದು. ಗೆಳೆಯರೂ ಅಂಥವರು, ವೇಳೆಯೂ ಉಳಿಯದು, ಉಳಿಸಿಕೊಳ್ಳರು. ವಿಚಿತ್ರವಾದ ಸ್ವಭಾವ. ಅವರು ಬರುವದೇ ಇಲ್ಲ. ಮುಂದೇನೆಂಬ ಚಿಂತೆಯಲ್ಲಿ ಸಾಯಬೇಕೆಂದೆ....” ಎಂದು ಮಾತು ಮುಗಿಸಿದಳು.

ಹೊರಗೆ ಕಾಲಸಪ್ಪಳ ಕೇಳಿಸಿತು. ಪುಟ್ಟವ್ವನು ಬಾಗಿಲ ಕಡೆಗೆ ನೋಡಿದಳು. ರಾಜಣ್ಣ ಹಾಜರಿದ್ದನು.

“ಒಳಗೆ ಬರ್ರಿ!” ಪುಟ್ಟವ್ವನು ಸಖೇದಾಶ್ಚರ್ಯದಿಂದ ಸ್ವಾಗತಿಸಿದಳು.

ಅಕ್ಕಾಮರಿಯು ಗಡಿಬಿಡಿಯಿಂದ ಏಳಹೋದಳು. ಆದರೆ ಊಟವಿಲ್ಲದ್ದರಿಂದಲೂ, ಅಶಕ್ತತೆಯಿಂದಲೂ ಗಂಡನ ಅನಿರೀಕ್ಷಿತ ಆಗಮನದಿಂದಲೂ, ಅಂಜಿ ಏಳುವದಾಗಲಿಲ್ಲ. ಎದ್ದೇ ತೀರಬೇಕೆಂದು ಸಾಹಸ ಮಾಡಲು ಕಾಲುಗಳು ತೊಡಕಾಗಿ ಬಿದ್ದಳು. ಪುಟ್ಟವ್ವನು ಓಡುತ್ತ ಹೋಗಿ ಮಗಳನ್ನು ಸಾವರಿಸಿಕೊಂಡು ಹಿಡಿದು ತೊಡೆಯ ಮೇಲೆ ಮಲಗಿಸಿದಳು.

“ಅಕ್ಕಾಮರಿ! ನೀರು! ನೀರು ತನ್ನಿರಿ!” ಎಂದು ರಾಜಣ್ಣನಿಗೆ ಕೂಗಿದಳು.

ರಾಜಣ್ಣನು ಹತ್ತಿರವಿದ್ದ ತಂಬಿಗೆಯನ್ನು ತಂದುಕೊಟ್ಟನು. ಪುಟ್ಟವ್ವನು ಹನಿ ಹನಿಯಾಗಿ ಮಗಳ ಬಾಯಲ್ಲಿ ನೀರು ಬಿಟ್ಟಳು. ಮುಖಕ್ಕೆ ಚಿಮುಕಿಸಿ ಸೆರಗಿನಿಂದ ಒರಸಿದಳು. ಇದೆಲ್ಲವನ್ನೂ ರಾಜಣ್ಣನು ಬೆಪ್ಪಾಗಿ ನೋಡುತ್ತಿದ್ದನು.

ಅಕ್ಕಾಮರಿಯು ಕಣ್ಣು ಬಿಟ್ಟಳು. ಪುಟ್ಟವ್ವನು ದೀರ್ಘವಾದ ಶ್ವಾಸಗರೆದಳು.

“ಅಕ್ಕಾಮರಿ, ಎಚ್ಚರಾದೆಯಾ?” ಎಂದು ಮುಂಗುರುಳು ತೀಡುತ್ತ ಪುಟ್ಟವ್ವ ಕೇಳಿದಳು.

"ಹ!" ಅಕ್ಕಾಮರಿ ನುಡಿದಳು.

"ಏನು ಬೇಕು? ಚಹ ಮಾಡಿ ತರಲೇನು?"

"ಬೇಡ!"

"ಒಂದು ಗುಟುಕು ಅಕ್ಕಾಮರಿ!!" ದೈನ್ಯದಿಂದ ಕೇಳಿದಳು.

"ಈಗ ನನಗೆ ಏನೂ ಬೇಡ. ಒಂದಿಷ್ಟು ಮಲಗುವೆ. ಅವರು ....ನಿಂತಿರುವರು........" ರಾಜಣ್ಣನನ್ನು ನೋಡಿ ನುಡಿದಳು.

"ಇಲ್ಲ ಕೂಡ್ರುವೆ. ನೀನು ಒಂದಿಷ್ಟು ಮಲಗು!" ಮಂಕನಂತೆ ನುಡಿದನು.

ಇಬ್ಬರೂ ಕೂಡಿ ಆಕೆಯನ್ನು ಹಾಸಿಗೆಯ ಮೇಲೆ ಮಲಗಿಸಿ ಹೊರಗೆ ಬಂದು ಕುಳಿತರು.

ಐದಾರು ನಿಮಿಷ ಮೂಕ ವಿಸ್ಮಯದಲ್ಲಿ ಕಳೆಯಿತು. ಪುಟ್ಟವ್ವನು ಮುಖವನ್ನು ಮೇಲೆತ್ತಿ, ರಾಜಣ್ಣನನ್ನು ನೋಡಿ ಅಭಿನವ ಶೋಕದಗ್ಧ ಪಾತ್ರವನ್ನು ವಹಿಸಿ, ಕಣ್ಣಲ್ಲಿ ನೀರು ತಂದು—"ಕಳೆದ ತಿಂಗಳಿನಿಂದ ಹೀಗೆ ಮಾಡುತ್ತಿರುವಳು! ಕುಳಿತ ಕುಳಿತಲ್ಲಿಯೇ ಬೀಳುವಳು. ನಿಂತ ನಿಂತಲ್ಲಿಯೇ ಉರುಳುವಳು! ಯಾವ ರೋಗವೆಂಬುದೇ ತಿಳಿಯದು!" ಎಂದು ಕಣ್ಣೊರಸಿಕೊಂಡಳು.

ರಾಜಣ್ಣನು ರಾಜನಂತೆ ಕುಳಿತಿದ್ದನು.

"ನೀವು ಬರುವಿರೋ ಇಲ್ಲವೋ ಎಂದು ತಿಳಿದಿದ್ದೆ."

ಇನ್ನೂ ಮಾತಾಡಲಿಲ್ಲ.

"ತಿಂಗಳ ಮೇಲಾಯಿತು. ಹಾಸಿಗೆಯನ್ನು ಬಿಟ್ಟು ಎದ್ದಿಲ್ಲ. ಇಂದೇ ಒಂದಿಷ್ಟು ಬಂದು ಕುಳಿತಿದ್ದಳು. ಮತ್ತೆ ಬಿದ್ದಳು. ನೀವು ಪ್ರತ್ಯಕ್ಷ ನೋಡಿರುವಿರಿ! ಅವಳ ಚಿಂತೆಯಿಂದ ನನಗೆ ಜೀವವೇ ಬೇಸರವಾಗಿದೆ!" ಎಂದು ಅಳುತ್ತ ನುಡಿದಳು.

ಮನೆಯನ್ನು ಸುತ್ತವೆಲ್ಲ ನಿರೀಕ್ಷಿಸಿ "ಏನಾಗಿದೆಯಂತೆ?" ಎಂದು ಕೇಳಿದನು.

"ಏನಾಗಿದೆಯೋ ಯಾರು ಬಲ್ಲರು! ಒಂದು ಚಮಚೆಯಷ್ಟು ನೀರು ಸಹ ಪಚನವಾಗುವದಿಲ್ಲ. ಕಂಡವರು ಕಂಡದ್ದನ್ನು ನುಡಿ

ಯುವರು. ಹೊಟ್ಟೆಯಲ್ಲಿ ಗಂಟು ಆಗಿದೆ ಎನ್ನುವರು. ಸಲ್ಲ ಆಗಿದೆ ಎಂದು ನುಡಿಯುವರು. ಅಪಸ್ಮಾರ ಎಂದು ಹೇಳುವರು. ಇನ್ನು ಕೆಲವರು ಸಂಗ್ರಹಿಣಿ ಎಂದು ಹೆಸರಿಡುವರು. ನಿಜವಾದದ್ದು ದೇವರಿಗೆ ಗೊತ್ತು. ನನಗೆ ಗೊತ್ತಿದ್ದ ಒಂದೆರಡು ಗುಳಿಗೆಗಳನ್ನು ಕೊಟ್ಟೆನು. ಪುಡಿ ತಿನ್ನಿಸಿದೆನು. ಅದರ ಪರಿಣಾಮವೇನೂ ಆಗಿಲ್ಲ. ನನ್ನ ಕೈಕಾಲುಗಳೇ ಹೋಗಿದ್ದವು. ಏನು ಮಾಡಲಿ? ಎಂದು ಚಿಂತೆಯಲ್ಲಿದ್ದೆ. ನೀವು ಬಂದಿರಿ. ದೇಹದಲ್ಲಿ ಹೊಸ ಪ್ರಾಣವು ಬಂದಂತಾಯಿತು. ನಿಮ್ಮ ದರ್ಶನದಿಂದ ಅವಳ ಮನಸಿಗೂ ಉಲ್ಲಾಸ!" ಎಂದು ನುಡಿದಳು.

ರಾಜಣ್ಣನು ಕೈಕಾಲು ತೊಳೆದುಕೊಂಡನು. ಮುಖವನ್ನು ತಿಕ್ಕಿಕೊಂಡನು. ಹಲ್ಲು-ಬಾಯಿ ಸ್ವಚ್ಛ ಮಾಡಿಕೊಂಡನು. ಹೊರಗೆ ಬಂದನು. ಪುಟ್ಟವ್ವನು ಒರಸಿಕೊಳ್ಳಲು ಗುಲಾಬಿಯ ಬಣ್ಣದ ಟಾವೆಲು ಕೊಟ್ಟಳು. ಅಡಿಗೆಯ ಮನೆಯಲ್ಲಿ ಮಣೆಯನ್ನು ಹಾಕಿದಳು. ನೀರು ತುಂಬಿದ ತಂಬಿಗೆ. ಥಾಲಿಯನ್ನಿಟ್ಟಳು. ಒಂದು ಬಸಿಯಲ್ಲಿ ಎರಡು ಉಂಡಿ, ಇನ್ನೊಂದು ಬಸಿಯಲ್ಲಿ ಒಗ್ಗರಣೆ ಹಾಕಿದ ಅವಲಕ್ಕಿ, ದೊಡ್ಡ ಚಕ್ಕಲಿಯನ್ನಿಟ್ಟಳು. ಒಲೆಯಮೇಲಿಂದ ಚಹದ ಪಾತ್ರೆಯನ್ನು ಇಳಿಸಿ ಹಾಲು ಕಾಯಲಿಕ್ಕಿಟ್ಟು ರಾಜಣ್ಣನನ್ನು ಕರೆದಳು.

ರಾಜಣ್ಣನು ಒಳಗೆ ಬಂದು ಕುಳಿತನು.

"ಇದೇನು?" ಎಂದು ಫರಾಳ ನೋಡಿ ಕೇಳಿದನು

"ಬಿಸಿಲಲ್ಲಿ ಬಂದಿರುವಿರಿ. ಒಂದಿಷ್ಟು ಚಹ! ತೆಗೆದುಕೊಳ್ಳಿರಿ." ಎಂದು ಆಗ್ರಹ ಮಾಡಿದಳು.

ರಾಜಣ್ಣನು ಉಂಡಿಯನ್ನು ಮುರಿದು ಬಾಯಿಗೆ ಹಾಕಿಕೊಂಡು ಚರ್ವಿಸಹತ್ತಿದನು. ಅದರ ಸವಿಯು ಗಂಟಲಿಗೆ ಇಳಿಯಹತ್ತಿತು.

"ಬಹಳ ಸೊರಗಿರುವಳು!"

"ತಿಂಗಳ ಮೇಲಾಯಿತು. ಊಟವಿಲ್ಲ."

ಲಿಲ್ಲಿಯು ಬಂದಿತು. ಪುಟ್ಟವ್ವನು ಆಕೆಯನ್ನು ಹಿಡಿದುಕೊಂಡು "ಯಾರು ಹೇಳು" ಎಂದು ಕೇಳಿದಳು.

ಮಗುವು ತಂದೆಯ ಮುಖವನ್ನು ಹುಳುಹುಳು ನೋಡಹತ್ತಿತು.

"ಇಲ್ಲಿ ಬಾ!" ಎಂದು ರಾಜಣ್ಣ ಕರೆದನು.

"ಹೋಗು!" ಎಂದು ಪುಟ್ಟವ್ವ ಸನ್ನೆಯನ್ನು ಮಾಡಿದಳು.

ಮಗುವು ಹೋಗಲಿಲ್ಲ.

"ನಿನ್ನ ಅಣ್ಣ! ರಾಜಣ್ಣ. ತಂದೆಯವರು. ಮರೆತೆ ಏನು?" ಎಂದು ನಗೆಮಾಡಿದಳು.

ರಾಜಣ್ಣನು ಅವಲಕ್ಕಿಗೆ ಬಂದಿದ್ದನು. ಪುಟ್ಟವ್ವನು ಚಹ ಸೋಸಿ ಇಟ್ಟಳು. ಚಹ ಕುಡಿದು ಹೊರಗೆ ಬಂದನು. ಪುಟ್ಟವ್ವನು ಎಲೆ ಅಡಿಕೆಯ ಡಬ್ಬಿಯನ್ನು ತಂದಿಟ್ಟಳು.

ರಾಜಣ್ಣನು ಎಲೆ ಅಡಿಕೆಯನ್ನು ತಿಂದು ಒಂದು ಬೀಡಿಯನ್ನು ಹೊತ್ತಿಸಿ "ಅಕ್ಕ ಎಚ್ಚರಿರುವಳೋ, ಮಲಗಿರುವಳೋ ನೋಡಿರಿ" ಎಂದನು.

ಪುಟ್ಟವ್ವನು ನೋಡಿಬಂದು "ಅವಳಿಗೆ ನಿದ್ದೆಯೇ ಕಡಮೆ. ರಾತ್ರಿ ಕೂಡ ಸಮನಾಗಿ ನಿದ್ದೆಯನ್ನು ಮಾಡುವುದಿಲ್ಲ. ಎಚ್ಚರಿರುವಳು" ಎಂದು ನುಡಿದನು.

ರಾಜಣ್ಣನು ಎದ್ದು ಕೋಣೆಗೆ ಬಂದನು. ಅಕ್ಕಾಮರಿಯು ಹಾಸಿಗೆಯ ಮೇಲೆ ಅಡ್ಡಾಗಿದ್ದಳು. ಅವನ ಪಕ್ಕದಲ್ಲಿ ಕೂಡ್ರಲು ಅಕ್ಕಾಮರಿಯು ಮುಖವನ್ನು ಮುಚ್ಚಿಕೊಂಡು ಅಳ ಹತ್ತಿದಳು. ರಾಜಣ್ಣನು ಮುಸುಕು ತೆರೆದು "ಏಕೆ? ಏನಾಗಿದೆ?" ಎಂದು ಮುಖವನ್ನು ಪರೀಕ್ಷಿಸುತ್ತ ಕೇಳಿದನು.

ಅಕ್ಕಾಮರಿಯ ಮುಖವು ಸಪ್ಪೆಯಾಗಿದ್ದಿತು. ಮೊದಲಿನ ತೇಜವಿರಲಿಲ್ಲ. ಕಣ್ಣುಗಳು ಒಳ ಸೇರಿದ್ದವು. ಮೂಗು ಎದ್ದು ಬಂದಿದ್ದಿತು. ಮುಖದ ಮೇಲೆ ಚಿಂತೆಯ ಗೆರೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಬೇನೆ ಬಂದುದು ರಾಜಣ್ಣನಿಗೆ ಮನವರಿಕೆಯಾಯಿತು. ದಯೆಯೂ ಅಂಕುರಿಸಿತು.

"ಏನಾಗಿದೆ ಮರಿ?" ಎಂದು ಕೈ ಹಿಡಿದು ಕೇಳಿದನು.

ಪುಟ್ಟವ್ವನು ಅಡಿಗೆಯ ಮನೆಗೆ ಜಿಗಿದು ಬಂದಳು. ದೇವರ

ಮುಂದೆ ಬಂದು ತುಪ್ಪದ ನೀರಾಜನವನ್ನು ಹಚ್ಚಿ, ಕಣ್ಣು ಮುಚ್ಚಿ ನಮಸ್ಕರಿಸಿದಳು.

"ಹೊಟ್ಟೆಯಲ್ಲಿ ಸಮಾಧಾನವಿಲ್ಲ. ಯಾವಾಗಲೂ ಹೊಟ್ಟೆ ತುಂಬಿದಂತೆ ಎನಿಸುವದು."

"ಎಷ್ಟು ದಿನವಾಯಿತು ?"

"ತಿಂಗಳೆರಡು ತಿಂಗಳಾಯಿತು. ಕಳೆದ ಹದಿನೈದು ದಿನಗಳಿಂದ ಹೆಚ್ಚಾಗಿದೆ."

"ವೈದ್ಯರಿಗೆ ತೋರಿಸಿದೆಯಾ ?"

"ತೋರಿಸಿದೆ."

"ಏನೆಂದರು ?"

"ಎಲ್ಲರೂ ಬೇರೆ ಬೇರೆ ಹೇಳುವರು."

"ಏನು ?"

"ಇಲ್ಲಿ ಒಂದು ಮುದುಕಿಯು ಔಷಧವನ್ನು ಕೊಡುವದು, ನಾನು ತೋರಿಸಿರುವೆ. ಅದು ಪರೀಕ್ಷಿಸಿ ಹೊಟ್ಟೆಯಲ್ಲಿ ಸಲ್ಲ ಆಗಿದೆ. ಅದು ಬೆಳೆಯಲು ಔಷಧವನ್ನು ಕೊಡುವೆ. ಆದರೆ ನೂರು ರೂಪಾಯಿ ಬೇಕೆಂದಿತು. ಇಲ್ಲಿ ಒಬ್ಬ ಎಲ್ಲಮ್ಮನಿರುವಳು, ಜನರ ವಿಶ್ವಾಸ ಆಕೆಯ ಮೇಲೆ ಬಹಳ. ನಾನು ಒಂದು ದಿನ ಕಂಡು ಕೇಳಿದೆ. ಅವಳು–ನಿನಗೆ ಗಂಡುದೆವ್ವ ಬಡಿದಿದೆ. ಅದು ಒಳಗೊಳಗೇ ತಿಕ್ಕಿ ಮುಕ್ಕುವದು. ಎಂದು ಹೇಳಿದಳು. ಇದರಲ್ಲಿ ಯಾರ ಮಾತನ್ನು ನಂಬಬೇಕು, ತಿಳಿಯದಾಗಿದೆ !" ಎಂದಳು.

"ಇನ್ನೆರಡು ದಿನ ನೋಡು. ಕಡಮೆಯಾದರೆ ಸರಿಯಾಯಿತು. ಇಲ್ಲದಿದ್ದರೆ ತಾಲೂಕಿಗೆ ಹೋಗಿ ಔಷಧವನ್ನು ಕೊಡಿಸುವ !" ಎಂದು ಮಮತೆಯಿಂದ ಮಾತಾಡಿದನು.

ಅಂದು ರಾಜಣ್ಣನ ಊಟ–ಉಡಿಗೆ ಎಲ್ಲವೂ ಅಲ್ಲಿಯೇ ಆಯಿತು. ಪುಟ್ಟವ್ವನ ಅಚ್ಚುಕಟ್ಟಿನ ಅಳಿಯತನದಿಂದ ರಾಜಣ್ಣನು ಸಂತೋಷಪಟ್ಟನು.

ರಾತ್ರಿ ಮಲಗಿದಾಗ ರಾಜಣ್ಣ ಅಕ್ಕಾಮರಿಯ ಗಲ್ಲವನ್ನು ಹಿಡಿದು

“ಇಷ್ಟೆಲ್ಲ ವೈಭವವು ನಿನ್ನ ತಾಯಿಯದೇನು ?” ಎಂದುಕೇಳಿದನು.

“ವೈಭವವೆಂದರೆ !”

“ಮನೆ, ಮಾರು, ಹಾಸಿಗೆ, ಕುರ್ಚಿ, ಮೇಜು, ತಾಟು, ಬಟ್ಟಲ, ಕಪ್ಪು, ಬಸಿ, ಸೀರೆ, ಅರಿವೆ ! ಶ್ರೀಮಂತರ ಮನೆಯಂತೆ ಕಾಣುವದು. ಅದಕ್ಕೆ ಕೇಳಿದೆ.”

“ಮಾವನವರಿದ್ದ ಸಮಯದಲ್ಲಿ ನಿಮ್ಮ ಮನೆಯೂ ಹೀಗೆಯೇ ಇದ್ದಿತು.”

“ಅಪ್ಪನು ಗಳಿಸಿ ತರುತ್ತಿದ್ದ. ಅಷ್ಟೆಲ್ಲವನ್ನೂ ಮಾಡುತ್ತಿದ್ದ. ಮತ್ತು ಅವನಿಗೆ ಹಾಗೆ ಮಾಡುವದು ಬೇಕಿದ್ದಿತು.”

“ಅವ್ವನೂ ಗಳಿಸುವಳು.”

“ಗಳಿಸುವಳು !”

“ಅಹುದು. ಅವಳಿಗೆ ೨೦೦ ರೂ. ವರ್ಷಾಶನವಿದೆ. ಇದು ನಿಮಗೆ ಗೊತ್ತು. ವಾರದಲ್ಲಿ ಶನಿವಾರ, ಗುರುವಾರ ಮತ್ತು ತಿಂಗಳಿನಲ್ಲಿ ಎರಡು ಏಕಾದಶಿ ಉಪವಾಸ ಮಾಡುವಳು. ದಿನಕ್ಕೆ ಒಂದು ಹೊತ್ತು ಊಟ. ಬಂದ ರೂಪಾಯಿಗಳಲ್ಲಿ ಕೆಲವನ್ನು ಉಳಿಸಿಡುವಳು. ಮೇಲೆ ಬಡ್ಡಿಯ ವ್ಯವಹಾರವನ್ನು ಮಾಡುವಳು. ಚಿಕ್ಕಪುಟ್ಟ ಬೇನೆಗೆ ಔಷಧ ವನ್ನು ಕೊಡುವಳು. ಪಂಚಾಂಗ ನೋಡಿ ಹೇಳುವಳು. ಸಣ್ಣ ಪುಟ್ಟ ಹೆಣ್ಣು ಮಕ್ಕಳ ಬಡಿದಾಟದಲ್ಲಿ ಪಂಚಾಯತಿ ಮಾಡುವಳು, ಹೀಗಾಗಿ ಜನರ ಭಕ್ತಿ ಆಕೆಯ ಮೇಲೆ ಬಹಳ. ಆಕೆಯ ಮಾತನ್ನು ನಂಬುವರು. ಸುಗ್ಗಿಯ ಸಮಯದಲ್ಲಿ ಆಕೆ ಕಾಳು ಕೊಳ್ಳುವದಿಲ್ಲ. ಪಲೆ–ಹಣ್ಣು ತರುವದಿಲ್ಲ. ಉಪಕಾರ ಹೊಂದಿದ ರೈತರು ತಂದುಕೊಡುವರು. ಈ ಎಲ್ಲ ಸಂಗತಿಗಳ ಲಾಭಮಾಡಿಕೊಂಡು ಹಣವನ್ನು ಉಳಿಸುವಳು. ಮನೆಯನ್ನು ಅಲಂಕರಿಸಿರುವಳು. ಅವಳಿಗೆ ಇದೆಲ್ಲ ಬೇಕು. ನನ್ನ ತಾಯಿಯ ಜಿಗಟುತನವನ್ನು ಸಾವಿರ ಜನರು ಕಲಿಯಬೇಕು !” ಎಂದು ಪ್ರಸಂಗಾವಧಾನದಿಂದ ಹೇಳಿದಳು.

“ನೀನು ಕಲಿತಿರುವೆ ಏನು ?”

“ಇದೇ ಬಂದು ತುಸುದಿನಗಳಾಗಿವೆ. ಬರ ಬರುತ್ತ ಕಲಿಯುವೆ !”

ಎಂದು ನಗುತ್ತ ಉತ್ತರಿಸಿದಳು.

"ಘೂ ಮಳ್ಳೀ!" ಎಂದು ಆಕೆಯ ಎರಡೂ ಕೈಗಳನ್ನು ಗಟ್ಟಿಯಾಗಿ ಅದುಮಿದನು.

ಕೈಗಳನ್ನು ಬಿಡಿಸಿಕೊಂಡು ಗಂಡನ ಗದ್ದವನ್ನು ಹಿಡಿದು– "ಕೊನೆಗೆ ಬಂದಿರಿ. ನನಗೆ ಬಹಳ ಸಂತೋಷವಾಗಿದೆ. ನಿಮ್ಮನ್ನು ನೋಡಬೇಕೆಂದು ಬಹಳ ದಿನಗಳಿಂದ ಆಶಿಸಿದ್ದೆ. ಅದು ಇಂದು ಸಾರ್ಥಕವಾಯಿತು."

"ಮತ್ತೇನು ಉಳಿಯಿತು."

"ಉಳಿದದ್ದು ನಿಮ್ಮ ಕಡೆಗೆ. ನನ್ನ ಕಡೆಗೆ ಯಾವದೂ ಇಲ್ಲ?" ಎಂದು ಹೊದ್ದುಕೊಂಡು. ಒಯ್ಯಾರದಿಂದ ಮಲಗಿದಳು.

"ನಿಲ್ಲು, ನನ್ನ ಕಡೆಗಿದ್ದುದನ್ನು ತೋರಿಸುವೆ!" ಎಂದು ದೀಪವನ್ನು ಸಣ್ಣದು ಮಾಡಲು ರಾಜಣ್ಣನು ಮೇಲೆದ್ದನು.

## ೨೦

ಗುಳ್ಳವ್ವನ ತೋಟದ ಹಣವು ರಾಜಣ್ಣನ ಕೈಯಲ್ಲಿ ಹಂಚಿನ ಹಲಪಿಗಳಾದವು. ಕಿರಾಣಿಯ ಅಂಗಡಿಯವ, ಅರಿವೆಯ ಅಂಗಡಿಯವ, ಸೆರೆಯ ಭಟ್ಟಿಯ ದುರಗ ಇತ್ಯಾದಿಯವರು ಸಾಲವನ್ನು ಮುಟ್ಟಿಸಿಕೊಂಡರು. ನಿಂಗಿಯು ಕಾಡಿ ತನ್ನ ಪಾಲಿನ ಹಣವನ್ನು ಸೆಳೆದುಕೊಂಡಳು. ಉಳಿದ ಹಣದಲ್ಲಿ ಹತ್ತು-ಹದಿನೈದು ದಿನಗಳ ಆಮೋದಪ್ರಮೋದವಾಯಿತು. ಹಿಂದಿನ ಸಾಲ ಮುಟ್ಟಿದ್ದಕ್ಕೆ ಅಂಗಡಿಯವರು ಮುಂದೂ ಕೆಲವು ಸಾಮಾನುಗಳನ್ನು ಸಾಲಕೊಟ್ಟರು. ಹೀಗೆಯೇ ಮತ್ತೆ ತಿಂಗಳೆರಡು ತಿಂಗಳುಗಳು ಕಳೆದವು. ಈ ಮಧ್ಯೆ ಅಕ್ಕಾಮರಿಯ ಬಳಿಗೂ ಮೂರು-ನಾಲ್ಕು ಸಾರೆ ಹೋಗಿ ಬಂದನು. ಅವಳ ಆಗ್ರಹಕ್ಕೆ ಮುದುಕಿಯ ಕಡೆಯಿಂದ ಔಷಧವನ್ನೂ ಕೊಡಿಸ ಹತ್ತಿದನು. ಅವಳ ಸಲ್ಲು ಸರಾಗವಾಗಿ ಬೆಳೆಯಹತ್ತಿತು. ಹೋದ ಸರದಿಗೊಮ್ಮೆ ಹೆಂಡತಿಗೆ —ಊರಿಗೆ ನಡೆ! ಎಂದು ಕೇಳುತ್ತಿದ್ದನು. ಇದೇ ಔಷಧ ತೆಗೆದುಕೊಳ್ಳ ಹತ್ತಿರುವೆ. ಮೈಯಲ್ಲಿ ಇನ್ನಷ್ಟು ರಕ್ತವಾಗಲಿ, ಈ ಅಮಾವಾಸ್ಯೆ ದಾಟಲಿ, ಈಗ ಒಂದಿಷ್ಟು ಗುಣವೆನಿಸಹತ್ತಿದೆ ಎಂದು ಕುಂಟು ನೆವಗಳನ್ನು ಹೇಳುತ್ತ ನಡೆದಿದ್ದಳು. ಪುಟ್ಟವ್ವನೂ ಅವಳ ಮಾತಿಗೆ ಸೋಬಾನೆಯನ್ನು ಎಳೆಯುತ್ತಿದ್ದಳು. ಇನ್ನೆರಡು ದಿನ ಹೋಗಲಿ? ಎಂಬ ಪುಟ್ಟವ್ವನ ಮಾತನ್ನೂ ಮೀರುವದು ಕಷ್ಟದ್ದಾಗಿದ್ದಿತು. ಹೀಗಾಗಿ ಮತ್ತೆ ಕೆಲವು ದಿನಗಳು ಕಳೆದವು.

ನಿಂಗಿಗೆ ದಿನಗಳು ತುಂಬಿದ್ದವು. ಅವಳು ರಾಜಣ್ಣನಿಗೆ ತಿಂಗಳ

ವರೆಗೆ ಮನೆಯ ಬಾಗಿಲನ್ನು ಮುಚ್ಚಿದಳು. ಮತ್ತು ಬಾಣಂತಿತನಕ್ಕೆ ಇನ್ನೂರು ರೂಪಾಯಿಗಳ ನೋಟೀಸು ಕೊಟ್ಟಂತೆ ಮಾಡಿದಳು. ಅಕ್ಕಾ ಮರಿಯು-ಮನೆಯಲ್ಲಿ ಕಾಳು ಕಡಿ, ಅರಿವೆ ಅಂಚಡಿ, ಕುರುಳು ಕಟ್ಟಿಗೆ, ಎಣ್ಣೆ ಬೆಣ್ಣೆ ಮಾಡಿರಿ. ಬಿದ್ದ ಮನೆಯನ್ನು ಒಂದಿಷ್ಟು ಕಟ್ಟಿಸಿರಿ. ಬಹಳ ದಿನಗಳಾದವು. ಸಾರಿಸಿಲ್ಲ. ಮನೆಗೆ ಒಂದಿಷ್ಟು ಸುಣ್ಣ-ಬಣ್ಣ ಮಾಡಿರಿ. ಎಂದು ಕೊನೆಯ ನೆವವನ್ನು ಹೇಳಿ ಎಚ್ಚರಿಸಿದ್ದಳು. ಈ ಉಭಯ ಕಾರ್ಯಗಳನ್ನು ಸಾಧಿಸಲು ರಾಜಣ್ಣನ ಬಳಿಯಲ್ಲಿ ಹಣವಿರಲಿಲ್ಲ. ನಿಂಗಿಯ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳದಿದ್ದರೂ ನಡೆಯು ವಂತಿದ್ದಿತು. ಆದರೆ ಹೆಂಡತಿಯ ಮುಂದೆ ಸುಳ್ಳುಕಾರಣಗಳು ನಡೆಯು ವಂತಿರಲಿಲ್ಲ. ಬೀಳು ಮನೆಯಲ್ಲಿ ಆಕೆಯನ್ನು ತಂದಿಟ್ಟು ಕೊಳೆ ಹಾಕುವದೂ ಸರಿ ಎನಿಸಲಿಲ್ಲ. ಅದಕ್ಕೆ ವ್ಯವಸ್ಥೆಯಾಗಬೇಕಿದ್ದಿತು. ಇನ್ನೊಂದು ತೋಟವನ್ನು ಬರೆದುಕೊಟ್ಟನು. ನಿಂಗಿಗೂ ಹಣವನ್ನು ಕೊಟ್ಟನು. ಮನೆಯಲ್ಲಿ ಪ್ರಪಂಚದ ಸಾಮಗ್ರಿಗಳನ್ನೂ ತಂದನು. ಎಲ್ಲ ಸಿದ್ಧತೆಯಾಯಿತೆಂದು ತಿಳಿದನು. ಒಂದು ದಿನ ಚಕ್ಕಡಿಯನ್ನು ಹೂಡಿ ಕೊಂಡು ಪುಟ್ಟವ್ವನ ಬಾಗಿಲಮುಂದೆ ನಿಲ್ಲಿಸಿದನು. ಈ ಸಾರೆ ತಾಯಿ-ಮಗಳಿಗೆ ಯಾವ ನೆವ ಸಿಗಲಿಲ್ಲ. ರಾಜಣ್ಣನೂ ಕೇಳಲಿಲ್ಲ.

"ಚಕ್ಕಡಿಯು ಬರಿದಾಗಿ ಎಂದೂ ಹೋಗಲಾರದು. ನೀನು ಹೊರಡಲೇಬೇಕು" ಎಂದು ಹಟ ಹಿಡಿದನು.

"ನಾನು ಬರಲು ಇಲ್ಲವೆನ್ನುವೆನೆ? ಮೊದಲಾಗಿ ಹೇಳಿದ್ದರೆ ನಾನೂ ಸಿದ್ಧತೆಯಲ್ಲಿರುತ್ತಿದ್ದೆನು. ತಾಯಿಯೂ ಸಂತೋಷದಿಂದ ಕಳಿಸುತ್ತಿದ್ದಳು. ಹೀಗೆ ಒಮ್ಮೆಲೆ ಬಂದು ಆ ಹಾಳು ಮನೆಯಲ್ಲಿ ನನ್ನನ್ನು ಒಯಿದು ಇಟ್ಟರೆ ನಾನು ಏನು ಮಾಡಬೇಕು?" ವಿಷಾದ ದಿಂದ ನುಡಿದಳು.

"ಅದು ಹಾಳಿರಲಿ, ಬೀಳಿರಲಿ! ಅದು ನನ್ನ ಮನೆ! ಅದು ನಿನ್ನ ಮನೆ! ನೀನು ಬರುವೆಯೋ ಇಲ್ಲವೋ?"

"ಬರುವೆನು. ಇಲ್ಲವೆಂದು ಹೇಗೆ ಹೇಳಲಿ?"

"ಹಾಗಾದರೆ ಹೊರಡು."

"ರಾಜಣ್ಣ ಒಂದಿಷ್ಟು ತಡೆ. ಚಕ್ಕಡಿಯು ಇಲ್ಲಿಯೇ ಇರಲಿ. ರೈತನೂ ಇರಲಿ. ಎರಡು ದಿನ ಮನೆಯಲ್ಲಿ ನಿಲ್ಲು. ಆಮೇಲೆ ಕರೆದು ಕೊಂಡು ಹೋಗು." ಪುಟ್ಟವ್ವನು ಉಪದೇಶಿಸಿದಳು.

"ಇಲ್ಲ. ಇಂದು ಸಂಜೆಗೆ ನನ್ನ ಹಳ್ಳಿಯನ್ನು ಕಾಣಬೇಕು. ಹೂ....ಏಳು!" ನಿರ್ಧಾರದಿಂದ ಅಪ್ಪಣೆ ಕೊಟ್ಟನು.

ಆ ಒರಟನ ಸ್ವಭಾವವನ್ನು ಅಕ್ಕಾಮರಿಯು ಸಂಪೂರ್ಣ ಅರಿತಿದ್ದಳು. ಸಿಟ್ಟು ಬಂದರೆ ಇಲ್ಲವೆ ಹಟವನ್ನು ಸಾಧಿಸಬೇಕೆಂದರೆ ಅವನು ಯಾವ ರಾಕ್ಷಸನಿಗೂ ಕಡಮೆಯಿಲ್ಲವೆಂದು ಮನಗಂಡ ವಿಷಯ ವಾಗಿದ್ದಿತು. ಅಲ್ಲಿಯ ಕಷ್ಟದ ಚಿತ್ರ ಕಣ್ಣಮುಂದೆ ಸುಳಿದಾಡುತ್ತಿದ್ದಿತು. ಆದರೆ ಈಗ ಇಲ್ಲಿ ಇಲ್ಲೆಂದು ನುಡಿದು ಅನುಭವಿಸಬೇಕಾದ ಕಷ್ಟ ಅದಕ್ಕೂ ಮಿಗಿಲಾದುದೆಂದು ತಿಳಿದು "ಏಳಿರಿ. ಸ್ನಾನಮಾಡಿರಿ. ಊಟವನ್ನು ಮಾಡಿ ಹೋಗುವ. ಅವ್ವನು ಅಡಿಗೆಯನ್ನು ಮಾಡುವಳು. ಅವ್ವಾ, ನಾನು ಹೋಗುವೆನು. ಇನ್ನು ಇಲ್ಲಿ ನಿಲ್ಲಲಾರೆ. ಸಂಜೆಯು ನಿನ್ನ ಮನೆಯ ದೀಪವನ್ನು ನೋಡಲಾರೆನು. ಏಳಿರಿ ಸ್ನಾನ ಮಾಡಿರಿ!" ಎಂದು ಇಬ್ಬರನ್ನೂ ಸಮಾಧಾನಪಡಿಸುವಂತೆ ನುಡಿದಳು.

"ನನ್ನ ಸ್ನಾನವಾಗಿದೆ!"

ಯುಗಾದಿಗೂ ಸ್ನಾನ ಮಾಡದ ಪುಣ್ಯಾತ್ಮ ಸುಳ್ಳುಸುಳ್ಳೇ ಸ್ನಾನವಾಗಿದೆ ಎಂದು ನುಡಿದನು.

ಊಟವಾಯಿತು. ಸೂರ್ಯನು ಒಂದಿಷ್ಟು ಪಶ್ಚಿಮಕ್ಕೆ ಇಳಿಯಲು ಅಕ್ಕಾಮರಿಯು ಬಟ್ಟೆಯನ್ನು ಉಟ್ಟುಕೊಂಡಳು. ತನ್ನ ಸಾಮಾನು-ಸರಂಜಾಮುಗಳನ್ನು ಕಟ್ಟಿದಳು. ಚಕ್ಕಡಿಯಲ್ಲಿ ಹೇರಿಸಿದಳು. ಲಿಲ್ಲಿಯನ್ನು ಕರೆದುಕೊಂಡು ತಾಯಿಗೆ ನಮಸ್ಕರಿಸಿ "ಹೋಗುವೆನು" ಎಂದಳು.

ಪುಟ್ಟವ್ವನು ಲಿಲ್ಲಿಯ ಕೈಯಲ್ಲಿ ಒಂದು ರೂಪಾಯಿಯನ್ನು ಇಟ್ಟು "ಮಗುವನ್ನು ಸಂಭಾಳಿಸು!" ಎಂದು ದುಃಖದಿಂದ ನುಡಿದಳು. ಅಕ್ಕಾಮರಿಯು ತಲೆಯನ್ನು ಅಲ್ಲಾಡಿಸಿದಳು.

"ನಿನ್ನ ಪ್ರಕೃತಿಯನ್ನು ಜಪ್ಪಿಸು. ರಾಜಣ್ಣ, ಇದೇ ಬೇನೆಯಿಂದ ಎದ್ದಿರುವಳು. ಒಂದಿಷ್ಟು ಕಾಳಜಿಯಿಂದ ನೋಡಿಕೊಂಡಿರು" ಎಂದು ಕಣ್ಣಲ್ಲಿ ನೀರು ತಂದು ನುಡಿದಳು. ಅಕ್ಕಾಮರಿಯು ಚಕ್ಕಡಿಯನ್ನು ಏರಿದಳು.

ರಾಜಣ್ಣನು "ಹೋಗುವೆವು!" ಎಂದು ನುಡಿದು ಚಕ್ಕಡಿಯನ್ನು ಹಿಂಬಾಲಿಸಿದನು.

ಅಳಿಯ, ಮಗಳು, ಮೊಮ್ಮಗಳು ಮರೆಯಾಗುವವರೆಗೆ ನೋಡಿ ಪುಟ್ಟವ್ವನು ತಿರುಗಿ ಬಂದು ಆ ಇಡೀ ಮನೆಗೆ ತಾನು ಒಬ್ಬೊಂಟಿಗಳಾಗಿ ಉಸ್ಸೆಂದು ಕುಳಿತಳು.

ಸಂಜೆಯ ಸುಮಾರಿಗೆ ಊರಿಗೆ ಬಂದರು. ಮನೆಯನ್ನು ಸೇರುವಷ್ಟರಲ್ಲಿ ಮಬ್ಬುಗತ್ತಲಾಯಿತು.

ಚಕ್ಕಡಿಯ ಮೇಲಿನ ಸಾಮಾನುಗಳನ್ನು ಇಳಿಸಿದರು. ರಾಜಣ್ಣನು ಬಾಗಿಲನ್ನು ತೆಗೆದನು. ಎಲ್ಲರೂ ಗೃಹಪ್ರವೇಶವನ್ನು ಮಾಡಿದರು. ರಾಜಣ್ಣನು ಲಿಲ್ಲಿಯನ್ನು ಕರೆದುಕೊಂಡು ಕುಳಿತನು.

"ಕತ್ತಲಾಗಿದೆ. ದೀಪ ಹಚ್ಚುವೆ. ಹಿತ್ತಾಳಿಯ ದೊಡ್ಡ ಸ್ಟ್ಯಾಂಡು ಗ್ಲಾಸು ಎಲ್ಲಿದೆ?" ಅಕ್ಕಾಮರಿಯು ರಾಜಣ್ಣನನ್ನು ಕೇಳಿದಳು.

"ಅದು ಹೋಯಿತು."

"ಹೇಗೆ?"

"ಅದನ್ನೇನು ಮಾಡುವದು ಈಗ?"

"ಈಗ ದೀಪವನ್ನು ಹೇಗೆ ಹಚ್ಚಬೇಕು?" ಮೊದಲನೆಯ ಶುತ್ತಿಗೆ ನೊಣ ಕಡಿದಂತೆ ವಿಷಾದದಿಂದ ನುಡಿದಳು.

"ಇದೋ, ಚಿಮಣಿಯನ್ನು ಹಚ್ಚು." ಎಂದು ಕೋಣೆಯಲ್ಲಿಯ ಕೈ ಚಿಮಣಿಯನ್ನು ತಂದು ಮುಂದಿಟ್ಟನು.

"ಎಣ್ಣೆ ಇಲ್ಲ." ಅಲುಗಾಡಿಸುತ್ತ ಅಕ್ಕಾಮರಿಯು ನುಡಿದಳು.

"ಎಣ್ಣೆ ಇಲ್ಲ! ತರುವೆನು ನಿಲ್ಲು." ಎಂದು ಬರಿದಾದ ಒಂದು ಸೆರೆಯ ಬಾಟಲಿಯನ್ನು ತೆಗೆದುಕೊಂಡು ಹೊರಬಿದ್ದನು.

ಅಕ್ಕಾಮರಿಯ ಅವಸ್ಥೆಯನ್ನು ದೇವರೇ ಬಲ್ಲ!

ಭವ್ಯವಾದ ಮನೆ! ಮನೆ ತುಂಬ ಜನ! ತುಂಬಿದ ಮನೆಯೆಲ್ಲ ಬೆಳಕು! ಬೆಳಕು ಬಿದ್ದಲ್ಲೆಲ್ಲ ಭಾಗ್ಯ ಪ್ರದರ್ಶನ! ಅಂತಹ ಅಂದಿನ ಮನೆಯಲ್ಲಿ ಇಂದೇನಿದೆ? ಮುಂದಿನ ಭಾಗವೆಲ್ಲ ಬಿದ್ದಿದೆ, ನೋಡಿದಲ್ಲೆಲ್ಲ ಹಾಳು ಮಣ್ಣಿನ ರಾಶಿ! ಕಣ್ಣಿಟ್ಟಲ್ಲಿ ಕೊರೆ ಕಡ್ಡಿಯು, ಕರಿಮುಖದ ಬೀಡಿಯ ಉರುಳಾಟ! ಇಂದಿಗೆ ಒಂದು ಹನಿ ಎಣ್ಣೆಗೂ ಗತಿಯಿಲ್ಲ. ಗಳಗಳನೆ ಅತ್ತಳು. ಹಣೆಹಣೆ ಕುಟ್ಟಿಕೊಂಡಳು. ಏನಾಯಿತು? ಏನಾಗುವದಿದೆ? ನನ್ನ ಮುಂದಿನ ಬಾಳಿಗೆ ಈ ಮನೆಯೋ? ತಾಯಿಯ ಮನೆಯೋ? ಜೀವಕ್ಕೆ ಯಾವ ಮನೆಯು ನೆಮ್ಮದಿಯಾದೀತು? ಧರ್ಮಕ್ಕೆ ಯಾವದು ಸಮ್ಮತವಾದೀತು? ಒಂದು ನರಕ; ಆದರೆ ಧರ್ಮ! ಒಂದು ಸ್ವರ್ಗ; ಆದರೆ ಅಧರ್ಮ! ಜೀವವು - ಬದುಕಬೇಕು, ಸುಖದಿಂದ ಬಾಳಬೇಕು, ಒಳಗೂ ಸಂತೋಷ ಪಡಬೇಕು, ಹೊರಗೂ ಆನಂದ ಪಡಬೇಕು ಎಂದು ಆಶಿಸುವದು. ಒಂದನ್ನು ಸ್ವೀಕರಿಸಿದರೆ ಇನ್ನೊಂದಕ್ಕೆ ಎರವಾಗಬೇಕು! ಇನ್ನೊಂದನ್ನು ಆರಿಸಿದರೆ ಮೊದಲನೆಯದಕ್ಕೆ ಎರವಾಗಬೇಕು! ಇದೆಂತಹ ಪರೀಕ್ಷೆ! ಎಂದು ಕಣ್ಣ ಮುಂದೆ ಮೂಡಿ ನಿಂತ ನೆಳಲು-ಬೆಳಕಿನ ಮಿಶ್ರಣದ ಚಿತ್ರವನ್ನು ನೋಡುತ್ತ ವಿಚಾರಿಸ ಹತ್ತಿದಳು. ತಾಯಿಯ ಮನೆಯು ಶೃಂಗಾರಪೂರ್ಣ ಚಿತ್ರ, ಗಂಡನ ಮನೆಯ ಗಂಭೀರಭೀಕರ ಚಿತ್ರ! ಇದೋ? ಅದೋ? ಯಾವದು?

ರಾಜಣ್ಣನು ಕೆಂಪು ಚಿಮಣಿಯ ಎಣ್ಣೆಯನ್ನು ತುಂಬಿ ತಂದಿಟ್ಟನು.

ಅಕ್ಕಾಮರಿಯು ಭಾವಲೋಕದಿಂದ ಅದೇ ಭೂಮಿಗೆ ಬಂದಿದ್ದಳು. ಚಿಮಣಿಯನ್ನು ಎತ್ತಿಕೊಂಡಳು. ಆದರೆ ಅದಕ್ಕೆ ಬತ್ತಿಯು ಇರಲಿಲ್ಲ.

"ಇದಕ್ಕೆ ಬತ್ತಿಯು ಇಲ್ಲ" ಎಂದಳು.

"ಒಂದು ಹರಿದ ಅರಿವೆಯನ್ನು ಪೋಣಿಸು" ಎಂದನು.

ಮನೆಯಲ್ಲಿ ಒಂದು ಹರಕು ಅರಿವೆಗೂ ಗತಿ ಇರಲಿಲ್ಲ. ಇದ್ದ ತುಣುಕುಗಳು ಏನೇನೋ ಹೊಲಸು. ಎಂಥೆಂಥದೋ ವಾಸನೆ. ನಾನಾ

ಬಣ್ಣದ ಕಲೆಗಳಿಂದ ಗಂಜಿಯಲ್ಲಿ ಅದ್ದಿ ಒಣಗಿದಂತೆ ಸೆಟೆದಿದ್ದವು.

"ಇವುಗಳಿಂದ ಎಣ್ಣೆಯು ಮೇಲೇರಲಾರದು."

"ಕತ್ತಲೆಯಲ್ಲಿ ಇನ್ನೆಲ್ಲಿ ಹುಡುಕಬೇಕು ?" ಎಂದು ರಾಜಣ್ಣನು ತನ್ನ ಮನೆಯಲ್ಲಿಯ ಒಂದು ಹರಕು ಅರಿವೆಯ ಶೋಧಕ್ಕೆ ಎದ್ದನು.

ಲಿಲ್ಲಿಯು ಅಳುತ್ತ ತಾಯಿಯ ಬಳಿಗೆ ಬಂದಿತು. ತಾಯಿಯು ಅದನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು "ಏಕೆ ಅಳುವೆ. ಈಗ ದೀಪವನ್ನು ಹಚ್ಚುವೆ. ಸುಮ್ಮನಾಗು. ಹಸಿದಿರಬೇಕು. ದೀಪ ಹಚ್ಚಿ ತಿನ್ನಲು ಕೊಡುವೆ" ಎಂದು ತಲೆಯ ಮೇಲೆ ಕೈಯಾಡಿಸಿದಳು. ಜೋಲಾಡುವ ರಿಬ್ಬನ್ನು ಕೈಗೆ ತಗಲಿತು. ಅದನ್ನು ಬಿಚ್ಚಿ ಸುರುಳಿಯಾಗಿ ಮಾಡಿ ಚಿಮಣಿಯಲ್ಲಿ ಪೋಣಿಸಿ, ಎಣ್ಣೆಯಲ್ಲಿ ನೆನೆಸಿದಳು.

"ಒಂದು ಅರಿವೆಯ ಚೂರು ಸಿಗಲಿಲ್ಲವೇ! ಹುಡುಗಿಯ ರಿಬ್ಬನ್ನು ಪೋಣಿಸಿದೆ!" ರಾಜಣ್ಣ ನುಡಿದನು.

"ಸೀರೆಯ ಸೆರಗು ಹರಿದು ಪೋಣಿಸಿದರೆ ಸರಿ ಕಡ್ಡಿಯ ಪೆಟ್ಟಿಗೆಯನ್ನು ತರ್ರಿ" ಎಂದು ತುಂಬಿ ಬಂದ ಸಂತಾಪವನ್ನು ಸೀರೆಯ ಮೇಲೆ ಮಾತಾಡಿ ಶಾಂತತೆಯನ್ನು ಹೊಂದಿದಳು.

ರಾಜಣ್ಣನು ಕಿಸೆಯಲ್ಲಿ ಕೈ ಹಾಕಿ ಮೂರು ಮಂಗಗಳ ಚಿತ್ರದ ಕಡ್ಡಿಯ ಪೆಟ್ಟಿಗೆಯನ್ನು ಚೆಲ್ಲಿದನು. ಅಕ್ಕಾಮರಿಯು ಕೊರೆದು ದೀಪಕ್ಕೆ ಹಚ್ಚಿದಳು. ಮೊದಲು ಗಡುತರವಾಗಿ ಉರಿದು ಕೊನೆಗೆ ಚಿಕ್ಕ ಮೇಣದ ಬತ್ತಿಯಷ್ಟು ಪ್ರಕಾಶವನ್ನು ಹರಡುತ್ತ ಅಕ್ಕಾಮರಿಯ ಪ್ರಪಂಚದ ಮೇಲೆ ತಿಳಿಗತ್ತಲೆಯ ಛಾಯೆಯನ್ನು ಹರಹಿತು.

"ಅಡಿಗೆಯನ್ನು ಏನು ಮಾಡುವೆ ?" ದೀಪಕ್ಕೆ ಬೀಡಿಯನ್ನು ಹೊತ್ತಿಸುತ್ತ ರಾಜಣ್ಣನು ಕೇಳಿದನು.

"ಏನು ಮಾಡೆನ್ನುವಿರಿ ?"

"ಅಕ್ಕಿಯನ್ನು ತಂದಿರುವೆ. ಕಡಲೆಯ ಬೇಳೆಯ ಹಿಟ್ಟೂ ಇದೆ."

ಅನ್ನವನ್ನು ಮಾಡುವೆನು. ನೀವು ಹೊರಗೆ ಹೋಗುವಿರೇನು ?"

"ಹ" ಬೀಡಿಯ ಹೊಗೆಯನ್ನು ಬಿಡುತ್ತ ನುಡಿದನು.

"ನನಗೆ ಹೆದರಿಕೆ! ನೀವು ರಾತ್ರಿಯ ಸಮಯದಲ್ಲಿ ಮನೆ ಬಿಟ್ಟು

ಎಲ್ಲಿಗೂ ಹೋಗಬಾರದು. ನಾನೊಬ್ಬಳೇ ಇಲ್ಲಿ ರಾತ್ರಿಯಲ್ಲಿ ಇರಲಾರೆ. ಅಂದಿನ ತುಂಬಿದ ಮನೆಯೆಲ್ಲಿ? ಇಂದಿನ ಬಿದ್ದ ಈ ಹಾಳು ಮನೆಯೆಲ್ಲಿ? ನೀವು ಹೋದರೆ ಹೆದರಿಕೆಯಿಂದ ಪ್ರಾಣವನ್ನು ಬಿಟ್ಟೇನು."

"ಇಲ್ಲ. ಮನೆಯಲ್ಲಿರುವೆನು."

"ನೀರು ಇದೆಯೇ?"

"ಇಲ್ಲ."

"ಹಾಗಾದರೆ ಅಡಿಗೆಯನ್ನು ಹೇಗೆ ಮಾಡುವದು?"

ರಾಜಣ್ಣನು ಒಂದು ಕೊಡ ನೀರು ಸಹ ತಂದಿರಲಿಲ್ಲ.

"ನೀರು?" ರಾಜಣ್ಣನು ವಿಚಾರಿಸಹತ್ತಿದನು.

"ನಾನು ಇನ್ನು ಮುಂದೆ ಅಡಿಗೆಯನ್ನು ಮಾಡುವದಿಲ್ಲ. ಈಗಾಗಲೆ ಸಾಕಷ್ಟು ರಾತ್ರಿಯಾಗಿದೆ. ಲಿಲ್ಲಿಯೂ ಹಸಿದಿದೆ. ನಿದ್ದೆಯಿಂದ ತೂಕಡಿಸಹತ್ತಿದೆ. ಅವ್ವನು ಸಾಕಷ್ಟು ಫರಾಳವನ್ನು ಕಟ್ಟಿ ಕೊಟ್ಟಿರುವಳು. ತಿಂದು ಇಂದಿನ ರಾತ್ರಿಯನ್ನು ಕಳೆದರಾಯಿತು. ನಾಳೆ ಎಲ್ಲ ಸಿದ್ಧತೆಯನ್ನೂ ಮಾಡಿದರಾಯಿತು."

"ಆಗಲಿ."

"ಆದರೆ ಕುಡಿಯಲಿಕ್ಕಾದರೂ ಒಂದು ತಂಬಿಗೆ ನೀರು ಬೇಡವೇ?"

"ಓ! ತಂಬಿಗೆಯನ್ನು ತಾ. ಈಗ ನೀರು ತರುವೆ."

"ನೀವು ಹೋದರೆ...."

"ಒಂದು ಕ್ಷಣದಲ್ಲಿ ತರುವೆ" ಎಂದು ತಂಬಿಗೆಯನ್ನು ತೆಗೆದುಕೊಂಡು ಆ ತಿಳಿಗತ್ತಲೆಯಲ್ಲಿ ಹೊರಬಿದ್ದನು.

ಅಕ್ಕಾಮರಿಯು ಜೀವದಲ್ಲಿ ಜೀವವನ್ನು ಹಿಡಿದು ಒಬ್ಬಳೇ ಕುಳಿತಳು. ಲಿಲ್ಲಿಯನ್ನು ಎದೆಗೆ ಗಟ್ಟಿಯಾಗಿ ಹಿಡಿದುಕೊಂಡು ರಾಜಣ್ಣನ ಬರವನ್ನೇ ನಿರೀಕ್ಷಿಸಹತ್ತಿದಳು.

ಬಾಗಿಲ ಮುಂದಿನಿಂದ ಒಂದು ನಾಯಿ ಓಡಿದಂತಾಯಿತು.

ಅಕ್ಕಾಮರಿಯ ಎದೆಯಲ್ಲಿ ತಣ್ಣೀರು ಸುರುವಿದಂತಾಯಿತು.

ಒಬ್ಬ ಮುದುಕ ಬಿಳಿಯ ಬಟ್ಟೆಗಳನ್ನು ಉಟ್ಟುಕೊಂಡು ಮೊಣಕೈ

ಗಳನ್ನು ಚಟಪಟಿಸುತ್ತ ಬಾಗಿಲ ಹೊರಗೆ ಬಿದ್ದಂತಾಯಿತು.

ಅಕ್ಕಾಮರಿಯ ನಾಡಿಯಲ್ಲಿ ಬರ್ಫದ ನೀರು ಹರಿದಂತಾಯಿತು. ತಲೆಯ ಕೂದಲೆಲ್ಲ ನಿಮಿರಿ ನಿಂತವು. ಎದೆಯು ಹೊಡೆದುಕೊಳ್ಳ ಹತ್ತಿತು. ಲಿಲ್ಲಿಯನ್ನು ಇನ್ನಷ್ಟು ಗಟ್ಟಿಯಾಗಿ ಹಿಡಿದಳು.

ರಾಜಣ್ಣನು ತಂಬಿಗೆಯ ತುಂಬ ನೀರು ತಂದ. ಫರಾಳ ತಿಂದು ಅಂದಿನ ರಾತ್ರಿಯ ಊಟ ಮುಗಿಸಿ ಮಲಗಿದರು.

* * * *

ಮನೆಯೊಳಗಿನ ಹೇಸಿಕೆ, ಕೊಳೆ, ಹೊಲಸುಗಳನ್ನು ತೆಗೆಯಲು ಅಕ್ಕಾಮರಿಗೆ ೧೦-೧೫ ದಿನಗಳು ಹಿಡಿದವು. ಪಾತ್ರೆಗಳು ಸರಿಯಾಗಿ ರಲಿಲ್ಲ. ಇದ್ದವುಗಳು ಗಟ್ಟಿ ಇರಲಿಲ್ಲ. ಕಂಠಗಳು ಕುಳಿತಿದ್ದವು. ತಳಗಳು ಸೋರುತ್ತಿದ್ದವು. ಹುಣಸೆಯ ಹಣ್ಣು ಹಚ್ಚಿ, ಮಣ್ಣು ಒರಸಿ ಅಡಿಗೆಯನ್ನು ಮಾಡುತ್ತಿದ್ದಳು. ಅಂಗಳವನ್ನು ಉಡುಗಿಸಿದಳು. ಮುಂದುಗಡೆಯಲ್ಲಿ ರಾಸಿಯಾಗಿ ಬಿದ್ದ ಮಣ್ಣು ತೆಗೆಯಿಸಿದಳು. ಅದರ ತಳದಲ್ಲಿ ಸಿಕ್ಕ ಕಟ್ಟಿಗೆಗಳನ್ನು ತೆಗೆಯಿಸಿ ಒಂದು ಕಡೆಗೆ ಒಟ್ಟಿಸಿದಳು. ನೆರೆಮನೆಯ ಒಂದು ಮುದುಕಿಗೆ ಸೇರು ಜೋಳವನ್ನು ಹಾಕಿ ನೆಲವನ್ನು ಸಾರಿಸಿದಳು. ಇನ್ನೊಬ್ಬ ಮುದುಕನಿಗೆ ಮೂರು ಸೇರು ಸಜ್ಜೆಯನ್ನು ಸುರಿದು ಪಡೆ, ಮಾಳಿಗೆಯನ್ನು ಉಡುಗಿಸಿದಳು. ಮತ್ತೆರಡು ಚಿಮಣಿಗಳನ್ನು ಹಣ ಕೊಟ್ಟು ತಾಲೂಕಿನಿಂದ ತರಿಸಿದಳು. ಇಷ್ಟೆಲ್ಲ ಸಾರಣೆ-ಕಾರಣೆಗಳನ್ನು ಮಾಡಿದರೂ ಮನಸು-'ಅಲ್ಲ ಅಲ್ಲ! ಇದು ಸಾಲದು. ಇದು ಸಾಲದು' ಎಂದು ನುಡಿಯುತ್ತಿದ್ದಿತು. ಆದರೆ ಹಿಂದೂ ಸಂಸ್ಕಾರ, ವೈದಿಕ ಧರ್ಮದ ಪರಂಪರೆ; 'ಇಂದಿಲ್ಲ ನಾಳೆ ದೇವರು ಒಳ್ಳೆಯ ದಿನಗಳನ್ನು ತರಬಹುದು! ಅವರೂ ವಿವೇಕದಿಂದ ಬಾಳುವೆಯನ್ನು ಮಾಡಬಹುದು! ಮೊದಲಿನ ಭಾಗ್ಯ ಮತ್ತೆ ನೆಲೆಯೂರಿ ನಿಲ್ಲಬಹುದು!' ಎಂಬ ಆಶಾಂಕುರವನ್ನು ನಂಬಿ ಸಾಗಿದ್ದಳು.

ಅಕ್ಕಾಮರಿಯು ಹೆಚ್ಚಾಗಿ ಹೊರಗೆ ಹೋಗುತ್ತಿರಲಿಲ್ಲ. ಅದಕ್ಕೆ ಎರಡು ಕಾರಣಗಳಿದ್ದವು. ಮಾವನವರು ಜೀವದಿಂದಿದ್ದ ಸಮಯ

ದಲ್ಲಿ ರಾಜಪುತ್ರಿಯಂತೆ ನಡೆದವಳು. ರಾಜ ವೈಭವವನ್ನು ಉಂಡವಳು. ಓರಗೆಯವರು ತನ್ನ ಮನೆಯವರೆಗೆ ಬಂದು ಮೇಲೆ ಬಿದ್ದು ಮಾತಾಡಿ ಪ್ರೇಮವನ್ನು ಸಂಪಾದಿಸಿದ್ದರು. ಇಂದು ಭಿಕ್ಷುಕಿಗೂ ಕೀಳಾಗಿರುವಳು. ಮೊದಲಿನ ಸಂಸ್ಕಾರದಿಂದ ಹೊರಗೆ ಹೋಗಿ ಗೆಳತಿಯರಲ್ಲಿ ಕೂಡಿ ಹರಟೆಯನ್ನು ಹೊಡೆಯುವ ರೂಢಿಯನ್ನು ಮಾಡಿಕೊಂಡಿರಲಿಲ್ಲ. ಈ ನಡತೆಗೆ ತಾಯಿಯ ಮನೆಯೂ ಅನುಮೋದಿಸಿದ್ದಿತು. ಎರಡನೆಯ ಕಾರಣದಿಂದ ಅಭಿಮಾನ, ಲಜ್ಜೆ ಹಿಂದೆ ಎಳೆಯುತ್ತಿದ್ದವು. ಅದರಿಂದ ಈಗಲೂ ಹೊರಗೆ ಹೋಗುತ್ತಿರಲಿಲ್ಲ. ಕೂಡಿದಾಗ ನೆರೆಮನೆಯ ಕೆಲವು ಒಕ್ಕಲ ಮುದುಕಿಯರು ಮನೆಯವರೆಗೆ ಬಂದು ಮಾತಾಡಿ ಹೋಗುತ್ತಿದ್ದರು. ಮಾತಿನ ಮಲಕಿನಲ್ಲಿ ರಾಜಣ್ಣನ ನಡತೆ, ಅವನ ಕೆಲಸ, ಕಾರ್ಯ, ಹೊಲಗಳನ್ನು ಹಾಳು ಮಾಡುತ್ತ ನಡೆದುದು, ಆ ನಾಲ್ವರು ಘಟಿಂಗರ ಸಹವಾಸ, ಕದನ್ನ ಭಕ್ಷಣ ಇತ್ಯಾದಿಗಳು ಬಂದು ಹೋಗುತ್ತಿದ್ದವು. ಆದರೂ ಅಕ್ಕಾಮರಿ ಗಂಡನ ಬಗ್ಗೆ ಒಂದು ಬಿಸಿಯುಸಿರು ಎತ್ತುತ್ತಿರಲಿಲ್ಲ. ಮೌನದಿಂದ ಸಹಿಸಿಕೊಂಡು ನಡೆಯುತ್ತಿದ್ದಳು. ತನ್ನ ಪಾಪಕೃತ್ಯದ ಆವರಣದಲ್ಲಿ ಅದನ್ನು ಹುದುಗಿಸಿಕೊಂಡು 'ದೇವರೇ ರಕ್ಷಿಸಬೇಕು. ಅವನೇ ಕೈಹಿಡಿದು ನನ್ನ ಮನೆಯನ್ನು ಮುಂದೆ ತರಬೇಕು!' ಎಂದು ದೀರ್ಘಶ್ವಾಸವನ್ನು ಗರೆದು ಮುಗಿಸುತ್ತಿದ್ದಳು. ಬಂದವರು ಸಂಜೆಯಾಗಲು ಮನೆಗೆ ಹೋಗುತ್ತಿದ್ದರು. ಮುಂದೆ ಅಕ್ಕಾಮರಿಯು ತನ್ನ ಭಾವೀಜೀವನದ ಏಕಾಂತ ಚರ್ಚೆಗೆ ಅನುಕೂಲ ಮಾಡಿಕೊಳ್ಳುತ್ತಿದ್ದಳು.

ಮುಂದೆ ಮತ್ತೆ ೮-೧೦ ದಿನಗಳು ಕಳೆದವು.

ರಾಜಣ್ಣನ ದೈನಂದಿನ ಕ್ರಮವು ಮೊದಲಿನ ಹಾದಿಯನ್ನು ಹಿಡಿಯಿತು. ಮನೆಯಲ್ಲಿ ಉಳಿಯುವದನ್ನು ಅರ್ಧ ಕಡಿಮೆ ಮಾಡಿದನು. ಮಧ್ಯಾಹ್ನದ ಊಟಕ್ಕೆ ನಾಲ್ಕೈದು ಸಾರೆ ತಪ್ಪಿಸಿದನು. ಮನೆಯಲ್ಲಿ ತೀರಿದ ಪ್ರಾಪಂಚಿಕ ಸಾಮಾನುಗಳನ್ನು ತರುವ ವಿಚಾರದಲ್ಲಿ ಮಂದಗತಿಯನ್ನು ಹಿಡಿದನು. ಅಕ್ಕಾಮರಿಯು ಒಂದೆರಡು ಸಾರೆ ಹೇಳಿ ಬಾಯಿಯನ್ನು ಹೊಲಿದುಕೊಂಡಳು. ಊಟಕ್ಕಾಗಿ

ಒಂದಿಷ್ಟು ತಡೆದು ಆಕೆಯು ತನ್ನ ಮತ್ತು ಮಗಳ ಊಟವನ್ನು ಮುಗಿಸುವ ಕ್ರಮವನ್ನಿಟ್ಟುಕೊಂಡಳು. ರಾತ್ರಿಗೆ ಮಲಗಲೂ ಬರದಿದ್ದರೆ ? ಎಂಬ ಪ್ರಶ್ನೆಯು ಆಕೆಯ ಚಿಂತೆಗೆ ದೊಡ್ಡ ಕಾರಣವಾಯಿತು. ಒಂದು ಮುದುಕಿಯನ್ನಾದರೂ ಸಂಗಾತಿಯನ್ನು ಮಾಡಿಕೊಳ್ಳಲೇ ? ಎಂದು ವಿಚಾರಿಸಿದಳು. ಆದರೆ ಇದನ್ನು ತನ್ನ ಸ್ವಂತ ಹೊಣೆಯಿಂದ ಮಾಡುವಂತಿರಲಿಲ್ಲ. ಗಂಡನನ್ನು ಕೇಳಿ ನಿರ್ಣಯಿಸಬೇಕೆಂದು ಗೊತ್ತುಮಾಡಿದಳು.

ಇಂದು ಮುಂಜಾನೆ ಎದ್ದು ಹೋದವನು ಮಬ್ಬುಗತ್ತಲಾದರೂ ಮನೆಗೆ ಬಂದಿರಲಿಲ್ಲ. ಹರಟೆಗೆ ಬಂದ ನೆರೆಮನೆಯವರು ಮಾತಾಡಿಕೊಂಡು ಮನೆಗೆ ಹೋಗಿದ್ದರು. ಸಂಜೆಗೆ ಕಟ್ಟಿಗೆಗಳಿಲ್ಲವೆಂದು ಅಡಿಗೆಯ ಸಿದ್ಧತೆಯನ್ನು ಮಾಡಹತ್ತಿದಮೇಲೆ ತಿಳಿಯಬಂದಿತು. ಅಂಗಳದಲ್ಲಿ ಒಟ್ಟಿದ ಕಟ್ಟಿಗೆಗಳು ಉದ್ದವಾಗಿ ಒಲೆಯಲ್ಲಿ ಹಿಡಿಯುತ್ತಿರಲಿಲ್ಲ. ನೆರೆಮನೆಯವರಿಗೂ ಹೇಳಿ ತುಂಡರಿಸಿಕೊಂಡಿರಲಿಲ್ಲ. ಲಿಲ್ಲಿ ಹಸಿವೆ ಎಂದು ಕೂಗುತ್ತಿದ್ದಿತು. ತಾಯಿಯ ಮನೆಯಿಂದ ತಂದ ಫರಾಳದ ಜೀನಸುಗಳು ಬಂದ ಎರಡು ದಿನಗಳಲ್ಲಿ ತೀರಿದ್ದವು ಲಿಲ್ಲಿಯ ಹಸಿವೆಯ ಕೂಗು ಇನ್ನೂ ಹೆಚ್ಚಾಯಿತು ! ಸ್ವಲ್ಪ ತಾಳು ! ಎಂದು ನುಡಿದಳು. ಸಂಜೆಯ ಊಟಕ್ಕೆ ಅವರು ಬರಬಹುದು. ಅಡಿಗೆಯನ್ನಾದರೂ ಬೇಗ ಮಾಡುವ ! ಎಂದು ಎದ್ದಳು. ಲಿಲ್ಲಿ ಮತ್ತೆ ಹಸಿವೆ ! ಎಂದಿತು. ಕೆನ್ನೆಗೆ ಒಂದು ಬಿಗಿದು ಎದುರಿನ ಗೋಡೆಗೆ ಕುಳ್ಳಿರಿಸಿದಳು. ಮಗುವು 'ರೋ' ಎಂದು ಅಕ್ಕಾಮರಿಯ ಪ್ರಪಂಚ ನಾಟಕದ ಹಿನ್ನೆಲೆಯಲ್ಲಿ ನಿಂತು ರಾಗವನ್ನು ಎಳೆಯಹತ್ತಿತು.

ಅಂಗಳದಲ್ಲಿಯ ಕಟ್ಟಿಗೆಯ ರಾಶಿಯಲ್ಲಿಯ ಒಂದು ಕಟ್ಟಿಗೆಯನ್ನು ಆರಿಸಿಕೊಂಡಳು. ಅದು ಇದ್ದವುಗಳಲ್ಲಿ ಸಣ್ಣದು. ಕಾಲು ಮೆಟ್ಟಿ ಮುರಿಯ ಹೋದಳು. ಆದರೆ ಅದು ಬರಲಿಲ್ಲ. ಇನ್ನಷ್ಟು ಶಕ್ತಿಯನ್ನು ಹಾಕಿ ಮುರಿಯ ಬಯಸಿದಳು. ಆದರೆ ಅದು ತನ್ನ ಇಟ್ಟ ಕಾಲನ್ನು ಮುಂದೆ ಎಳೆದುಕೊಂಡು ಹೋಯಿತು. ಕಿಟಕಿಯ ಕಬ್ಬಿಣ ಸಲಾಕೆಯ ನಡುವೆ ಸೇರಿಸಿ ಮುಂದೆ ನೂಕಿದಳು. ಒಂದಿಷ್ಟು ಮಣಿಯಿತು. ಮುರಿ

ಯಲಿಲ್ಲ. ಮಣಿದದ್ದನ್ನು ಕಂಡುದರಿಂದ ಮುರಿಯುವದೆಂದು ಅರ್ಥ ಮಾಡಿಕೊಂಡಳು. ಇನ್ನೊಮ್ಮೆ ಪ್ರಯತ್ನಿಸುವ ಎಂದು ಒಮ್ಮೆಲೆ ಎಲ್ಲ ಶಕ್ತಿಯನ್ನು ಹಾಕಿ ಎಳೆದಳು. ಅದು ಹಾಳು ಕಟ್ಟಿಗೆ. ಅಡಿಗೆಯ ಮನೆಯ ನಿತ್ಯದ ಕಾವಿನಿಂದ ಒಣಗಿದ್ದಿತು. ಎಣ್ಣೆಯೆಲ್ಲ ಹಾರಿ ಹೋಗಿದ್ದಿತು. ಕಟ್ಟಿಂದು ಮುರಿದು ಎರಡು ತುಂಡಾಯಿತು. ಅಕ್ಕಾಮರಿಯು ಧೊಪ್ಪೆಂದು ನೆಲಕ್ಕೆ ಬಿದ್ದಳು. ಬಸಿರು ಹೆಂಗಸು ಧೊಪ್ಪೆಂದು ಬಿದ್ದಳು. ಬಲಗೈಯೊಳಗಿನ ಎರಡು ಬಳೆಗಳು ಹೆಚ್ಚಿದವು. ಎದೆಗೆ, ಮುಖಕ್ಕೆ ಪೆಟ್ಟು ಹತ್ತಿತು. ಮೊಳಕೈಗೆ ರಕ್ತ ಬಂದಿತು. ಬೆರಳುಗಳು ಜಜ್ಜಿದವು. ಕಣ್ಣಿನಿಂದ ನೀರು ಇಳಿಯ ತೊಡಗಿತು. ಲಿಲ್ಲಿಯು ಗಾಬರಿಯಿಂದ ತಾಯಿಯ ಬಳಿಗೆ ಬಂದಿತು. ಮಗಳನ್ನು ಅಪ್ಪಿಕೊಂಡು ಕಣ್ಣೊರಸಿಕೊಂಡಳು. ತನ್ನ ವೇದನೆಯನ್ನು ಮರೆಯುವದಕ್ಕೆ ಮಗುವಿನ ತಲೆಯ ಮೇಲೆ ಕೈ ಎಳೆದಳು.

ಒಲೆಯನ್ನು ಹೊತ್ತಿಸಿ ಅನ್ನಕ್ಕೆ ಇಟ್ಟಳು. ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು "ಕತೆಯನ್ನು ಹೇಳಲಾ ?" ಎಂದು ಕೇಳಿದಳು.

"ಹ !" ಮಗುವು ಸಮ್ಮತಿಸಿತು.

"ಒಂದು ಊರಲ್ಲಿ ಒಂದು ಗುಬ್ಬಿ ಇತ್ತು."

ನಡುವೆ ತಡೆದು " ಅವ್ವಾ ನನಗೆ ಪೇಢೆ ಕೊಡು !" ಲಿಲ್ಲಿಯು ನುಡಿಯಿತು.

ಮಗಳ ಬೇಡಿಕೆಯು ಮತ್ತೆ ದುಃಖಕ್ಕೆ ಕಾರಣವಾಯಿತು. "ಆಯಿ ಬರುವಳು. ನಾಳೆ ಬಹಳಷ್ಟು ತರುವಳು. ನಿನಗೆ ಕೈತುಂಬ ಸಾಲುವಷ್ಟು ಕೊಡುವೆ" ಎಂದು ನುಡಿದಳು.

"ಹಾಗಾದರೆ ನೀನು ಉಂಡಿಯನ್ನು ಕೊಡು."

"ಅದನ್ನೂ ಆಯಿ ತರುವಳು."

"ನೀನು ಕೊಡು."

"ನಾನೇನು ಕೊಡಲಿ ! ಬೆಲ್ಲವನ್ನು ಕೊಡುವೆ."

"ಹೂ. ಕೊಡು."

ಕೆನ್ನೆಗೆ ಲಟ್ಟೆಂದು ಮುದ್ದು ಕೊಟ್ಟಳು.

"ಹೋಗು ಇದು ಬೇಡ. ಡಬ್ಬಿಯೊಳಗಿನದು ಕೊಡು. ನನಗೆ ಹಸಿವೆ. ಉ....ಹು...." ಎಂದು ದನಿಯನ್ನು ಎಳೆಯಿತು.

"ಈಗ ಊಟ ಮಾಡು. ಬೆಲ್ಲವನ್ನು ತಿನ್ನಬಾರದು. ಹೊಟ್ಟೆ ಕಡಿಯುವದು" ಎಂದು ಅನ್ನವನ್ನು ಇಳಿಸಿ ಕಿಚ್ಚಕ್ಕೆ ಹಚ್ಚಿದಳು.

ಮೊಳಕೈಗೆ ಆದ ಗಾಯದಿಂದ ಇನ್ನೂ ನೀರು ಬಸಿಯುತ್ತಿದ್ದಿತು. ಒರಸಿಕೊಂಡು ಕೈ ತೊಳೆದಳು.

ಮಗುವಿಗೆ ಅನ್ನವನ್ನು ಉಣಿಸಿದಳು. ಹಾಸಿಗೆಯನ್ನು ಹಾಸಿ ಕೊಟ್ಟಳು. ಪಕ್ಕದಲ್ಲಿ ಕುಳಿತು ತಲೆಯನ್ನು ತಟ್ಟುತ್ತ ತನಗೆ ಗೊತ್ತಿದ್ದ ಒಂದು ಹಾಡನ್ನು ಹಾಡ ಹತ್ತಿದಳು.

ರಾಜಣ್ಣನು ಬಂದಿರಲಿಲ್ಲ.

ಕತ್ತಲೆಯಾಗಿದ್ದಿತು. ಹೊರಗೆ ಜನರ ಸುಳಿವು ಕಡಿಮೆಯಾಗಿದ್ದಿತು. ದೂರದಲ್ಲಿ ನಾಯಿಗಳು ಬೊಗಳುತ್ತಿದ್ದವು. ಗಾಳಿಯು ಬೀಸಿ ಹನುಮನಗುಡಿಯ ಮುಂದಿನ ಅರಳೆಯ ಗಿಡದ ಎಲೆಗಳನ್ನು ಸುಳಿದಾಡಿ ಒಂದು ಬಗೆಯ ಕರ್ಕಶ ಸಪ್ಪಳವನ್ನು ಹುಟ್ಟಿಸುತ್ತಿದ್ದಿತು.

ಮೊಳಕೈಗಾದ ಗಾಯದ ಮೇಲೆ ಪುನಃ ಕೈಯಾಡಿಸಿದಳು. ನೆತ್ತರವು ಹೆಪ್ಪುಗಟ್ಟಿದ್ದಿತು. ಬಲಗೈ ಬಳೆ ಹೆಚ್ಚಿ ಸುತ್ತು ಒಂದೆರಡು ಕಡೆಗೆ ಗೆರೆಗಳು ಮೂಡಿದ್ದವು. ಸಣ್ಣಾಗಿ ರಕ್ತ ಅಂಟಿದ್ದಿತು. ಮುಖವು ನವೆಯುತ್ತಿದ್ದಿತು. ಮನೆಯಲ್ಲಿ ಕೆಂಪು ಎಣ್ಣೆಯ ಮಂದ ಪ್ರಕಾಶವು ಹರಡಿಕೊಂಡಿದ್ದಿತು. ಬಾಗಿಲಲ್ಲಿ ಯಾರೋ ಸುಳಿದ ಸದ್ದಾಯಿತು. ಇಣಿಕಿ ನೋಡಿದಳು. ಯಾರೂ ಇರಲಿಲ್ಲ. ದೂರದವರೆಗೆ ಕಪ್ಪು ಕಪ್ಪಾದ ಕತ್ತಲೆ. ಅಂಜಿಕೆಯು ಎಳೆಎಳೆಯಾಗಿ ತುಂಬ ಹತ್ತಿತು.

ಹೊರಗೆ ಗಾಢವಾದ ಕತ್ತಲೆ; ಮನೆಯಲ್ಲಿ ಬೂದಿಗತ್ತಲೆ. ಮನದಲ್ಲಿ ನಿರಾಸೆಯ ಕರಿನೆರಳು. ಜೀವದಲ್ಲಿ ತುಂಬ ಭಯ. ರಾಜಣ್ಣನು ಇನ್ನೂ ಬಂದಿರಲಿಲ್ಲ. ಅವರು ಇಂದು ರಾತ್ರಿ ಬರದಿದ್ದರೆ? ಎಂಬ ಶಂಕೆ. ಲಿಲ್ಲಿಯ ಗುರುಗುರು ನಿದ್ದೆ. ಜಂತೆಯಲ್ಲಿ ಜೀರುಂಡೆಗಳ ಜೀರ್‌ರ್‌ರ್ ಎಂಬ ಸಪ್ಪಳ. ಅಜ್ಞಾನಿಯಾದ ಸಣ್ಣ ಮಗುವು ಮಲಗಿದೆ.

ಎಚ್ಚತ್ತು ತಾನೊಬ್ಬಳೇ ಕುಳಿತಿರುವಳು. ಸಮೀಪದಲ್ಲಿ ಮತ್ತಾರೂ ಇಲ್ಲ. ಜೊತೆಗೆ ಒಬ್ಬರನ್ನು ಕರೆಯುವಂತೆಯೂ ಇಲ್ಲ. ನಿತ್ಯ ಸಾಯು ವವನಿಗೆ ಅಳುವವರಾರು! ಕತ್ತಲೆಯಲ್ಲಿ ಹೇಗೆ ಹೊರಗೆ ಹೋಗಿ ಒಬ್ಬ ಮುದುಕಿಯನ್ನು ಕರೆತರುವದು! ಅಕ್ವಾನಾರಿಯ ಎದೆಯು ಹೊಡೆದು ಕೊಳ್ಳಹತ್ತಿತು. ಮಾವನವರಿದ್ದ ಸಮಯದಲ್ಲಿ ಮನೆಯು ತುಂಬಿದ್ದಿತು. ನಾಯಿಯು ಹಗಲು - ಇರುಳು ಒಳಹೊರಗೆ ಓಡಾಡುತ್ತಿದ್ದಿತು. ರಕ್ಷಣೆಯ ಹೊಣೆಯನ್ನು ಹೊತ್ತಿದ್ದಿತು. ಅದು ಸತ್ತಿತು. ಹುಲಿಯಂ ತಹ ಮಾವನವರಿದ್ದರು. ಭಯವಿರಲಿಲ್ಲ. ಅವರೂ ಸತ್ತರು. ನಾಯಿಯು ಆ ಸ್ಥಳದಲ್ಲಿಯೆ ತನ್ನ ತಾಟನೊಳಗಿನ ಅನ್ನಕ್ಕೆ ಬಾಯಿಯನ್ನು ಹಾಕಿದ್ದಿತು! ಅತ್ತೆಯವರ ಧಾಬಳಿಯ ಮೇಲೆ ಅಲ್ಲೆ ಮಲಗಿದ್ದಿತು! ಈ ಮೂಲೆಯಲ್ಲಿ ಕುಳಿತು ಒಂದು ಎಲುವಿನ ಚೂರನ್ನು ತಿನ್ನುತ್ತಿದ್ದಿತು! ಅಹುದು. ಸಂಪೂರ್ಣ ಜ್ಞಾಪಕವಿದೆ.

ಕತ್ತಲೆಯು ಇನ್ನೂ ಹೆಚ್ಚಾಯಿತು. ಮನೆಯಲ್ಲಿ ಬೆಳಕೂ ಕಡಮೆಯಾಯಿತು. ಒಂದು ಬಿಳಿಯ ಬಣ್ಣದ, ನಾಲ್ಕು ಕಾಲಿನ, ಉದ್ದ ಇಳಿಬಿದ್ದ ಕೂದಲಿನ ಬಾಲದ ಪ್ರಾಣಿಯು ಉಗುರುಗಳ ಸಪ್ಪಳ ವನ್ನು ಮಾಡುತ್ತ ಸರ್ರೆಂದು ಸುಳಿದಂತಾಯಿತು. ಭಯವು ಅಂಗಾಂಗ ಗಳಲ್ಲಿ ತುಂಬಿಕೊಂಡಿತು. ಚೀರಬೇಕೆಂದಳು. ಬಾಯಿಬರಲಿಲ್ಲ. ಮತ್ತೆ ಸರ್‍ರ್ರ ಎಂದು ಸಪ್ಪಳ. ಉಗುರಿನ ತಾಳ! ಕೇಳಬಂದವು. ಆ ಕಡೆಗೆ ನೋಡಿದಳು. ಅಹುದು! ಅದೇ ನಾಯಿ! ಕೈಗಳು ಕಂಪಿಸ ಹತ್ತಿದವು. ಕಾಲುಗಳು ಲಟಪಟಿಸ ಹತ್ತಿದವು. ಎದೆಯು ನಗಾರಿ ಯಂತೆ ಹೊಡೆದುಕೊಳ್ಳ ಹತ್ತಿತು. ಕಣ್ಣಿಲ್ಲಿಯ ಕೊಳೆಯು ರೆಪ್ಪೆಗೆ ಅಂಟಿ ನೋಟವು ಮಂಕು ಮಂಕಾಯಿತು. ಹರಣವು ಹಾರೀತೇ? ಎಂದು ಚಿಂತಿಸಿದಳು. ಕೆಲನಿಮಿಷ ಕಳೆಯಿತು. ಮೊದಲಿನ ಜೀರುಂಡೆ ಗಳಿಗೆ ಮಾರ್ನುಡಿಯುವಂತೆ ಮಗ್ಗಲು ಜಂತೆಯಿಂದ ಮತ್ತೆರಡು ಜೀರುಂಡೆಗಳು ರೈವತ ಸ್ವರವನ್ನು ಹಿಡಿದವು. ಸ್ವರವು ಏರುತ್ತ ನಡೆ ಯಿತು. ಅಸಹ್ಯ ಕರ್ಕಶವಾಯಿತು. ಮೊದಲಿನವು ನಿಲ್ಲಿಸಿದವು. ಫಕ್ಕನೆ ಆ ಕಡೆಗೆ ನೋಡಿದಳು. ಬಾಗಿಲ ಬಳಿಯಲ್ಲಿ ಮೊಚ್ಚೆಗಳ ಚಟ

ಚಟ ಸಪ್ಪಳ! ಯಾರು? ಯಾರಿಲ್ಲ! ಕೋಣೆಯ ಕತ್ತಲೆಯಲ್ಲಿ ಯಾರೋ ಓಡಾಡಿದಂತಾಯಿತು! ಬಿಳಿಯ ದೋತರ. ಉದ್ದ ಕೋಟು. ತಲೆಗೆ ಜರದ ರುಮಾಲು. ಉಪ್ಪರಣೆಯನ್ನು ಹೊದೆದಿರುವರು. ಮಾವನವರು! ಅಹುದು. ಮಾವನವರು!! ತನ್ನ ಕಡೆಗೇ ಬರುತ್ತಿರುವರು. 'ಅಕ್ಕಾಮರಿ' ಎಂದು ಕೂಗಿದಂತಾಯಿತು! ಕಣ್ಣಿಗೆ ಕತ್ತಲೆಯು ಮುತ್ತಿತು. ಬುದ್ಧಿಯ ತಲೆ ಕೆಳಗುಮೇಲಾಯಿತು. ಓದರಬೇಕು. ಇನ್ನು ಕೂಗಬೇಕು. ನಾಲಗೆಯ ಸ್ನಾಯುಗಳನ್ನು ಸರಿಪಡಿಸಿಕೊಂಡಳು. "ಸೊಸೆಮುದ್ದೇ!" ಎಂದು ಕರೆದರು. ಆ ಕಡೆಗೆ ನೋಡಿದಳು. ಕಿವಿಯಲ್ಲಿ ಆ ಮಾತುಗಳು ಇನ್ನೂ ಗುಯ್‌ಗುಡುತ್ತಿದ್ದವು. ಮಾವನವರು ಕೈಯೆತ್ತಿ ಬೆರಳು ತೋರಿಸುತ್ತಿದ್ದರು.

ದೀಪವು ಇನ್ನೂ ಸಣ್ಣದಾಯಿತು. ಬೂದಿಗತ್ತಲೆ ಮತ್ತೂ ಹೆಚ್ಚಾಯಿತು. ಮಾವನವರು ಹಾಗೆಯೇ ನಿಂತಿದ್ದರು. ಅವರ ಹಿಂದಿನಿಂದ ನಾಯಿ! ಮೋತ್ಯಾ! ಹಾಲಿನ ಬಳ್ಳಿಯಂತೆ ಬೆಳ್ಳಂಬೆಳಕಾಗಿ ಬಂದಿತು. ಮಾವನವರ ಮೇಲೆ ಮುಂಗಾಲು ಎತ್ತಿ ನಿಂತಿತು. ಬಾಲವನ್ನು ಕಡಿದ ಹಾವಿನಂತೆ ಅಲುಗಾಡಿಸುತ್ತಿದೆ. ಜೊಂಡೆ ಕೂದಲು ಚವರಿಯಂತೆ ಹೊಯದಾಡುತ್ತಿವೆ. ಇಬ್ಬರೂ ನಿಂತಿರುವರು. ಅಪ್ಪಾರಾಯರು ನಾಯಿಯಮೇಲೆ ಕೈ ಎಳೆದರು. ನಾಯಿಯು ಅಕ್ಕರೆಯಿಂದ ಅವರ ಕೈಯನ್ನು ಬಾಯಲ್ಲಿ ಹಿಡಿಯಿತು. ಬಿಡಿಸಿಕೊಂಡರು. ನಾಯಿಯು ಕೆಳಗಿಳಿದು ನಿಂತಿತು. ತನ್ನನ್ನೇ ನೋಡಹತ್ತಿದರು.

ರಾಜಣ್ಣನು ಮನೆಗೆ ಬಂದಿರಲಿಲ್ಲ.

'ಏನು ಮಾಡಲಿ? ಯಾರನ್ನು ಮೊರೆ ಹೋಗಲಿ? ಅಯ್ಯೋ ಮಾವನವರು ಬಂದಿರುವರು! ಮೋತ್ಯಾನೂ ಬಂದಿದೆ. ಬಂದರು. ಮುಂದೆ ಬಂದರು. ಹೊಸಲನ್ನು ದಾಟಿದರು. ನನ್ನ ಬಳಿಗೇ ಬರುವರು!' ಎಂದು ಮನಸು ಒಳಗೊಳಗೇ ಚೀರುತ್ತಿದ್ದಿತು. ಬಾಯಿಬಾಯಿ ಹೊಡೆದುಕೊಳ್ಳುತ್ತಿದ್ದಿತು. ಆದರೆ ನಾಲಗೆಯು ಅನುಕೂಲಿಸುತ್ತಿಲ್ಲ. ಹಸಿಯು ಒಣಗಿದೆ. ಅಂಗಳಕ್ಕೆ ಅಂಟೆ ಕುಳಿತಿದೆ. ಕುತ್ತಿಗೆ

ಯಿಂದ ಹೊರಟು ಬಂದ ಕೂಗು ನಾಲಗೆಯ ಮೇಲಿಂದ ಹಾಯಲೊಲ್ಲದು. ತುಟಿಗಳು ಮಾತ್ರ ಹೊಯ್ದಾಡುತ್ತಿವೆ.

ಅವರು ಮರೆಯಾದರು. ನಾಯಿಯೂ ಹಿಂದಿನಿಂದ ಓಡಿತು.

ಅಕ್ಕಾಮರಿಯು ಕಣ್ಣು ತಿಕ್ಕಿಕೊಂಡು ನೋಡಿದಳು. ಕತ್ತಲೆ. ಅದರಲ್ಲಿಯೇ ನಾಲ್ಕಾರು ಬೆಳಕಿನ ಸೆಳೆಗಳು. ಆದರೆ ಮಾವನಿಲ್ಲ. ನಾಯಿಯೂ ಇಲ್ಲ.

ಅಡಿಗೆಯ ಮನೆಯಲ್ಲಿ ಸಪ್ಪಳವಾಯಿತು. ಒಗ್ಗರಣೆಯವಾಸನೆ! ಯಾರು? ಆ ಕಡೆಗೆ ನೋಡಿದಳು.

ಮಾವನವರು ಬಾಗಿಲಲ್ಲಿ ಮಡಿಯುಟ್ಟು ನಿಂತಿರುವರು. ಹಣೆಯ ಮೇಲೆ ಗೋಪಿಚಂದನದ ಎರಡು ಉದ್ದವಾದ ಗೆರೆಗಳು. ಹೊಟ್ಟೆ, ಎದೆಯ ಮೇಲೆ ಢಾಳವಾದ ನಾಮಗಳು. ಒಂದು ಕೈಯಲ್ಲಿ ಗಂಟೆ, ಇನ್ನೊಂದು ಕೈಯಲ್ಲಿ ತಂಬಿಗೆ, ಥಾಲಿ, ತೀರ್ಥ ಸವುಟು! ಪೂಜೆಗೆ ಬಂದಿರುವರು. ಬಾಯಲ್ಲಿ 'ವಕ್ರತುಂಡ, ಮಹಾಕಾಯ' ಮಂತ್ರ! ನಿಂತಲ್ಲಿಯೇ ಮೆಲ್ಲಗೆ ಉಚ್ಚರಿಸುತ್ತಿರುವರು.

ಅವರ ಹಿಂದೆ ಅತ್ತೆಯವರು. ಸಣ್ಣ ಸೀರೆಯನ್ನು ಸುತ್ತಿಕೊಂಡು ಕೈಯಲ್ಲಿ ಏನೋ ಹಿಡಿದಿರುವರು.

'ಗಣಪತಿಯ ನೈವೇದ್ಯ!' ಮಾವನವರು ಕೂಗಿದಂತಾಯಿತು.

'ಹೂ. ತಂದಿರುವೆ!' ಅತ್ತೆಯವರು ಉತ್ತರಿಸಿದರು.

'ತುಪ್ಪ ಹಾಕಿದೆಯಾ?'

'ಹೂ....'

ನೈವೇದ್ಯ ಸಮರ್ಪಣೆಯಾಯಿತು.

ಮಾವನವರು ತನ್ನನ್ನೇ ನೋಡುವರು. ಅತ್ತೆಯವರು ಏನೋ ಸನ್ನೆಯನ್ನು ಮಾಡಿದರು. ಅಕ್ಕಾಮರಿಗೆ ತಿಳಿಯಲಿಲ್ಲ. ನಿರುಕಿಸಿ ನೋಡ ಹತ್ತಿದಳು. ಸೀರೆಯ ಸರ? ಗೌರಿಗೆ ಸೀರೆಯ ಸರ! ಎಂದು ಕಿವಿಯಲ್ಲಿ ಯಾರೋ ಹೇಳಿದಂತಾಯಿತು.

'ಒಂದು ಸೀರೆಯ ಸರವನ್ನು ಮಾಡಿಕೊಳ್ಳಬಾರದೇ! ಆಕೆ ಏನು ಮಾಡುವಳು!' ಮಾವನವರು ನುಡಿದರು.

'ಮತ್ತೆ! ಏಳು ಅಕ್ಕಾಮರಿ ?' ಅತ್ತೆಯವರ ಆಜ್ಞೆಯಾಯಿತು.

'ನನ್ನ ಪೂಜೆ ಮುಗಿಯಿತು. ಗೌರಿಯ ಪೂಜೆಯನ್ನು ಮಾಡು.'

'ಏ !'

ಅವ್ವಕ್ಕನು ತಟ್ಟೆಯಲ್ಲಿ ಅನ್ನ, ಸಾರು, ಪಲ್ಲೆ, ಪಾಯಸ ಕಡುಬು ಬಡಿಸಿಕೊಂಡು, ಮತ್ತೆ ಬಾಗಿಲಿಗೆ ಬಂದಳು. ಈಗ ಬಾಗಿಲನ್ನು ದಾಟಬೇಕು. ತೀರ್ಥ ಎಂದು ಕೂಗಿದರು.

'ಹೆ. ಬೇಕು' ಎಂದು ಹೊಸಲ ಹೊರಗೆ ಕಾಲಿಟ್ಟಳು.

ಮಾವನವರು ಕೈಯಲ್ಲಿ ತೀರ್ಥದ ಗಿಂಡಿ, ತುಳಸಿ ಹಿಡಿದು ಕೊಂಡು ಬಂದರು. ಬಾಗಿಲನ್ನು ದಾಟಿದರು.

ಇಬ್ಬರೂ ಮುಂದೆ ಬಂದರು. ತೀರ ಸಮೀಪಕ್ಕೆ ಬಂದರು. ನಾಯಿಯು ಕೋಣೆಯಿಂದ ಓಡಿ ಒಳಗೆ ಬಂದಿತು. ಅಪ್ಪಾರಾಯರನ್ನು ಮುಟ್ಟಿ ಹೋಯಿತು.

'ನಾಯಿ. ನಾಯಿ ! ಮುಟ್ಟೀತು. ಮುಟ್ಟೀತು' ಎಂದು ಚೀರಿದರು.

'ರಾಜಾ ! ನಾಯಿಯನ್ನು ಕಟ್ಟು ! ಎಲ್ಲಿರುವೆಯೋ ?'

'ಹೊರಗೆ ಹಾಕಿರಿ ! ಮುಟ್ಟುವದು.'

'ಅಕ್ಕಾಮರಿ, ನೀನಾದರೂ ಹೊಡಿ.'

'ನಡೀ ! ನಡೀ ಹೊರಗೆ ?'

'ಬಂತು ! ಮುಂದೆ ಬಂದಿತು ! ಏ ರಾಜಾ !'

'ಒಂದ ಕಲ್ಲು ಒಗೆ !'

'ನೀನಾದರೂ ಹೊಡೆಯೋ ?' ಎಂದು ಅವ್ವಕ್ಕನು ಕಣ್ಣು ಕಿಸಿದು ಅಕ್ಕಾಮರಿಯನ್ನು ನೋಡಿದಳು.

ಮೂವರೂ ಸ್ಪಷ್ಟವಾಗಿ ಕಾಣುತ್ತಿದ್ದರು.

ರಾಯರ ಮೈ ಮೇಲೆ ಅದೇ ಮಡಿ. ಅದೇ ಗಂಟೆ, ಅದೇ ತಂಬಿಗೆ, ಅದೇ ಸವುಟು. ದೇಹದ ಮಾಟ ಅದೇ ಅದು. ಪ್ರತ್ಯಕ್ಷ ವಾಗಿ ನಿಂತಿದ್ದರು.

ಅವ್ವಕ್ಕನ ಮೈ ಮೇಲೆ ಅದೇ ಮಡಿ ಸೀರೆ. ಅಷ್ಟೇ ಉದ್ದವಾದ

ಕುಂಕುಮ. ಅದೇ ಹಾರಾಡುವ ಎಣ್ಣೆಗೂದಲು. ಕುಪ್ಪಸವಿಲ್ಲದ ಅದೇ ಮೈ, ಅದೇ ಕುಳ್ಳ ನಿಲುವಿಕೆ.

ಮೋತ್ಯಾ ಸಂಪೂರ್ಣವಾಗಿ ಜೀವಂತ ಮೋತ್ಯಾ!

ಅವರ ಚಲನ ವಲನ, ಅವಸರದ ಮಾತು, ಮೈಲಿಗೆ ಎಂಬ ಜಿಗಿದಾಟ, ನೆಗೆದಾಟ, ನಾಯಿಯ ಕುಣಿದಾಟ, ನಿಚ್ಚಳವಾಗಿ ಕಂಡವು. ಮೈಲಿಗೆಯ ರಂಬಾಟ ಹೆಚ್ಚು ಹೆಚ್ಚಾಯಿತು. 'ಅಕ್ಕಾ ಮರಿ ಹೊಡೆ! ನಾಯಿಯನ್ನು ಹೊಡೆ' ಎಂದು ಅಪ್ಪಾರಾಯರು ಕಿವಿಗಳು ಬಿರಿಯುವಂತೆ ಕೂಗಿದರು.

ಅಕ್ಕಾಮರಿಯು ಚಿಟ್ಟನೆ ಚೀರಿ ಮಗಳ ಮೇಲೆ ಬಿದ್ದಳು. ಎಚ್ಚರವಿಲ್ಲದೆ ಬಿದ್ದಳು. ಮುಂಜಾನೆ ಹಾಲಿನವಳು ಕೂಗಲು–ಹುಚ್ಚು ನೋರೆಯಿಂದ ಎದ್ದು ಬಾಗಿಲನ್ನು ತೆರೆದಳು.

೩೧

ಅಕ್ಕಾಮರಿಯು ಗಂಡನ ಮನೆಗೆ ಹೋದ ಮೇಲೆ ಪುಟ್ಟವ್ವನ ಬಾಳು ಒಣಬಣದಾಗಿ ಕಾಣಹತ್ತಿತು. ಮನೆಯಲ್ಲಿ ಮಗಳಿದ್ದ ಸಮಯದಲ್ಲಿ ಕೈ ತುಂಬ ಕೆಲಸ, ಬಾಯತುಂಬ ಹರಟೆ, ಹೊಟ್ಟೆ ತುಂಬ ಪಕ್ವಾನ್ನ, ಮನದ ತುಂಬ ಉಲ್ಲಾಸ, ಅಲ್ಲದೆ ಕಣ್ಣಿಗೆ ಹಬ್ಬವೆನಿಸುವಂತೆ ಚಿನ್ನಯ್ಯನಿಂದ ಹೊಸ–ಹೊಸ ಬಟ್ಟೆಬರೆ, ತಿನಿಸು–ಉಣಿಸು, ಬೆಳ್ಳಿಯ ರೂಪಾಯಿಗಳು, ಬಂಗಾರದ ಒಡವೆಗಳು, ನಡುವೆ ಲಿಲ್ಲಿಯ ಮುದ್ದು ಮುದ್ದಾದ ಮಾತಿನ ಒಗ್ಗರಣೆ. ಸೂರ್ಯನು ಉದಯವಾದುದೊಂದು ಗೊತ್ತು. ಮಧ್ಯಾಹ್ನ ಹೇಗಾಯಿತು, ಸೂರ್ಯನು ಯಾವಾಗ್ಗೆ ಮುಳುಗಿದನು ತಿಳಿಯುತ್ತಿರಲಿಲ್ಲ. ಹಗಲು ಹೀಗೆ ಅನಿರೀಕ್ಷಿತವಾಗಿ ನುಸುಳಿಕೊಂಡು ಹೋದರೂ ರಾತ್ರಿಯ ಸವಿಯು ಕನ್ನಂಬಾಡಿಯಂತೆ ಒಡ್ಡು ಗಟ್ಟಿಕೊಂಡು ತಮಗಾಗಿ ನಿಲ್ಲುತ್ತಿದ್ದಂತೆ ಭಾಸ.

ಅಕ್ಕಾಮರಿಯು ಮೊದಲೇ ಸೌಂದರ್ಯವತಿ. ಅಪ್ಪಾರಾಯರು ಸುತ್ತಲಿನ ನೂರು ಹಳ್ಳಿಗಳಲ್ಲಿ ಶೋಧಿಸಿ ಆಕೆಯನ್ನು ಸೊಸೆಯಾಗಿ ಮಾಡಿಕೊಂಡಿದ್ದರು. ತೀರ ಎತ್ತರವಲ್ಲ. ತೀರ ಕುಳ್ಳಲ್ಲ. ದಪ್ಪಲ್ಲ. ಬಡಕಲಲ್ಲ. ಆ ಎತ್ತರಕ್ಕೆ ಆ ಗಾತ್ರದ ದೇಹ ಹಾಳತ. ಒಂದು ನೂಲ ಎಳೆಯಷ್ಟು ಸರಿದಾಡುವಂತಿಲ್ಲ. ಹಣ್ಣು ಮಾವಿನಕಾಯಿ ಯಂತಹ ಬಣ್ಣ. ಕಣ್ಣು, ಮೂಗು, ಬಾಯಿ, ತುಟಿಗಳು ತಿದ್ದಿ, ತೀಡಿ ಎರಕಹೊಯಿದಂತೆ ಪ್ರಮಾಣಬದ್ಧವಾಗಿದ್ದವು. ಒಂದು ಮಗು ವಿನ ತಾಯಿಯಾದರೂ, ವಯಸ್ಸಿನಿಂದ ಇಪ್ಪತ್ತುಮೂರಾಗಿದ್ದರೂ

ಕನ್ನೆತನದ ಉತ್ಸಾಹ ಚಪಲತೆ ಮಿಡಿನಾಗರಹಾವನ್ನು ನೆನೆಸುತ್ತಿದ್ದಿತು. ಇಡುವ ಹೆಜ್ಜೆಯಾಗಲಿ, ಬೀಸುವ ಕೈಗಳಾಗಲಿ, ದೇಹದ ಮೇಲೆ ಎದ್ದು ನಿಂತು ತೂಗಾಡುವ ತಲೆಯಾಗಲಿ ಕಲಾತ್ಮಕವಾಗಿದ್ದವು. ಅವಳೇ ಪುನಃ ಬಾಲರೂಪ ತೊಟ್ಟಂತೆ ಲಿಲ್ಲಿ. ಲಿಲ್ಲಿಯನ್ನು ಕಂಡು ಪುಟ್ಟವ್ವನ ತಾಯತನವು ಕೆರಳಿ ಮೊಲೆಯಲ್ಲಿ ಹಾಲೂ ಬಂದಿದ್ದಿತು. ಈಗ ಮನೆಯಿಂದ ಒಮ್ಮೆಲೆ ಎದ್ದು ಹೋದಮೇಲೆ ಪುಟ್ಟವ್ವನ ಜೀವಾತ್ಮ ನೀರು ಬಿಟ್ಟ ಮೀನಿನಂತೆ ಲಟಪಟಿಸಹತ್ತಿತು. ತಿರುಗಿ ಬರುವಳೇ ? ಎಂದು ಚಿಂತಿಸಹತ್ತಿತು. ರಾಜಣ್ಣನ ಬುದ್ಧಿ ವಿವೇಕಶಕ್ತಿ, ಸಂಸಾರನಿರ್ವಹಣದ ಸಾಮರ್ಥ್ಯಗಳನ್ನು ಚೆನ್ನಾಗಿ ತಿಳಿದವಳಾಗಿದ್ದಳು. ಆ ಮುಟ್ಠಾಳ ತನ್ನ ಮಗಳನ್ನು ರಕ್ಷಿಸಲಾರ, ಸುಖಪಡಿಸಲಾರ ಎಂದೂ ಅರಿತಿದ್ದಳು. ಮನಸು ಕಳಿಸಬಾರದೆಂದೇ ನಿಶ್ಚಯಿಸಿಕೊಂಡಿದ್ದಿತು. ಆ ಬಗ್ಗೆ ಹಟವನ್ನು ಹಿಡಿಯಬೇಕೆಂದು ಪ್ರೇರೇಪಿಸುತ್ತಿದ್ದಿತು. ಮಗಳ ಬಾಯಿಂದ ಹಾಗೆ ನುಡಿಸಿ, ಆ ಮಾತನ್ನು ತಾನು ಗಟ್ಟಿಪಡಿಸಿಕೊಳ್ಳಲು ಸಾಧ್ಯವಾದರೆ ರಾಜಣ್ಣನ ಸಂಗಡ ಬಡಿದಾಡಬೇಕೆಂದು ಕರೆಯು ಬಂದ ದಿನ ಮನದಲ್ಲಿ ಮುಂಡಿಗೆಯನ್ನು ಮಾಡಿದ್ದಳು. ಆದರೆ ರಾಜಣ್ಣನು ಮಾತ್ರ ಕೆಲದಿನದ ಮಟ್ಟಿಗೆ ತನ್ನ ಮನೆಗೆ ಬಂದು-ಹೋಗಿ ಮಾಡಲಿ. ಅದೊಂದು ವ್ಯವಹಾರವೆಂದು ತಿಳಿದ ಆಕೆಯ ಅನುಭವ. ಆದರೆ ಅವನ ಬೆನ್ನಿಗೆ ಅಂಟಿಸಿ ನಡೆಯುವದು ಕನಸಿನಲ್ಲಿಯೂ ನೆನೆಯದ ವಿಷಯ. ಆದರೆ ಅಕ್ಕಾಮರಿಗೆ ತಾಯಿಯ ಈ ಮುಂಧೋರಣೆ ತಿಳಿಯುವದೆಂತು ? ಅವಳಿಗೂ ತಾಯಿಗೂ ಇಪ್ಪತ್ತು ವರುಷದ ಅಂತರ. ಅಷ್ಟೇ ವರುಷದ ಅನುಭವಜ್ಞಾನ, ವ್ಯವಹಾರಜ್ಞಾನ, ಪ್ರಸಂಗೋಚಿತವಾಗಿ ತಾರತಮ್ಯಜ್ಞಾನಗಳ ಅಂತರವಿದ್ದಿತು. ಮಗಳು ಗಂಡ ಬಂದಮೇಲೆ-ಏಳು! ಎಂದಾಕ್ಷಣವೆ ಎದ್ದಳು. ಚಕ್ಕಡಿಯನ್ನು ಹತ್ತು ! ಎಂದ ಕೂಡಲೆ ಹತ್ತಿದಳು. ಇವುಗಳಿಂದ ತಾಯಿಗೆ ಮಾತಾಡಲು ಆಸ್ಪದವೇ ಸಿಕ್ಕಲಿಲ್ಲ. ಮನದಲ್ಲಿಯ ಆಲೋಚನೆಯು ಅಷ್ಟಕ್ಕೇ ಕರಗಿ ಹೋಯಿತು. ಸುಮ್ಮನೆ ದಿನಗಳೆಯಹತ್ತಿದಳು.

ಚಿನ್ನಯ್ಯನು ಅಕ್ಕಮ್ಮನ್ನ ಹೋದ ದಿನದಿಂದ ಮನೆಯ ಕಡೆಗೆ ಸುಳಿದಿರಲಿಲ್ಲ. ಅವನು ಬಂದರೆ ಯಾವದಾದರೊಂದು ಹಂಚಿಕೆಯನ್ನು ಹಾಕಬೇಕೆಂದು ಮಾಡಿದ್ದಳು. ಕಳೆದ ೭-೮ ದಿನಗಳಿಂದ ಅವನ ದಾರಿಯನ್ನು ನೋಡಿದಳು. ಊರಲ್ಲಿದ್ದ ಸುದ್ದಿಯೂ ತಿಳಿಯಲಿಲ್ಲ. ಚಿನ್ನಯ್ಯನೂ ಬರಲಿಲ್ಲ.

ಮತ್ತೆರಡು ದಿನಗಳು ಕಳೆದವು. ಕೊನೆಗೆ ಒಂದು ದಿನ ಚಿನ್ನಯ್ಯನು ಬಂದನು. ಪುಟ್ಟವ್ವನ ಮುಖದ ಮೇಲಿನ ನೀರಿಗೆಯ ಗೆರೆಗಳೆಲ್ಲ ತುಂಬಿ ಬಂದಷ್ಟು ಸಂತಸವಾಯಿತು.

"ಬನ್ನಿರಿ. ಬನ್ನಿರಿ" ಎಂದು ಆದರದಿಂದ ಸ್ವಾಗತಿಸಿದಳು.

ಚಿನ್ನಯ್ಯನು ಮಂಚದ ಮೇಲೆ ಕುಳಿತು ರುಮಾಲು ತೆಗೆದಿಟ್ಟನು. ತಲೆಗೆ ಬಿಟ್ಟ ಬೆವರು ಒರಸಿಕೊಂಡನು. ಉಸ್ಸೆಂದು ಕಾಲು ಇಳಿಬಿಟ್ಟು ಅಡ್ಡಾದನು.

"ನಿಮ್ಮೂರಿನಿಂದಲೇ ಬಂದಿರೇನು ?" ಪುಟ್ಟವ್ವ ಕೇಳಿದಳು.

"ಇಲ್ಲ. ತಾಲೂಕಿನಿಂದ ಬಂದೆ."

"ತಾಲೂಕಿನಿಂದ....?"

"ಅಹುದು. ಗಂಟಲು ಒಣಗಿದೆ. ಒಂದಿಷ್ಟು...."

"ಹ...." ಎಂದು ಎದ್ದು ಪುಟ್ಟವ್ವನು ಒಳಗೆ ಹೋದಳು.

ಅಯ್ಯನು ಸುಮ್ಮನೆ ಕುಳಿತು ಮನೆಯನ್ನು ನಿರೀಕ್ಷಿಸಹತ್ತಿದನು. ಅಕ್ಕಮ್ಮನ ಅವಶೇಷಗಳು ಒಂದೆರಡು ಕಂಡವು. ಮನಸಿಗೆ ಎಂಥದೋ ಒಂದು ಬಗೆಯ ಸಂತೋಷವಾಯಿತು. ಸಾಕಷ್ಟು ಆಯಾಸವಾಗಿದ್ದರೂ ಮನಸಿನ ನಿರ್ಧಾರಸುಖದ ಮುಂದೆ ಬೇಗನೆ ಪರಿಹಾರವಾದಂತಾಯಿತು.

ಪುಟ್ಟವ್ವನು ಒಂದು ತಟ್ಟೆಯಲ್ಲಿ ಮೊಸರಂಬೋಡಿ, ಬಾಳೆಯ ಹಣ್ಣುಗಳನ್ನು ತುಂಬಿ ತಂದಿಟ್ಟಳು. ತಿಕ್ಕಿದ ತಂಬಿಗೆಯಲ್ಲಿ ನೀರು ತುಂಬಿಟ್ಟಳು. "ಹಾಲು ಈಗ ತರುವೆ. ತೆಗೆದುಕೊಳ್ಳಿರಿ" ಎಂದು ವಿನಂತಿಸಿದಳು.

"ಹಾಲು ಬೇಡ. ಬಿಸಿ ಬಿಸಿ ಚಹ ಮಾಡಿರಿ" ಎಂದು ಹೇಳಿ

ತಿನ್ನಹತ್ತಿದನು.

"ಆಗಲಿ. ಅದನ್ನೇ ಮಾಡಿ ತರುವೆ. ಸಾಗಲಿ. ನಿಮ್ಮ ಸಂಗಡ ಬಹಳಷ್ಟು ಮಾತಾಡಬೇಕಾಗಿದೆ" ಎಂದು ನುಡಿಯುತ್ತ ಒಳಗೆ ಹೋದಳು.

ಚಿನ್ನಯ್ಯನು ಬಾಳೆಯ ಹಣ್ಣುಗಳನ್ನು ನುಂಗಿದನು. ಮೊಸರಂ ಬೋಡಿಯನ್ನು ಮುರಿದು ಬಾಯಿಗೆ ಹಾಕಿಕೊಂಡನು. ಪುಟ್ಟವ್ವನು ಚಹ ಮಾಡಿ ತಂದು ಮುಂದಿಟ್ಟಳು. ಒಂದು ಕಡೆಗೆ ಎದುರು ಕುಳಿತು "ತಾಲೂಕಿಗೆ-ಏಕೆ ಹೋಗಿದ್ದಿರಿ ?" ಎಂದು ಕೇಳಿದಳು.

"ನಾನು ಇನ್ನು ಅಲ್ಲಿಯೇ ನಿಲ್ಲಬೇಕೆಂದು ಮಾಡಿರುವೆ." ಚಹ ಕುಡಿಯುತ್ತ ನುಡಿದನು.

"ಏಕೆ ?"

"ಹಳ್ಳಿಯು ಸಾಕಾಯಿತು."

"ಹಾಗಾದರೆ ನಮ್ಮಿಂದ ದೂರಾದಿರಿ."

"ದೂರವಿಲ್ಲ. ತೀರ ಸಮೀಪವಾಗಬೇಕೆಂದೇ ಅಲ್ಲಿ ಮನೆಯನ್ನು ಮಾಡಿರುವೆ."

"ನಿಮ್ಮ ಮಾತು ತಿಳಿಯದು."

"ಮುಂದೆ ತಿಳಿದೀತು! ಅದಿರಲಿ. ಅಕ್ಕಾಮರಿಯ ಸುದ್ದಿ ಏನು ?"

"ಏನಿರಬೇಕು! ಆ ಹಾಳು ರಾಜಣ್ಣನಿಗೆ ಮಗಳನ್ನು ಕೊಟ್ಟು ಕೊಂದುಬಿಟ್ಟೆನೆಂದೇ ನನಗೆ ನಿಶ್ಚಯವಾಗಿದೆ. ಕರೆದುಕೊಂಡು ಹೋದಮೇಲೆ ೧೦-೧೫ ದಿನಗಳವರೆಗೆ ಹೇಗೋ ಇದ್ದಳಂತೆ. ಇತ್ತಲಾಗಿ ಅವನೂ ಮನೆಯಲ್ಲಿರುವದಿಲ್ಲ. ಮನೆಯಲ್ಲಿದ್ದರೆ ಪರಿವೆಯೇ ಇಲ್ಲ. ಒಂದು ದಿನ ಉಂಡರೆ ಎರಡು ದಿನ ನೀರು ಕುಡಿದು ಇರಬೇಕಾಗುವದಂತೆ! ಜನರು ಹೇಳಿದ ಮಾತುಗಳು. ಅವಳು ಯಾರ ಮುಂದೂ ಈವರೆಗೆ ಬಾಯಿ ಬಿಚ್ಚಿ ಹೇಳಿಕಳಿಸಿಲ್ಲ. ಕಳಿಸುವಂತೆಯೂ ಇಲ್ಲ. ನನಗೆ ಒಂದು ಕಡೆಗೆ ಕೆರೆ, ಇನ್ನೊಂದು ಕಡೆಗೆ ಬಾವಿಯಂತಾಗಿದೆ. ಅವಳ ಈ ದುರವಸ್ಥೆಯನ್ನು ಕೇಳಿ ಸುಮ್ಮನಿರುವದಾದರೂ ಹೇಗೆ? ನನ್ನ ಜೀವವೂ ಚಡಪಡಿಸುವದು! ಹೋಗಬೇಕೆನಿ

ಸುವದು! ಆದರೆ ಈ ಮನೆಯನ್ನು ಬಿಟ್ಟು ಹೇಗೆ ಹೋಗಲಿ? ಹಳ್ಳಿಯಲ್ಲಿ ಹಗಲು ದರೋಡೆಯಾದರೆ ಕೇಳುವವರಿಲ್ಲ. ಕೀಲಿಯು ಬಿದ್ದರೆ ಮನೆಯು ಉಳಿದೀತೆ? ಇಷ್ಟಾಗಿಯೂ ಹೋದೆನೆಂದು ಇಟ್ಟುಕೊಳ್ಳಿರಿ! ಅವನು ಏನನ್ನುವನೋ, ಏನು ಮಾಡುವನೋ ಅದೊಂದು ಹೆದರಿಕೆ. ಅವಳು ಹೇಳಿಕಳಿಸಿದ ಮೇಲೆ ಹೋಗಬೇಕೆಂದಿರುವೆ. ಅವಳು ಕಳಿಸಿಲ್ಲ. ನಾನು ಹೋಗಿಲ್ಲ. ಹೊಟ್ಟೆಯಲ್ಲಿಯ ಕರುಳು ಮಾತ್ರ ನಿತ್ಯ ಮಸೆದಾಡುವವು!" ಎಂದು ವಿಷಾದದಿಂದ ಮುಗಿಸಿದಳು.

"ಇದು ಅಕ್ಕಾಮರಿಯ ಸ್ಥಿತಿಯಾಯಿತು. ರಾಜಣ್ಣನ ಇತಿಹಾಸವನ್ನು ಕೇಳಿರಲಿಕ್ಕಿಲ್ಲ!"

"ಅಲ್ಪ-ಸ್ವಲ್ಪ ಕೇಳಿರುವೆ."

"ಹೊಸ ಸುದ್ದಿಯನ್ನು ಕೇಳಿರಿ. ತಂದೆ ಸತ್ತಮೇಲೆ ಅವನು ಎರಡು ತೋಟ, ಒಂದು ಹೊಲವನ್ನು ಮಾರಿದನು. ಕಡೆಯ ಹೊಲವನ್ನು ಮಾರಿ ನಾಲ್ಕು ತಿಂಗಳು ಸಹ ಆಗಿಲ್ಲ. ಈಗ ನಾಲ್ಕನೆಯ ಹೊಲವನ್ನು ಮಾರಲು ತೆಗೆದಿರುವನು."

"ಹೊಲಗಳನ್ನು ನೀವೇ ಹಿಡಿದಿರುವಿರಂತೆ. ಅಹುದೇ?"

"ಅಹುದು. ನಾಲ್ಕನೆಯದನ್ನು ನಮ್ಮ ನೆರೆಯೂರಿನ ಸೆಟ್ಟಿಗೆ ಬರೆದು ಕೊಡಬೇಕೆಂದಿರುವನು. ಉತ್ತಮವಾದ ಹೊಲ, ಬೆಣ್ಣೆಯ ಮುದ್ದೆಯಂತಹ ಜಮೀನು. ಸೆಟ್ಟಿಯು ಮಹಾ ಘಟಿಂಗ. ಕಾಗದದಲ್ಲಿ ಒಂದು ಬರೆದು ಕೈಗೆ ಬೇರೊಂದು ಅಂಕಿಯಷ್ಟು ರೂಪಾಯಿಗಳನ್ನು ಹಚ್ಚುವನು. ಅಗಾವು ರೂಪಾಯಿ ಇಸಿದುಕೊಂಡು ಪಾವತಿಯನ್ನು ಬರೆದು ಕೊಟ್ಟಿರುವನಂತೆ! ರಾಜಣ್ಣನಿಗೆ ತನ್ನ ಹಿತವು ಯಾವದೆಂಬುದು ತಿಳಿಯುವದೇ ಇಲ್ಲ."

"ಅವನಿಗೆ ಆ ಬುದ್ಧಿ ಇದ್ದರೆ ಇದೆಲ್ಲವೂ ಹೀಗೆ ಆಗಬಹುದಿದ್ದಿತೇ!"

"ನಮ್ಮಂಥವರನ್ನಾದರೂ ಕೇಳಬಾರದೇ! ಆ ಚಂಡಾಳಚಕಡಿ ಹೇಳಿದ ಮಾತೇ ಬ್ರಹ್ಮವಾಕ್ಯ!"

"ಅವರ ಸಹವಾಸದಿಂದಲೇ ಇಷ್ಟು ಹಾಳಾದುದು."

"ಇರಲಿ. ನೀವು ತಾಲೂಕಿನಲ್ಲಿ ನಿಲ್ಲುವಿರೇಕೆ? ಇಲ್ಲಿ ಸ್ವತಃ

ಕಟ್ಟಿಸಿದ ಮನೆಯನ್ನು ಬಿಟ್ಟು ತಾಲೂಕಿನ ಬಾಡಿಗೆಯ ಮನೆಯಲ್ಲಿ ಹೋಗಿ ನಿಲ್ಲಲು ಕಾರಣವೇನು ?"

"ಏನಿಲ್ಲ. ಹಳ್ಳಿಯ ವಾಸವು ಸಾಕಾಯಿತು. ಹಳ್ಳಿಯಲ್ಲಿ ಹೇಳಿಕೊಳ್ಳುವಂತಹದು ಏನಿದೆ? ದೊಡ್ಡವರೆಂಬುವವರು ತೀರಿಕೊಂಡರು, ಇದ್ದುಳ್ಳವರು ಮಕ್ಕಳ ಶಿಕ್ಷಣಕ್ಕೆಂದು ತಾಲೂಕಿಗೆ ಹೋಗಿ ಮನೆಯನ್ನು ಮಾಡಿದರು. ಈಗ ಉಳಿದವರು ನಾಲ್ಕು ಜನ ಘಟಿಂಗರು. ಉದ್ಯೋಗವಿಲ್ಲ; ವ್ಯವಹಾರವಿಲ್ಲ. ಅಜ್ಞ ಜನರಿಗೆ ಟೊಪ್ಪಿಗೆಯನ್ನು ಹಾಕಿ ಉಪಜೀವಿಸುವದು. ಅಲ್ಲದೆ ನಮ್ಮಂತಹರು ಉಂಡುಟ್ಟು ಸುಖದಿಂದಿದ್ದೇವೆಂದರೆ ಅವರಿಗೆ ಸಹನವಿಲ್ಲ. ಯಾವ ಕಾಲಕ್ಕೆ ಅವರು ಏನು ಮಾಡಬಹುದೆಂಬ ನಂಬಿಗೆ ಇಲ್ಲ. ಅದಕ್ಕೆ ಬಿಡಬೇಕೆಂದಿರುವೆನು. ಮೇಲಾಗಿ ನನಗೆ ಹಳ್ಳಿ ಏನು, ತಾಲೂಕು ಏನು ?"

"ನಿಮ್ಮಂಥವರಿಗೆ ಸರಿಯಾದೀತು ! ನಮ್ಮಂಥವರ ಗತಿಯೇನು?"

"ನೀವೂ ಅಲ್ಲಿಗೆ ಬನ್ನಿರಿ."

"ತಾಲೂಕಿನಲ್ಲಿ ನಮ್ಮಂಥವರು ಹೇಗೆ ಬದುಕುವದು ಚಿನ್ನಯ್ಯನವರೇ ? ನಿಮಗೆ ಉತ್ಪನ್ನವಿದೆ. ಮೇಲೆ ಬಡ್ಡಿಯ ವ್ಯವಹಾರ ಅಲ್ಲದೆ ಯಾವದಾದರೊಂದು ವ್ಯವಸಾಯ ಮಾಡಬಹುದು. ಹಣದ ಅನುಕೂಲತೆ ಇದೆ."

"ನೀವೂ ವ್ಯವಸಾಯ ಮಾಡಿರಿ. ನಗ ಹತ್ತಿದನು."

"ಹೀಗೆ ಚೇಷ್ಟೆಯನ್ನು ಮಾಡಬಹುದೇ ?"

"ಅದನ್ನು ಬಿಟ್ಟು ಬಿಡಿರಿ. ನಿಮಗೆ ಒಂದು ಮುಖ್ಯವಾದ ಮಾತನ್ನು ಹೇಳುವೆ. ಅದನ್ನು ಹೇಳಬೇಕೆಂದೇ ಬಂದಿರುವೆನು."

"ಏನು ?"

"ಅಕ್ಕಾಮರಿಯು ಅಲ್ಲಿದ್ದರೆ ತಿಂಗಳೊಪ್ಪತ್ತಿನಲ್ಲಿ ಸತ್ತಳೆಂದು ತಿಳಿಯಿರಿ. ಅವಳ ಅವಸ್ಥೆಯು ನಿಮಗೆ ಚೆನ್ನಾಗಿ ತಿಳಿಯದು. ಮನೆಯಲ್ಲಿ ಕಾಳುಕಡಿಗಳಿರುವದಿಲ್ಲ. ಜೋಳವಿದ್ದರೆ ಬೇಳೆ ಇಲ್ಲ. ಬೇಳೆ ಇದ್ದರೆ ಬೆಲ್ಲವಿಲ್ಲ. ಅಕ್ಕಿಯು ಇರುವದೇ ಇಲ್ಲವಂತೆ. ನಿತ್ಯ ಉಪವಾಸವಂತೆ ! ಬೇನೆ ಹತ್ತಿದಂತಾಗಿರುವಳಂತೆ. ಮೇಲೆ

ಗಂಡನ ಸದಾಕಾಟ! ಈಗ ದಿನಗಳು ತುಂಬಿ ಬಂದಿವೆ. ಲಿಲ್ಲಿಯು ಹಸಿದರೆ ನೆರೆಮನೆಯ ಒಕ್ಕಲಿಗಿತ್ತಿಯರ ಮನೆಯ ರೊಟ್ಟಿಯ ಚೂರನ್ನು ತಂದು ತಿನ್ನಬೇಕು! ಇದಕ್ಕೂ ಹೆಚ್ಚಿನ ಒಂದು ಕೆಟ್ಟ ಸಂಗತಿಯನ್ನು ಹೇಳುವೆ. ಅಪ್ಪಾರಾಯರು ದೆವ್ವ ಆಗಿರುವರಂತೆ. ಕತ್ತಲೆಯ ರಾತ್ರಿಯಲ್ಲಿ ಅವರನ್ನು ಅನೇಕ ಜನರು ಕಂಡಿರುವರು! ಬೆನ್ನ ಹಿಂದೆ ನಾಯಿ, ನೋತ್ರ್ಯಾ! ಹುಳುಬಿದ್ದ ಕೊಳಕ ನೋತ್ರ್ಯಾ! ಇಂಥ ದೆವ್ವನ ಮನೆಯಲ್ಲಿ ನಿಮ್ಮ ಪ್ರೀತಿಯ ಮಗಳ ವಾಸ! ರಾಜಣ್ಣ ರಾತ್ರಿ ಮನೆಯಲ್ಲಿರುವದಿಲ್ಲ. ಆ ದೆವ್ವನ ಸಂಗಡ ಏಕಾಕಿಯಾಗಿ ನಿಮ್ಮ ಮಗಳೊಬ್ಬಳೇ ಕುಸ್ತಿಯನ್ನು ಆಡಬೇಕು. ಅಕ್ಕಾಮರಿಯ ಮೇಲೆ ಅಪ್ಪಾರಾಯರ ಪ್ರೀತಿ ವಿಶೇಷವಿದ್ದಿತು. ಯಾವ ಸಮಯದಲ್ಲಿ ಏನಾದೀತು! ಹೇಳಲಿಕ್ಕೆ ಬಾರದು. ಮಗಳು ಇನ್ನೆರಡು ದಿನ ಬದುಕಬೇಕೆಂದು ನಿಮ್ಮ ಇಚ್ಛೆಯಿದ್ದರೆ ನಿಮ್ಮ ನೆರವು ಬೇಕು. ಅದಕ್ಕೆ ನಿಮ್ಮ ಮನೆಯನ್ನು ತಾಲೂಕಿಗೆ ಏಕೆ ಕಿತ್ತಿಕೊಂಡು ಬರಬಾರದು?" ಎಂದು ಕೇಳಿದನು.

ಚಿನ್ನಯ್ಯನು ಪುಟ್ಟವ್ವನ ಕಾಲಲ್ಲಿ ಏಳು ಹೆಡೆಯ ಹಾವನ್ನು ಬಿಟ್ಟಂತೆ ಚಡಪಡಿಸಿದಳು. ಮಗಳ ಇತಿಶ್ರೀಯನ್ನು ಕೇಳಿ ಅತೀವ ಸಂಕಟವಾಯಿತು.

"ಅದು ಹೇಗೆ ಚಿನ್ನಯ್ಯನವರೇ?" ಗಾಬರಿಯಲ್ಲಿ ನುಡಿದಳು.

"ನಾನು ನೆರವಾಗುವೆ. ಮತ್ತೇನು!"

"ಅವಳು ಒಪ್ಪಬಹುದೇ!"

"ನೋಡಿರಿ. ವಿಚಾರಿಸಿರಿ. ಬರುವದಾದರೆ ಹೇಳಿರಿ. ನಾನು ನಿಮಗಾಗಿ ಒಂದು ಮನೆಯನ್ನು ಹಿಡಿಯುವೆ."

ಪುಟ್ಟವ್ವನು ದಿಙ್ಮೂಢಳಾಗಿದ್ದಳು. ಚಿನ್ನಯ್ಯನ ಈ ಆಲೋಚನೆ ಚೆನ್ನಾಗಿ ತಿಳಿಯಲಿಲ್ಲ. ಸುಮ್ಮನೆ ಕುಳಿತಳು.

"ಏನು ವಿಚಾರಿಸುವಿರಿ?" ಮತ್ತೆ ಕೇಳಿದನು.

"ಏನಿಲ್ಲ."

"ತಾಲೂಕಿನಲ್ಲಿ ಬದುಕುವ ಚಿಂತೆಯನ್ನು ಬಿಡಿರಿ. ನಾನು ನಿಮಗೆ

ಎಲ್ಲ ರೀತಿಯಿಂದ ಸಹಾಯ ಮಾಡುವೆ. ಇಲ್ಲಿ ಇದ್ದಂತೆ ಸುಖವಾಗಿ ಇರಲು ಅನುಕೂಲಮಾಡಿಕೊಡುವೆ. ನನಗೆ ಹೆಂಡರೂ ಇಲ್ಲ, ಮಕ್ಕಳೂ ಇಲ್ಲ. ನೀವೇ ನನ್ನ ಎಲ್ಲರೂ ಎಂದು ತಿಳಿಯುವೆ."

"ವಿಚಾರಿಸುವೆ !" ಮೆಲ್ಲಗೆ ನುಡಿದಳು.

"ಒಳ್ಳೇದು. ನಾನು ಹೋಗುವೆ" ಎಂದು ಎದ್ದನು.

"ಏಕೆ ಎದ್ದಿರಿ ?"

"ಇನ್ನು ಹೋಗುವೆ. ಸಂಜೆಯಾಗ ಬಂದಿತು."

"ನಿಲ್ಲುವದಿಲ್ಲವೇ ?"

"ಅವಸರದ ಕೆಲಸವಿದೆ. ವಿಶ್ರಾಂತಿಗಾಗಿ ಬಂದಿದ್ದೆ. ಅಷ್ಟು ಸಿಕ್ಕಿತು. ಇನ್ನು ಹೋಗುವೆ" ಎಂದು ಹೊರಟೇ ಬಿಟ್ಟನು.

ಚಿನ್ನಯ್ಯನು ಹೋದ ದಿಕ್ಕಿಗೆ ಕಣ್ಣಿಟ್ಟು ನೋಡಿದಳು. ಅಯ್ಯನು ಹಾಗೇ ಹೋದನು. ದೂರ ಹೋದನು. ಕಣ್ಣಮರೆಯಾದನು.

'ಇಂದುಮನೆಯಲ್ಲಿ ನಿಲ್ಲಲಿಲ್ಲ !........ಏಕೆ ?' ಎಂದು ವಿಚಾರಿಸಿ ಕೊಂಡಳು.

ಅಯ್ಯನವರ ಕಣ್ಣಲ್ಲಿ ತಾನು ತಿರಸ್ಕೃತಳಾದೆನೆಂದು ಪುಟ್ಟವ್ವನು ಅಂದು ಸಂಪೂರ್ಣ ಅರಿತಳು.

೩೨

"ನನಗೆ ರಾತ್ರಿಯಲ್ಲಿ ಭಯವಾಗುವದು. ನೀವು ಮನೆಯಲ್ಲಿ ಇರಬೇಕು. ಹಗಲು ನೀವು ಎಲ್ಲಿ ಹೋದರೂ ನಾನು ಕೇಳಲಾರೆ. ಊಟಕ್ಕೆ ಬಂದರೂ ಸರಿ. ಬಾರದಿದ್ದರೂ ಸರಿ. ನಾನು ತಾಳಿಕೊಳ್ಳುವೆ. ಆದರೆ ರಾತ್ರಿಯ ಸಮಯದಲ್ಲಿ ನೀವು ಮನೆಯಲ್ಲಿರಬೇಕು. ನನಗೆ ಪ್ರಾಣ ಹೋದಷ್ಟು ಭಯ. ನಿನ್ನಿನ ರಾತ್ರಿಯೇ ಸಾಯುವವಳು. ಹೇಗೋ ಜೀವ ಹಿಡಿದು ನಿಂತಿರುವೆ. ಇಂದು ನೀವು ಮನೆಯಲ್ಲಿರದಿದ್ದರೆ ನಿಜವಾಗಿ ಸತ್ತೆನೆಂದು ತಿಳಿಯಿರಿ. ನೀವು ಮನೆಯಲ್ಲಿ ಇರ್ರಿ" ಎಂದು ಅಕ್ಕಾಮರಿಯು ಅತ್ತು, ಕರೆದು, ಅಂಗಲಾಚಿ ಬೇಡಿಕೊಂಡಳು.

"ನೀನು ಹೇಳಿದಂತೆ ಕೇಳಲು ನಾನು ನಿನ್ನ ಮನೆಯ ಆಳಲ್ಲ. ನನ್ನನ್ನು ಇಲ್ಲಿ ರಾತ್ರಿ ಕಟ್ಟಿಹಾಕಲು ನೀನು ಎಷ್ಟರವಳು ? ನಾನು ಬೇಕಾದಲ್ಲಿಗೆ ಹೋಗುವೆ. ಬೇಕಾದ್ದನ್ನು ಮಾಡುವೆ. ಇದ್ದದ್ದನ್ನು ತಿಂದುಕೊಂಡು ಮನೆಯಲ್ಲಿ ಬಿದ್ದಿರು" ಎಂದು ರಾಜಣ್ಣ ಗದರಿಸಿದನು.

* * *

"ಮನೆಯಲ್ಲಿ ಅಕ್ಕಿ ಇಲ್ಲ. ಜೋಳವಿಲ್ಲ. ನವಣಕ್ಕಿಯನ್ನು ಕುದಿಸಿ ತಿಂದೇನೆಂದರೆ ಅದೂ ಇಲ್ಲ. ನೆರೆಮನೆಯಿಂದ ಕಡ ಬೇಡಿ ಎಷ್ಟು ದಿನ ತರಲಿ ? ಅವರಾದರೂ ಎಷ್ಟು ದಿನ ಕೊಟ್ಟಾರು ? ನಿಮಗೆ ಒಂದು ನವಕರಿ ಇಲ್ಲ. ಚಾಕರಿ ಇಲ್ಲ. ಹೊಲ-ಮನೆಯ ಕಡೆಗೆ ಲಕ್ಷ್ಯವಿಲ್ಲ. ಮಾರಿದ ಹಣವೆಷ್ಟು ಬಂದಿತು ಎಂಬ ಲೆಕ್ಕವಿಲ್ಲ. ಬಂದ

ಹಣದ ವ್ಯವಸ್ಥಿತ ಖರ್ಚಿಲ್ಲ. ಇದೇ ಕ್ರಮದಿಂದ ಸಾಗಿದರೆ ಉಳಿದ ಒಂದೆರಡು ಹೊಲಗಳು ಎಷ್ಟು ದಿನ ಸಾಲಬಹುದು ! ಭಿಕ್ಷೆಯನ್ನು ಬೇಡೇನೆಂದರೆ ಹಾಕುವ ಪುಣ್ಯಾತ್ಮರಿಲ್ಲ. ನಾಲ್ಕು ದಿನಗಳಿಂದ ಲಿಲ್ಲಿಯ ಮೈಯಲ್ಲಿ ಸರಿಯಿಲ್ಲ. ಬಂದ ಜ್ವರ ಆರಿಲ್ಲ. ಔಷಧ ಕುಡಿಸಬೇಕೆಂದರೆ ಕೈಯಲ್ಲಿ ಕಾಸಿಲ್ಲ. ಇಂಥ ಗೋಳು ಹೊಯ್ಯಲು ನನ್ನನ್ನು ಏಕೆ ಕರೆದು ತಂದಿರಿ? ಬಣ್ಣದ ಮಾತು ಸುರಿಸಿ ಇದಕ್ಕಾಗಿಯೇ ಕರೆದಿರೇನು? ನನ್ನ ತಾಯಿಗೆ ನಾನು ಭಾರವಲ್ಲ. ಅವಳಿಗೆ ಗಂಡುಮಗನೂ ನಾನೇ! ಹೆಣ್ಣು ಮಗಳೂ ನಾನೇ! ಬೇಕಾದ ಹಾಗೆ ಜೋಪಾನ ಮಾಡುವಳು. ಈ ನರಕಕ್ಕೆ ನನ್ನನ್ನು ಏಕೆ ಕರೆತಂದಿರಿ?" ಎಂದು ಒಂದು ದಿನ ಬಿರುಸು ಬಿರುಸಾಗಿ ಮಾತಾಡಿದಳು.

ರಾಜಣ್ಣನು ಅಂದು ಒಂದಿಷ್ಟು ಕುಡಿದು ಬಂದಿದ್ದನು. ಹೆಂಡತಿಯ ಅವಿವೇಕದ ಮಾತುಗಳಿಗೆ ಕ್ರೋಧ ಸಂತಪ್ತನಾದನು. ಚೆನ್ನಾಗಿ ಥಳಿಸಿದನು.

* * *

ಇಂದು ನೆರೆಮನೆಯ ಅಯ್ಯಮ್ಮನಿಂದ ಕೆಂಪು ಜೋಳವನ್ನು ಕಡ ತಂದಳು. ಮನೆಯಲ್ಲಿ ತಾನೇ ಒಡೆದಳು. ನುಚ್ಚು ತೆಗೆದಳು. ಒಂದಿಷ್ಟು ಕುದಿಸಿ, ಉಪ್ಪು-ಮಜ್ಜಿಗೆಯನ್ನು ಬೆರಸಿ ತೆಳ್ಳನ್ನ ನುಚ್ಚು ಮಾಡಿದಳು. ಮಗುವಿಗೆ ಒಂದು ಬಟ್ಟಲದಲ್ಲಿ ಹಾಕಿ ನೆಕ್ಕಿಸಿದಳು. ಮಗುವು ಅಷ್ಟಕ್ಕೇ ಸಂತೋಷಪಟ್ಟು ನೀರು ಕುಡಿದು ಹಾಳು ಮಣ್ಣಿನಲ್ಲಿ ಆಡ ಹತ್ತಿತು. ಉಳಿದದ್ದನು ತಾನು ತಿನ್ನಬೇಕೆಂದಳು. ಒಂದು ಆಲದ ಎಲೆಯನ್ನು ನೀರು ಸಿಂಪಡಿಸಿ ಹಾಸಿಕೊಂಡಳು. ಬಡಿಸಿಕೊಳ್ಳಬೇಕೆಂದು ನುಚ್ಚಿನ ಪಾತ್ರೆಯನ್ನು ಎತ್ತಿ ತರುವ ಮುಂದೆ ಕೈ ಜಾರಿ ಕೆಳಗೆ ಬಿದ್ದಿತು. ತೆಳ್ಳಗಿದ್ದದರಿಂದ ಸಿಡಿದು ಕಾಲ ಮೇಲೂ ಬಿದ್ದಿತು. ಕ್ಷಣದಲ್ಲಿ ಒಂದು ನೀರಗುಳ್ಳೆ ಕಾಲ ಮೇಲೆ ಕಾಣ ಹತ್ತಿತು. ಹೊಟ್ಟೆಯ ತಳಮಳಕ್ಕೆ ಮೇಲಿನ-ಮಣ್ಣು ಬೆರೆಯದ-ನುಚ್ಚನ್ನು ಬಳಿದುಕೊಂಡು, ತಿಂದು, ನೀರು ಕುಡಿದು ಅರೆಹೊಟ್ಟೆಯನ್ನು ತುಂಬಿದಳು.

ಇಂಥ ಸಣ್ಣ ಪುಟ್ಟ ಕರಕರೆ ನಿತ್ಯದ ಮಾತಾಗಿದ್ದಿತು. ಆದರೂ ಸಹಿಸಿದಳು. ಸಹಿಸಿಕೊಂಡು ನಡೆಯಬೇಕೆಂಬ ನಿರ್ಧಾರದಲ್ಲಿಯೇ ಗಂಡನ ಸಂಗಡ ಹಳ್ಳಿಗೆ ಬಂದಿದ್ದಳು. ಆದರೆ ಆದುದೇನು ? ಸಹನೆಯ ಸೀಮಾಗೆರೆ ಇನ್ನೂ ಎಷ್ಟು ದೂರವಿದೆ ? ಅನಂತವಾಗಿದೆಯೇ ? ಅಥವಾ ಸೀಮಾಗೆರೆಯೇ ಇಲ್ಲವೇ !

ಆರಂಭದ ಕೆಲದಿನಗಳನ್ನು ರಾಜಣ್ಣನ ಸೇವೆಯಲ್ಲಿ ಕಳೆಯಬೇಕೆಂದು ಗೊತ್ತು ಮಾಡಿಕೊಂಡಳು. ಗಂಡು ಪ್ರಾಣಿ ಹೆಣ್ಣಿನ ಸೇವೆಯನ್ನು ಬಯಸುವದು. ಹೆಣ್ಣಾದರೂ ಗಂಡಿನ ಸೇವೆಯಲ್ಲಿ ಸಂತಸವನ್ನು ಕಾಣುವದು. ಈ ಸಮನ್ವಯತತ್ವವು ಲೋಕವಿಖ್ಯಾತವಾದುದು. ಈ ವ್ಯವಹಾರವನ್ನರಿತು ಅಕ್ಕಾಮರಿಯು ಗಂಡನು ಹೊರಗಿನಿಂದ ಬಂದ ಮೇಲೆ ಕಾಲಿಗೆ ನೀರು ಕೊಡುತ್ತಿದ್ದಳು. ತೊಳೆದ ಕಾಲುಗಳನ್ನು ಒರಸಲು ಒಂದು ಅರಿವೆಯನ್ನು ಹಿಡಿದುಕೊಂಡು ನಿಲ್ಲುತ್ತಿದ್ದಳು. ಕುಳಿತುಕೊಳಲು ಪಡಸಾಲೆಯಲ್ಲಿ ಚಾಪೆ ಹಾಸಿ, ಒರಗಲು ಹಾಸಿಗೆಯ ಸುರುಳಿಯನ್ನು ಗೋಡೆಗೆ ಇಡುತ್ತಿದ್ದಳು. ಅಸ್ತವ್ಯಸ್ತವಾಗಿ ಬಿದ್ದ ಅವನ ಅರಿವೆಗಳನ್ನು ಓರಣದಿಂದ ಗೂಟಕ್ಕೆ ತೂಗು ಹಾಕುತ್ತಿದ್ದಳು. ತನಗೆ ತಿಳಿದಷ್ಟು ಮಟ್ಟಿಗೆ ಅಡಿಗೆಗೆ ರುಚಿ ಬರುವಂತೆ ಪ್ರಯತ್ನಿಸುತ್ತಿದ್ದಳು. ಆಗ್ರಹದಿಂದ ಬಡಿಸುತ್ತಿದ್ದಳು. ಅವನ ಮಲಿನವಾದ ಅರಿವೆಗಳನ್ನು ಒಗೆದು ಮಡಿಚಿ ಇಡುತ್ತಿದ್ದಳು. ಹಾಸಿಗೆಯನ್ನು ಮೆತ್ತಗೆ ಮಾಡಿ ಹಾಸುತ್ತಿದ್ದಳು. ಸ್ನಾನವನ್ನರಿಯದ ಗಂಡನನ್ನು ನಿತ್ಯ ಸ್ನಾನಕ್ಕೆ ಎಬ್ಬಿಸುತ್ತಿದ್ದಳು. ಹದಿನೈದು ದಿನಕ್ಕೆ ಒಂದು ಬಾರಿಯಂತೆ ಎಣ್ಣೆಯನ್ನು ಹಚ್ಚುತ್ತಿದ್ದಳು. ಬೆಳೆದ ಗಡ್ಡವನ್ನು ಸಹ ಜ್ಞಾಪಿಸಿಕೊಡುತ್ತಿದ್ದಳು. ಹಲ್ಲುಜ್ಜಲು ಕುರುಳಿನ ಬೂದಿಯಲ್ಲಿ ಉಪ್ಪು ಬೆರಸಿಟ್ಟಳು. ಒಂದೆರಡು ಸಾರೆ ಅವನ ಹಳೆಯ ಚಪ್ಪಲಿಗೆ ಎಣ್ಣೆಯನ್ನು ಸವರಿದಳು. ಆದರೆ ಆ ಹುಂಬನಿಗೆ ಇವೆಲ್ಲ ಕಟಕಟ ಎನಿಸಿದವು.

ಅವನು ಸ್ತ್ರೀಲೋಭಿ ಎಂದು ಹೇಗೋ ಅರಿತಿದ್ದಳು. ಅವನು ಮನೆಯಲ್ಲಿ ನಿಲ್ಲದಿರಲು ಇದೂ ಒಂದು ಕಾರಣವೆಂದು ಅರ್ಥಮಾಡಿ

ಕೊಂಡಳು. ಅದಕ್ಕೆ ಅವನ ಮುಂದೆ ಲಲ್ಲೆ ಮಾತುಗಳನ್ನು ಆಡ ಹತ್ತಿದಳು. ಕೈಗಳನ್ನು ಕುಣಿಸುತ್ತಿದ್ದಳು. ಕತ್ತು ಮಣಿಸುತ್ತಿದ್ದಳು. ತಲೆ ತೂಗುತ್ತಿದ್ದಳು. ಪ್ರಾರ್ಥಿಸುತ್ತಿದ್ದಳು. ದೈನ್ಯಗರೆಯುತ್ತಿದ್ದಳು. ತಾನು ಅಂತರ್ವರ್ತಿನಿಯಾದರೂ ಅವನ ಸುಖಕ್ಕಾಗಿ ಶೃಂಗಾರಸ್ಥಾನ ಗಳನ್ನು ತೋರಿಸಿ-ತೋರಿಸದಂತೆ ಮಾಡಿ ರತಿಕೇಳಿಯ ಯಾತನೆ ಯನ್ನು ಸಹಿಸುತ್ತಿದ್ದಳು. ಆದರೆ ಆ ಮುಟ್ಠಾಳನಿಗೆ ಇವೆಲ್ಲ ಅರುಚಿ, ಅಸ್ವಾಭಾವಿಕ, ಕೊನೆಗೆ ಕಹಿ.

ಅವನು ಅವಿಚಾರಿ, ಅನ್ಯವಹಾರಿ, ಅಜ್ಞಾನಿ, ಅಸಭ್ಯನೆಂದೂ ತಿಳಿದುಕೊಂಡಿದ್ದಳು. ಅದಕ್ಕಾಗಿ ಅವನನ್ನು ಬೆದರಿಸಿ ತನ್ನ ಹತೋಟಿ ಯಲ್ಲಿಟ್ಟುಕೊಳ್ಳಬೇಕೆಂದು ಬಗೆದಳು. ಹೆಂಡತಿಯ ಈ ಗಂಡುತನದಿಂದ ಕೆಲವು ಗಂಡಸರು ಮಣಿಯುವರೆಂದು ಎಂದೋ ಒಂದು ದಿನ ಕೇಳಿದ್ದಳು. ಅದಕ್ಕೆ ಒಂದು ದಿನ ಹಟ ಹಿಡಿದಳು. ಚೆಂಡಿತನ ಮಾಡಿದಳು. ಉಪವಾಸ ಬಿದ್ದಳು. ಮನೆಯಲ್ಲಿ ಅಡಿಗೆಯನ್ನೇ ಮಾಡಲಿಲ್ಲ. ನೀರು ತರಲಿಲ್ಲ. ಗಂಡನ ಸಂಗಡ ಮಾತಾಡಲಿಲ್ಲ. ಮಾತಾಡಿದರೂ ಕರ್ಕಸತನದಿಂದ ಉತ್ತರ ಕೊಟ್ಟಳು. ಕಾರಣವಿಲ್ಲದೆ ಮಗು ಲಿಲ್ಲಿಯನ್ನು ಉರುಳುರುಳಿಸಿ ಬಡಿದಳು. “ನಾನು ಇಲ್ಲಿ ನಿಲ್ಲು ವದಿಲ್ಲ. ತಾಯಿಯ ಹತ್ತಿರ ಹೋಗುವೆ. ಹೂವು ಮಾರಿದಲ್ಲಿ ಹುಲ್ಲು ಮಾರಲು ನನ್ನ ಮನಸ್ಸಿಲ್ಲ. ನೀವಾಯಿತು, ನಿಮ್ಮ ಮಗಳಾ ಯಿತು, ಈ ನಿಮ್ಮ ಮನೆಯಾಯಿತು. ಬೇಕಾದ ಹಾಗೆ ಕುಣಿಯಿರಿ. ಕಲೆಯಿರಿ. ನಲಿದಾಡಿರಿ” ಎಂದು ಒಂದು ದಿನ ಗಂಟು ಕಟ್ಟಿದಳು.

ಆದರೆ ರಾಜಣ್ಣ “ನೀನು ಹೋಗು. ಇಂದು ಸಂಜೆ ಮನೆಯ ಲ್ಲಿದ್ದರೆ ನಿನ್ನನ್ನು ಕಡಿದು ಹಾಕುವೆ. ಮಗಳು ನನ್ನ ಕಡೆಗೇ ಇರಲಿ. ತಾಯಿಯ ಮನೆಗೆ ಹೋಗು. ಇಲ್ಲವಾದರೆ ಎಲ್ಲಿಯಾದರೂ ಸತ್ತು ಹೋಗು. ನನಗೆ ಬೆದರಿಕೆಯನ್ನು ಹಾಕುವೆ. ಹುಚ್ಚಮುಂಡೇ!” ಎಂದು ಕಟ್ಟಿದ ಗಂಟನ್ನು ಹೊರಗೆ ಬೀಸಿ ಒಗೆದು, ಮಡಿಕೋಲು ಮುರಿದು ಎರಡು ತುಂಡಾಗುವವರೆಗೆ ಥಳಿಸಿದನು.

ಅಕ್ಕಾಮರಿಯ ಎಲ್ಲ ಹಂಚಿಕೆಗಳು, ಯುಕ್ತಿ-ಪ್ರಯುಕ್ತಿಗಳು

ಮುಗಿದವು. ತನ್ನ ವಿಚಾರ, ಆಲೋಚನೆ, ಬುದ್ಧಿ, ಅನುಭವ, ವ್ಯವಹಾರಜ್ಞಾನ ಇಂದಿಗೆ ಬರಿದಾದವು. ಬೆಲೆಯಿಲ್ಲದವುಗಳಾದವು. ಈ ಗಂಡನನ್ನು ಹಾದಿಗೆ ತರಲು ಮಾನವೀಯ ಬುದ್ಧಿ ಅಸಾಧ್ಯವೆಂದು ನಿರ್ಧರಿಸಿಬಿಟ್ಟಳು. ಈಗ ಅವಳ ಮುಂದೆ ನಿಂತುದು ಎರಡು ಪ್ರಶ್ನೆ- ಏನಾದರೂ, ಎಷ್ಟಾದರೂ, ಹೇಗಾದರೂ ಗಂಡನ ಮನೆಯಲ್ಲಿಯೇ ನಿಂತು, ಕಷ್ಟದಿಂದ, ದುಃಖದಿಂದ, ಸಂಕಟದಿಂದ, ಅಸಹಾಯತೆಯಿಂದ, ಉಪವಾಸದಿಂದ ಸಾಯಬೇಕೇ? ಧರ್ಮದ ಮಾನವನ್ನು ಕಾಯಬೇಕೇ? ಇಲ್ಲವೆ ಸ್ವಚ್ಛಂದವಾಗಿ, ಸುಖವಾಗಿ, ಸನ್ಮಾನ್ಯವಾಗಿ ತಾಯಿಯ ನೆರವಿನಿಂದ ಬದುಕಿ, ಬಾಳಿ ಸಾಯಬೇಕೇ? ಧರ್ಮದ ಅವಮಾನವನ್ನು ಮಾಡಬೇಕೇ? ಒಂದು ಬೆಂಕಿಯ ಸಂಗಡ ಚೆಲ್ಲಾಟ! ಇನ್ನೊಂದು ನೀರಿನ ಸಂಗಡ ಗುದ್ದಾಟ! ಒಂದರಲ್ಲಿ ಧರ್ಮವಿದೆ; ಸುಖವಿಲ್ಲ. ಇನ್ನೊಂದರಲ್ಲಿ ಸುಖವಿದೆ; ನಾವು ತಿಳಿದ ಧರ್ಮವಿಲ್ಲ. ಏನು ಮಾಡಬೇಕು? ಏನು ಮಾಡಬೇಕು? ಎಂಥ ಜಟಿಲವಾದ ಪ್ರಶ್ನೆಗಳು!!

ಅಕ್ಕಾಮರಿಯು ಚಿಕ್ಕವಳು. ಗಂಡನ ಸಂಗಡ ಸ್ತ್ರೀಯೆಂದು ಜೀವನ ನಡೆಸಿದ ಕಾಲ ಇನ್ನೂ ಚಿಕ್ಕದು. ಆ ಸುಖಜೀವನದ ಸ್ಮರಣೆ ಮತ್ತೂ ಚಿಕ್ಕದು. ವೃದ್ಧಾಪ್ಯದ ತುಟ್ಟತುದಿಗೆ ಬಂದು ಜೀವ ಸರ್ವಸ್ವವನ್ನು ನುಂಗಿ ನೀರು ಕುಡಿಯುವ ಸಾವನ್ನು ಇಂದು ನೆನೆಯುವದು ಪ್ರಕೃತಿಯ ವಿರುದ್ಧಕೃತಿಯೆಂದು ಆಕೆಯ ಎಣಿಕೆ. ಅದು ಅಸ್ವಾಭಾವಿಕವೆಂದು ಅವಳ ನಂಬಿಗೆ. ಅವಳಿಗೆ ಬದುಕುವ ಹಂಬಲವಿದ್ದಿತು. ಬದುಕೇನೆಂಬ ಆಶೆಯಿದ್ದಿತು. ಈ ಬದುಕಿಗೆ ಗಂಡನ ನೆರವು ಎಷ್ಟು ಪಾಲು ಸಹಕಾರಿಯೆಂಬ ಮಾತು ನಿಚ್ಚಳವಿದ್ದಿತು. ಈ ಮನೆ, ಈ ಗಂಡ, ಈ ಬಾಳು ಸಾವಿನ ಬರವಿನ ಸ್ವಾಗತದಲ್ಲಿದೆ ಎಂಬ ಮಾತು ಕಣ್ಣ ಮುಂದೆ ಸುಳಿಸುಳಿದು ಹೋಗುತ್ತಿದ್ದಿತು. ಇದಕ್ಕೆ ಕಳೆದ ಕೆಲ ದಿನಗಳ ಪ್ರಸಂಗಗಳು ಸೋದಾರಣೆಯಾಗಿದ್ದವು. ಬದುಕಿಗೂ, ಈ ಮನೆಗೂ ಬದ್ಧವೈರ. ಹಾಗಾದರೆ ಹೇಗೆ ಬದುಕುವದು?....

ತನ್ನಲ್ಲಿಯ ಬದುಕುವ ಆಶೆಯೇ ಮೂಲ. ಮೂಲಕ್ಕೆ ಅನುಗುಣವಾಗಿ ಮೂಲಾಧಾರಗಳಿವೆ.

ಬದುಕಲು ತಾನು ಇನ್ನೂ ಚಿಕ್ಕವಳು. ಗಟ್ಟಿಮುಟ್ಟಾದ ಶರೀರವಿದೆ. ಕೈ-ಕಾಲುಗಳು ಈ ಜೀವ-ದೇಹವನ್ನು ಹೊತ್ತುಕೊಂಡು ಇನ್ನೂ ಕೆಲ ವರುಷ ಕುಣಿಯುಬಹುದು, ಶರೀರಕ್ಕೆ ಅಂಟಿಕೊಂಡ ಸೌಂದರ್ಯದ ಸುಕುಮಾರ ಕವಚವಿದೆ. ಕವಚ ಕಿಲುಬುವವರೆಗೆ, ಸುಕ್ಕುಗಟ್ಟುವವರೆಗೆ ಬದುಕಿಗೆ ಬಾಧೆಯಿಲ್ಲ. ತಾಯಿಯು ದಾರಿಯನ್ನು ಸುಗಮವಾಗಿ ಮಾಡಿರುವಳು. ಅವಳ ನೆರವಿದ್ದರೆ ನಾನು ಬದುಕುವೆ. ಅವಳನ್ನೂ ಬದುಕಿಸುವೆ. ಆ ಬದುಕಿನಲ್ಲಿ ಸ್ವಾತಂತ್ರ್ಯವಿದೆ. ಸುಖವಿದೆ. ಸ್ವಚ್ಛಂದವಿದೆ. ಸೌಜನ್ಯವಿದೆ. ಸಂಪನ್ನತೆಯಿದೆ. ಸಹಾನುಭೂತಿಯಿದೆ. ಜೀವಕ್ಕೆ ಇದಕ್ಕೂ ಹೆಚ್ಚಿನದಿನ್ನೇನುಬೇಕು.

ಧರ್ಮದ ನಿರ್ಣಯವು ಸತ್ತಮೇಲೆ.

ಸತ್ತಮೇಲೆ ಧರ್ಮಶಾಸನ ವಿಧಿಸಲಿ !

ಜೀವದಿಂದಿರುವವರೆಗೆ ಸಂಪನ್ನಗೃಹಸ್ಥರು ರಕ್ಷಿಸಿದರೆ ಸರಿ.

ರಕ್ಷಿಸುವರು.

ಹೀಗೆ ಒಮ್ಮೊಮ್ಮೆ ಕಷ್ಟ ದುಃಖದಲ್ಲಿ ಸಿಕ್ಕ ಮನಸು ಆಲೋಚಿಸುತ್ತಿದ್ದಿತು.

ಮತ್ತೆ ಕೆಲ ದಿನಗಳು ಕಳೆದವು. ಹಿಂದಿನ ದಿನಗಳನ್ನು ನೆನೆಯುವಂತೆ ಘನ ಘೋರ ಕಷ್ಟದ ದಿನವೊಂದು ಬಂದಿತು.

ಇಂದು ಊಟಮಾಡಿ ಪಡಸಾಲೆಯಲ್ಲಿ ಕುಳಿತಿದ್ದಳು. ಮುಂಜಾವಿನಿಂದ ಮನದಲ್ಲಿ ಸಮಾಧಾನವಿರಲಿಲ್ಲ. ಎಂಥದೋ ಹೇಳಲಾರದ ಸಂಕಟ. ವ್ಯಥೆ. ಇದು ನಿತ್ಯದ ಬೇಗುದಿಯೆಂದು ಅವಳ ಭಾವನೆ. ಆದರೆ ಕುಳಿತಂತೆಯೇ ಒಮ್ಮೆಲೆ ಕೈಕಾಲುಗಳು ನಡುಗಹತ್ತಿದವು. ಎದ್ದು ಹಾಗೆಯೇ ಒಳಗೆ ಹೋದಳು. ಕೈಕಾಲುಗಳು ಇನ್ನೂ ಕಂಪಿಸುತ್ತಿದ್ದವು. ಹೊಟ್ಟೆಯಲ್ಲಿ ಕಳೆಯು ಉತ್ಪನ್ನವಾಯಿತು. ಹಾಗೆಯೇ ಎದ್ದು ನೆರೆಮನೆಯ ಒಬ್ಬ ವೃದ್ಧ ಬ್ರಾಹ್ಮಣಿಯನ್ನು ಕರೆದಳು. ಅವಳು ಬಂದಳು. ದೂರ ನಿಂತು ಮುಖವನ್ನು ನೋಡಿದಳು. ಕೈಕಾಲುಗಳನ್ನು

ನಿರೀಕ್ಷಿಸಿದಳು. ಏನೋ ಸಂಶಯವು ಬಂದಿತು. ಸೂಲಗಿತ್ತಿಯನ್ನು ಕರೆಸಿದಳು. ಅವಳು ಬಂದಳು. ಅಕ್ಕಾಮರಿಯನ್ನು ಮುಟ್ಟಿದಳು. ಪರೀಕ್ಷಿಸಿದಳು. ಕೈಕಾಲುಗಳು ಮತ್ತು ಕಂಪಿಸುತ್ತಿದ್ದವು. ಅಸಹ್ಯ ವೇದನೆಯೆನಿಸಹತ್ತಿತು. ಬೆನ್ನು ಮುರಿದಂತಾಗಹತ್ತಿತು. ಒದರ ಹತ್ತಿದಳು. ಚೀರಹತ್ತಿದಳು. ಸೂಲಗಿತ್ತಿಯು ಗಟ್ಟಿಯಾಗಿ ಹಿಡಿದಿದ್ದಳು. ತಾಸೆರಡು ತಾಸಿನ ಕಷ್ಟದಿಂದ, ದುಃಖದಿಂದ, ಅಕ್ಕಾಮರಿಯ ಪ್ರಾಣವು ಭೂಮಿಗೆ–ಸ್ವರ್ಗಕ್ಕೆ ಓಡಾಡಿ ಕೊನೆಗೆ ಹಡೆದಳು. ಕೂಸು ಸತ್ತು ಬಿದ್ದಿದ್ದಿತು.

ಅಂದು ಊರೆಲ್ಲ ರಾಜಣ್ಣನನ್ನು ಹುಡುಕಾಡಿಸಿದರು. ಅವನ ಸುಳಿವೇ ಇರಲಿಲ್ಲ. ಅವನ ಚೌಕಟ್ಟಿನ ಗೆಳೆಯರೂ ಇರಲಿಲ್ಲ. ಯಾವ ಊರಿಗೆ ಹೋಗಿರುವನೆಂಬುದೂ ತಿಳಿಯಲಿಲ್ಲ. ಪಕ್ಕದ ಮನೆಯ ಕೆಲವು ಮುದಿ ಹೆಂಗಸರು, ಎದುರು ಮನೆಯ ಒಕ್ಕಲ ಹೆಣ್ಣುಮಕ್ಕಳು ಅಕ್ಕಾಮರಿಯ ಹತ್ತರ ನಿಂತು ಕಾಸಿ, ಕಟ್ಟಿ, ಉಪಚಾರ ಮಾಡಿದರು.

"ಸತ್ತಿದ್ದರೆ ಒಳ್ಳೆಯದಿದ್ದಿತು! ಕಷ್ಟದಿಂದ ಮುಕ್ತಳಾಗುತ್ತಿದ್ದಳು!" ಎಂದು ಬ್ರಾಹ್ಮಣ ವೃದ್ಧ ವಿಧವೆ ನುಡಿದಳು.

ಈ ಮಾತು ಅಕ್ಕಾಮರಿಗೆ ಕೇಳಿಸಿತು.

"ನಾನೂ ಅದನ್ನೇ ಆಶಿಸುವೆ ಅತ್ತೆಯವರೇ! ದೇವರು ಮರೆತ ಮೇಲೆ ಮಾಡುವದೇನು? ಬಂದ ಕಷ್ಟವನ್ನು ಉಣ್ಣಬೇಕಲ್ಲ?" ಎಂದು ದನಿ ತೆಗೆದು ಅಳಹತ್ತಿದಳು.

"ಅದೇಕೆ ಭಾಗಮ್ಮನವರೇ! ಸಾಯಲು ಮುದುಕಿಯೇ! ರೋಗಿಯೇ! ನಮ್ಮವ್ವ ಗೌರಿಯಾಗಿರುವಳು. ಇಂದಿಲ್ಲ ನಾಳೆ ಒಳ್ಳೆಯ ದಿನಗಳು ಬಂದಾವು. ರಾಜಣ್ಣನೂ ವಿವೇಕಿಯಾದಾನು! ನಮ್ಮನಿಮ್ಮಂತಹ ಮುದುಕಿಯರು ಭೂಮಿಗೆ ಭಾರವಾಗಿ, ಅನ್ನಕ್ಕೆ ತಾಳಾಗಿ ಉಳಿದು ಇಂಥ ಎಳೆಯ ಮಕ್ಕಳನ್ನು ಕೊಲ್ಲುವದು ಸರಿಯೇ! ರಾಜಣ್ಣ ಬಂದಾನು, ಸುಮ್ಮನಿರು ತಾಯೀ!" ಎಂದು ಸಮಾಧಾನದ ನುಡಿಯೊಂದು ಹೊರಟಿತು.

ಕುರುಬರ ಕೆಂಚವ್ವ ಸೂಲಗಿತ್ತಿಯ ಈ ಮಾತು ಭಾಗಮ್ಮನಿಗೆ

ಬರೆಯೆಳೆದಂತಾಯಿತು.

"ನಿಮ್ಮ ತಾಯಿಗೆ ಹೇಳಿಕಳಿಸು. ತಿಂಗಳು ನಿಂತು ಹೋಗಲಿ. ಅಂದರೆ ಎದ್ದು ನಿಲ್ಲುವಿ." ಕೆಂಚವ್ವ ಉಪದೇಶಿಸಿದಳು.

"ಯಾರು ಹೇಳಿ ಕಳಿಸಬೇಕು?" ನರಳುತ್ತ ನುಡಿದಳು ಅಕ್ಕಾಮರಿ.

"ನಿಮ್ಮ ಬಳಗದವರು ಇರುವರಲ್ಲ ಅಕ್ಕಮ್ಮ!"

"ಅವರಿಗೆ ನಾವು ಹೇಳಬಾರದು. ಅವರು ಕೇಳಬಾರದು. ಅಷ್ಟು ಅವರಿಗೂ ಇವರಿಗೂ ಗೆಳೆತನವಿದೆ."

"ನಾನು ಮಾಡಲೇನು?"

"ಮಾಡಮ್ಮ, ಉಪಕಾರವಾಗುವದು."

"ಉಪಕಾರವೇಕೆ ತಾಯೀ!"

"ಕೆಂಚಮ್ಮ, ಸತ್ತಿದ್ದರೆ ಬಾಯಲ್ಲಿ ಒಂದು ಹನಿ ನೀರು ಬಿಡಲೂ ಬಳಿಯಲ್ಲಿ ಯಾರಿರಲಿಲ್ಲ. ನಿನಗೆ ಗೊತ್ತು." ಅಳಹತ್ತಿದಳು ಅಕ್ಕಾಮರಿ.

"ಅಳಬೇಡ. ನನ್ನ ಮಗನನ್ನು ಈಗಲೇ ಕಳಿಸುವೆನು. ಸಂಜೆಗೇ ನಿಮ್ಮ ತಾಯಿ ಬರುವಂತೆ ಮಾಡುವೆನು."

"ದೇವರು ಯಾರ ಹೊಟ್ಟೆಯಲ್ಲಿಯೋ ಸೇರಿ ಹೀಗೆ ಸಹಾಯ ಮಾಡಿದರೆ ಬದುಕಬೇಕೆಂದೆನಿಸುವದು ಕೆಂಚವ್ವ!" ಅಕ್ಕಾಮರಿಯು ನುಡಿದಳು.

ಆದರೆ ಆ ಮಾತಿನ ಕಡೆಗೆ ಕೆಂಚವ್ವನ ಲಕ್ಷ್ಯವಿರಲಿಲ್ಲ. ಮುಂದಿನ ಕೆಲಸಕ್ಕೆ ಸಿದ್ಧಳಾಗಿದ್ದಳು.

* * * *

ಅಕ್ಕಾಮರಿಯು ಎಂಟೆರಲ್ಲಿ ಹಲಿವಿಳಿದ ಸಂಗತಿಯು ಪುಟ್ಟವ್ವನಿಗೆ ಕೂಡಲೆ ತಿಳಿಯಿತು. ಕೇಳಿ ಹೌಹಾರಿದಳು. ತನ್ನ ಮಗಳು ಉಳಿಯುವಳೋ ಸಾಯುವಳೋ! ಎಂಬುದು ಅನಿಶ್ಚಿತವಾಯಿತು. ಎಂಟೆರಲ್ಲಿ ನಂಜು! ನಂಜಿಗೆ ಮದ್ದಾರು ಕೊಡಬೇಕು ಹಾಳು ಹಳ್ಳಿಯಲ್ಲಿ? ನನ್ನ ಮುದ್ದುಗುವರಿ! ನನ್ನ ಬಾಳಿನ ದೀವಟಿಗೆ! ನಂದಿದರೆ?

ದೇವಾ ಏನು ಮಾಡಲಿ ? ಎಂದು ಮಮ್ಮಲ ಮರುಗಿದಳು. ಮನೆಯನ್ನು ವ್ಯವಸ್ಥೆ ಪಡಿಸಿ, ರಾತ್ರಿಯಲ್ಲಿ ಮಲಗಲು ಒಬ್ಬ ಕೂಲಿಯವನನ್ನು ನಿಯಮಿಸಿ ಧಾವಿಸಿ ಊರಿಗೆ ಬಂದಳು.

ಅಕ್ಕಾಮರಿಗೆ ನಂಜೇರಿದ್ದುದು ನಿಜವಿದ್ದಿತು. ಸೂಲಗಿತ್ತಿ ಕೆಂಚವ್ವನು ಒಬ್ಬಿಬ್ಬ ಔಷಧಿಯವರನ್ನು ಕರೆದು ಔಷಧ ಕೊಡಿಸಿದ್ದಳು. ನೆರೆಮನೆಯ ಬ್ರಾಹ್ಮಣಿತಿಯರಿಂದ ಕೆಲ ಸಹಾಯವನ್ನು ಪಡೆದು ಅನ್ನ ನೀರಿನ ವ್ಯವಸ್ಥೆಯನ್ನು ಮಾಡಿಕೊಂಡಿದ್ದಳು. ಹಗಲು ರಾತ್ರಿ ತಾನು ಆಕೆಯ ಸೇವೆಗೆ ನಿಂತಿದ್ದಳು. ಸಾವು ಅಕ್ಕಾಮರಿಯನ್ನು ನುಂಗಿ, ನೀರು ಕುಡಿದು, ನಾಲಗೆಯನ್ನು ಸವರೇನು ಎಂದು ಪ್ರಯತ್ನಿಸುತ್ತಿದ್ದಿತು. ಕೆಂಚವ್ವನು 'ನಿನ್ನ ಗಂಟಲದಲ್ಲಿ ಇಳಿಯುವ ಪ್ರಾಣದ ತುತ್ತನ್ನು ಕೈಹಾಕಿ ಎಳೆದಾದರೂ ತೆಗೆದೇನು !' ಎಂದು ಹೆಣಗುತ್ತಿದ್ದಳು. ಈ ಎಳೆದಾಟದಲ್ಲಿ ಮತ್ತೆ ಎರಡು ದಿನಗಳು ಕಳೆದವು. ಮೂರನೆಯ ದಿವಸ ಪುಟ್ಟವ್ವನು ಬಂದಳು. ಈಗ ರಕ್ಷಿಸಲು ಇಬ್ಬರಾದರು. ಸಾವು ಹೆದರಿರಬೇಕು. ಮೇಲೆಳೆಯುವ ಅದರ ಪಾಶವು ಹರಿಯಿತೇನೋ ! ಹನ್ನೆರಡನೆಯ ದಿನಕ್ಕೆ ಎಚ್ಚರಾದಳು. ತನಗಾಗುತ್ತಿರುವ ನೋವಿನ ಸಂಬಂಧ ಮಾತಾಡಹತ್ತಿದಳು. ಮೈಗೆ ಬಿಗಿದ ಕಟ್ಟುಗಳನ್ನು ತೆಗೆದರು. ಕಣ್ಣರಳಿಸುತ್ತ ಅತ್ತ ಇತ್ತ ನೋಡಹತ್ತಿದಳು. ಲಿಲ್ಲಿಯನ್ನು ಗುರುತಿಸಿದಳು. ತಾಯಿಯು ಬಂದುದು ಗೊತ್ತಾಯಿತು. ತನ್ನ ಎರಡನೆಯ ಕೂಸು ಹೋದುದು ತಿಳಿಯಿತು. ಗಂಡ ಇನ್ನೂ ಬಾರದಿದ್ದುದರ ಅರಿವಾಯಿತು. ತನ್ನ ಹಿಂದಿನ ಕಷ್ಟದ ಚಿತ್ರಗಳು ಸ್ಮರಣೆಯಲ್ಲಿ ಮೂಡಿನಿಂತವು. ದುಃಖವು ಮರುಕಳಿಸಿತು. ಕಣ್ಣಿನಿಂದ ನೀರು ಇಳಿಯಹತ್ತಿತು. ದನಿ ತೆಗೆದು ಅಳಹತ್ತಿದಳು. ಪುಟ್ಟವ್ವನು ತುಂಬಿಬಂದ ಅಕ್ಕರೆಯಿಂದ ಮಗಳನ್ನು ಎದೆಗೆ ಹಿಡಿದು "ಮರಿ, ಅಳಬೇಡ ! ನೀನು ಅಳಹತ್ತಿದರೆ ನನಗೆ ಸಂಕಟವಾಗುವದು. ಎಲ್ಲವೂ ಸರಿಯಾಗುವದು. ನಿನ್ನ ಸುಖವೇ ನನ್ನ ಸುಖ. ನಿನ್ನ ದುಃಖವೇ ನನ್ನ ದುಃಖ " ಎಂದು ತಲೆಯನ್ನು ಸವರುತ್ತ ತನ್ನ ಸೆರಗಿನಿಂದ ಅವಳ ಎಣ್ಣೆಬಸಿವ ಕಣ್ಣೀರಿನ ಮುಖವನ್ನು ಒರಸಿದಳು.

"ತಾಯೀ, ಏನು ಸರಿಯಾಗುವದು ? ಎಲ್ಲ ಕಡೆಯಿಂದ ಕೆಟ್ಟ ಮೇಲೆ ಏನು ಸರಿಯಾಗಬೇಕು ! ಅಂದು ನೀನು ನನಗೆ ಸಾಯಗೊಡ ಲಿಲ್ಲ. ಇಂದು ಯಮದೂತರೂ ಪ್ರಾಣವನ್ನು ಒಯ್ಯಲಿಲ್ಲ. ಬದುಕಿರುವೆ. ಯಾರಿಗಾಗಿ ಬದುಕಲಿ ? ಯಾರಿಗಾಗಿ ಬದುಕಬೇಕು ? ನೀನೇ ಹೇಳು, ಸತ್ತಿದ್ದರೆ ನಿನಗೆ ಎರಡು ದಿನದ ದುಃಖ. ಮುಂದೆ ಮರೆಯಬಹುದಿದ್ದಿತು. ಆದರೆ ನನಗೆ ಎಷ್ಟು ಸುಖವಿದ್ದಿತು. ಈ ದುಃಖ-ಕಷ್ಟ ಉಣ್ಣುವ ದಾದರೂ ತಪ್ಪುತ್ತಿದ್ದಿತು. ಅವ್ವಾ, ಹಿಂದಿನ ದಿನಗಳನ್ನು ನೆನೆದರೆ ಮೈ ನಡುಗುವದು. ಹೇಗೆ ಸಹಿಸಿದೆ ! ಇನ್ನು ಹೇಗೆ ಸಹಿಸಲಿ ?" ಎಂದು ಮತ್ತೆ ಅಳಹತ್ತಿದಳು.

"ಸುಮ್ಮನಿರು. ಬೇನೆಯಿಂದ ಮೊದಲೇ ಅಶಕ್ತಳಾಗಿರುವೆ. ಹೀಗೆ ಮೇಲಿಂದ ಮೇಲೆ ದುಃಖಪಟ್ಟರೆ ಆಗುವದೇನು ? ಪಾಲಿಗೆ ಬಂದದ್ದನ್ನು ಉಣ್ಣಲೇಬೇಕು. ದೇವರ ಹತ್ತರ ನಾವು ಇದನ್ನೇ ಬೇಡಿ ಬಂದಿದ್ದರೆ ಬಿಡಿಸುವವರಾರು ? ಸಹಿಸಬೇಕು ! ಹಾಲು ಕೊಡಲೆ ?" ಎಂದು ಕೇಳಿದಳು.

"ಹೇಗೆ ಸಹಿಸುವದು ! ಸಹಿಸಲಿಕ್ಕೂ ಒಂದು ಮಿತಿಯಿದೆಯಲ್ಲ"

"ಬದುಕುವದಕ್ಕೆ ಸಹಿಸಬೇಕು ?"

"ಯಾರ ಬದುಕು ?"

"ನಿನ್ನ ಬದುಕಿಗೆ ನೀನೇ ಸಹಿಸಬೇಕು." ಕಾಸಿದ ಹಾಲನ್ನು ತಂದು ಕೊಟ್ಟಳು. ಅಕ್ಕಾಮರಿಯು ಕುಡಿಯ ಹತ್ತಿದಳು.

ಪುಟ್ಟವ್ವನು ಎಲೆ ಅಡಿಕೆಯನ್ನು ಮಗಳಿಗೆ ಮಡಿಚಿಕೊಟ್ಟು ಹತ್ತರ ಕುಳಿತಳು. ಮಗಳ ಕ್ಷೀಣವಾದ ಮುಖವನ್ನು ನೋಡಿ ಕೆಡ ಕೆನಿಸಿತು. ಅವಳಿಗೆ ಸಮಾಧಾನವನ್ನು ಹೇಳುವಂತೆ "ನಾನು ಆಗಲೇ ಹೇಳಬೇಕೆಂದಿ ! ನೀನು ಕೇಳುವ ಸ್ಥಿತಿಯಲ್ಲಿಯೇ ಇರಲಿಲ್ಲ. ಅಲ್ಲಿಂದ ಇಲ್ಲಿಗೆ ಕಳಿಸುವದು ಸರ್ವಥಾ ನನ್ನ ಮನಸಿನಲ್ಲಿರಲಿಲ್ಲ. ಆದರೆ ನಾನು ಒಂದು ಮಾತು ಸಹ ಹೇಳಲು ಆಸ್ಪದ ಸಿಕ್ಕದಂತೆ ನೀನು ಕುಣಿದಾಡಿದೆ. ಆಮೇಲೆ ನಿನ್ನನ್ನು ಹೇಗೆ ನಿಲ್ಲಿಸಿಕೊಳ್ಳುವದು ? ನಿಲ್ಲಿಸಿ ಕೊಳ್ಳಬೇಕೆಂದು ಮಾತಾಡಿದ್ದರೆ ಇಬ್ಬರೂ ಮೈ ಮೇಲೆ ಬರಬಹು

ದಿದ್ದಿತು. ನಿನ್ನ ಗಂಡನ ಸ್ವಭಾವವನ್ನು ನಾನು ಬಲ್ಲೆ. ಅವನ ನಡತೆಯನ್ನೂ ಅರಿತಿರುವೆ. ಬಂಗಾರದಂತಹ ನಿನ್ನನ್ನು ಅವನ ಕೊರಳಿಗೆ ಕಟ್ಟಿ ಕೊಂದುಬಿಟ್ಟೆ. ಇದೂ ನನಗೆ ಗೊತ್ತು. ಆದರೂ ಇದನ್ನು ಯಾರ ಮುಂದೆ ಹೇಳಲಿ ? ಎರಡೂ ಮುಚ್ಚಿಕೊಂಡು ಸುಮ್ಮನಿರುವೆ. ಬ್ರಾಹ್ಮಣರು ? ಹಾಳಾದ ಈ ಬ್ರಾಹ್ಮಣ ಜಾತಿಗೆ ಬಂದುದೇ ನಮ್ಮ ತಪ್ಪು. ಈ ಅಸಹ್ಯ ರೂಪವನ್ನು ಬ್ರಾಹ್ಮಣರ ಹೊರತು ಮತ್ತಾರು ತೊಡುವರು ? ದೇವರಿಂದ ಸಿಕ್ಕ, ದೇಹದ ಸಂಗಡ ಬೆಳೆದು ಬಂದ ಕೂದಲನ್ನು ಕತ್ತರಿಸಿ ಈ ರೂಪಕ್ಕೆ ಸಿದ್ಧಮಾಡಿದೆ. ಯಾವದು ಗೊತ್ತೇ ! ಈ ಬ್ರಾಹ್ಮಣ ಧರ್ಮ ! ನೀನೂ ಬ್ರಾಹ್ಮಣಳೆಂದೇ ಈ ಗೋಳು. ಬೇರೊಬ್ಬಳಾಗಿದ್ದರೆ ಗಂಡನಿಗೆ ಸೋಡಚೀಟಿಯ ನೋಟೀಸನ್ನು ಕೊಟ್ಟು ಬೇರೊಬ್ಬನಿಗೆ ಲಗ್ನ ಮಾಡಿಕೊಡುತ್ತಿದ್ದೆ. ಆದರೆ........ಆದರೆ........" ಮುಂದೆ ಮಾತು ತಡೆದಳು.

ಬಿಸಿಬಿಸಿ ಹಾಲು ಕುಡಿಯಲು ಅಕ್ಕಾಮರಿಗೆ ಒಂದಿಷ್ಟು ಹಾಯ್ ಎನಿಸಿತು.

"ಮುಂದೇನು ಅವ್ವಾ ?"

"ನಾನು ವಿಚಾರಿಸಿರುವೆ."

"ಏನು ?"

"ನಿನಗೆ ಒಂದಿಷ್ಟು ಗುಣವಾಗಲಿ. ಮುಂದೆ ಸವಿಸ್ತಾರವಾಗಿ ಹೇಳುವೆನು."

"ಏನು ಹೇಳು !"

"ಅದನ್ನು ಹೇಳಲಿಕ್ಕೇ ಬಂದಿರುವೆ. ಎರಡು ದಿನ ಹೋಗಲಿ, ಒಂದಿಷ್ಟು ಜೀವಕ್ಕೆ ಹಗುರೆನಿಸಲಿ. ಸಂತೋಷವೆನಿಸಲಿ. ಹೇಳುವೆನು."

"ಈ ನಿರಾಶೆಯ, ನಿರ್ಜೀವದ ವಾತಾವರಣದಲ್ಲಿ ನೀನು ಏನೇ ಕೊಡು, ಏನೇ ತಿನ್ನಿಸು ಅದು ಮೈಗೆ ಹತ್ತದು. ರಕ್ತವಾಗದು. ಆಶೆಯ ಒಂದೆರಡು ಮಾತು ಹೇಳಿದರೆ ಅದನ್ನು ನಂಬಿ ಸಂತೋಷ ಪಡುವೆ. ನೀನು ಕಲ್ಲು ಕೊಟ್ಟರೂ ಅದು ಬೆಣ್ಣೆಯಾಗುವದು. ಏನು ಹೇಳು." ಆಗ್ರಹ ಮಾಡಿದಳು.

"ನೀನು ಹೋದಮೇಲೆ ಅನೇಕ ಬದಲಾವಣೆಗಳಾಗಿವೆ. ಅದೆಲ್ಲ ವನ್ನು ನಿನಗೆ ಹೇಗೆ ಹೇಳಿಕಳಿಸಲಿ? ಅಲ್ಲಿದ್ದು ನಾನು ನಿನ್ನ ಸಂಬಂಧ ವಾಗಿ ದಿನವೂ ವಿಚಾರಿಸುತ್ತಿದ್ದೆ. ಆದರೆ ಯಾವದೂ ತಿಳಿಯಲಿಲ್ಲ. ನಿನ್ನ ಮನೆಯ ಪರಿಸ್ಥಿತಿಯು ಹಾಗೆಯೇ ಇದೆ ಎಂದು ಕಂಡುಕೊಂಡೆ. ನೀನು ಸಹ ಯಾರ ಮುಂದೂ ಒಂದು ಮಾತನ್ನು ಹೇಳಿಕಳಿಸಲಿಲ್ಲ. ನಾನು ಏನೆಂದು ತಿಳಿದುಕೊಳ್ಳಬೇಕು! ದುಃಖವನ್ನು ನುಂಗಿ, ನುಂಗಿ ಈ ಅವಸ್ಥೆಯನ್ನು ತಂದುಕೊಂಡೆ. ದುಃಖವನ್ನು ಹೊಟ್ಟೆಯೊಳಗೆ ಇಟ್ಟು ಕೊಳ್ಳುವದು, ಚಿಂತೆಯನ್ನು ನುಂಗುವದು ಎರಡೂ ಒಂದೇ ಸರಿ. ಒಂದು ಮಾಂಸವನ್ನು ಸುಟ್ಟರೆ, ಇನ್ನೊಂದು ರಕ್ತವನ್ನು ಸುಡುವದು. ನಿನ್ನ ಮೈಯ ಮಾಂಸ-ರಕ್ತ ಸುಟ್ಟೇ ಈ ಪರಿಸ್ಥಿತಿಗೆ ಬಂದಿರುವೆ. ನೀನು ಇಲ್ಲಿಗೆ ಬಂದಂದಿನಿಂದ ಚಿನ್ನಯ್ಯನವರು ಮನೆಗೆ ಬಂದವರಲ್ಲ. ಮನೆಯಲ್ಲಿ ನೀನಿದ್ದರೆ ಅವರ ಸುಳಿದಾಟ. ಆದರೆ ಮೊನ್ನೆ ಬಂದಿದ್ದರು. ಬಂದರು, ಹಾಗೇ ಹೋದರು."

"ನಿಲ್ಲಲಿಲ್ಲವೇ!"

"ಇಲ್ಲ. ಎರಡು ಮಾತು ಹೇಳಿದರು. ಹೊರಟೇಹೋದರು."

"ಹ!...." ಉಸಿರುಗರೆದಳು.

"ಈಗ ಅವರು ಹಳ್ಳಿಯನ್ನು ಬಿಟ್ಟು ತಾಲೂಕಿನಲ್ಲಿ ಮನೆ ಮಾಡಿರುವರು. ನಮ್ಮಿಂದ ದೂರಾದರೆಂದೇ ನಾನು ಹೆದರಿದೆ. ಆದರೆ ಅವರು ಅಭಯವಚನವನ್ನು ಕೊಟ್ಟಿರುವರು. ನಮಗೂ ಅಲ್ಲಿಗೆ ಬರಲು ಆಮಂತ್ರಿಸಿರುವರು. ಹಳ್ಳಿಗಿಂತ ತಾಲೂಕು ಒಳ್ಳೆಯ ಸ್ಥಳ. ಸಂಕುಚಿತ ಹಳ್ಳಿಯಲ್ಲಿ ಸಣ್ಣ ಸಂಗತಿ ಸಹ ಗುಡ್ಡದಷ್ಟು ಬೆಳೆದು ಎಲ್ಲರ ಚರ್ಚೆಗೆ ಕಾರಣವಾಗಿ ನಿಲ್ಲುವದು. ತಾಲ್ಲೂಕಿನಲ್ಲಿ ಹಾಗಲ್ಲ. ಎಲ್ಲರೂ ಉದ್ಯೋಗದವರು, ವ್ಯವಸಾಯದವರು. ಅದರಿಂದ ಇನ್ನೊಬ್ಬರ ಉಸಾಬರಿಯನ್ನು ಮಾಡಲು, ಕೇಳಲು ಚರ್ಚೆಯಲ್ಲಿ ಭಾಗವಹಿಸಲು ವೇಳೆಯೇ ಉಳಿಯುವದಿಲ್ಲ. ಜನರೂ ಬಹಳ. ಕ್ಷೇತ್ರವೂ ದೊಡ್ಡದು. ಕೆಟ್ಟು ಪಟ್ಟಣವನ್ನು ಸೇರು! ಎಂದು ಹಿರಿಯ ರಾಡುವ ಮಾತು ಸತ್ಯವಾದುದು. ಅದಕ್ಕೆ ನಾವೂ ತಾಲೂಕಿಗೆ

ಹೋಗಬಾರದೇಕೆ ?" ಎಂದು ನುಡಿದು ಸುಮ್ಮನಾದಳು.

ಅಕ್ಕಾಮರಿಯು ಒಂದಿಷ್ಟು ತಡೆದು, ವಿಚಾರಿಸಿ "ಅಲ್ಲಿ ನಮ್ಮ ಸಂಸಾರವು ನಡೆಯಬಹುದೇ ?" ಎಂದಳು.

"ಏಕೆ ನಡೆಯಬಾರದು !"

"ತಾಲೂಕಿನಲ್ಲಿ ನೆಲವನ್ನು ಸಾರಿಸಲು ಸೆಗಣಿಗೆ ಹಣ ಬೇಕಾಗುವುದಂತೆ. ದುಡ್ಡು ಹಿಡಿಯದೆ ಒಂದು ಚೂರು ಸೆಗಣಿ ಸಹ ದೊರೆಯದ ತಾಲೂಕಿನಲ್ಲಿ ನಾವು ಹೇಗೆ ಬದುಕುವದು?"

"ಅಲ್ಲಿ ಹಣವನ್ನು ತೆಗೆಯಲೂ ಅನೇಕ ದಾರಿಗಳಿವೆ ಅಕ್ಕಾಮರಿ !"

"ಅದು ಹೇಗೆ ?" ಕುತೂಹಲದಿಂದ ಕೇಳಿದಳು.

"ಹಿತ್ತಲದೊಳಗಿನ ತಿಪ್ಪೆಯ ಮೇಲೆ ಬೆಳೆದ ನಾಯಿಯ ಕೊಡೆಗಳನ್ನು ಮಾರಿದರೆ ಹಣವು ಸಿಕ್ಕುವದಂತೆ !"

"ನಾಯಿಯ ಕೊಡೆ !" ಆಶ್ಚರ್ಯ ಪಟ್ಟಳು.

"ಅಹುದು. ಆಣೆಗೆ ಮೂರು ನಾಲ್ಕು."

"ಅದನ್ನು ತಿನ್ನುವರೇ ?" ಮೂಗು ಏರಿಸಿ ಕೇಳಿದಳು.

"ತಾಲೂಕಿನವರು ಯಾವದನ್ನು ತಿನ್ನುವರು, ಯಾವದನ್ನು ತಿನ್ನುವದಿಲ್ಲ ಹೇಳಲಾಸಲ್ಲ. ಅಲ್ಲಿ ಏನು ತಿಂದರೂ ಮರ್ಯಾದೆ! ಒಂದು ವ್ಯವಹಾರ ! ಯಾರೂ ಏನೂ ಅನ್ನುವದಿಲ್ಲ. ಅದು ಅವರಿಗೆ ಸೇರುವದು, ತಿನ್ನುವರು. ಇದು ಇವರಿಗೆ ಸೇರುವದಿಲ್ಲ, ತಿನ್ನುವದಿಲ್ಲ. ಇಷ್ಟೇ ! ಆದರೆ ಅವರಿಬ್ಬರೂ ಸಮಾಜದಲ್ಲಿ ಗಣ್ಯರು ! ಪ್ರತಿಷ್ಠಿತರು. ಸನ್ಮಾನ್ಯರು ! ವ್ಯವಹಾರದಲ್ಲಿ ಗೆಳೆಯರು. ಒಂದೇ ವಿಚಾರದವರು. ಒಂದೇ ಬಗೆಯ ನಾಗರಿಕರು."

"ಅವ್ವಾ...."

"ನನ್ನ ಮಾತಿನಂತೆ ನಡೆ. ನಿನಗೆ ಒಳ್ಳೆಯದಾಗುವದು. ನಿನ್ನ ಸುಖ-ಸಂತೋಷವನ್ನು ಕಂಡು ಸಾಯಬೇಕೆಂದು ನನ್ನ ಬಯಕೆ."

"ಏನೋ ಎಂತೋ ! ಈಗಂತೂ ನಿನಗೆ ಮೊರೆ ಹೊಕ್ಕಿರುವೆ. ಬೇಕಾದುದನ್ನು ಮಾಡು " ಎಂದು ನುಡಿದು ಮಗ್ಗುಲಾದಳು.

ತಿಂಗಳೊಪ್ಪತ್ತಿನಲ್ಲಿ ಅಕ್ಕಾಮರಿಯು ತಾಯಿಯ ಸೇವೆ, ಶುಶ್ರೂಷೆಗಳಿಂದ ಗುಣ ಹೊಂದಿದಳು. ಮಗಳು ಕುತ್ತಿನಿಂದ ಪಾರಾದುದಕ್ಕೆ ಸತ್ಯನಾರಾಯಣ ಪೂಜೆಯನ್ನು ಮಾಡಬೇಕೆಂದಳು. ವೇದಮೂರ್ತಿ ರಾಮಾಚಾರ್ಯರ ಅನುಕೂಲತೆಯನ್ನು ಕೇಳಿದಳು. ಆಚಾರ್ಯರು ಒಂಟಿಗಾಲಿನ ಮೇಲೆ ಸಿದ್ಧರಾದರು. ಒಂದು ಒಳ್ಳೆಯ ದಿನವನ್ನು ನೋಡಿಕೊಟ್ಟರು. ತಾವೇ ಮುಂದಾಗಿ ಪಡಸಾಲೆಯಲ್ಲಿ ಮರಿಬಾಳೆಯ ಕಂಬಗಳನ್ನು ನಿಲ್ಲಿಸಿದರು. ತಳಿರು–ತೋರಣಗಳನ್ನು ಕಟ್ಟಿದರು. ಹೂ – ಹಣ್ಣು – ಕಾಯಿಗಳನ್ನು ಅಣಿಗೊಳಿಸಿದರು. ವೈಭವದಿಂದ, ಶಾಸ್ತ್ರೋಕ್ತವಾಗಿ, ಪುರಾತನ ವೈದಿಕ ಪದ್ಧತಿಯಿಂದ ಪೂಜೆಯಾಯಿತು. ಕಥಾಶ್ರವಣವಾಯಿತು. ಖೀರು, ಕಡಬು, ಕಲಸನ್ನ, ಬುರಬುರಿ, ಪಾಯಸಗಳ ಭೋಜನವಾಯಿತು. ಊರೊಳಗಿನ ಬ್ರಾಹ್ಮಣ ಗಂಡಸರು, ಹೆಂಗಸರು ಕೂಸು ಕುನ್ನಿಗಳೊಡನೆ ಊಟಕ್ಕೆ ಬಂದಿದ್ದರು. ಎಲೆ ಅಡಿಕೆಯಾಯಿತು. ಮನೆಗೆ ಹೋಗುವ ಮುಂದೆ ಪ್ರತಿಯೊಬ್ಬರಿಗೆ ದೊನ್ನೆ ದೊನ್ನೆ ಪ್ರಸಾದವನ್ನು ಕೊಟ್ಟಳು. ರಾಮಾಚಾರ್ಯರಿಗೆ ೫ ರೂ. ಪೂಜಾ ಸಂಭಾವನೆ, ಒಂದು ರೂಪಾಯಿ ಊಟದ ದಕ್ಷಿಣೆಯನ್ನು ಕೊಟ್ಟಳು.

ರಾಮಾಚಾರ್ಯರು ನಗಾರಿಯಂತೆ ಉಬ್ಬಿದ ಹೊಟ್ಟೆಯಮೇಲೆ ಕೈಯಾಡಿಸುತ್ತ "ತಾಯೀ ಪುಟ್ಟವ್ವ, ಬಹಳ ಸಂತೋಷ ಮಾಡಿದೆ. ಕಿಲುಬು ಹಿಡಿದ ನಾಲಗೆಯು ನಿನ್ನ ಅಮಟೆಯನ್ನು ಸುರಿದು ಸುರಿದು ಸ್ವಚ್ಛವಾಯಿತು. ನುಚ್ಚು, ನವಣಕ್ಕಿಯನ್ನು ತಿಂದು ತಿಂದು ಕಂದಿ ಹೋದ ಕರುಳುಗಳು ಇಂದು ಖೀರು ಕುಡಿದು ಮೋಟರಿನ ಟ್ಯೂಬಿನಂತೆ ಉಬ್ಬಿಹೋಗಿವೆ. ವರುಷೆರಡು ವರುಷದಲ್ಲಿ ಇಂಥ ಭೋಜನವನ್ನು ಮಾಡಿರಲಿಲ್ಲ" ಎಂದು ತಂಬುಲ ಬಾಯಿಂದ ಹರಸಿದನು.

ಇಷ್ಟೆಲ್ಲ ಜನರು ತನ್ನ ಮನೆಗೆ ಬಂದುದು, ಯಥೇಚ್ಛ ಊಟ ಮಾಡಿದುದು, ಹೋಗುವ ಮುಂದೆ ಅಂತಃಕರಣದಿಂದ ಹರಸಿದುದು ಅಕ್ಕಾಮರಿಗೆ ಹರ್ಷೋನ್ಮಾದವಾಯಿತು.

ನಮ್ಮನ್ನು ಬ್ರಾಹ್ಮಣರು ಇನ್ನೂ ಗೌರವಿಸುವರಲ್ಲ ?

ಇದೇ ಭಾವನೆ ಹರ್ಷಕ್ಕೆ ಕಾರಣವಿದ್ದಿತು.

ಮುಂದೆ ನಾಲ್ಕಾರು ದಿನಗಳಲ್ಲಿ ಪುಟ್ಟವ್ವನು ಮಗಳನ್ನು ಊರಿಗೆ ಕರೆದುಕೊಂಡು ಹೋದಳು.

* * * *

ಅಕ್ಕಾಮರಿಯು ತಾಯಿಯ ಮನೆಗೆ ಬಂದ ದಿನವೇ ಊರ ಕೆಲವು ಕಿಡಿಗೇಡಿಗಳಿಗೆ ಚರ್ಚೆಗೆ ಒಂದು ಹೊಸ ವಿಷಯವು ಸಿಕ್ಕಂತಾಯಿತು.

ಈ ನಿರುಪದ್ರವೀಕ್ಷುದ್ರಕೀಟಕಗಳಾದ ಕಿಡಿಗೇಡಿಗಳು ಸಮಾಜ ಪೋಷಕರೂ ಅಲ್ಲ. ಸಮಾಜ ವಿಘಾತರೂ ಅಲ್ಲ. ವೇಳೆಯ ಕೊಲೆಗಡುಕರು. ತಮ್ಮ ಕೈಯಿಂದಾಗದ ಕೆಲಸಕ್ಕೆ, ಇನ್ನೊಬ್ಬರು ಉಂಡು-ಉಟ್ಟು, ತೊಟ್ಟು-ಕೊಟ್ಟು ಸುಖದಲ್ಲಿ ನಡೆಯುವದನ್ನು ನೋಡಿ ಸಹಿಸಿಕೊಳ್ಳಲಾರದೆ ಅವರ ಬಗ್ಗೆ ಇಲ್ಲದ ಸಲ್ಲದ ಹರಟೆಯ ತೌಡನ್ನು ತಮ್ಮಂತಹ ನಾಲ್ಕು ಜನ ನಿರುದ್ಯೋಗಿಗಳ ನಡುವೆ ಇಟ್ಟು ನಾಲಗೆಯ ಒನಕೆಯಿಂದ ಕುಟ್ಟಿ, ಶಬ್ದಾಡಂಬರದ ಹಾಡನ್ನು ಹಾಡಿ ಕಾಳು ತೆಗೆಯಲು ಪ್ರಯತ್ನಿಸುವರು. ಕಾಳು ಹೊರಡುವದಿಲ್ಲವೆಂದು ಅವರಿಗೆ ಗೊತ್ತು. ಆದರೂ ಹೆಣಗುವರು! ಇಂಥವರು ಹಳ್ಳಿಯಲ್ಲಿ ವಿಪುಲ. ಅದರ ಕೊನೆಯ ಫಲವು-'ಕತ್ತಲಾಯಿತು. ನಿದ್ದೆ ಬಂದಿತು. ಇನ್ನು ಸಾಕು' ಇಂಥ ನಿರ್ಜೀವ ಶ್ರುತಿ-ಸ್ಮೃತಿ-ಪುರಾಣೋಕ್ತ ಬೀಜಮಂತ್ರ! ಎತ್ತಿಕೊಂಡ ಸಂಗತಿಯು ಸತ್ಯವಿರಲಿ ಅಸತ್ಯವಿರಲಿ, ಯೋಗ್ಯವಿರಲಿ ಅಯೋಗ್ಯವಿರಲಿ, ತಮ್ಮ ಬುದ್ಧಿಯ ಒಳಗಿನದಿರಲಿ ಇಲ್ಲದಿರಲಿ ಮಾತಿಗೆ ಮಾತು ಪೋಷಿಸಿ, ಶಬ್ದಕ್ಕೆ ಶಬ್ದವನ್ನು ಅಂಟಿಸಿ, ಹವೆಯಲ್ಲಿ ಅವ್ಯಾಹತವಾದ ಧ್ವನಿಯ ತರಂಗಗಳನ್ನು ಎಬ್ಬಿಸಿ ಗಾಳಿಯ ಸಂಗಡ ಗಾಳಿಯಾಗಿರುವ ಒಂದು ಕಂತೆಯನ್ನು ಹೊಲಿದು ಬಿಟ್ಟರಾಯಿತು. ಅಕ್ಕಾಮರಿಯ ವಿಷಯವು ಇಂಥವರ ಬಾಯಲ್ಲಿ ಸಿಕ್ಕು ಕುತೂಹಲಜನಕವಾಗಿದ್ದಿತು.

"ವಿಜಯನಗರ ಆರ್ಟ ಸ್ಟುಡಿಯೋದವರು ತಮ್ಮ ಐದನೆಯ ಚಿತ್ರಕ್ಕಾಗಿ 'ತಾಳೀಕೋಟೆ' ಎಂಬ ಐತಿಹಾಸಿಕ ನಾಟಕವನ್ನು

ಆರಿಸಿಕೊಂಡಿರುವರು. ಆಯೇಷಾಳ ಪಾತ್ರ ವಹಿಸಲು ಒಬ್ಬ ಸುಂದರ ನಟಿಯ ಬೇಡಿಕೆಯ ಪ್ರಕಟನೆಯನ್ನು ವೃತ್ತಪತ್ರಿಕೆಯಲ್ಲಿ ಕೊಟ್ಟಿರುವರು. ನಮ್ಮೂರ ಅಕ್ಕಾಮರಿಯು ಆಯೇಷಾಳ ಪಾತ್ರವನ್ನು ವಹಿಸಲು ಸಮರ್ಥಳು. ದೇವರು ಆಕೆಗೆ ಅಂಥ ರೂಪವನ್ನು ಕೊಟ್ಟಿರುವನು. ರೂಪಕ್ಕೆ ತಕ್ಕ ವೈಯಾಟವಿದೆ. ವೈಯಾಟಕ್ಕೆ ತಕ್ಕ ಚಪಲತೆಯಿದೆ. ಚಪಲತೆಗೆ ತಕ್ಕ ವಯಸ್ಸಿದೆ. ವಯಸ್ಸಿಗೆ ತಕ್ಕ ನಟನೆಯಿದೆ. ನಟನೆಗೆ ಒಪ್ಪುವಂತೆ ಆಯೇಷಾಳ ಪಾತ್ರವನ್ನು ನಿರ್ವಹಿಸಬಲ್ಲಳು. ಮತ್ತು ಈಗ ಆಕೆಯು ಕುಮಾರಿ ಆಯೇಷಾಳಂತೆಯೇ ಇರುವಳು. ಸ್ಟುಡಿಯೋದವರಿಗೆ ಈ ಸಂಗತಿಯನ್ನು ಯಾರಾದರು ತಿಳಿಸಬೇಕು. ಅಂದರೆ ಅವರು ನಾಳೆಯೇ ತಮ್ಮ ಕ್ಯಾಮೆರಾ ಸಹಿತ ನಮ್ಮ ಹಳ್ಳಿಗೆ ಓಡಿ ಬರುವರು !" ಒಬ್ಬನು ಹರಟೆಗೆ ಚಾಲನೆಯನ್ನು ಕೊಟ್ಟನು.

"ಅಕ್ಕಾಮರಿಯು ಆಯೇಷಾ ಆದರೆ, ಚಿನ್ನಯ್ಯನವರು ರಾಮರಾಯನಾಗಬೇಕಲ್ಲ ?" ಇನ್ನೊಬ್ಬ ನುಡಿದನು.

"ನಾಟಕದಲ್ಲಿಯ ರಾಮರಾಯನ ಪಾತ್ರಕ್ಕೆ ಚಿನ್ನಯ್ಯನವರೇ ಬೇಕೆಂಬ ನಿಯಮವಿಲ್ಲ. ಆಯೇಷಾಳನ್ನು ಆರಿಸಿದಂತೆ ರಾಮರಾಯನನ್ನು ಸ್ಟುಡಿಯೋದವರೇ ಆರಿಸುವರು."

"ರಾಮರಾಯನ ಪಾತ್ರಕ್ಕೆ ಯಾವನೋ ಒಬ್ಬನನ್ನು ಆರಿಸುವದು, ಆಯೇಷಾಳ ಪಾತ್ರಕ್ಕೆ ಯಾವಳೋ ಒಬ್ಬಳನ್ನು ಆರಿಸುವದು, ಅವರಿಬ್ಬರು ಪ್ರೇಮಿಗಳೆಂದು ನಾಮಕರಣ ಮಾಡುವದು, ಇತಿಹಾಸದ ಸತ್ಯತೆಯನ್ನು ಅವರಿಬ್ಬರ ಬಾಯಿಂದ ನುಡಿಸುವದು, ಆಡಿಸುವದು, ಕೃತಿಮಾಡಿ ತೋರಹಚ್ಚುವದು, ಅದನ್ನು ನೋಡಿ ನಾವು ಹಣ ಕೊಡುವದು ! ಇದೆಲ್ಲಿಯ ನ್ಯಾಯವಪ್ಪಾ !"

"ನೋಡಿ ಹಣ ಕೊಡುವದಲ್ಲ. ಹಣಕೊಟ್ಟು ನೋಡುವದು !"

"ಇದಕ್ಕೆ ಚಿನ್ನಯ್ಯನವರು ಒಪ್ಪಬಹುದೇ ?"

"ಚಿನ್ನ ಬೇಕಾದರೆ ಅಯ್ಯನನ್ನು ಬಿಡಬೇಕು."

"ಅಂದರೆ ?"

"ಅಯ್ಯೋ ಪೆದ್ದಾ ! ಚಿನ್ನದ ಮುಂದೆ ಅಯ್ಯನಿದ್ದರೆ ಚಿನ್ನಯ್ಯ!

ಚಿನ್ನಕ್ಕೂ ಅಯ್ಯನಿಗೂ ಒಂದು ಗಂಟು. ಇಲ್ಲಿ ಚಿನ್ನ ಒಂದೇ ಇದೆ. ಆ ರಾಸಿಯಾದ ಚಿನ್ನ ಸಿಕ್ಕರೆ-ಸಿನೇಮಾದಲ್ಲಿ ಕೆಲಸ ಮಾಡಿದ್ದಕ್ಕೆ ಸಾವಿರ ಲೆಕ್ಕದಿಂದ ಹಣ ಸಿಕ್ಕರೆ-ನೋಡಿದವರು ಯಾರೇ ಇರಲಿ ಅಯ್ಯ! ಎಂದು ಬಾಯಿ ತೆರೆಯದುಂಟೇ! ಅಕ್ಕಾಮರಿಗೆ ಚಿನ್ನ ಬೇಕಾದುದೇ ಹೊರತು ಬೇರಾರೂ ಬೇಕಿಲ್ಲ. ಅಯ್ಯನಿಂದ ಚಿನ್ನ ಸಿಗುವದೆಂದು ಚಿನ್ನಯ್ಯ ಬರುವನು."

ಇಂಥ ನಿರರ್ಥಕ ಹರಟೆಗೆ ವೇಳೆ-ಅವೇಳೆಯ ನಿರ್ಬಂಧವಿಲ್ಲ. ಸ್ಥಳಗಳ ಬಂಧನವಿಲ್ಲ. ಇಂಥ ಮಾತುಗಳನ್ನು ಆಡ ಬೇಕೋ ಬಾರದೋ ಎಂಬ ಕಟ್ಟಿಲ್ಲ. ನಮ್ಮ ಮನೆಯ ಋಣಗೂಳು ತಿಂದು, ಇನ್ನೊಬ್ಬರ ಕಟ್ಟೆಯಮೇಲೆ ಕುಳಿತು, ಮೂರನೆಯವರ ವಿಷಯವನ್ನೆತ್ತಿಕೊಂಡು, ನಾಲ್ಕೂಕಾಲು ಹರಟೆಯನ್ನು ಹೊಡೆದು, ಐದೂ ಇಂದ್ರಿಯ ಶಕ್ತಿಗಳನ್ನು ವ್ಯರ್ಥವಾಗಿ ಕಳೆದುಕೊಳ್ಳುವ ಈ ಮೂರ್ಖಶಿರೋಮಣಿಗಳು ಏನೇ ಅನ್ನಲಿ, ಯಾವದೇ ನುಡಿಯಲಿ ಅಕ್ಕಾಮರಿಯ ದೈನಂದಿನ ಕಾರ್ಯ ಮತ್ತು ಪ್ರಗತಿ ಸರಾಗವಾಗಿ ನಡೆದಿದ್ದಿತು. ಪುಟ್ಟವ್ವನು ಮಗಳ ಪ್ರಕೃತಿಯು ಸುಧಾರಿಸಲೆಂದು ಹಗಲು-ರಾತ್ರಿ ಹೆಣಗಾಡುತ್ತಿದ್ದಳು. ದೈವವೂ ಸಹಾಯ ಮಾಡಿತು. ಪ್ರಕೃತಿಯ ವರದ ಹಸ್ತವೂ ಆಕೆಯ ತಲೆಯ ಮೇಲಿದ್ದಿತು. ದಿನ ಕ್ಕೊಂದು ಬಗೆಯಿಂದ ಚೆಂದವಾಗಿ ಸುಧಾರಿಸ ಹತ್ತಿದಳು.

ಪುಟ್ಟವ್ವನು ಮಗಳು ಮೊದಲಿನ ದೇಹವನ್ನು, ರೂಪವನ್ನು, ಸೌಕುಮಾರ್ಯವನ್ನು ಬೇಗನೆ ಪಡೆದುಕೊಳ್ಳಲು ಒಂದು ವ್ಯವಸ್ಥಿತ ಕ್ರಮವನ್ನು ಕೊರೆದುಕೊಂಡಳು.

ಅಕ್ಕಾಮರಿಗೆ ಅಕಾಲದಲ್ಲಿ ಹೆರಿಗೆಯಾಗಿ ಮೈ-ಮಾಂಸ ಬಳಿದು ಹೋಗಿದ್ದಿತು. ತುಂಬಿದ ಕೆನ್ನೆಗಳು ಒಣಗಿದ್ದವು. ಎಲುವುಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಕಣ್ಣಿನ ಸುತ್ತಲೂ ಕಾಳಿಮೆಯನ್ನು ದುಂಡಗೆ ತೊಡೆದಂತಾಗಿದ್ದಿತು. ತಲೆಯ ಕೂದಲು ಉಚ್ಚಿ ಮೊಂಡ ವಾಗಿದ್ದವು. ಕೈ ಕಾಲುಗಳು ಬಡಕಲಾಗಿದ್ದವು. ಮುಖದ ತೇಜವು ಕಡಿಮೆಯಾಗಿದ್ದಿತು. ಈ ಎಲ್ಲ ವಿದ್ರೂಪಗಳನ್ನು ಹೊಡೆದು ಹಾಕು

ವದು ಆಕೆಯ ಮುಖ್ಯ ಕೆಲಸವಾಗಿದ್ದಿತು. ಮಗಳು ಮೈ ತುಂಬಿಕೊಳ್ಳಬೇಕು, ಮೊದಲಿನ ರೂಪವು ಮರುಕೊಳಿಸಬೇಕು, ಉತ್ಸಾಹ, ಚಪಲತೆ ಮೊದಲಿನಂತೆ ಅಳವಡಬೇಕು. ಜೀವವು ಸೌಖ್ಯಕ್ಕಾಗಿ ಆಶಿಸಬೇಕು, ಹಿಂದಿನ ಕಷ್ಟ–ಕಾರ್ಪಣ್ಯದ ದಿನಗಳನ್ನು ಮರೆಯಬೇಕು. ಇಷ್ಟೆಲ್ಲವುಗಳಿಗೆ ಆಕೆಯು ಸುದೃಢಳಾಗುವದೊಂದೇ ಪೂರಕವೆಂದು ಆಕೆಯ ಬಯಕೆ. ಇದು ತಾಯಿತನದ ತತ್ವಕ್ಕೆ ಮಾನ್ಯವಾದುದು.

ಬಂದ ದಿನವೇ ರಕ್ತವರ್ಧಕದ ಎರಡು ದೊಡ್ಡ ಔಷಧದ ಬಾಟಲಿಗಳನ್ನು ತರಿಸಿದಳು. ನಿತ್ಯ ಆಯಾ ವೇಳೆಗೆ ತಾನೇ ಹಾಕಿ ಕುಡಿಸುವ ಕ್ರಮವನ್ನಿಟ್ಟುಕೊಂಡಳು. ಬೆಳಗಿನಲ್ಲಿ ಎಬ್ಬಿಸಿ ಸ್ನಾನ ಮಾಡಿಸಿ ಒಂದಿಷ್ಟು ನಿಂತು ಬಟ್ಟಲ ತುಂಬ ಬಿಸಿ ಹಾಲು, ಒಂದು ಹೆಸರಿನ ಉಂಡಿಯನ್ನು ತಿನ್ನಲು ಕೊಡುವದು, ಮಧ್ಯಾಹ್ನ ಹಗುರಾದ ಊಟವನ್ನು ಸಿದ್ಧಪಡಿಸುವದು, ಎಲೆ ಅಡಿಕೆಯ ಚರ್ವಣ, ಒಂದಿಷ್ಟು ವಾಮಕುಕ್ಷಿ, ಮತ್ತೆ ಹಾಲು, ಜೊತೆಗೆ ಖಾದ್ಯ, ಕೊನೆಗೆ ಸಾಯಂಕಾಲದ ಊಟ, ಮಲಗುವ ಮುಂದೆ ಅರ್ಧ ಬಟ್ಟಲು ಕಾಸಿದ ಹಾಲು. ಇವು ಊಟದ ಬಾಬುಗಳೆಂದು ನಿರ್ಣಯಿಸಿಕೊಂಡಳು.

ಎಂಟುದಿನಕ್ಕೊಮ್ಮೆ ಎಣ್ಣೆ ಹಚ್ಚಿ ಬಿಸಿ ನೀರಿನಿಂದ ಎರೆಯುವದು, ಕೂದಲು ಬೆಳೆಯಲೆಂದು ಕೆಲವು ಕೇಶವರ್ಧಿನಿ ತೈಲಗಳನ್ನು ಹಚ್ಚಿಕೊಳ್ಳಲು ಆಗ್ರಹಮಾಡುವದು ಇದು ಇನ್ನೊಂದು ಕ್ರಮವಾಗಿದ್ದಿತು.

ಕೈಯಿಂದಾದ ಸಣ್ಣ–ಪುಟ್ಟ ಕೆಲಸಗಳನ್ನು ಅಕ್ಕಾಮರಿಯು ಮನೆಯಲ್ಲಿ ಮಾಡುತ್ತಿದ್ದಳು. ಹೆಣ್ಣುಜೀವ ಗಂಡನ ಹಾಳು ಮನೆಯಲ್ಲಿ ಕುಟ್ಟುವದು, ಬೀಸುವದು, ಕಟ್ಟಿಗೆಯನ್ನು ಒಡೆಯುವದು ಮೊದಲಾದ ಮಾಡಬಾರದ ಕೆಲಸಗಳನ್ನು ಸಹ ಮಾಡಿ ಅನುಭವಪಟ್ಟಿದ್ದಳು. ಅದಕ್ಕೆ ತಾಯಿಯ ಮನೆಯಲ್ಲಿ ಕೆಲಸವಿಲ್ಲದುದನ್ನು ನೋಡಿ ಸಹಿಸುವದಾಗಲಿಲ್ಲ. ಎಲ್ಲ ಕೆಲಸಗಳಿಗೆ ತಾಯಿಯನ್ನೇ ಬಿಡುವದು ಸಮಂಜಸವೆನಿಸಲಿಲ್ಲ. ಸಣ್ಣ ಪುಟ್ಟವುಗಳನ್ನು ಮಾಡಿಯೇ ಮಾಡುತ್ತಿದ್ದಳು. ಆದರೂ ಸಮಾಧಾನವಿಲ್ಲ. ಇನ್ನೂ ಮಾಡಬೇಕು

ಅದನ್ನೂ ಮಾಡಬೇಕು, ಎಂದು ಹವಣಿಸುತ್ತಿದ್ದಳು. ತಾಯಿಯು ಗದರಿಸುತ್ತಿದ್ದಳು. ಅದರಿಂದ ಮಗಳಿಗೆ ಒಂದು ಉಣ್ಣೆಯ ಸ್ವೆಟರನ್ನು ಹೆಣೆಯಬೇಕೆಂದಳು. ಚಳಿಗಾಲವು ಸಮೀಪಿಸಿದ್ದಿತು. ತಾಯಿಯು ಒಪ್ಪಿದಳು. ಹೆಣೆದಳು. ತನಗೂ ಒಂದು ಉದ್ದತೋಳಿನ ಹಸಿರುಬಣ್ಣದ ಸ್ವೆಟರನ್ನು ಸಿದ್ಧಮಾಡಿಕೊಂಡಳು. ಬಾಗಿಲಿಗೆ ಒಂದು ಪರದೆಯನ್ನು ಹೆಣೆದು ಕಟ್ಟಿದಳು. ಟೇಬಲಿನ ಮೇಲೆ ಹಾಸಲು ಗೊಂಡೆಗಳು ಇಳಿಬಿದ್ದ ಒಂದು ಅರಿವೆಯನ್ನು ಸಿದ್ಧಪಡಿಸಿದಳು. ತನ್ನ ಹಾಸಿಗೆಯ ಮೇಲಿನ ತಲೆದಿಂಬಿನ ಮೇಲೆ "ಕನಸುಗಳೇ ಓಡಿ ಓಡಿ ಬನ್ನಿ" ಎಂದು ಬರೆದು ರೇಸಿಮೆಯನ್ನು ತುಂಬಿಕೊಂಡಳು. ಲಿಲ್ಲಿಯ ಚಾದರಕ್ಕೆ ದಂಡೆಯನ್ನು ಕಟ್ಟಿದಳು. ತಾಯಿಗೂ ನೂಲಿನ ಒಂದು ಸ್ವೆಟರನ್ನು ಮಾಡಿಕೊಟ್ಟಳು. ಇಷ್ಟಾಗಿಯೂ ವೇಳೆಯು ಉಳಿಯ ಹತ್ತಿತು.

ಕೈಯಲ್ಲಿ ಆಭರಣಗಳು ಇರಲಿಲ್ಲ. ಉಪ್ಪು ಉಂಡ ಎರಡೆರಡು ಬಳೆಗಳು ಸರಿದಾಡುತ್ತಿದ್ದವು. ಕೆಲಸದ ಸಮಯದಲ್ಲಿ ನಿತ್ಯ ಕಣ್ಣಿಗೆ ಬೀಳುತ್ತಿದ್ದವು. ಒಂದು ದಿನ ತನ್ನ ನಿರಾಭರಣಹಸ್ತವನ್ನು ತೋರಿಸಿದಳು.

ತಾಯಿಗೆ ಅತಿ ಸಂತೋಷವೆನಿಸಿತು! ಮಗಳು ತನ್ನ ಕೈಗಳು ಬರಿದಾಗಿವೆ ಎಂದು ಹೇಳಿದಳು. 'ಎಂಥ ಆನಂದದಾಯಕವಾದ ಮಾತು! ಎಂಥ ಮಂಜುಳವಾದ ಬೇಡಿಕೆ! ನಾನು ಇದನ್ನೇ ಬಯಸಿದ್ದೆ! ದೇವರು ನನ್ನ ಬಯಕೆಯನ್ನು ಕೈಗೂಡಿಸಿದನು! ನನ್ನ ಕರೆಗೆ ಓ ಕೊಟ್ಟನು! ದೇವರು ದೊಡ್ಡವನು! ಅವಳಲ್ಲಿ ಬದುಕಬೇಕೆಂಬ ಆಶೆ ಹುಟ್ಟಿದೆ!' ಎಂದು ಅವಳ ಆಂತರಿಕ ಜೀವಾತ್ಮ ಒಟಗುಡಹತ್ತಿತು.

ಮರುದಿನವೇ ಪೆಟ್ಟಿಗೆಯೊಳಗಿನ ಬಂಗಾರವನ್ನು ತೆಗೆದು ನಾಲ್ಕು ನಾಲ್ಕು ಬಂಗಾರದ ಬಿಲವರಗಳನ್ನು ಬಿಡಿಸಿ ಹಾಕಿದಳು. ಮುಂದೆ ಎಂಟು ಹತ್ತು ದಿನಗಳಲ್ಲಿ ಕಾರವಾರೀ ಪಾಟ್ಲಿಗಳನ್ನು ಮಾಡಿಸಿ ಹಾಕಿದಳು. ಮುತ್ತಿನ ಬೆಂಡೋಲೆಗಳು ಕಿವಿಯನ್ನು ಅಲಂಕರಿಸಿದವು. ಮೂಗು ಬರಿದಾಗಿದ್ದಿತು. ಅದು ವಜ್ರದ ಮೂಗುಬಟ್ಟಿಗಾಗಿಯೇ ಕುಳಿತಿದೆ! ಎಂದು ನಗೆಯಾಡಿದಳು.

ಒಂದು ದಿನ ಊಟ ಮಾಡಿ ನಡುಮನೆಯಲ್ಲಿ ಕುಳಿತಿದ್ದರು. ಅಕ್ಕಾಮರಿಯು ಅಡಿಕೆಯನ್ನು ಬಾಯಿಗೆ ಹಾಕಿಕೊಂಡು ಎಲೆಗೆ ಸುಣ್ಣ ವನ್ನು ತೊಡೆಯುತ್ತಿದ್ದಳು. ಒಂದೆ ಸರಿದ ಮಂಗಳಸೂತ್ರವನ್ನು ಮುಂದೆ ಎಳೆದುಕೊಂಡು "ಅವ್ವಾ, ಇಷ್ಟೆಲ್ಲ ಮಾಡಿದೆ. ಆದರೆ ಲಿಲ್ಲಿಯ ಮೈಮೇಲೆ ಒಂದು ಗುಂಜಿಯಷ್ಟು ಬಂಗಾರವಿಲ್ಲ. ನನ್ನ ಕೊರಳಿನಂತೆ ಆಕೆಯ ಮೈ ಬರಿದು. ತೊಡೆಯ ಮೇಲೆ ಬಂದು ಕುಳಿತರೆ ಕೈಯೊಳಗಿನ ಬಳೆಗಳನ್ನು, ಕಿವಿಯ ಮುತ್ತುಗಳನ್ನೇ ನೋಡುವದು! ಅದಕ್ಕೆ ಏನಾದರೂ ಮಾಡಿಸಬೇಕೆಂದು ಆಶೆಯಾಗು ತ್ತಿದೆ. ನನ್ನ ಕೈಯಲ್ಲಿ ನಾಲ್ಕು ನಾಲ್ಕು ಬಿಲವರಗಳೇಕೆ! ಎರಡೆರಡು ಇಟ್ಟುಕೊಂಡರೆ ಆಗದೇ ?" ಎಂದು ಕೇಳಿದಳು.

"ನನಗೆ ಇದೆಲ್ಲ ತಿಳಿಯುವೆಂದು ನುಡಿಯಬೇಡ ಅಕ್ಕಾಮರಿ! ಪೆಟ್ಟಿಗೆಯಲ್ಲಿ ಹತ್ತು ತೊಲೆಯ, ಐದೆಳೆಯ ಬಂಗಾರದ ಸರವಿದೆ. ನಾನು ಬೇಕೆಂತಲೆ ಹೊರೆಗೆ ತೆಗೆದಿಲ್ಲ. ಜನರ ಕಣ್ಣಿಗೆ ಇದೆಲ್ಲ ಬಿದ್ದರೆ ಬಂಗಾರವೂ ಹೋದೀತು, ಪ್ರಾಣವೂ ಹೋದೀತು! ನೀನು ಇಟ್ಟು ಕೊಳ್ಳಲೆಂದೇ ನನ್ನ ಬಯಕೆ. ಅಲ್ಲಿಗೂ ಐದು ತೊಲೆಯ ಬಂಗಾರ ವನ್ನು ಕಾಯ್ದಿಟ್ಟಿರುವೆ."

"ಇಷ್ಟೆಲ್ಲವನ್ನೂ ಹೇಗೆ ಸಂಪಾದಿಸಿದೆ ?" ಎಂದು ಆಶ್ಚರ್ಯದಿಂದ ಕೇಳಿದಳು.

"ಇದರಲ್ಲಿ ನನ್ನ ಸಂಪಾದನೆ ಕಡಮೆ. ಎಲ್ಲವೂ ನಿನ್ನ ಸಂಪಾದ ನೆಯೇ. ನೀನು ಅರಿಯೆಯಾ ?"

"ನನ್ನ ಸಂಪಾದನೆ ?"

"ಅಹುದು. ನಿನಗೆ ಗೊತ್ತಿಲ್ಲ."

"ಏನು ?"

"ನಿನಗೆ ರೂಪವಿದೆ. ಆದರೆ ಅದರ ಬೆಲೆಯು ಗೊತ್ತಿಲ್ಲ. ನಾನು ಆಗಾಗ್ಗೆ ಆ ರೂಪಕ್ಕೆ ತಕ್ಕದ್ದಾಗಿ ಪಡೆದಿರುವೆನು."

"ಅಂದರೆ ?"

"ಇವೆಲ್ಲ ಚಿನ್ನಯ್ಯನವರ ಹೆಂಡತಿಯ ಒಡವೆಗಳು. ಹೆಂಡತಿಯು

ಸತ್ತಮೇಲೆ ಕಾಯ್ದಿಟ್ಟಿದ್ದರು. ಪೆಟ್ಟಿಗೆಯ ಕತ್ತಲೆಯಲ್ಲಿ ಕೊಳೆಯುತ್ತ ಬಿದ್ದಿದ್ದವು. ಈಗ ನಮಗೆ ಸಿಕ್ಕಿವೆ. ಅದಿರಲಿ. ನಿನ್ನ ಬರಿದಾದ ಮೂಗು ನೋಡಲಾರೆ. ಬೇವಿನ ಕಡ್ಡಿಯನ್ನು ಅದರಲ್ಲಿ ಎಷ್ಟುದಿನ ಸಿಕ್ಕಿಸಿ ಕೊಂಡು ಇರುವದು! ಅದಕ್ಕೊಂದು ವಜ್ರದ ಮೂಗುಬಟ್ಟು ಬೇಕೆಂದು ಹೇಳಿರುವೆನು. ಈ ಸಾರೆ ಬೆಂಗಳೂರಿಗೆ ಹೋಗುವವರಿರು ವರು. ಆಗ ತರಲು ಹೇಳಿರುವೆ. ಒಂದು ಹರಳಿಗೆ ಇನ್ನೂರು-ಮುನ್ನೂರು ರೂಪಾಯಿಗಳಿಗಿಂತ ಕಡಿಮೆಯಾಗದೆಂದು ನೆನಪು ಕೊಟ್ಟಿರುವೆ. ಅವರೂ ಒಪ್ಪಿರುವರು."

ಮತ್ತೆ ನಾಲ್ಕಾರು ದಿನಗಳು ಕಳೆದವು.

ಚಿನ್ನಯ್ಯನು.... ಅಕಸ್ಮಿಕವಾಗಿ ಬಂದನು.

ಈ ಸಾರೆ ಬರಮಾಡಿಕೊಳ್ಳಲು ಅಕ್ಕಾಮರಿಯೇ ಮುಂದಾದಳು. ದಾರಿಯ ಶ್ರಮವನ್ನು ಪರಿಹರಿಸಲು ಚಹ-ತಿನಿಸುಗಳನ್ನು ತಾನೇ ತಂದುಕೊಟ್ಟಳು.

ಪುಟ್ಟಪ್ಪನಿಗೆ ಎದೆಯು ಬಿರಿಯುವಂತೆ ಹರ್ಷವಾಯಿತು.

"ತೆಗೆದುಕೊಳ್ಳಿರಿ" ಎಂದು ಮುಗುಳುನಗೆಯ ಮಲ್ಲಿಗೆಗಳನ್ನು ಅರಳಿಸುತ್ತ ಮಾತಾಡಿದಳು.

ಚಿನ್ನಯ್ಯನು ಮುಗ್ಧಮೌನದಿಂದ ಅಕ್ಕಾಮರಿಯನ್ನು ಕಣ್ಣು ಪಿಳಕಿಸದೆ ನೋಡ ಹತ್ತಿದನು.

"ಇದೇನು! ನನ್ನನ್ನು ಹೊಸದಾಗಿ ನೋಡುವಿರಿ!" ಕನ್ನೆಯ ರಂತೆ ಮಾತಾಡಿದಳು.

"ಅಲ್ಲ! ನೀನು ಬೇನೆಯಿಂದ ಬಳಲುತ್ತಿದ್ದೆಯೆಂದು ಕೇಳಿದ್ದೆ. ಆದರೆ...." ಮಾತು ನಿಲ್ಲಿಸಿದನು.

"ಬೇನೆ ಬಿಟ್ಟಿತು."

"ಇಂಥ ಬೇನೆಗಳು ನಿನಗೆ ಆಗಾಗ್ಗೆ ಬರುತ್ತಿರಲಿ ಎಂದು ನನ್ನ ಆಶೆಯಿದೆ."

"ಏಕೆ? ನಾನು ಜೀವದಿಂದ ಇರುವದು ನಿಮಗೆ ಬೇಡಾಗಿದೆ ಏನು?" ವಯ್ಯಾರದಿಂದ ನುಡಿದಳು.

"ಹಾಗಲ್ಲ! ಅಂಥ ಬೇನೆಗೆ ನೀನು ಸಾಯುವ ಹೆಣ್ಣಲ್ಲವೆಂದು ನನ್ನ ದೃಢವಾದ ನಂಬಿಗೆ. ಬೇನೆಬಿದ್ದು ಕೈಕಾಲು ಕಳೆದುಕೊಂಡ ಜನರಿರುವರು. ಶಕ್ತಿ-ಯುಕ್ತಿಗಳನ್ನು ಕಳೆದುಕೊಂಡವರುಂಟು. ಜೀವವನ್ನು ಕಳೆದುಕೊಂಡವರು ಬಹಳುಂಟು. ಆದರೆ ನಿನ್ನಂತೆ ಸೌಂದರ್ಯವನ್ನು ಪಡೆದುಕೊಂಡವರನ್ನು ಎಲ್ಲಿಯೂ ಕಾಣೆನು. ಒಂದು ಬೇನೆಗೆ ಇಷ್ಟೊಂದು ಅದ್ಭುತ ಸೌಂದರ್ಯದ ಗೊಂಬೆಯಾದರೆ ನಾಲ್ಕಾರು ಬೇನೆಗಳ ಗತಿ ಏನು! ಪುಟ್ಟವ್ವ, ದೃಷ್ಟಿಯನ್ನು ಮುರಿಯಿರಿ. ಒಲೆಯಲ್ಲಿ ಮೆಣಸಿನ ಕಾಯಿಗಳನ್ನು ಚೆಲ್ಲಿರಿ" ಎಂದು ವಿನೋದ ಮಾಡಿದನು.

"ಸಾಕು ಬಿಡಿರಿ ನಿಮ್ಮ ಚೇಷ್ಟೆ!" ಅಭಿಮಾನದಿಂದ ನುಡಿದಳು.

"ಇಲ್ಲಿ ಬಾ ಅಕ್ಕಮ್ಮ."

"ನಾನೊಲ್ಲೆ."

"ಒಂದಿಷ್ಟು ಬಾ."

"ನಾನೊಲ್ಲೆ ಬಿಡಿರಿ."

"ನಿನಗೆ ಮುತ್ತು ಬೇಕೋ, ವಜ್ರ ಬೇಕೋ?"

"ವಜ್ರ!"

"ವಜ್ರ ಹಿಡಿ."

"ವಜ್ರವೆಂದು ಮುತ್ತುಕೊಟ್ಟರೆ?"

ಚಿನ್ನಯ್ಯನು ಗಹಗಹಿಸಿ ನಗ ಹತ್ತಿದನು.

"ವಜ್ರವನ್ನೇ ಕೊಡುವೆ."

"ತೋರಿಸಿರಿ."

"ತೋರಿಸುವದಿಲ್ಲ. ನಾನು ಸ್ವತಃ...." ಎಂದು ಎದ್ದನು.

ಅಕ್ಕಮ್ಮಯು ಒಳಗೆ ಓಡಿದಳು.

ಚಿನ್ನಯ್ಯನೂ ಬೆನ್ನು ಹತ್ತಿದನು.

ಪುಟ್ಟವ್ವನು ಲಿಲ್ಲಿಯನ್ನು ಕರೆದುಕೊಂಡು ಹೊರಬಾಗಿಲಿಗೆ ನಿಂತಳು.

## ೩೩

ನಿಂಗಿಯು ರಾಜಣ್ಣನ ಆತ್ಮಚರಿತ್ರೆಯಲ್ಲಿ ಒಂದು ಮುಖ್ಯ ಪಾತ್ರ. ಅವನ ಜೀವನವು ಇಷ್ಟೊಂದು ರೋಮಾಂಚಕಾರಿಯಾಗಲು ಅವಳ ಸಹವಾಸವೇ ಕಾರಣ. ಆದರೂ ಅವಳು ತೆರೆಯ ಮರೆಯಲ್ಲಿಯೇ ಇರುವಳು. ಜೀವನದ ಉದ್ದಕ್ಕೂ ಅವಳ ಸುಳಿದಾಟ ತೀರ ಕಡಿಮೆ. ಅಪ್ಪಾರಾಯರ ಮನೆತನದ ಮಾತಿನಲ್ಲಿ ನಾಲ್ಕು-ಐದು ಸಾರೆ ಬಂದರೆ ಬಹಳವಾಯಿತು. ರಾಜಣ್ಣನ ಧ್ಯಾನಮೂರ್ತಿಯಾಗಿದ್ದುದೇ ಇದಕ್ಕೆ ಸಾಕ್ಷ್ಯವಿರಬೇಕು. ಅವರ ಸ್ನೇಹ ಮತ್ತು ಮೋಹ ಬೆಳೆಬೆಳೆದಂತೆ ಇನ್ನೊಂದು ಇಳಿಇಳಿಯುತ್ತಿದ್ದುದು ಅವನಿಗೆ ಕಂಡುಬರಲಿಲ್ಲ. ಆ ಸರಳಜೀವಿಗೆ ಈ ವ್ಯಾವಹಾರಿಕ ಸಮತೋಲ ಭಾವನೆಯ ತತ್ವವು ಅನಗತವಿರಲಿಲ್ಲ. ಇದೇ ನಿಂಗಿಯು ಅವನ ಜೀವನದ ಕೊನೆಯ ರುಕ್ಷಭಾಗಕ್ಕೆ ಎಳೆಯುತ್ತಿದ್ದಳೆಂಬ ಮಾತು ತಿಳಿಯುವದು ಅಶಕ್ಯಕೋಟಿಯೊಳಗಿನ ಸಂಗತಿ. ರಾಜಣ್ಣನು ಇನ್ನೂ ರಾಜಣ್ಣನಾಗಿಯೇ ಇದ್ದನು.

ನಿಂಗಿಯು ರಾಜಣ್ಣನನ್ನು ನಂಬಿಕೊಂಡು ಇದ್ದಳು. ಆರಂಭದಲ್ಲಿ ಒಂದಿಷ್ಟು ಸೋಗಲಾಡಿತನವನ್ನು ಮಾಡಿದರೂ ಮುಂದೆ ಅವನ ಗೆಳೆಯರ ಹಟ, ಹೆದರಿಕೆ, ಹೇಳಿಕೆಗಳಿಗೆ ಬಗ್ಗಿಯೋ, ರಾಜಣ್ಣನ ಮೇಲೆ ಹುಟ್ಟಿದ ಆಶಾಂಕುರದಿಂದಲೋ, ಗೌಡರ ಮಗನೆಂಬ ಅಹಂಕಾರದಿಂದಲೋ ಮೆಚ್ಚಿಕೊಂಡು ಸುಸ್ವಾಗತದ ಸೋಬಾನವನ್ನು ಹಾಡಿದಳು. ರಾಜಣ್ಣನು ರಾಜಕುಮಾರನಂತೆ ಅವಳ ಬಳಿಗೆ ಹೋಗಿ

ಬರಹತ್ತಿದನು. ಅವಳ ಜೀವನದ ಭಾರವನ್ನು, ಅಲಂಕಾರ ಪ್ರಸಾಧನಗಳ ಹೊಣೆಯನ್ನು ತಾನೇ ಹೊತ್ತುಕೊಂಡು ಬಂದನು. ತಂದೆಯುವರು ಜೀವಮಾನದಿಂದಿರುವವರೆಗೆ ಕಾಳು ಕಡಿಗಳನ್ನು, ಕೂಡಿದಾಗ ಹಣವನ್ನು, ಆಕೆಯು ಹಟವು ಹೆಚ್ಚಾದಾಗ ತನ್ನಲ್ಲಿ ಅಕ್ಕರೆಇಲ್ಲವೆ ಮಮತೆಯು ಸೆಲೆಯೊಡೆದಾಗ ಉನ್ಮಾದದ ಭರದಲ್ಲಿ ಪೆಟ್ಟಿಗೆಯೊಳಗಿನ ತಾಯಿ ಅಥವಾ ಹೆಂಡತಿಯ ಆಭರಣಗಳನ್ನು ಕೊಡುತ್ತಿದ್ದನು. ಕರಿಕರಿಯಾಗಿ ದಾಂಬರಿನಂತೆ ಮಿಂಚುವ ತುಂಬಿದ ಮೈಯ ಹೆಣ್ಣು ರಾಜಣ್ಣನ ಪ್ರೇಮದಿಂದ, ಸುಖದ ತಿನಿಸು-ಉಣಿಸಿನಿಂದ ಇನ್ನೂ ದುಂಡಗಾದಳು. ಒಂದು ಖಣದಲ್ಲಿ ಮೈ ಮುಚ್ಚುವ ನಿಂಗಿಗೆ ಇಂದು ಎರಡು ಖಣಗಳು ಕುಪ್ಪಸಕ್ಕೆ ಬೇಕಾದವು. ಗೌಡರ ಮಗನ ರಾಣಿ ! ಎಂಬ ಹೆಸರಿನಲ್ಲಿ ಅಭಿಮಾನ ಪಡಹತ್ತಿದಳು. ಕುರುಬಗೇರಿಯೊಳಗಿನ ಕಾಲುವೆಯ ನೀರು ಪವಿತ್ರವಾದ ಗಂಗಾನದಿಯನ್ನು ಸಂಗಮಿಸಿದಂತೆ ಆನಂದಪಡಹತ್ತಿದಳು. ಓರಗೆಯುವರು ರಾಜಣ್ಣನನ್ನು ಗಂಧರ್ವಪಾಶದಲ್ಲಿ ಕಟ್ಟಿಹಿಡಿದುದಕ್ಕೆ ಭಲೆ ! ಭಲೆ ! ಎಂದು ಹೊಗಳಹತ್ತಿದರು.

ತಂದೆ ಸತ್ತಮೇಲೆ, ಮನೆಯ ಹೊಣೆಯು ತನ್ನಮೇಲೆ ಬೀಳಲು ರಾಜಣ್ಣನು ಹೊಲಗಳನ್ನು ಮಾರಹತ್ತಿದನು. ಹೊಲಗಳನ್ನು ಹೇಗೆ ನೋಡಿಕೊಂಡು ಹೋಗಬೇಕು, ರೈತರನ್ನು ಹೇಗೆ ಕಾಣಬೇಕು ಅರಿಯ. ಜೀವನದ ಯಾವ ಸೂತ್ರವನ್ನೂ ನೋಡಿರಲಿಲ್ಲ. ಇದು ಈಗ ಅಗತ್ಯವಾದರೆ ಏನು ಮಾಡಬೇಕು ? ದುಡ್ಡು ಬೇಕಾದರೆ ಎಲ್ಲಿ ಸಂಪಾದಿಸಬೇಕು ? ಇದ್ದುದನ್ನು ಮಾರಬೇಕು. ಹಣವು ಪೇಟೆಯಲ್ಲಿದೆ ! ಶ್ರೀಮಂತರ ಮನೆಯಲ್ಲಿದೆ ! ಮಕ್ಕಳಂತೆ ಇಷ್ಟನ್ನುಮಾತ್ರ ಅರಿತಿದ್ದ. ಇದರಿಂದ ಚಳಿಗಾಲದ ಗಾಳಿಗೆ ಉದರುವ ಗಿಡಗಳ ಎಲೆಗಳಂತೆ ಹೊಲಗಳು ಕೈಬಿಡಹತ್ತಿದವು. ಆದರೆ ಮನೆಯ ನಿರ್ವಹಣಕ್ಕಿಂತ ನಿಂಗಿಯ ಸಹವಾಸದ ಋಣವು ಬಲವತ್ತರವಾಗಿದ್ದಿತು. ಅವಳ ಊದುಗೊಳವೆಯಂತಹ ಆಶಾಪಾತ್ರೆಯ ಬಾಯನ್ನು ತುಂಬಲು ಬಹಳ ಜಡವಾಗಹತ್ತಿತು. ಹೊಲಗಳು ಹೋಗುತ್ತ ನಡೆದಂತೆ ಅದರ ಬಾಯಿಯು ಇನ್ನೂ ಅಗಲವಾಗ ಹತ್ತಿತು. ಹಣವು ಸಿಕ್ಕ ರಾತ್ರಿ

ರತಿಯಾಗಿರುತ್ತಿದ್ದಳು. ಮರುದಿನ ಹೆಂಡತಿಯಂತೆ. ಮೂರನೆಯ ದಿನ ನಿಂಗಿಯಂತೆ. ನಾಲ್ಕನೆಯ ದಿನ ಜಗಳಗಂಟಿ. ಐದನೆಯ ದಿನ ಬಾಗಿಲಿಗೆ ಹೊರಗಿನಿಂದ ಕೀಲಿಯನ್ನು ಜಡಿಸುತ್ತಿದ್ದಳು. ರಾಜಣ್ಣನು ಈ ಕಿರಿಕಿರಿಯನ್ನು ಸಹಿಸಿಕೊಂಡು ಬರುತ್ತಿದ್ದನು. ಅದು ವಿಕೋಪಕ್ಕೆ ಮುಟ್ಟಲು ಹೊಲವನ್ನು ಕೈಯಲ್ಲಿ ಹಿಡಿದುಕೊಂಡು ಸಾವುಕಾರರ ಮನೆಯ ಮುಂದೆ ಸುಳಿದಾಡುತ್ತಿದ್ದನು. ಹೀಗೆ ನಾಲ್ಕಾರು ವರುಷಗಳಲ್ಲಿ ಎಲ್ಲ ತೋಟ-ಹೊಲಗಳು ಸಾವುಕಾರರು ಇಲ್ಲವೆ ರೈತರ ಪಾಲಾದವು. ಹೊಸ ಹಣವು ಹುಟ್ಟುವ ದಾರಿಯು ನಿಂತಿತು. ರಾಜಣ್ಣನು ನಿರ್ಗತಿಕ! ಎಂಬ ಮಾತು ಸಾಮಾನ್ಯರ ಬಾಯಲ್ಲಿಯು ನಿತ್ಯದ ಮಾತಾಯಿತು. ಈ ಮಾತನ್ನು ಎಲ್ಲರಿಗಿಂತ ಮೊದಲೇ ನಿಂಗಿಯು ಅರಿತಳು. ಇಂಥವನ ಸಂಗಡ ತಾನು ಇನ್ನುಮುಂದೆ ಹೇಗೆ ಕೂಡಿ ನಡೆಯಬೇಕು ? ಎಂದು ಪ್ರಶ್ನಿಸಿಕೊಂಡಳು.

ಒಂದು ದಿನ ಕನ್ನಡಿಯಲ್ಲಿ ನಿತ್ಯದಂತೆ ಮುಖವನ್ನು ನೋಡಿಕೊಂಡಳು. ತುಂಬಿದ ಕೆನ್ನೆ, ತೀಡಿದ ಹುಬ್ಬು, ನಿಂಬೆಯಕಾಯಿಯಂತಹ ಮೂಗು, ಬಾಳೆಯಸಿಪ್ಪೆಯಂತಹ ಕಿವಿ, ಹಂವಾಣದಂತಹ ಹಣೆ, ಉಬ್ಬಿ ಹೊರಚೆಲ್ಲಿದ ತುಟಿಗಳು, ಸವತೆಯ ಮಿಡಿಯಂತಹ ಗಡ್ಡ, ಬೆಣ್ಣೆಯ ಗುಳಿಗೆಯಂತಹ ಹಲ್ಲು, ಮೇಣದ ಬುಟ್ಟಿಯಂತಹ ತಲೆಗಳನ್ನು ನೋಡಿ ತಾನೇ ಪರವಶಳಾದಳು. ಆ ತುಂಬಿದ ಮುಖಕ್ಕೆ ಬೆಳ್ಳನ್ನ ಹಲ್ಲುಗಳೂ, ಅವುಗಳ ಪ್ರಕಾಶವೂ ನಯನ ಮನೋಹರವಾಗಿ ಕಂಡವು. ತನ್ನ ಸೌಂದರ್ಯವು ದಿನೇ ದಿನೇ ಹೆಚ್ಚಾಗುತ್ತದೆಯೇ ಹೊರತು ಕಡಮೆಯಾಗುವದಿಲ್ಲ ಎಂದು ದೃಢವಾದ ಭಾವನೆಯಾಯಿತು. ಬಂಗಾರದ ಟಿಕಳಿಯ ಮೂಗುಬಟ್ಟನ್ನು ತನ್ನ ಸೀರೆಯಿಂದ ಒರಸಿಕೊಂಡಳು. ಅದು ಮಿಂಚಹತ್ತಿತು. ಕಿವಿಯ ಬೆಂಡೋಲೆಗಳನ್ನು ಒರಸಿದಳು. ನಡುನಡುವಿನ ತಗ್ಗಿನಲ್ಲಿ ಇನ್ನೂ ಮಣ್ಣು ಕಂಡಿತು. ಸೀರೆಯಲ್ಲಿ ಬೆರಳು ಹಾಕಿ, ಉಗುಳಿನಿಂದ ಹಸಿಮಾಡಿ ಒರಸಿದಳು. ಮತ್ತೂ ಒರಸಿದಳು. ಅವೂ ಹೊಳೆಯ ಹತ್ತಿದವು. ನಿಂಗಿಯ ತಲೆಯಲ್ಲಿ ಏನೋ ಪ್ರಕಾಶವನ್ನು ಕೆಡವಿದವು. ಹ! ಈ ಅಪ್ರತಿಮ

ಸೌಂದರ್ಯಕ್ಕೆ ಆ ಅನಾಥ, ಅಸಹಾಯ, ನಿರ್ಗತಿಕ ರಾಜಣ್ಣ ಎಷ್ಟು ಮಾತ್ರವೂ ಪಾತ್ರನಲ್ಲ! ಅವನು ಇಂದಿಗೆ ತ್ಯಾಜ್ಯನು ಬಿಡಲೇಬೇಕು ಎಂದು ವಿಚಾರಿಸುವಷ್ಟರಲ್ಲಿ ಹಿಟಲರನು ಬಂದನು. ನಿಂಗಿಯು ಸಾವರಿಸಿಕೊಂಡು ನಿಂತಳು.

"ಬಾ ಅಣ್ಣ!" ಎಂದು ತನ್ನ ಅಸಾವಧಾನವನ್ನು ಮುಚ್ಚಿ ಕೊಳ್ಳಬೇಕೆಂದು ಕರೆದಳು.

ಹಿಟಲರನು ಒಂದು ಕಡೆಗೆ ಕುಳಿತು ನಿಂಗಿಯನ್ನು ನೋಡುತ್ತ "ಅದೇನು ನಿಂಗು? ಅರ್ಧತಾಸಿನಿಂದ ನೋಡುತ್ತಿರುವೆ, ಕನ್ನಡಿ ಯೊಳಗಿನ ನಿನ್ನ ಮುಖದ ಸಂಗಡ ಏನೇನೋ ಮಾತಾಡಿಕೊಂಡೆ? ನನಗೆ ಮಾತ್ರ ಒಂದು ಮಾತೂ ಕೇಳಿಸಲಿಲ್ಲ" ಎಂದು ಮುಗುಳು ನಗೆಯಿಂದ ಕೇಳಿದನು.

"ಏನು ಮಾತಾಡುವದು ಹಿಟಲರ! ಮುಖದ ಮೇಲೆ ಅಡ್ಡ ಗೆರೆಗಳೆಷ್ಟು ಉದ್ದಗೆರೆಗಳೆಷ್ಟು? ಎಣಿಸಿಕೊಂಡೆ."

"ಗೆರೆಗಳು?" ತಿಳಿಯದೆ ಕೇಳಿದನು.

"ಅಹುದು."

"ಗೆರೆ ಮೂಡಲು ಮುದುಕಿಯಾದೆ ಏನು?"

"ಮುದುಕಿಯ ಮಾತಲ್ಲ. ಚಿಂತೆಯ ಮಾತು."

"ಚಿಂತೆ ಏಕೆ?"

"ಮುಂದೆ ಹೇಗೆ? ಎಂದು."

"ಮುಂದೆ ಏನು?....ರಾಜಣ್ಣ!"

"ಆ ಮೂಳನನ್ನು ಕಟ್ಟಿಕೊಂಡು ಉಪವಾಸ ಸಾಯುವ ಹೊತ್ತು ಬಂದರೆ ಮುಂದೇನು ಗತಿ? ಎಂದು ಚಿಂತೆ ಹತ್ತಿದೆ."

ಮಾತು ಹಿಟಲರನಿಗೆ ಉತ್ಸಾಹಜನಕವೆನಿಸಿತು. ತನ್ನ ಮನದ ಮಾತನ್ನು ಒಡನುಡಿಯಲು ಯೋಗ್ಯಸಮಯವೆಂದನು. ಈ ಪ್ರಸಂಗ ವನ್ನೇ ಎಳೆಎಳೆಯಾಗಿ ಹಿಂಜಿ ನಡುವೆ ಫಕ್ಕನೆ ಎತ್ತಿಬಿಟ್ಟರಾಯಿತು ಎಂದು ತಿಳಿದು "ನಿಂಗು, ಈ ನಿನ್ನ ದುಂಡನ್ನ ಮೈ ಇರುವವರೆಗೆ, ಈ ತುಂಬಿದ ಗಲ್ಲಗಳಿರುವವರೆಗೆ, ಕಣ್ಣಲ್ಲಿ ಈ ಬೆಳಕು ಇರುವವರೆಗೆ ಒಬ್ಬ

ರಾಜಣ್ಣನಲ್ಲ ಹತ್ತು ಜನ ರಾಜಣ್ಣರು ಬೆನ್ನು ಹತ್ತಬಹುದು. ಅದಕ್ಕೆ ಕಾಳಜಿ ಏಕೆ? ಈ ಗುಲಾಮನು ನಿನ್ನ ಸುಖಕ್ಕೆ ಪ್ರಯತ್ನಿಸುವನು. ಅಪ್ಪಣೆಯಾಗಲಿ!" ಎಂದು ಭಿಕ್ಷುಕನಂತೆ ಹೇಳಿದನು.

"ಮತ್ತಾವ ರಾಜಣ್ಣನನ್ನು ಹುಡುಕಲಿ ಹಿಟಲರ? ನನಗೆ ಸಂತೋಷವೆನಿಸುವಂತೆ ಮಾತಾಡು."

"ನಿನ್ನ ಸಂತೋಷಕ್ಕಾಗಿಯೇ ಮಾತಾಡುವೆ ಹಿಟಲರ! ನಿನ್ನ ಸಂತೋಷಕ್ಕಾಗಿಯೇ ಅಂದು ರಾಜಣ್ಣನನ್ನು ತಂದುಕೊಟ್ಟೆ. ಇಂದು ನಿನ್ನ ಸಂತೋಷಕ್ಕಾಗಿಯೇ ಅವನನ್ನು ಬೇಕಾದರೆ ಹೊರಗೆ ಹಾಕುವೆ."

"ನನಗೆ ಅದೇಬೇಕು ಹಿಟಲರ."

"ಗುಲಾಮನು ಈ ಮಾತನ್ನು ಇಂದೇ ನಡೆಸಿ ಕೊಡುವನು."

"ಅವನನ್ನು ಹೊರಗೆ ಹಾಕಿರುವೆ. ಆದರೆ...."

"ಆದರೇನು ನಿಂಗು?" ತವಕ, ಉತ್ಸಾಹದಿಂದ ಕೇಳಿದನು.

"ಇಲ್ಲಿ ಯಾರು?"

"ಯಾರು ಹೇಳು."

"ನಾನು ಹೇಳಬೇಕೇ?"

"ಅಹುದು. ನಿನ್ನ ಸಂತೋಷ."

"ಅದರಿಂದ ನನಗೆ ಸಂತೋಷವೇ? ನಿನಗೂ ಸಂತೋಷವೇ?"

"ಸಂತೋಷವೆಂದು ಹೇಳುವೆ. ನಿನಗೆ ಸಂತೋಷವಾಗುತ್ತಿದ್ದರೆ ಹೇಳುವೆ. ಆದರೆ...."

"ಅದೇನು?"

"ನಿತ್ಯ ಕಾಗೆಯಂತೆ ಬೇವಿನ ಹಣ್ಣು ತಿಂದರೂ ನಿನಗಾಗಿ ಹೇಳುವೆ."

"ಎಂದಿನಿಂದ ತಿನ್ನುತ್ತಿರುವೆ?"

"ಅಂದಿನಿಂದಲೂ ತಿನ್ನುತ್ತಿರುವೆ."

"ಹಿಟಲರ!"

"ಅಹುದು ನಿಂಗು! ನಿನ್ನನ್ನು ನೋಡಿದ ದಿನದಿಂದ, ಮಾತಾಡಿಸಿದ ದಿನದಿಂದ, ರಾಜಣ್ಣನಿಗೆ ಒಪ್ಪಿಸಿದ ದಿನದಿಂದ ಹೊಟ್ಟೆಯಲ್ಲಿ

ಕಿಚ್ಚು ತುಂಬಿಕೊಂಡಿರುವೆ. ನನಗೆ ಅಂದು ರಾಜಣ್ಣನು ಬೇಕಿದ್ದನು. ಕಾರಣವಿದ್ದಿತು. ನಿನ್ನನ್ನು ಅಂದೇ ಕೇಳುವ ಧೈರ್ಯವಿರಲಿಲ್ಲ. ಯಾಕಂದರೆ ರಾಜಣ್ಣನ ಕಣ್ಣಲ್ಲಿ ನೀನಿದ್ದೆ. ನೀನೂ ರಾಜಣ್ಣನನ್ನು ನಂಬಿದ್ದೆ. ಈ ಉಭಯತರ ನಂಬಿಗೆಯನ್ನು ಕೆಡಿಸುವಂತಿರಲಿಲ್ಲ. ಆದಕ್ಕೆ ನಿಂಗು, ನಿನ್ನನ್ನು, ನನ್ನ ಸಕ್ಕರೆಯ ಮುದ್ದುಗಿಳಿಯನ್ನು ದುಃಖದಿಂದ, ಕಷ್ಟದಿಂದ ಅವನ ಉಡಿಯಲ್ಲಿ ಹಾಕಿದೆ. ಅಂದಿನಿಂದ ಚಡಪಡಿಸುತ್ತಿರುವೆ."

"ಈ ಮೊದಲು ಹೀಗೆ ಹೇಳಲಿಲ್ಲವೇಕೆ ಒಟಲರ ?"

"ಹೇಗೆ ಹೇಳಲಿ ? ಹಣದ ಯಜಮಾನನು ನಾಲ್ಕು ದಿಕ್ಕಿನಿಂದ ಸುಳಿಯುವ ಮುಂದೆ ನನ್ನ ಮಾತನ್ನು ನೀನು ಕೇಳುವೆಯೋ ಇಲ್ಲವೋ ಎಂದು ಹೆದರಿ ಬಾಯಿ ಬಿಚ್ಚಿರಲಿಲ್ಲ."

"ನಾನು ಕೆಟ್ಟಮೇಲೆ ಹೇಳುವದು."

"ಹೆಣ್ಣು ಕೆಡುವದಿಲ್ಲ. ತಿಂಗಳ ತಿಂಗಳು ತಾಜಾ ಆಗುವದು. ತುಪ್ಪ ಕೆಡುವದಿಲ್ಲ. ಕರಗಿಸಿದ ಸರದಿಗೊಮ್ಮೆ ಹೊಸದಾಗುವದು."

ಮಾತು ಹಿತವೆನಿಸಿತು. "ಹಾಗಾದರೆ ನನ್ನನ್ನು ರಾಜಣ್ಣನಿಂದ ಮುಕ್ತಮಾಡು !" ಎಂದು ನುಡಿದಳು.

"ಮಾಡಿದೆ."

"ಹೇಗೆ ಮಾಡುವೆ ?"

"ಇಲ್ಲಿ ಕಾಲಿಟ್ಟರೆ ಕಡಿದುಹಾಕುವೆ. ಒಂದು ಮಾತು ನೀನು ಹೇಳಬೇಕು."

"ಏನು ?"

"ರಾಜಣ್ಣ ನೀನು ಹೋಗು !"

"ಅಂದಿರುವೆ."

"ನನಗೆ...."

ನಿಂಗಿಯು ನಗಹತ್ತಿದಳು. "ಅನ್ನುವೆನು. ಆದರೆ ಕಡಿದು ಹಾಕುವೆನೆಂಬ ಮಾತು ನನಗೆ ಸರಿಬಾರದು."

"ಹಾಗಾದರೆ ?"

"ನೀನೇ ರಕ್ಷಿಸು."

"ಹೇಗೆ ?"

"ನಿನ್ನ ಪದರಿಗೆ ಬಿದ್ದಿರುವೆ."

"ನಿಂಗು !" ಎಂದು ಬಾಯಿ ತೆರೆದು ಕೈಚಾಚಿದನು.

"ಹಿಟಲರ !" ಎಂದು ನುಡಿದು ಕೈಕೊಟ್ಟಳು.

ಹಿಟಲರನು ತನ್ನ ಶಕ್ತಿಯನ್ನು ಸಂಗ್ರಹಿಸಿ ಅವಳ ಕೈಗಳನ್ನು ಅದುಮಿ ಗಟ್ಟಿಯಾಗಿ ಹಿಡಿದುಕೊಂಡು ನೇರಿಲ ಬಣ್ಣದ ತುಟಿಗಳನ್ನು ಮುದ್ದಿಟ್ಟನು.

"ಇನ್ನು ನೀನೇ ನನ್ನ ರಕ್ಷಕ !" ಎಂದು ಗಲ್ಲಗಳ ಮೇಲೆ ಕೈಯಾಡಿಸಿ ನುಡಿದಳು.

"ರಕ್ಷಿಸುವೆ ನಿಂಗು" ಎದೆಮುಟ್ಟಿ ಆಣೆಯನ್ನು ಮಾಡಿದಂತೆ ಎಂದನು.

ನಿಂಗಿಗೆ ಸಮಾಧಾನವಾಯಿತು.

ಪ್ರಥಮೋನ್ಮಾದ ಪ್ರಸಂಗದಿಂದ ಎದೆಯ ಕಾವು ಕಡಿಮೆ ಯಾಯಿತು. ಬೇರೆ ಬೇರೆಯಾಗಿ ಕುಳಿತರು.

"ಹಿಟಲರ, ನಾವು ಇದೇ ಊರಲ್ಲಿ ಇರುವದೇನು ?"

"ಹಾಗಾದರೆ ಎಲ್ಲಿ ಹೋಗುವ ?"

"ನನಗೆ ಇಲ್ಲಿ ಇರುವದು ಬೇಡಾಗಿದೆ."

"ಅಹುದು. ಕೆಲದಿನಗಳ ಮಟ್ಟಿಗಾದರೂ ನಾವು ಈ ಊರನ್ನು ಬಿಡಬೇಕು."

"ಎಲ್ಲಿಗೆ ಹೋಗುವೆ ?"

"ನೀನು ಹೇಳಿದಲ್ಲಿಗೆ ಕರೆದುಕೊಂಡು ಹೋಗುವೆನು."

"ಸಧ್ಯಕ್ಕೆ ನನ್ನ ತಾಯಿಯ ಊರಿಗೆ ಹೋಗುವ. ಅವಳು ತೀರಿಕೊಂಡು ಬಹಳ ದಿನಗಳಾದವು. ಮನೆಯು ಖಾಲಿ ಇದೆ. ಒಂದು ಭಾಗದಲ್ಲಿ ನನ್ನ ಒಬ್ಬ ಗೆಳತಿ ಇರುವಳು. ಮನೆಯಲ್ಲಿ ತಾನು, ತನ್ನ ಅಕ್ಕ ಇಬ್ಬರೇ ಇರುವರು. ಕೆಲ ದಿನ ಅಲ್ಲಿ ನಿಲ್ಲುವ. ಮುಂದೆ ಯಾವ ಊರಲ್ಲಿ ವಾಸಮಾಡಬೇಕೆಂಬುದನ್ನು ವಿಚಾರಿಸುವ. ಏನೆಂದೆ ?"

"ಆಗಲಿ ನಿಂಗು. ನಿನ್ನ ಮಾತನ್ನು ಇನ್ನು ಮೀರುವೆನೇ ?"

ಅಂದು ರಾತ್ರಿ ಹಿಟಲರನು ಸಿಂಗಿಯ ಮನೆಯಲ್ಲಿ ವಾಸ ಮಾಡಿದನು. ರಾತ್ರಿ ಉತ್ತಮವಾದ ಊಟವಾಯಿತು. ರಾಜಣ್ಣನು ತಂದುಕೊಟ್ಟ ದೀಪದ ಬೆಳಕಿನಲ್ಲಿ ಮನವಣಿ ಶೃಂಗಾರದ ಮಾತುಗಳನ್ನು ಆಡಿದರು. ರಾಜಣ್ಣನು ಮಾಡಿಸಿಕೊಟ್ಟ ಹಾಸಿಗೆಯನ್ನು ಹಾಸಿದರು. ಅವನ ಗಂಧದೆಣ್ಣೆಯ ಲೇಪನವಾಯಿತು. ಅವನೇ ತಂದಿಟ್ಟ ಗಾಜಿನ ಗ್ಲಾಸಿನಲ್ಲಿ ಕಾಸಿದ ಹಾಲಿನ ಸೇವನೆಯಾಯಿತು. ಅವನೇ ಕೊಟ್ಟ ಬಿಳಿಯ ಕಂಬಳಿಯನ್ನು ಹೊದ್ದುಕೊಂಡು ಮಲಗಿದರು. ಬಹು ದಿನಗಳ ಮನದ ಬಯಕೆಗೆ ಒಂದು ರಾತ್ರಿ ಎಷ್ಟು ಮಾತ್ರವೂ ಸಾಕಾಗಲಿಲ್ಲ. ಮೈಮುಟ್ಟಿ ಕಣ್ಣು ತೆರೆಯುವಷ್ಟರಲ್ಲಿ ಬೆಳಕಾಗಿದ್ದಿತು. ಸೂರ್ಯನ ಮೇಲೆ ಸಿಟ್ಟಾಗಿ ಕೆಂಪು ಕಣ್ಣು ಬಿಟ್ಟುಕೊಂಡು ಎದ್ದರು.

ಮರುದಿನ ಮೂರು ಸಂಜೆಗೆ ಒಂದು ಚಕ್ಕಡಿಯನ್ನು ಬಾಡಿಗೆಗೆ ಹಿಡಿದರು. ನಿಂಗಿಯು ತನ್ನ ಮನೆಯ ಎಲ್ಲ ಸಾಮಾನುಗಳನ್ನು ಹೇರಿದಳು. ಆ ಹೊಸ ಪ್ರೇಮಿಗಳು ಊರು ಬಿಟ್ಟರು. ಅಷ್ಟಮಿಯ ಚಂದ್ರನು ಅವರಿಗೆ ಬೆಳದಿಂಗಳ ಬೆಳಕನ್ನು ಅನುಕೂಲಿಸಿದನು.

ಈ ಸುದ್ದಿ ಕ್ಷಣಾರ್ಧದಲ್ಲಿ ಊರಲ್ಲಿ ಹರಡಿತು. ರಾಜಣ್ಣನ ಕಿವಿಗೂ ಬಿದ್ದಿತು. ನಿಂಗಿಯ ಮೇಲೆ ಕಿಡಿಕಿಡಿಯಾದನು. ಹಿಟಲರನನ್ನು ಹರಿದು ತಿನ್ನುವಂತೆ ತುಟಿಗಳನ್ನು ನೆಕ್ಕಿದನು. ಉಳಿದ ಮೂವರು ಗೆಳೆಯರನ್ನು ಕೂಡಹಾಕಿದನು. ಹಿಟಲರ ಮತ್ತು ನಿಂಗಿಯ ವಿಶ್ವಾಸಘಾತವನ್ನು ಬಣ್ಣ ಏರುವಂತೆ ವರ್ಣಿಸಿದನು. ಅವರನ್ನು ಹುರಿದುಂಬಿಸಿದನು. ಸಹಾಯಕ್ಕೆ ಕರೆದನು. ಅವರು ಬೇಡಾದ ಮನಸಿನಿಂದ ಒಪ್ಪಿದರು. ಒಂದು ರಾತ್ರಿ ಗೊತ್ತು ಮಾಡಿ ನಿಂಗಿಯ ತವರು ಮನೆಯ ಹಾದಿಯನ್ನು ಹಿಡಿದರು. ರಾಜಣ್ಣನು ಮುಂದಾದನು. ಉಳಿದವರು ಹಿಂದಾದರು.

ನಿಂಗಿಯ ಅಪಹರಣ, ಹಿಟಲರನ ಪ್ರಾಣಹರಣಕ್ಕೆ ನಡೆದರು.

## ೩೪

ಹಿಟಲರನು ಮುಂಜಾಗ್ರತೆಯಲ್ಲಿಯೇ ಇದ್ದನು.

ಅವನು ಸುಮ್ಮನಿರುವ ವ್ಯಕ್ತಿಯಲ್ಲ. ಸಿಂಗಿಯನ್ನು ಕರೆದುಕೊಂಡು ಬಂದುದಕ್ಕೆ ಅವನು ಹುಡುಕಲು ಬಂದೇ ಬರುವನು. ಊರವರು ಈ ಸುದ್ದಿಯನ್ನು ತಿಳಿಸುವರು. ನಾವು ಎಷ್ಟೇ ಕದ್ದುಮುಚ್ಚಿ ಈ ಊರನ್ನು ಸೇರಿರಲಿ ಜನರು ಸಾವಿರ ಕಣ್ಣಿನಿಂದ. ಸಾವಿರ ತರ್ಕದಿಂದ ನಮ್ಮ ಸ್ಥಳವನ್ನು ಅರಿಯುವರು. ಆಗ ಅವನು ಇಲ್ಲಿಗೆ ಬಂದು ಸಿಂಗಿಯನ್ನು ಎಳೆಯುವನು. ಅವನಿಗೆ ಸಹಾಯಕರಾಗಿ ಆ ಮೂವರೂ ಬರುವರು. ಉಪ್ಪು ಉಂಡವರು. ಸ್ವಭಾವತಃ ರಾಜಣ್ಣನು ದುಷ್ಟನು. ಹಟಮಾರಿಯು. ಹೆಣ್ಣಿನ ಲೋಭಿಯು. ಪ್ರಸಂಗವಿಶೇಷದಲ್ಲಿ ಕ್ರೂರನು. ಬ್ರಾಹ್ಮಣನಾದರೂ ನಮ್ಮಂತೆ ಹೇಚು-ಪೇಚು ನೋಡುವವನಲ್ಲ. ನಮ್ಮ ಸಂಗಡ ಉಂಡು-ತಿಂದು ಬೆಳೆದವನು. ಒಂದು ಕೈ ಆಗಲೇಬೇಕು. ಪ್ರಸಂಗ ಹೇಗೆ ಬರುವದೋ ಯಾರು ಬಲ್ಲರು! ಎಚ್ಚರದಿಂದಿರುವದು ಒಳ್ಳೆಯದು ಎಂದು ಜಾಗರೂಕನಾಗಿಯೇ ಇದ್ದನು. ರಾಜಣ್ಣನು ಕಿಡಿಕಿಡಿಯಾಗಿ ಹೊರಟಿರುವನೆಂದು ಯಾರೋ ಸುದ್ದಿಯನ್ನು ಹುಟ್ಟಿಸಿದರು. ಕುಡುಗೋಲು-ಕೊಡಲಿಗಳ ಹಾರಾಟವೇ ಆಗುವದು! ಎಂದು ಇನ್ನೊಬ್ಬರು ಹೇಳಿದರು.

ಈಗ ಅರ್ಧದಾರಿ ಬಂದಿರಬಹುದು ಎಂದು ಕೊನೆಯವನೊಬ್ಬನು ಮೂರು ಸಂಜೆಯ ಸುಮಾರಿಗೆ ವರದಿಯನ್ನು ಮುಟ್ಟಿಸಿದನು.

ಊರಲ್ಲಿ ಗಲಾಟೆಯಾಗುವದು ಹಿಟಲರನಿಗೆ ಬೇಕಿರಲಿಲ್ಲ. ಅದು ನಿಜವಿದ್ದಿತು. ಕೂಡಿದವರು ತನಗೆ ವಿರುದ್ಧವಾಗಿ ಹೇಳಿದರೆ ಮೀರುವದು ಕಷ್ಟ! :ತನ್ನ ಲಾಭವನ್ನು ತಾನೇ ನಿರ್ಣಯಿಸಬೇಕು. ಅದಕ್ಕೆ ಅವರನ್ನು ಮಧ್ಯದಲ್ಲಿ ತಡೆಯಬೇಕು! ನಿರ್ಣಯವು ದಾರಿಯಲ್ಲಿಯೇ ಆಗಬೇಕು ಎಂದು ನಿರ್ಧರಿಸಿಕೊಂಡು ಹೊರಡಲು ಸಿದ್ಧನಾದನು. ಒಂದು ಕರಿಯ ದೊಣ್ಣೆಯನ್ನು ಹುಡುಕಿದನು. ಹೆಗಲ ಮೇಲೆ ಕಂಬಳಿಯನ್ನು ಒಗೆದನು. ರಾತ್ರಿಯೇ ಹೊರಟನು.

"ಎಲ್ಲಿಗೆ ನಡೆದಿ ?" ಸಿಂಗಿಯು ಕೇಳಿದಳು.

"ಆ ಹಾರುವನ ಸಮಾಚಾರಕ್ಕೆ ನಡೆದಿರುವೆ."

"ಯಾವ ಹಾರುವ ?"

"ನಿನ್ನನ್ನು ಎಳೆದುಕೊಂಡು ಹೋಗಲು ರಾಜಣ್ಣ ಬಂದಿರುವ ನಂತೆ ಒಂದು ಕೈ ನೋಡಿ ಬರುವೆ."

"ನನ್ನನ್ನೇನು ಮಾರಿ ತಗೊಂಡಿರುವನೇನು ಎಳೆದುಕೊಂಡು ಹೋಗಲು ?" ಸಿಟ್ಟಿನಿಂದ ಮಾತಾಡಿದಳು.

"ಈಗ ಬರುವೆ. ನೀನು ಕಾಳಜಿಯನ್ನು ಮಾಡಬೇಡ" ಎಂದು ಹೇಳಿ ಹೊರಟನು.

ಹಳ್ಳದಾಟಿ ಕೇದಗೆಯ ಬನಕ್ಕೆ ಬರುವಷ್ಟರಲ್ಲಿ ದೂರ ನಾಲ್ವರು ಬರುವದು ಕಾಣಿಸಿತು. ಮರೆಯಾಗಿ ಯಾರೆಂದು ಪರೀಕ್ಷಿಸಿದನು. ರಾಜಣ್ಣ, ಅವರ ಸಂಗಡಿಗರೆಂದು ನಿಶ್ಚಯವಾಯಿತು. ಗಟ್ಟಿಯಾದ ಬೇಲಿಯ ಮರೆಗೆ ಅಡಗಿ ಕುಳಿತನು.

ಏಕಾದಶಿಯ ಚಂದ್ರನು ಪಶ್ಚಿಮಕ್ಕೆ ಇಳಿದಿದ್ದನು. ಬೆಳದಿಂಗಳು ಒಂದಿಷ್ಟು ಮಂದವಾಗಿದ್ದಿತು. ಜನರ ಸುಳಿದಾಟವೂ ಕಡಿಮೆಯಾಗಿತ್ತು.

ರಾಜಣ್ಣ ಮತ್ತು ಅವನ ಗೆಳೆಯರು ತಮ್ಮ ತಮ್ಮೊಳಗೆ ಯಾವದೋ ಮಾತಾಡುತ್ತ ಬರುತ್ತಿದ್ದರು. ರಾಜಣನ ಮಾತು ಒಂದಿಷ್ಟು ಬಿರುಸಾಗಿದ್ದಿತು. ಉಳಿದವರು ಕೇವಲ ಸೈಗುಟ್ಟುತ್ತಿದ್ದರು. ಅವನ ಮಾತಿನಲ್ಲಿ ಸಿಂಗಿಯ ನಿಂದೆ, ಹಿಟಲರನ ದ್ರೋಹ ಮುಂತಾದವುಗಳೇ ತುಂಬಿದ್ದವು. "ಆ ನೀಚಳನ್ನು ಎಳೆದು ತರುವೆ. ಕಟ್ಟಿ

ತರುವೆ. ದ್ರೋಹಿ ಹಿಟಲರನನ್ನು ಕೊಂದು ಹಾಕುವೆ. ಉಂಡ ಮನೆಗಳ ಎಣಿಸುವ ನೀಚ !" ಎಂದು ಕೂಗಿ ನುಡಿದನು.

ಹಿಟಲರನಿಗೆ ಕೇಳಿಸಿತು.

ಅವೇ ಮಾತುಗಳನ್ನು ಬೇರೊಂದು ಶಬ್ದದಲ್ಲಿ ನುಡಿಯ ಹತ್ತಿದನು. ದಾರಿಯು ಸಾಗುತ್ತಿದ್ದಿತು. ಹಿಂದಿನವರು ಹು ! ಎಂದು ದನಿ ಎಳೆಯುತ್ತಿದ್ದರು. ಮುಂದೆ ಬಂದರು. ಹಿಟಲರನ ಕೈ ಅಳತೆಯಲ್ಲಿ ಬಂದರು. ಬೇಲಿಯ ಮರೆಗೆ ಅಡಗಿದ ಹಿಟಲರನು ತಲೆಯೆತ್ತಿ ನೋಡಿದನು. ಸಮೀಪದಲ್ಲಿರುವರೆಂದೆನಿಸಿತು. ಒಂದು ದೊಡ್ಡ ಕಲ್ಲನ್ನು ಎತ್ತಿಕೊಂಡು ಆ ನಾಲ್ವರ ಕಡೆಗೆ ಒಗೆದನು. ಅದು ರಾಜಣ್ಣನ ಕಾಲಿಗೆ ತಾಕಿತು. ಅಯ್ಯೋ ! ಎಂದು ಬಿದ್ದನು. ಉಳಿದವರು ಓಡಿದರು. ಕೇದಗೆಯ ಬನದಿಂದ ಹಿಟಲರನು ಹೊರಗೆ ಬಂದು "ಏ ಹಾರುವ, ಯಾರನ್ನು ಕೊಲ್ಲುವೆ ?" ಎಂದು ಬಡಿಗೆಯನ್ನು ಎತ್ತಿದನು.

ಸುತ್ತಲೆಲ್ಲ ತಿಳಿಗತ್ತಲೆ. ಗಿಡಗಳ ಕೆಳಗೆ ಕರಿ ಕತ್ತಲೆ. ಕೇದಗೆಯ ಬನದಲ್ಲಿಯ ಹುಳಗಳು ಚಿರ್ರೆಂದು ಒದರುತ್ತಿದ್ದವು. ದೂರದ ತೋಟದ ಯಾತದ ಬಳಿಯಲ್ಲಿಯ ಒಂದು ಹುಣಸೆಯಮರದ ಮೇಲೆ ಗೂಬೆಯು ಕುಳಿತು ಕರ್ಕಶ ಧ್ವನಿಯಿಂದ ಕೂಗುತ್ತಿದ್ದಿತು. ತೊಗಲ ಬಾವುಲಿಗಳು ಪರ್‌ಪರ್ ಸಪ್ಪಳ ಮಾಡುತ್ತ ಆಕಾಶದಲ್ಲಿ ಹಾರಾಡುತ್ತಿದ್ದವು. ಒಣಗಿದ ಎಲೆ, ಹುಲ್ಲುಗಳ ಮೇಲೆ ಗಾಳಿಯು ಬೀಸಲು ಅವು ಉರುಳುರುಳಿ ಸಪ್ಪಳ ಮಾಡುತ್ತಿದ್ದವು. ಹೆದರಿಕೆ ಬರುವಂತಹ ಸಮಯದಲ್ಲಿ ರಾಜಣ್ಣನು ಹಿಟಲರನ ಧ್ವನಿಯನ್ನು ಗುರುತಿಸಿದನು.

ಎದ್ದು ನಿಂತು "ನೀಚ, ನಿನಗೆ ನಾಚಿಕೆ ಬರುವದಿಲ್ಲವೇ ?" ಎಂದು ತಾನೂ ಒಂದು ಕಲ್ಲು ತೆಗೆದುಕೊಂಡು ಬೀಸಿದನು.

ಹಿಟಲರನು ಕಲ್ಲನ್ನು ತಪ್ಪಿಸಿಕೊಂಡು ಮುಂದೆ ಜಿಗಿದು ಕೈಯೊಳಗಿನ ದೊಣ್ಣೆಯನ್ನು ತಿರುವಿದನು. ರಾಜಣ್ಣನು ದೂರ ಸರಿದು ಅವನನ್ನು ಹಿಡಿದನು. ಇಬ್ಬರ ಮುರಿದಾಟ, ಗುದ್ದಾಟ ಆರಂಭವಾಯಿತು.

ಹಿಟಲರನು ಕುಸ್ತಿಯನ್ನು ಆಡಿದವ, ಗೋಡೆ-ಗಿಡ ಹತ್ತಿ ನುರಿತವ, ಕಳವು-ದರವಡೆಯ ಸಮಯದಲ್ಲಿ ಅಪರಿಚಿತರ ಸಂಗಡ

ಹೆಣಗಾಡಿದವ. ಜಗಳಗಳಲ್ಲಿ ಬಡಿದು ಬಡಿಸಿಕೊಂಡು ಗಟ್ಟಿಯಾದವ. ಕೇಳುವದೇ! ಕ್ಷಣಾರ್ಧದಲ್ಲಿ ರಾಜಣ್ಣನನ್ನು ನೆಲಕ್ಕೆ ಕುಕ್ಕಿ ತಿಕ್ಕ ಹತ್ತಿದನು. ರಾಜಣ್ಣ ಹಿಟಲರನ ಅಳವಿನಲ್ಲಿ ಸಿಕ್ಕು ಚಡಪಡಿಸಿದನು. ಒದರ ಹತ್ತಿದನು. ಹಿಟಲರನು ದೂರ ಸಿಡಿದು ಬಿದ್ದ ಬಡಿಗೆಯನ್ನು ಎತ್ತಿಕೊಂಡು ನಾಲ್ಕೈದು ಥಳಿಸಿ, ಸತ್ತನೆಂದು ತಿಳಿದು ಮನೆಯ ಹಾದಿಯನ್ನು ಹಿಡಿದನು. ರಾಜಣ್ಣ ಗತಪ್ರಾಣನಂತಾಗಿ ಬಿದ್ದುಬಿಟ್ಟನು.

ಗೆಳೆಯರು ಒಂದೇ ಉಸಿರಿನಿಂದ ಓಡಿ ಊರು ಕಂಡಿದ್ದರು.

ಬೆಳಗಾಗುವವರೆಗೆ ರಾಜಣ್ಣ ಹಾಗೆಯೇ ಬಿದ್ದಿದ್ದನು. ಪ್ರಾಣವು ಇನ್ನೂ ಹೋಗಿರಲಿಲ್ಲ. ತಲೆಯೊಡೆದಿದ್ದಿತು. ಬಾಯಲ್ಲಿ ಮಣ್ಣು ಸೇರಿದ್ದಿತು. ಒಂದು ಕಾಲ ಹಿಮ್ಮಡಿಯು ಬಾತುಕೊಂಡಿದ್ದಿತು. ಬೆನ್ನ ಮೇಲೆ ಮೂರು–ನಾಲ್ಕು ಬಾಸುಂಡೆಗಳು ಎದ್ದಿದ್ದವು. ಹಸಿರಾಗಿದ್ದವು. ಏಳುವ ತ್ರಾಣವಿರಲಿಲ್ಲ. ಅಲುಗಾಡುವ ಭಾವನೆಯಿರಲಿಲ್ಲ. ಶ್ವಾಸ ಮಾತ್ರ ಮೂಗಿನಿಂದ ಒಳಗೆ ಹೊರಗೆ ಓಡಾಡುತ್ತಿದ್ದಿತು. ಬೆಳಗಿನ ತಂಗಾಳಿಗೆ ಎಚ್ಚರವಾಯಿತು. ಕಣ್ಣು ಮುಂದೆ ಇನ್ನೂ ಮುಂಜು ಗತ್ತಲೆ ಇದ್ದಂತೆ ಭಾಸವಾಗುತ್ತಿದ್ದಿತು. ವೇದನೆಯಿಂದ ಸಂಕಟದಿಂದ ನರಳಹತ್ತಿದನು. ಆರಂಭದಲ್ಲಿ ನರಳುವಿಕೆಗೆ ನಾದವಿರಲಿಲ್ಲ. ಹಗುರು ಹಗುರಾಗಿ ನಾದವು ಮೂಡ ಹತ್ತಿತು. ಬೆಳಗಿನ ಸುಮಾರಿಗೆ ಇನ್ನೂ ಸ್ಪಷ್ಟವಾಯಿತು. ಒಂದಿಷ್ಟು ಕೈ ಮೇಲೆಳೆದುಕೊಂಡನು. ವೇದನೆಯಾಯಿತು. ಕಾಲು ಮೇಲೆ ಬರಲಿಲ್ಲ. ಮೈ ತುಂಬ ಬೆಂಕಿಯನ್ನು ಕಟ್ಟಿದಂತೆ ಸಂಕಟ. ತಲೆ ತುಂಬ ಹೊಡೆತ. 'ಅಯ್ಯೋ, ಅಯ್ಯೋ' ಎಂದು ಗಟ್ಟಿಯಾಗಿ ನರಳ ಹತ್ತಿದನು. ಒಕ್ಕಲಿಗರು ದನಗಳನ್ನು ಅಟ್ಟಿಕೊಂಡು ಹೊಲಗಳಿಗೆ ನಡೆದಿದ್ದರು. ಒಂದೆರಡು ಎತ್ತುಗಳು ಮೂಸಿ ನೋಡಿ ಅಂಜಿ ಓಡಿದವು. ಒಕ್ಕಲಿಗರು ಕಂಡರು. ಸುದ್ದಿಯನ್ನು ಊರಿಗೆ ಮುಟ್ಟಿಸಿದರು. ಪಂಚನಾಮೆಯಾಯಿತು. ತಾಲೂಕಿನ ಆಸ್ಪತ್ರೆಗೆ ಸಾಗಿಸಿದರು.

ಹೊಡೆದವರು ಯಾರೆಂದು ಪೋಲೀಸರಿಗೆ ಗೊತ್ತಾಗಲಿಲ್ಲ. ರಾಜಣ್ಣನ ಸ್ಮೃತಿಯಲ್ಲಿಯೂ ಉಳಿಯಲಿಲ್ಲ.

ಆಸ್ಪತ್ರೆಯಿಂದ ಬಿಡುಗಡೆಯಾಗಲು ರಾಜಣ್ಣನಿಗೆ ಐದಾರು ತಿಂಗಳು ಹಿಡಿಯಿತು.

ಆಸ್ಪತ್ರೆಯ ಬಾಗಿಲ ಹೊರಗೆ ಬಂದನು.

ಯಾವ ಕಡೆಗೆ ಹೋಗುವದು ? ಎಲ್ಲಿ ಹೋಗುವದು ?

ಈ ಪ್ರಶ್ನೆಗಳಿಗಿಂತಲೂ ಪ್ರಬಲವಾದ ಒಂದು ಪ್ರಶ್ನೆಯು ಉದ್ಭವಿಸಿತು. ಅದು ಸ್ವಾಭಾವಿಕವಾದುದು. ಸಹಜವಾದುದು. ದೇಹದೊಳಗಿನ ಬುದ್ಧಿ. ಅನುಭವ, ಪರಿಜ್ಞಾನ ಯಾವ ರೂಪಕ್ಕೇ ಮುಟ್ಟಲಿ ಅವುಗಳನ್ನು ಮೀರಿನಿಂತು ಎಚ್ಚರಿಸುವ ಪ್ರಶ್ನೆ ! ಶರೀರದ ಅಂಗ ಪ್ರತ್ಯಂಗಗಳು ಆ ಎಚ್ಚರಿಕೆಯ ಅಧೀನವೆಂದರೂ ಸರಿ. ಅದು ಹಸಿವೆ ! ರಾಜಣ್ಣನ ಹಸಿವು ಶರೀರದ ಎಲ್ಲ ಕಾರ್ಯವನ್ನು ಕೇಂದ್ರೀಕರಿಸಿ ಹೊಟ್ಟೆಯಲ್ಲಿ ಡೊಂಬರ ಆಟವನ್ನು ನಡೆಸಿದ್ದಿತು. ಅದರ ತೃಪ್ತಿಗೆ ಅನುಕೂಲ ಮಾರ್ಗವಾಗಿ ಅವನಲ್ಲಿ ಉಳಿದಷ್ಟು ಬುದ್ಧಿಯು ನಡುವಿಗೆ ಕಟ್ಟಿಕೊಂಡ ಬೆಳ್ಳಿಯ ಉಡುದಾರವನ್ನು ಜ್ಞಾಪಿಸಿತು. ಅದನ್ನು ಮಾರಿ ಅಂದಿನ ಹಸಿವನ್ನು ಹಿಂಗಿಸಿಕೊಳ್ಳಬೇಕೆಂದನು. ನಡುವಿಗೆ ಕೈ ಹಾಕಿದನು. ಅದು ಇಂದು ಇರಲಿಲ್ಲ. ಉಡುದಾರ ಕಳೆದ ಜ್ಞಾನವು ಇಂದೇ ಆದುದು. ಎಲ್ಲಿ ಕಳೆಯಿತು, ಯಾರು ಎತ್ತಿದರು ತಿಳಿಯಲಿಲ್ಲ. ಆದರೆ ಬಹಳ ಹೊತ್ತು ಆಸ್ಪತ್ರೆಯ ಮುಂದುಗಡೆಯಲ್ಲಿ ನಿಲ್ಲುವದು ಯೋಗ್ಯವೆನಿಸಲಿಲ್ಲ. ಮುಂದೆ ಸಾಗಿದನು.

ಇಂದಿನ ರಾಜಣ್ಣ ಮೊದಲಿನ ರಾಜಣ್ಣನಲ್ಲ ಅಥವಾ ಮೊದಲಿನ ರಾಜಣ್ಣ ಇಂದಿನ ರಾಜಣ್ಣನಾಗಲಾರ. ತೀರ ಬದಲು. ತೀರ ವ್ಯತ್ಯಾಸ. ಈ ಹಳೆಯ ಪ್ರಪಂಚವನ್ನು ನೋಡಲು ಬಂದ ಹೊಸ ರಾಜಣ್ಣನ ತಲೆಯ ತುಂಬ ಬೆಳೆದು ಬಗ್ಗಿದ ಕೂದಲು. ಉದ್ದವಾದ ಗಡ್ಡ, ಹಣೆಯ ಮೇಲೆ ಒಂದು ದೊಡ್ಡ ತಲೆ. ಬಡಕಲಾದ ದೇಹ. ಒಣಗಿದ ಮುಖ. ಮುರಿದ ಹಲ್ಲಿನ ಬಾಯಿ. ಉಳಿದ ಹಲ್ಲುಗಳೂ ಹುಳುಕು. ಬಲಗಾಲು ಒಂದಿಷ್ಟು ಸೊಟ್ಟ, ನಡೆಯುವ ಮುಂದೆ ಕುಂಟುವ, ಸರಿಯಾಗಿ ನಡೆಯಲಾರ. ನಡೆದೇನೆಂಬ ಹಟವಿದೆ. ಮೈ ಮೇಲೆ ಮಾಸಿದ ಬಟ್ಟೆ ನಡು ನಡುವೆ ಹರಿದಿವೆ. ಆಗಾಗ್ಗೆ ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುವ.

ಕೂಡಿದ ಜನರನ್ನು ನೋಡುವ. ನೋಡಿ ತಲೆಕೆಳಗೆ ಹಾಕಿ ಮುಂದೆ ಸಾಗುವ. ಜನರ ಸುಳಿವಿಲ್ಲದ ಸ್ಥಾನವನ್ನು ಬಯಸುವ. ಅಲ್ಲಿ ಕೆಲ ಹೊತ್ತು ಕೂಡ್ರುವ. ಏನನ್ನೋ ವಿಚಾರಿಸುವ. ಥುಗಿಲೆಂದು ಏಳುವ. ಅವಸರದಿಂದ ನಡೆಯ ಹತ್ತುವ. ಗಕ್ಕನೆ ನಿಲ್ಲುವ. ಮೆಲ್ಲಗೆ ಮುಂದೆ ಸಾಗುವ. ಜಗತ್ತಿಗೂ ತನಗೂ ವಿಶೇಷ ಹೊಂದಿಕೆಯಿಲ್ಲದವ. ಇದ್ದರೂ ಎಂಟಾಣೆಯಷ್ಟು. ಸಾಮಾನ್ಯವಾಗಿ ಹಸಿವೆ, ನೀರಡಿಕೆ, ವಿಶೇಷ ಪರಿಚಿತರು, ಪರಿಚಿತ ಸ್ಥಳ, ಮಾನಮರ್ಯಾದೆ ಇಷ್ಟನ್ನು ಮರೆತಂತಿಲ್ಲ. ಇವುಗಳ ಸಾಗಾಟದಲ್ಲಿ ಬರುವ ಸಣ್ಣ ಪುಟ್ಟ ವ್ಯವಹಾರವನ್ನು ಬಲ್ಲವ. ಇದಕ್ಕೂ ಹೆಚ್ಚಾದ ತೀಕ್ಷ್ಣ ಬುದ್ಧಿಯನ್ನು ಕಳೆದುಕೊಂಡಿರುವನು. ಇದೊಂದು ಆ ದಯಾಘನನಾದ ಭಗವಂತನು ಆ ಅವಿವೇಕಿ ರಾಜಣ್ಣನಿಗೆ ಕೊನೆಗೆ ಕೊಟ್ಟ ಅನುಕೂಲ ಪರಿಸ್ಥಿತಿ ಎನ್ನಬಹುದು.

ಇದು ಯಾವ ಊರು? ಹಳ್ಳಿಯಂತೆ ಇಲ್ಲ. ದೊಡ್ಡ ಪಟ್ಟಣವಿರಬೇಕು. ಆದರೆ ಹೆಸರೇನು? ಯಾರು ಹೇಳಬೇಕು? ಜನರನ್ನು ಕೇಳುವದು ತನಗೇ ಒಪ್ಪಿತವಾಗಲಿಲ್ಲ. ತನ್ನ ಹಳ್ಳಿಯಲ್ಲ, ತನ್ನ ತಾಲೂಕು ಅಲ್ಲ. ಇಷ್ಟು ನಿಜವಾದ ಮಾತು. ಉಳಿದ ಯಾವದಾದರೇನು? ಎಂದು ಸಮಾಧಾನ ಪಟ್ಟುಕೊಂಡು ನಡೆದನು.

ಹಸಿವೆಯು ಇನ್ನೂ ಹೆಚ್ಚಾಯಿತು. ನದಿಯಿಂದ ನೀರು ತರುವ ಜನರ ಹಿಂಡು ಕಾಣಿಸಿತು. ಹೊಟ್ಟೆ ತುಂಬ ನೀರನ್ನಾದರೂ ಕುಡಿದರೆ ಸರಿ! ಎಂದು ನದಿಯ ಕಡೆಗೆ ಸಾಗಿದನು. ನದಿಯು ಜುಳು ಜುಳು ಹರಿಯುತ್ತಿದ್ದಿತು. ನದಿಯ ಮೇಲುಗಡೆಯ ಕಡೆಗೆ ನಡೆದನು ಅಲ್ಲಿ ಜನರು ಇರಲಿಲ್ಲ. ದಂಡೆಯ ಕಲ್ಲಮೇಲೆ ಕುಳಿತು ನೀರಲ್ಲಿ ಕಾಲುಗಳನ್ನು ಇಳಿಬಿಟ್ಟು ಸ್ವಸ್ಥವಾಗಿ ವಿಶ್ರಮಿಸಿದನು. ಕಾಲು ತಣ್ಣಗಾದವು, ತಲೆಯು ಶಾಂತವಾಯಿತು. ಒಂದೆರಡು ನಿಮಿಷಗಳವರೆಗೆ ತಡೆದು ಬಾಯಿ ಮುಕ್ಕಳಿಸಿಕೊಂಡನು. ಹಲ್ಲುಗಳ ಮೇಲೆ ಬೆರಳು ಆಡಿಸಿದನು. ನಾಲಗೆಯ ಮೇಲೆ ಕೈಯಾಡಿಸಿದನು. ಮುಖ, ಕೈ ಕಾಲು ತೊಳೆದುಕೊಂಡನು. ನೀರು ಕುಡಿಯಲು ಬೊಗಸೆಯಲ್ಲಿ ತುಂಬಿಕೊಂಡನು. ಆಚೆಯ ಕಡೆಯಲ್ಲಿ ಇಬ್ಬರು ಒಕ್ಕಲಿಗರು ರೊಟ್ಟಿಯನ್ನು

ತಿನ್ನುವದು ಕಂಡಿತು. ಹಸಿವೆಯು ಕೂಗು ಬ್ರಹ್ಮರಂಧ್ರದವರೆಗೆ ಮುಟ್ಟಿದ್ದಿತು. ಕರುಳುಗಳು 'ಅನ್ನ, ಅನ್ನ' ಎಂದು ಕೂಗಿಡುತ್ತಿದ್ದವು. ಕಣ್ಣು ಒಕ್ಕಲಿಗರ ಕೈಯೊಳಗಿನ ರೊಟ್ಟಿಯನ್ನು ಮೆದುಳಿನಲ್ಲಿ ರಮ್ಯವಾಗಿ ಚಿತ್ರಿಸುತ್ತಿದ್ದಿತು. ಲಾಲಾರಸದ ಗ್ರಂಥಿಗಳು ಉಬ್ಬೇರಿದ್ದವು. ಬಾಯು ನೀರು ತಟಕಿಕ್ಕುವ ಪ್ರಸಂಗಕ್ಕೆ ಬಂದಿದ್ದಿತು. ಅಲ್ಲಿ ಅನ್ನವಿದೆ. ನೀರೇಕೆ? ಎಂದು ವಿಕೃತ ಭಾವನೆಯು ಕೆರಳಿಸುತ್ತಿದ್ದಿತು. ಭಿಕ್ಷಾನ್ನವನ್ನು ಬೇಡಿದ ವನಲ್ಲ. ಕೈ ಮುಂದೆ ಚಾಚಿದವನಲ್ಲ. ಕದನ್ನವನ್ನು ತಿಂದರೂ ಸ್ವಂತ ಕಷ್ಟದಿಂದ! ಇದ್ದ ಸಮಯದಲ್ಲಿ ನಾಲ್ಕು ಜನರಿಗೆ ಕೊಟ್ಟು ತಿಂದ ವನು. ಈಗ ಬೇಕಾದರೆ ಬೇಡಬಾರದೇಕೆ? ಎಂದು ಮನಸು ನುಡಿ ಯಿತು. ಹಸಿವೆಯ ಸಂಕಟಕ್ಕೆ ಅವರ ಬಳಿಗೆ ಹೋದನು. ನನಗೂ ಕೊಡಿರಿ ಒಂದು ರೊಟ್ಟಿ? ಎಂದು ಬೇಡಿದನು. ಒಬ್ಬನು ಒಂದು ರೊಟ್ಟಿ, ಒಂದಿಷ್ಟು ಬುತ್ತಿಯನ್ನು ಕೊಟ್ಟನು. ಜೀವನದಲ್ಲಿ ಮೊದಲ ನೆಯ ಸರದಿಯು ಭಿಕ್ಷಾನ್ನವನ್ನು ಎತ್ತಿ ತಂದು ಕಲ್ಲಮೇಲೆ ಕುಳಿತು ತಿನ್ನಹತ್ತಿದನು. ಅಮೃತದಂತೆ ರುಚಿಹತ್ತಿತು. ಮೀನುಗಳು ಕಾಲು ಗಳನ್ನು ಕಡಿಯುತ್ತಿದ್ದವು. ಅವುಗಳಿಗೂ ಒಂದೆರಡು ತುಣುಕು ಚೆಲ್ಲಿ ವಿನೋದದಿಂದ ಮುಗಿಸಿದನು. ತೆರವಿದ್ದ ತುತ್ತಿನ ಚೀಲದ ಭಾಗ ವನ್ನು ನೀರಿನಿಂದ ತುಂಬಿದನು. ಸಮಾಧಾನವೆನಿಸಿತು. ಮೈಯಲ್ಲಿ ಹೊಸ ಚೈತನ್ಯ ತುಂಬಿದಂತೆನಿಸಿತು. ಕೈ ತೊಳೆದುಕೊಂಡು ಮೇಲೆ ದ್ದನು. ಬಂದ ದಾರಿಯನ್ನು ಹಿಡಿದನು. ಸೂರ್ಯನು ತೀರ ಪಶ್ಚಿಮಕ್ಕೆ ಇಳಿದಿದ್ದನು. ಮುಳುಗಲು ತಾಸರ್ಧ ಬೇಕಿದ್ದಿತು. ಊರೊಳಗೆ ಬಂದನು. ಬೀದಿ ಬೀದಿ ಅಲೆದಾಡ ಹತ್ತಿದನು. ಹೀಗೇ ಊರೂರು ಅಲೆಯುತ್ತ ಆರೆಂಟು ತಿಂಗಳು ಕಳೆಯಿತು.

ಅಪರಿಚಿತ ಊರುಗಳು ಹೇಗೆ ಹೇಗೋ ಎನಿಸ ಹತ್ತಿತು. ಸಂಜೆ ಯಾಯಿತು. ರಾತ್ರಿಯಲ್ಲಿ ಮಲಗಲು ತನ್ನದೆಂಬ ಒಂದು ಗೂಡು ಬೇಕೆಂಬ ಭಾವನೆಯು ಉದ್ಭವಿಸಿತು. ಮನೆಯ ನೆನಪಾಯಿತು ಮಡ ದಿಯ ನೆನಪಾಯಿತು. ಮಗಳದ್ದುದು ಸ್ಮರಣೆಯಲ್ಲಿ ಬಂದಿತು. ನಿಂಗಿಯ ಹೆಸರೂ ಬಾಯಿಯುವರೆಗೆ ಬಂದಿತು. ಸಂಸ್ಕಾರಯುಕ್ತ ಕಾಲುಗಳು

ದೇಹವನ್ನು ಹೊತ್ತು ನಿಂತವು. ಬುದ್ಧಿಯು ನಿನ್ನ ಊರಿಗೆ ನಡೆ! ಎಂದು ಆಜ್ಞಾಪಿಸಿತು. ಒಂದು ದಾರಿಯನ್ನು ಹಿಡಿದು ಸಾಗಿದನು.

ಯಾವ ಊರಿನ ದಾರಿಯನ್ನು ಹಿಡಿದ, ತನ್ನ ಊರು ಎಷ್ಟು ಮೈಲಿನ ಮೇಲೆ ಇದೆ ಎಂಬುದನ್ನು ಅರಿಯ. ಹಗಲು ನಡೆಯುತ್ತಿದ್ದ. ಹಸಿದಲ್ಲಿ ಬೇಡುತ್ತಿದ್ದ. ನೀರಡಿಸಿದಲ್ಲಿ ಕುಡಿಯುತ್ತಿದ್ದ. ದಣಿದಲ್ಲಿ ವಿಶ್ರಮಿಸುತ್ತಿದ್ದ. ರಾತ್ರಿಯಲ್ಲಿ ಗುಡಿ-ಗುಂಡಾರದಲ್ಲಿ ಮಲಗುತ್ತಿದ್ದ. ಈ ಕಾರ್ಯಗಳು ಇಂಥಲ್ಲಿಯೇ ಹೀಗೆಯೇ ಆದವೆಂದು ತಿಳಿಯ. ದೇಹದ ಮತ್ತು ಬುದ್ಧಿಯ ಅಭಿಮಾನಿ ದೇವತೆಗಳು ಸಂಗಮಿಸಿ ರಾಜಣ್ಣನಿಂದ ಮಾಡಿಸುತ್ತಿದ್ದರು. ಅದರ ರೂಪರೇಷೆಯನ್ನು ತಾವೇ ನಿರ್ಧರಿಸುತ್ತಿದ್ದರು. ಹೀಗೆ ನಡೆದು ಏಳು ದಿನಗಳ ಮೇಲೆ ತನ್ನ ಹಳ್ಳಿಯನ್ನು ಸಮೀಪಿಸಿದನು.

ರಾಜಣ್ಣನು ತನ್ನ ಜನ್ಮಭೂಮಿಗೆ ಬರುವಷ್ಟರಲ್ಲಿ ಹೊತ್ತು ಮುಳುಗಿತು. ಊರ ಮುಂದಿನ ಒಂದು ಬಾವಿಯು ಕಂಡಿತು. ಸಂಧಿ ಪ್ರಕಾಶವು ಇನ್ನೂ ನಿಚ್ಚಳವಾಗಿದ್ದಿತು. ಬಾವಿಯಲ್ಲಿ ಇಳಿದು ಕೈಕಾಲು ತೊಳೆದುಕೊಂಡನು. ಸಾಕಷ್ಟು ನೀರು ಕುಡಿದನು. ಮೇಲೆ ಬಂದು ಯಾತದ ಮೇಲಿನ ಒಂದು ಗಿಡದ ಕೆಳಗೆ ವಿಶ್ರಾಂತಿಯನ್ನು ಪಡೆದನು. ಮಬ್ಬುಗತ್ತಲಾಯಿತು. ಜನರ ಸುಳಿದಾಟ ಕಡಮೆಯಾಯಿತು. ತನಗೂ ಒಂದಿಷ್ಟು ಹಾಯೆನಿಸಿತು. ಕಾಗೆ ಗುಬ್ಬಿಗಳ ಉಲಿವೂ ಇರಲಿಲ್ಲ. ಗಿಡದ ಮೇಲಿನ ತೊಗಲ ಬಾವಲಿಗಳು ಚಿರಪರಗುಟ್ಟುತ್ತ ಹಾರಾಡಹತ್ತಿದವು. ಅವುಗಳ ಕರ್ಕಶ ಧ್ವನಿಗೆ ಬೇಸತ್ತನು. ಮನೆಯ ಹಾದಿಯನ್ನು ಹಿಡಿದನು. ಪರಿಚಿತ ದಾರಿಗಳು, ಕಾಲು ನಡೆದು ನಡೆದು ಸಂಸ್ಕಾರ ಹೊಂದಿದ್ದವು. ಬಾಗಿಲಿಗೆ ಬರುವಷ್ಟರಲ್ಲಿ ಕತ್ತಲು ಆಗಿದ್ದಿತು. ತಲೆಬಾಗಿಲಿಗೆ ಬಂದನು. ಬಾಗಿಲು ಇರಲಿಲ್ಲ. ಕಲ್ಲಿನ ಅರ್ಧಗೋಡೆ ನಿಂತಿದ್ದಿತು. ಇನ್ನೊಂದು ಕಡೆಗೆ ಜನರು ಹೋಗಿ ಬರಲು ದಾರಿಯನ್ನು ಮಾಡಿಕೊಂಡಿದ್ದರು. ತಾನೂ ಅದೇ ದಾರಿಯಿಂದ ಒಳಸೇರಿದನು. ತಂಬಿಗೆಯನ್ನು ಹಿಡಿದುಕೊಂಡು ಒಬ್ಬನು ಎದುರಿಗೆ ಬಂದನು. ಅವನು "ಯಾರು ?" ಎಂದು ಕೇಳಿದನು. ಆದರೆ

ಉತ್ತರವನ್ನು ಸ್ವೀಕರಿಸದೆ ಲಗುಬಗೆಯಿಂದ ಹೋದನು.

ರಾಜಣ್ಣನು ಅವನ ಮಾತನ್ನು ಕೇಳಿದನೋ ಇಲ್ಲವೋ ಮುಂದೆ ಸಾಗಿ ಎದುರಿನ ಕಟ್ಟೆಯಮೇಲೆ ಕುಳಿತನು. ನಾಲ್ಕಾರು ಉಸಿರುಗಳನ್ನು ಎಳೆದಿರಬೇಕು. ಬಿದ್ದ ಬಚ್ಚಲ ಮನೆಯ ಗೋಡೆಯ ಮರೆಯಿಂದ ಅಪರಿಚಿತನು ಬಂದನು. ರಾಜಣ್ಣನನ್ನು ನೋಡಿದನು. ಒಂದಿಷ್ಟು ಭಯಗೊಂಡೇ "ಯಾರು?" ಎಂದು ಕೇಳಿದನು.

ರಾಜಣ್ಣನು ಅವನನ್ನು ಪಿಳಪಿಳನೆ ಕಣ್ಣುಬಿಟ್ಟು ನೋಡಿದನು.

ಅಪರಿಚಿತನು ತೀರ ಸಮೀಪಕ್ಕೆ ಬಂದು "ಯಾರಪ್ಪ ನೀನು ?" ಎಂದನು.

"ನಾನು...." ಮುಂದೆ ಮಾತಾಡಲಿಲ್ಲ.

"ಯಾರು ?"

"ಹೇಗೆಯೋ ಬಂದಿರುವೆ."

"ಹುಚ್ಚಾ, ಇದು ಧರ್ಮಸಾಲೆ ಎಂದು ತಿಳಿದೆ ಏನು ?"

"ಅಲ್ಲ....!"

"ಗುಡಿಗೆ ಹೋಗು. ಇದು ಹಾಳು ಮನೆ. ಹೇಲುವ ಕೇರಿ !"

"ಹೇಲುವ ಕೇರಿ ?"

"ಹ....ಹ........ಒಂದಾನೊಂದು ಕಾಲದಲ್ಲಿ ಇದು ರಾಜನ ಮನೆಯಂತೆ ದೊಡ್ಡದಾಗಿದ್ದಿತು. ಅಪ್ಪಾರಾಯರೆಂಬ ಸದ್‌ಗೃಹಸ್ಥರಿದ್ದರು. ಅವರು ಮನೆಯ ಯಜಮಾನರು. ಅವರ ದೊಡ್ಡಸ್ತಿಕೆಯು ಬಹಳ ಹೆಚ್ಚಿನದು. ಸುತ್ತಲಿನ ಹಳ್ಳಿಯವರು ಅವರ ದರ್ಪಕ್ಕೆ ಸೈ ಎನ್ನುತ್ತಿದ್ದರು. ನಮ್ಮೂರಿಗೆ ಅವರು ರಾಜರೇ ಸರಿ. ಅವರಿಗೊಬ್ಬ ರಾಜಣ್ಣನೆಂಬ ಮಗನಿದ್ದ........"

"ಹ....ಹ...." ರಾಜಣ್ಣನು ಕುತೂಹಲದಿಂದ ಕೇಳಹತ್ತಿದನು.

"ಅವನು ತಂದೆಯ ಗಳಿಕೆಯ ಮೇಲೆ ಅವರ ಪುಣ್ಯದ ಮೇಲೆ, ಅವರ ಕೀರ್ತಿಯ ಮೇಲೆ ಉಂಡುಟ್ಟು ಸುಖವಾಗಿರಬೇಕಾಗಿದ್ದಿತು. ಆದರೆ ಅವನಿಗೆ ಜ್ಞಾನವೆಲ್ಲಿ, ವಿವೇಕವೆಲ್ಲಿ! ಎಲ್ಲವನ್ನೂ ಹಾಳು ಮಾಡಿದನು. ಅವನ ದುರ್ಗುಣ, ದುರ್ನಡತೆಗಳಿಗೆ ಲಕ್ಷ್ಮಿಯಂತಿದ್ದ

ಹೆಂಡತಿಯೂ ಬಿಟ್ಟು ಹೋದಳು. ಅವನೊಬ್ಬನಿಂದ ಇಷ್ಟೆಲ್ಲ ಹಾಳಾಯಿತು. ಮನೆ ಹೀಗಾಯಿತು. ಹೊಲಗಳು ಕೈಬಿಟ್ಟವು. ಮೊದಲು ಈ ಮನೆಯಲ್ಲಿ ಕಾಲಿಡಲು ಹೆದರುತ್ತಿದ್ದೆವು. ಅಷ್ಟು ಈ ಮನೆಯ ಗೌರವ, ಹೆದರಿಕೆ. ಈಗ ನಮ್ಮೂರ ಹೇಲುವ ಕೇರಿಯಾಗಿದೆ."

"ಇದು ಈಗ ಹೇಲುವ ಕೇರಿಯೇ ?"

"ಹ....ಹ....ಧರ್ಮಸಾಲೆಯಲ್ಲ. ಗುಡಿಗೆ ಹೋಗು. ರಾತ್ರಿಯಲ್ಲಿ ಇಲ್ಲೆ ನಿಂತೆಯೆಂದರೆ ಸತ್ತುಹೋಗಬಹುದು. ರಾಯರು ಅವರ ನಾಯಿಯು ವಾಸನಾಭೂತಗಳಾಗಿ ಸಂಚರಿಸುವರು. ಇಲ್ಲಿಯ ಅನೇಕ ಜನರು ನೋಡಿರುವರು. ವ್ಯರ್ಥ ಸಾಯುವಿ !" ರಾಜಣ್ಣನಿಗೆ ಇಷ್ಟೆಲ್ಲ ಬೇಡಾಗಿದ್ದರೂ ಆ ಹಳ್ಳಿಯವನು ವರ್ಣಿಸಿದನು.

"ಒಳ್ಳೇದು !" ಎಂದು ಅವನ ಮಾತಿಗೆ ಬೇಸತ್ತು ಮೇಲೆದ್ದನು.

ಅಪರಿಚಿತನು ಮನೆಯ ಹಾದಿಯನ್ನು ಹಿಡಿದನು.

ರಾಜಣ್ಣನು ಪುನಃ ಕುಳಿತನು.

ಮೈ ಕೈಗಳು ನೋಯುತ್ತಿದ್ದವು. ದಣಿವೂ ಸಾಕಷ್ಟಾಗಿದ್ದಿತು. ಕಟ್ಟೆಯನ್ನು ಏರಿ ಮುಂದೆ ನಡೆದನು. ಕಣ್ಣು ಮುಚ್ಚ ಹತ್ತಿದವು. ಅಡಿಗೆಯ ಮನೆಯ ಒಂದು ಅಂಕಣವು ಗಟ್ಟಿಯಾಗಿದ್ದಿತು. ಅಲ್ಲಿಯ ವರೆಗೆ ಬಂದನು. ನೆರೆಮನೆಯವರು ಒಂದಿಷ್ಟು ಹುಲ್ಲು ಒಟ್ಟಿದ್ದರು. ಅದರ ಮೇಲೆ ಹಾಯಾಗಿ ಕುಳಿತನು. ಹುಲ್ಲಿನ ಕಾವು ಮೈಯಲ್ಲಿ ತುಂಬಿತು. ಅಡ್ಡಾದನು. ನಿದ್ದೆಯು ಹತ್ತಿಬಿಟ್ಟಿತು.

## ೩೫

ಅಕ್ಕಾಮರಿಯು ತಾಯಿಯ ಮನೆಗೆ ಹೋಗುವ ಮುಂದೆ ತನ್ನ ಮನೆಯು ಇನ್ನೂ ಗಟ್ಟಿಯಾಗಿದ್ದಿತು. ಅಡಿಗೆಯ ಮನೆ, ನಡುಮನೆ, ಅದಕ್ಕೆ ಹೊಂದಿಕೊಂಡಿದ್ದ ಕೋಣೆ ವಾಸ ಮಾಡಲು ಯೋಗ್ಯವಿದ್ದವು. ಮುಂದುಗಡೆಯ ಪಡಸಾಲೆಯ ತೊಲೆಗಳೆಲ್ಲ ಬಾಗಿದ್ದವು. ಕಂಬಗಳೂ ಓರೆಯಾಗಿದ್ದವು. ನೀರು ಒಳ ಸೇರದಂತೆ ಇಳಿಬಿಟ್ಟ ಚಪ್ಪರವು ಮಾತ್ರ ಬಿದ್ದಿದ್ದಿತು. ಬಚ್ಚಲ ಮನೆಯ ಒಂದು ಅಂಕಣ ದೊಡ್ಡ ಮಳೆಗೆ ಬಿದ್ದು ಗೋಡೆಯ ಕಲ್ಲುಗಳು ಉದಿರಹತ್ತಿದ್ದವು ಉದ್ದೆ ಭಾಗ ಬಚ್ಚಲ ಮೇಲಿನದು ನೀರು ಕಾಸುವ ಸ್ಥಳ, ಇಸಾಳಿಯು ಗಟ್ಟಿಯಾಗಿದ್ದಿತು. ಅಕ್ಕಾಮರಿಯು ಅಲ್ಲಿಯೇ ನೀರು ಕಾಸಿ, ಹತ್ತರದ ಕಲ್ಲ ಮೇಲೆ ಕುಳಿತು ಸ್ನಾನವನ್ನು ತೀರಿಸುತ್ತಿದ್ದಳು.

ಮನೆಯ ಮುಂದಿನ ಬೈಲಿಗೆ ಆವಾರದ ಗೋಡೆಯಿದ್ದು ಅದಕ್ಕೊಂದು ಎತ್ತರವಾದ ಬಾಗಿಲಿದ್ದಿತು. ಅದು ಗಟ್ಟಿಮುಟ್ಟಾಗಿ ಕತ್ತೆ ನಾಯಿಗಳು ಒಳಗೆ ಬಾರದಂತೆ ಮುಚ್ಚಿ ರಕ್ಷಿಸುತ್ತಿದ್ದಿತು. ಬೈಲಿನ ನಡುವೆ ಒಂದು ತುಳಸಿಯ ಕಟ್ಟೆಯಿದ್ದು ಒಂದು ತುಳಸಿಯ ಸಸಿಯು ನಿಂತಿದ್ದಿತು. ಬಲಗಡೆಗೆ ದನಗಳನ್ನು ಕಟ್ಟಲು ದನದ ಮನೆಯಿದ್ದಿತು. ಅದು ಅರ್ಧಮರ್ಧ ಸರಿಯಾಗಿದ್ದಿತು.

ಅಕ್ಕಾಮರಿಯು ಊರುಬಿಟ್ಟು ಹೋಗುವ ಮುಂದೆ ನೆರೆ ಮನೆಯ ಎಲ್ಲವ್ವನನ್ನು ಕರೆದು ಮನೆಯನ್ನು ನೋಡಿಕೊಳ್ಳಲು ಹೇಳಿದ್ದಳು. ತಲೆಬಾಗಿಲಿಗೂ, ಪಡಸಾಲೆಯ ನಡುವಿನ ಬಾಗಿಲಿಗೂ

ಒಂದೊಂದು ಕೀಲಿಯನ್ನು ಹಾಕಿ ಕೈಗಳನ್ನು ಅವಳಿಗೆ ಒಪ್ಪಿಸಿದ್ದಳು. ಎಲ್ಲವ್ವನು ಆಗಾಗ ಮನೆಯನ್ನು ನೋಡಿಕೊಳ್ಳುತ್ತಿದ್ದಳು. ಅಲ್ಲದೆ ತನ್ನ ಸಣ್ಣ ಪುಟ್ಟ ಬಳಕೆಗೆ ಮನೆಯನ್ನು ಉಪಯೋಗಿಸಿಕೊಳ್ಳುತ್ತಿದ್ದಳು.

ರಾಜಣ್ಣನ ಕಕ್ಕ ಮನೆಯಲ್ಲಿ ಒಕ್ಕಲತನವನ್ನಿಟ್ಟದ್ದನು. ಒವ್ಮೆ ಅವನ ದನಗಳ ಮೈಯಲ್ಲಿ ಉಣ್ಣೆಗಳು ವಿಪರೀತವಾದವು. ಅವು ನೆಲದ ಗುಂಟ ಹರಿದಾಡಿ ಒಳಮನೆಯನ್ನು ಸೇರಿದವು, ಅವನ ಕೆಲವು ಮಕ್ಕಳ ಮೈಗೂ ಅಂಟಿಕೊಂಡವು. ಉಣ್ಣೆ ಹತ್ತಿದ ಮೇಲೆ ಮಕ್ಕಳು ಉಂಡರೂ ಬಡಕಲಾಗಹತ್ತಿದವು. ಇದು ಕಕ್ಕನ ಹೆಂಡತಿಗೆ ತಿಳಿಯಿತು. ತನ್ನ ಹೆಣ್ಣುಮಕ್ಕಳ ತಲೆಯೊಳಗಿನ ಹೇನುಗಳನ್ನು ಸಹ ಆರಿಸದಿದ್ದ ತಾನು ಇದೆಲ್ಲಿಯ ಪೀಕಲಾಟವನ್ನು ಅನುಭವಿಸುವ ಹೊತ್ತು ಬಂದಿತೆಂದು ಗಂಡನ ಮೇಲೆ ಹರಿಹಾಯುತ್ತ "ಈ ಉಣ್ಣೆಯ ಕಾಟದಿಂದ ನಾವು ಬದುಕುವದೆಂತು ! ಮಕ್ಕಳನ್ನು ನೋಡಿದಿರಾ ? ತೋಟದೊಳಗಿನ ಬಿದರಿನಂತೆ ಕಾಣುವವು !" ಎಂದು ಕೈಕುಣಿಸಿ ಬಾಯಿ ಅಗಲಿಸಿ ಗದರಿಸಿದಳು.

"ಏನಾಯಿತು ?" ಕಕ್ಕನು ಮೀಸೆಗಳನ್ನು ತೀಡಿ ಕೇಳಿದನು.

"ಏನಾಗುವದು ! ಸರ್ವನಾಶ!" ಮೂಗಿನ ಹೊರಳೆಗಳು ಇನ್ನೂ ಏರಿ-ಇಳಿದು ಮಾಡುತ್ತಿದ್ದವು.

"ಯಾವ ಸರ್ವನಾಶ ಹೇಳು ?"

"ಇಂದು ಹೆಕ್ಕುವ ಮುಂದೆ ಸುನ್ನಿಯ ಕಿವಿಯ ಹಿಂದೆ ಮೂರು ಉಣ್ಣೆಗಳು ಹತ್ತಿದ್ದನ್ನು ಕಂಡೆ. ಈ ಬಲಿಯಬಗಲಲ್ಲಿ ಎರಡು ಉಣ್ಣೆಗಳು. ಲಚ್ಚ್ಯಾನ ತೊಡೆಯ ಸಂದಿಯಲ್ಲಿ ಎರಡು ಉಣ್ಣೆಗಳು. ದನಗಳ ರಕ್ತವನ್ನು ಕುಡಿಯುವ ಉಣ್ಣೆಗೆ ಮನುಷ್ಯನ ರಕ್ತ ಸಾಕಾದೀತೇ ? ಮಕ್ಕಳು ಇಷ್ಟು ತಿಂದೂ ಏಕೆ ಸೊರಗುತ್ತಿವೆ ? ಎಂಬುವದು ನನಗೆ ತಿಳಿದಿರಲಿಲ್ಲ. ಉಣ್ಣೆ ಹತ್ತಿದರೆ ಮಕ್ಕಳು ಮೈಹಿಡಿದಾವೇ ? ಸತ್ತು ಹೋಗುವ ಆಟ ! ನಾನು ನಾಳೆಯಿಂದ ಮಕ್ಕಳನ್ನು ಕರೆದುಕೊಂಡು ಮಾಳಿಗೆಯ ಮೇಲೆ ಮಲಗುವೆನು. ಇಲ್ಲಿ ಒಳಗೆ ಮಲಗಲಾರೆ ? ಮನೆಯ ರಕ್ಷಣೆಯ ಭಾರ ನಿಮ್ಮದು" ಎಂದು ಬಿರುಸಾಗಿ ನುಡಿದಳು.

ಕಕ್ಕನು ಹೆಂಡತಿಯ ಮಾತಿಗೆ ಹೆದರಿದನು. ದನಗಳನ್ನು ಬಿಡಿಸಲು ವಿಚಾರಿಸಲೇಬೇಕಾಯಿತು. ರಾಜಣ್ಣನ ಹಾಳು ಮನೆ! ಥಕ್ಕನೆ ಕಣ್ಣಮುಂದೆ ನಿಂತಿತು. ಕಟ್ಟಿದರಾಯಿತು! ಎಂದು ನಿರ್ಧರಿಸಿ ಬಿಟ್ಟನು. ಕೂಡಲೆ ಎಲ್ಲವ್ವನನ್ನು ಕರೆಕಳುಹಿದನು. ಎಲ್ಲವ್ವನು ಬಂದು "ಅಣ್ಣನವರೇ ಏಕೆ ಕರೆಸಿದಿರಿ?" ಎಂದು ನಿಂತು ಕೇಳಿದಳು.

"ದನಗಳನ್ನು ರಾಜಣ್ಣನ ಮನೆಯಲ್ಲಿ ಕಟ್ಟಬೇಕಾಗಿದೆ. ಅದಕ್ಕೆ ಕೀಲಿಯ ಕೈಗಳನ್ನು ಕೊಡು" ಎಂದು ನುಡಿದನು.

"ಅಕ್ಕಾಮರಿಯುವರು ರಾಜಣ್ಣನು ಬಂದಮೇಲೆ ಅವರ ಕೈಯಲ್ಲಿ ಕೊಡೆಂದು ಹೇಳಿರುವರು ಅಣ್ಣಾ!"

"ಹೇಳಿರಬೇಕು. ನಿನ್ನ ಮೇಲೆ ವಿಶ್ವಾಸ. ನಾಲ್ಕು ದಿನ ದನಗಳನ್ನು ಕಟ್ಟಿದರೆ ಮನೆಯನ್ನು ತಿನ್ನುವೆನೇ?"

"ಮನೆಯನ್ನು ಯಾರು, ಏಕೆ ತಿನ್ನುವರು ಅಣ್ಣಾ!"

"ಅಂದರೆ ಇದೆಂತಹ ಮಾತು? ರಾಜಣ್ಣನೇನು ನನಗೆ ಹೊರಗಿನವನಲ್ಲ. ನನ್ನ ಅಣ್ಣನ ಮಗ. ಆ ಮನೆಯ ಮೇಲೆ ನನ್ನ ಹಕ್ಕಿದೆ. ನಾವು ಬೇಕಾದಹಾಗೆ ಬಳಸಬಹುದು. ಅದೆಲ್ಲವನ್ನು ಬಿಟ್ಟು ಅಕ್ಕಾಮರಿಯು ಹೇಳಿರುವಳಂತೆ! ಈಕೆಯು ಕಾಯುವಳಂತೆ! ತಿಂಗಳಿಗೆ ನಿನಗೆ ಸಂಬಳ ಎಷ್ಟು ಕೊಡುವಳು? ನಿನಗೆ ಹುಲ್ಲು ಒಟ್ಟಲಿಕ್ಕೆ ಅಂಗಳದಲ್ಲಿ ಕುರುಳು ಹಚ್ಚಲಿಕ್ಕೆ ಯಾರು ಹೇಳಿದರು? ಅದನ್ನು ಬಿಟ್ಟು ನನಗೆ ಬುದ್ಧಿಯನ್ನು ಕಲಿಸುವಳು. ನಾಳೆ ನಾನು ದನಗಳನ್ನು ಅಲ್ಲಿ ಕಟ್ಟುವೆನು. ನಿನ್ನ ಹುಲ್ಲು, ಕುರುಳು ತೆಗೆದುಕೊಂಡು ಹೋಗು. ಇಲ್ಲದಿದ್ದರೆ ನಾನೇ ತೆಗೆಯಿಸುವೆನು. ನಿನ್ನ ಕೀಲಿಕೈಯೂ ಬೇಡ!" ಎಂದು ಒದರಿ ಒದರಿ ಮಾತಾಡಿದನು.

"ಇಷ್ಟೇಕೆ ಸಿಟ್ಟು ಅಣ್ಣನವರೇ! ನಿಮ್ಮ ಮನೆ, ನಿಮ್ಮ ಮಾತು! ಬೇಕಾದದ್ದನ್ನು ಮಾಡಿರಿ." ಎಂದು ಕೀಲಿಯಕೈ ಚೆಲ್ಲಿ ಹೋದಳು.

ಮರುದಿನ ಉಣ್ಣೆಯ ದನಗಳು ರಾಜಣ್ಣನ ಮನೆಯಲ್ಲಿ ಸರಾಗವಾಗಿ ಮೆಲುಕಾಡಿಸಹತ್ತಿದವು.

ಮುಂದೆ ಕೆಲ ದಿನಗಳಮೇಲೆ ಕಕ್ಕನು ತನ್ನ ಹಿರಿಯ ಮಗಳ

ಮದುವೆಯನ್ನು ಮಾಡಿದನು. ಬೀಗರು ಬಹಳ ಜನರು ಮದುವೆಗೆ ಬಂದರು. ಅಡಿಗೆಯನ್ನು ಮಾಡಲು ತನ್ನ ಮನೆಯು ಸಣ್ಣದೆನಿಸಿತು. ರಾಜಣ್ಣನ ನಡುಮನೆಯ ಒಂದು ಇಡೀ ಅಂಕಣದ ಮೇಲುಮುದ್ದೆ ಯನ್ನು ತೆಗೆಯಿಸಿ ಕಟ್ಟಿಗೆಗಳನ್ನು ಕೀಳಿಸಿ, ಅದರ ಕೆಳಗೆ ಲಗ್ನದ ಅಡಿಗೆಯ ಹರಿಯೊಲೆಯನ್ನು ತೋಡಿಸಿಕೊಟ್ಟನು. ಅಡಿಗೆಯ ರಕ್ಷಣ ವಾಯಿತು. ಹೊಗೆಯಿಂದ ತಾವು ಪಾರಾದರು. ಅಡಿಗೆಯವನು ಹಸಿ ಕಟ್ಟಿಗೆ, ಹಸಿಕಟ್ಟಿಗೆ ಎಂದು ತಕರಾರು ಮಾಡಲು ಬಚ್ಚಲಮನೆ ಯನ್ನು ಪೂರಾ ಕೆಡವಿ ಒಣಗಿದ ಕಟ್ಟಿಗೆಗಳನ್ನು ಪೂರಯಿಸಿದನು. ಅಡಿಗೆಯು ಸುರಳಿತವಾಗಿ ಸಾಗಿತು.

ಪಡಸಾಲೆಯ ಮಾಳಿಗೆಯಮೇಲೆ ಬೀಗರೆಲ್ಲ ಗಾಳಿಗೆ ಮಲಗಿ ದರು. ಅವರ ತುಳಿದಾಟ, ಓಡಾಟದಿಂದ ತೊಲೆಗಳು ಇನ್ನೂ ಬಗ್ಗಿದವು. ಮದುವೆಯಾಗಿ ಬೀಗರು ಊರಿಗೆ ಹೋದ ಎಂಟು ದಿನಗಳಲ್ಲಿ ಒಂದು ಗಾಳಿಗೆ ಪಡಸಾಲೆಯು ಬಿದ್ದುಬಿಟ್ಟಿತು. ರಾಜಣ್ಣನ ದೊಡ್ಡಪ್ಪ ತೊಲೆ ಗಳನ್ನು ಒಯ್ದನು. ಕಕ್ಕನು ಕಂಬಗಳನ್ನು ಎತ್ತಿಕೊಂಡನು.

ಬಾಂಧವರ ಈ ಹಗಲು ದರವಡೆಯನ್ನು ಕಂಡು ಎಡಬಲದವರು ತಮ್ಮ ಕೈಗೂ ಸಿಕ್ಕಿದ್ದನ್ನು ಒಯ್ದರು. ಗಣಪತಿಯ ಮಾಡದ ಕಮಾನ, ದೇವರ ಮಾಡದ ಚೌಕಟ್ಟು, ಗೋಡೆಯೊಳಗಿನ ಗೂಟ ಗಳನ್ನು ಸಹ ಬಿಡಲಿಲ್ಲ. ಅಡಿಗೆಯ ಮನೆಯೊಳಗಿನ ಒರಳಕಲ್ಲು ವೇ. ಮೂ. ರಾಮಾಚಾರ್ಯರ ಪಾಲಿಗೆ ಬಂದಿತು.

ಈ ಲೂಟಿ ಅವ್ಯಾಹತವಾಗಿ ೭-೮ ತಿಂಗಳು ನಡೆದು ಈಗ ಉಳಿದುದು ಅಡಿಗೆಯ ಮನೆಯಲ್ಲಿ ಒಂದು ಅಂಕಣದಷ್ಟು ಮಾಳಿಗೆ ಯುಳ್ಳ ಭಾಗ, ಅರ್ಧಮರ್ಧ ನಿಂತ ಐದು ಗೋಡೆ, ಕಲ್ಲು, ಮಣ್ಣು, ಹೆಂಟೆ! ಇಂಥ ಮನೆಯಲ್ಲಿ ರಾಜಣ್ಣನು ಹುಲ್ಲಿನ ಮೇಲೆ ಹಾಯಾಗಿ ಮಲಗಿರುವನು.

ರಾಜಣ್ಣನ ತಲೆಯಲ್ಲಿ ವರ್ತಮಾನದ ಭೀಷಣ ಚಿತ್ರ, ಭವಿಷ್ಯದ ಅಂಧಕಾರ ಚಿತ್ರ, ಭೂತ ಸಂಗತಿಗಳ ತುಂಡು ತುಂಡು ಸ್ಮರಣೆಯ ಪ್ರತ್ಯಕ್ಷ ಚಿತ್ರಗಳ ಕೋಲಾಹಲದಿಂದ ನಿದ್ರೆ ಹೇಗೆ ಹತ್ತಬೇಕು?

ಕಣ್ಣುಗಳನ್ನು ಮುಚ್ಚಿದ್ದನು. ಗೂಡುಗಾಲುಗಳನ್ನು ಕಟ್ಟಿ ಅಡ್ಡಾಗಿದ್ದನು. ತಲೆಯ ಕೆಳಗೆ ಮಡಿಚಿದ ಕೈಯ ತಲೆದಿಂಬು, ಹೊಟ್ಟೆಯಲ್ಲಿ ಹಸಿವೆ, ಬೆಳೆದ ತಲೆ, ಒಣಗಿ ಸೆಟೆದು ನಿಂತ ಗಡ್ಡ, ತ್ರಿಕಾಲವೂ ಸ್ಥಿರವಾದ ನೆಲದ ಮೇಲೆ ಹುಲ್ಲಿನ ಹಾಸಿಗೆ, ಹಾಳು ಮಣ್ಣಿನಂತಹ ವಾಸನೆಯ ಹವೆ, ಗಾಳಿಗೊಮ್ಮೆ ಉದುರುವ ಮಾಳಿಗೆಯ ಮಣ್ಣು ಕಣ್ಣು ಚಿವುಟುವಂತಹ ಚಿಕ್ಕೆ ಅತ್ತಿತ್ತ ಸರಿದಾಡಿದರೆ ಚಿರ್‌ಪರ್ ಗುಡುವ ಹುಲ್ಲಿನ ಸಪ್ಪಳ ರಾಜಣ್ಣನ ದುರ್ದೈವದ ಪ್ರತೀಕವಾಗಿ ನಿಂತಿದ್ದವು.

ಕಾಲನು ರಾಜಣ್ಣನ ಅಸ್ತವ್ಯಸ್ತ ಜೀವನಕ್ಕೆ ನಿಲ್ಲಲಿಲ್ಲ. ಓಡುತ್ತಿದ್ದನು. ಕ್ಷಿತಿಜದ ಮೇಲಿನ ಚಿಕ್ಕೆಗಳು ತಲೆಯ ಮೇಲೆ ಬಂದವು. ಸಪ್ತರ್ಷಿಗಳು ಪಶ್ಚಿಮದ ಕಡೆಗೆ ಕೆಳಮುಖವನ್ನು ಮಾಡಿದರು. ಆಕಾಶದಲ್ಲಿ ಮಾತ್ರ ಒಂದಿಷ್ಟು ಬೆಳಕು. ನೆಲದ ಮೇಲೆ ತುಂಬ ಕತ್ತಲೆ! ಜನರ ಸುಳಿವಿಲ್ಲ. ಎಲ್ಲರೂ ಮಲಗಿರುವರು. ಕೆಲ ಕೆಲವು ಕಡೆಗೆ ನಾಯಿಗಳು ಬೊಗಳುತ್ತಿವೆ. ನಿತಾಂತ ರಾತ್ರಿಯ ಗಭೀರತೆಯನ್ನು ಇನ್ನಷ್ಟು ಕೆರಳಿಸಲು ಅವುಗಳ ಕರ್ಕಶ ಧ್ವನಿಯು ಕಾರಣವಾಗಿದ್ದಿತು. ರಾಜಣ್ಣನು ಹುಲ್ಲ ಮೇಲೆ ಹೊರಳಾಡುತ್ತಿದ್ದನು. ಸರ್ ಎಂದಿತು! ಹಾವು ಹರಿಯಿತೇ! ಎಂದು ಅಂಜಿದನು. ಭರ್ ಎಂದಿತು! ತೋಳ ಬಂದಿತೇ! ಎಂದು ಭಯಪಟ್ಟನು. ಯಾರೋ ಮೈ ತಟ್ಟಿದಂತಾಯಿತು. ಕಣ್ಣು ಬಿಟ್ಟು ನೋಡಿದನು. ಯಾರೂ ಇರಲಿಲ್ಲ. ಮುದ್ದೆಯಾಗಿ ಮತ್ತೆ ಮಲಗಿದನು. ಐದಾರು ನಿಮಿಷದಲ್ಲಿ ಯಾರೋ ನಡೆದಂತಾಯಿತು. ಕಣ್ಣು ತೆರೆದು ನೋಡಿದನು—

ಅಪ್ಪಾರಾಯರು ಚಟಪಟ ಸಪ್ಪಳದ ಮೊಚ್ಚೆಯನ್ನು ಹಾಕಿಕೊಂಡು ಎದುರು ಬಂದು ನಿಂತರು.

'ಯಾಕೆ ರಾಜಣ್ಣ!' ಎಂದು ಕೂಗಿದಂತಾಯಿತು.

ರಾಜಣ್ಣನು ಚಟ್ಟನೆ ಎದ್ದು ಕುಳಿತು 'ಹ!' ಎಂದನು.

'ಕೆನೆ ಮೊಸರು ಕಲಸಿ ಅನ್ನವನ್ನು ಚೆಲ್ಲಬಾರದು. ಎಷ್ಟು ಬೇಕು ಅಷ್ಟನ್ನೇ ಎಲೆಯಲ್ಲಿ ಹಾಕಿಸಿಕೊಂಡರೆ ಒಳ್ಳೆಯದು. ಇಂಥ

ಅನ್ನವನ್ನು ದಿನಂಪ್ರತಿ ಕಲಗಚ್ಚಿಗೆ ಎಷ್ಟು ಸುರಿಯುವದು ?'

'ಅವ್ವ ತಾನೇ ಹೆಚ್ಚು ಹಾಕಿದಳು!' ರಾಜಣ್ಣನ ಮನಸು ಉತ್ತರಿಸಿದಂತಾಯಿತು.

'ಹುಚ್ಚಿ! ಮಗನ ಹೊಟ್ಟೆಯೆಷ್ಟು ? ತಿನ್ನಬಹುದೇ ? ಎಂಬ ವಿಚಾರವಿಲ್ಲ. ಅವಳೆಲ್ಲಿ ?'

'ಅಡಿಗೆಯ ಮನೆಯಲ್ಲಿ'

ಅಪ್ಪಾರಾಯರು ದೋತರವನ್ನು ಹೆಗಲ ಮೇಲೆ ಹೊದೆದು ಕೊಂಡು ಹಾಗೆಯೇ ಮುಂದೆ ಹೋದರು.

ಅವ್ವಕ್ಕನು ಮಡಿ ಹೆಚ್ಚಿಕೊಂಡು ಧಾವಿಸಿ ಬಂದು–'ನಾಯಿ, ನಾಯಿ, ನಾಯಿ! ರಾಜಣ್ಣ ಅದನ್ನು ಹೊಡೆದು ಹಾಕು!' ಎಂದು ಗಡಬಿಡಿಯಿಂದ ನುಡಿದಳು.

'ನಾಯಿ ಬಂದರೆ ಏನಾಯಿತು ?'

'ಮೈಲಿಗೆ' ಚೀರಿ ನುಡಿದಳು.

'ಸತ್ತವರಂತೆ ಇಷ್ಟೇಕೆ ಒದರುವಿ.'

'ಅಲ್ಲಿ ನೋಡು ರಾಜಣ್ಣ! ಅಡಿಗೆಯ ಮನೆಯನ್ನು ಹೊಕ್ಕಿತು. ಸುಡ್ಲಿ, ನಿನ್ನ ಕೆಲಸ ಇಲ್ಲೇಸಿದೆ!' ಎಂದು ಸವುಟು ತಕ್ಕೊಂಡು ಬಡಿಯ ಹೋದಳು.

ನಾಯಿಯು ಓಡಿ ಹೋಯಿತು.

ಪುನಃ ಬಂದು 'ರಾಜಣ್ಣ ಅದನ್ನು ಕಟ್ಟಿ ಹಾಕು ಮಾರಾಯಾ ?' ಎಂದಳು.

'ಏನು ಮಾಡುವದು ಹೋಗೇ ?'

'ನೋಡು–ನೋಡು. ಕೃಷ್ಣಾಜಿನವನ್ನು ಬಾಯಲ್ಲಿ ಹಿಡಿದು ಕೊಂಡು ಹೋಯಿತು. ಇನ್ನೇನು ಮಾಡಬೇಕು ? ಆಚಾರ್ಯರು ಪೂಜೆಗೆ ಬೇಗನೆ ಬರುವೆನೆಂದು ಹೇಳಿರುವರು. ಇನ್ನೂ ಮೇಲ್ ನೀರು ಸಹ ತಂದಿಲ್ಲ. ಎಲ್ಲರೂ ಕಾಡುವವರು. ಕಟ್ಟಿ ಹಾಕು. ಮನೆ ತುಂಬ ಮೈಲಿಗೆ!'

'ಇರಲಿ ಹೋಗೇ ? ಮಡಿ ಮಡಿ ಎಂದು ಮೂರು ಮೊಳ

ಹಾರುವೆ. ಹೊಟ್ಟೆಯೊಳಗೆ ಬೇಕಾದ ಹೊಲಸು ತುಂಬಿಕೊಂಡು ಮೇಲೆ ಮಡಿ ಅಂದರೇನಾಯಿತು.'

'ಬ್ರಾಹ್ಮಣಿಕೆ ಕರ್ಮ! ಮಾಡಲೇಬೇಕು. ನೀನು ಕುಲದ ಹೊರಗೇ ಹುಟ್ಟಿರುವೆ.'

'ಸಾಕು ಹೋಗೇ ಹೊಯಮಾಲಿ! ನನಗೆ ಎಲ್ಲಾ ಗೊತ್ತು.

'ನನ್ನ ದೈವ! ಮಾಡಿಕೊಂಡ ಗಂಡ ಒಂದು ದಿನ ಬಯ್ಯಲಿಲ್ಲ. ಹುಚ್ಚೀ! ಎಂದರೆ ಎಲ್ಲಾ ಬೈಗಳು ಮುಗಿದಂತಾದವು. ಹೊಟ್ಟೆಯಿಂದ ಹುಟ್ಟಿದ ಮಗನಿಗೆ ನಾನು ಹೊಯಮಾಲಿಯಾದೆ.' ಎಂದು ಅಳ ಹತ್ತಿದಳು.

'ತಲೆಯೊಡೆದೇನು. ಒಳಗೆ ಹೋಗು ಒಣಡೋಕಾರತನ ಬೇಡ.' ಅವ್ವಕ್ಕನು ಅಳುತ್ತ ಒಳಗೆ ಹೋದಳು.

ನಾಯಿ ಬಂದಿತು. ಮೊದಲಿನ ರೂಪವಿಲ್ಲ. ಕೂದಲು ಉದುರಿ ತೊಗಲು ಕಾಣಿಸುವದು. ಮೈ ಗಾಯದಲ್ಲಿ ಹುಳಗಳು ಹೆಜ್ಜೆಗೊಮ್ಮೆ ಬೊಗಸೆ ಬೊಗಸೆ ಹುಳಗಳು ನೆಲದ ಮೇಲೆ ಬಿದ್ದು ಹರಿದಾಡುತ್ತಿವೆ. ನೋಡಿ ರಾಜಣ್ಣನಿಗೆ ಸಿಟ್ಟು ಬಂದಿತು. 'ಮೋತ್ಯಾ ನಿನ್ನ ಸೇಡು ತೀರಿಸುವೆ. ಚಿನ್ನಯ್ಯನ ನಾಯಿಯನ್ನು ಜೀವಂತ ಕೊಲ್ಲದಿದ್ದರೆ ನಾನು ರಾಜಣ್ಣನಲ್ಲ. ಇಂದೇ ಕೊಲ್ಲುವೆ. ನೀನು ಹೋಗು.' ಎನಲು ನಾಯಿಯು ಹೋಯಿತು.

ಇನ್ನೊಂದು ಬದಿಯಿಂದ ಚಿನ್ನಯ್ಯನ ಕರಿನಾಯಿಯು ಬಂದಿತು.

ರಾಜಣ್ಣ 'ನಾನು ಮಾಡಿದುದೇನು? ನಾಯಿಯು ನಾಯಿಯನ್ನು ಕಡಿಯುವದು ನಮ್ಮ ಧರ್ಮ. ಮೋತ್ಯಾ ಗೌಡರದಾದರೇನು? ಅದು ನಾಯಿಯೇ ಸರಿ. ನನ್ನನ್ನು ವ್ಯರ್ಥವಾಗಿ ಹಿಡಿದೆ. ಬಾಯಿ ಕಟ್ಟಿದೆ. ಚೀಲದಲ್ಲಿ ಹಾಕಿದೆ. ಕೆರೆಯಲ್ಲಿ ಮುಳುಗಿಸಿದೆ. ಆದರೆ ನಾನು ಮೋತ್ಯಾನನ್ನು ದಿನವೂ ಕಡಿಯುವೆ. ಅದರ ಮೈಯಲ್ಲಿ ದಿನವೂ ಹುಳಗಳು ಬೀಳುವವು. ಅದರ ಹುಳಗಳನ್ನು ಯಾರೇ ಆಗಲಿ, ಯಾವ ಕಾಲದಲ್ಲಿಯೋ ಆರಿಸಲಾಸಲ್ಲ. ನನ್ನ ಹಲ್ಲಿಗೆ ಅದರ ರಕ್ತದ ರುಚಿ ಹತ್ತಿದೆ. ಇದೋ ಕಡಿಯುವೆ.' ಎಂದು ಮೋತ್ಯಾ

ನನ್ನು ಉರುಳುರುಳಿಸಿ ಕಡಿಯ ಹತ್ತಿತು. ಮೋತ್ಯಾ ಬಾಲವನ್ನು ಮುದುಡಿಸಿಕೊಂಡು ಕುಂಯ್‌ಗುಡ ಹತ್ತಿತು. ರಾಜಣ್ಣನು ಸಿಟ್ಟಿಗೆ ಬಂದು ಒಂದು ಹಿಡಿ ಹುಲ್ಲು ಕಿತ್ತಿ ಒಗೆಯುಹೋದನು. ಎರಡೂ ಓಡಿದವು.

ಮೋತ್ಯಾ ಮುಂದೆ. ಚಿನ್ನಯ್ಯನ ನಾಯಿ ಹಿಂದೆ. ಮೋತ್ಯಾ ಕಡಿಸಿಕೊಳ್ಳುತ್ತ ಓಡುತ್ತಿದ್ದಿತು. ಇನ್ನೊಂದು ನಾಯಿ ಕಡಿಯುತ್ತ ಬೆನ್ನು ಹತ್ತಿದ್ದಿತು.

ಓ! ಇವಳಾರು? ಮುಖವನ್ನು ನೋಡಿದಂತಿದೆ! ಮೆಲ್ಲಗೆ ಬರುವಳು. ವಯ್ಯಾರದಿಂದ ಬರುವಳು. ಗರತಿಯಂತೆ ಬರುವಳು. ಚೆಲುವೆ. ಒಕ್ಕಲ ಮಕ್ಕಳಲ್ಲಿ ಮಿಗಿಲಾದ ಚೆಲುವೆ, ಎಷ್ಟು ದೂರದಿಂದ ಬರುವಳು. ಬಂದಳು. ಬಂದಳು. ಯಾರು?

ತಂಗವ್ವ! ತಂಗವ್ವ.

ರಾಜಣ್ಣನು ಎವೆಯಾಡಿಸದೆ ನೋಡ ಹತ್ತಿದನು.

'ಏಕೆ ಬಂದಿರುವೆ ರಾಜಣ್ಣ?' ಎಂದು ಕೇಳಿದಳು.

'ನಿನ್ನನ್ನು ಬದುಕಿಸುವೆ. ತಂದೆಯವರ ಮಂಗನ ಮುಷ್ಟಿಯಿಂದ ನಿನ್ನನ್ನು ಬದುಕಿಸುವೆ. ಪಾರು ಮಾಡುವೆ.'

'ಹೇಗೆ?'

'ಒಂದು ಮಾತು.'

'ಏನು?'

'ನನಗೆ ನೀನು....'

'ಹ....'

'ಬೇಕು.'

'ನಿಮ್ಮ ತಂದೆಯವರಿಗೇ ನಾನು ದುರ್ಲಭಳು. ಈ ಮಾತು ಎಂದಿಗೂ ಸಾಧ್ಯವಿಲ್ಲ.'

'ವಿಚಾರಿಸು ತಂಗವ್ವ.'

'ಇಲ್ಲ, ಇಲ್ಲ.'

'ನೋಡು.'

'ಎಂದೆಂದಿಗೂ ಇಲ್ಲ.'

'ನಾಳೆಯ ದಿನವೇ ನೋಡು.'

'ನಿಮ್ಮ ತಂದೆ ಹಾಗೆ ಕೊಲ್ಲ ಬಯಸಿದರೆ ನೀನು ಹೀಗೆ ಕೊಲ್ಲ ಬಯಸುವೆಯಾ ?'

'ತಂಗವ್ವ....'

'ನಿಮ್ಮ ತಂದೆಯವರ ಕಣ್ಣಲ್ಲಿ ನಾನು ಮೂಡಿದ ದಿನ ನಾನು ಅವರವಳಾದೆ. ನಾನು ಒಪ್ಪದಿದ್ದರೂ ಅವರ ಕಣ್ಣು ನನ್ನನ್ನು ಮುಟ್ಟಿತು ! ಈಗ ನೀನು ನನ್ನನ್ನು ಬಯಸುವೆ. ಇದು ತಾಯಿಯನ್ನು ಕೂಡಿದಂತಾಗುವದಿಲ್ಲವೇ ? ಒಳ್ಳೆಯದಲ್ಲ ಬಿಟ್ಟುಬಿಡು.'

'ಇಂಥ ದಾಂಭಿಕ ಮಾತು ಬೇಡ. ನಿನ್ನನ್ನು ಮುಟ್ಟಿ ತಂದೆಯಿಂದಾಗದ ಕೆಲಸವನ್ನು ಮಗನು ಮಾಡಿದನೆಂದು ಹೇಳಿ ಅಭಿಮಾನ ಪಡಬೇಕಾಗಿದೆ. ಅದನ್ನು ಸಾಧಿಸಲು ನಾನು ಬೇಕಾದುದನ್ನು ಮಾಡಬಲ್ಲೆ.'

'ನಿನಗೆ ಮನೆಯಲ್ಲಿ ಮುತ್ತಿನಂತಹ ಹೆಂಡತಿಯಿರುವಳು.'

'ಮುತ್ತಿನ ಆಭರಣಗಳ ಜತೆಗೆ ಕರಿಮಣಿಯ ಸರವನ್ನೂ ಹೆಂಗಸರು ತೊಡುವರು.'

ತಂಗವ್ವನಿಂದ ರಾಜಣ್ಣನಿಗೆ ಉತ್ತರಿಸುವದು ಅಶಕ್ಯವಾಯಿತು. ಆ ಅತಿಕಾಮುಕನ ಕೈಯಲ್ಲಿ ಸಿಕ್ಕು ಎಲ್ಲ ರೀತಿಯಿಂದ ಹಾಳಾಗುವದು ಬೇಡಾಯಿತು. ಹೊರಟಳು.

'ಎಲ್ಲಿಗೆ ನಡೆದೆ ?' ರಾಜಣ್ಣ ಕೇಳಿದನು.

'ನನ್ನ ಮನೆಗೆ.'

'ಏನೆಂದೆ ?'

'ಸಾಧ್ಯವಿಲ್ಲ.'

'ಇಂದು ರಾತ್ರೆ ಎಚ್ಚರದಿಂದಿರು."

'ಏನು ಮಾಡುವೆ ?'

'ಕಾಲುಕೈ ಕಟ್ಟುವೆ. ತೋಟಕ್ಕೆ ತೆಗೆದುಕೊಂಡು ಹೋಗುವೆ. ಮುಂದಿನ ಸಂಗತಿ ಗುಡಿಸಲಲ್ಲಿ ನೋಡುವೆ.'

'ಆಗಲಿ.' ತಂಗವ್ವ ಓಡುತ್ತ ಹೋದಳು.

ಇಂಥ ತುಂಡು ಚಿತ್ರಗಳಿಂದ ರಾಜಣ್ಣನಿಗೆ ಸರಿಯಾಗಿ ನಿದ್ದೆ ಹತ್ತಲಿಲ್ಲ. ಹುಲ್ಲಿನ ಮೇಲೆ ಇಡೀ ರಾತ್ರಿ ಅತ್ತಿತ್ತ ಹೊರಳಾಡಿದನು. ಮುಂಜಾನೆ ಒಕ್ಕಲಿಗನೊಬ್ಬನು ಮಲವಿಸರ್ಜನೆಗಾಗಿ ಬಂದ ಸಮಯದಲ್ಲಿ ಕಣ್ಣು ಬಿಟ್ಟು ರಾಜಣ್ಣನನ್ನು ನೋಡಿದನು. ಯಾರೆಂಬುದು ತಿಳಿಯಲಿಲ್ಲ. "ಯಾರಪ್ಪಾ ನೀನು ?" ಎಂದು ಆಶ್ಚರ್ಯದಿಂದ ಕೇಳಿದನು.

ರಾಜಣ್ಣನು ಎದ್ದು ಕುಳಿತು ಕಣ್ಣುತಿಕ್ಕಹತ್ತಿದನು.

"ರಾಜಣ್ಣನೇನು ?" ಎಂದು ಸಂಶಯದಿಂದ ಕೇಳಿದನು.

"ಹ !" ಎಂದು ತಲೆಹಾಕಿದನು.

"ಇಲ್ಲೇಕೆ ರಾಜಣ್ಣಾ ?" ನೀರು ತುಂಬಿದ ತಂಬಿಗೆಯನ್ನು ಕೆಳಗಿಟ್ಟು ಪ್ರಶ್ನಿಸಿದನು.

"ನನ್ನ ಮನೆಯೆಂದು ಬಂದೆ. ನಿದ್ದೆ ಬಂದಿತು ಮಲಗಿದೆ, ತಂಬಿಗೆಯಲ್ಲಿ ನೀರು ಇದೆಏನು ?" ಎಂದು ಕೇಳಿದನು.

"ಹ...."

"ಒಂದಿಷ್ಟು ತಾ."

"ಮುಖ ತೊಳೆಯುವೆ ಏನು ? ಮನೆಗೆ ನಡೆ ಕೊಡುವೆನು."

"ಒಂದಿಷ್ಟು ತಾ ! ಸಂಕಟ !" ಎಂದು ಎದ್ದು ತಂಬಿಗೆಯನ್ನು ತೆಗೆದುಕೊಂಡು ಬಾಯಿಗೆ ಹಚ್ಚಿದನು.

"ಛೀ.... ಛೀ.... ಇದು ಕುಡಿಯುವ ನೀರಲ್ಲ ರಾಜಣ್ಣಾ."

೩೬

ಅಕ್ಕಾಮರಿಯು ತಾಲೂಕಿಗೆ ಬಂದು ನಿಂತಳು. ಆದರೆ ಅವಳ ಬರವಿಗೆ ಒಂದೇ ಕಾರಣವಿರಲಿಲ್ಲ. ಆ ಮೂವರೂ ಒಂದೊಂದು ಕಾರಣವನ್ನು ಕಲ್ಪಿಸಿಕೊಂಡಿದ್ದರು. ಮೂವರದೂ ಭಿನ್ನ. ಅವುಗಳನ್ನು ನಾಲ್ಕನೆಯವರು ತಿಳಿಯಲೇಬೇಕು.

ಚಿನ್ನಯ್ಯ—

'ಅಕ್ಕಾಮರಿಯು ದೊಡ್ಡ ಮನೆತನದ ಹೆಂಗಸು. ಸುಖದಲ್ಲಿ ಬೆಳೆದವಳು. ಅವಳ ತಂದೆಯವರು ತಮ್ಮಂತಹ ದೊಡ್ಡ ಮನೆತನದ ಅಪ್ಪಾರಾಯರ ಮನೆತನವನ್ನು ನಂಬಿ, ರಾಜಣ್ಣನಿಗೆ ಮದುವೆಯನ್ನು ಮಾಡಿಕೊಟ್ಟರು. ರಾಯರು ನನ್ನ ಪರಮಶತ್ರುಗಳಾದರೇನಾಯಿತು ? ಅವರ ದರ್ಪ, ಅಭಿಮಾನ, ಕೀರ್ತಿ ಹೊಗಳುವಂತಹದು. ಅವರು ಜೀವದಿಂದಿರುವವರೆಗೆ ನನ್ನ ಆಟ ನಡೆಯಲಿಲ್ಲ. ಅವರ ಮರಣದಿಂದ ಮನೆತನದ ರೀತಿಯೇ ಬೇರೆಯಾಯಿತು. ಐಶ್ವರ್ಯದಲ್ಲಿ ಮತ್ತು ಸುಖದಲ್ಲಿ ಬೆಳೆದ ಹೆಂಗಸು, ಕಷ್ಟದ ಕಾವಿಗೆ ಕರಗಲೇಬೇಕು. ಆ ಕಷ್ಟದ ಪರ್ಯವಸಾನವು ನನ್ನ ಮೇಲಿನ ಪ್ರೇಮದಲ್ಲಿ ರೂಪಾಂತರಿಸಿತು. ನಾನು ಕರೆದಲ್ಲಿ ಬಂದಳು. ನನ್ನನ್ನು ನಂಬಿರುವಳು. ಆ ನಂಬಿಗೆಯ ಆಧಾರದ ಮೇಲೆಯೇ ಇಲ್ಲಿಯವರೆಗೆ ಬಂದಿರುವಳು. ನಂಬಿದ ಹೆಣ್ಣಿಗೆ ಪ್ರೇಮದ ಎಳೆಯು ಕೂಡ ಸಿಕ್ಕದಿದ್ದರೆ ಏನು ಮಾಡೀತು ? ಇಲ್ಲದಿದ್ದರೆ ನನಗೆ ಅಂತಹ ರೂಪಸಂಪನ್ನ ಬ್ರಾಹ್ಮಣ ಹೆಣ್ಣು ಸಿಕ್ಕಬಹುದೇ? ಮನೆ ಹೋಗಲಿ, ಹೊಲ ಹೋಗಲಿ! ಅವಳನ್ನು

ರಕ್ಷಿಸಬೇಕು. ನಂಬಿದ ಹೆಣ್ಣನ್ನು ಬಿಟ್ಟು ನರಕದಲ್ಲಿ ಬೀಳಲಾರೆ. ಹೋದ ಜನ್ಮದಲ್ಲಿ ಯಾವಳಿಗೆ ಕಷ್ಟ ಕೊಟ್ಟಿದ್ದೆನೋ? ಹೆಂಡತಿಯನ್ನು ಕಳೆದುಕೊಂಡೆ. ಈ ಜನ್ಮದಲ್ಲಿ ಅಕ್ಕಾಮರಿಯ ಯೋಗ್ಯ ರಕ್ಷಣೆ ಯಿಂದಾದರೂ ಆ ಪಾಪವನ್ನು ತೊಳೆದುಕೊಂಡು ಮುಂದಿನ ಜನ್ಮಕ್ಕೆ ಉದ್ದಂಡ ಆಯುಷ್ಯದ ಹೆಂಡತಿಯನ್ನು ಪಡೆಯುವೆ.'

ಪುಟ್ಟಪ್ಪ–

'ಅಕ್ಕಾಮರಿಯು ಬಂಜೆತನದ ನರಕವನ್ನು ತಪ್ಪಿಸುವಂತೆ ನನಗೆ ಅಪರೂಪವಾಗಿ ಹುಟ್ಟಿದಳು. ಹುಟ್ಟಿದಂದಿನಿಂದ ಐದು ವರುಷ ಎತ್ತಿ ಕೊಂಡಿರುವೆ. ಇಷ್ಟು ಕಾಲದವರೆಗೆ ಆಕೆಯ ಪಾದಗಳು ನೆಲವನ್ನು ಮುಟ್ಟಿಲ್ಲವೆಂದು ಹೇಳಬಲ್ಲೆ. ಅಂಥ ಮಗಳನ್ನು ಅಕ್ಕರೆಯಿಂದ ಜೋಪಾನಮಾಡಿ ಅಪ್ಪಾರಾಯರಿಗೆ ಸೊಸೆಯಾಗಿ ಕೊಟ್ಟೆ. ಅವರ ಮನೆಯೂ ದೊಡ್ಡದು, ಕೀರ್ತಿಯುಳ್ಳದ್ದು. ಆಗ ರಾಜಣ್ಣನ ಸ್ವಭಾ ವವನ್ನು, ಕಲಿತುದನ್ನು ನೋಡಲಿಲ್ಲ. ತಂದೆಯಂತೆ ಮಗನೆಂಬ ಭಾವನೆಯು ಬಲವತ್ತರವಾಗಿದ್ದಿತು. ಅವರ ಧನ–ದೌಲತ್ತು ಕಣ್ಣು ತುಂಬಿದ್ದಿತು. ಅವರು ಸತ್ತರು. ಧನ–ದೌಲತ್ತನ್ನು ತಮ್ಮ ಜತೆಗೆ ತೆಗೆದುಕೊಂಡು ಹೋದರು. ಅಳಿಯನೆಂಬ ಮಂಗನ ಕೈಯಲ್ಲಿ ಅಕ್ಕಾಮರಿಯು ಮಾಣಿಕದಂತೆ ಸಿಕ್ಕಳು. ಅದಕ್ಕೆ ಅವರ ಬೆಲೆಯೇನು? ಹೆಂಡತಿಯೆಂಬ ಅಭಿಮಾನವೇ? ಬ್ರಾಹ್ಮಣರೆಂಬ ಕುಲದ ಮಹಾ ತ್ಮೆಯೋ? ದೊಡ್ಡ ಮನೆತನದವರೆಂಬ ಕೀರ್ತಿಯೋ? ಬಂಗಾರದಂತಹ ಹೆಂಡತಿಯನ್ನು ಬಿಟ್ಟು ಕುರಿಯ ಜಾತಿಯ ಹೆಣ್ಣಿನ ಬೆನ್ನು ಹತ್ತಿದ. ತಿನ್ನಬಾರದ್ದನ್ನು ತಿಂದ. ಮನೆಯಲ್ಲಿ ಹೆಂಡತಿಯೆಂಬ ಸಾಧು ಪ್ರಾಣಿ ಯಿದೆ ಎಂಬುವನ್ನು ಮರೆತ. ಅಕ್ಕಾಮರಿಯು ತನ್ನ ಧರ್ಮಕ್ಕೆ, ತನ್ನ ಕುಲಕ್ಕೆ, ತನ್ನ ಚಾರಿತ್ರ್ಯಕ್ಕೆ ನಂಬಿ ಮನೆಯಲ್ಲಿ ಕುಟ್ಟಿದಳು, ಬೀಸಿ ದಳು, ಕಟ್ಟಿಗೆಯನ್ನು ಒಡೆದುಕೊಂಡಳು. ಏನು ಮಾಡಿಕೊಂಡರೇನು? ತಂದುಹಾಕುವ ಗಂಡಸು ಮನೆಗೆ ಬಾರದಿದ್ದರೆ, ಹವೆ ತಿಂದು, ನೀರು ಕುಡಿದು ಪಾತಿವ್ರತ್ಯ ನಿಯಮವನ್ನು ರಕ್ಷಿಸುವದೇ? ಸಹನೆಗೂ ಒಂದು ಸೀಮೆಯಿದೆ. ವ್ರತಕ್ಕೂ ಒಂದು ದಿನ ಪಾರಣೆಯಿದೆ. ದುಃಖಕ್ಕೂ

ಕೊನೆಯಿದೆ. ಸುಖದ ಆಶೆಯೇ ಬತ್ತಿ ನಿಂತ ಮೇಲೆ, ದುಃಖವೇ ದೇಹದ ಮೇಲೆ ಹೊರೆಯಾಗಿ ಅಡರಿದ ಮೇಲೆ, ಮಾನವನೇನು ಮಾಡಬೇಕು? ಬದುಕುವ ಆಶೆಯಿರುವವರೆಗೆ ಬದುಕಲೇಬೇಕು. ಜೀವವು ತಾನಾಗಿ ದೇಹವನ್ನು ಬಿಟ್ಟು ಹೋಗುವವರೆಗೆ ಅದರ ರಕ್ಷಣೆಯನ್ನು ಮಾಡಲೇಬೇಕು. ರಕ್ಷಣೆಗೆ ಸ್ತ್ರೀ ಸಹಜ ಉಪಾಯವನ್ನು ಹುಡುಕಲೇಬೇಕು. ಅಸಹಾಯ, ಅರಕ್ಷಣೀಯ ಸ್ತ್ರೀಗೆ ಇದೊಂದೇ ಉಪಾಯವು. ಇದೊಂದೇ ದಾರಿಯು. ಒಂದು ದಿನದ ಕಷ್ಟಕ್ಕೆ ಉಪವಾಸವಿರಬಹುದು. ಎರಡು ದಿನಕ್ಕೆ ನೀರು ಕುಡಿಯಬಹುದು. ಮೂರು ದಿನಕ್ಕೆ ಎಲೆ ತಿಂದು ಇರಬಹುದು. ಆದರೆ ಮುಂದೆ ಮಲಗಿದ ಉದ್ದನ್ನ ಬಾಳನ್ನು ಹೇಗೆ ದಾಟುವದು? ಈ ಎಲ್ಲ ಆಲೋಚನೆಯನ್ನು ಮಾಡಿಯೇ ತಾಲೂಕಿಗೆ ಬಂದಿರುವಳು. ಇದರಲ್ಲಿ ಆಕೆಗೆ ಜೀವರಕ್ಷಣೆಯ ಜ್ಞಾನವಿದೆ. ತಾಯಿಯ ಋಣಮುಕ್ತತೆಯ ಧರ್ಮವಿದೆ.'

ಅಕ್ಕಾಮುರಿಯ ವಿಚಾರವೇ ಬೇರೆ. ವ್ಯಕ್ತಿಗೊಂದು ತಲೆ. ವ್ಯಕ್ತಿಗೊಂದು ತನ್ನದೇ ಅನುಭವ. ಅವಳು ತಾಲೂಕಿಗೆ ಬರಲು ಇವರಿಗಿಂತ ಬೇರೆ ಇದ್ದಿತು.

'ಗಂಡನನ್ನು ತಂದೆಯೇ ಆರಿಸಿದರು. ತಾಯಿಯು ಅನುಮೋದಿಸಿದಳು. ನನ್ನನ್ನು ಇವರಿಗೆ ಕೊಡುವ ಮುಂದೆ ಇವರು ಕಲಿತದ್ದೇನು? ಸ್ವಭಾವವು ಎಂಥದು? ರುಚಿ ಯಾವದು? ಮನೆತನವನ್ನು ಸಾಗಿಸಿಕೊಂಡು ಹೋಗುವ ಸಾಮರ್ಥ್ಯವಿದೆಯೇ? ಹೊಟ್ಟೆಗೆ ಹಾಕಬಹುದೇ? ಸುಖದಿಂದ ನನ್ನನ್ನು ನಡಸಿಕೊಂಡು ಹೋಗಬಹುದೇ? ನನ್ನನ್ನು ಪ್ರೀತಿಸಬಹುದೇ? ಮಮತೆಯಿಂದ ಕಾಣಬಹುದೇ? ಊರ ಜನರ ಸಂಗಡ ಸಜ್ಜನಿಕೆಯಿಂದ ನಡೆಯಬಹುದೇ? ಮನೆತನದ ವಿಚಾರದಲ್ಲಿ ನನ್ನನ್ನು ಕೇಳಬಹುದೇ? ಗಂಡ-ಹೆಂಡಿರು ಜೀವರಥದ ಎರಡು ಗಾಲಿಗಳೆಂದು ತಿಳಿದಿರುವರೇ? ಕಷ್ಟ ಕಾರ್ಪಣ್ಯದಲ್ಲಿ ನನ್ನನ್ನು ಮರೆಯಲಾರರೇ? ತಮ್ಮ ಸುಖದಲ್ಲಿ ಪಾಲುಕೊಟ್ಟಂತೆ ಕಷ್ಟದಲ್ಲಿಯೂ ಭಾಗ ಮಾಡಿ ಕೊಡಬಹುದೇ? ಕುಲಧರ್ಮಕ್ಕೆ ಹೊಂದಿಕೊಂಡು ನಡೆಯ

ಬಹುದೇ? ಇವೆಲ್ಲ ವಿಚಾರಗಳನ್ನು ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ತೋರಿಸಿದ್ದಾಯಿತು, ಮದುವೆಯಾಯಿತು. ತಾಯಿಯು ಮಾತ್ರ ಗಂಡ ಹೇಗೆ? ಎಂದು ಕೇಳಿದಳು. ನನಗಾದರೂ ಗಂಡನನ್ನು ಆರಿಸುವ ಕಲೆಯೆಲ್ಲಿ ಗೊತ್ತು! ಗಂಡನನ್ನು ಆರಿಸಿಕೊಳ್ಳುವ ಮುಂದೆ ಯಾವ ಯಾವ ದೃಷ್ಟಿಯಿಂದ ಪರೀಕ್ಷಿಸಬೇಕೆಂಬುದು ನನಗೆ ಮೂಲತಃ ಗೊತ್ತಿರಲಿಲ್ಲ. ನನ್ನ ವಯಸ್ಸು, ನನ್ನ ಬೆಳವಣಿಗೆ, ನನ್ನ ಬುದ್ಧಿಯೇ ಸಾಕ್ಷಿ. ಅವರನ್ನು ನೋಡಿದೆ. ಏನು ನೋಡಿದೆ? ಉಟ್ಟುಕೊಂಡ ಬಿಳಿಯ ಧೋತರ. ಗೆರೆಗೆರೆಯ ಶರಟು. ಕರಿಯ ಬಣ್ಣದ ಕೋಟು. ತಲೆಯ ಮೇಲಿನ ಟೊಪ್ಪಿಗೆ. ಇವು ನಿಚ್ಚಳವಾಗಿ ಕಂಡ ವಸ್ತುಗಳು. ಆದರೂ ಒಂದಿಷ್ಟು ಓರೆಗಣ್ಣಿನಿಂದ ಮೂಗು, ಕಣ್ಣು, ಬಾಯಿ, ನನ್ನನ್ನು ನೋಡುವ ಆತುರದಲ್ಲಿ ತೆರೆದ ಬಾಯಿಯ ಹಲ್ಲು, ಮೂಗಿನ ಕೆಳಗೆ ಚಿಗುರೊಡೆವ ಮೀಸೆ, ತಲೆಯ ಬಲಗಡೆ ಗಿರುವ ಟೊಪ್ಪಿಗೆಯ ಅಂಚಿನ ಕೆಳಗಿನ ಒಂದು ಕಿವಿ–ಇನ್ನೊಂದು ಕಿವಿಯು ಮರೆಯಾಗಿದ್ದಿತು–ಕೈ ಮತ್ತು ಕಾಲ ಬೆರಳು ಒಂದು ಬೆರಳಿಗೆ ತೊಡಿಸಿದ ಉಂಗುರ ಇಷ್ಟೇ! ನನ್ನ ಪರೀಕ್ಷೆಗೆ ಮುಂದಿಟ್ಟ ವಸ್ತುಗಳು ಇವಿಷ್ಟೇ! ಇವಕ್ಕೂ ಹೆಚ್ಚಿನ ಸಂಗತಿಗಳನ್ನು ನಾನು ಕೇಳುವಂತಿರಲಿಲ್ಲ. ಕೇಳುವದು ನನ್ನ ಕಾಲದ ಬ್ರಾಹ್ಮಣ ಕನ್ನಿಕೆಯರ ಧರ್ಮವೂ ಇರಲಿಲ್ಲ. ರೂಢಿಯೂ ಇರಲಿಲ್ಲ. ಕೇಳಿದರೆ ಹೇಳುವ ಧೈರ್ಯದ ಮತ್ತು ತಾಳ್ಮೆಯ ತಂದೆಯವರೂ ಇರಲಿಲ್ಲ. ಭಾವೀ ಗಂಡಂದಿರೂ ಇರಲಿಲ್ಲ. ಅಥವಾ ಕೇಳಬೇಕು, ತಿಳಿದುಕೊಳ್ಳಬೇಕು ಎಂಬ ಬುದ್ಧಿಯೂ ನನ್ನಲ್ಲಿರಲಿಲ್ಲ. ಪರಂಪರಾಗತ ಸಂಸ್ಕಾರದ ಸೆಳವಿನಲ್ಲಿ ಬೆಳೆದು ಬಂದ ನಮ್ಮ ಅನುಭವ ಅದಕ್ಕೂ ಮುಂದೆ ಹೋಗುತ್ತಿರಲಿಲ್ಲ. ನಾನು ಕೇಳಲಿಲ್ಲ. ನನ್ನ ಪರೀಕ್ಷೆಯಲ್ಲಿ ಅವರು ತೇರ್ಗಡೆ ಹೊಂದಿದ್ದರು. ಹೊಂದಲೇ ಬೇಕಿದ್ದಿತು. ಯಾಕಂದರೆ ಆಗ ನಾನು ಹನ್ನೆರಡು ವರುಷ ದೊಡ್ಡವಳು. ನನ್ನ ತಂದೆಗೆ ಹನ್ನೆರಡು ವರುಷದ ನನ್ನನ್ನು ನೋಡಿ ಎದೆಯೊಡೆದಂತಾಗಿದ್ದಿತು. ಅವರ ಅಣ್ಣ ೧೦ ವರುಷದ ತಮ್ಮ ಮಗಳನ್ನು ಮದುವೆ ಮಾಡಿ

ಧರ್ಮವನ್ನು ರಕ್ಷಿಸಿದ್ದರು. ನಾನು ಎರಡು ವರುಷ ಧರ್ಮವನ್ನು ಮೀರಿ ಬೆಳೆದು ನಿಂತಿದ್ದೆ. ತಂದೆಯವರ ಮಾನ ರಕ್ಷಣೆಗೆಂದೂ, ನನ್ನ ಪರೀಕ್ಷೆ ಮುಗಿದಿದ್ದಿತೆಂದೂ ನಾನು ಲಗ್ನಕ್ಕೆ ಒಪ್ಪಿದೆ. ಲಗ್ನವಾಯಿತು. ಮಾವನವರು ಇರುವವರೆಗೆ ಸುಖದಿಂದಿದ್ದೆ. ಅವರು ಮನೆ, ಹೊಲ, ಮಂದಿಯ ಜತೆಗೆ ನನ್ನನ್ನೂ ರಕ್ಷಿಸುತ್ತಿದ್ದರು. ಹೆಂಗಸರಿಗೆ ಹಡೆದ ತಂದೆಯ ಕೂಡ ರಕ್ಷಣೆಯ ತಂದೆಯೂ ಇರುವನೆಂದು ತಿಳಿದೆ. ನನಗೆ ಇಬ್ಬರು ತಂದೆಯವರು ಎಂದು ಆನಂದಪಟ್ಟೆ. ಅಡವಿಯಲ್ಲಿಯ ಹೊಲ ಮತ್ತು ಅವುಗಳ ಬೆಳೆಯಮೇಲೆ ದೇಹ-ಜೀವವನ್ನು ಇಟ್ಟಂತೆ ಊರ ಒಳಗಿನ ಮನೆ ಮತ್ತು ಮನೆಯ ಮಂದಿಯ ಮೇಲೆ ಪ್ರಾಣವನ್ನು ಇಟ್ಟಿದ್ದರು. ಹೊಲಗಳನ್ನು ನಾವು ನೋಡಿದವರಲ್ಲ. ಆದರೆ ಅವುಗಳ ಬೆಳೆಯ ಮೇಲೆ ಬದುಕಿದ್ದೆವು. ಅವರು ಒಕ್ಕಲಿಗರ ಜತೆಗೆ ಬಿಸಿಲು, ಮಳೆ, ಗಾಳಿಯ ಕಷ್ಟವನ್ನು ಸೂರ್ಯನ ಸಾಕ್ಷಿಯಾಗಿ ಅನುಭವಿಸುತ್ತಿದ್ದರೆ ನಾವು ತಂಪು, ನೆರಳು, ತಿಳಿಗತ್ತಲೆಯ ಮನೆಯ ಸುಖವನ್ನು ಹರಟೆಯ ಕೂಡ ಅನುಭವಿಸುತ್ತಿದ್ದೆವು. ಆದರೆ ಆ ಕಾಲ ಹೋಯಿತು. ಇವರ ಕಾಲ ಬಂದಿತು. ಹೊಲಗಳು ಅಡವಿಯ ಪಾಲಾದವು. ಮನೆಯು ಗಾಳಿ-ಮಳೆಯ ಆವಾಸಸ್ಥಳವಾಯಿತು. ಬೆಳೆಯು ಬೈಲಾಯಿತು. ಮನೆಯ ನೆರಳು ಬಿಸಿಲಾಯಿತು. ತಂಪು ಕಾವಾಯಿತು. ಒಂದು ತುತ್ತು ಅನ್ನಕ್ಕೂ ಅಭಾವಿಯಾಗಿ ನಿಲ್ಲಬೇಕಾಯಿತು. ತಾಯಿಯು ಬದುಕಿನ ದಾರಿಯನ್ನು ತೋರಿಸಿದಳು. ಧರ್ಮಕ್ಕೆ ನಂಬಿ ಬದುಕಿನ ಇತಿಶ್ರೀಯನ್ನು ಮಾಡಿಕೊಳ್ಳಬೇಕೇ ? ಬದುಕನ್ನು ನಂಬಿ ಧರ್ಮದ ಇತಿಶ್ರೀಯನ್ನು ಮಾಡಬೇಕೇ ? ಧರ್ಮವು ಮುಗಿಲಿನಿಂದ ಇಳಿದುದು. ಬದುಕು ನಾವು ರಚಿಸಿಕೊಂಡುದು. ಜೀವವು, ದೇಹವು ಬದುಕಿಗೆ ಹಂಬಲಿಸುವವು. ಬದುಕಬೇಕು, ಬದುಕಲೇ ಬೇಕು. ಬದುಕು ತಾಯಿಯ ಮಂತ್ರ. ಬದುಕುವ ಸಂಪತ್ತಿದೆ ಎಂದು ಚೆನ್ನಯ್ಯನ ಆಶ್ವಾಸನ. ಬದುಕಬೇಡೆಂಬ ಧರ್ಮದ ಶಾಪ ಎಲ್ಲಿ ನೆನಪಿನಲ್ಲಿ ಉಳಿಯಬೇಕು ? ಬದುಕುವದು, ಬದುಕಿದೆ, ಬದುಕುತ್ತಿರುವೆ. ಬದುಕಿಗೆ ಆ ಹಳ್ಳಿ ಸಣ್ಣದು, ಆ ಕ್ಷೇತ್ರ ಚಿಕ್ಕದು. ಅದೇ ಜನ, ಅದೇ ಮನೆ, ಅದೇ

ಗಿಡ, ಅದೇ ಹಳ್ಳಿ, ಅದೇ ಕಾಗೆ ಕೊಂಬೆಯ ಮೇಲೆ ಕುಳಿತು ಕಾಕಾ ಎನ್ನುವದು. ಅದೇ ಗುಬ್ಬಿ ಮೊರದ ಮುಂದಿನ ಅಕ್ಕಿಯ ನುಚ್ಚಿಗೆ ಹವಣಿಸುವದು. ನೋಡಿ ನೋಡಿ ಕಣ್ಣಿಗೆ ಮಂಜು, ಕೇಳಿ ಕೇಳಿ ಕಿವಿಗೆ ಕಿವುಡು. ತಾಲೂಕು ದೊಡ್ಡದು. ವಿಶಾಲವಾದ ಮನೆಗಳು ಇರುವವು. ನಾನಾ ತರದ ಜನರಿರುವರು. ನಾನಾ ಅವಸ್ಥೆಯ ಜನರು ಇರುವರು. ಇಲ್ಲಿ ಬಂದು ನಿಲ್ಲಬೇಕು. ಕಣ್ಣಿಗೆ ಹಬ್ಬ ಮಾಡಿಕೊಳ್ಳಬೇಕು. ತಿರುಗಿ ತಿರುಗಿ ಕಾಲಿಗೆ ದಣಿವು ಮಾಡಿಕೊಳ್ಳಬೇಕು. ರುಚಿರುಚಿಗಳನ್ನು ತಿಂದು ನಾಲಗೆಯ ಕಿಲುವು ಕಳೆದುಕೊಳ್ಳಬೇಕು. ಓರಗೆಯ ರೂಪಸಿಯರಲ್ಲಿ ನಿಂತು ನನ್ನ ರೂಪವನ್ನು ಪ್ರದರ್ಶಿಸಬೇಕು. ಚಿನ್ನಯ್ಯನು ಹೇಳಿದಂತೆ ಸ್ಪರ್ಧಿಸಬೇಕು. ರಸಿಕರ ಕಣ್ಣು-ಮನದ ಗೊಂಬೆಯಾಗಿ ಮೆರೆದಾಡಬೇಕು. ನಮ್ಮ ಹಳ್ಳಿಯಲ್ಲಿದ್ದ ತೀರ ದೊಡ್ಡವರ, ಹೆಚ್ಚು ಶ್ರೀಮಂತರ ಐಶ್ವರ್ಯ ಸಿರಿ ಯನ್ನು ಪರೀಕ್ಷಿಸಬೇಕು. ಸುಖಕ್ಕೆ ಸಂತೋಷಕ್ಕೆ ನಾಲಗೆಗಳೆಷ್ಟು, ಕಣ್ಣುಗಳೆಷ್ಟು ಎಂಬುದನ್ನು ಎಣಿಸಬೇಕು ಎಂಬ ಸಿಧ್ಧಾಂತದಲ್ಲಿ ಬಂದಿದ್ದಳು.

ಮೂವರು ಬೇರೆ ಬೇರೆ ಆಲೋಚನೆ, ಸಿಧ್ಧಾಂತಗಳನ್ನಿಟ್ಟು ಕೊಂಡು ಬಂದಿದ್ದರು. ಕಾರ್ಯ ಮಾತ್ರ ಆದುದು ಒಂದು.

ಅಂತೂ ಅಕ್ಕಾಮರಿಯು ತಾಲೂಕಿಗೆ ಬಂದಳು.

ತಾನು ವಾಸ ಮಾಡಿದ ತಾಲೂಕಿನ ಸ್ಥಳವು ತನ್ನ ಮೊದಲ ನೆಯ ಹಳ್ಳಿಯ ೮-೧೦ ಪಟ್ಟು ದೊಡ್ಡದಿದೆ ಎಂದೆನಿಸಿತು. ತಾಲೂಕಿನ ಒಂದೇ ಬೀದಿಯಲ್ಲಿ ಓಡಾಡಿದರೂ ೧೦-೧೨ ಹಳ್ಳಿಗಳಲ್ಲಿ ತಿರುಗುತ್ತಿರುವೆನೆಂದು ಸಂತೋಷ. ವಿಚಿತ್ರವಾದ ಜನ. ವಿಚಿತ್ರವಾದ ಪದ್ಧತಿಗಳು. ವಿಚಿತ್ರವಾದ ಭಾಷೆಗಳು. ಮನಸು ಉತ್ತೇಜನಗೊಂಡಿತು.

ಅಕ್ಕಾಮರಿಯು ತಾಲೂಕಿಗೆ ಬಂದ ಮೇಲೆ ಕಾಯಾಪಲ್ಲಟವಾದಂತಾಯಿತು. ಹಳ್ಳಿಯಲ್ಲಿದ್ದ ಸಮಯದಲ್ಲಿ ಒಂದು ಹೊಸ ಬಟ್ಟೆಯನ್ನು ಉಡಲು ಆತಂಕ. ಒಂದು ಹೊಸ ಆಭರಣವನ್ನು ಧರಿಸಲು ಹೆದರಿಕೆ. ಸಂಜೆಗೆ ತಿರುಗಾಡ ಹೋಗಲು ಭಯ. ಹೀಗೆ ಭಯದ ಚಕ್ರ ವ್ಯೂಹದಲ್ಲಿ ಸಿಕ್ಕು ತೊಳಲಾಡಬೇಕಿದ್ದಿತು. ಮತ್ತು ಕಿಡಿಗೇಡಿ

ತರುಣರ, ಬಳಗದವರ ಹೇಸಿಮಾತುಗಳನ್ನು ಕೇಳುವ ಪ್ರಸಂಗಗಳು ಆಗಾಗ ಬರುತ್ತಿದ್ದವು. 'ನಟಿ–ನಟಿ....'ಎಂದು ಎದುರು ನಿಂತು ನುಡಿಯುತ್ತಿದ್ದರು. ಬಾಗಿಲ ಮೇಲೆ 'ವೇಶ್ಯಾಗೃಹ'ವೆಂದು ಬರೆಯುತ್ತಿದ್ದರು. ಹೀಗೆ ತಳಮಳಗೊಂಡ ಮನಸು ತಾಲೂಕಿನ ವಿಸ್ತಾರವಾದ ಕ್ಷೇತ್ರದಲ್ಲಿ ಸ್ವತಂತ್ರವಾಯಿತು. ಸ್ವಚ್ಛಂದತೆಯನ್ನು ಹೊಂದಿತು.

ಅಕ್ಕಾಮರಿಯು ತಾಲೂಕಿನ ತಿಂಗಳೊಪ್ಪತ್ತಿನ ವಾಸದಲ್ಲಿ ನೂರಾರು ಸಂಗತಿಗಳನ್ನು ಅರಿತಳು. ತನ್ನನ್ನು ಪ್ರತಿಸ್ಪರ್ಧಿಸುವ ಹಲವಾರು ವಯ್ಯಾರಿಯರನ್ನು ನೋಡಿದಳು. ತನ್ನ ಮೂಗಿಗೂ ಅವರ ಮೂಗಿಗೂ ಹೋಲಿಸಿದಳು. ತನ್ನ ಕೆನ್ನೆಗೂ ಅವರ ಕೆನ್ನೆಗೂ ಸರಿಹಚ್ಚಿದಳು. ತನ್ನ ತುಟಿಗೂ, ಅವರ ತುಟಿಗೂ, ತನ್ನ ಹಲ್ಲಿಗೂ ಅವರ ಹಲ್ಲಿಗೂ, ತನ್ನ ವೇಷಭೂಷಣಕ್ಕೂ ಅವರ ವೇಷಭೂಷಣಕ್ಕೂ ಸರಿಹಚ್ಚಿದಳು. ಕೆಲವು ಹೀನಾಯವೆನಿಸಿದವು. ಕೆಲವು ಒಳ್ಳೆಯವೆನಿಸಿದವು. ಅವರನ್ನು ಮೀರಬೇಕು. ಅವರ ಕಣ್ಣಿಂಜಲಕ್ಕೆ ತನ್ನ ಸೌಂದರ್ಯ ತಾಕಬೇಕು. ಅವರ ಕುತೂಹಲಕ್ಕೆ ತಾನು ಕಾರಣಳಾಗಬೇಕು. ಅವರ ಆಶಾಪೂರ್ಣದೃಷ್ಟಿಗೆ ತನ್ನ ದರ್ಶನದ ಅಲಭ್ಯ ಲಾಭವಾಗಬೇಕು ಎಂದು ಹಂಬಲಿಸಹತ್ತಿದಳು. ಅನೇಕ ಉಪಾಯಗಳನ್ನು ಕಲ್ಪಿಸಿದಳು. ಹೀನವಾದವುಗಳನ್ನು ಸರಿಪಡಿಸಿದಳು. ಉತ್ತಮವಾದವುಗಳನ್ನು ಇನ್ನೂ ಉತ್ತಮವಾಗುವಂತೆ ಬಣ್ಣ ಕೊಟ್ಟಳು. ಈ ಬದಲಾವಣೆಯ ಜೊತೆಗೆ ಮನಸೂ ಬದಲಾಯಿತು. ಭಾವನೆಯೂ ಬದಲಾಯಿತು, ಅನುಭವವೂ ಬದಲಾಯಿತು.

ಅಕ್ಕಾಮರಿಯು ಸಂಪೂರ್ಣ ಬದಲಾದಳು.

## ೩೨

ರಾಜಣ್ಣನು ಊರಿಗೆ ಬಂದುದು ಹಾ–ಹೂ ಎನ್ನುವಷ್ಟರಲ್ಲಿ ಹಬ್ಬಿತು. ಅವನು ಎಷ್ಟು ದಿನಗಳ ಮೇಲೆ ತಿರುಗಿ ಬಂದುದು! ಅವನು ಲೋಕಾಂತರವನ್ನೈದಿದನೆಂದೇ ಎಲ್ಲರ ಭಾವನೆಯಾಗಿದ್ದಿತು. ಹಾಗೆ ಅವನ ಗೆಳೆಯರು ಊರಲ್ಲಿ ಸುದ್ದಿಯನ್ನು ಹರಡಿದ್ದರು. ತಿರುಗಿ ಬಂದುದು ಒಂದು ಕುತೂಹಲ ಸಂಗತಿಯಾಯಿತು.

ರಾಜಣ್ಣನು ದೇವರಲ್ಲ, ಯಕ್ಷ–ಗಂಧರ್ವನಲ್ಲ. ರಾಜನಲ್ಲ. ವಿದ್ವಾಂಸನಲ್ಲ. ಮುಖಂಡನಲ್ಲ. ಧರ್ಮಗುರುವಲ್ಲ. ಪವಾಡ ಪುರುಷನಲ್ಲ. ಪ್ರಾಂತದ ಮಂತ್ರಿಯಲ್ಲ. ಮೂರು ಕಾಲಿನ, ಒಂದು ಕಣ್ಣಿನ ವಿಚಿತ್ರ ಪ್ರಾಣಿಯಲ್ಲ. ಅಥವಾ ಸಿನೇಮಾ ನಟಿಯೂ ಅಲ್ಲ. ಕೇವಲ ಹಳ್ಳಿಯ ಮುಟ್ಠಾಳ ರಾಜಣ್ಣ. ಅವನನ್ನೇ ನೋಡಲು ಜನ ಜಾತ್ರೆ ನೆರೆಯಿತು. ಅಪ್ಪಾರಾಯರು ಸತ್ತ ಮೇಲೆ ಅವರ ಅಂಗಳ ದಲ್ಲಿ ಇಷ್ಟು ಜನರ ಪಾದಧೂಳಿ ಬಿದ್ದುದು ;ಇದೇ ಮೊದಲು. ಇದೇ ಕಡೆಯದು. ಬಂದ ಜನರನ್ನು ರಾಜಣ್ಣನೂ ಕುತೂಹಲದಿಂದ ನೋಡಹತ್ತಿದನು. ನೋಡ ಬಂದವರಲ್ಲಿ ಸದ್‌ಗೃಹಸ್ಥರಿರಲಿಲ್ಲ. ಕೇವಲ ಬಿಡಾಡಿ ಒಕ್ಕಲಿಗರು. ಕೆಲಸವಿಲ್ಲದ ಹೆಂಗಸರು. ಉಂಡಾಡಿ ತರುಣರು. ಹೊಸ ಪ್ರಸಂಗದ ಸಂಶೋಧನದಲ್ಲಿದ್ದ ಬಿಳಿಮೀಸೆಯ, ಕೈಕೋಲಿನ, ಬಾಗಿದ ಬೆನ್ನಿನ ವೃದ್ಧರು. ಬರಿಹೊಟ್ಟೆಯ ಬಾಲಕರು. ಎಣ್ಣೆಗಾಣದ ಕೂದಲಿನ ಬಾಲಿಕೆಯರು!

ನೋಡಿದರು. ಮನ ದಣಿಯುವಂತೆ ನೋಡಿದರು. ಕಣ್ಣು

ಸಂತೃಪ್ತಿಯನ್ನು ಪಡೆಯಿತು. ಇನ್ನು ಉಳಿದುದು ಬಾಯಿ! ಬುದ್ಧಿಯು ತನ್ನ ಕೈ ಕೋಲು ಚುಚ್ಚಿ ಬಾಯ ಸೆರೆಯನ್ನು ಬಿಚ್ಚಿ ಅವನ ಬಗ್ಗೆ ಪ್ರಶ್ನಿಸಿ ತಿಳಿದುಕೊಳ್ಳಬೇಕೆಂದು ಹವಣಿಸುತ್ತಿದ್ದಿತು. ಎಲ್ಲರ ಆಶೆಯು ಇದೇ ಇದ್ದಿತು.

ಒಬ್ಬ ವೃದ್ಧನು ಹಿರಿತನದ ತನ್ನ ಪಾವುಡವನ್ನು ಸರಿಪಡಿಸಿಕೊಂಡು ಗದ್ದಲವನ್ನು ಹಿಂದೆ ಸರಿಸುತ್ತ ಮುಂದೆ ಬಂದನು. ರಾಜಣ್ಣನ ಎದುರು ದಂತವನ್ನೂರಿ, ಅರ್ಧವರ್ತುಳವಾಗಿ ಬಗ್ಗಿ ಮೇಲ್‌ದುಟಿಯ ಮೇಲೆ ಚಪ್ಪರವಾಗಿದ್ದ ಮೀಸೆಯನ್ನು ತೀಡಿ ಅಗಲವಾಗಿ ಮಾಡಿಕೊಂಡು "ಇಲ್ಲೇಕೆ ರಾಜಣ್ಣ? ಎಂದು ಬಂದೆ?" ಎಂದು ಹಲ್ಲಿಲ್ಲದ ಬಾಯಿಂದ ಜೊಲ್ಲು ಉದುರಿಸುತ್ತ ಕೇಳಿದನು.

ಎಲ್ಲರೂ ಬೆಪ್ಪಾಗಿ ನಿಂತರು. ಅದು ಎಲ್ಲರ ಪ್ರಶ್ನೆಯಿದ್ದಿತು. ಉತ್ತರವು ಅವಶ್ಯವಾಗಿದ್ದಿತು.

"ನನ್ನ ಮನೆ. ನಿನ್ನೆ ಬಂದೆ." ನುಡಿದನು.

"ಇಷ್ಟು ದಿನ ಎಲ್ಲಿದ್ದೆ?"

"ನನಗೆ ಗೊತ್ತಿಲ್ಲ. ತಾಲೂಕಿನಿಂದ ಬಂದೆ. ನಿಮಗೇನು ಮಾಡಬೇಕು?"

"ನಿನ್ನ ಮನೆಯೆಲ್ಲ ಬಿದ್ದಿದೆ."

"ಹೌದು. ಕಾಣುತ್ತಿರುವೆ."

"ಅಕ್ಕಾಮರಿಯವರು ಎಲ್ಲಿರುವರು?"

"ತವರು ಮನೆಯಲ್ಲಿರಬೇಕು."

"ಅವರು ಅಲ್ಲಿ ಇಲ್ಲ." ಬೇರೆಯವನು ಹೇಳಿದನು.

"ಇಲ್ಲ!" ತಾತ್ಸಾರದಿಂದ ನುಡಿದನು.

"ಎಂಥ ಒಳ್ಳೆಯ ಮಗಳು! ರಾಜಣ್ಣ, ಅವರನ್ನು ಕರೆದುಕೊಂಡು ಬಾ. ಮನೆಯನ್ನು ಕಟ್ಟು. ಒಳ್ಳೆಯ ರೀತಿಯಿಂದ ಬಾಳುವೆಯನ್ನು ಮಾಡು" ಎಂದು ಉಪದೇಶಿಸಿದನು.

ರಾಜಣ್ಣನ ಕಕ್ಕನು, ಹಿಂದಿನಿಂದ ಅವನ ಹೆಂಡತಿ ಮಕ್ಕಳು ಮರಿಗಳು ಎಲ್ಲರೂ ಬಂದರು. ಜನರು ಚದರಿ ಚೆಲ್ಲಾಪಿಲ್ಲಿಯಾಗಿ

ಹಾದಿಯನ್ನು ಮಾಡಿಕೊಟ್ಟರು. ಕಕ್ಕನು ನೇರವಾಗಿ ಹತ್ತರ ಬಂದು ಜನರನ್ನು ಉದ್ದೇಶಿಸಿ "ಇಲ್ಲೇನಿದೆ? ನಿಮ್ಮ ಕೆಲಸ ಮುಗಿಯಿತು. ಇನ್ನು ಹೋಗಿರಿ. ರಾಜಣ್ಣನೇನು ದೇವರಲ್ಲ, ದಿಂಡರಲ್ಲ. ಹೋಗಿರಿ" ಎಂದು ಗದರಿಸಿದನು.

ಜನರು ಇನ್ನೂ ದೂರ ಸರಿದರು. ಕೆಲವರು ಮನೆಯ ಹಾದಿಯನ್ನು ಹಿಡಿದರು.

"ಏಳು ರಾಜಣ್ಣ, ಮನೆಗೆ ನಡೆ!" ಎಂದು ಕಕ್ಕನು ಕಕ್ಕುಲತೆಯಿಂದ ಕರೆದನು.

"ಇಲ್ಲೇ ಇರುವೆ ಕಕ್ಕ."

"ಇಲ್ಲೇ ಹೇಗಿರುವೆ ರಾಜಣ್ಣ!"

"ಈ ಕಬ್ಬಿಣದ ದೇಹವು ಮಣ್ಣು ತಿಂದು ಇರುವದು."

"ಎರಡು ದಿನ ನಮ್ಮ ಮನೆಗೆ ನಡೆ. ಆ ಮುಂದೆ ನಿನ್ನ ಮನೆಯಿದೆ. ನೀನಿರುವೆ" ಎಂದನು.

ರಾಜಣ್ಣನು ಸುಮ್ಮನೆ ಕುಳಿತನು,

"ರಾಜಣ್ಣ, ಒಂದೆರಡು ದಿನಗಳ ಮಟ್ಟಿಗೆ ಕರೆಯುವರು. ನಿಮ್ಮ ತಂದೆಗೆ ಅವರು ಹೊರಗಿನವರಲ್ಲ. ಮಕ್ಕಳ ಸಂಗಡ ನೀನೂ ಊಟ ಮಾಡು. ಹಿರಿಯರು ಕರೆಯ ಬಂದಿರುವರು. ನೀನು ನಮ್ಮ ಮನೆಯಲ್ಲಿ ಒಂದೆರಡು ದಿನ ಊಟಮಾಡಿದರೆ ನಮಗೂ ಸಂತೋಷ" ಎಂದು ಕಕ್ಕನ ಹೆಂಡತಿಯು ಪ್ರೀತಿಯಿಂದ ಕರೆದಳು.

ಕಕ್ಕನು ರಟ್ಟೆಯನ್ನು ಹಿಡಿದು ಮೇಲೆಬ್ಬಿಸಿದನು. ರಾಜಣ್ಣನು ಅವರ ಸಂಗಡ ಮನೆಗೆ ಹೋದನು.

ರಾಜಣ್ಣನು ಕಕ್ಕನ ಮನೆಯ ಕಟ್ಟೆಯಮೇಲೆ ವಿಶ್ರಮಿಸಿದನು!

ಕೆಲಹೊತ್ತು ನಿರೀಕ್ಷಣೆಯಲ್ಲಿ ಕಳೆಯಿತು.

"ನಿನ್ನ ತಂದೆಯುವರು ಎಷ್ಟು ದೊಡ್ಡ ಮನುಷ್ಯರು!" ಕಕ್ಕನು ಚಂಚಿಯನ್ನು ಬಿಚ್ಚುತ್ತ ನುಡಿದನು.

"ಅವರೂ ಸತ್ತರು ಕಕ್ಕ!" ರಾಜಣ್ಣನು ನಡುವೆಯೇ ನುಡಿದನು.

"ಎಲ್ಲರೂ ಒಂದಿಲ್ಲೊಂದು ದಿನ ಸಾಯುವವರೇ! ಆದರೆ ನಿನ್ನ

ತಂದೆಯವರು ಮಾನದಿಂದ ಬಾಳಿದರು. ಮಾನದಿಂದ ಸತ್ತರು."

"ಹೌದು. ಇದ್ದ ಮನೆಯ ಮಾನವನ್ನು ತಮ್ಮ ಸಂಗಡ ಬಳಿದು ಕೊಂಡು ಹೋದರು. ನನ್ನ ಪಾಲಿಗೆ ಒಂದು ಸಿಂಪಿಯಷ್ಟು ಸಹ ಉಳಿಸಲಿಲ್ಲ."

ರಾಜಣ್ಣನ ಮಾತು ಸ್ವಾಭಾವಿಕವೋ, ಅಣಕವೋ ಕಕ್ಕನಿಗೆ ತಿಳಿಯಲಿಲ್ಲ. ಅಣಕವೆಂದು ತಾವಾಗಿಯೇ ಅರ್ಥಮಾಡಿ ವಿಷಾದ ಪಟ್ಟುಕೊಳ್ಳುವದು ಸರಿಯಲ್ಲವೆಂದು ಸುಮ್ಮನಾದರು.

"ರಾಜಣ್ಣ, ಅಕ್ಕಾಮರಿಯು ಇಲ್ಲಿಂದ ಹೋಗಿ ಬಹಳ ದಿನ ಗಳಾದವು. ಈಗ ಎಲ್ಲಿರುವಳು ?"

"ನನಗೆ ತಿಳಿಯದು ಕಕ್ಕ."

"ತಾಯಿಯ ಜತೆಗೆ ಇರಬಹುದು."

"ಅದಿರಲಿ ಕಕ್ಕ. ಮನೆಯೆಲ್ಲ ಬಿದ್ದಿದೆ."

"ಹೌದು. ನೀನು ಇದ್ದಾಗಲೇ ಬಿದ್ದಿತ್ತು."

"ಬಚ್ಚಲ ಮನೆಯೊಂದು ಬಿದ್ದಿದ್ದಿತು. ಈಗ ಏನೂ ಉಳಿದಿಲ್ಲ. ತಾನಾಗಿ ಬಿದ್ದಿತೋ, ಯಾರಾದರೂ ಕೆಡವಿದರೋ ?"

"ಏನು ಹೇಳುವದು ರಾಜಣ್ಣ ! ದಿಕ್ಕಿಲ್ಲದ ಮನೆಯನ್ನು ದೇವರು ಸಹ ರಕ್ಷಿಸಲಾರನು. ನಮ್ಮೂರ ಗುತ್ತ ಹಾಳಾದ ಮೇಲೆ ಕಟ್ಟಿಗೆಯ ತುಬಾಗ್ರತೆ ಬಹಳವಾಗಿದೆ. ಜನರು ಸುಟ್ಟ ಮನೆಯ ಗಳವನ್ನು ಹಿರಿಯುವದು ಒತ್ತಟ್ಟಿಗಿರಲಿ, ಇದ್ದ ಮನೆಯ ಗಳ ಹಿರಿಯುವ ಜನರು ಕಡಮೆಯಿಲ್ಲ. ಕಳಗಿಗೆ ಎಂದು ಒಯಿದರು. ಕುಂಟಿಯ ಕಾಲಿಗೆ ಎಂದು ತೆಗೆದುಕೊಂಡು ಹೋದರು. ಯಾರನ್ನು ಯಾರು ತಡೆಯಬೇಕು ರಾಜಣ್ಣ !"

"ತೊಲೆಗಳಿದ್ದವಲ್ಲ ಕಕ್ಕ !"

"ಅವೆಲ್ಲ ಹುಳಿತು ಹೋಗಿದ್ದವು. ಅವುಗಳನ್ನೂ ಒಯಿದರು."

"ನೀವು ತಡೆಯಬಹುದದ್ದಿತು."

"ಓ ! ಒಡ್ಡೇ ಒಡೆದು ಹೋದಮೇಲೆ ಹಿಡಿಮಣ್ಣಿನಿಂದ ಏನಾದೀತು ?"

"ನೀವಾದರೂ ತರಿಸಿ ಇಲ್ಲಿ ಇಡಬಹುದಿದ್ದಿತು!"

"ನೀನು ಏನು ಅನ್ನುವೆಯೋ ಎಂದು ತಿಳಿದು ಬಿಟ್ಟೆ."

"ಹೋಗಲಿ ಬಿಡಿರಿ."

"ನಿಮ್ಮ ದೊಡ್ಡಪ್ಪನು ಎರಡು ತೊಲೆಗಳನ್ನು ಮಾತ್ರ ಒಯಿದನು"

"ಒಳ್ಳೇದು" ಎಂದು ಅತ್ತಿತ್ತ ನೋಡಹತ್ತಿದನು. ಊಟದ ವೇಳೆಯಾಯಿತೆಂದು ಕಕ್ಕನ ಮಗಳು ಎಚ್ಚರಿಸಿದಳು.

"ರಾಜಣ್ಣ, ಸ್ನಾನಮಾಡು. ಏಳು."

"ಏತಕ್ಕೆ ಬಿಡು ಕಕ್ಕ."

"ಸ್ನಾನವನ್ನು ಮಾಡು. ಮೈ ಹಗುರಾಗುವದು."

"ಬೇಡ ಕಕ್ಕ. ಗಂಗೆಯು ಮೈಲಿಗೆಯಾಗುವದು. ಕೈ ತೊಳೆಯಲು ಒಂದಿಷ್ಟು ನೀರು ಸಾಕು."

"ಹೊಟ್ಟೆಯಲ್ಲಿ ಹೋಗುವದಲ್ಲ. ಆಗ ಮೈಲಿಗೆ ಇಲ್ಲವೇನು?"

"ತೊಯಿದ ಅರಿವೆಯನ್ನು ಹಿಂಡಿದಂತೆ ಕುಡಿದ ನೀರು ಹೊರಗೆ ಹೋಗುವದು. ತಿರುಗಿ ಅನ್ನಾಶಯದಲ್ಲಿ ಫಲ್ಟರ ಆಗುವದು. ನೀರಿನ ಹುಳ, ರೋಗದ ಜಂತುಗಳು ಹೊಟ್ಟೆಯಲ್ಲಿಯೇ ಉಳಿಯುವವು."

ಕಕ್ಕನು ಮಾತು ಬೆಳಸಲಿಲ್ಲ. ಊಟವಾಯಿತು. ತನ್ನ ಎಲೆ, ಮುಸುರೆಯನ್ನು ತಾನೇ ಬಳಿದುಕೊಂಡನು. "ಕಕ್ಕನು ಒಕ್ಕಲಗಿತ್ತಿ ಬಳಿಯುವಳು. ಬಿಡು ರಾಜಣ್ಣ" ಎಂದು ಎಷ್ಟು ಬಲವಂತ ಮಾಡಿದರೂ ಕೇಳಲಿಲ್ಲ. ಆದರೆ ಕಕ್ಕನು ಬಳಿಯಲ್ಲಿ ನಿಂತು ಬ್ರಾಹ್ಮಣ ಪದ್ಧತಿಯ ಗೋಮಯದ ಎಲ್ಲ ವಿಧಾನಗಳನ್ನೂ ಕಲಿಸಿದನು. ತಂಬಿಗೆ, ಥಾಲಿಗಳನ್ನು ತೊಳೆದು ಬಿಸಿಲಿಗೆ ಒಣಗಲಿಕ್ಕೆ ಇಟ್ಟು ಹೊರಗೆ ಬಂದನು. ಕಕ್ಕನು ಬೀಡಿಗೆ ಒಂದಾಣೆಯನ್ನು ಕೊಟ್ಟನು.

ನಾಲ್ಕೈದು ದಿನಗಳ ರಾಜಣ್ಣನ ವಾಸ ಕಕ್ಕನ ಮನೆಯಲ್ಲಿಯೇ ಆಯಿತು. ಉಭಯತರಿಗೂ ಒಂದಿಷ್ಟು ಸಂಕೋಚದಿಂದಲೇ ನಡೆಯಿತು. ಅದು ಸ್ಪಷ್ಟವಾಗಿ ಕಾಣುತ್ತಿದ್ದಿತು.

ಕಕ್ಕನ ಮನೆಯನ್ನು ಬಿಡಬೇಕೆಂದು ರಾಜಣ್ಣನ ಆಶೆ. ಇವನನ್ನು ಹೊರಗೆ ಹಾಕಬೇಕೆಂದು ಕಕ್ಕನ ಬಯಕೆ. ಈ ಉಭಯ

ರೂಪಿ ವಿರುದ್ಧ ಭಾವನೆಯಲ್ಲಿ ಮತ್ತೆ ಏಳೆಂಟು ದಿನಗಳು ಕಳೆದವು. ಉಪಕಾರದ ಹೊರೆಯು, ದಾಂಭಿಕ ಆದರದ ಈ ಎಂಟು ದಿನಗಳು ಕಷ್ಟದಿಂದಲೇ ಕಳೆದವೆಂದು ಹೇಳಬಹುದು.

ಒಂದು ದಿನ ರಾಜಣ್ಣನು ಸಂಜೆಯ ಊಟವಾದ ಮೇಲೆ ಅಕಸ್ಮಾತ್ತಾಗಿ "ನಿಂಗಿಯು ಎಲ್ಲಿರುವಳು ಕಕ್ಕ?" ಎಂದು ಫಕ್ಕನೆ ಕೇಳಿದನು.

ಪ್ರಶ್ನದಿಂದ ಕಕ್ಕನು ನಿಜವಾಗಿ ಸಿಟ್ಟಾದನು. ರಾಜಣ್ಣನಿಗೆ ನಿಂಗಿಯ ನೆನಪಾದುದು ಇನ್ನುಮುಂದೆ ನಡೆಯಲಿರುವ ಅನಾಹುತದ ಪೂರ್ವಚಿಹ್ನವೆಂದು ಅರ್ಥಮಾಡಿಕೊಂಡನು. ಇಂದಿನ ರಾತ್ರಿ ಹೇಗೋ ಎಂತೋ ಎಂದು ಗ್ರಹಿಸಿದನು. ಸಿಟ್ಟಿನ ಭಾವನೆಯಿಂದಲೇ "ಅದೆಲ್ಲ ನನಗೆ ಹೇಗೆ ಗೊತ್ತು?" ಎಂದು ಒಂದಿಷ್ಟು ಬಿರುಸಾಗಿ ನುಡಿದನು.

"ಕಕ್ಕ ನಿಮ್ಮ ತಲೆಯು ತುಂಬ ಊರಿದೆ. ಜನರಿರುವರು. ಮೆದುಳಿನ ಪರೆಪರೆಯಾದ ಡಾಯರಿಯಲ್ಲಿ ಎಲ್ಲವನ್ನೂ ಬರೆದಿಟ್ಟಿರುವಿರಿ. ಅದಕ್ಕೆ ಕೇಳಿದೆ" ಸೌಮ್ಯವಾಗಿ ಹೇಳಿದನು.

"ಇದು ನನ್ನ ಸಂಪೂರ್ಣ ಅವಮಾನ ರಾಜಣ್ಣ! ಬೇಕೆಂತಲೇ ಕೇಳಿರುವೆ."

"ಕೇಳಿದ್ದು ನಿಜ ಕಕ್ಕ. ನಿಂಗಿಯು ನನಗೆ ಸಂಬಂಧಿಸಿದವಳು ಎಂಬುದೂ ನಿಜ. ಆದರೆ ನಿಮಗೆ ಆ ಸಂಗತಿ ಗೊತ್ತಿದೆ."

"ಇಂಥ ಹೊಲಸು ಸಂಗತಿಗಳನ್ನು ನಾನು ಕೇಳಲಾರೆ .... ನಿನಗೆ ನನ್ನ ಸ್ವಭಾವ ಗೊತ್ತಿರಬೇಕು...."

"ಗೊತ್ತಿದೆ."

"ನೀನು ಒಳ್ಳೆಯವನಾಗಿರಬೇಕೆಂದು ತಿಳಿದಿದ್ದೆ. ಹುಟ್ಟಿದ ಬುದ್ಧಿ ....ಏನು ಮಾಡೀತು!"

"ಅಹುದು. ಹುಟ್ಟಿದ ಬುದ್ಧಿ ಹುಗಿದರೂ ಹೋಗುವದಿಲ್ಲ. ಹುಣಸೆ ಮುಪ್ಪಾದರೂ ಹುಳಿಯು ಮುಪ್ಪಾಗದು. ಒಂದುವೇಳೆ ತಪ್ಪಿ ಉಳಿದ ಕಾಳುಗಳು ಹುಳ ತಿಂದು ಕೆಡಬಹುದು. ನಾನು ಹಾಗೆಯೇ ಆಗಿರುವೆ. ಹುಳಿ ಇದೆ, ಕಾಳಿಲ್ಲ. ಜೊಟ್ಟಿ."

"ನನಗೆ ಸಂತಾಪವಾಗುವದು ರಾಜಣ್ಣಾ! ಉಂಡ ಮನೆಯ ಗಳ ಎಣಿಸುವದೆಂದರೆ ಇದೇ ನೋಡು."

"ಕಕ್ಕ, ಸಿಟ್ಟಾಗಬಾರದು. ಹಳ್ಳಿಯೊಳಗಿನ ಬ್ರಾಹ್ಮಣರೂ ಎರಡು ಸೆರಗಿನ ಧೋತರಗಳನು ಉಡುವರು. ಒಂದು ಸೆರಗು ಮುಂದೆ ಇದ್ದು ಜನರಿಗೆ ಕಾಣುವದು. ಇನ್ನೊಂದು ನೀರಿಗೆಯ ಮಡಿಕೆಯಲ್ಲಿ ಅಡಗಿರುವದು. ಎಲ್ಲರ ಹಣೆಯಬರೆಹವೂ ಒಂದೇ! ನನ್ನದನ್ನು ನಾನು ಬೈಲಿಗಿಟ್ಟೆ. ನಿಮ್ಮದನ್ನು ನೀವು ಇನ್ನೂ ಮುಚ್ಚಿಕೊಂಡಿರುವಿರಿ. ಅದಕ್ಕೇ ನಾನು ನೀಚ, ದುಷ್ಟ, ಘಟಿಂಗ. ನೀವು ಸಂಭಾವಿತರು."

"ನೀಚ, ಹೊರಬೀಳು!" ಕಕ್ಕನು ಕೂಗಿ ನುಡಿದನು.

"ಅದೇ ಎಂದೆನು. ನಾನು ಮೊದಲೇ ಆ ಮಾತನ್ನು ಅಂದುಕೊಂಡಿದ್ದೆ. ಹೊರಟೆ. ಆದರೆ ನನ್ನ ಮಾತು ಸೋಲಲಿಲ್ಲ. ನಿಮ್ಮ ಆಕಾಲಿಕ ಸಿಟ್ಟು ಹೊರಗೆ ಹಾಕುವದು. ಹೊರಟೆ" ಎಂದು ಎದ್ದನು.

"ಹತ್ತು ದಿನ ಉಂಡು ಕಕ್ಕನ ಉಪಕಾರವನ್ನು ತೀರಿಸಿದೆ. ಪರಮ ನೀಚ!" ಎಂದು ಆಕ್ರೋಶದಿಂದ ನುಡಿದನು.

"ತಪ್ಪು ಮಾತಾಡಿದೆ ಕಕ್ಕ."

"ಹೋಗು...."

"ಹೊರಡುವೆ. ಆದರೆ ಲೆಕ್ಕವನ್ನು ಒಪ್ಪಿಸಿ ಹೊರಡುವೆ. ಹದಿನೈದು, ನಾಲ್ಕು ಅಂದರೆ ಅರವತ್ತು. ನೀವು ನನಗೆ ಹಾಕಿದ ಅರವತ್ತು ರೊಟ್ಟಿಯ ಬೆಲೆಗಿಂತ ನನ್ನ ಮನೆಯ ತೊಲೆಗಳ ಬೆಲೆಯು ಕಡಮೆಯಲ್ಲ. ಹೆಚ್ಚೆಂದು ಯಾರೇ ಹೇಳಬಹುದು. ಆದರೆ ಹೋಗಲಿ. ಅವುಗಳ ಬೆಲೆಗೂ ನಿನ್ನ ರೊಟ್ಟಿಯ ಬೆಲೆಗೂ ಸರಿ ಎಂದು ಹೇಳುವೆ. ಉಪಕಾರದ ಮಾತು, ಉಂಡ ಮನೆಯ ಗಳದ ಪ್ರಶ್ನೆ ಉಳಿಯಲಿಲ್ಲ. ಸಾಲ ಮುಟ್ಟಿತು. ಒಳ್ಳೇದು ನಡೆದೆ!" ಎಂದು ಬಾಗಿಲವರೆಗೆ ಬಂದು ಮತ್ತೆ ತಿರುಗಿ ತಾನು ಕುಳಿತ ಸ್ಥಳದ ಹತ್ತಿರ ಇಟ್ಟ ಸುಟ್ಟ ಬೀಡಿಯನ್ನು ಎತ್ತಿಕೊಂಡನು. ಕೆಳಗೆ ಬಿದ್ದ ಬೂದಿಯನ್ನು ಬೆರಳಿನಿಂದ ಸಾರಿಸಿದನು. ಬೀಡಿಯನ್ನು ಕಿಸೆಯಲ್ಲಿ ಹಾಕಿಕೊಂಡು "ಇದನ್ನು

ನುರೆತಿದ್ದೆ. ನಿನಗೆ ಹೊಲಸು ಕಕ್ಕ. ಆದರೂ ಇದನ್ನು ನಿಮ್ಮಲ್ಲಿ ಬಿಟ್ಟು ನಿಮ್ಮ ಸಣ್ಣ ಮಗನ ಚಟಕ್ಕೆ ಸಹಾಯವಾಗಿ ಉಪಕಾರದ ಕಡು ಮತ್ತೆ ಉಳಿಯುಬಹುದು. ತೆಗೆದುಕೊಂಡು ಹೋಗುವೆ. ಹ.... ಹ.... ಈಗ ಋಣಮುಕ್ತನಾದೆನು." ಎಂದು ನುಡಿದು ಹೊರಬಿದ್ದನು.

ಕಕ್ಕನು ನಿಜವಾಗಿ ಸಂತಾಪಗೊಂಡಿದ್ದನು. ರಾಜಣ್ಣನ ಬಿಸಿ ಬಿಸಿ ಮಾತುಗಳು ಮರ್ಮಸ್ಥಾನಕ್ಕೆ ತಗುಲಿ ವೇದನೆಯನ್ನುಂಟು ಮಾಡಿದ್ದವು. ಆದರೆ ಅವನ ಮಾತಿನಲ್ಲಿ ಅತಿಶಯೋಕ್ತಿಯಿರಲಿಲ್ಲ. ಎಲ್ಲವು ಸತ್ಯಸಂಗತಿಗಳು. ಕಕ್ಕನು ನಡೆಸುತ್ತಬಂದ ದಾಂಭಿಕ ಜೀವನದ ಬೈಲಾಟವಾದುದರಿಂದ, ಒಬ್ಬಿಬ್ಬರ ಕಿವಿಗೆ ಹಗಲು ಹಾಡೇ ಬಿದ್ದುದರಿಂದ, ಅದೂ ನಿರ್ಗತಿಕನಾದ, ಕುಲಭ್ರಷ್ಟನಾದ, ಅವಿವೇಕಿಯಾದ, ಆತ್ಮೀಯ ರಾಜಣ್ಣನ ಬಾಯಿಂದ ಹೊರಬಂದುದರಿಂದ ಕಿಡಿಕಿಡಿಯಾದನು. ಆದರೆ ಮಾಡುವದೇನು?

"ಪೀಡೆ ಹೋಯಿತು. ಇಷ್ಟೇ ಸಾಕು!" ಎಂದು ಸಮಾಧಾನಪಟ್ಟನು.

ಇದಕ್ಕೂ ಹೆಚ್ಚಾಗಿ 'ಈ ಅವಿವೇಕಿಯು ಮಾತಿನಲ್ಲಿ ಇಷ್ಟು ಕಾಠಿಣ್ಯವನ್ನು ಹೇಗೆ ಸಂಪಾದಿಸಿದನು?' ಎಂಬುದೇ ಆಶ್ಚರ್ಯದ ಮಾತಾಗಿದ್ದಿತು.

ಹಳ್ಳವು ಹುಟ್ಟದ ಸ್ಥಳದಲ್ಲಿ ತೀರ ಚಿಕ್ಕದಾಗಿಯೇ ಕಾಣುವದು. ಅಥವಾ ಇದೇ ಹುಟ್ಟದ ಸ್ಥಳವೆಂದು ಬೆರಳಿಟ್ಟು ಗುರುತಿಸುವದು ಕಷ್ಟದ ಕೆಲಸ. ಸುತ್ತುಮುತ್ತು ನೋಡಿ ಇಲ್ಲಿ ಹುಟ್ಟದೆ ಎಂದು ಹೇಳುವೆವು. ಮುಂದೆ ಮುಂದೆ ಹರಿದಂತೆ ಎಡಬಲದ ಸಣ್ಣ ಪುಟ್ಟ ಹಳ್ಳ, ಕಾಲುವೆ, ದರಿ, ಕಂದರಗಳ ನೀರನ್ನು ಒಡಲಲ್ಲಿ ತುಂಬಿ ಕೊಂಡು ದಂಡೆಯ ಕೈಗಳನ್ನು ಅಗಲಿಸುತ್ತ ವಿಸ್ತಾರವಾಗಿ, ಉದ್ದ ವಾಗಿ, ಗಂಭೀರವಾಗಿ ಹರಿಯುತ್ತ ಹೋಗುವದು. ಹರಿಯುವ ನೀರು ಹೊಲಸು, ಕೆಟ್ಟ ಎಂಬ ಆಲೋಚನೆಯನ್ನು ಮಾಡುವದಿಲ್ಲ. ದಂಡೆಯ ತುಂಬ ಜೀವನವನ್ನು ತುಂಬಿಕೊಂಡು ಮುಂದೆ ಮುಂದೆ ಹರಿಯುವದೇ ಅದರ ಧರ್ಮ. ಈ ಪ್ರಕೃತಿಯ ನಿಯಮಕ್ಕೆ ಅಕ್ಕಾಮರಿಯು ಅಪವಾದವಾಗಿ ನಿಲ್ಲಲಿಲ್ಲ. ಹಳ್ಳಿಯಲ್ಲಿ ಮುಗ್ಧಳಾಗಿ, ಪರದೆಯವಳಾಗಿ ಇದ್ದಳು. ತಾಯಿಯ ನೆರವಿನಿಂದ ಹೊರಗೆ ಬಂದಳು, ಗಂಡನ ಅಪ್ರೀತಿಯಿಂದ ಮನೆ ಬಿಟ್ಟಳು, ಚಿನ್ನಯ್ಯನ ಸಂಗಡ ತಾಲೂಕಿಗೆ ಬಂದಳು. ಕತ್ತಲೆಯ ಕೋಣೆಯಿಂದ ವಿಸ್ತಾರ ವಾದ ಪಟ್ಟಣಕ್ಕೆ ಕಾಲಿಟ್ಟಳು. ಕಾಣದ ಮನಸು, ಬೆಳೆಯುವ ಭಾವನೆಯ ಸಂಗಡ ಕೂಡಿ ಅವಳ ಜೀವನವನ್ನು ಇನ್ನೂ ವ್ಯಾಪ್ತಿ ಯಾಗಿ ಮಾಡ ಬಯಸಿದವು.

ತಾಲೂಕಿನೊಳಗಿನ ಪೇಟೆಯಲ್ಲಿ, ನಾಟಕಗಳಲ್ಲಿ, ಸಿನೇಮಾ ಮಂದಿರಗಳಲ್ಲಿ, ಗುಡಿಯಲ್ಲಿ, ತನ್ನ ಕಣ್ಣಳತೆಯಲ್ಲಿ ಬಂದ ರೂಪ

ರಾಣಿಯರನ್ನು ನೋಡಿದಳು. ಅವರ ಅಲಂಕಾರಗಳಿಗೂ ತನ್ನ ಬಗೆಗೂ ಹೋಲಿಸಿಕೊಂಡಳು. ಕೆಲವು ಹಳಯವೆಂದುಕೊಂಡಳು. ಪ್ರಚಾರದಲ್ಲಿದ್ದ ಕೆಲವು ಸೌಂದರ್ಯ ಪ್ರಸಾಧನಗಳು ತನ್ನಲ್ಲಿರಲಿಲ್ಲ. ಅದುಬೇಕು; ಇದುಬೇಡ. ಇನ್ನೊಂದು ಒಳ್ಳೆಯದು, ಮಗುದೊಂದು ಅತ್ಯುತ್ತಮವಾದುದು ಎಂಬ ಬಯಕೆಗಳು ದಿನದಿನಕ್ಕೆ ಬಲಿಯುತ್ತ ನಡೆದವು. ಅವುಗಳನ್ನು ಪಡೆಯಲಿಕ್ಕೆ ಉಟ್ಟು-ತೊಟ್ಟು ಸಾರ್ವಜನಿಕರಲ್ಲಿ ಪ್ರದರ್ಶಿಸಲು ಮನಸು ತವಕವನ್ನು ಪಡಹತ್ತಿತು. ಆಗ ಹಿಂದಿನ ಸ್ಥಿತಿಗತಿಯನ್ನು ಸ್ಮರಿಸಲಿಲ್ಲ. ಇಂದಿನದನ್ನು ನೆನಸುವಂತಿಲ್ಲ. ಮುಂದಿನದೇ ಸ್ಮರಣೆಯಲ್ಲುಳಿದು ಉತ್ತೇಜನಗೊಳಿಸ ಹತ್ತಿತು.

ಚಿನ್ನಯ್ಯನು ನಿತ್ಯ ಬರುತ್ತಿದ್ದನು. ಮಾತಾಡುತ್ತಿದ್ದನು. ಹರಟೆಯನ್ನು ಹೊಡೆಯುತ್ತಿದ್ದನು. ವಿನೋದ ಮಾಡುತ್ತಿದ್ದನು. ಕೂಡಿದಾಗ ಊಟವನ್ನು ಮಾಡುತ್ತಿದ್ದನು. ಆದರೆ ಅಕ್ಕಾವರಿಯು ತನ್ನನ್ನು ಮೊದಲಿನಂತೆ ಕಾಣುತ್ತಿಲ್ಲವೆಂದು ತಿಳಿದುಕೊಂಡನು. ಅಪರಿಚಿತರು ಪರಿಚಿತರಾದ ಮೇಲೆ ಮೊದಲಿನ ಸಂಕೋಚ, ನಾಜೂಕುಗಳು ಸೂಕ್ಷ್ಮದಿಂದ ಸ್ಥೂಲಕ್ಕೆ ತಿರುಗುವವೆಂದು ಒಮ್ಮೊಮ್ಮೆ ತಿಳಿದುಕೊಂಡು ಬಿಡುತ್ತಿದ್ದನು. ಒಮ್ಮೊಮ್ಮೆ ನಿಜವೆನಿಸಿದಂತಾಗುತ್ತಿದ್ದಿತು. ಕೈಯಲ್ಲಿ ಏನಾದರೂ ಹೊಸ ವಸ್ತುವನ್ನು ಹಿಡಿದುಕೊಂಡು ಬಂದು ತೋರಿಸಿದರೆ ಆ ಕ್ಷಣದ ಮಟ್ಟಿಗೆ ಮೊದಲಿನ ಬೆಡಗು ಬಿನ್ನಾಣಗಳು ತಾಯಿ ಮತ್ತು ಮಗಳ ಮುಖದ ಮೇಲೆ ಚಿಮ್ಮುತ್ತಿದ್ದವು. ಮರುದಿನ ಮತ್ತೆ ಎಂದಿನಂತೆ!

ಮೂರು ನಾಲ್ಕು ವರುಷಗಳಲ್ಲಿ ತನ್ನ ಮನೆಯಲ್ಲಿಯ ಬಂಗಾರವನ್ನು ಇವರ ಮನೆಗೆ ಸಾಗಿಸಿದನು. ಬೆಳ್ಳಿಯ ಪಾತ್ರೆಗಳೂ ಒಂದೊಂದಾಗಿ ಬಂದವು. ಆಗಾಗ್ಗೆ ಹೆಚ್ಚಿನ ಹಣವೂ ಬರುತ್ತಿದ್ದಿತು. ವಿಧುರ ಚಿನ್ನಯ್ಯನು ಇದ್ದುದೆಲ್ಲವನ್ನೂ ಇವರ ಮನೆಗೆ ತುಂಬಿದನು. ಆದರೂ ಇವರು-ಇನ್ನೂ ಬರಲಿ. ಮತ್ತೂ ಬರಲಿ! ಎಂಬ ಪಲ್ಲವಿಯನ್ನು ಎಳೆಯುತ್ತಿದ್ದರು. ದೇಹದಲ್ಲಿ ಮೊದಲಿನ ರಕ್ತ ಉಳಿಯಲಿಲ್ಲ. ಉನ್ಮಾದದ ಆವೇಗವೂ ಇಳಿಮುಖವಾಗುತ್ತ ನಡೆದಿದ್ದಿತು. ಆದರೂ

ಹಳೆಯ ರೂಢಿ ಎಂಬ ನಂಬಿಗೆಯಿಂದ ಬರುತ್ತಿದ್ದನು. ಬೆಳಗಿನಲ್ಲಿ ತನ್ನ ಮನೆಗೆ ಎದ್ದು ಹೋಗುತ್ತಿದ್ದನು.

ನಿತ್ಯದಂತೆ ಇಂದೂ ಬಂದನು. ಪುಟ್ಟವ್ವ "ಬನ್ನಿರಿ !" ಎಂದು ಸ್ವಾಗತಿಸಿದಳು.

ಪಡಸಾಲೆಯಲ್ಲಿ ಕುರ್ಚಿಯ ಮೇಲೆ ಕುಳಿತು ದಣಿವಾರಿಸಿಕೊಳ್ಳ ಹತ್ತಿದನು.

ಅಕ್ಕಾಮರಿಯು ಒಂದು ಕಪ್ಪು ಚಹ, ಬಿಸ್ಕೀಟು ತಂದು ಮುಂದಿಟ್ಟಳು.

"ನೀನು ?" ಚಿನ್ನಯ್ಯನು ಕೇಳಿದನು.

"ನಾನು ತೆಗೆದುಕೊಂಡಿರುವೆ. ನೀವು ತೆಗೆದುಕೊಳ್ಳಿರಿ." ಎಂದು ನುಡಿದು ಬೆಳ್ಳಿಯ ಎಲೆಅಡಿಕೆಯ ಡಬ್ಬಿಯನ್ನು ತಂದಿಟ್ಟಳು.

ಒಂದು ಗುಟುಕು ಚಹ ಕುಡಿದು "ಈ ಬೆಳ್ಳಿಯ ಡಬ್ಬಿಯು ಯಾರದೆಂದು ತಿಳಿದಿರುವೆ ?" ಎಂದು ಅಕ್ಕಾಮರಿಯನ್ನು ಪ್ರಶ್ನಿಸಿದನು.

"ಯಾರದು ?" ಮೆಲ್ಲಗೆ ನಗುತ್ತ ಕೇಳಿದಳು.

"ನನ್ನ ಮಾವನದು, ನನ್ನ ಹೆಂಡತಿಯು ಬರುವಾಗ ಅದನ್ನು ತಂದಿದ್ದಳು. ಎಷ್ಟು ಸುಂದರವಾಗಿದೆ !" ಎಂದು ವರ್ಣಿಸಿದನು.

"ಇದ್ದೀತು. ಆದರೆ ಅದರ ಮೇಲೆ ಎಲ್ಲ ಕಡೆಗೆ ಹುಡುಕಾಡಿದೆ. ನಿಮ್ಮ ಹೆಂಡತಿಯ ಹೆಸರು ಕಾಣಿಸಲಿಲ್ಲ" ಅಕ್ಕಾಮರಿಯು ಅಣಕದಿಂದ ಮಾತಾಡಿದಳು.

"ಇಲ್ಲ ! ನಿನ್ನದು ಕಾಣುತ್ತಿದೆ. ನಾಲ್ಕು ಬಿಲ್ಲಿಯ ಖರ್ಚಿನಿಂದ !"

"ನಾಲ್ಕು ಬಿಲ್ಲಿ ! ಪ್ರಾಣಹೋಗಿದೆ. ದೇಹಹೋಗಿದೆ. ಇದನ್ನು ಮರೆಯಬೇಡಿರಿ" ನಗುತ್ತ ನುಡಿದಳು.

"ಪ್ರಾಣ ಹೋದದ್ದು ಯಾರದೋ ?"

"ಅದಿರಲಿ. ಒಂದು ಸಂಗತಿಯು ಚಿನ್ನಯ್ಯನವರೇ!" ಪುಟ್ಟವ್ವನು ನಡುವೆ ಬಾಯಿ ಹಾಕಿದಳು.

ಅಕ್ಕಾಮರಿಯು ಮೆಲ್ಲಗೆ ಒಳಗೆ ಹೋದಳು.

"ಮತ್ತೆ ಮೂರು ತಿಂಗಳಾಗಿದೆ ನಿಂತು !"

"ಏನು ?"

"ನಿಮಗೆಲ್ಲಾ ಹೇಳಬೇಕು ಮೊದಲನೆಯ ಪ್ರಸಂಗದಿಂದಹೇಗೋ ಪಾರಾದೆವು. ಪಾರಾದದ್ದು ಸಹ ದೇವರ ಕೃಪೆಯಿಂದ ಇಲ್ಲದಿದ್ದರೆ ಅಕ್ಕಾ ಮರಿಯು ಅಂತ್ಯವಾಗಿ ಇಂದಿಗೆ ಮೂರು ವರುಷಗಳು ಕಳೆಯುತ್ತಿದ್ದವು. ಈಗ ಏನು ಮಾಡಬೇಕು ?"

"ನಾನೇನು ಮಾಡುವದು ?"

"ರಾಜಣ್ಣನನ್ನು ಹುಡುಕಿರಿ."

"ಅವನು ಎಲ್ಲಿರುವನೆಂಬುದೇ ತಿಳಿಯದು."

"ನಿಮಗೆ ಗೊತ್ತಿಲ್ಲವೇ ?"

"ಇಲ್ಲ. ಇತ್ತಲಾಗಿ ನಾನೂ ಹಳ್ಳಿಗೆ ಹೋಗಿಲ್ಲ. ಹೊಲದ ಪಾಳಿ–ಪಟ್ಟಿಯನ್ನು ಇಲ್ಲಿಗೇ ತರಿಸಿಕೊಳ್ಳುವೆನು. ಕೆಲವು ದಿನಗಳ ಹಿಂದೆ ಹಳ್ಳಿಯಲ್ಲಿದ್ದನೆಂದು ಕೇಳಿದ್ದೆ. ಈಗ ಎಲ್ಲಿರುವನೋ ಯಾರು ಬಲ್ಲರು."

"ಸುತ್ತಲಿನ ಯಾವದಾದರೊಂದು ಹಳ್ಳಿಯಲ್ಲಿ ಇರಬೇಕು. ಹುಡುಕಿಸಿರಿ."

"ಅವನೇಕೆ ?"

"ಹಿಂದಿನಂತೆ ಮಾಡಿದರೆ !"

"ಅವನನ್ನೇನು ಕರೆಯಿಸಿಕೊಳ್ಳುವಿರಿ ಪುಟ್ಟವ್ವನವರೇ !"

"ಏಕೆ ?"

"ನೀವು ಅವನನ್ನು ಗುರುತಿಸಲಾರಿರಿ. ನಿಮ್ಮನ್ನು ಅವನೂ ಗುರುತಿಸಲಾರನು."

"ಹೀಗೆಯೇ !"

"ಮೊದಲಿನ ಮೈಯಿಲ್ಲ. ಮೊದಲಿನ ಮಾತಿಲ್ಲ. ಮೊದಲಿನ ಯಾವದೂ ಇಲ್ಲ. ಒಂದು ವಿಚಿತ್ರ ಪ್ರಾಣಿಯಾಗಿರುವನು. ಮನೆಯ ನೆಲವನ್ನು ಸಹ ಯಾರಿಗೋ ಮಾರಿ ಊರೂರು ಯಾತ್ರಿಕ ಹುಚ್ಚನಂತೆ ತಿರುಗುವನಂತೆ !"

"ಅಂದರೆ....?"

"ಅಂದರೇನು? ನೀವು ಇತ್ತ ಬಂದಿರಿ. ರಾಜಣ್ಣನು ೭-೮ ತಿಂಗಳವರೆಗೆ ಅಜ್ಞಾತವಾಸದಲ್ಲಿದ್ದನು. ಆಗ ಊರವರು ಅಲ್ಪಸ್ವಲ್ಪ ಬಿದ್ದ ಮನೆಯನ್ನು ಪೂರಾ ಕೆಡವಿ, ಕಟ್ಟಿಗೆ, ತೊಲೆ, ಕಲ್ಲು ಎಲ್ಲವನ್ನೂ ದೋಚಿಕೊಂಡು ಹೋದರು. ಹೊಲಗಳನ್ನೆಲ್ಲ ರಾಜಣ್ಣ ಮೊದಲೇ ಮಾರಿದನು. ಈಗ ಒಂದು ಮನೆಯ ನೆಲವು ಉಳಿದಿದ್ದತು. ಅದನ್ನೂ ಮಾರಿದನು."

"ಅಯ್ಯೋ! ಹೀಗೆ ಮಾಡಿದನೇ!" ಒಂದಿಷ್ಟು ದುಃಖದಿಂದ ನುಡಿದಳು.

"ಹಳ್ಳಿಯಲ್ಲಿ ದುಷ್ಟ ಜನರು ಬಹಳ. ತಮ್ಮ ಜಾತಿಯುವರಂತಹ ದುಷ್ಟರು ಬೇರೊಬ್ಬರಿಲ್ಲ. ಆ ಜಾತಿಯುವರೇ ಆ ಜಾತಿಯುವರನ್ನು ಸುಲಭವಾಗಿ ಮತ್ತು ಹೆಚ್ಚಾಗಿ ಕೊಲ್ಲುವರು. ಇದಕ್ಕೆ ರಾಜಣ್ಣನ ಕಕ್ಕನ ಉದಾಹರಣೆಯನ್ನು ಕೊಡಬಹುದು!"

"ಏನು?"

"ಅಪ್ಪಾರಾಯರು ಹಣವನ್ನು ನೆಲದಲ್ಲಿ ಹುಗಿದಿಟ್ಟಿರುವರು. ಅದು ರಾಜಣ್ಣನಿಗೆ ಸಿಕ್ಕಲೊಲ್ಲದು" ಎಂದು ಯಾರೋ ಸುದ್ದಿಯನ್ನು ಹರಡಿದರಂತೆ.

"ಮುಂದೆ?"

"ನಿಮ್ಮ ಕಕ್ಕ ಅಡಿಗೆಯ ಮನೆ, ಪಡಸಾಲೆ, ಕೋಣೆ ಎಲ್ಲವನ್ನೂ ಅಗೆಸಿದನಂತೆ. ಹಣವು ಸಿಗಲಿಲ್ಲ. ಮನೆಯೂ ಅದರ ನೆಲವೂ ವಿಧ್ವಂಸವಾಯಿತು. ಈಗ ನಿಮ್ಮ ಹತ್ತಿರ ಹಣವಿದೆಯೆಂದು ಅವನಿಗೆ ಗೊತ್ತಾದರೆ ಕಳವಿಗೆಲ್ಲಿ ಬರುವನೋ ಎಂಬ ಹೆದರಿಕೆ ಇದೆ. ನೀವು ಹಳ್ಳಿಯನ್ನು ಬಿಟ್ಟು ಒಳಿತು ಮಾಡಿದಿರಿ" ಎಂದು ಮುಗಿಸಿದನು.

"ಆದದ್ದೆಲ್ಲ ಒಳಿತೇ ಎನ್ನಬೇಕು. ಆದರೆ....ಮುಂದೆ ಹೇಗೆ?"

"ನಾನು ಏನು ಹೇಳಲಿ?"

"ಹಾಗಾದರೆ ಹುಟ್ಟಿದ ಮೇಲೆ ಮುನಿಸಿಪಾಲಿಟಿಯಲ್ಲಿ ತಂದೆಯ ಹೆಸರಿನ ಸ್ಥಳದಲ್ಲಿ ಚೆನ್ನಯ್ಯನೆಂದು ಬರೆಸುತ್ತೇನೆ!" ಎಂದು ನುಡಿದಳು.

ಪುಟ್ಟಪ್ಪನ ಈ ಮಾತಿನಿಂದ ಚಿನ್ನಯ್ಯನು ಗಾಬರಿಯಾದನು. ಎಂಥ ಗಂಭೀರವಾದ ಮಾತು ! ವಿಚಾರಿಸಹತ್ತಿದನು. ಇದು ಹೇಸಿಕೆಯ ಮಾತೆನಿಸಿತು.

"ಅದು ಹೇಗೆ ಪುಟ್ಟಪ್ಪನವರೇ !" ಆಶ್ಚರ್ಯ-ಭಯದಿಂದ ಕೇಳಿದನು.

"ಕತ್ತಲೆಯಲ್ಲಿ ನಡೆದ ಈ ಸತ್ಯಸಂಗತಿಯನ್ನು ನೀವು ಒಪ್ಪುವ ದಿಲ್ಲವೆಂದು ನನಗೂ ಗೊತ್ತು. ಆದರೂ ಒಂದು ಮಾತು ಕೇಳಿದೆ."

"ಪರೀಕ್ಷಿಸಲು ಕೇಳಿದಿರಾ ?"

"ಹೊಸದಾಗಿ ಪರೀಕ್ಷಿಸಬೇಕಿಲ್ಲ. ನಿಮ್ಮಿಂದ ಇಂಥ ಉತ್ತರವು ಬರುವದೆಂದು ನಾನು ತಿಳಿದುಕೊಂಡಿದ್ದೆ, ಅದರಂತೆಯೇ ಕೊಟ್ಟಿರಿ. ಗಂಡುಜಾತಿಯನ್ನು ಸಂಪೂರ್ಣವಾಗಿ ಹೆಣ್ಣೇ ಪರೀಕ್ಷಿಸಬಲ್ಲಳು. ತನ್ನನ್ನು ತಾನು ಪರೀಕ್ಷಿಸಿಕೊಂಡು ಒಂದು ನಿರ್ಧಾರಕ್ಕೆ ಬರುವದು ಯಾರಿಗೂ ಸಾಧ್ಯವಿಲ್ಲ. ಎರಡು ವಿರುದ್ಧ ಪ್ರಕೃತಿಗಳೇ ಒಂದ ನ್ನೊಂದು ಅರಿಯುವವು. ಹುಳಿಯ ರುಚಿಯು ಬೆಲ್ಲಕ್ಕಾದೀತು. ಬೆಲ್ಲದ ರುಚಿಯು ಬೆಲ್ಲಕ್ಕೆ ತಿಳಿಯಲಾರದು. ಇವೆರಡರ ರುಚಿಯನ್ನು ಉಪ್ಪು ತಿಳಿಯುಬಹುದು."

"ಇಷ್ಟೆಲ್ಲ ಏಕೆ ಪುಟ್ಟಪ್ಪನವರೇ ?"

"ಏನಿಲ್ಲ. ಪ್ರಸಂಗ ಬಂದಿತು. ನುಡಿದೆ ರಾಜಣ್ಣನು ಬರಲಿ, ಬಾರದಿರಲಿ. ಆ ಮಾತನ್ನು ಮುಂದೆ ವಿಚಾರಿಸಬಹುದು. ನೀವು ತಿಳಿದುನೋಡಿರಿ. ತಿಂಗಳೆರಡು ತಿಂಗಳಾಯಿತು. ನೀವು ಹಣವನ್ನು ಕೊಟ್ಟಿಲ್ಲ. ಇಲ್ಲಿ ನಾವು ಹೇಗೆ ಬದುಕಬೇಕು ? ನಮಗೇನು ನವಕರಿಯೋ ? ಸಂಬಳವೇ ? ತಿಂಗಳಿಗೆ ತಪ್ಪದೆ ಇಷ್ಟು ಹಣ ಬರುವ ದೆನ್ನುವಿರಾ? ಏನಿಲ್ಲ. ನೀವು ಕೊಟ್ಟ ಹಣದಲ್ಲಿ ಗಂಜಿಯನ್ನು ಕಾಸಿ ಕುಡಿಯುತ್ತಿರುವೆವು."

"ಇದು ಗಂಜಿಯನ್ನು ಕುಡಿಯುವಂತಹ ಮನೆಯ ಲಕ್ಷಣವೇ?"

"ಗಂಜಿಯನ್ನೇ ಕುಡಿಸಬೇಕೆಂದರೆ ನಿಮ್ಮ ಕೈಯಲ್ಲಿದೆ. ಚಿನ್ನಯ್ಯ ನವರೇ. ಇದೆಂತಹ ಮಾತು ! ಹಳ್ಳಿಯಿಂದ ಇಲ್ಲಿಗೆ ಯಾರ ಮುಖವನ್ನು

ನೋಡಿ ಬಂದಿರುವೆವು? ಇದ್ದ ಹಳ್ಳಿಯನ್ನು ಬಿಟ್ಟೆವು, ಮನೆಯನ್ನು ಬಿಟ್ಟೆವು, ಹೊಲಗಳನ್ನು ಬಿಟ್ಟೆವು, ಜನರನ್ನು ತೊರೆದೆವು, ಅಪವಾದ ವನ್ನು ನೋಡಲಿಲ್ಲ. ಲಜ್ಜೆಯನ್ನು ನೋಡಲಿಲ್ಲ. ಕುಲ, ಜಾತಿ, ಪಾಪ-ಪುಣ್ಯ, ಧರ್ಮ-ಕರ್ಮ ಯಾವದನ್ನೂ ನೋಡಲಿಲ್ಲ. ಮಾಡಿಕೊಂಡ ಗಂಡನ ಕಣ್ಣಿಗೆ ಇಂಗು ಹಚ್ಚಿ, ಇಲ್ಲಿ ಯಾರ ಸಲುವಾಗಿ ಬಂದೆವು? ನಿಮ್ಮನ್ನು ನೋಡಿಯಲ್ಲವೇ? ಹೀಗೆ ನಮ್ಮನ್ನು ಅಲ್ಲಿಂದ ಇಲ್ಲಿಗೆ ತಂದು ನಡುನೀರಲ್ಲಿ ಬಿಟ್ಟರೆ ಹೇಗೆ? ನೀವೇ ವಿಚಾರಿಸಿರಿ" ಎಂದು ಪುಟ್ಟವ್ವನು ನುಡಿದಳು.

"ನಾನು ಬಿಟ್ಟಿಲ್ಲ."

"ಬಿಟ್ಟಿಲ್ಲವೆಂದರೆ ಹೇಗೆ? ಎರಡು ತಿಂಗಳಿನಿಂದ ಒಂದು ಕಾಸ ನ್ನಾದರೂ ಕೊಟ್ಟಿರುವಿರಾ? ಹೇಗೆ ಬದುಕಿರಬೇಕು? ನೀವು ವಿಚಾರಿಸ ಬೇಡವೇ?"

"ನಾನು ಈವರೆಗೆ ಕೊಟ್ಟದ್ದು ಕಡಮೆಯಿಲ್ಲ."

"ಕೊಟ್ಟದ್ದು ಕಡಮೆಯೆನ್ನಲಾರೆ. ಕೊಡದಿದ್ದುದು ಕಡಮೆ ಅಲ್ಲವೇ?"

"ಮತ್ತೆ ಈ ಎರಡು ತಿಂಗಳು ಮಾತ್ರ ಕೊಡದ್ದನ್ನು ಹೇಳುವಿರಿ. ಕೊಟ್ಟದ್ದನ್ನು ಒಂದು ದಿನ ನುಡಿದಿಲ್ಲ. ನೀವು ಈ ಊರಿಗೆ ಬಂದ ಸಮಯದಲ್ಲಿ ಏನಿದ್ದಿತು? ನಿಮ್ಮ ಮಗಳ ಮೈಮೇಲೆ ಎರಡು ತಾಳಿ, ಹತ್ತಾರು ಕರಿಮಣಿಯ ಹೊರತು ಏನಿದ್ದಿತು? ಈಗ ಕೊರಳ ತುಂಬ ಹಾರ. ಕೈ ತುಂಬ ಬಂಗಾರದ ಬಳೆಗಳು. ಕಿವಿ ತುಂಬ ಮುತ್ತುಗಳು. ಬೆರಳ ತುಂಬ ಉಂಗುರಗಳು. ಒಂದು ಸೀರೆಗೆ ಗತಿ ಗಾಣದ ನಿಮ್ಮ ಮಗಳಿಗೆ ಇಂದು ಹತ್ತಾರು ಸೀರೆಗಳಿದ್ದರೂ ಮತ್ತೂ ಕಡಮೆ. ಆಲದ ಎಲೆಯಲ್ಲಿ ಊಟ ಮಾಡುವ ನೀವು ಬೆಳ್ಳಿಯ ತಾಟಿನಲ್ಲಿ ಊಟ ಮಾಡ ಹತ್ತಿರುವಿರಿ, ಅಪ್ಪಾರಾಯರು ಸಾಯುವ ವರೆಗೆ ಅರಿವೆಯ ಚಿಂದಿಯ ಚಂಚಿಯಲ್ಲಿ ಎಲೆಯಡಿಕೆಯನ್ನು ತಿಂದಿರುವರು, ನೀವು ಬೆಳ್ಳಿಯ ಡಬ್ಬಿಯಲ್ಲಿ ಎಲೆ ಅಡಿಕೆ ತುಂಬಿ ತಿನ್ನುವಿರಿ. ಈ ಕುರ್ಚಿ, ಈ ಮೇಜು, ಈ ಮಂಚ, ಈ ಪಲ್ಲಂಗು,

ಈ ಹಾಸಿಗೆ, ಹೊದಿಕೆ ಹೇಗೆ ಬಂದವು. ನನ್ನಿಂದಲೇ ಅಲ್ಲವೇ? ನೀವು ಈ ಸಂಬಂಧವಾಗಿ ಒಂದು ಮಾತು ನುಡಿದಿಲ್ಲ. ಮತ್ತೆ ಎರಡು ತಿಂಗಳು ಎನ್ನುವಿರಿ" ಒಂದಿಷ್ಟು ಬಿರುಸಾಗಿ ನುಡಿದನು.

"ಈ ಉಜಳಣಿ ಈಗೇಕೆ ಚಿನ್ನಯ್ಯನವರೇ! ಅವು ಹೇಗೆ ಬಂದವು. ನೀವು ಹೇಗೆ ಕೊಟ್ಟಿರಿ ಎಂಬುದನ್ನು ಉಭಯತರೂ ಬಲ್ಲೆವು."

"ಅವ್ವಾ, ಸುಮ್ಮನಿರು." ಅಕ್ಕಾಮರಿಯು ನಡುವೆ ಬಾಯಿ ಹಾಕಿದಳು.

"ಹೇಗೆ ಸುಮ್ಮನಿರುವದು? ಬಂದ ಕಷ್ಟದಿಂದ ಪಾರಾಗಲು ಹಂಚಿಕೆಯನ್ನು ಕೇಳಿದರೆ ವೈಗೆ ಹಚ್ಚಿಕೊಳ್ಳಲೊಲ್ಲರು. ಇದೆಲ್ಲಿಯ ನ್ಯಾಯ."

"ಪುಟ್ಟವ್ವನವರೇ, ನೀವು ಬೇರಾವದೋ ಹಂಚಿಕೆಯನ್ನು ಮಾಡಿಕೊಂಡು ಇಷ್ಟೆಲ್ಲ ನಡೆಸಿರುವಿರಿ ಎಂದು ನಾನು ತಿಳಿಯುವೆ."

ಪುಟ್ಟವ್ವನು ಒಂದಿಷ್ಟು ತಡೆದಳು.

"ನಾನೇನು ಈವರೆಗೆ ವಿಚಾರಿಸಿಲ್ಲ. ನೀವು ಹಾಗೆ ವಿಚಾರಿಸಲು ದಾರಿಯನ್ನು ಮಾಡಿಕೊಟ್ಟರೆ ಇನ್ನು ಮುಂದೆ ವಿಚಾರಿಸಬೇಕಾಗುವದು."

"ಹಾಗಾದರೆ ವಿಚಾರಿಸಿಕೊಳ್ಳಿರಿ."

"ಆಗಲಿ."

"ಅವ್ವಾ, ಸುಮ್ಮನಿರು!" ಎಂದು ಅಕ್ಕಾಮರಿಯು ಅಳುತ್ತ ನುಡಿದಳು.

"ನಾನು ಎಂದಿಗೂ ಸುಮ್ಮನಿರಲಾರೆ."

"ಅವ್ವಾ!" ಎಂದು ಅಕ್ಕಾಮರಿಯು ಪುಟ್ಟವ್ವನ ಬಾಯಿ ಕಟ್ಟಿದಳು.

"ಅಕ್ಕಾಮರಿ, ನನ್ನ ನಿನ್ನ ಋಣವು ಇಂದಿಗೆ ಮುಗಿಯಿತು." ಚಿನ್ನಯ್ಯನೆಂದನು. ಅಕ್ಕಾಮರಿಯು ಅಳಹತ್ತಿದಳು.

"ಋಣವನ್ನು ಸಾಗಿಸಿಕೊಂಡು ಹೋಗಲು ಅನೇಕ ದಾರಿ

ಗಳಿವೆ ಹರಿದುಕೊಳ್ಳಲು ಒಂದೇ ದಾರಿ.... ನೀವು ಕೊಂಡ ಮನೆಯನ್ನು ಹೋದ ತಿಂಗಳಲ್ಲಿಯೇ ಅಕ್ಕಾಮರಿಯ ಹೆಸರಿನಿಂದ ಮಾಡುವೆನೆಂದು ಹೇಳಿದ್ದಿರಿ. ಆದರೆ ಈವರೆಗೆ ಅದರ ಬಗ್ಗೆ ಒಂದು ಚಕಾರ ಮಾತನ್ನೂ ಆಡಿಲ್ಲ. ಏಕೆ ಮಾಡಬಾರದು?"

"ಅವ್ವಾ, ಹುಚ್ಚಿಯಂತೆ ಮಾಡಬೇಡ ಸುಮ್ಮನಿರು."

"ಅದು ನನ್ನಿಂದ ಸಾಧ್ಯವಿಲ್ಲ!" ಚಿನ್ನಯ್ಯನು ಸ್ಪಷ್ಟವಾಗಿ ನುಡಿದನು.

"ಹೀಗೆ ಮಾತಾಡಿ ನಿಜವಾಗಿ ನಮ್ಮ ಋಣಾನುಬಂಧವನ್ನು ಹರಿದುಕೊಳ್ಳುವಿರಿ. ನೋಡಿರಿ! ವಿಚಾರಿಸಿರಿ."

"ನಾನು ಎಲ್ಲವನ್ನೂ ವಿಚಾರಿಸಿರುವೆ."

"ವಿಚಾರಿಸಿದ್ದರೆ ಮುಗಿಯಿತು."

"ಒಳ್ಳೇದು. ಹಾಗಾದರೆ ನಾನು ಹೋಗುವೆನು."

"ಆಗಲಿ."

"ಇಲ್ಲ. ನೀವು ನಿಲ್ಲಿರಿ. ನಿಮ್ಮನ್ನು ಬಿಡಲಾರೆ" ಎಂದು ಅಕ್ಕಾಮರಿಯು ಕುಳಿತ ಕುರ್ಚಿಯ ಮುಂದೆ ಅಡ್ಡಗಟ್ಟಿ ನಿಂತಳು. ಆದರೆ ಚಿನ್ನಯ್ಯನು ಅಕ್ಕಾಮರಿಯ ತೋಳು ಹಿಡಿದು ಪಕ್ಕಕ್ಕೆ ಸರಿಸಿ ಹೊರಟನು.

"ನೀವು ಹೋದರೆ ನನ್ನಾಣೆ ಇದೆ. ನನ್ನಾಣೆ!" ಎಂದು ಅಕ್ಕಾಮರಿಯು ಕಷ್ಟದಿಂದ ನುಡಿದಳು.

ಚಿನ್ನಯ್ಯನು ಹೋಗಿಯೇಬಿಟ್ಟನು.

ಪುಟ್ಟವ್ವನು ಅಳುವ ತನ್ನ ಮಗಳನ್ನು ಒಳಗೆ ಎಳೆದುಕೊಂಡು ಹೋಗಿ ಸಮಾಧಾನವನ್ನು ಮಾಡಹತ್ತಿದಳು.

ಆದರೆ ಎಂಥ ಆಶ್ಚರ್ಯದ ಸಂಗತಿ—

ಪುಟ್ಟವ್ವ-ಅಕ್ಕಾಮರಿಯವರು ತಾಲೂಕಿನಲ್ಲಿ ಬಂದು ನಿಂತುದನ್ನು ತಾಲೂಕಿನ ಎಲ್ಲ ಬ್ರಾಹ್ಮಣರು ಅರಿತಿರುವರು. ಚಿನ್ನಯ್ಯನ ಬರು-ಹೋಗುವದನ್ನೂ ನೋಡಿರುವರು. ಅವರ ವಿಪರೀತ ಸಂಬಂಧವನ್ನು ತಿಳಿದಿರುವರು. ಇದು ಧರ್ಮವಲ್ಲ. ನೀತಿಯಲ್ಲ. ಆಚಾರವಲ್ಲ.

ಬ್ರಾಹ್ಮಣರ ಕರ್ಮವಲ್ಲ. ನಿಂದ್ಯವಾದುದು. ಹೀನಾಯವಾದುದು. ದೇವರು ಮೆಚ್ಚಲಾರ. ತಾವೂ ಮೆಚ್ಚಲಾರರು! ಆದರೂ ಏನೂ ನುಡಿಯುತ್ತಿಲ್ಲ. ಒಂದು ಮಾತೂ ಆಡುತ್ತಿಲ್ಲ. ಅನ್ಯಾಯವನ್ನು ನೋಡಿ ಆಡಲಾರದಂತಹ ದೌರ್ಬಲ್ಯ ಎಲ್ಲಿಯದು?

ಅಂದು ಮಗನ ಸುಳ್ಳು ಸಾವಿಗಾಗಿ ದ್ರೋಣಾಚಾರ್ಯರು ಶಸ್ತ್ರತ್ಯಾಗವನ್ನು ಮಾಡಿದಂತೆ ಇಂದು ಅಕ್ಕಾಮರಿಯ ನಿಜವಾದ ಬ್ರಾಹ್ಮಣ್ಯದ ಸಾವಿಗೆ ಬ್ರಾಹ್ಮಣ ಸಮಾಜವು ಶಬ್ದತ್ಯಾಗವನ್ನು ಮಾಡಿರಬೇಕು!

ಭೂದೇವಿಯೂ ಸುಮ್ಮನಿರುವಳು.

ಸೂರ್ಯನಾರಾಯಣನೂ ಮೌನಿಯಾಗಿರುವನು.

ಒಂದಿಷ್ಟು ರಾತ್ರಿಯಾಗಲು ಚಿನ್ನಯ್ಯನು ಬಾಗಿಲನ್ನು ಬಡಿದನು. ಪುಟ್ಟವ್ವನು ಸಿಟ್ಟಿನಿಂದ ಬಾಗಿಲು ತೆರೆಯಲಿಲ್ಲ. ತಡೆದು ಅಕ್ಕಾಮರಿಯು ಬಾಗಿಲು ತೆರೆದು ನಗುತ್ತ ಕರೆದುಕೊಂಡು ಒಳಗೆ ಹೋದಳು.

## ೩೯

ರಾಜಣ್ಣನು ಕಕ್ಕನ ಮನೆಯಿಂದ ಹೊರಬಿದ್ದನೇನೋ ಸರಿ. ಆದರೆ ಎಲ್ಲಿಗೆ ಹೋಗುವದು? ಅವನಿಗೆ ಈ ಚಿಂತೆಯು ಇರಲಿಲ್ಲ. ಎಲ್ಲರಕಿಂತಲೂ ಹೆಚ್ಚಾಗಿ ಚಿಂತಿಸಿದವನು ಅವನ ಕಕ್ಕನೇ! 'ರಾಜಣ್ಣನಿಗೆ ಇರಲು ಮನೆಯಿಲ್ಲ. ಮಲಗಲು ನೆಲವಿಲ್ಲ. ಉಣ್ಣಲು ಕಾಳಿಲ್ಲ. ಉಡಲು ಬಟ್ಟೆಯಿಲ್ಲ. ಜೀವಿಸಲು ವಿದ್ಯೆ-ಕಲೆ ಇಲ್ಲ. ಇಂಥವನು ಹೇಗೆ ಬದುಕಬೇಕು? ಎಲ್ಲಿ ವಾಸ ಮಾಡಬೇಕು? ಸಿಟ್ಟಿನ ಭರದಲ್ಲಿ ಹೋಗೆಂದು ನುಡಿದೆ. ಹೊರಗೆ ಹಾಕಿದೆ. ಅವನೂ ಹೋದನು. ಆದರೆ ಎಲ್ಲಿಗೆ ಹೋಗುವನು? ಇನ್ನೊಂದು ನಾಲ್ಕಾರು ದಿನಗಳವರೆಗೆ ಇಟ್ಟುಕೊಂಡಿದ್ದರೆ ನನಗೆ ತೊಂದರೆ ಇರಲಿಲ್ಲ. ಇಟ್ಟುಕೊಳ್ಳಬಹುದಿದ್ದಿತು. ಆದರೆ ಇಲ್ಲದ-ಸಲ್ಲದ ಉಸಾಬರಿಯಿಂದ ನನ್ನ ಅವಮಾನವನ್ನು ಮಾಡಹತ್ತಿದರೆ ಹೇಗೆ ಇಟ್ಟುಕೊಳ್ಳುವದು? ಊಟ ಹಾಕಿ ಅವನಿಂದ ನಿಂದೆಯನ್ನು ಮಾಡಿಸಿಕೊಳ್ಳುವದು ಹೇಗೆ ಸಾಧ್ಯ! ಪೀಡೆಯು ಹೋಯಿತು. ಎಲ್ಲಿಯೇ ಹೋಗಲಿ, ಹೇಗೇ ಬದುಕಲಿ, ಏನೇ ತಿನ್ನಲಿ, ನನಗೇನು? ಅಣ್ಣನ ಮಗನೇನೋ ನಿಜ. ಲೋಕಕ್ಕೆ ಹೊರತಾಗಿ ನಡೆದರೆ ತಾಳಲಾದೀತೇ? ಅವನ ಬಾಳು ಇನ್ನು ಮುಂದೆ ನಾಯಿಗಿಂತ ಕೀಳು. ಹೀಗೆಯೇ ಕೊರವರಂತೆ ತಿರುಗಿ ಒಂದು ದಿನ ಸಾಯುವನು. ಸಾಯಲಿ. ಬಾಂಧವನೆಂಬ ಋಣಕ್ಕೆ ಸ್ನಾನಮಾಡಿದರೆ ಮುಗಿದು ಹೋಯಿತು' ಎಂದು ರಾಜಣ್ಣನ ಸಂಬಂಧ ಮುರುಕ ಮಾತಾಡಿ ಕೊನೆಗೆ ಭವಿಷ್ಯ ನುಡಿದು ಸಮಾಧಾನವನ್ನು ಹೊಂದಿದನು.

ಕಕ್ಕನ ಮನೆಯಿಂದ ಹೊರಬಿದ್ದ ರಾಜಣ್ಣ ಹನುಮನ ಗುಡಿಯವರೆಗೆ ಬಂದನು. ಗುಡಿಯು ಕಂಡಿತು. ಹನುಮಪ್ಪನು ಯಾವ ಕೈಯನ್ನು ಟೊಂಕದ ಮೇಲೆ ಇಟ್ಟಿರುವ, ಯಾವ ಕಾಲು ಹಾರಿಸಿರುವ ಎಂಬುದನ್ನು ಜನ್ಮದಲ್ಲಿ ಕಂಡವನಲ್ಲ. ತಿಳಿದವನಲ್ಲ. ಕೈ ಮುಗಿಯುವುದು ದೂರ ಉಳಿಯಿತು. ಆದರೆ ಗುಡಿಯ ಮುಂದೆ ಬಂದು, ನಿಂತು, ಮೂರ್ತಿಯನ್ನು ನೋಡಲು ಸುಪ್ತ ಸಂಸ್ಕಾರಗಳ ಉದ್ರೇಕದಿಂದ ದೇವರಿಗೆ ಕೈ ಮುಗಿದನು. ಪ್ರದಕ್ಷಿಣೆಯನ್ನು ಹಾಕಿದನು. ಅಂಗಾರವನ್ನು ಹಚ್ಚಿಕೊಂಡನು. ಒಂದೈದು ನಿಮಿಷಗಳ ವರೆಗೆ ಕಟ್ಟೆಯ ಮೇಲೆ ಕುಳಿತನು. ಮುಂದೆ ಎದ್ದು ಪುನಃ ನಮಸ್ಕರಿಸಿ ಹೊರಬಿದ್ದನು. ಆಗ ಅದೇ ದಾರಿಯಿಂದ ಗುಳ್ಳವ್ವನ ತೋಟದ ಅಣ್ಣಪ್ಪನು ನಡೆದಿದ್ದನು. ರಾಜಣ್ಣನನ್ನು ನೋಡಿ "ಎಲ್ಲಿಗೆ ನಡೆದೆ ರಾಜಣ್ಣ ?" ಎಂದು ಕೇಳಿದನು.

"ಕಕ್ಕನು ಮನೆಯಿಂದ ಹೊರಗೆ ಹಾಕಿದನು. ಇನ್ನೆಲ್ಲಿಗಾದರೂ ಹೋಗಬೇಕು."

"ಏಕೆ ?"

"ಅವನಿಗೂ ನನಗೂ ಕೂಡಿ ಬರಲಿಲ್ಲ. ಎಷ್ಟಾದರೂ ಕಕ್ಕನು ತಂದೆಯಾದಾನೇ ? ನಾಲ್ಕು ದಿನ ಊಟಕ್ಕೆ ಹಾಕಬಹುದು. ಬಹಳವಾದರೆ ಐದು ದಿನ. ಆರನೆಯ ದಿನ ನಾನಾಗಿ ಹೊರಬೀಳದಿದ್ದರೆ ಅವನು ಹೇಳಬಹುದು. ಹೇಳಿದರೆ ತಪ್ಪೇನು ? ಇಂದು ಹೊರಬಿದ್ದೆನು."

"ಎಲ್ಲಿಗೆ ಹೋಗುವೆ ?"

"ನಾನು ಇನ್ನೂ ವಿಚಾರಿಸಿಲ್ಲ."

"ನನ್ನ ಸಂಗಡ ಬರುವೆ ಏನು ?"

"ಹೂ. ಬರುವೆ."

"ಎಲ್ಲಿಗೆಂದು ತಿಳಿದೆ ?"

"ಎಲ್ಲಿಗೆ ?" ಮುಖವನ್ನು ನೋಡಹತ್ತಿದನು.

"ಎಲ್ಲಮ್ಮನ ಜಾತ್ರೆಗೆ ಹೊರಟಿರುವೆವು ! ನಾಲ್ಕಾರು ದಿನ

ಬೇಕಾಗಬಹುದು. ನಮ್ಮ ಸಂಗಡ ಬರುವೆ ಏನು ?"

"ಹೂ, ಬರುವೆ."

"ನಡೆ ಹಾಗಾದರೆ."

ಇಬ್ಬರೂ ತೋಟದ ಹಾದಿಯನ್ನು ಹಿಡಿದರು.

"ರಾಜಣ್ಣ, ಮುಂದೆ ಏನು ಮಾಡಬೇಕೆಂದಿರುವೆ ?" ಎಂದು ಅವನ ವಿಚಾರವನ್ನು ತಿಳಿದುಕೊಳ್ಳಬೇಕೆಂದು ಅಣ್ಣಪ್ಪನು ಕೇಳಿದನು.

"ಏನು ಮಾಡುವದೆಂದರೇನು ?"

"ಅಲ್ಲ. ಹೇಗೆ ಬದುಕುವದು ?"

"ನನಗೂ ತಿಳಿಯದು ಅಣ್ಣಪ್ಪ. ಇನ್ನೆರಡು ಹೊಲಗಳಿದ್ದರೆ ಅವುಗಳನ್ನಾದರೂ ಮಾರಿ ನಾಲ್ಕೈದು ವರುಷ ತಿನ್ನಬಹುದಿದ್ದಿತು. ಆದರೆ ಶಿಲ್ಕು ಒಂದೂ ಉಳಿದಿಲ್ಲ. ಎಲ್ಲವೂ ತೀರಿವೆ. ಮನೆಯನ್ನೂ ಮಾರಿರುವೆ."

"ಯಾರಿಗೆ ?"

"ತೋಟಗರ ಕೆಂಚನಿಗೆ."

"ಎಷ್ಟು ರೂಪಾಯಿಗೆ ಮಾರಿದೆ ?"

"ನಲವತ್ತೇಳು ರೂಪಾಯಿಗೆ."

"ಎಂಥ ದೊಡ್ಡ ಮನೆ ರಾಜಣ್ಣ !"

"ಮನೆಯೆಲ್ಲಿ ಇದ್ದಿತು ! ಎಲ್ಲ ಬಿದ್ದಿತ್ತು."

"ಮನೆಯಿಲ್ಲದಿದ್ದರೇನಾಯಿತು. ಇಷ್ಟು ವಿಸ್ತಾರವಾದ ನೆಲವನ್ನು, ಊರ ನಡುವೆ ಇದ್ದುದನ್ನು ಇಷ್ಟು ಕಡಮೆಯ ಬೆಲೆಗೆ ಮಾರುವದೇ ?"

"ಆ ಹೇಲುವ ಕೇರಿಯ ಮೇಲೆ ಯಾರು ಮನೆಯನ್ನು ಕಟ್ಟುವರು ಅಣ್ಣಪ್ಪ !"

"ಬಿದ್ದ ನಿಮ್ಮ ಮನೆಯ ಕಲ್ಲು-ಮಣ್ಣಿನಿಂದ ಬೇಕಾದ ಹಾಗೆ ನಾಲ್ಕು ಮನೆಗಳನ್ನು ಕಟ್ಟಬಹುದು."

"ಕೆಂಚನು ತನ್ನ ಹುಲ್ಲಿನ ಬಣವೆಯನ್ನು ಒಟ್ಟಲು, ತಿಪ್ಪೆಯನ್ನು ಮಾಡಲು ನೆಲ ಬೇಕೆಂದನು. ಕೊಟ್ಟುಬಿಟ್ಟೆ. ಹಳ್ಳಿಯಲ್ಲಿ ಬಿದ್ದ

ಮನೆಯನ್ನು ಕಟ್ಟುವ ದಿಕ್ಕಿಲ್ಲ. ಇನ್ನು ಒಣ ನೆಲದ ಮೇಲೆ ಮನೆಯನ್ನು ಕಟ್ಟ ಯಾರು ನಿಂತಾರು ?"

"ಅಂತೂ ಎಲ್ಲ ಹೊಲಗಳೂ ಹೋದವು."

"ಹೆ."

"ಮನೆಯೂ ಹೋಯಿತು."

"ಹೌದು."

"ಇನ್ನೇನು ಉಳಿಯಿತು ?"

"ನಾನೊಬ್ಬನು ಉಳಿದಿರುವೆ."

"ಹಾಗಲ್ಲ ರಾಜಣ್ಣ!" ಉತ್ತರದಿಂದ ಅಣ್ಣಪ್ಪನು ಬೆಪ್ಪನಾಗಿ ಸುಮ್ಮನಾದನು.

ಹಾದಿಯು ಸಾಗುತ್ತಿದ್ದಿತು.

"ಅಕ್ಕಮ್ಮನವರು ಇನ್ನೂ ತವರು ಮನೆಯಲ್ಲಿರುವರೇನು ?" ವಿಷಯವನ್ನು ಬದಲಿಸಿ ಪ್ರಶ್ನಿಸಿದನು.

"ಎಲ್ಲಿ ಇರುವಳೋ ಯಾರು ಬಲ್ಲರು ? ಒಳ್ಳೇದು. ಅವಳು ಇಂಥಲ್ಲಿ ಇರುವಳೆಂದು ತಿಳಿದಾದರೂ ನಾನು ಏನು ಮಾಡಬಹುದು! ಕರೆದು ತಂದು ಹೊಟ್ಟೆಗೆ ಹಾಕುವ ಶಕ್ತಿ ನನ್ನಲ್ಲಿಲ್ಲ. ನಾನೇ ನಿರ್ಗತಿಕನಾಗಿ ಅಲೆದಾಡುತ್ತಿರುವೆ . ಇದ್ದಲ್ಲಿ ಎರಡು ಹೊತ್ತು ಉಂಡು ತಿಂದು ಸುಖವಾಗಿದ್ದರೆ ನನ್ನ ಪ್ರಿಯವನ್ನು ಉಳಿಸಿದಂತೆ, ಎಂದು ತಿಳಿಯುವೆನು!"

"ಈಗ ಅವರು ತಾಲೂಕಿನಲ್ಲಿ ಇರುವರಂತೆ!"

"ತಾಲೂಕಿನಲ್ಲಿ ?"

"ಅವರೂ, ಪುಟ್ಟಪ್ಪನವರೂ ಕೂಡಿಯೇ ಇರುವರಂತೆ."

"ನನಗೆ ಒಂದಿಷ್ಟು ತಿಳಿದಿದ್ದಿತು. ಆದರೆ ವಿಚಾರಿಸಲಿಲ್ಲ. ಇದ್ದರೆ ಅದು ಒಳ್ಳೆಯದು."

ಅಣ್ಣಪ್ಪನು ಯಾವದೋ ಒಂದು ಮಾತನ್ನು ಹೇಳಬೇಕೆಂದು ಇಷ್ಟೆಲ್ಲ ಪ್ರಸಂಗವನ್ನು ಬಿಚ್ಚಿದ್ದನು. ಆದರೆ ಅದನ್ನು ನೇರವಾಗಿ ಹೇಳುವಂತೆಯೂ ಇರಲಿಲ್ಲ. ಮನಸಿನ ಕುತೂಹಲವು ಅದನ್ನು ಹೇಳಬೇಕು. ರಾಜಣ್ಣನ ಸ್ವಭಾವ ಪಾಕದ ಉತ್ತರಗಳನ್ನು ತಿಳಿದು

ಕೊಳ್ಳಬೇಕು ಎಂದು ತವಕಿಸುತ್ತಿದ್ದಿತು. ಆದರೆ ತಾನು ಹೇಳುವ ಪ್ರಸಂಗದ ಅಸಮ್ಮತಿಗೆ ತಾಳ ಬೀಳುವಂತೆ ರಾಜಣ್ಣನ ಬಾಯಿಂದ ಉತ್ತರ ಬಂದರೆ ಅನುಕೂಲ, ಇಲ್ಲದಿದ್ದರೆ ತನ್ನ ಕುತೂಹಲಕ್ಕೆ ತಣ್ಣೀರು ಎರಚಿದಂತಲ್ಲವೇ ? ಎಂದು ತಿಳಿದುಕೊಂಡು ಸುಮ್ಮನಾದನು. ಉತ್ಸಾಹಗೊಂಡ ಮನಸು ಇಷ್ಟರಿಂದ ಸುಮ್ಮನಾಗಲಿಲ್ಲ. ಮತ್ತೆ ಅದೇ ಸಂಗತಿ, ಅದೇ ಮಾತುಗಳು ಗಂಟಲಿಗೆ ಬಂದು ಹಾಯಹತ್ತಿದವು.

"ತಾಲೂಕಿನಲ್ಲಿ ಅವರು ಇರಬೇಕಾದರೆ ಖರ್ಚು ಬಹಳ ಬರುತ್ತಿರಬೇಕು ರಾಜಣ್ಣ?" ಮತ್ತೆ ಕೇಳಿದನು.

"ಅಹುದು."

"ಅವರು ಹೇಗೆ ಇರುವರೋ ?"

"ನಮ್ಮ ಅತ್ತೆಗೆ ವರುಷಕ್ಕೆ ಇಂತಿಷ್ಟು ಹಣ ಬರುವದು."

"ಅದು ಎಷ್ಟಾದೀತು ?"

"ಹಿಡಿತದಿಂದ ಮಾಡಿದರೆ ಸಾಲದೇ ?"

"ಚಿನ್ನಯ್ಯನವರೂ ಒಂದಿಷ್ಟು ನೆರವಾಗುವರಂತೆ ?"

"ನನ್ನ ಹೊಲಗಳನ್ನು ಕಡಮೆಯ ಬೆಲೆಗೆ ನುಂಗಿದವ ಕೊಡುತ್ತಿರಬಹುದು."

ಅಣ್ಣಪ್ಪನಿಗೆ ಮಾತನ್ನು ಮುಂದೆ ಸಾಗಿಸಲು ಬೇಡಾಯಿತು. ಅವನ ಕುತೂಹಲವು ಹೇಸಿಕೊಂಡು, ನಿರುತ್ಸಾಹಿಯಾಗಿ ಬಾಯನ್ನು ಹೊಲಿದುಕೊಂಡಿತು. ತೋಟವು ಬಂದಿತು. ಇಬ್ಬರೂ ಗುಡಿಸಲನ್ನು ಸೇರಿದರು.

ಸಂಜೆಯಾಗಲು ಅಣ್ಣಪ್ಪನು ಊಟಕ್ಕೆ ಎದ್ದನು. ಎರಡು ರೊಟ್ಟಿ ಮೇಲೆ ಒಂದಿಷ್ಟು ಪಲ್ಲೆಯನ್ನು ಇಟ್ಟುಕೊಂಡು ಹೊರಗೆ ಬಂದನು.

"ರಾಜಣ್ಣ, ನಿನ್ನ ಊಟ ?" ಎಂದು ಕೇಳಿದನು.

"ಇನ್ನೂ ಆಗಿಲ್ಲ."

"ಗಣಸು ಸುಟ್ಟು ಕೊಡಲೇನು ?"

"ಆದೀತು. ಆದರೆ ರೊಟ್ಟಿಗಳಿಲ್ಲವೇ ?"

"ಇವೆ."

'ನನಗೊಂದು ಕೊಡು."

"ನಮ್ಮ ರೊಟ್ಟಿಯನ್ನು ತಿನ್ನುವೆಯಾ ?"

"ಹೊ....ನಾನು ಅನೇಕ ಸಾರೆ ತಿಂದಿರುವೆ. ಪಚನವಾಗುವದು. ಒಂದು ದಿನ ಹೊಟ್ಟೆಯು ಕೆಟ್ಟಿಲ್ಲ. ತಲೆಯು ತಿರುಗಿಲ್ಲ. ಹೊಟ್ಟೆಯಲ್ಲಿ ಮಳಮಳ ಎಂದಿಲ್ಲ."

"ಹಾಗಲ್ಲ. ನಮ್ಮ ಕುಲ ! ನಿಮ್ಮ ಕುಲ !"

"ಅಣ್ಣಪ್ಪ, ಕುಲಕ್ಕೆ ಅಷ್ಟು ಅಭಿಮಾನವಿದ್ದರೆ ಕೈಯಲ್ಲಿಯ ನಿನ್ನ ರೊಟ್ಟಿ ಕಾಗದವಾಗಬೇಕು. ಬಾಯಿ ಚರ್ವಿಸಬಾರದು. ಗಂಟಲು ದಾರಿಯನ್ನು ಕೊಡಬಾರದು. ಹೊಟ್ಟೆಯು ಇಟ್ಟುಕೊಳ್ಳಬಾರದು. ನನಗೆ ಇಂಥ ಅನುಭವವು ಬಂದಿಲ್ಲ. ಪಚನವಾಗುವದು, ರಕ್ತ ವಾಗುವದು. ರೂಢಿಯನ್ನು ಮಾಡಿಕೊಂಡಿರುವೆನೆಂದು ತಿಳಿ. ಹಸಿದು ಇರುವೆ. ಕೊಡು " ಎಂದನು.

"ಅಲ್ಲ ರಾಜಣ್ಣ...."

"ಕುಲವು ಕೆಡುವದಿದ್ದರೆ ಕೆಡಲಿ. ಹಸಿವೆಯಿಂದ ನನ್ನನ್ನು ರುಗಿಸಬೇಡ. ಉಪವಾಸದಿಂದ ಜೀವ ಹೋದರೆ ಇನ್ನೂ ಕೇಡು. ನ್ನವನ್ನು ಕೊಟ್ಟದ್ದಕ್ಕೆ ನಿನಗೆ ಪುಣ್ಯ ಬರಲಿ. ನಿನ್ನ ರೊಟ್ಟಿಯನ್ನು ಂದದ್ದಕ್ಕೆ ನನಗೆ ಪಾಪ ಬರಲಿ " ಎಂದನು.

ಅಣ್ಣಪ್ಪನು ಆರಿಸಿ ಎರಡು ರೊಟ್ಟಿಗಳನ್ನು ಕೊಟ್ಟನು. ಮೇಲೆ ಂದಿಷ್ಟು ಪಲ್ಲೆ ಹಚ್ಚಿ ಎರಡು ಉರುಳಿಯಗಡ್ಡೆಯನ್ನು ಇಟ್ಟನು.

ಇಬ್ಬರೂ ಏತದ ಮೇಲೆ ಕುಳಿತು ಸುಖದಿಂದ ತಿಂದರು. ಬಾರಿ ಮೆಲ್ಲಿಯ ನೀರಿನಿಂದ ಕೈ ತೊಳೆದುಕೊಂಡರು. ಬಾವಿಯಲ್ಲಿ ಇಳಿದು ಾಕಷ್ಟು ನೀರು ಕುಡಿದರು. ಮೇಲೆ ಹತ್ತಿ ಗುಡಿಸಲಿಗೆ ಬಂದರು. ಾತ್ರಿಯ ಸಿದ್ಧತೆಯನ್ನು ಮಾಡಿ ಮಲಗಿದರು. ರಾತ್ರಿದೇವಿಯು ಬ್ಬರಿಗೂ ಸುಖದಿಂದ ನಿದ್ದೆಯನ್ನು ದಯಪಾಲಿಸಿದಳು.

ಬೆಳಗಿನಲ್ಲಿ ಚಕ್ಕಡಿಯನ್ನು ಹೂಡಿಕೊಂಡು ಜಾತ್ರೆಗೆ ಹೋದರು. ಜಣ್ಣನು ಜಾತ್ರೆಯಲ್ಲಿ ಅವನ ಸಂಗಡ ವಿವೇಕಿಯಾಗಿ ನಡೆದು

ಕೊಂಡನು. ಜಾತ್ರೆಯ ಪ್ರವಾಸದಿಂದ ಬಹಳ ಸಂತೋಷವಾಯಿತು. ತಿರುಗಿ ಬಂದರು. ರಾಜಣ್ಣನು ಅವನ ತೋಟದಲ್ಲಿಯೇ ನಿಂತನು.

ಮುಂದೆ ಮತ್ತೆ ಎಂಟು ಹತ್ತು ದಿನ ರಾಜಣ್ಣನ ವಾಸ ತೋಟದಲ್ಲಾಯಿತು ಆ ನಂಬಿಗೆಯ ರೈತನು ಪುಟ್ಟ ಯಜಮಾನನೆಂದು ತಿಳಿದು ಆದರಾತಿಥ್ಯಕ್ಕೆ ಕಡಮೆ ಮಾಡಲಿಲ್ಲ. ತನ್ನ ಹಾಸಿಗೆಯಲ್ಲಿ ಅರ್ಧ ಹಾಸಿಗೆಯನ್ನು ಅವನಿಗೆ ಕೊಟ್ಟನು. ಹೊದೆಯಲು ಕಂಬಳಿಯನ್ನು ಕೊಟ್ಟನು. ತಾನು ತಿನ್ನುವ ರೊಟ್ಟಿಯಲ್ಲಿ ಅರ್ಧ ರೊಟ್ಟಿಯನ್ನು ಅವನಿಗೆ ಕೊಟ್ಟನು. ರಾಜಣ್ಣನ ಮೈಮೇಲಿನ ಅಂಗಿಯು ಬಹಳ ಹರಿದಿದ್ದಿತು. ಹೊಸದೊಂದು ಹೊಲಿಸಿಕೊಟ್ಟನು. ತೋಟದ ವರೆಗೆ ನಾವಲಿಗನನ್ನು ಕರೆಕಳುಹಿ ಕೂದಲು ಕತ್ತರಿಸಿದನು.

ಅಂದು ನಾವಲಿಗನು "ರಾಜಣ್ಣ, ಚೆಂಡಿಕೆಯನ್ನು ಇಡಲೇನು?" ಎಂದು ಕೇಳಿದನು.

"ಅದೇಕೆ ಬಸಪ್ಪ! ನನ್ನ ತಲೆಯಮೇಲೆ ಚೆಂಡಿಕೆಯನ್ನಿಟ್ಟರೆ ಧರ್ಮಕ್ಕೆ ಅವಮಾನವಾದಂತೆ! ಕತ್ತರಿಸಿ ಬಿಡು" ಎಂದನು.

"ಹಾಗಲ್ಲ ರಾಜಣ್ಣ! ಅಧರ್ಮವು ಟೊಪ್ಪಿಗೆಯ ಒಳಗೆ ಇರುವದು. ಜನರಿಗೆ ಕಾಣಿಸಿ ಪ್ರದರ್ಶಿಸಬೇಕಿಲ್ಲ. ಮತ್ತು ಐದು ಎಳೆಯ ಕೂದಲಿನಿಂದ ತಲೆಗೆ ಭಾರವಲ್ಲ."

"ಭಾರದ ಪ್ರಶ್ನೆಯೇ ಇಲ್ಲ ಬಸಪ್ಪ! ಏನೇನನ್ನೋ ಹೊತ್ತುಕೊಂಡು ತಿರುಗುವ ಈ ತಲೆಗೆ ಐದೆಳೆಯಿಂದ ಎಷ್ಟು ಭಾರವಾದೀತು? ಮಾನಾಪಮಾನದ ಮಾತನ್ನು ಹೇಳಿದೆ."

"ಪ್ರಸಂಗದಲ್ಲಿ ಉಪಯೋಗವಾಗುವದು. ಬೇಡಾದರೆ ಕತ್ತರಿಸಿ ಒಗೆಯಬಹುದು. ಒಂದು ವೇಳೆ ಬೇಕಾದರೆ ಅಂಟು ಹಚ್ಚಿ ಜೋಡಿಸಿಕೊಳ್ಳುವೆ ಏನು!"

ರಾಜಣ್ಣನು ನಗ ಹತ್ತಿದನು.

ಬಸಪ್ಪನು ಮುಂದುವರೆದು "ಹಾರುವರ ತಲೆಯನ್ನು ಬೋಳು ಬೋಳಾಗಿ ಮಾಡುವದು ನನಗೂ ಸೇರದು. ನನ್ನ ಕತ್ತರಿಯು ಅಂಥ ಅಧರ್ಮದ ಕೆಲಸವನ್ನು ಮಾಡಿಲ್ಲ."

ಕತ್ತರಿಯನ್ನು ಇಸಿದುಕೊಂಡು ನೆಲದಮೇಲಿಟ್ಟು "ಇದು ಪುಣ್ಯದ ಕತ್ತರಿಯೇ ಸರಿ!" ಎಂದು ನಮಸ್ಕರಿಸಿದನು.

ಬಸಪ್ಪನು ಅಭಿಮಾನದಿಂದ ಕಿಸಕಿಸನೆ ನಗ ಹತ್ತಿದನು.

"ಆದರೆ ಬಸಪ್ಪ, ಈ ಕತ್ತರಿಯು ಗಂಡನನ್ನು ಕಳೆದುಕೊಂಡ ಎಷ್ಟು ಜನ ಬ್ರಾಹ್ಮಣ ಹೆಂಗಸರ ಕೂದಲನ್ನು ಕತ್ತರಿಸಿದೆ ಎಂಬುದನ್ನು ಹೇಳಲಿಲ್ಲ."

"ಕತ್ತರಿಸಿದೆ. ಅದೂ ಧರ್ಮ."

"ಹಾಗಾದರೆ ನನ್ನ ತಲೆಗೂ ಐದೆಳೆ ಇಡು."

ಹೀಗಾಗಿ ರಾಜಣ್ಣನ ತಲೆಯ ಮೇಲೆ ಹತ್ತಿಪ್ಪತ್ತು ವರುಷಗಳ ನಂತರ ಚೆಂಡಿಕೆಯ ಪುನರುದ್ಧಾರವಾಯಿತು.

ಅಣ್ಣಪ್ಪನು ನೋಡಿ "ಇದೇನು ರಾಜಣ್ಣ, ತಲೆಯ ಮೇಲೆ ಉಳ್ಳೇಗಡ್ಡಿಯ ಪುಚ್ಛ!" ಎಂದು ನಗೆಯಾಡಿದನು

"ನನ್ನವಲ್ಲ, ಬಸಪ್ಪನವು" ಎಂದನು.

ಮತ್ತೆರಡು ದಿನಗಳು ಕಳೆದವು.

ಒಂದು ದಿನ ಒಬ್ಬ ಹುಡುಗನು ರಾಜಣ್ಣನಿಗೆ ಒಂದು ಪತ್ರವನ್ನು ತಂದು ಕೊಟ್ಟನು.

"ಯಾರದು ಪತ್ರ?" ರಾಜಣ್ಣನು ಕೇಳಿದನು.

"ನನಗೆ ಗೊತ್ತಿಲ್ಲ. ಪೋಸ್ಟಮಾಸ್ತರರು ನಿಮಗೆ ಮುಟ್ಟಿಸೆಂದು ಹೇಳಿದರು. ಬಂದು ೮-೧೦ ದಿನಗಳಾದವಂತೆ. ಇಂದು ನಾನು ಹೊಲಕ್ಕೆ ಹೋಗುವವನಿದ್ದೆ. ನೀವು ತೋಟದಲ್ಲಿರುವಿರೆಂದು ತಿಳಿದು ಬಂದೆನು" ಎಂದು ನುಡಿದು ಹೊರಟನು.

ರಾಜಣ್ಣನು ಪತ್ರವನ್ನು ತಿರುತಿರುಗಿಸಿ ನೋಡಿದನು. ಹೊರಳಿಸಿ ಹೊರಳಿಸಿ ನೋಡಿದನು. ಅಕ್ಷರಗಳು ತಿಳಿಯಲಿಲ್ಲ. ಕಲಿತ ಅಕ್ಷರಗಳೆಲ್ಲ ಮರೆತು ಹೋಗಿದ್ದವು. ಎಷ್ಟು ಪ್ರಯತ್ನಿಸಿದರೂ ಒಂದು ವಾಕ್ಯವಾಗಲಿ, ಒಂದು ಶಬ್ದವಾಗಲಿ ಸರಾಗವಾಗಿ ಸಾಗಲಿಲ್ಲ. ಯಾರದೆಂಬದೂ ತಿಳಿಯಲಿಲ್ಲ. ಮನಸು-ಓದಬೇಕು, ತಿಳಿದು ಕೊಳ್ಳಬೇಕು, ಎಂಬ ತವಕದಲ್ಲಿದ್ದಿತು.

"ಯಾರದು ಪತ್ರ ರಾಜಣ್ಣ ?" ಅಣ್ಣಪ್ಪ ಕೇಳಿದನು.

"ತಿಳಿಯಲೊಲ್ಲದು. ಅಕ್ಷರಗಳು ಹಾಗಲ ಬಳ್ಳಿಯಂತೆ ಹೆಣೆದು ಕೊಂಡಿವೆ." ಪತ್ರವನ್ನು ನೋಡುತ್ತ ಹೇಳಿದನು.

"ನೀನು ಸಾಲೆಯನ್ನು ಕಲಿತಿರುವೆ. ನನ್ನಂತೆ ಹುಂಬನೇ ?"

"ಕಲಿತೆ. ಎಷ್ಟು ಕಲಿತೆನೆಂಬುದೇ ತಿಳಿಯದು. ನೀನಾದರೂ ಓದು !" ಎಂದು ಕೊಡ ಹೋದನು.

"ಮಹಾರಾಯಾ ! ನಾನೆಂದು ಸಾಲೆಯ ಕಟ್ಟೆಯನ್ನು ಓದಿರುವೆ. ನೀನೇ ಪ್ರಯತ್ನಿಸು. ಓದಲಿಕ್ಕೆ ಬಂದೀತು" ಎಂದನು.

ಪತ್ರದ ಸಂಗತಿಯು ಇಬ್ಬರಿಗೂ ತಿಳಿಯಲಿಲ್ಲ. ಹಾಗೇ ಗುಡಿಸಲಿನ ಚಪ್ಪರವನ್ನು ಸೇರಿದರು.

ಮರುದಿನ ಎದ್ದು ಮುಖ ತೊಳೆದುಕೊಂಡು ಅಣ್ಣಪ್ಪನ ಸಂಗಡ ನ್ಯಾರಿಯನ್ನು ತೀರಿಸಿ ಪತ್ರವನ್ನು ಓದಿಸಿಕೊಂಡು ಬರಲು ಊರ ಹಾದಿಯನ್ನು ಹಿಡಿದನು. ಆದರೆ ಊರಲ್ಲಿ ಯಾರಿಂದ ಪತ್ರವನ್ನು ಓದಿಸಬೇಕು ? ಜಟಿಲವಾದ ಪ್ರಶ್ನೆಯಾಯಿತು. ಕಕ್ಕನ ಮನೆಗೆ ಹೋಗುವಂತಿಲ್ಲ. ದೊಡ್ಡಪ್ಪನ ಮನೆಗೆ ಕಾಲಿಡುವದು ಕಷ್ಟದ ಪ್ರಸಂಗ. ತನಗೆ ಓದಲಿಕ್ಕೆ ಬರುವದಿಲ್ಲವೆಂದು ಅವರಿವರಿಗೆ ತಿಳಿಯುವದು ಅಪಮಾನದ ಸಂಗತಿಯು ! ಪೋಷ್ಟಮಾಸ್ತರನನ್ನೇ ಕೇಳಿದರಾಯಿತು ! ಅವನು ಏನೆಂದರೂ ತಾಳಬಹುದು. ಊರವನಲ್ಲ ಎಂದು ಅವನ ಮನೆಯ ಕಡೆಗೆ ನಡೆದನು. ಆದರೆ ದಾರಿಯಲ್ಲಿ ದೊಡ್ಡಪ್ಪನು ಭೆಟ್ಟಿಯಾದನು.

"ಇಷ್ಟು ದಿನ ಎಲ್ಲಿದ್ದೆ ರಾಜಣ್ಣ ?" ಎಂದು ಮಾತಾಡಿಸಿಬಿಟ್ಟನು.

"ತೋಟದಲ್ಲಿದ್ದೆ ?" ಉಪಾಯವಿಲ್ಲದೆ ಸತ್ಯ ಸಂಗತಿಯನ್ನು ಹೇಳಿದನು.

ಆದರೆ ಅವಸರದಲ್ಲಿ ಪತ್ರವನ್ನು ಮುಚ್ಚಿಕೊಳ್ಳುವ ಮುಂದೆ ಅದು ಜಾರಿ ಕೆಳಗೆ ಬಿದ್ದಿತು.

"ಪತ್ರ ಬಂದು ಏಳೆಂಟು ದಿನವಾಯಿತು. ಏನು ಮಾಡುವದು? ಉಪಾಯವಿಲ್ಲ" ಎಂದು ದೊಡ್ಡಪ್ಪನ ಕೈಗೆ ಕೊಟ್ಟನು.

ಅವನು ಓದಿಕೊಂಡು "ನಿಮ್ಮ ಸೋದರ ಮಾವನು ತೀರಿಕೊಂಡ ನಂತೆ. ನಿಮ್ಮ ತಾಯಿಯನ್ನು ಕರೆದುಕೊಂಡು ಬರಲು ಅವನ ಗೆಳೆಯರು ಬರೆದಿರುವರು. ಇಷ್ಟೇ ಇದೆ. ಏನಾಗಿದ್ದಿತಂತೆ!"

"ನನಗೂ ಗೊತ್ತಿಲ್ಲ....ಪತ್ರ....ಇಷ್ಟೇ ಗೊತ್ತು."

"ಪತ್ರದಲ್ಲೇನಿದೆ. ಟಾಯಫಾಯಿಡಿನಿಂದ ತೀರಿರುವನಂತೆ, ಇದಕ್ಕೂ ಹೆಚ್ಚಾಗಿ ಏನಿಲ್ಲ."

ಪತ್ರದ ಸಂಗತಿಯು ಅನಾಯಾಸವಾಗಿ ತಿಳಿದದ್ದಕ್ಕೆ ಸಂತೋಷ ಪಟ್ಟನು.

"ಸ್ನಾನದಿಂದ ಶುದ್ಧ" ದೊಡ್ಡಪ್ಪ ನುಡಿದನು.

"ಹೌದು."

ನಾನು ನಿನ್ನನ್ನೇ ಹುಡುಕುತ್ತಿದ್ದೆ. ಅನಾಯಾಸವಾಗಿ ಸಿಕ್ಕೆ."

"ಏಕೆ ?"

"ಇಂದು ನಮ್ಮಲ್ಲಿ ಊಟಕ್ಕೆ ಬಾ."

"ಏಕೆ ದೊಡ್ಡಪ್ಪ. ಊಟದ ಗೊಂದಲ."

"ರಾಣಿಯ ಮದುವೆಯ ಗೊಂದಲ ಉಳಿದಿದ್ದಿತು. ಇಂದು ಅಳಿಯದೇವರು ಬಂದಿರುವರು. ಹಾಕಿಸಬೇಕೆಂದು ಮಾಡಿರುವೆ. ಅದಕ್ಕೆ ಇಲ್ಲೇ ಊಟ ಮಾಡು. ಅಲ್ಲದೆ ನಮಲ್ಲಿಯೂ ನಾಲ್ಕಾರು ದಿನ ಇರು."

ರಾಜಣ್ಣನು ಸುಮ್ಮನೆ ನಿಂತನು.

"ವಿಚಾರಿಸಬೇಡ. ಬಂದುಬಿಡು. ನಿನ್ನ ದಾರಿಯನ್ನು ನಾನು ನೋಡುವೆ. ನನಗೆ ಕೆಲಸವಿದೆ. ನಾನು ಹೋಗುವೆ" ಎಂದು ನುಡಿದು ಹೋಗಿಬಿಟ್ಟನು.

ಅಂದು ರಾಜಣ್ಣನ ಊಟ ದೊಡ್ಡಪ್ಪನ ಮನೆಯಲ್ಲಾಯಿತು.

ರಾಜಣ್ಣನ ಸಂಗಡ ಮನೆಯವರು ವಿಶೇಷವಾಗಿ ಯಾರೂ ಮಾತಾಡಲಿಲ್ಲ. ರಾಜಣ್ಣನಿಗೂ ಅವರ ಸಂಗಡ ಮಾತು, ಅವರ ಹತ್ತಿರ ಇರುವದು ಸೇರಲಿಲ್ಲ. ದೊಡ್ಡಪ್ಪನ ಮನೆಗೆ ಊಟಕ್ಕೆ ಹೋಗಿ ಯಾರೊಡನೆಯೂ ಮಾತನಾಡದಿರುವದು ಕಷ್ಟದ ಪ್ರಸಂಗ

ವೆಂದುಕೊಂಡನು. ಪಡಸಾಲೆಯ ಕಂಭಕ್ಕೆ ಒರಗಿ ಸುಮ್ಮನೆ ಕುಳಿತಿದ್ದನು. ಜಿಲ್ಲೆಯಿಂದ ಬಂದ ಅಡಿಗೆಯ ಸಣ್ಣ ನಾರಾಯಣಾಚಾರ್ಯನು ಒಳಗೆ ಹೊರಗೆ ಸುಳಿದಾಡುತ್ತಿದ್ದನು. ರಾಜಣ್ಣನು ನೋಡಿದನು. ಅವನ ಸಂಗಡ ಅಡಿಗೆಯ ಮನೆಯವರೆಗೆ ಹೋದನು. ಪರಿಚಯವಾಯಿತು. ಕ್ಷಣಾರ್ಧದಲ್ಲಿ ಗೆಳೆತನವಾಯಿತು. ಬೀಡಿಗಳ ವಿನಿಮಯವಾಯಿತು. ಮಾತಿನ ಕೊಡು ಕೊಂಬುಗಳಾದವು.

ನಾರಾಯಣಾಚಾರ್ಯನ ಸಂಗಡ ರಾಜಣ್ಣನ ಊಟವಾಯಿತು. ರಾತ್ರಿ ಗುಡಿಯಲ್ಲಿ ಇಬ್ಬರ ಶಯನವಾಯಿತು. ಸಣ್ಣ ನಾರಾಯಣಾಚಾರ್ಯನು ನಾಲ್ಕೈದು ತಾಸು ಒಲೆಯ ಜಳದ ಮುಂದೆ ಕುಳಿತು ಬೆವರು ಸುರಿಸಿ ಹಣ್ಣಾಗಿದ್ದನು. ನಿದ್ದೆ ಬೇಗ ಹತ್ತಲಿಲ್ಲ. ಹರಟೆಯ ತವುಡನ್ನು ಬಿಚ್ಚಿದರು. ಬೀಡಿಗಳ ಹೊಗೆಯಿಂದ ಗುಡಿಯಲ್ಲಿ ಗುಗ್ಗಳವನ್ನು ಹಾಕಿದರು.

"ರಾಜಣ್ಣ, ಇಲ್ಲಿ ನಿಂತು ಏನು ಮಾಡುವೆ?" ಅಡಿಗೆಯವ ಕೇಳಿದನು.

"ಏನಿಲ್ಲ."

"ನನ್ನ ಸಂಗಡ ಬರಬಾರದೇಕೆ?"

"ಬಂದೆ. ಮುಂದೆ?"

"ಹೊಟ್ಟೆ ತುಂಬ ಊಟ, ಮೈತುಂಬ ಬಟ್ಟೆ, ಬೀಡಿಗೆ ಹಣ ಸಿಗುವಂತೆ ಮಾಡುವೆನು. ತಿಂಗಳಿನಲ್ಲಿ ಎರಡು ಸಿನೇಮಾ...."

"ಹೇಗೆ? ನನಗೆ ಏನೂ ಬರುವದಿಲ್ಲ."

"ಮದುವೆ-ಮುಂಜಿಯ ಸುಗ್ಗಿಯಲ್ಲಿ ಅಡಿಗೆಯನ್ನು ಮಾಡುವೆ. ನೀನು ಮೇಲಿನ ಕೆಲಸವನ್ನು ಮಾಡು. ಉಳಿದ ಸಮಯದಲ್ಲಿ ಹೊಟೇಲಿನವರಿಗೆ ಫರಾಳದ ಜೀನಸುಗಳನ್ನು ಮಾಡಿಕೊಡುವೆ. ಅದರಿಂದ ಚಿಂತೆಯು ತಪ್ಪುವದು. ನಾನು ಇವೇ ಕೆಲಸಗಳನ್ನು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸುವೆನು."

"ನನಗೆ ಮೇಲಿನ ಕೆಲಸ ಬರುವದಿಲ್ಲ."

"ಮೇಲಿನ ಕೆಲಸವೆಂದರೇನು ತಿಳಿದುಕೊಂಡೆ?"

"ಅಡಿಗೆ"

"ಅಲ್ಲ. ನೀರು ಸೇದುವದು, ಎಲೆಗಳನ್ನು ತೆಗೆಯುವದು, ಗೋಮಯ ಮಾಡುವದು. ಇವೇ ಮೇಲಿನ ಕೆಲಸಗಳು. ನನ್ನ ಅಡಿಗೆಯಾದ ಮೇಲೆ ನಾನೂ ನೆರವಾಗುವೆ. ನಾಲ್ಕು ದಿನ ದುಡಿದರೆ ತಿಂಗಳವರೆಗೆ ಕುಳಿತು ಉಣ್ಣುವಷ್ಟು ಪ್ರಾಪ್ತಿ. ನಿನಗೆ ಯಾರಿಲ್ಲವೆಂದು ಹೇಳುವೆ. ಪ್ರಪಂಚದ ಜಂಜಾಟ ಇಲ್ಲದವರಿಗೆ ಈ ಕೆಲಸ ಬಹಳ ಉತ್ತಮ. ನನ್ನ ಕೈ ಕೆಳಗೆ ಒಬ್ಬನಿದ್ದನು. ಅವನು ಹೋದ ವರುಷ ಸತ್ತನು. ನನಗೆ ಅವನಿಲ್ಲದ್ದಕ್ಕೆ ಅನೇಕ ಕೆಲಸಗಳನ್ನು ಬಿಡಬೇಕಾಯಿತು. ಅಡಿಗೆಯವನ ಜತೆಗೆ ನೀರಿನವ ಇಲ್ಲದಿದ್ದರೆ ಬಹಳ ಅನಾನುಕೂಲವಾಗುವದು. ಏನೆಂದೆ ?"

"ನನಗೆ ರೂಢಿಯಿಲ್ಲ."

"ರೂಢಿಯನ್ನು ಮಾಡಿಸುವೆ. ಹಳ್ಳಿಯಲ್ಲಿ ಸಣ್ಣಾಗಿ ಸಾಯು ವದಕ್ಕಿಂತ ಪಟ್ಟಣದಲ್ಲಿ ಉಂಡು ತಿಂದು ತೊಟ್ಟು ಸಾಯಿ. ಏನೆಂದೆ ?"

"ಏನು ಹೇಳಲಿ ?"

"ಪಟ್ಟಣಗಳಲ್ಲಿ ದೊಡ್ಡದೊಡ್ಡ ವಕೀಲರಿರುವರು, ಡಾಕ್ಟರ ರಿರುವರು, ಅಧಿಕಾರಿಗಳಿರುವರು, ಸಾವುಕಾರರಿರುವರು. ಮದುವೆ-ಮುಂಜಿಗಳನ್ನು ವೈಭವದಿಂದ ಮಾಡುವ ಶ್ರೀಮಂತರಿರುವರು. ಏನು ಒಂದೋ ಎರಡೋ ! ಉತ್ತಮವಾದ ಊಟ, ಉತ್ತಮವಾದ ನೋಟ ! ನಾಲ್ಕು ಉತ್ತಮ ಜಾತಿಯ ಹೆಣ್ಣನ್ನಾದರೂ ನೋಡಲಿಕ್ಕೆ ಸಿಕ್ಕೀತು. ಅವುಗಳಿಗೆ ಬೆಲೆಯನ್ನು ಕೊಡಬೇಕಾಗಿಲ್ಲ. ಸಂಜೆಯ ಸುಮಾರಿಗೆ ಊರ ಹೊರಗೆ ಆ ಸುಂದರಿಯರ ಪ್ರದರ್ಶನವಿರುವದು. ಹಳ್ಳಿಯಿಂದ ಅದೆಷ್ಟೋ ಜನರು ಹಣ ಖರ್ಚುಮಾಡಿ ನೋಡಲಿಕ್ಕೆ ಬರುವರು. ಇಲ್ಲೇನಿದೆ ? ಕೆಂಚಿ, ಫಕೀರಿ, ದುರಗಿ, ಕರೆವ್ವ, ಕಾಟವ್ವ. ನೋಡಿದರ ಉಂಡ ಕೂಳು ಗಂಟಲಿಗೆ ಬರಬೇಕು. ಏನೆಂದೆ ?"

"ಆಗಲಿ." ನಗುತ್ತ ರಾಜಣ್ಣ ಉತ್ತರಿಸಿದನು.

ಮಾತು ತೆಗೆದುಕೊಂಡು ನಾರಾಯಣಾಚಾರ್ಯನು ಗೊರಕೆ ಯನ್ನು ಹೊಡೆಯ ಹತ್ತಿದನು. ದೇವರ ಗುಡಿಯ ಬೆಳಗಿನ ಉಪ್ಪಾರತಿಗೆ

ಎಚ್ಚರಾದರು. ತಮ್ಮ ಪ್ರಾತರ್ವಿಧಿಗಳನ್ನು ತೀರಿಸಿ ತಾಲೂಕಿನ ಹಾದಿಯನ್ನು ಹಿಡಿದರು.

* * * *

ನಾಲ್ಕೈದು ವರುಷಗಳು ಯಾವ ವಿಶೇಷ ಘಟನೆಯಿಲ್ಲದೆ ಸಾಗಿದವು. ರಾಜಣ್ಣನು ಸಣ್ಣ ನಾರಾಯಣಾಚಾರ್ಯನ ಬೆನ್ನು ಹತ್ತಿ, ಅವನ ಸಹಾಯಕನಾಗಿ ಜಿಲ್ಲೆಗೆ ಬಂದನು. ಊಟ-ಉಡಿಗೆ, ಬೀಡಿ-ಕಡ್ಡಿ, ಚಹ–ಕಾಪಿ, ಕೂಡಿದಾಗ ಸಿನಿಮಾ-ನಾಟಕಗಳು ಸರಾಗವಾಗಿ ನಡೆದುವು. ನಾರಾಯಣಾಚಾರ್ಯನು ತನ್ನ ಊರಿನವನೆಂದು ತಿಳಿದನು. ರಾಜಣ್ಣನೂ ಅವನನ್ನು ನಂಬಿಗೆಯಿಂದ ಕಂಡನು. ಮದುವೆ-ಮುಂಜಿಗಳಲ್ಲಿ ನಾರಾಯಣನು ಅಡಿಗೆಯವನಾಗಿ ಮುಂದೆ ನಡೆದರೆ ರಾಜಣ್ಣನು ನೀರಿನವನಾಗಿ ಹಿಂದೆ ಕಾಳಿನ ಸವಟು-ದೊಡ್ಡ ಕಡಚೆಯನ್ನು ಲಂಡ ಪಂಚೆಯಲ್ಲಿ ಸುತ್ತಿ ಗದೆಯಂತೆ ಹೆಗಲ ಮೇಲೆ ಹೊತ್ತುಕೊಂಡು ಬೆನ್ನು ಹತ್ತುತ್ತಿದ್ದನು. ಅಡಿಗೆಯವನು ಅಡಿಗೆಯನ್ನು ಮಾಡುತ್ತಿದ್ದನು. ನೀರಿನವ ನೀರು ಸೇದಿ, ಉಂಡ ಎಲೆಗಳನ್ನು ತೆಗೆದು ಗೋಮಯ ಮಾಡುತ್ತಿದ್ದನು. ಕೆಲಸವಿಲ್ಲದ ಸಮಯದಲ್ಲಿ ಕಾಳು ಕಡ್ಡಿಗಳನ್ನು ತಂದು ಸ್ವತಃ ಕುದಿಸಿಕೊಂಡು ಒಂದು ಹೊತ್ತು ಉಣ್ಣುತ್ತಿದ್ದರು. ನಡುನಡುವೆ ಫಲಹಾರ ಅಂಗಡಿಯವರ ಕರೆಯು ಬರುತ್ತಿದ್ದಿತು. ನಾರಾಯಣನು ಹೋಗುತ್ತಿದ್ದನು. ಆಗ ರಾಜಣ್ಣನು ಸೇವು-ಚಕ್ಕುಲಿಯ ಹಿಟ್ಟನ್ನು ಕಲಸಿ ಕೊಡುವದು, ಒಡೆ-ಇಡ್ಡಲಿಯ ಹಿಟ್ಟನ್ನು ರುಬ್ಬಿ ಕೊಡುವದು, ಉರಳೀಗಡ್ಡೆ-ಬಟಾಟೆ–ಮೆಣಸಿನ ಕಾಯಿಗಳನ್ನು ಹೆಚ್ಚಿ ಕೊಡುವದು, ಸುಟ್ಟ ಪಾತ್ರೆಗಳನ್ನು ಬೆಳಗುವದು ಇತ್ಯಾದಿ ಮೇಲಿನ ಕೆಲಸಗಳನ್ನು ಮಾಡುತ್ತಿದ್ದನು. ಈ ಹೊಸ ಬಗೆಯ ಬಾಳು ರಮ್ಯವೆನಿಸಿತು. ತನ್ನ ಮಾನಸಿಕ ಬಗೆಗೆ ಕೂಡಿ ಬಂದಿತು. ಹಿಂದಿನ ಹಾಳು ಕಂತೆಯನ್ನೆಲ್ಲ ಮರೆತನು. ಹೆಂಡತಿ, ಮಗಳ ಹೆಸರೂ ಕನಸಿನಿಂದ ಅಳಿಸಿತು. ತನ್ನ ಹಳ್ಳಿ, ಹೊಲ–ಮನೆಗಳೆಲ್ಲ ಮರೆವಿನ ಕ್ಷೇತ್ರವನ್ನು ಆರಿಸಿದವು. ಜೀವನವು ಒಂದು ಕ್ರಮದಿಂದ, ಒಂದು ದಾರಿಯಿಂದ ಸಾಗಹತ್ತಿತು. ಭವಿಷ್ಯದ ಚಿಂತೆಯನ್ನು ಅವನು ಎಂದೂ

ಮಾಡಿದವನಲ್ಲ. ಅಲ್ಲಿದ್ದ ಕಲ್ಲು-ಮುಳ್ಳು, ಹುಲಿ-ಕರಡಿ-ದರಿ ಕಂದರ ಗಳನ್ನು ಕಲ್ಪಿಸಿದವನಲ್ಲ. ಜೀವನಕ್ಕೆ ನಾಳೆ ಎಂಬುವದು ಇದೆ! ಎಂದು ಉಚ್ಚರಿಸಿದವನಲ್ಲ. ಉತ್ತರ ಆಯುಷ್ಯವನ್ನು ನಾರಾಯಣಾಚಾರ್ಯನೇ ರೂಪಿಸುವಂತೆ ಬಂದನು. ಕೈಹಿಡಿದನು. ಕರೆದುಕೊಂಡು ನಡೆಯಹತ್ತಿ ದನು. ಅವನ ಸಹವಾಸದಲ್ಲಿ ಬೆಳಗು-ಸಂಜೆಗಳನ್ನು ಗುರುತಿಸುವಷ್ಟು ಸಾಮಾನ್ಯ ಕಲ್ಪನೆಯು ಮಾತ್ರ ಉಳಿಯಿತು. ಹಸಿವೆ-ನೀರಡಿಕೆಗಳಿಗಾಗಿ ಅನ್ನ-ನೀರುಗಳನ್ನು ದೇಹವೇ ಎಚ್ಚರಿಸುತ್ತಿದ್ದಿತು. ಎಲ್ಲಿಯದೇ ಅನ್ನ ಸಿಕ್ಕಲಿ ಹೊಟ್ಟೆಗೆ ತುಂಬಿಕೊಳ್ಳುತ್ತಿದ್ದನು. ಎಲ್ಲಿಯದೇ ನೀರು ಸಿಕ್ಕಲಿ, ಯಾವದೇ ಪಾತ್ರೆಯಲ್ಲಿ ತುಂಬಿರಲಿ ಕುಡಿದುಬಿಡುತ್ತಿದ್ದನು. ನಿದ್ದೆ ಬರಲು ಯಾವದೇ ನೆಲವು ನಡೆಯುತ್ತಿದ್ದಿತು. ನಿದ್ದೆಯೂ ಸಂಪನ್ನವಾಗಿ ಬಂದುಬಿಡುತ್ತಿದ್ದಿತು. ಪ್ರಾಕೃತ ಪ್ರಾಣಿಯಂತೆ ಎಲ್ಲವೂ ನಡೆದಿದ್ದವು.

ದೇವರಿಗಿಂತಲೂ ದಯಾವಂತನಾಗಿ, ದೈವಕ್ಕಿಂತಲೂ ಸಾಧು ವಾಗಿ ನಾರಾಯಣಾಚಾರ್ಯನು ಗಂಟುಬಿದ್ದಿದ್ದನು. ಅವನ ಸಹ ವಾಸವು ರಕ್ಷಾಕವಚವಾಗಿ ಕಂಡಿತು. ಅವನ ಕ್ರಮಕ್ಕೆ ಜೀವವು ಹೊಂದಿಕೊಂಡಿತು. ಅವನ ರಟ್ಟೆಯ ಸ್ನಾಯುಗಳಲ್ಲಿ ರಕ್ತವು ಇನ್ನೂ ಹರಿದಾಡುತ್ತಿದ್ದಿತು. ತೊಡೆಗಳಲ್ಲಿ ಇನ್ನೂ ಮಾಂಸವಿದ್ದಿತು. ಅವುಗಳ ಸಹಾಯದಿಂದ ನೀರು ಸೇದುತ್ತಿದ್ದನು. ನೆಲವನ್ನು ಬಳಿಯುತ್ತಿದ್ದನು. ಮಾನ, ನಾಚಿಕೆಗಳು ಉಳಿದಿರಲಿಲ್ಲ. ಕೀಳು-ಮೇಲೆಂಬ ಭಾವನೆಯು ಉಳಿದಿರಲಿಲ್ಲ.

ಹಳ್ಳಿಯಲ್ಲಿ ತನ್ನ ಬಾಲ್ಯದ ಕೃತಿಗಳನ್ನು ಅಲ್ಲಿಯ ಹಿರಿ-ಕಿರಿ ಯರು, ಹೆಂಗಸರು-ಗಂಡಸರು, ತನ್ನವರು-ಇತರರು, ಹಗಲು-ರಾತ್ರಿ ನೋಡಿ ನೋಡಿ ಅವನ ವ್ಯಕ್ತಿತ್ವವನ್ನು ನಿಂದಿಸಿ, ಹಳಿದು, ಛೀಹಾಕಿ, ಥೂ ಉಗುಳಿ ಕಮರಿಸಿಬಿಟ್ಟಿದ್ದರು. ಭಾವನೆಯೂ ಮೊಂಡವಾಗಿದ್ದಿತು. ಇದೊಂದು ಸ್ವಾಭಾವಿಕ ಅನುಕೂಲವಾಯಿತು. ಅಂದು ಅವರು ತನ್ನನ್ನು ಉದ್ರೇಕಗೊಳಿಸುವಂತೆ ಮಾಡಿದ ಪ್ರಸಂಗಗಳು ಇಂದು ಶ್ಲಾಘನೀಯವಾಗಿ ಕಂಡವು.

ಮದುವೆ-ಮುಂಜಿಯ ಮನೆಯಲ್ಲಿ ಊಟದ ಎಲೆಯ ಮುಂದೆ

ಬಯಕೆಯ ತರುಣಿಯರು ಕಾರಿಕೊಂಡಿರಲಿ, ಚಿಕ್ಕಮಕ್ಕಳು ಮಲ-ಮೂತ್ರ ಮಾಡಿರಲಿ ಅವುಗಳನ್ನು ತೆಗೆಯುವ ಮುಂದೆ ರಾಜಣ್ಣನು ಸಂಕೋಚಪಟ್ಟುಕೊಳ್ಳುತ್ತಿರಲಿಲ್ಲ. ಎಂಜಲ ಎಲೆಗಳ ಸಂಗಡ ಅದೂ ಎಂಜಲವೆಂದು ತಿಳಿಯುತ್ತಿದ್ದನು. ಬಳಿದುಬಿಡುತ್ತಿದ್ದನು. ಇದು ನಾರಾಯಣಾಚಾರ್ಯನಿಗೆ ಸಹನವಾಗುತ್ತಿರಲಿಲ್ಲ. ಇದು ನಮ್ಮ ಕೆಲಸವಲ್ಲವೆಂದು ಅವನ ಗ್ರಹಿಕೆ. ಅವುಗಳನ್ನು ತೆಗೆಯಬೇಡ ಎಂದು ಅನೇಕ ಸಾರೆ ಹೇಳಿದ್ದನು. ಆದರೆ ರಾಜಣ್ಣನು ಕಸಬರಿಗೆಯ ಎಳೆತದಲ್ಲಿ ಎಲ್ಲವನ್ನೂ ಗುಡಿಸುತ್ತಿದ್ದನು. ಹೆಗಲ ಮೇಲೆ ಹೊತ್ತು ಹೊರಗೆ ಒಗೆದುಬಿಡುತ್ತಿದ್ದನು. ನಾರಾಯಣಾಚಾರ್ಯನು ಸಿಟ್ಟಾಗಿ ಅಂಥ ಮನೆಯ ಯಜಮಾನರ ಸಂಗಡ ಹೊಡೆದಾಡಿದ್ದನು. ಇದು ನಮ್ಮ ಕೆಲಸವಲ್ಲ, ಅದಕ್ಕಾಗಿ ನಾವು ಬಂದವರಲ್ಲ. ಇದು ಅನ್ಯಾಯ ! ಎಂದು ನುಡಿದಿದ್ದನು. ಆದರೆ ರಾಜಣ್ಣನ ವಿಶಾಲ ಭಾವನೆಯ ಸಮದೃಷ್ಟಿಯ ಮುಂದೆ ತಾನೇ ಮರುಕಗೊಂಡನು. ಅವನು ಹೆಚ್ಚು ಆತ್ಮೀಯನಾಗಲು ಇದೂ ಕಾರಣವಾಯಿತು. ಆದರೆ ಒಂದು ಮಾತಿನಃಸಲುವಾಗಿ ಮೇಲಿಂದ ಮೇಲೆ ಅವರಿಬ್ಬರಲ್ಲಿ ಕಿರಿಕಿರಿಯಾಗುತ್ತಿದ್ದಿತು. ಒಮ್ಮೊಮ್ಮೆ ವಿಕೋಪಕ್ಕೆ ಹೋಗಿ ರಾಜಣ್ಣನು ಒಂದೆರಡು ಬಡಿತಗಳನ್ನಾಗಲಿ, ಬಯಿಗುಳಗಳನ್ನಾಗಲಿ, ಕಿವಿಯನ್ನು ಹಿಂಡಿಸಿಕೊಳ್ಳುವದಾಗಲಿ ಅನುಭವಿಸಬೇಕಾಗುತ್ತಿದ್ದಿತು.

ರಾಜಣ್ಣನ ಕೊರಳಲ್ಲಿ ಜನಿವಾರವೇ ನಿಲ್ಲುತ್ತಿರಲಿಲ್ಲ. ಅಂಗಿಯನ್ನು ಕಳೆದ ಮೇಲೆ ಅಂಗಿಯ ಸಂಗಡ ಹೊರಟು ಗೂಟಕ್ಕೆ ತೂಗು ಬೀಳುತ್ತಿದ್ದಿತು. ಇಲ್ಲವೇ ಮಲಗಿ ಎದ್ದಕೂಡಲೆ ಹಾಸಿಗೆಯ ಸುರುಳಿಯಲ್ಲಿ ಮಲಗಿಬಿಡುತ್ತಿದ್ದಿತು.

ಒಮ್ಮೆ ಇನಾಮದಾರರ ಮನೆಗೆ ಅಡಿಗೆಗೆ ಹೋಗಿದ್ದರು. ಒಂದಿಷ್ಟು ತಡವಾಗಿದ್ದಿತು. ನಾರಾಯಣನು ಬಟ್ಟೆಗಳನ್ನು ಕಳೆದು ಪಂಚೆಯನ್ನು ಉಟ್ಟುಕೊಂಡು ಒಲೆಯನ್ನು ಹೊತ್ತಿಸಿದನು. ಕಟ್ಟಿಗೆಗಳು ದಣದಣ ಉರಿಯಹತ್ತಿದವು. ನೀರು ಅವಶ್ಯವಾಯಿತು.

ರಾಜಣ್ಣನು ಬಟ್ಟೆಗಳನ್ನು ಕಳೆದು ಪಂಚೆಯನ್ನು ತೊಯಿಸಿ,

ನ್ನೈಗೆ ಹಚ್ಚಿಕೊಂಡು ಮಡಿನೀರು ಸೇದಹತ್ತಿದನು. ನಾಲ್ಕಾರು ಕೊಡ ನೀರು ಸೇದಿ ಪೀಪಾಯಿಗೆ ತುಂಬಿದನು. ಒಲೆಯು ಹೊತ್ತಿತೆಂದು ನಾರಾಯಣಾಚಾರ್ಯನು ಸ್ನಾನಕ್ಕೆ ಬಂದನು. ಆಗ ಬಚ್ಚಲಮನೆ ಯಲ್ಲಿದ್ದ ರಾಜಣ್ಣನನ್ನು ನೋಡಿದನು. ಕೊರಳಲ್ಲಿ ಜನಿವಾರವಿರಲಿಲ್ಲ. ಒಟ್ಟಾಗಿ 'ರಾಜಾ!' ಎಂದು ಕೂಗಿದನು.

ನೀರು ತೋಡುವ ರಾಜಣ್ಣನು 'ಏನು?' ಎಂದು ತುಂಬಿದ ಕೊಡವನ್ನು ಹಾಗೆಯೇ ಹೆಗಲ ಮೇಲಿಟ್ಟುಕೊಂಡು ಕೇಳಿದನು.

"ಜನಿವಾರ?" ಬೆರಳುಮಾಡಿ ತೋರಿಸಿದನು.

ರಾಜಣ್ಣನು ಕೊರಳನ್ನು ನೋಡಿಕೊಂಡನು. ಅದು ಇರಲಿಲ್ಲ. ನಡದ ಸುತ್ತು ಕೈಯಾಡಿಸಿದನು. ಸಿಕ್ಕಲಿಲ್ಲ. ಪಕಪಕನೆ ಕಣ್ಣು ಬಿಡುತ್ತ ಗಾಬರಿಯಿಂದ ನಿಂತನು.

"ಅಂಗಿಯ ಸಂಗಡ ಗಂಟಿನಲ್ಲಿ ಕಟ್ಟಿರುವೆ ಏನು? ನೋಡಿ ಕೊಂಡು ಬಾ!"

"ಗಂಟು ಒಳಗೆ ಉಳಿಯಿತು. ದಾರಿಯಲ್ಲಿ ಜನರಿರುವರು." ಕೊಡವನ್ನು ಕೆಳಗಿಟ್ಟು ಮೈಮೇಲೆ ಕೈಯಾಡಿಸಿಕೊಳ್ಳಹತ್ತಿದನು.

"ನೀನು ಬ್ರಾಹ್ಮಣನು ಅಹುದೋ ಅಲ್ಲವೋ?"

"ಹೀಗೇಕೆ ನಾರಾಯಣಾಚಾರ್ಯರೇ! ನಾನು ನಿಮಗೆ ಅನೇಕ ಸಾರೆ ಹೇಳಿರುವೆ. ಜನಿವಾರವು ಕೊರಳೊಳಗೆ ನಿಲ್ಲುವದಿಲ್ಲ. ಏನು ಮಾಡಲಿ? ರಟ್ಟೆಗೆ ಕಟ್ಟಿಕೊಂಡರೆ ಹೇಗೆ? ಎಂದೂ ಕೇಳಿರುವೆ. ನಿಮಗೆ ಗೊತ್ತಿದೆ."

"ಒಂದು ಜನಿವಾರವನ್ನು ಕೊರಳೊಳಗೆ ಕಾಯ್ದುಕೊಳ್ಳುವ ಸಾಮರ್ಥ್ಯವಿಲ್ಲ. ಮಂತ್ರ-ತಂತ್ರ, ಪೂಜೆ ಪುರಸ್ಕಾರಗಳ ಮಾತು ದೂರ ಉಳಿಯಿತು."

"ಹೌದು. ನನಗೆ ಅವು ಯಾವವೂ ಬರುವದಿಲ್ಲ."

"ಅದಕ್ಕೇ ಕೇಳಿದುದು. ನೀನು ಬ್ರಾಹ್ಮಣನು ಹೌದೋ ಅಲ್ಲವೋ?"

"ನಿಮಗೆ ಹೇಗೆನಿಸುವದು?"

"ನನಗೆ ನೀನು ಬ್ರಾಹ್ಮಣನಲ್ಲವೆಂದೆನಿಸುವದು."

"ತಲೆಯಮೇಲೆ ಚೆಂಡಿಕೆ ಇದೆಯಲ್ಲ!" ಎಂದು ತನ್ನ ಐದೆಳೆಯ ಕೂದಲಿನ ಚೆಂಡಿಕೆಯನ್ನು ಎತ್ತಿ ಹಿಡಿದು ತೋರಿಸಿದನು.

"ಅದೇನು! ಅದು ಇಲ್ಲದಿದ್ದರೂ ನಡೆದೀತು."

"ನನ್ನ ತಂದೆ-ತಾಯಿ ಬ್ರಾಹ್ಮಣರು ಅಹುದೋ ಅಲ್ಲವೋ ನೀವು ಹಳ್ಳಿಯಲ್ಲಿ ಕೇಳಿರುವಿರಿ. ಅದೊಂದೇ ಕಾರಣದಿಂದ ನಾನು ಬ್ರಾಹ್ಮಣನೆಂದು ನಿಮ್ಮ ಮುಂದೆ ಹೇಳಬಹುದು. ಅದಕ್ಕೂ ಹೆಚ್ಚಾಗಿ ನನ್ನ ಹತ್ತರ ಏನೂ ಇಲ್ಲ. ಆದರೆ ನನ್ನನ್ನು ಹೊರಗೆ ಹಾಕಬೇಡಿರಿ. ನೀವು ಹೇಳಿದಂತೆ ಕೇಳುವೆನು. ತಪ್ಪಾಗಿದ್ದರೆ ತಿದ್ದಿರಿ. ಸುಧಾರಿಸಿರಿ. ಬ್ರಾಹ್ಮಣನನ್ನಾಗಿ ಮಾಡಿಕೊಳ್ಳಿರಿ. ನಿಮ್ಮ ಹತ್ತರ ಇಟ್ಟುಕೊಳ್ಳಿರಿ" ಎಂದು ದೈನ್ಯದಿಂದ ನುಡಿದನು.

"ನೀನು ಬ್ರಾಹ್ಮಣನಾಗಬೇಕಾದರೆ ಮೂರು ಎಳೆಯ ಟೊಂಕದ ವರೆಗೆ ಇಳಿಬಿದ್ದ ದಾರವಾದರೂ ಬೇಕು. ಅದಿಲ್ಲದೆ ನಡೆಯಲಾರದು. ಅದು ಯಾವಾಗಲೂ ನಿನ್ನ ಕೊರಳಲ್ಲಿ ಇರಬೇಕು. ಹರಿದರೆ ಹೊಸದೊಂದನ್ನು ಹಾಕಿಕೊಳ್ಳಬಹುದು. ಮಂತ್ರ-ತಂತ್ರ ಬಾರದಿದ್ದರೆ ನಡೆದೀತು. ಅದನ್ನು ಪರೀಕ್ಷಿಸುವದಿಲ್ಲ. ಇದು ಎಲ್ಲರಿಗೂ ಕಾಣುವ ವಸ್ತು. ಕೊರಳಲ್ಲಿ ಕಾಣದಿದ್ದರೆ ಬ್ರಾಹ್ಮಣನಲ್ಲವೆಂದು ಸ್ಪಷ್ಟವಾಗುವದು. ಈಗ ನೀನು ಬ್ರಾಹ್ಮಣನಲ್ಲ."

"ಬ್ರಾಹ್ಮಣನಲ್ಲ!"

"ಜನಿವಾರವಿಲ್ಲದಿದ್ದರೆ ನನ್ನನ್ನು ನೀನು ಬಿಟ್ಟು ಹೋಗಬೇಕಾಗುವದು."

"ಆಗದು ಆಚಾರ್ಯರೇ! ನನ್ನನ್ನು ರಕ್ಷಿಸಬೇಕು. ಇದೊಂದು ಸಾರೆ ರಕ್ಷಿಸಿರಿ" ಕೈ ಜೋಡಿಸಿ ನಿಂತನು.

"ಅದಿದ್ದರೆ ನಿನಗೆ ಎರಡು ಹೊತ್ತು ಊಟ, ಬಟ್ಟೆ. ಇಲ್ಲದಿದ್ದರೆ ನಿನ್ನ ಹಾದಿ ನಿನಗೆ....ಮೂರೆಳೆಯ ದಾರವನ್ನು ಕಾಯ್ದುಕೊಳ್ಳುವಷ್ಟು ಬುದ್ಧಿ ಬೇಡವೇ?"

"ಮೂರೆಳೆ ಏಕೆ ನಾರಾಯಣಾಚಾರ್ಯರೇ! ಆರೆಳೆ ಹಾಕಿರಿ.

ಇನ್ನು ಮುಂದೆ ಪ್ರಯತ್ನಪಟ್ಟು ಕಾಯುವೆನು."

"ಆರೆಳೆಯನ್ನು ಹಾಕಿಕೊಂಡೀ ! ಅದು ಹೇಗೆ ಸಾಧ್ಯ ! ಸಾವಿರ ರೂಪಾಯಿ ಖರ್ಚಾದರೆ ಆರೆಳೆ ! ಮದುವೆಯಾಗಬೇಕು ! ಮದುವೆಯ ಹುಚ್ಚು ಹಿಡಿಯಿತೇನು ?"

"ಇಲ್ಲ ಮಾರಾಯಾ ! ಯಾವ ಜನ್ಮವೂ ಮದುವೆಯಾಗಬಾರದೆಂದು ಹುಚ್ಚು ಹಿಡಿದಿದೆ. ಮುಂದೆ ಏನು ಮಾಡುವದು ಆಚಾರ್ಯರೇ?"

"ಸಧ್ಯಕ್ಕೆ ಇದನ್ನು ಹಾಕಿಕೋ ! ಮನೆಗೆ ಹೋದ ಮೇಲೆ ಹೊಸದೊಂದು ಹಾಕಿಕೊಂಡರಾಯಿತು" ಎಂದು ತನ್ನ ಕೊರಳೊಳಗಿನ ಒಂದು ಒಂಟೆ ಜನಿವಾರವನ್ನು ತೆಗೆದು ರಾಜಣ್ಣನಿಗೆ ಕೊಟ್ಟನು.

ರಾಜಣ್ಣನು ಕೊರಳಿಗೆ ಹಾಕಿಕೊಳ್ಳುತ್ತ "ಹೀಗೆ ಹಾಕಿಕೊಂಡರೆ ಅಂಗಿಯನ್ನು ತೆಗೆಯುವ ಮುಂದೆ ಅಂಗಿಯ ಸಂಗಡ ಕಿತ್ತುಹೋಗುವದು. ಏನು ಮಾಡಲಿ ?" ಎಂದು ಕೇಳಿದನು.

"ಕಠಿಣವಾಯಿತು ಮಾರಾಯಾ ! ಜೋಡುಪದರುಮಾಡಿ ಮಾಲಾಕಾರದಿಂದ ಹಾಕಿಕೋ ! ಕೆಳಗೆ ಇಳಿಬಿದ್ದು ಜೋತಾಡುವದಕ್ಕೆ ಮುಂಗೈಯನ್ನು ಹಾಕು. ಅಂದರೆ ಕೊರಳಿಗೆ ಹತ್ತಿಯಾಗಿ ಉಳಿಯುವದು."

"ಮಾಲಾಕಾರವೆಂದರೆ ?"

ನಾರಾಯಣಾಚಾರ್ಯನು ಹಣೆ ಹಣೆ ಬಡಿದುಕೊಂಡು ರಾಜಣ್ಣನ ಬಲಗೈ ಕೆಳಗಿನ ಜನಿವಾರವನ್ನು ತೆಗೆದು ಕೊರಳಿಗೆ ಹಾಕಿ ಕೆಳಗಿನದನ್ನು ಹೊಸೆದು "ಇದು ಮಾಲಾಕಾರ ?" ಎಂದನು.

"ಉರುಲು....ಉರುಲು....ಉರುಲು ಆಚಾರ್ಯರೇ !"

"ಬ್ರಾಹ್ಮಣನಾಗಬೇಕಾದರೆ ಜನಿವಾರದ ಈ ಉರುಲು ಇರಲೇಬೇಕು. ತಿಳಿಯಿತೇನು ?"

"ಹ ! ಒಳ್ಳೆಯ ಹಂಚಿಕೆ. ಇನ್ನು ಮುಂದೆ ಜನಿವಾರವು ಎಂದೂ ಹೋಗಲಾರದು. ಪ್ರಾಣ ಹೋದರೂ ಜನಿವಾರವು ಕುತ್ತಿಗೆಗೆ ಉಳಿಯುವದು. ಮೊದಲೇ ಈ ವಿಚಾರವನ್ನು ನೀವು ಹೇಳಿದ್ದರೆ ಜನಿವಾರದ ಗೊಂದಲವು ಏಳುತ್ತಿರಲಿಲ್ಲ."

"ನೀರು ಸೇದು. ಅಡಿಗೆಗೆ ಹೊತ್ತಾಗಿದೆ" ಎಂದು ಪಂಚೆಯನ್ನು ತೋಯಿಸಹತ್ತಿದನು.

ರಾಜಣ್ಣನು ನೀರನ್ನು ಸೇದಲಿಕ್ಕೆ ಹೋದನು.

"ಹೊಗೆಯು ಬಹಳವಾಯಿತು. ಒಂದಿಷ್ಟು ಉರಿ ಮಾಡು ರಾಜಾ!" ನಾರಾಯಣಾಚಾರ್ಯನು ಅಪ್ಪಣೆಯನ್ನು ಕೊಟ್ಟನು.

ರಾಜಣ್ಣನು ಕೊಡವನ್ನಿಟ್ಟು ಊದಿ ಉರಿಮಾಡಿದನು.

"ಇಲ್ಲಿ ನೋಡು ರಾಜಾ!" ಆಚಾರ್ಯನು ಕರೆದನು.

"ನಾಳೆ ತಾಲೂಕಿಗೆ ಹೋಗಬೇಕಾಗಿದೆ. ಅಲ್ಲಿಯ ಆ ದೊಡ್ಡ ವಕೀಲರ ಮನೆಯಲ್ಲಿ ಮುಂಜಿಯಂತೆ. ಎರಡು ದಿನ ದೊಡ್ಡ ಅಡಿಗೆ. ೫೦-೬೦ ರೂಪಾಯಿಯ ಸಂಪಾದನೆ. ಇಲ್ಲಿಯ ಅಡಿಗೆಯನ್ನು ಬೇಗ ಮುಗಿಸಿ ಸಂಜೆಯ ಗಾಡಿಗೆ ತಾಲೂಕಿಗೆ ಹೋಗಬೇಕು" ಎಂದನು.

"ಆಜ್ಞಾ ! ಆದರೆ ಒಂದಿಷ್ಟು ಹಸಿವೆ."

"ನೀರು ತುಂಬು. ಬಾಯಿಗೆ ಹೇಳಿ ಉಂಡಿ-ಅವಲಕ್ಕಿ ತರಿಸುವೆ."

"ಅಷ್ಟು ಮಾಡಿರಿ!" ಎಂದು ಕೊಡಕ್ಕೆ ಹಗ್ಗವನ್ನು ಬಿಗಿದನು.

## ೪೦

ಚಿನ್ನಯ್ಯನು ಹೃದಯ ವಿಕಾರದಿಂದ ಅಕಸ್ಮಿಕವಾಗಿ ತೀರಿಕೊಂಡ ಮೇಲೆ ಪುಟ್ಟವ್ವನ ಕಣ್ಣಲ್ಲಿ ನೀರೂರಿದವು. ಅವಳು ಅವನಿಂದ ಅನೇಕ ಉಪಕಾರಗಳನ್ನು ಹೊಂದಿದ್ದಳು. ಅವನ ಸಹಾಯದಿಂದಲೆ ತನ್ನ ವರ್ಷಾಶನದ ಹಣವು ತಾಲೂಕಿನವರೆಗೆ ಬರುತ್ತಿದ್ದಿತು. ಜೀವಕ್ಕೆ ಒಂದು ಬಗೆಯ ಸ್ವಾಸ್ಥ್ಯವನ್ನು ತಂದುಕೊಂಡಿದ್ದಳು. ಚಿನ್ನಯ್ಯನು ಸಹಾಯ ಮಾಡದಿದ್ದರೆ ತಾನೂ, ತನ್ನ ಮಗಳೂ, ಮೊಮ್ಮಗಳೂ ಅನಾಥರಾಗಿ ಉಳಿದು ಕೂಳಿಲ್ಲದೆ ಸಾಯಬೇಕಾದ್ದಿತು. ಕಷ್ಟದ ಕುಲುಮೆಯಲ್ಲಿ ಮುಳುಗೇಳಬೇಕಿದ್ದಿತು. ದುಃಖದ ಕಾಳ್ಗಿಚ್ಚಿನಲ್ಲಿ ಸುಟ್ಟು ಬೂದಿಯಾಗಬೇಕಿದ್ದಿತು. ಆದರೆ ಯೋಗ್ಯ ಸಮಯದಲ್ಲಿ ನೆರವಾದನು. ಹಳ್ಳಿಯಿಂದ ತಾಲೂಕಿಗೆ ಕರೆದು ತಂದನು. ಮನೆ ಮಾಡಿ ಕೊಟ್ಟನು. ಜೀವನ ಸೌಖ್ಯಗಳನ್ನು ಒದಗಿಸಿದನು. ಆ ಉಪಕಾರದಿಂದಲೇ ಇಲ್ಲಿಯವರೆಗೆ ಸುಖದಿಂದ ದಿನಗಳನ್ನು ಕಳೆದರು. ಕೊನೆ ಕೊನೆಗೆ ಅವನ ಸಂಗಡ ಬಡಿದಾಡಿದರೂ, ವಾದ ಹೂಡಿದರೂ, ಸಿಟ್ಟು-ಸಿಡುಕುಗಳನ್ನು ಮಾಡಿದರೂ ಅವನು ಹೃದಯದ ಅಂತರಾಳದಲ್ಲಿ ಈ ವರೆಗೂ ಮೂಡಿ ನಿಂತ ಪ್ರತಿಮೆಯಾಗಿದ್ದನು. ಬ್ರಾಹ್ಮಣೇತರನಾಗಿದ್ದರೂ ರೂಪವು ಮೆಚ್ಚುವಂತಹುದು. ಮಾತು ಸರಳವಾದುದು. ಕೈ ಸಡಿಲಾದುದು. ದಯವುಳ್ಳವನು. ಪ್ರಾಮಾಣಿಕನು. ನಂಬಿಗಸ್ತನು. ರಸಿಕನು. ಚಿಕ್ಕವಯಸ್ಸಿನಲ್ಲಿ ಹೆಂಡತಿಯನ್ನು ಕಳೆದುಕೊಂಡು ದೇಹದ ಸ್ವಾಭಾವಿಕ ತೃಷೆಗೆ ತಪ್ಪು ಹೆಜ್ಜೆಯನ್ನು ಇಟ್ಟನು. ಅದು

ಸಹ ಲೋಕ ಲಜ್ಜೆಗೆ ಹೆದರಿಕೊಂಡು, ತನ್ನ ನೆರಳಿಗೆ ತಾನೇ ಭಯ ಪಟ್ಟು ಅಡಗಿ, ಅಡಗಿ ಬರುತ್ತಿದ್ದನು. ನಸುಕು ನಸುಕಿನಲ್ಲಿಯೇ ಹೋಗುತ್ತಿದ್ದನು. ಬೀದಿಯ ಮೇಲೆ ಪುಟ್ಟವ್ವನಾಗಲಿ, ಅಕ್ಕಾಮರಿ ಯಾಗಲಿ ಕಂಡರೆ ಪರಿಚಿತರಂತೆ ನಡೆದನು. ಕಣ್ಣಲ್ಲಿ ಆಗ ಅದೇ ಭಾವನೆ, ಮನದಲ್ಲಿ ಅದೇ ವಿಶ್ವಾಸ, ಬುದ್ಧಿಯಲ್ಲಿ ಅದೇ ತಿಳಿವಳಿಕೆ. ಭಯದಿಂದ ನಡುಗುವ ಅವರ ಹೃದಯಕ್ಕೆ ಬೀದಿಯ ಮೇಲೆ ನಿಂತಿದ್ದರೂ ಸಮಾಧಾನದ ಶಾಂತ ಜಲವನ್ನು ಸುರಿದು ಧೈರ್ಯವನ್ನು ಕೊಡುತ್ತಿದ್ದನು. ಹೃದಯ ವಿಕಾರದ ಸುದ್ದಿಯು ಬರಲು ಡಾಕ್ಟರರಿಗೂ ಮೊದಲು ಪುಟ್ಟವ್ವನು ಅವನ ಮನೆಗೆ ಓಡಿದಳು. ಆಳುಗಳಿಂದ ಡಾಕ್ಟರರನ್ನು ಕರೆಯಿಸಿದಳು. ಉಪಾಯವಾಯಿತು. ಔಷಧವಾಯಿತು. ಚುಚ್ಚು ಮದ್ದಾಯಿತು. ಆದರೆ ಬದುಕಲಿಲ್ಲ. ಸತ್ತನು. ಗೆಳೆಯರು ಅಂತ್ಯ ಸಂಸ್ಕಾರಕ್ಕೆ ತೊಡಗಿದರು. ಇತ್ತ ಪುಟ್ಟವ್ವನು ಮನೆಯ ಎಲ್ಲ ಪದಾರ್ಥಗಳನ್ನೂ ತನ್ನ ಮನೆಗೆ ಸಾಗಿಸಿದಳು. ಆಳು ಹೋಳು ಗಳಿಗೆ ಅಷ್ಟಿಷ್ಟು ಕೊಟ್ಟು ಸಮಾಧಾನ ಪಡಿಸಿದಳು. ದೂರದ ಅಣ್ಣ ತಮ್ಮಂದಿರು ಬರುವಷ್ಟರಲ್ಲಿ ಮನೆಯು ಬರಿದಾಗಿದ್ದಿತು.

ಪುಟ್ಟವ್ವನಿಗೆ ಈಗ ತಾವಿದ್ದ ಮನೆಯು ದೊಡ್ಡದಾಯಿತು. ಬಾಡಿಗೆಯೂ ಬಹಳವೆನಿಸಹತ್ತಿತು. ಅಲ್ಲದೆ ಆ ಮನೆಯನ್ನು ಬಿಡಲೇ ಬೇಕಾಯಿತು. ಅದು ತನ್ನ ಸಮಾಜದವರ ಓಣಿಯಿಂದ, ದೇವರು-ದಿಂಡರು ಗುಡಿಗಳಿಂದ ದೂರಾಗುತ್ತಿದ್ದಿತು. ಚಿನ್ನಯ್ಯನು ಸತ್ತಮೇಲೆ ತನ್ನ ಸಮಾಜದವರ ನಡುವೆ ಹೋಗಿ ನಿಲ್ಲಬೇಕೆಂದು ಆಸೆಯಾಯಿತು. ಅದಕ್ಕೆ ಬ್ರಾಹ್ಮಣ ಕೇರಿಯಲ್ಲಿ ಒಂದು ಸಣ್ಣಮನೆಯನ್ನು ಬಾಡಿಗೆ ಯಿಂದ ಹಿಡಿದು ತಾಯಿ ಮಗಳು ಬಂದು ನಿಂತರು. ಬ್ರಾಹ್ಮಣ ಕೇರಿಯಲ್ಲಿ ವಾಸಮಾಡಲು ಜನರು ಮನೆಯನ್ನು ಬಾಡಿಗೆಯಿಂದ ಕೊಟ್ಟರಲ್ಲ! ತನಗೆ ಅನುಕೂಲ ಮಾಡಿಕೊಟ್ಟರಲ್ಲ! ಎಂಬ ಸಂತೋಷವೇ ಅಧಿಕವಾಯಿತು.

ಮೊದಲಿನ ಆಡಂಬರವೆಲ್ಲವನ್ನೂ ಬಿಟ್ಟರು. ಮನೆಯೊಳಗಿನ ಕುರ್ಚಿ ಮೇಜುಗಳನ್ನು ಮಾರಿದರು. ಪಲ್ಲಂಗು-ಮಂಚಗಳು ಹೋದವು.

ಬಾಗಿಲ ಕಿಟಕಿಗಳ ಪರದೆಗಳು, ಪಲ್ಲಿಕಾಯಿಯನ್ನು ತರುವ ಕೈಚೀಲಗಳಾದವು. ತೀರ ಸಾದಾ ಸ್ವರೂಪದ ಮನೆಯಾಯಿತು. ಮನೆಯ ಮುಂದಿನ ಕಟ್ಟೆಯ ಮೇಲೆ ತುಳಸಿಯ ಗಿಡದ ಒಂದು ಬಾನಿಯು ನಿಂತಿತು. ನಿತ್ಯ ಅದರ ಮುಂದೆ ಗೋಮಯ ರಂಗೋಲಿಯಾಯಿತು. ಹೊಸಲಿಗೆ ಸೆಗಣಿಯ ನೀರಿನಿಂದ ಸಾರಿಸಿ ಅರಿಶಿಣ-ಕುಂಕುಮವಾಯಿತು. ಬಾಗಿಲ ಮುಂದೆ ನೀರಿನ ಚಳಿಯಾಯಿತು. ಏಕಾದಶಿ, ದ್ವಾದಶಿ ತಿಥಿಗಳ ಎಣಿಕೆಗಳಾದವು. ಶನಿವಾರ ಮಾರುತಿಯ ದರ್ಶನವಾಯಿತು. ಕಾಯಿ ಕಪ್ಪುರದ ಸಮರ್ಪಣೆಯೂ ಆಯಿತು. ಚಾತುರ್ಮಾಸದಲ್ಲಿ ಭಾಗವತಸಪ್ತಾಹದ ಶ್ರವಣವಾಯಿತು. ಪುಟ್ಟವ್ವನ ಹಣೆಯ ಮೇಲೆ ಅಂಗಾರದ ಗೆರೆಯಾಯಿತು. ಅಕ್ಕಾಮರಿಯ ತಲೆಯ ಮೇಲೆ ಸೆರಗು ಬಂದಿತು. ಉಭಯತರು ಕಟ್ಟೆಯಕಲ್ಲು ಕಟ್ಟೆಗೆ ಕುಳಿತಂತೆ ಸಂತೋಷಪಟ್ಟರು.

ಬ್ರಾಹ್ಮಣ ಗಂಡಸರು ಮಾತ್ರ ಇನ್ನೂ ದಯಾದೃಷ್ಟಿಯಿಂದ ನೋಡುತ್ತಿರಲಿಲ್ಲ. ಏನೋ ಒಂದು ವಕ್ರದೃಷ್ಟಿ! ಕಣ್ಣಲ್ಲಿ ಯಾವದೊ ಕೊಳೆ! ಮಾತಿನಲ್ಲಿ ಎಂಥದೋ ಕಾವು! ಊಟಕ್ಕೆ ಹೋಗುತ್ತಿರಲಿಲ್ಲ. ತಮ್ಮಲ್ಲಿಯೂ ಕರೆಯುತ್ತಿರಲಿಲ್ಲ. ತರುಣರು ಮಾತ್ರ ಆಗಾಗ ಮನೆಯ ಮುಂದೆ ಸುಳಿದಾಡುತ್ತಿದ್ದರು. ಪುಟ್ಟವ್ವನು ಇದೆಲ್ಲವನ್ನೂ ಅರಿತಿದ್ದಳು. ಆದರೆ ಪರೀಕ್ಷಿಸಿ ನೋಡಬೇಕೆಂದು ಹವಣಿಸಿರಲಿಲ್ಲ. ಸಾರ್ವಜನಿಕ ಬಾವಿಯಿಂದ ನೀರು ತರುತ್ತಿದ್ದಳು. ನೆಲವು ಒಂದಿಷ್ಟು ಹಸಿಯಾಗುತ್ತಿದ್ದಿತು. ನೀರು ಸೇದ ಬಂದ ಬ್ರಾಹ್ಮಣರು ಅದರ ಮೇಲೆ ತಮ್ಮ ಕೊಡದೊಳಗಿನ ನೀರು ಸುರಿದು ಸೇದಿಕೊಂಡು ಹೋಗುತ್ತಿದ್ದರು. ಈ ತಾರತಮ್ಯ ಅವಳಿಗೆ ಸಾಕಾಗಿದ್ದಿತು. ಈ ಕ್ಷಣವೇ ತನ್ನನ್ನು ಸಮಾಜದಲ್ಲಿ ಕೂಡಿಸಿಕೊಳ್ಳಲಿ! ಎಂದು ಅವಸರಪಟ್ಟಿರಲಿಲ್ಲ. ಯಾವದೊಂದು ಸಂಗತಿಗೂ ಆಕೆಯು ದಿನಗಳನ್ನು ಎಣಿಸುತ್ತಿದ್ದಳು. ತಾಳ್ಮೆಯ ಪರೀಕ್ಷೆಗೆ ನಿಲ್ಲಿಸುತ್ತಿದ್ದಳು. ಮುಂದೆ ಮುಂದೆ ಹೋದಂತೆ ಹಿಂದಿನ ಸಂಗತಿಗಳು ಮಸಕಾಗುವವೆಂದು ದೃಢವಾಗಿ ನಂಬಿದ್ದಳು.

ತನ್ನ ಮನೆಯಲ್ಲಿ ಇದ್ದವರೆಲ್ಲರೂ ಹೆಂಗಸರು. ಅಕ್ಕಾಮರಿಯ

ಮಕ್ಕಳಾದ ಜೇಬಿ, ಮೇರಿ ಇನ್ನೂ ಚಿಕ್ಕವರು. ಲಿಲ್ಲಿ ಮಾತ್ರ ಒಂದಿಷ್ಟು ದೊಡ್ಡವಳಾಗಿದ್ದಳು, ಶಾಲೆಗೆ ಹೋಗುತಿದ್ದಳು. ತನ್ನ ವರ್ಗದ ಓರಗೆಯವರನ್ನು ಮನೆಗೆ ಕರೆದು ತರುತ್ತಿದ್ದಳು. ತಾನೂ ಹೋಗುತ್ತಿದ್ದಳು. ಆ ಮಗುವಿಗೆ ಅದಾವ ವಾಸನೆಯೂ ಇರಲಿಲ್ಲ. ಬ್ರಾಹ್ಮಣರೆಂದೇ ಗಟ್ಟಿಮುಟ್ಟಾದ ಭಾವನೆ. ಬ್ರಾಹ್ಮಣ ಕುವರಿಯರು ಮಾಡುವ ಮೌನಗೌರಿಯ ವ್ರತ, ತುಳಸಿಯ ಪೂಜೆ, ಗುರುವಾರ ಸುಧಾಮನ ಹಾಡು ಸಾಗಿಸುತ್ತಿದ್ದಳು. ಶನಿವಾರ ಶನಿಮಹಾತ್ಮೆಯನ್ನು ಓದುತ್ತಿದ್ದಳು. ಕಾರ್ತೀಕ, ಆಷಾಢ ಮಾಸಗಳ ಏಕಾದಶಿಯನ್ನು ಸಾಧ್ಯವಾದಷ್ಟು ಶಕ್ತಿಯಿಂದ ನೆರವೇರಿಸುತಿದ್ದಳು. ತನ್ನ ವ್ರತ, ತಾನು ದೇವಿಗೆ ಒಪ್ಪಿಸುವ ಭಕ್ತಿಗಳನ್ನು ತನ್ನ ಗೆಳೆಯರಲ್ಲಿ ಹೇಳುತ್ತಿದ್ದಳು. ಹೀಗೆ ಆ ಮಗು ಗೆಳೆಯರ ವಿಶ್ವಾಸ-ಪ್ರೇಮವನ್ನು ಪಡೆದಿದ್ದಿತು.

ಮೂರನೆಯ ಮಗುವಾದ ಮೇರಿಯು ಮುದ್ದು ಮುದ್ದಾಗಿದ್ದಿತು. ಅದನ್ನು ಎತ್ತಿಕೊಂಡು ಮುದ್ದಿಟ್ಟು, ಆಡಿಸಲು ಅನೇಕ ಗೆಳತಿಯರು ಮನೆಗೆ ಬರುತ್ತಿದ್ದರು. ನನಗೆ ತನಗೆಂದು ಆ ಮಗುವನ್ನು ಎಳೆದಾಡುತ್ತಿದ್ದರು. ಈ ಎಳೆದಾಟದಿಂದ ಅಳಹತ್ತಲು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ತಾಸೆರಡು ತಾಸುಗಳ ವರೆಗೆ ಇಟ್ಟುಕೊಂಡು ಉಣಿಸಿ-ತಿನಿಸಿ ಮನೆಗೆ ತಂದು ಬಿಡುತ್ತಿದ್ದರು.

ಲಿಲ್ಲಿಯ ಕಂಠವು ಮಧುರವಾಗಿದ್ದಿತು. ಪುಟ್ಟಪ್ಪನು ಮೊಮ್ಮಗಳನ್ನು ಹತ್ತರ ಕುಳ್ಳಿರಿಸಿಕೊಂಡು ಕೆಲವು ದಾಸರ ಹಾಡುಗಳನ್ನು ಕಲಿಸಿದ್ದಳು. ನಿತ್ಯ ಅವುಗಳನ್ನು ಒಪ್ಪಿಸಿಕೊಳ್ಳುತ್ತಿದ್ದಳು. ಪ್ರಾತಃಕಾಲದ ಉದಯರಾಗವನ್ನು ಹೇಳಿದ್ದಳು. ಮುಂಜಾನೆ ಬೇಗನೆ ಎಬ್ಬಿಸಿ ತನ್ನ ಹಾಡಿನ ಸಂಗಡ ಅವಳ ದನಿಯನ್ನೂ ಬೆರೆಸಿ ಕೊಳ್ಳುತ್ತಿದ್ದಳು. ಸಂಗೀತದ ಈ ಪ್ರಥಮ ಪರಿಶ್ರಮವು ಲಿಲ್ಲಿಗೆ ಬಹಳ ಅನುಕೂಲವಾಯಿತು. ಸಾಲೆಯಲ್ಲಿ ತನ್ನ ಓದುವ ಪುಸ್ತಕದೊಳಗಿನ ಹಾಡುಗಳನ್ನು ಮಧುರವಾಗಿ ನುಡಿಯುತ್ತಿದ್ದಳು. ಇದರಿಂದ ಸಾಲೆಯ ಅಕ್ಕನವರ ಪ್ರೇಮವೂ ಸಂಪಾದನೆಯಾಗಿತ್ತು. ಪರೀಕ್ಷೆಯ ದಿನ ಸಾಹೇಬರ ಮುಂದೂ ಹಾಡು ಹೇಳಿಸಿ ಅಕ್ಕನವರು ಪ್ರಶಂಸೆಯನ್ನು

ಪಡೆದಿದ್ದರು.

ಲಿಲ್ಲಿಯು ತನ್ನ ಗೆಳೆಯರ ಮನೆಗೆ ಹೋದ ಸಮಯದಲ್ಲಿ ಆ ಮಕ್ಕಳ ತಾಯಂದಿರು–'ಹಾಡು ಹೇಳು ಮಗು ?' ಎಂದು ಆಗ್ರಹಪಡುತ್ತಿದ್ದರು. ಆಗ ದಾಸರ ಒಂದೆರಡು ಹಾಡುಗಳನ್ನು ಹೇಳುತ್ತಿದ್ದಳು. ಆ ತಾಯಂದಿರು ಸಂತೋಷಪಟ್ಟು ಲಿಲ್ಲಿಯನ್ನು ಸ್ತುತಿಸಿ ತಮ್ಮ ಮಕ್ಕಳ, ತಿನಿಸು-ಉಣಿಸುಗಳನ್ನು ಕೊಡುತ್ತಿದ್ದರು. ಮತ್ತು ತಮ್ಮ ಮನೆಯ ವಿಶೇಷ ಪ್ರಸಂಗಗಳಲ್ಲಿ ಅವಳಿಗೆ ಊಟಕ್ಕೂ ಹೇಳುತ್ತಿದ್ದರು. ಅಂದು ರಾತ್ರಿಯ ಆರತಿಯ ಹಾಡು, ಹಸೆಗೆ ಕರೆವ ಹಾಡು, ಮಂಗಳದ ಹಾಡು ಲಿಲ್ಲಿಯ ಪಾಲಿಗೆ ಕಟ್ಟಿಟ್ಟ ಗಂಟು.

ಈ ಮಕ್ಕಳ ಓಡಾಟದಿಂದ ನೆರೆಹೊರೆಯ ಕೆಲವು ಬ್ರಾಹ್ಮಣಿಯರು ಅಕ್ಕಾಮರಿಯನ್ನು, ಪುಟ್ಟವ್ವನನ್ನು ಸಹಾನುಭೂತಿಯಿಂದ ಕಾಣಹತ್ತಿದರು. ಅಕ್ಕಾಮರಿಯು ಮುಟ್ಟಾಗಲು ನೆರೆಮನೆಯ ಪಲ್ಲಕ್ಕನು ತನ್ನ ಮನೆಗೆ ಊಟಕ್ಕೆ ಕರೆಯಹತ್ತಿದಳು. ಮೊದಮೊದಲು ಬಹಳ ಸಂಕೋಚವೆನಿಸಹತ್ತಿತು. ದಿನಗಳು ಕಳೆದಂತೆ, ಬಳಕೆಯು ಹೆಚ್ಚಾಗಿ ಸ್ನೇಹ ಬೆಳೆಯಿತು. ಒಬ್ಬರು ಇನ್ನೊಬ್ಬರ ಮನೆಯ ಚಹ ಕುಡಿಯಹತ್ತಿದರು. ಚಹದ ಜತೆಗೆ ಉಪ್ಪಿಟ್ಟು ಬಂದಿತು. ಒಮ್ಮೆ ಇಡ್ಲಿ ಬಂದಿತು. ದೋಸೆ ಹಣಿಕಿಕ್ಕಿತು. ಊಟದ ಆಮಂತ್ರಣದವರೆಗೆ ಪ್ರಸಂಗವು ಬಂದಿತು.

ಅಕ್ಕಾಮರಿಯ ಮನೆಯಲ್ಲಿ ಸತ್ಯನಾರಾಯಣ ಪೂಜೆಯ ಹೊರತು ಊಟಕ್ಕೆ ಕರೆಯುವ ಸ್ವಾಭಾವಿಕ ಪ್ರಸಂಗಗಳು ತೀರ ಕಡಮೆಯಾಗಿದ್ದವು. ನವರಾತ್ರಿ, ದಸರೆ, ಹುಣ್ಣಿಮೆ, ದ್ವಾದಶಿ ಇವು ಸಾರ್ವತ್ರಿಕ ಹಬ್ಬಗಳು. ಆಚಾರ್ಯರಾಗಲಿ, ಮುತ್ತೈದೆಯರಾಗಲಿ ಸಿಕ್ಕುತ್ತಿರಲಿಲ್ಲ. ಮತ್ತು ಅವರನ್ನು ಕರೆದು ದೇವರ ನೈವೇದ್ಯ ಮಾಡಿಸೇ ಬಿಡುವೆ ಎಂದು ಹಟವನ್ನಿಟ್ಟುಕೊಂಡಿರಲಿಲ್ಲ. ತನ್ನಲ್ಲಿ ಊಟಕ್ಕೆ ಬರುವವರು ಮಂತ್ರ ಬಾರದ, ತಂತ್ರಪೂಜಕರಾದ ಸಾಮಾನ್ಯ ತರಗತಿಯ ಆಚಾರ್ಯರು. ಅವರೇ ವಿಶ್ವಾಸದಿಂದ ಊಟಕ್ಕೆ ಬಂದರೆ ಸಾಕೆಂದು ಆನಂದಪಟ್ಟಿದ್ದಳು. ಬೇರೆ ಯಾವದೇ

ಪ್ರಸಂಗ ಒಂದು ವೇಳೆ ಬಂದರೆ ಅದನ್ನು ವ್ಯರ್ಥವಾಗಿ ಬಿಡುತ್ತಿರಲಿಲ್ಲ. ನೆರೆಮನೆಯ ಭಾಗವ್ವನ ಸೊಸೆಗೆ ಬೆಳದಿಂಗಳ ಕುಪ್ಪಸವನ್ನು ಮಾಡಿದಳು. ಪಲ್ಲಕ್ಕನ ಮಗಳನ್ನು ವನಭೋಜನಕ್ಕೆ ಕರೆದುಕೊಂಡು ಹೋದಳು. ರಾಧಕ್ಕನ ಮಗನಿಗೆ ಮುಂಜಿಯ ದಿನ ಥಾಲಿ, ತೀರ್ಥ ಸವಟು, ಸಂಧ್ಯಾವಂದನೆಯ ಪುಸ್ತಕವನ್ನು ಕಾಣಿಕೆಯಾಗಿ ಕೊಟ್ಟಳು. ನಾರಾಯಣ ದೇವರ ಗುಡಿಯ ಜೀರ್ಣೋದ್ಧಾರಕ್ಕೆ ಹದಿನೈದು ರೂಪಾಯಿ ಕೊಟ್ಟಳು.

ಜನರು ತಮ್ಮನ್ನು ದಯಾದೃಷ್ಟಿಯಿಂದ ನೋಡಹತ್ತಿದರೆಂದು ಆ ತಾಯಿ-ಮಗಳು ಆನಂದಪಡಹತ್ತಿದರು. ಹಿಂದೆ ಆದದ್ದೆಲ್ಲ ಕೃಷ್ಣಾರ್ಪಣವೆಂದು ನುಡಿದು ನೆಮ್ಮದಿಯಾಗಿ ಇರಹತ್ತಿದರು.

ಪಲ್ಲಕ್ಕನು ತನ್ನ ಮಗನ ಮುಂಜಿವೆಯನ್ನು ಹೂಡಿದಳು. ತನ್ನ ಕಡೆಯ ಮಗನ ಮುಂಜಿಯನ್ನು ವೈಭವದಿಂದ ಮಾಡಬೇಕೆಂದು ಅವಳ ಆಶೆ. ಗಂಡನು ಅನುಕೂಲಸ್ಥನಿದ್ದನು. ಹೆಂಡತಿಯ ಬಯಕೆಗೆ ಎರಡು ಮಾತಾಡುತ್ತಿರಲಿಲ್ಲ. ಅವಳ ಆಶೆಯು ಏನೇನಿದೆ ಎಲ್ಲವೂ ಸಾಂಗವಾಗಲಿ! ಎಂದು ಕೈ ಸಡಿಲು ಬಿಟ್ಟು ಹಣ ಖರ್ಚು ಮಾಡಲು ಸಿದ್ಧನಾಗಿದ್ದನು.

ಎಂಟು ಸೇರಿನ ಮುಂಡಿಗೆ, ಒಪ್ಪಿದ್ದನು.
ಜಿಲೇಬಿಯ ಪ್ರಸ್ಥ, ಸಮ್ಮತಿಸಿದ್ದನು.
ಇಪ್ಪತ್ತೈದು ಗ್ಯಾಸು, ಹೂ ಎಂದಿದ್ದನು.
ಬ್ಯಾಂಡಿನ ಮೇಳ, ತಲೆಹಾಕಿದ್ದನು.

ಅಂದು ಅಕ್ಕಾಮರಿಗೆ ಮತ್ತು ಆಕೆಯ ಎಲ್ಲ ಮಕ್ಕಳಿಗೆ ಊಟಕ್ಕೆ ಆಮಂತ್ರಿಸಿದ್ದಳು. ಅಕ್ಕಾಮರಿಯು ಸರ್ವಾಭರಣೆಯಾಗಿ ಮಕ್ಕಳನ್ನು ಅಲಂಕರಿಸಿಕೊಂಡುಊಟಕ್ಕೆ ಹೋದಳು.

ಅಂದು ಸಣ್ಣ ನಾರಾಯಣಾಚಾರ್ಯನು ಅಡಿಗೆಯನ್ನು ಮಾಡಲು ಜಿಲ್ಲೆಯಿಂದ ಬಂದಿದ್ದನು. 'ಪಕ್ವಾನ್ನಗಳನ್ನು ಮಾಡಲು ಅವನ ಕೈ ಮೇಲು. ನಾರಾಯಣನ ಸಾರು ಕುಡಿದರೆ ನಾಲಗೆಯ ಕಿಲುಬು ಬಿಡುವದು. ಕರುಳಿನ ಹೊಲಸು ತೊಳೆಯುವದು, ಹೊಟ್ಟೆ

ಸ್ವಚ್ಛವಾಗುವದು. ಮಂಡಿಗೆಯನ್ನು ತಿನ್ನಬೇಕಾದರೆ ನಾರಾಯಣನ ಮಂಡಿಗೆಯನ್ನೇ ತಿನ್ನಬೇಕು! ಇಪ್ಪತ್ತನಾಲ್ಕು ಪೌಂಡಿನ ತೂಕದ ಕಾಗದಕ್ಕಿಂತ ತೆಳ್ಳಗೆ!' ಎಂದು ಎಲ್ಲರ ವರ್ಣನೆಯು ಮಾತಾಗಿದ್ದಿತು.

ತಾಲೂಕಿನ ದೊಡ್ಡದೊಡ್ಡ ಬ್ರಾಹ್ಮಣರ ಮನೆಗೆ ನಾರಾಯಣನೇ ಅಡಿಗೆಗೆ ಬರಬೇಕು. ಆ ತಾಲೂಕಿಗೆ ಅವನು ಬಹಳ ದಿನಗಳಿಂದ ಪ್ರಸಿದ್ಧ. ಮತ್ತು ಸ್ವಭಾವದಿಂದ ಒಳ್ಳೆಯವ. ಹೆಚ್ಚಾಗಿ ಇವನನ್ನೇ ಕರೆಸುತ್ತಿದ್ದರು. ಇಂದು ಮಹಾಭೋಜನವೆಂದು ಪಲ್ಲಕ್ಕನ ಗಂಡನು ನಾರಾಯಣನನ್ನೇ ಕರೆಸಿದ್ದರು. ಜೊತೆಗೆ ರಾಜಣ್ಣನೂ ಬಂದಿದ್ದ.

ಎರಡು ಗಂಟೆಗೆ ಜನರು ಊಟಕ್ಕೆ ಕುಳಿತರು. ಎಲೆ ಹಾಕಿದರು. ಬಡಿಸಿದರು. ಹತ್ತು ಕೊಡದ ಹಂಡೆ ತುಂಬಿದ ಸಾರಿನಲ್ಲಿ ತಳಕ್ಕೆ ಬೇಳೆಯಷ್ಟೇ ಉಳಿದವು. ಜನರು ಸುರಿದದ್ದೇ ಸುರಿದದ್ದು. ನಾರಾಯಣನ ಪ್ರಶಂಸೆಯ ಸಂಗಡ ಊಟ ಮುಗಿಯಲು ನಾಲ್ಕು ಹೊಡೆಯಿತು. ಅಡಿಗೆಯನ್ನು ಮುಗಿಸಿ ಒಲೆಯ ಮೇಲೆ ಉಳಿದ ಜನರಿಗೆಂದು ಅನ್ನದ ಸಣ್ಣ ತಪ್ಪೇಲಿಯನ್ನು ಹೇರಿ ನಾರಾಯಣನು ಹಿತ್ತಿಲಲ್ಲಿ ಬಾವಿಯ ಕಟ್ಟೆಯ ಮೇಲೆ ಉಸ್ಸೆಂದು ಕುಳಿತನು. ಬೆವರು ಒರಸಿಕೊಳ್ಳ ಹತ್ತಿದನು. ಊಟ ಮಾಡಿದ ಹೆಂಗಸರು ಹಿತ್ತಲಿಗೆ ಕೈತೊಳೆಯಲು ಬಂದರು. ತೊಳೆದು ಹಿಂಡುಗಟ್ಟಿಕೊಂಡು ನಿಂತರು. ಆ ಮಾತು ಈ ಮಾತು ನಡೆಯಿತು.

ಹೆಂಗಸರಿಗೆ ಮೂಲತಃ ಮಾತು ಬೇಕು. ಅದರಲ್ಲಿ:ಹೊಗೆಯಿಲ್ಲದ ಬಾನವು ಸಿಕ್ಕ ಮೇಲೆ ಕೇಳುವುದೇ ? ಹರಟೆಯು ಸುಂದರವಾಗಿ ಸಾಗಿತು.

ರಾಜಣ್ಣನು ಉಂಡ ಎಲೆಗಳನ್ನು ಬಳಿದನು. ಬುಟ್ಟಿಯಲ್ಲಿ ತುಂಬಿ ಹೆಗಲಮೇಲೆ ಹೊತ್ತು ದೂರ ಚಲ್ಲಿ ಬಂದನು. ಬಿದ್ದ ಅನ್ನದ ಅಗುಳು, ಜಿಲೇಬಿಯ ಚೂರು, ಸಾರಿನ ನೀರು ಇತ್ಯಾದಿಗಳನ್ನು ಕಸಬರಿಗೆಯಿಂದ ಉಡುಗಿ ಬುಟ್ಟಿಯಲ್ಲಿ ತುಂಬಿದನು. ಆದರೆ ಗೋಮಯ ಮಾಡಲು ನೀರು ಇರಲಿಲ್ಲ. ಊಟಕ್ಕೆ ಬಂದವರು ಕೈ ತೊಳೆದು ತೀರಿಸಿದ್ದರು. ನೀರು ಸೇದಲು ಹಿತ್ತಿಲಿಗೆ ಬಂದನು. ಅಲ್ಲಿ ಒಂದು ಹೆಂಗಸರ ತಂಡವು

ನೆರಳಲ್ಲಿ ನಿಂತು ಹರಟೆಯನ್ನು ಹೊಡೆಯುವದು ಕಣ್ಣಿಗೆ ಬಿದ್ದಿತು. ನಾನಾ ತರದ ಸೀರೆಗಳು, ಸೀರೆಗೆ ಹೊಂದಿಕೆಯಾಗುವಂತೆ ನಾನಾ ತರದ ಬಣ್ಣದ ಕುಪ್ಪಸಗಳು, ತಲೆತುಂಬ ಮಾಲೆ, ಕೈತುಂಬ ಬಂಗಾರದ ಮತ್ತು ರೇಸಿಮೆಯ ಬಳೆಗಳು. ಕಿವಿಯಲ್ಲಿ ಮುತ್ತಿನ ಮತ್ತು ವಜ್ರದ ಬೆಂಡೋಲೆ. ಮೂಗಿನಲ್ಲಿ ಹರಳಿನ ಮೂಗುಬಟ್ಟು, ಇಂಥ ಅಲಂಕಾರ ಮಂಡಿತರಾದ ಸೌಂದರ್ಯಶಾಲಿನಿಯರು ಒಮ್ಮೆಲೆ ಕಣ್ಣಿಗೆ ಕಂಡರು. ಆ ಶ್ರೀಮಂತ ಮನೆತನದ ಹೆಣ್ಣುಮಕ್ಕಳ ರೂಪ ನೋಡುವಂತಹದು. ಮೈಬಣ್ಣಕ್ಕೆ ಬಟ್ಟೆಗಳು ಎದ್ದು ಕಾಣುತ್ತಿದ್ದವು. ಬಟ್ಟೆಗಳಿಗೆ ಆಭರಣಗಳು ಮಿಂಚುತ್ತಿದ್ದವು. ಆಭರಣಗಳಿಗೆ ಮೈಯು ಹಿನ್ನೆಲೆಯಾಗಿ ಚೆಲುವನ್ನು ಚಿಮ್ಮುತ್ತಿದ್ದಿತು. ಅವರನ್ನು ನೋಡಿದರೆ ಕಣ್ಣಿಗೆ ಹಸಿವೆಯಾಗಬೇಕು. ಬುದ್ಧಿಗೆ ಉತ್ತೇಜನವಾಗಬೇಕು. ಕಲ್ಪನೆಗೆ ಕುಸುರೊಡೆಯಬೇಕು. ಅಂಥ ಸುಗಂಧಪೂರಿತ ಬಣ್ಣ! ಅಂಥ ರೂಪು! ಅಂಥ ಬೆಡಗು! ಅಂಥ ಅಲಂಕಾರ! ಆ ಸೌಂದರ್ಯದ ಗೂಡಿನಂತಹ ಶರೀರದಿಂದ ಕಿಲಕಿಲ ರವದ ಮಾತು, ಮಾತಿಗೊಮ್ಮೆ ಸುಲಿಪಲ್ಲಿನ ಮಿಂಚು, ಕಣ್ಣಿನ ಕಾಂತಿ, ಮೂಗಿನ ಹೊಳವು, ಕೆನ್ನೆಯ ಕಸ್ತೂರಿ, ಕತ್ತಿನ ಕುಣಿತ, ಕೈಯ ಮಣಿತ, ವಜ್ರದ ಹರಳಿನ ಕಾಮನ ಬಿಲ್ಲು, ಕೊರಳ ಸರದ ತೂಗುಯ್ಯಾಲೆ, ಹಣೆಯ ಕುಂಕುಮದ ಮಂಕು! ಆರತಿ ಸದೃಶ ಹೆಂಗಸರನ್ನು ರಾಜಣ್ಣನು ಕುತೂಹಲದಿಂದ ನೋಡಹತ್ತಿದನು. ಅವರಲ್ಲಿಯೇ ಗೋಡೆಗೆ ನಿಂತು, ಎಲ್ಲರಿಗೂ ಹಾಸ್ಯ, ವಿನೋದವನ್ನು ಮಾಡುವ, ನಡುಹರೆಯದ ಗುಲಾಬಿಯ ವರ್ಣದ ಸರ್ವಾಲಂಕಾರಭೂಷಿತೆಯಾದ ಆ ಹೊಚ್ಚ ಹೊಸ ಹೆಂಗಸನ್ನು ಎವೆಯಾಡಿಸದೆ, ಕಣ್ಣು ಅಲುಗಿಸದೆ, ಬಾಯಿ ತೆರೆದು, ಮುಗ್ಧನಾಗಿ, ಮೋನಿಯಾಗಿ, ಮಂಕುಪೆದ್ದನಾಗಿ ನೋಡಹತ್ತಿದನು. ಮತ್ತೂ ನೋಡಹತ್ತಿದನು. ಇನ್ನೂ ನೋಡಹತ್ತಿದನು. ಕಣ್ಣು ಕೀಳಲಿಲ್ಲ. ಮನಸು ಎಳೆಯಲಿಲ್ಲ. ಬುದ್ಧಿ ಸರಿದಾಡಲಿಲ್ಲ. ಒಂದೇಸವನೆ ನೋಡಹತ್ತಿದನು. ಎಂಥ ರೂಪ!!!

ಒಳಗೆ ಯಜಮಾನರು ಕೂಗುತ್ತಿದ್ದರು.

ರಾಜಣ್ಣನಿಗೆ ಎಚ್ಚರವಿಲ್ಲ.

ಯಜಮಾನಿಯೂ ಒದರಿದಳು.

ರಾಜಣ್ಣನು ಇನ್ನೂ ಕಿವುಡ.

ಯಜಮಾನರು ಮತ್ತೂ ಕೂಗಿದರು.

ರಾಜಣ್ಣನ ಜೀವ ತೂರ್ಯಾವಸ್ಥೆಗೆ ಬಂದಿದ್ದಿತು.

ಯಜಮಾನಿಯು ಆರ್ಭಟಿಸುತ್ತ ಹೊರಗೆ ಬಂದಳು.

ನಾರಾಯಣಾಚಾರ್ಯನು ಎದ್ದುಬಂದು ರಾಜಣ್ಣನ ಕೆನ್ನೆಗೆ ಛಟೀರೆಂದು ಬಿಗಿದು–"ಸೂಳೇಮಗನೇ, ಎಲೆ ಬಳಿದು ಎಷ್ಟು ಹೊತ್ತಾಯಿತು. ಗೋಮಯ ಮಾಡದೆ ಹಾಗೇ ನಿಲ್ಲುವದೇ! ಹೋಗು." ಎಂದು ಛೀ....ಥೂ....ಹಾಕಿದನು.

ರಾಜಣ್ಣನು ಕೊಡವನ್ನು ಸೇದಿಕೊಂಡು ಒಳಗೆ ಹೋದನು. ಗೋಮಯ ಮಾಡಿದನು. ತನಗೂ, ನಾರಾಯಣಾಚಾರ್ಯನಿಗೂ ಒಂದೊಂದು ಎಲೆ ಹಾಕಿದನು. ಬಡಿಸಿದ್ದಾಯಿತು. ಊಟವಾಯಿತು. ಎಲೆ ಅಡಿಕೆಯೂಾಯಿತು.

ನಾರಾಯಣಾಚಾರ್ಯನು ತನ್ನ ಹಣ ಮತ್ತು ಸಂಭಾವನೆಯನ್ನು ಪಡೆದುಕೊಂಡು ತಮ್ಮ ಊರಿಗೆ (ಜಿಲ್ಲೆಗೆ) ಬರಲು ಅವಸರ ಮಾಡಿ ಗಾಡಿಯನ್ನು ಹತ್ತಿದನು. ಜತೆಗೆ ರಾಜಣ್ಣನೂ ಇದ್ದನು.

ಗಾಡಿಯು ಜಿಲ್ಲೆಯ ಕಡೆಗೆ ಮುಖ ಮಾಡಿ ಓಡಹತ್ತಿತು.

"ರಾಜಾ, ಮೈ ಮೇಲೆ ಎಚ್ಚರವಿಲ್ಲದೆ ಬಾವಿಯ ಕಟ್ಟೆಯ ಹತ್ತಿರ ನಿಂತು ಯಾರನ್ನು ನೋಡುತ್ತಿದ್ದೆ?" ನಾರಾಯಣಾಚಾರ್ಯನು ರಾಜಣ್ಣನನ್ನು ಕೇಳಿದನು.

"ಕಂಬದ ಹತ್ತಿರ ಇದ್ದ ಹೆಂಗಸನ್ನು! ಎಂಥ ರೂಪ!"

"ಕಂಬದ ಹತ್ತಿರ!"

"ಹ....ಗೋಡೆಗೆ ನೆಂಬಿ ಕಂಬದ ಹತ್ತರ ಇದ್ದವಳು."

"ಅದೇಕೋ? ಆಕೆಯನ್ನು ಮದುವೆ ಮಾಡಿಕೊಳ್ಳಬೇಕೆಂದು ಮನಸಾಗಿದ್ದಿತೇನು?"

"ಏನಿಲ್ಲ!" ವಿಷಾದದಿಂದ ನುಡಿದನು.

"ಅಂದರೆ !"

"ನನಗೂ ಒಮ್ಮೆ ಅಂಥ ಚಲುವೆಯಾದ ಹೆಂಡತಿಯಿದ್ದಳು !"

"ಥೂ ಸೂಳೇಮಗನೇ ! ಅಂಥ ಹೆಣ್ಣು, ಹೆಂಡತಿಯಾಗಿ ಸಿಗಬೇಕಾದರೆ ರಾಜಮನೆತನದಲ್ಲಿ ಹುಟ್ಟಿ ಬರಬೇಕು !"

"ನಿಜವಾಗಿ !" ಮೆಲ್ಲಗೆ ನುಡಿದನು.

"ಕನಸಿನಲ್ಲೇನು ?" ನಗುತ್ತ ಕೇಳಿದನು.

"ಇಲ್ಲ. ನಿಜವಾಗಿ ಅಂಥ ಚೆಲುವೆಯಾದ ಹೆಂಡತಿ ಇದ್ದಳು." ಕಂಠವು ತುಂಬಿ ಬಂದಿತು.

"ಮುಂದೆ ?" ಒಂದಿಷ್ಟು ಆಶ್ಚರ್ಯದಿಂದ ನಾರಾಯಣಾಚಾರ್ಯನು ಕೇಳಿದನು.

"ಹೋದಳು." ಕಣ್ಣು ಹಸಿಯಾದವು.

"ನನಗೆ ಈವರೆಗೂ ಹೇಳಿಲ್ಲವಲ್ಲ !"

"ಹೇಗೆ ಹೇಳಲಿ, ಆಚಾರ್ಯರೇ !" ನೀರು ಚಿಮ್ಮಿತು.

ನಾರಾಯಣಾಚಾರ್ಯನಿಗೆ ಈಗ ನಿಜವೆನಿಸಿತು. ಮರುಗಿದನು.

"ರಾಜಣ್ಣ. ಅಂಥ ಚೆಲುವೆ !" ತುಟಿಯ ಮೇಲೆ ಬೆರಳಿಟ್ಟು ಕೇಳಿದನು.

"ಅಹುದು. ಇವಳಿಗೆ ಒಂದಿಷ್ಟು ವಯಸ್ಸಾಗಿದೆ. ದೇಹವು ಒಂದಿಷ್ಟು ಗಡುತರ. ನನ್ನ ಹೆಂಡತಿಯು ಇನ್ನೂ ಚಿಕ್ಕವಳು, ನೈತೆಳ್ಳಗೆ. ಬಣ್ಣ ಅದೇ ಎನ್ನಬಹುದು. ಮೂಗು ಈಕೆಯಂತೆಯೇ ಉದ್ದ. ನಯ-ನಾಜೂಕಾಗಿ ಇದ್ದಳು. ಅವಳ ರೂಪವು ಇನ್ನೂ ಕಣ್ಣ ಮುಂದಿದೆ. ಆ ರೂಪಕ್ಕೂ ಈ ರೂಪಕ್ಕೂ ಹೋಲಿಸಿ ನೋಡುತ್ತಿದ್ದೆ. ತನ್ಮಯನಾಗಿದ್ದೆ. ನಿಮ್ಮ ಬಡಿತ...." ಎಂದು ಮುಖವನ್ನು ಮುಚ್ಚಿಕೊಂಡು ಅಳಹತ್ತಿದನು.

ನಾರಾಯಣಾಚಾರ್ಯನಿಗೆ ಬಹಳ ಕೆಡಕೆನಿಸಿತು.

ಗಾಡಿಯು ಭುಗಿಭುಗಿಲೆಂದು ಜಿಲ್ಲೆಯ ಕಡೆಗೆ ಓಡುತ್ತಿದ್ದಿತು.

—★—

# ಈವರೆಗಿನ ಕೈಹೊತ್ತಿಗೆಗಳು

| | | |
|---|---|---|
| *೧. ಗೃಹಲಕ್ಷ್ಮಿ | .... | ಅ. ನ. ಕೃ. |
| *೨. ಮಲ್ಲಿ | .... | ದೇವುಡು |
| *೩. ವಿಮೋಚನೆ | .... | ನಿರಂಜನ |
| *೪. ಪರದೇಶಿ | .... | ಕುಲಕರ್ಣಿ ಬಿಂದುಮಾಧವ |
| *೫. ಸ್ವರ್ಣರೇಖೆ | .... | ವೀರಕೇಸರಿ |
| *೬. ಅಪಸ್ವರ | .... | ತ್ರಿವೇಣಿ |
| *೭. ರಾಯರು ಕಂಡ ರಂಗು | .... | ಬೆಳ್ಳಿ ರಾಮಚಂದ್ರರಾವ್ |
| ೮. ರುಕ್ಮಿಣಿ | .... | ಅ. ನ. ಕೃ. |
| *೯. ವಜ್ರದುಂಗುರ | .... | ನಾ. ರಾಜಣ್ಣ |
| ೧೦. ಕೇದಗೆ ವನ | .... | ತ. ರಾ. ಸು. |
| ೧೧. ಸಮಾಜ ಗರ್ಭದಲ್ಲಿ | .... | ಸಿ. ಬಿ. ಚಂದ್ರಶೇಖರ್ |
| ೧೨. ತೀರಿದ ಆಸೆ | .... | ಸೇವ ನಮಿರಾಜಮಲ್ಲ |
| ೧೩. ಪ್ರಕೃತಿ | .... | ಶ್ರೀರಂಗ |
| ೧೪. ಹೊಲ-ಮನೆ | .... | ಶ್ರೀಕೃಷ್ಣ ಪಾಟೀಲ |

## ಅಚ್ಚಿನಲ್ಲಿ

| | | |
|---|---|---|
| † "ದೇವದಾಸಿ"–"ಎಚ್ಚಮನಾಯಕ" | | ದಿವಂಗತ ಕೆ. ಹಿರಣ್ಣಯ್ಯ |
| ಗೊಂಡಾರಣ್ಯ | .... | ಶಿವರಾಮ ಕಾರಂತ |
| ರಾಣೀ ಅಜ್ಞಾತಾ | .... | ನವಗಿರಿನಂದ |

## ಮುಂಬರುವ ಕೈಹೊತ್ತಿಗೆಗಳು

| | | |
|---|---|---|
| ರಂಗಮ್ಮನ ವಠಾರ | .... | ನಿರಂಜನ |
| ನಾಟ್ಯಸರಸ್ವತಿ ಶಾಂತಲಾದೇವಿ | .... | ಅ. ನ. ಕೃ. |
| ತಾಯಿ ಮಕ್ಕಳು | .... | ಅ. ನ. ಕೃ. |

---

* ಪ್ರತಿಗಳು ಮುಗಿದಿವೆ.

† ಈ ಎರಡು ನಾಟಕಗಳನ್ನೂ ಒಂದೂವರೆ ರೂಪಾಯಿಗೆ ಒಂದೇ ಕೈಹೊತ್ತಿಗೆಯಾಗಿ ಪ್ರಕಟಿಸಿ, ನಿವ್ವಳ ಉತ್ಪನ್ನವನ್ನು 'ಶ್ರೀ ಹಿರಣ್ಣಯ್ಯ ಸ್ಮಾರಕ ನಾಟಕ ಮಂಡಳಿ'ಯವರಿಗೆ ಒಪ್ಪಿಸಲಾಗುವುದು.